

ಹೊಸದುರ್ಗ ತಾಲೂಕು ಪರಿಸರ
ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ



ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩ ೨೭೬
೨೦೧೨

512

512

ಹೊಸದುರ್ಗ ತಾಲ್ಲೂಕು ಪರಿಸರ : ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಮಹಂತೇಶ. ಎನ. ಎಸ್.

<u>ಮಾರ್ಗದರ್ಶಕರು</u>

ಎಸ್. ವೈ. ಸೋಮಶೇಖರ

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ / ೧ – ೧೫

೧.೧. ಉದ್ದೇಶ

೧.೨. ಸಮೀಕ್ಷೆ

೧.೩. ವ್ಯಾಪ್ತಿ

೧.೪. ಸ್ವರೂಪ

೧.೫. ವಿಧಾನ

ಅಧ್ಯಾಯ : ಎರಡು

ಹಿನ್ನೆಲೆ / ೧೬ – ೬೫

೨.೧. ಭೌಗೋಳಿಕ ಹಿನ್ನೆಲೆ

೨.೨. ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಮೂರು

ಸ್ಥಳನಾಮಗಳ ವಿವೇಚನೆ / ೬೬ – ೯೨

೩.೧. ಸ್ಥಳನಾಮಗಳ ಉಗಮ ಮತ್ತು ವಿಕಾಸ

೩.೨. ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ

೩.೩. ಕೆಲವು ಪ್ರಮುಖ ಸ್ಥಳನಾಮಗಳ ವಿಶ್ಲೇಷಣೆ

ಅಧ್ಯಾಯ : ನಾಲ್ಕು

ಪ್ರಾಗೈತಿಹಾಸಿಕ ನೆಲೆಗಳು / ೯೩ – ೧೩೧

೪.೧. ಹಳೇ ಶಿಲಾಯುಗ

೪.೨. ಸೂಕ್ಷ್ಮ ಶಿಲಾಯುಗ

೪.೩. ನೂತನ ಶಿಲಾಯುಗ

೪.೪. ಬೃಹತ್ ಶಿಲಾಯುಗ

ಅಧ್ಯಾಯ : ಐದು

ವಾಸ್ತು ಮತ್ತು ಶಿಲ್ಪ / ೧೩೨ - ೨೬೫

೫.೧. ದೇವಾಲಯ

೫.೨. ಕೋಟೆ

೫.೩. ಕೆರೆ-ಕಟ್ಟೆ

೫.೪. ಮೂರ್ತಿಶಿಲ್ಪ

೫.೫. ಸ್ಮಾರಕ ಶಿಲ್ಪ

ಅಧ್ಯಾಯ : ಆರು

ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆ / ೨೬೬ - ೨೯೫

೬.೧. ಐತಿಹ್ಯ

೬.೨. ನಂಬಿಕೆ ಮತ್ತು ಆಚರಣೆಗಳು

೬.೩. ಜಾತ್ರೆ-ಉತ್ಸವಗಳು

ಅಧ್ಯಾಯ : ಏಳು

ಸಮಾರೋಪ / ೨೯೬ - ೩೦೩

ಅನುಬಂಧಗಳು / ೩೦೪

೧. ಗ್ರಂಥಋಣ

೨. ನಕ್ಷೆಗಳು

೩. ಛಾಯಾಚಿತ್ರಗಳು

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಉದ್ದೇಶ

೧.೨. ಸಮೀಕ್ಷೆ

೧.೩. ವ್ಯಾಪ್ತಿ

೧.೪. ಸ್ವರೂಪ

೧.೫. ವಿಧಾನ

ಅಧ್ಯಾಯ : ಒಂದು

ಪ್ರಸ್ತಾವನೆ

ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡ ಬಳಿಕ ಪ್ರಾರಂಭದಲ್ಲಿ ಅಲೆಮಾರಿಯಾಗಿ ಬದುಕು ಸಾಗಿಸುತ್ತಿದ್ದ. ಒಂದೇ ಕಡೆ ಶಾಶ್ವತವಾಗಿ ನೆಲೆಸದೆ ತನಗೆ ಅನುಕೂಲಕರ ಪ್ರದೇಶಗಳಲ್ಲಿ ಅಲೆದಾಡುತ್ತಾ ಅಲ್ಲಲ್ಲಿ ಸಿಗುತ್ತಿದ್ದ ಹಸಿಮಾಂಸ, ಗೆಡ್ಡೆ-ಗೆಣಸು ತಿಂದು ತಾತ್ಕಾಲಿಕವಾಗಿ ಗವಿ ಕಲ್ಲಾಸರೆಗಳಲ್ಲಿ ಜೀವನ ಸಾಗಿಸುತ್ತಿದ್ದ. ಬಳಿಕ ಒಂದೆಡೆ ಶಾಶ್ವತವಾಗಿ ನೆಲೆ ನಿಂತು ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೇ ಬೆಳೆದು ತಿನ್ನಲು ಪ್ರಾರಂಭಿಸಿದ. ಇದು ಮಾನವನ ಬೇಟೆ ಸಂಸ್ಕೃತಿ ಕೃಷಿ ಸಂಸ್ಕೃತಿಯಾಗಿ ಹಾಗೂ ಅಲೆಮಾರಿ ಸಂಸ್ಕೃತಿ ಗ್ರಾಮ ಸಂಸ್ಕೃತಿಯಾಗಿ ವಿಕಾಸವಾದದ್ದನ್ನು ಸೂಚಿಸುತ್ತದೆ. ಇಲ್ಲಿ ಮಾನವನ ವಿಕಾಸದೊಂದಿಗೆ ಸಂಸ್ಕೃತಿ ಮತ್ತು ನಾಗರೀಕತೆ ಎಂಬ ಎರಡು ಪರಿಭಾಷೆಗಳು ಸೇರ್ಪಡೆಗೊಳ್ಳುತ್ತಾ ಬಂದಿವೆ. ಸಂಸ್ಕೃತಿ ಮತ್ತು ನಾಗರೀಕತೆ ಮಾನವನ ಬದುಕಿನ ಎರಡು ಮುಖಗಳು. ಸಂಸ್ಕೃತಿಯನ್ನು ನಾಗರೀಕತೆಯಾಗಿ ಕರೆಯಬಹುದೆಂದು ಎಸ್. ಶ್ರೀಕಂಠಶಾಸ್ತ್ರಿ ಅವರು ಹೇಳುತ್ತಾರೆ.[೧] ಇಂಗ್ಲೀಷಿನ 'Culture' ಪದಕ್ಕೆ ಸಮಾನವಾಗಿ 'ಸಂಸ್ಕೃತಿ' ಪದವನ್ನು ಬಳಸಲಾಗಿದ್ದು, ಇದಕ್ಕೆ ನಿರ್ದಿಷ್ಟವಾದ ಅರ್ಥ ಕೊಡುವುದು ಕಷ್ಟದಾಯಕ. ಎಂ. ಚಿದಾನಂದಮೂರ್ತಿ ಅವರು ಹೇಳುವಂತೆ "ಮನುಷ್ಯನಲ್ಲಿನ ಮೃಗತ್ವವನ್ನು ಅಳಿಸಿ ನಿಜವಾದ ಮಾನವೀಯತೆಯನ್ನು ಸ್ಥಾಪಿಸುವುದೇ ಸಂಸ್ಕೃತಿ, ಇದು ಪ್ರಧಾನವಾಗಿ ಮಾನವನ ಅಂತರಂಗಿಕವಾದ ವಿಕಾಸಕ್ಕೆ ಸಂಬಂಧಿಸಿದುದು."[೨] ಇವರೇ ಮತ್ತೊಂದು ಕಡೆ "ಜನತೆಯ ಧರ್ಮ, ಮೌಲ್ಯ, ಕಲೆ, ಸಾಹಿತ್ಯ, ರಾಜಕೀಯ ವಿಧಾನ, ಉಡುಗೆ-ತೊಡುಗೆ, ಆಹಾರ ವಿಧಾನ, ಉದ್ಯೋಗ, ಆರ್ಥಿಕಸ್ಥಿತಿ, ಕಾನೂನು, ಆಚರಣೆ ಇತ್ಯಾದಿ ಎಲ್ಲವನ್ನೂ ಸಂಸ್ಕೃತಿ ಒಳಗೊಳ್ಳುತ್ತದೆ"[೩] ಎಂದು ಹೇಳಿದ್ದಾರೆ.

ಎಸ್. ಶ್ರೀಕಂಠಶಾಸ್ತ್ರಿ ಅವರು "ಸಂಸ್ಕೃತಿ ಶಬ್ದವು ಕೃಷಿ ಎಂಬ ಭೂವಾಚಕ ಶಬ್ದ ಸಂಬಂಧದಿಂದ ವ್ಯವಸಾಯವನ್ನು, ನಾಗರೀಕತೆ ಎಂಬುದು ನಗರ ಜೀವನವನ್ನು ಸೂಚಿಸುವುದು" ಎಂದು ಹೇಳುತ್ತಾರೆ.[೪] ನಾಗರೀಕತೆ ಭೌತಿಕ ಸಂಪತ್ತನ್ನು ಪ್ರತಿನಿಧಿಸಿದ್ದು, ಭಾಹ್ಯ ಪ್ರಧಾನ, ಬಾಹ್ಯ ಜೀವನವನ್ನು ಅವಲಂಬಿಸಿದೆ. ಅದೇ ರೀತಿ ವ್ಯಕ್ತಿಯ ಆಚಾರ, ವಿಚಾರ, ಧರ್ಮ, ಸಾಹಿತ್ಯ, ಕಲೆಗಳಲ್ಲಿ ವ್ಯಕ್ತಿಯ ಸ್ವಭಾವವು ಸಂಸ್ಕೃತಿಯಾಗಿರುತ್ತದೆ.[೫] ಒಟ್ಟಿನಲ್ಲಿ ಸಂಸ್ಕೃತಿಯು ಮಾನವನ ಸಮಗ್ರ ಜೀವನ ವಿಧಾನವನ್ನು ಹೇಳುತ್ತದೆ. ಒಂದು ಪ್ರದೇಶದ ಚರಿತ್ರೆಯೆಂದರೆ

ಆ ಪ್ರದೇಶವನ್ನಾಳಿದ ರಾಜ ಮಹಾರಾಜರು, ರಾಣಿಯರು ವಾಸಿಸುತ್ತಿದ್ದ ಅರಮನೆ ಹಾಗೂ ಸಾಮ್ರಾಜ್ಯದ ವರ್ಣನೆ ಎಂದು ಭಾವಿಸಲಾಗಿತ್ತು. ಆದರೆ ಕೆಲವು ದಶಕಗಳಿಂದೀಚೆಗೆ ಪ್ರಾದೇಶಿಕ/ಸ್ಥಳೀಯ ಚರಿತ್ರೆಗೆ ಹೆಚ್ಚು ಮಹತ್ವ ನೀಡಿ ಅಧ್ಯಯನ ಮಾಡಲಾಗುತ್ತಿದೆ. ಇಂದು ಸ್ಥಳೀಯ ಚರಿತ್ರೆಯಲ್ಲಿ ಗ್ರಾಮ, ಹೋಬಳಿ, ತಾಲೂಕು ಹಾಗೂ ಜಿಲ್ಲೆಗಳ ಮಟ್ಟದಲ್ಲಿ ಸಂಶೋಧನೆ, ಅಧ್ಯಯನಗಳು ನಡೆಯುತ್ತಿವೆ. ಇಂತಹ ಸಂಶೋಧನ ಅಧ್ಯಯನಗಳು ಸ್ಥಳೀಯ ಚರಿತ್ರೆಯಲ್ಲಿ ಮಹತ್ವಪೂರ್ಣ ಹೆಜ್ಜೆಗುರುತುಗಳು. ಪ್ರಾದೇಶಿಕ/ಸ್ಥಳೀಯ ಚರಿತ್ರೆ ಅಧ್ಯಯನದಲ್ಲಿ ರಾಜಕೀಯ ಇತಿಹಾಸದ ಜೊತೆ ಜೊತೆಗೆ ಅಂದಿನ ಸಾಂಸ್ಕೃತಿಕ ಬದುಕಿನ ಅಧ್ಯಯನಕ್ಕೆ ಮಹತ್ವ ನೀಡಲಾಗುತ್ತಿದೆ. ಗತಕಾಲದಲ್ಲಿ ಆ ಪ್ರದೇಶದಲ್ಲಿ ಬದುಕಿ ಬಾಳಿದ ಮಾನವನ ಜೀವನ ವಿಧಾನ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಎದುರಿಸಿದ ಸಮಸ್ಯೆ, ಜೀವನ ಮೌಲ್ಯ ಇತ್ಯಾದಿಗಳನ್ನು ಕುರಿತದ್ದು ಸಾಂಸ್ಕೃತಿಕ ಅಧ್ಯಯನ. ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನವೆಂದರೆ ಗತಕಾಲದ ಮಾನವನ ಚರಿತ್ರೆ ಮತ್ತು ಅವನು ಬಾಳಿ ಬದುಕಿದ ವಿವಿಧ ಸಾಂಸ್ಕೃತಿಕ ವೈವಿಧ್ಯತೆಗಳ ದಾಖಲೆ ಹಾಗೂ ಅವುಗಳ ವಿಮರ್ಶಾತ್ಮಕ ವಿಶ್ಲೇಷಣಾತ್ಮಕ ಅಧ್ಯಯನ. ಒಟ್ಟಾರೆ ಗತಕಾಲದ ಮಾನವನ ಚರಿತ್ರೆ ಅಂದಿನ ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸ್ಥಿತಿಗತಿ ಇವೇ ಮೊದಲಾದ ಸಂಗತಿಗಳನ್ನು ಕುರಿತ ವಿಶ್ಲೇಷಣಾತ್ಮಕ ಅಧ್ಯಯನವೇ ಸಾಂಸ್ಕೃತಿಕ ಅಧ್ಯಯನ.

ಯಾವುದೇ ಒಂದು ಪ್ರದೇಶದ ಅಧ್ಯಯನಕ್ಕೆ ಆಕರಗಳು ಬಹುಮುಖ್ಯ. ಅಂತಹ ಆಕರಗಳನ್ನು ಪ್ರಧಾನವಾಗಿ ಮೂರು ಭಾಗಗಳಾಗಿ ನೋಡಬಹುದು. ೧. ಸಾಹಿತ್ಯಕ ಆಕರಗಳು, ೨. ಪುರಾತತ್ವ ಆಕರಗಳು, ೩. ಮೌಖಿಕ ಆಕರಗಳು. ಸಾಹಿತ್ಯಕ ಆಕರಗಳಲ್ಲಿ ದೇಶೀಯ ಹಾಗೂ ವಿದೇಶಿಯ ಬರವಣಿಗೆಗಳು ಎಂದು, ದೇಶಿಯ ಬರವಣಿಗೆಗಳಲ್ಲಿ ಐತಿಹಾಸಿಕ ಸಾಹಿತ್ಯಕ ಕೃತಿ, ಹಸ್ತಪ್ರತಿ, ತಾಳೆಗರಿಗಳು ಕಂಡುಬರುತ್ತವೆ. ವಿದೇಶಿಯ ಬರವಣಿಗೆಗಳಲ್ಲಿ ಪ್ರವಾಸ ಕಥನ, ಪ್ರವಾಸಿಗರ ಬರವಣಿಗೆ ಮುಂತಾದವು ಒಳಗೊಳ್ಳುತ್ತವೆ. ಅದೇ ರೀತಿ ಪುರಾತತ್ವೀಯ ಆಕರಗಳಲ್ಲಿ ಶಾಸನ, ನಾಣ್ಯ, ಸ್ಮಾರಕ ಹಾಗೂ ಉತ್ಖನನದ ಅವಶೇಷಗಳನ್ನು ಕಾಣಬಹುದು. ಮೌಖಿಕ ಆಕರಗಳಲ್ಲಿ ಲಾವಣಿ, ಕಥನಗೀತೆ, ಐತಿಹ್ಯ, ಪುರಾಣ, ನಂಬಿಕೆ, ಜನಪದಗೀತೆ, ಕೋಲಾಟ ಪದ ಇತ್ಯಾದಿ ಸೇರಿವೆ. ಈ ಆಕರಗಳೆಲ್ಲವೂ ಗತ ಮಾನವನ ಇತಿಹಾಸ ಮತ್ತು ಸಂಸ್ಕೃತಿಯನ್ನು ಭಿನ್ನ ನೆಲೆಯಲ್ಲಿ ವಸ್ತುನಿಷ್ಠವಾಗಿ ಕಟ್ಟುವಲ್ಲಿ ಸಹಾಯಕವಾಗುತ್ತವೆ. ಇವುಗಳಿಂದ ಗತಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಸಂಗತಿಗಳನ್ನು ತಿಳಿಯಬಹುದು. ಒಟ್ಟಾರೆ ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನದಲ್ಲಿ ಸಾಹಿತ್ಯಕ, ಪುರಾತತ್ವೀಯ ಹಾಗೂ ಮೌಖಿಕ ಆಕರಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದರಿಂದ ಆ ಪ್ರದೇಶದ ಗತ ಮಾನವನ ಚರಿತ್ರೆ ಹಾಗೂ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡಬಹುದು.

ಪ್ರಸ್ತುತ 'ಹೊಸದುರ್ಗ ತಾಲೂಕು ಪರಿಸರ : ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಇಡೀ ಹೊಸದುರ್ಗ ತಾಲೂಕಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕುರಿತು ವೈಜ್ಞಾನಿಕ

ಹಾಗೂ ಶಾಸ್ತ್ರೀಯವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಕರ್ನಾಟಕದ ಹೃದಯ ಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಪ್ರಾಗ್ಯೆತಿಹಾಸಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವಪೂರ್ಣ ಸ್ಥಾನ ಪಡೆದಿದ್ದು ಸ್ಥಳೀಯ ಚರಿತ್ರೆಯ ಅಧ್ಯಯನ ದೃಷ್ಟಿಯಿಂದ ವಿಶೇಷವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ೬ ತಾಲೂಕುಗಳಿದ್ದು ಅವುಗಳಲ್ಲಿ ಹೊಸದುರ್ಗ ತಾಲೂಕು ಒಂದು. ಪ್ರತಿಯೊಂದು ತಾಲೂಕು ಇತಿಹಾಸದ ಕಣಜವೆಂದೇ ಹೇಳಬೇಕು. ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಹೊಸದುರ್ಗ ತಾಲೂಕಿನ ಭೌಗೋಳಿಕ ಲಕ್ಷಣ ವಿಶಿಷ್ಟವಾದದ್ದು. ಇತ್ತ ಬಯಲು ಸೀಮೆಯೂ ಅತ್ತ ಮಲೆನಾಡೂ ಅಲ್ಲದ ಈ ತಾಲೂಕು ಅರೆಮಲೆನಾಡಾಗಿದ್ದು, ಜನಜೀವನಕ್ಕೆ ಅತ್ಯಂತ ಉಪಯುಕ್ತ ಪ್ರದೇಶ. ಪ್ರಾಗ್ಯೆತಿಹಾಸಿಕ ಕಾಲದ ಅವಶೇಷ ಹಾಗೂ ನೆಲೆಗಳು ಈ ಪರಿಸರದಲ್ಲಿ ಅಪಾರ ಪ್ರಮಾಣದಲ್ಲಿವೆ. ಇವುಗಳು ಆದಿ ಹಳೇಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಿವೆ. ಇವುಗಳಲ್ಲಿ ಈ ಹಿಂದೆ ಪ್ರಕಟಗೊಂಡಿರುವ ಜಾನಕಲ್ಲಿನ ಆದಿ ಹಳೇಶಿಲಾಯುಗದ ನೆಲೆಯನ್ನು ಹೆಸರಿಸಬಹುದು. ಚಾರಿತ್ರಿಕ ಕಾಲಘಟ್ಟದಲ್ಲಿ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಉಚ್ಚಂಗಿ ಪಾಂಡ್ಯ, ಹೊಯ್ಸಳ, ವಿಜಯನಗರ ರಾಜಮನೆತನಗಳು ಹಾಗೂ ಬೂದಿಹಾಳು-ಮತ್ತೋಡು-ಚಿತ್ರದುರ್ಗ-ಸಂತೇಬೆನ್ನೂರು-ಬೇಲೂರು ನಾಯಕ ಅರಸರು, ಶ್ರೀರಂಗಪಟ್ಟಣದ ನವಾಬರು, ಮೈಸೂರು ಒಡೆಯರು, ಬ್ರಿಟಿಷರು ಮುಂತಾದವರು ಆಳ್ವಿಕೆ ನಡೆಸಿರುವ ಪ್ರಾಚೀನ ಕುರುಹುಗಳು ಈ ಭಾಗದಲ್ಲಿ ಗೋಚರಿಸುತ್ತವೆ. ಪ್ರಾಚೀನ ಕಾಲದಲ್ಲಿ ಈ ತಾಲೂಕಿನಲ್ಲಿ ಕೆಲವು ಆಡಳಿತ ವಿಭಾಗಗಳಿದ್ದುದನ್ನು ಕಾಣಬಹುದು. ಅವುಗಳಲ್ಲಿ 'ನಿರ್ಗುಂದ ನಾಡು' ನೊಳಂಬರ ಕಾಲದ ಪ್ರಮುಖ ಆಡಳಿತ ವಿಭಾಗವಾಗಿತ್ತು. ಇದು ಹೊಸದುರ್ಗ ತಾಲೂಕಿನ ನೀರಗುಂದ ಹಾಗೂ ಸುತ್ತಲಿನ ಅನೇಕ ಗ್ರಾಮಗಳನ್ನು ಒಳಗೊಂಡಿತ್ತು.[೬] ವಿಜಯನಗರ ಕಾಲದ 'ಬಾಗೂರು ಸೀಮೆ', ವಿಜಯನಗರೋತ್ತರ ಕಾಲದ 'ಮತ್ತನಡುವಿನ ಸೀಮೆ' ಇತರೆ ಪ್ರಮುಖ ಆಡಳಿತ ವಿಭಾಗಗಳಾಗಿದ್ದವು.

ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಸ್ಮಾರಕಗಳು ಅಮೂಲಾಗ್ರ ಪಾತ್ರವನ್ನು ವಹಿಸುತ್ತವೆ. ಸ್ಮಾರಕಗಳಲ್ಲಿ ದೇವಾಲಯ, ಕೋಟೆ-ಕೊತ್ತಲ, ಅರಮನೆ, ಕೆರೆ-ಕಟ್ಟೆ, ಮುಂತಾದವುಗಳನ್ನು ಕಾಣಬಹುದು. ಹೊಸದುರ್ಗ ನಗರ, ಮಳಲಿ, ಬಾಗೂರು, ನೀರಗುಂದ, ಹೆಗ್ಗೆರೆ, ಮತ್ತೋಡು, ಬೂದಿಹಾಳು, ಬೆಲಗೂರು, ಹಾಲುರಾಮೇಶ್ವರ, ಗವಿರಂಗಾಪುರ, ಮೆಣಸಿನೋಡು, ಕಂಗುವಳ್ಳಿ, ಬಲ್ಲಾಳಸಮುದ್ರ, ನೇರಲಕೆರೆ, ದಶರಥರಾಮೇಶ್ವರ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ರಾಷ್ಟ್ರಕೂಟರಿಂದ ವಿಜಯನಗರೋತ್ತರ ಕಾಲದವರೆಗಿನ ದೇವಾಲಯಗಳಿವೆ. ಹೊಸದುರ್ಗ, ಮತ್ತೋಡು, ಬೂದಿಹಾಳು, ಬೆಲಗೂರು, ಬಾಗೂರು, ಜಾನಕಲ್ಲು, ಲಕ್ಕಿಹಳ್ಳಿ ಇನ್ನೂ ಮುಂತಾದೆಡೆಗಳಲ್ಲಿ ಪಾಳೆಯಗಾರರ ಕಾಲದ ಕೋಟೆ-ಕೊತ್ತಲಗಳಿವೆ. ಪ್ರಾಚೀನ ನೀರಾವರಿ ವ್ಯವಸ್ಥೆಯನ್ನು ಕುರಿತು ಹೇಳುವ ಅನೇಕ ಕೆರೆ-ಕಟ್ಟೆಗಳು ಈ ತಾಲೂಕಿನಲ್ಲಿವೆ. ಅವುಗಳಲ್ಲಿ ಗುಡ್ಡದ ನೇರಲಕೆರೆ, ಬಾಗೂರು ಮೂಡಲಕೆರೆ, ಹೆಗ್ಗೆರೆಯ ಗೌಡನಕೆರೆ, ಸೂಜಿಕಲ್ ಅಮಾನಿಕೆರೆ,

ತಗ್ಗಲಕಟ್ಟೆ ಹೊಸಕೆರೆ, ಬೆಲಗೂರುಕೆರೆ, ಗಂಜಿಕೆರೆಗಳು ಮುಖ್ಯವಾಗಿವೆ. ಇವು ಗತ ಮಾನವನ ಆರ್ಥಿಕ ಜೀವನದ ಬೆನ್ನೆಲುಬಾಗಿದ್ದವು. ಕೆಲವು ಇಂದಿಗೂ ಬಳಕೆಯಾಗುತ್ತಿರುವುದು ಅಂದಿನ ವಾಸ್ತುರಚನೆಯ ತಾಂತ್ರಿಕ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಇಲ್ಲಿನ ಶಿಲ್ಪ ಸಂಪತ್ತು ಅಪಾರವಾಗಿದ್ದು, ಅವುಗಳಲ್ಲಿ ಮೂರ್ತಿಶಿಲ್ಪ ಹಾಗೂ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಮೂರ್ತಿಶಿಲ್ಪಗಳು ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಶೈಲಿಯಲ್ಲಿವೆ. ವೀರಗಲ್ಲು, ಮಹಾಸತಿಗಲ್ಲು ಹಾಗೂ ನಿಷದಿಗಲ್ಲು ಪ್ರಕಾರದ ಸ್ಮಾರಕ ಶಿಲ್ಪಗಳು ಈ ಪರಿಸರದಲ್ಲಿವೆ.

ಇಲ್ಲಿನ ಶಾಸನ ಸಂಪತ್ತು ಹೊಸದುರ್ಗ ತಾಲೂಕಿನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಅಮೂಲ್ಯವಾದ ಆಕರಸಂಪತ್ತುಗಳಾಗಿದ್ದು, ವಿಶೇಷವಾಗಿ ರಾಷ್ಟ್ರಕೂಟ, ನೊಳಂಬ, ಉಚ್ಚಂಗಿಪಾಂಡ್ಯ, ಹೊಯ್ಸಳ, ವಿಜಯನಗರದ ಅರಸರ, ಮತ್ತೋಡು-ಸಂತೇಬೆನ್ನೂರು-ಬೇಲೂರು ನಾಯಕ ಅರಸರ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಸಹಕಾರಿಯಾಗಿವೆ. ಜೈನ, ಶಾಕ್ತ, ಶೈವ, ನಾಥ, ವೈಷ್ಣವ-ಶ್ರೀವೈಷ್ಣವ ಮುಂತಾದ ಧಾರ್ಮಿಕ ಪಂಥಗಳ ಪ್ರಾಚೀನ ಕುರುಹು ಇಲ್ಲಿನ ದೇವಾಲಯ ಹಾಗೂ ಶಿಲ್ಪಾವಶೇಷಗಳ ಮೂಲಕ ಉಳಿದುಬಂದಿವೆ. ಮೌಖಿಕ ಸಾಹಿತ್ಯದಲ್ಲಿ ಹೊಸದುರ್ಗ ತಾಲೂಕು ಪರಿಸರ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ನಂಬಿಕೆ–ಆಚರಣೆಗಳು, ಜಾತ್ರೆ–ಉತ್ಸವಗಳು ಈ ತಾಲೂಕಿನ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಹಿಡಿದ ಕನ್ನಡಿಯೆಂದರೆ ಅತಿಶಯೋಕ್ತಿಯಾಗಲಾರದು.

೧.೧. ಉದ್ದೇಶ

ಯಾವುದೇ ಒಂದು ಸಂಶೋಧನ ಅಧ್ಯಯನಕ್ಕೆ ಉದ್ದೇಶ ಬಹುಮುಖ್ಯ. ಉದ್ದೇಶವು ಅಧ್ಯಯನಕ್ಕೆ ಗುರಿ ಇದ್ದಂತೆ. ಅಧ್ಯಯನದ ಉದ್ದೇಶವನ್ನು ಸಾಧಿಸಿದರೆ ಗುರಿಯನ್ನು ಸಾಧಿಸಿದಂತೆ. "ಸಂಶೋಧನ ಉದ್ದೇಶಗಳು ನಿರ್ದಿಷ್ಟ ಸಂಶೋಧನಾ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಸ್ಥೂಲ ಚಿತ್ರಣವನ್ನು ಕೊಡುತ್ತವೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು, ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು. ಉದ್ದೇಶಗಳು ಸಂಶೋಧನ ಅಧ್ಯಯನದಲ್ಲಿ ಮಾರ್ಗಸೂಚಿಯಂತೆ ಕೆಲಸ ಮಾಡುತ್ತವೆ".[೬] ಆದ್ದರಿಂದ ಸಂಶೋಧನಾ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ಕೆಲವೊಂದು ನಿರ್ದಿಷ್ಟ ಉದ್ದೇಶಗಳೊಂದಿಗೆ ಸಂಶೋಧನ ಅಧ್ಯಯನ ಕೈಗೊಂಡು ಕಾರ್ಯನಿರ್ವಹಿಸಿದಾಗ ಅದು ಪರಿಪೂರ್ಣವೆನಿಸುತ್ತದೆ.

ಪ್ರಸ್ತುತ ಮಹಾಪ್ರಬಂಧವು 'ಹೊಸದುರ್ಗ ತಾಲೂಕು ಪರಿಸರ : ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಅಜ್ಞಾತವಾಗಿರುವ ಹೊಸದುರ್ಗ ತಾಲೂಕಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ. ಕರ್ನಾಟಕದ ಹೃದಯಭಾಗದ ಚಿತ್ರದುರ್ಗ ಜಿಲ್ಲೆಯು ಅತಿ ಪ್ರಾಚೀನ ಎಡೆಗಳಲ್ಲಿ ಒಂದು. ಸ್ಥಳೀಯ ಚರಿತ್ರೆ ಅಧ್ಯಯನದ ದೃಷ್ಟಿಯಿಂದ ವಿಪುಲ ಆಕರಗಳನ್ನು ಹೊಂದಿರುವ ಹೊಸದುರ್ಗ

ತಾಲೂಕು ಚಿತ್ರದುರ್ಗ ಜಿಲ್ಲೆಯಲ್ಲಿದೆ. ವೇದಾವತಿ ನದಿತೀರದ ಹಾಗೂ ಅರೆಮಲೆನಾಡು ಪ್ರದೇಶವಾಗಿರುವ ಈ ತಾಲೂಕಿನಲ್ಲಿ ನೈಸರ್ಗಿಕ ಬೆಟ್ಟ-ಗುಡ್ಡ, ಗವಿ, ಕಲ್ಲಾಸರೆಗಳು ಅಪಾರ ಸಂಖ್ಯೆಯಲ್ಲಿದ್ದು ಭೌಗೋಳಿಕವಾಗಿ ವಿಶಿಷ್ಟವಾಗಿದೆ. ಇಂತಹ ಭೌಗೋಳಿಕ ಅಂಶಗಳು ಇಲ್ಲಿನ ಸ್ಮಾರಕಗಳ ನಿರ್ಮಾಣ, ಚಾರಿತ್ರಿಕ ಘಟನೆ ಹಾಗೂ ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಮೇಲೆ ಬೀರಿರುವ ಪ್ರಭಾವವನ್ನು ಕುರಿತು ವಿವರವಾಗಿ ಚರ್ಚಿಸುವ ಉದ್ದೇಶವನ್ನಿರಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲಘಟ್ಟದಲ್ಲಿ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಉಚ್ಚಂಗಿಪಾಂಡ್ಯ, ಹೊಯ್ಸಳ, ವಿಜಯನಗರದ ಅರಸರು, ಬೂದಿಹಾಳು-ಮತ್ತೋಡು-ಚಿತ್ರದುರ್ಗ-ಸಂತೇಬೆನ್ನೂರು-ಬೇಲೂರು ನಾಯಕ ಅರಸರು, ಶ್ರೀರಂಗಪಟ್ಟಣದ ನವಾಬರು, ಮೈಸೂರು ಒಡೆಯರು ಹಾಗೂ ಬ್ರಿಟೀಷರು ಆಳ್ವಿಕೆ ನಡೆಸಿದ್ದಾರೆ. ಇದರ ಕುರುಹುಗಳಾಗಿ ಶಾಸನ, ಚಾರಿತ್ರಿಕ ದಾಖಲೆ, ಸಾಹಿತ್ಯ ಕೃತಿ, ದೇವಾಲಯ, ಮೂರ್ತಿಶಿಲ್ಪ, ಕೋಟೆ, ಸ್ಮಾರಕ ಶಿಲ್ಪಗಳು ಸೇರಿದಂತೆ ಅನೇಕ ಪುರಾತತ್ವೀಯ ಹಾಗೂ ಸಾಹಿತ್ಯಕ ಆಧಾರಗಳು ಲಭ್ಯವಿದ್ದು, ಅವುಗಳನ್ನು ವಸ್ತುನಿಷ್ಠವಾಗಿ ಬಳಸಿಕೊಂಡು ಚಾರಿತ್ರಿಕ ಹಿನ್ನೆಲೆಯನ್ನು ಕಟ್ಟಿಕೊಡುವುದು ಇಲ್ಲಿನ ಇನ್ನೊಂದು ಮುಖ್ಯ ಉದ್ದೇಶವಾಗಿದೆ.

ಭೌಗೋಳಿಕವಾಗಿ ವೇದಾವತಿ ನದಿ ಪರಿಸರದ ಭೂಭಾಗದಲ್ಲಿ ಪ್ರಾಗೈತಿಹಾಸಿಕ ಕಾಲದ ಆದಿಮಾನವನ ನೆಲೆಗಳು ಹಾಗೂ ಗವಿ-ಕಲ್ಲಾಸರೆ ಚಿತ್ರಗಳನ್ನು ಕುರಿತು ಅಧ್ಯಯಿನಿಸುವುದು ಅವಶ್ಯಕ. ಪ್ರಾಗೈತಿಹಾಸಿಕ ನೆಲೆಗಳ ಪ್ರದೇಶಗಳಲ್ಲಿ ಕಲ್ಲು ಗಣಿಗಾರಿಕೆ ಹಾಗೂ ವ್ಯವಸಾಯ ನಡೆಯುತ್ತಿದ್ದು ಅನೇಕ ಪ್ರಾಚ್ಯಾವಶೇಷಗಳು ನಾಶವಾಗುತ್ತ ಬರುತ್ತಿವೆ. ಹೀಗೆ ನೈಸರ್ಗಿಕ ವಿಕೋಪ ಹಾಗೂ ಆಧುನಿಕ ಮಾನವನ ಚಟುವಟಿಕೆಗಳಿಂದ ಇಲ್ಲಿರುವ ಪ್ರಾಗೈತಿಹಾಸಿಕ ನೆಲೆಗಳು ನಾಶವಾಗುತ್ತಲಿದ್ದು, ಅವುಗಳನ್ನು ಶೋಧಿಸಿ, ವಿಶ್ಲೇಷಿಸುವುದರಿಂದ ಗತ ಮಾನವನ ನಾಗರೀಕತೆಯ ವಿಕಾಸ, ಆಹಾರಪದ್ಧತಿ, ಜೀವನಕ್ರಮ, ಬೌದ್ಧಿಕ, ಧಾರ್ಮಿಕ, ಸಾಮಾಜಿಕ ಹಾಗೂ ಕಲಾಭಿಜ್ಞತೆ ಇನ್ನೂ ಮುಂತಾದ ವಿಚಾರಗಳ ಬೆಳವಣಿಗೆಯನ್ನು ತಿಳಿಯಲು ಸಹಕಾರಿ ಯಾಗುತ್ತದೆ.

ನೈಸರ್ಗಿಕ ಹಾಗೂ ಸಾಂಸ್ಕೃತಿಕವಾಗಿ ಇಲ್ಲಿನ ಸ್ಥಳನಾಮಗಳು ವಿಶಿಷ್ಟವಾಗಿವೆ. ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಸ್ಥಳನಾಮಗಳ ಅಧ್ಯಯನ ಬಹುಮುಖ್ಯವಾಗಿದ್ದು, ಅವುಗಳನ್ನು ಅಧ್ಯಯನಕ್ಕೆ ಅನುಗುಣವಾಗಿ ವ್ಯವಸ್ಥಿತವಾಗಿ ವಿಭಾಗಿಸಿಕೊಂಡು ಭೌಗೋಳಿಕ, ಪ್ರಾಗೈತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಇಲ್ಲಿನ ಮುಖ್ಯ ಉದ್ದೇಶಗಳಲ್ಲಿ ಒಂದು.

ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತು ಮತ್ತು ಶಿಲ್ಪವನ್ನು ಕುರಿತು ವಿವೇಚಿಸುವುದು ಅತ್ಯಂತ ಅವಶ್ಯಕವಾದುದು. ವಾಸ್ತು ವಿಭಾಗದಲ್ಲಿ ದೇವಾಲಯ, ಕೋಟೆ ಹಾಗೂ ಕೆರೆ-ಕಟ್ಟೆಗಳನ್ನು ಕಾಣಬಹುದು. ಇಲ್ಲಿನ ದೇವಾಲಯ ವಾಸ್ತುಶೈಲಿಯಲ್ಲಿ

ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಶೈಲಿಯನ್ನು ಕುರಿತು ಅಧ್ಯಯಿನಿಸುವುದು; ಶೈವ, ವೈಷ್ಣವ, ಶಾಕ್ತ, ಜೈನ ಮುಂತಾದ ಧಾರ್ಮಿಕ ಪಂಥಗಳ ನೆಲೆಯಲ್ಲಿ ವಿವೇಚಿಸುವುದು; ರಾಜಕೀಯ ಇತಿಹಾಸ ನಿರ್ಮಾಣದಲ್ಲಿ ಪ್ರಾಚೀನ ಕೋಟೆಗಳು ಪ್ರಮುಖ ಪಾತ್ರವಹಿಸಿದ್ದು, ಅಂತಹ ಕೋಟೆಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಪ್ರಸ್ತುತ ಅವುಗಳ ಸ್ಥಿತಿ ಮುಂತಾದ ಹತ್ತು ಹಲವು ಸಂಗತಿಗಳನ್ನು ಕುರಿತು ಚರ್ಚಿಸುವುದು; ಪ್ರಾಚೀನ ಕೆರೆ ನೀರಾವರಿ ವ್ಯವಸ್ಥೆ ಅಂದಿನ ಮಾನವನ ಆರ್ಥಿಕ ಜೀವನದ ಬೆನ್ನೆಲುಬಾಗಿದ್ದು, ಈ ಭಾಗದಲ್ಲಿ ಉಳಿದು ಬಂದಿರುವ ಹೊಯ್ಸಳ ಹಾಗೂ ವಿಜಯನಗರೋತ್ತರ ಕಾಲದ ಕೆರೆ-ಕಟ್ಟೆಗಳನ್ನು ಕುರಿತು ಅನೇಕ ಆಧಾರಗಳ ಮೂಲಕ ವಿಶದವಾಗಿ ಚರ್ಚಿಸುವುದು ಅಗತ್ಯವಾಗಿದೆ. ಒಟ್ಟಿನಲ್ಲಿ ಇಲ್ಲಿನ ಪ್ರಾಚೀನ ವಾಸ್ತುವನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಗತಮಾನವನ ಸಾಂಸ್ಕೃತಿಕ ಚರಿತ್ರೆಯ ಒಂದು ಮುಖವನ್ನು ಅರಿತಂತಾಗುವುದು. ದೇವಾಲಯ ವಾಸ್ತುಶಿಲ್ಪದ ಒಂದು ಭಾಗವಾಗಿ ಮೂರ್ತಿಶಿಲ್ಪವನ್ನು ಕಾಣುತ್ತೇವೆ. ಇಲ್ಲಿನ ಮೂರ್ತಿಶಿಲ್ಪಗಳ ಶೈಲಿ, ಪ್ರಮಾಣ, ಪಂಥ, ಪ್ರತಿಮಾ ಲಕ್ಷಣದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು; ಪಶುಪಾಲಕ ಸಮುದಾಯ ಅಪಾರ ಸಂಖ್ಯೆಯಲ್ಲಿರುವ ಈ ಪರಿಸರದಲ್ಲಿ ಅದನ್ನು ಕುರಿತು ಹೇಳುವ ನೂರಾರು ಸ್ಮಾರಕಶಿಲ್ಪಗಳನ್ನು ವಸ್ತುವಿಷಯದ ನೆಲೆಯಲ್ಲಿ ವಿಭಾಗಿಸಿಕೊಂಡು ಅಧ್ಯಯಿನಿಸುವ ಆಶಯವಿದು. ಹಾಗೆಯೇ ಮೌಖಿಕ ಸಾಹಿತ್ಯದ ಮೂಲಕ ಉಳಿದುಬಂದಿರುವ ಐತಿಹ್ಯ, ನಂಬಿಕೆ-ಆಚರಣೆ ಹಾಗೂ ಸಾಂಸ್ಕೃತಿಕವಾದ ಜಾತ್ರೆ-ಉತ್ಸವಗಳ ದಾಖಲೀಕರಣ ಮತ್ತು ವಿಶ್ಲೇಷಣೆ ಪ್ರಸ್ತುತ ಮಹಾಪ್ರಬಂಧದ ಮತ್ತೊಂದು ಬಹುಮುಖ್ಯ ಆಶಯ.

ಒಟ್ಟಾರೆ ಲಭ್ಯ ಪುರಾತತ್ವೀಯ, ಸಾಹಿತ್ಯಕ ಹಾಗೂ ಮೌಖಿಕ ಆಕರಗಳ ಮೂಲಕ ಇಡೀ ಹೊಸದುರ್ಗ ತಾಲೂಕು ಪರಿಸರದ ಸಮಗ್ರ ಸಾಂಸ್ಕೃತಿಕ ಅಧ್ಯಯನ ನಡೆಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

೧.೨. ಸಮೀಕ್ಷೆ

ಹೊಸದುರ್ಗ ತಾಲೂಕು, ಅಲ್ಲಿನ ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಪರಿಚಯಾತ್ಮಕ, ಸಂಶೋಧನಾತ್ಮಕ ಲೇಖನಗಳು, ಕೈಪಿಡಿಗಳು, ಸ್ಮರಣ ಸಂಚಿಕೆಗಳು ಪ್ರಕಟಗೊಂಡಿವೆ.

ಹೊಸದುರ್ಗ ತಾಲೂಕಿನ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಹುಲ್ಲೂರು ಶ್ರೀನಿವಾಸ ಜೋಯಿಸರ 'ಸಿರುಮನೃಪಾಲ' ಕೃತಿ ಬೂದಿಹಾಳು ಪಾಳೆಯಗಾರರಿಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತದೆ. ಇದು ಸಿರುಮಣನಾಯಕನ ಬಗ್ಗೆ, ಬೂದಿಹಾಳು ಪರಿಸರದ ಬಗ್ಗೆ ಹಲವು ಚಾರಿತ್ರಿಕ ಸಂಗತಿಗಳನ್ನು ಕುರಿತು ತಿಳಿಯಲು ಸಹಾಯಕವಾಗಿದೆ.

ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ ಸಿದ್ಧಕವಿಯ 'ಸಿರುಮಣನಾಯಕನ ಸಾಂಗತ್ಯ', ಮಲ್ಲಕವಿಯ 'ಗೊಲ್ಲಸಿರುಮನ ಚರಿತೆ', ರಾಮಕವಿಯ 'ಸಿರುಮನ ಚರಿತೆ' ಎಂಬ

ಮೂರು ಕೃತಿಗಳು ಬೂದಿಹಾಳು ಪಾಳೆಯಗಾರರು ಆಳ್ವಿಕೆ ನಡೆಸಿದ ಬಗ್ಗೆ ಮಾಹಿತಿ ನೀಡುತ್ತವೆ. ಬಿ. ರಾಜಶೇಖರಪ್ಪ ಅವರು ತಮ್ಮ 'ಇತಿಹಾಸ ಕಥನ' ಕೃತಿಯಲ್ಲಿ ಬೂದಿಹಾಳು ಪಾಳೆಯಗಾರರು ಹಾಗೂ ಅವರ ರಾಜಗುರುಗಳ ಬಗ್ಗೆ ಚರ್ಚಿಸಿದ್ದಾರೆ. ಶೈಲಜಾ ಎಸ್. ಹೊಸಳ್ಳೇರ ಅವರು ಬರೆದಿರುವ 'ಬೂದಿಹಾಳು ಪಾಳೆಯಗಾರರು' ಎಂಬ ಲೇಖನ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಕೃತಿಯಲ್ಲಿ ಪ್ರಕಟಗೊಂಡಿದೆ.

ಪಿ. ಯಶೋಧ ರಾಜಶೇಖರಪ್ಪ ಅವರು 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಹಾಗೂ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಸಂಪಾದಿತ ಕೃತಿಗಳಲ್ಲಿ ಮತ್ತೋಡು ಪಾಳೆಯಗಾರರನ್ನು ಕುರಿತು ಚರ್ಚಿಸಿದ್ದಾರೆ. ಲಕ್ಷ್ಮಣ್ ತೆಲಗಾವಿ ಹಾಗೂ ಎಂ.ವಿ. ಶ್ರೀನಿವಾಸ್ ಇವರುಗಳು ಸಂಪಾದಿಸಿರುವ 'ಚಂದ್ರವಳ್ಳಿ' ಕೃತಿಯಲ್ಲಿ ಹೊಸದುರ್ಗದ ರಾಜಕೀಯ ಚರಿತ್ರೆಯನ್ನು ಕುರಿತು ಹಲವು ಲೇಖನಗಳಿವೆ. ಲಕ್ಷ್ಮಣ್ ತೆಲಗಾವಿಯವರ 'ಮತ್ತೋಡು ಪಾಳೆಯಗಾರರ ವಂಶಜರ ಒಂದು ಪತ್ರ-೧೮೮೯' ಲೇಖನವು ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್(೨೦೦೭)ನಲ್ಲಿ ಪ್ರಕಟಗೊಂಡಿದೆ. ಹೀಗೆ ಇಲ್ಲಿನ ರಾಜಕೀಯ ಚರಿತ್ರೆಯನ್ನು ಕುರಿತಂತೆ ಕೆಲವೇ ಅಧ್ಯಯನಗಳು ನಡೆದಿವೆ.

ಹೊಸದುರ್ಗ ತಾಲೂಕಿನ ಚಾರಿತ್ರಿಕ ಕೋಟೆಗಳನ್ನು ಕುರಿತು ನಡೆದಿರುವ ಅಧ್ಯಯನಗಳಲ್ಲಿ ಎಸ್. ತಿಪ್ಪೇಸ್ವಾಮಿ ಅವರ 'ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ' ಶೀರ್ಷಿಕೆಯ ಪಿಎಚ್.ಡಿ ಮಹಾಪ್ರಬಂಧದಲ್ಲಿ ಹೊಸದುರ್ಗ ತಾಲೂಕಿನ ಮುಖ್ಯ ಕೋಟೆಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ.

ತಾಲೂಕಿನ ಐತಿಹಾಸಿಕ ಸ್ಥಳಗಳನ್ನು ಪರಿಚಯಿಸುವ ಕೆಲವು ಕೈಪಿಡಿಗಳು ಹೊರಬಂದಿವೆ. ಅವುಗಳಲ್ಲಿ ಬಾಗೂರು ಆರ್. ನಾಗರಾಜಪ್ಪ ಅವರ 'ಹೊಸದುರ್ಗದ ಸುತ್ತ', 'ಹೊಸದುರ್ಗ ತಾಲೂಕು ದರ್ಶನ', 'ಹೆಗ್ಗೆರೆ ಬಸದಿ : ಒಂದು ಪರಿಚಯ' ಮುಂತಾದ ಕೈಪಿಡಿಗಳನ್ನು ಹೆಸರಿಸಬಹುದು. ವೈ.ಬಿ.ಎಚ್. ಜಯದೇವ ಅವರು 'ಶ್ರೀ ಹಾಲುರಾಮೇಶ್ವರ ಮಹಾಕ್ಷೇತ್ರ' ಎಂಬ ಕೈಪಿಡಿಯನ್ನು ಬರೆದಿದ್ದಾರೆ. ಈ ಮೇಲಿನ ಕೈಪಿಡಿಗಳು ತಾಲೂಕಿನ ಕೆಲವು ಗ್ರಾಮಗಳ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ನೀಡುತ್ತವೆ. ಟಿ. ಗಿರಿಜಾ ಅವರ 'ಚಿತ್ರದುರ್ಗ ಜಿಲ್ಲಾ ದರ್ಶಿನಿ' ಕೃತಿ ಹೊಸದುರ್ಗ ತಾಲೂಕಿನ ಗ್ರಾಮವಾರು ಮಾಹಿತಿಯನ್ನು ನೀಡುತ್ತದೆ.

ತಾಲೂಕಿನ ಪ್ರಾಚೀನ ದೇವಾಲಯ ಹಾಗೂ ಮೂರ್ತಿಶಿಲ್ಪಗಳನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ಗಮನಿಸಿದಾಗ ಅವುಗಳು ಪರಿಚಯಾತ್ಮಕ, ಸಂಶೋಧನಾತ್ಮಕ ಲೇಖನಗಳ ರೂಪದಲ್ಲಿ, ಸಂಪಾದಿತ ಕೃತಿಗಳಲ್ಲಿ ಪ್ರಕಟಗೊಂಡಿವೆ. ಬಿ. ಸುರೇಶ್ ಅವರು ಬಾಗೂರಿನ ಚನ್ನಕೇಶವ ದೇವಾಲಯ ಕುರಿತು ಬರೆದಿರುವ ಲೇಖನವು ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್ ಕೃತಿಯಲ್ಲಿ ಪ್ರಕಟಗೊಂಡಿದೆ. 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಸಂಪಾದಿತ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ದೇವಾಲಯಗಳನ್ನು ಕುರಿತಂತೆ ಕೆಲವು ಲೇಖನಗಳಿವೆ. ಆದರೆ ಇವುಗಳಲ್ಲಿ ಚಿತ್ರದುರ್ಗದ ಪ್ರಾಚೀನ ದೇವಾಲಯಗಳ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಇದರೊಂದಿಗೆ ಎನ್.ಎಸ್. ಮಹಂತೇಶ ಅವರ 'ಹೊಸದುರ್ಗ

ಪರಿಸರದ ದೇವಾಲಯಗಳು' ಎಂಬ ವಿಷಯದ ಎಂ.ಫಿಲ್ ಪ್ರೌಢ ಪ್ರಬಂಧ(೨೦೦೮)ವು ಹೊಸದುರ್ಗ ಹೋಬಳಿಯ ಪ್ರಾಚೀನ ದೇವಾಲಯಗಳನ್ನು ಕುರಿತ ಅಧ್ಯಯನವಾಗಿದೆ.

ಬಾಗೂರು ಆರ್.ನಾಗರಾಜಪ್ಪ ಅವರು ಬರೆದಿರುವ 'ಹೊಸದುರ್ಗ ಸೀಮೆ ಜಾನಪದ' ಕೃತಿಯಿಂದ ಈ ತಾಲೂಕಿನ ಜಾತ್ರೆ ಮತ್ತು ಉತ್ಸವಗಳ ಬಗ್ಗೆ ತಿಳಿಯಬಹುದು. ಇವರು ಬಸವರಾಜ ಶಿವಪುರ ಅವರೊಂದಿಗೆ ಸಂಪಾದಿಸಿರುವ 'ಕಲ್ಪಾದ್ರಿ'ಯಲ್ಲಿ ಚಿತ್ರದುರ್ಗ ಜಿಲ್ಲೆ ಮತ್ತು ಹೊಸದುರ್ಗ ತಾಲೂಕಿನ ಚರಿತ್ರೆ, ಸಾಹಿತ್ಯ, ಶಾಸನ ಮುಂತಾದ ವಿಷಯಗಳನ್ನು ಕುರಿತ ಹಲವು ಲೇಖನಗಳಿವೆ.

ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಹೊಸದುರ್ಗ ತಾಲೂಕಿನ ರಾಜಕೀಯ ಚರಿತ್ರೆ, ಜನಪದ ಸಾಹಿತ್ಯ, ಐತಿಹಾಸಿಕ ಸ್ಥಳಗಳ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರತು ಇಡೀ ಹೊಸದುರ್ಗ ತಾಲೂಕು ಪರಿಸರದ ವ್ಯವಸ್ಥಿತ ಹಾಗೂ ಸಮಗ್ರವಾದ ಸಾಂಸ್ಕೃತಿಕ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಆದುದರಿಂದ ಪ್ರಸ್ತುತ ಅಧ್ಯಯನವು ಹೊಸದುರ್ಗ ತಾಲೂಕು ಪರಿಸರದ ಎಲ್ಲ ಬಗೆಯ ಸಾಂಸ್ಕೃತಿಕ ಸಂಗತಿಗಳನ್ನು ಹೊರಗೆಡಹುವ ಉದ್ದೇಶವನ್ನು ಹೊಂದಿದೆ.

೧.೩. ವ್ಯಾಪ್ತಿ

ಯಾವುದೇ ಅಧ್ಯಯನಕ್ಕೆ ವ್ಯಾಪ್ತಿ ಇರಬೇಕು. ವ್ಯಾಪ್ತಿಯ ಮಿತಿಯಲ್ಲಿ ಅಧ್ಯಯನ ಕೈಗೊಂಡಾಗ ಅದು ಪರಿಪೂರ್ಣವಾಗುತ್ತದೆ. ಪ್ರಸ್ತುತ ಮಹಾಪ್ರಬಂಧವು 'ಹೊಸದುರ್ಗ ತಾಲೂಕು ಪರಿಸರ: ಸಾಂಸ್ಕೃತಿಕ ಅಧ್ಯಯನ', ಇದರ ವ್ಯಾಪ್ತಿ ಹೊಸದುರ್ಗ ತಾಲೂಕಿನ ನಾಲ್ಕು ಹೋಬಳಿಗಳಲ್ಲಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಗ್ರಾಮಗಳನ್ನು ಒಳಗೊಂಡಿದೆ. ಅಲ್ಲದೆ ಸಂದರ್ಭಾನುಸಾರವಾಗಿ ತಾಲೂಕಿನ ಸುತ್ತಮುತ್ತ ಇರುವ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ತಾಲೂಕು ಪರಿಸರವು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಸ್ವಾತಂತ್ರ್ಯ ಹೋರಾಟದವರೆಗಿನ ಬೆಳವಣಿಗೆ ಹಾಗೂ ವಿಕಸಿತಗೊಂಡ ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನ ಪ್ರಸ್ತುತ ಅಧ್ಯಯನದ್ದು.

೧.೪. ಸ್ವರೂಪ

ಪ್ರಸ್ತುತ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಸಮೀಕ್ಷೆ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನಗಳನ್ನು ಒಳಗೊಂಡಿದೆ.

ಎರಡನೇ ಅಧ್ಯಾಯವು ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯಾಗಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಹೊಸದುರ್ಗ ತಾಲೂಕಿನ ಭೌಗೋಳಿಕ ಪರಿಸರದ ಬಗ್ಗೆ ವಿವರಿಸಲಾಗಿದೆ. ಹೊಸದುರ್ಗ ತಾಲೂಕು ಭೌಗೋಳಿಕವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ

ವಿಶಿಷ್ಟವಾಗಿದ್ದು ಇದೊಂದು ಅರೆಮಲೆನಾಡು ಪರಿಸರ. ಇಲ್ಲಿನ ಭೌಗೋಳಿಕ ಸನ್ನಿವೇಶಗಳು ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಹೇಗೆ ಪೂರಕವಾಗಿವೆ ಎಂಬ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. ಈ ತಾಲೂಕು ಪರಿಸರದಲ್ಲಿ ಕಂಡುಬಂದಿರುವ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಉಚ್ಚಂಗಿಪಾಂಡ್ಯ, ಹೊಯ್ಸಳ, ವಿಜಯನಗರದ ಅರಸರು, ನಾಯಕ ಅರಸು ಮನೆತನಗಳು, ಶ್ರೀರಂಗಪಟ್ಟಣದ ನವಾಬರು, ಮೈಸೂರು ಒಡೆಯರು, ಬ್ರಿಟೀಷರನ್ನು ಒಳಗೊಂಡಂತೆ ಹಲವು ಚಾರಿತ್ರಿಕ ಕುರುಹುಗಳನ್ನು ಚಾರಿತ್ರಿಕ ಹಿನ್ನೆಲೆ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಲಾಗಿದೆ. ಈ ಚಾರಿತ್ರಿಕ ಅಧ್ಯಯನಕ್ಕೆ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ, ಚಾರಿತ್ರಿಕ ದಾಖಲೆ, ಶಾಸನ ಹಾಗೂ ಸಮಕಾಲೀನ ಸಾಹಿತ್ಯಕ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

ಮೂರನೇ ಅಧ್ಯಾಯವು ಸ್ಥಳನಾಮಗಳ ವಿವೇಚನೆ. ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಅಲ್ಲಿನ ಸ್ಥಳನಾಮಗಳ ಅಧ್ಯಯನವೂ ಮುಖ್ಯ. ಸ್ಥಳನಾಮಗಳು ಸಾಮಾನ್ಯವಾಗಿ ಭೌಗೋಳಿಕ, ನೈಸರ್ಗಿಕ, ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಭಾಷಿಕ ನೆಲೆಯಲ್ಲಿ ನಿಷ್ಪತ್ತಿಗೊಂಡಿವೆ. ಸ್ಥಳನಾಮಗಳನ್ನು ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಸ್ಥಳನಾಮಗಳು ಎಂಬುದಾಗಿ ವಿಭಾಗಿಸಿಕೊಂಡು ಅಧ್ಯಯಿಸಲಾಗಿದೆ. ಪ್ರಾಕೃತಿಕ ಸ್ಥಳನಾಮಗಳಲ್ಲಿ ಜಲವಾಚಕ, ಶಿಲಾವಾಚಕ, ಭೂಸ್ಥಿತಿವಾಚಕ, ಪ್ರಾಣಿ–ಪಕ್ಷಿವಾಚಕ, ಸಸ್ಯವಾಚಕ, ಪ್ರಮಾಣವಾಚಕ, ದಿಕ್ಕುಸೂಚಕ, ಖನಿಜಸೂಚಕ ಎಂದು, ಸಾಂಸ್ಕೃತಿಕ ಸ್ಥಳನಾಮಗಳಲ್ಲಿ ಪೌರಾಣಿಕ, ದೈವವಾಚಕ, ವ್ಯಕ್ತಿವಾಚಕ, ಜಾತಿವಾಚಕ, ವೃತ್ತಿವಾಚಕ, ನಿರ್ಮಾಣವಾಚಕ ಮುಂತಾಗಿ ವಿಭಾಗಿಸಿಕೊಂಡು ವಿಶ್ಲೇಷಿಸಲಾಗಿದೆ. ಅಲ್ಲದೆ ಕೆಲವು ಪ್ರಮುಖ ಸ್ಥಳನಾಮಗಳನ್ನು ಕುರಿತು ಶಾಸನ, ಚಾರಿತ್ರಿಕ ದಾಖಲೆ, ಪ್ರಾಕ್ಚಾರಿತ್ರಿಕ ಕುರುಹುಗಳು, ಭೌಗೋಳಿಕ ಲಕ್ಷಣಗಳ ಮೂಲಕ ವಿಶ್ಲೇಷಿಸಲಾಗಿದೆ.

ನಾಲ್ಕನೇ ಅಧ್ಯಾಯವು ಪ್ರಾಗೈತಿಹಾಸಿಕ ನೆಲೆಗಳನ್ನು ಕುರಿತದ್ದು. ಹೊಸದುರ್ಗ ತಾಲೂಕಿನ ಪ್ರಾಗೈತಿಹಾಸಿಕ ಅಧ್ಯಯನ ಪ್ರಾರಂಭವಾದುದು ರಾಬರ್ಟ್ ಬ್ರೂಸ್‌ಫೂಟ್ ಅವರಿಂದ. ಇವರು ಜಾನಕಲ್ಲು ನೆಲೆಯಲ್ಲಿ ಆದಿ ಹಳೇಶಿಲಾಯುಗದ ಕೈಗೊಡಲಿಗಳನ್ನು ಪತ್ತೆಹಚ್ಚಿದ್ದರು. ತರುವಾಯ ೧೯೫೬ರಲ್ಲಿ ಎಂ. ಶೇಷಾದ್ರಿಯವರು ಇದೇ ಜಾನಕಲ್ಲಿನಲ್ಲಿ ಆದಿ ಹಳೇಶಿಲಾಯುಗದ ಆಯುಧಗಳನ್ನು ಪತ್ತೆಹಚ್ಚಿದರು. ಆದರೆ ಅಲ್ಲಿಂದ ಪ್ರಸ್ತುತ ಅಧ್ಯಯನದವರೆಗೂ ಯಾವುದೇ ಪ್ರಾಗೈತಿಹಾಸಿಕ ನೆಲೆ ಪತ್ತೆಯಾಗಿ ಪ್ರಕಟವಾಗಿರಲಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಕೈಗೊಂಡ ಸಂಶೋಧನಾ ಕ್ಷೇತ್ರಕಾರ್ಯದ ಫಲವಾಗಿ ಸುಮಾರು ೩೫ಕ್ಕೂ ಹೆಚ್ಚಿನ ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆ ಹಚ್ಚಲಾಯಿತು. ಇವುಗಳು ಆದಿ ಹಳೇಶಿಲಾಯುಗ, ಮಧ್ಯ ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಕಾಲಘಟ್ಟಕ್ಕೆ ಸೇರಿದವುಗಳಾಗಿವೆ. ಆದಿಹಳೇ ಶಿಲಾಯುಗಕ್ಕೆ ಸಂಬಂಧಿಸಿದಂತೆ ಗರಗದ ಮುತ್ತಿನಗಿರಿ ಬೆಟ್ಟ ಪರಿಸರವು ಬಹುಮುಖ್ಯ ನೆಲೆಯಾಗಿದೆ. ಮಧ್ಯ ಹಳೇಶಿಲಾಯುಗದ ಲಂಬಾಣಿಹಟ್ಟಿ ನೆಲೆಯು ಜಾನಕಲ್ಲು ಪರಿಸರದ ಪ್ರಾಗೈತಿಹಾಸಿಕ ಸಂಸ್ಕೃತಿಯ ಮುಂದುವರೆದ ಹಂತವೆಂದು ಕರೆಯಬಹುದು. ನಂತರದಲ್ಲಿ ಸೂಕ್ಷ್ಮಶಿಲಾಯುಗದ

ಜಾನಕಲ್ಲು ಮತ್ತು ಲಂಬಾಣಿಹಟ್ಟಿ ನೆಲೆಗಳು ವಿಶೇಷವಾಗಿವೆ. ನೂತನ ಶಿಲಾಯುಗದ ಮುಖ್ಯನೆಲೆಯಲ್ಲಿ ತಣಿಗೆಕಲ್ಲು ಪ್ರಮುಖವಾದುದು. ತಣಿಗೆಕಲ್ಲು ಗ್ರಾಮದ ಸಿದ್ಧಪ್ಪನ ಬೆಟ್ಟದ ಗವಿಯ ಒಳಭಾಗದಲ್ಲಿ ಈ ಸಂಸ್ಕೃತಿಯ ಕೈಗೊಡಲಿ ಹಾಗೂ ಬೂದುವರ್ಣದ ಮಡಿಕೆ ಚೂರುಗಳು ಅನೇಕವಿವೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಸುಮಾರು ೨೮ಕ್ಕೂ ಹೆಚ್ಚು ಸಾಂಸ್ಕೃತಿಕ ನೆಲೆಗಳನ್ನು ಪತ್ತೆಹಚ್ಚಲಾಗಿದ್ದು, ಅದರಲ್ಲಿ ದೊಡ್ಡಘಟ್ಟ ನೆಲೆಯು ಸಮಾಧಿಗಳ ಸಂಖ್ಯಾದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಇದೇ ಕಾಲಘಟ್ಟದ 'ಕಬ್ಬಿಣ ತಯಾರಿಕ' ನೆಲೆಗಳು ಬೃಹತ್ ಶಿಲಾಸಮಾಧಿ ನೆಲೆಗಳ ಪರಿಸರಗಳಲ್ಲಿ ದೊರೆತಿದ್ದು ಆ ಕುರಿತು ಅನೇಕ ಪ್ರಾಚ್ಯಾವಶೇಷಗಳು ಲಭಿಸಿವೆ. ಕಬ್ಬಿಣ ತಯಾರಿಕಾ ನೆಲೆಯ ಅಧ್ಯಯನ ಪ್ರಾಚೀನ ಕಾಲದಲ್ಲಿ ಲೋಹತಂತ್ರಜ್ಞಾನ ಕುರಿತದ್ದಾಗಿದೆ. ಒಟ್ಟಾರೆ ಅಧ್ಯಯನ ನಿಮಿತ್ತ ಕ್ಷೇತ್ರ ಕಾರ್ಯದಲ್ಲಿ ದೊರೆತ ಪ್ರಾಗೈತಿಹಾಸಿಕ ಸಂಸ್ಕೃತಿಯ ಬಹುಮುಖ್ಯ ಸಂಗತಿಗಳನ್ನು ವೈಜ್ಞಾನಿಕವಾಗಿ ವಿವರಿಸಲಾಗಿದೆ. ಪ್ರತಿಯೊಂದು ನೆಲೆಯ ಸ್ಥಳ ನಿರ್ದೇಶನ, ಅದರ ಭೌಗೋಳಿಕ ಅಂಶ, ಯಾವ ಪ್ರಕಾರದ ನೆಲೆ, ನೆಲೆಯಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಅವಶೇಷ, ಅವುಗಳ ಪ್ರಕಾರ, ನೆಲೆಯ ವಿಸ್ತಾರ ಮುಂತಾದ ಹತ್ತು ಹಲವು ವಿಚಾರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೇ ಅಧ್ಯಾಯವು ತಾಲೂಕಿನ 'ವಾಸ್ತು ಮತ್ತು ಶಿಲ್ಪ'ವನ್ನು ಕುರಿತದ್ದು. ವಾಸ್ತು ವಿಭಾಗದಲ್ಲಿ 'ದೇವಾಲಯ', 'ಕೋಟೆ' ಹಾಗೂ 'ಕೆರೆ-ಕಟ್ಟೆ'ಗಳನ್ನು ಕುರಿತು ವಿವರಿಸಲಾಗಿದೆ. ಈ ತಾಲೂಕಿನಲ್ಲಿ ಅಸಂಖ್ಯಾತವಾದ ದೇವಾಲಯಗಳಿದ್ದು, 'ದೇವಾಲಯ ವಾಸ್ತುಶಿಲ್ಪ'ದ ದೃಷ್ಟಿಯಿಂದ ವಿಶೇಷವಾಗಿವೆ. ದೇವಾಲಯಗಳನ್ನು ಶೈವ, ವೈಷ್ಣವ, ಶಾಕ್ತ ಮತ್ತು ಜೈನ(ಬಸದಿ) ದೇವಾಲಯಗಳು ಎಂಬ ವಿಂಗಡನೆಯೊಂದಿಗೆ ವಿಶ್ಲೇಷಿಸಲಾಗಿದೆ. ಶೈವ ದೇವಾಲಯ ಪರಂಪರೆಯನ್ನು ರಾಷ್ಟ್ರಕೂಟ ಕಾಲದಿಂದ ಗುರುತಿಸಬಹುದಾಗಿದೆ. ಇದರಲ್ಲಿ ಅತ್ಯಂತ ಪ್ರಾಚೀನವಾದದ್ದು ಮಳಲಿಯ ಕಲ್ಲೇಶ್ವರ ದೇವಾಲಯ. ತರುವಾಯ ಕಲ್ಲೆದೇರಕಟ್ಟೆಯ ಕಲ್ಲೇಶ್ವರ, ನೀರಗುಂದದ ಸಿದ್ದೇಶ್ವರ, ರಾಮೇಶ್ವರ, ಕೈನಡುವಿನ ಮಲ್ಲೇಶ್ವರ, ದಶರಥ ರಾಮೇಶ್ವರ, ಗರಗದ ಈಶ್ವರ, ಮೈಲಾರಪುರದ ಮೈಲಾರಲಿಂಗೇಶ್ವರ, ಬೂದಿಹಾಳಿನ ವೀರಭದ್ರ, ಸೋಮೇಶ್ವರ, ಮೆಣಸಿನೋಡುವಿನ ಮಲ್ಲಿಕಾರ್ಜುನ ದೇವಾಲಯಗಳು ಈ ಪರಿಸರದ ಇತರೆ ಪ್ರಮುಖ ಶೈವ ದೇವಾಲಯಗಳು. ಶೈವ ದೇವಾಲಯಗಳು ಕ್ರಿ.ಶ. ೯-೧೦ನೇ ಶತಮಾನದಿಂದ ೧೧-೧೨ನೇ ಶತಮಾನದಲ್ಲಿ ಪ್ರಾಬಲ್ಯತೆ ಗಳಿಸಿದ್ದವು. ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ಅಧಿಕಾರಿಗಳು ಇಲ್ಲಿನ ಶೈವ ದೇವಾಲಯಗಳನ್ನು ಹೆಚ್ಚು ಪೋಷಿಸಿಕೊಂಡು ಬಂದಂತೆ ಅನೇಕ ಶಾಸನಗಳು ಮಾಹಿತಿ ನೀಡುತ್ತವೆ. ಅದೇ ರೀತಿ ವೈಷ್ಣವ ದೇವಾಲಯ ಸಂಸ್ಕೃತಿಯನ್ನು ಕ್ರಿ.ಶ. ೧೧-೧೨ನೇ ಶತಮಾನದಿಂದ ೧೬-೧೭ನೇ ಶತಮಾನದವರೆಗೆ ಅಂದರೆ ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಕಾಣಬಹುದು. ಈ ಕಾಲದ ಪ್ರಮುಖ ವೈಷ್ಣವ ದೇವಾಲಯಗಳೆಂದರೆ ಮಣಲಿಯ ಗೋಪಾಲಕೃಷ್ಣ, ಹುಣುವಿನೋಡುವಿನ ನಾರಾಯಣ, ಮೆಣಸಿನೋಡುವಿನ ಚನ್ನಿಗರಾಯ, ಬಾಗೂರಿನ ಚನ್ನಕೇಶವ, ಮತ್ತೋಡಿನ ಬಾಣದ ರಂಗನಾಥ ಇತ್ಯಾದಿ. ವಿಜಯನಗರೋತ್ತರ ಕಾಲದಲ್ಲಿ ಶಾಕ್ತ ದೇವಾಲಯಗಳು ಹೆಚ್ಚು ಬೆಳವಣಿಗೆ ಹೊಂದಿವೆ. ಪ್ರಮುಖ ಶಾಕ್ತ ದೇವಾಲಯಗಳೆಂದರೆ

ಬಾಗೂರಿನ ಓರುಗಲ್ಲಮ್ಮ, ಬನಸೀಹಳ್ಳಿಯ ಏಕನಾಥೇಶ್ವರಿ, ಶ್ರೀರಾಂಪುರದ ಬನಶಂಕರಿ, ಚಿಕ್ಕಬ್ಯಾಲದಕೆರೆಯ ಕರಿಯಮ್ಮ ಸೇರಿದಂತೆ ಅನೇಕ ದೇವಾಲಯಗಳು ನಿರ್ಮಾಣಗೊಂಡಿವೆ. ಇನ್ನೂ ಹೊಯ್ಸಳ ಕಾಲದಲ್ಲಿ ಹೆಗ್ಗೆರೆಯ ಸುಪಾರ್ಶ್ವನಾಥ ಹಾಗೂ ಜಾನಕಲ್ಲಿನ ನೇಮಿನಾಥ ಮತ್ತು ಪದ್ಮಾವತಿ ಬಸದಿಗಳು ನಿರ್ಮಾಣಗೊಂಡಿವೆ.

ದೇವಾಲಯಗಳ ವಾಸ್ತುಶೈಲಿಯನ್ನು ಗಮನಿಸಿದಾಗ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ವಾಸ್ತುಶೈಲಿಯನ್ನು ಹೊಂದಿವೆ. ಒಟ್ಟಾರೆ ದೇವಾಲಯಗಳಿಗೆ ಸಂಬಂಧಿಸಿದ ಎಲ್ಲಾ ಬಹುಮುಖ್ಯ ಸಂಗತಿಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಹೊಸದುರ್ಗ ತಾಲೂಕಿನಲ್ಲಿ ವಿಜಯನಗರೋತ್ತರ ಕಾಲದಲ್ಲಿ ಕೋಟೆ-ಕೊತ್ತಲಗಳು ರಚನೆಗೊಂಡ ಅಂಶವನ್ನು ಕಾಣಬಹುದು. ಪ್ರಾಕೃತಿಕವಾಗಿ ಹೆಚ್ಚು ಕಣಶಿಲೆಯ ಬೆಟ್ಟಗಳನ್ನು ಹೊಂದಿರುವ ಹೊಸದುರ್ಗ ತಾಲೂಕು ಪರಿಸರದಲ್ಲಿ ವಿಜಯನಗರೋತ್ತರ ಕಾಲದ ಅನೇಕ ಕೋಟೆಗಳು ನಿರ್ಮಾಣಗೊಂಡಿವೆ. ಪ್ರಮುಖವಾದವುಗಳಲ್ಲಿ ಹೊಸದುರ್ಗ, ಜಾನಕಲ್ಲು ಹಾಗೂ ಬೂದಿಹಾಳು ಕೋಟೆಗಳನ್ನು ಕಾಣಬಹುದು. ಹೊಸದುರ್ಗ ಹಾಗೂ ಜಾನಕಲ್ಲು ಕೋಟೆಗಳು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಗಿರಿದುರ್ಗಗಳಾಗಿವೆ. ಇವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಹಾಗೂ ಬಲಿಷ್ಠತೆಗಾಗಿ ಈ ಕೋಟೆಗಳನ್ನು ನಿರ್ಮಿಸಿ ಕೊಂಡಿದ್ದರು. ಒಟ್ಟಾರೆ ಈ ಅಧ್ಯಾಯದಲ್ಲಿ ಪ್ರಾಚೀನ ಕೋಟೆ–ಕೊತ್ತಲಗಳನ್ನು ಕುರಿತು ದೊರೆತ ಆಧಾರಗಳ ಮೂಲಕ ನೀಡಲಾಗಿದೆ. ಪ್ರಾಚೀನ ಮಾನವನ ಜೀವನ ನಿರ್ವಹಣೆಯಲ್ಲಿ ಕೆರೆ–ಕಟ್ಟೆಗಳ ಪಾತ್ರ ಅದ್ವಿತೀಯ. ಪ್ರಾಚೀನ ಕೆರೆ–ಕಟ್ಟೆಗಳು ಅಂದಿನ ಮಾನವನ ಜೀವನ ನಿರ್ವಹಣೆ, ವಾಸ್ತು ತಂತ್ರಜ್ಞಾನ, ಕೆರೆ–ಕಟ್ಟೆಗಳ ರಚನೆ ಇವುಗಳ ರಚನೆಗೆ ಭೌಗೋಳಿಕ ಅಂಶಗಳ ಬಳಕೆ, ಇವು ಇತರೆ ಸಾಂಸ್ಕೃತಿಕ ವ್ಯವಸ್ಥೆಯ ಮೇಲೆ ಬೀರಿರುವ ಪ್ರಭಾವ ಮುಂತಾದ ಅನೇಕ ವಿಚಾರಗಳನ್ನು ಕುರಿತು ಇದೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಇದೇ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳನ್ನು ಶೈವ, ವೈಷ್ಣವ, ಶಾಕ್ತ ಹಾಗೂ ಜೈನ ಎಂಬುದಾಗಿ ವಿಭಾಗಿಸಿ ಅಧ್ಯಯನಿಸಲಾಗಿದೆ. ಶೈವದಲ್ಲಿ ಶಿವಲಿಂಗ, ನಂದಿ, ಗಣಪತಿ, ವೀರಭದ್ರ, ಭೈರವಶಿಲ್ಪಗಳಿವೆ. ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲಘಟ್ಟದ ಭೈರವ ಮೂರ್ತಿ ಶಿಲ್ಪಗಳು ಅಪಾರ ಪ್ರಮಾಣದಲ್ಲಿ ಕಾಣಸಿಗುತ್ತವೆ. ವೈಷ್ಣವದಲ್ಲಿ ಚನ್ನಕೇಶವ, ಕೋದಂಡರಾಮ, ಗೋಪಾಲಕೃಷ್ಣ, ಆಳ್ವಾರರು, ಆಂಜನೇಯ, ಗರುಡ, ರಂಗನಾಥ, ತಿಮ್ಮಪ್ಪ ಮುಂತಾದ ಶಿಲ್ಪಗಳಿದ್ದು, ಇವು ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದವು. ಶಾಕ್ತದಲ್ಲಿ ಮಹಿಷಮರ್ಧಿನಿ, ಸಪ್ತಮಾತೃಕೆ ಶಿಲ್ಪಗಳು ಕಾಣಸಿಗುತ್ತವೆ. ಜೈನದಲ್ಲಿ ಹೆಗ್ಗೆರೆಯ ಸುಪಾರ್ಶ್ವನಾಥ ಹಾಗೂ ಜಾನಕಲ್ಲಿನ ನೇಮಿನಾಥ ಮತ್ತು ಪದ್ಮಾವತಿ ಶಿಲ್ಪಗಳು ಗಮನಾರ್ಹ. ಕ್ರಿ.ಶ. ೯–೧೨ನೇ ಶತಮಾನದವರೆಗೆ ಶೈವಶಿಲ್ಪಗಳು, ೧೩–೧೮ನೇ ಶತಮಾನದವರೆಗೆ ವೈಷ್ಣವ–ಶ್ರೀವೈಷ್ಣವ ಶಿಲ್ಪಗಳು ಅಸಂಖ್ಯಾತವಾಗಿವೆ. ಒಟ್ಟಿನಲ್ಲಿ ಮೂರ್ತಿಶಿಲ್ಪಗಳ ಶೈಲಿ, ಪ್ರತಿಮಾ ಲಕ್ಷಣ, ಪ್ರಮಾಣ, ಪಂಥ ಮುಂತಾದ ಅನೇಕ ಅಂಶಗಳ ವಿಶ್ಲೇಷಣೆ ಈ ಅಧ್ಯಾಯದಲ್ಲಿದೆ. ರಾಜಕೀಯ ಮತ್ತು

ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ಸ್ಮಾರಕ ಶಿಲ್ಪಗಳ ಪಾತ್ರ ಬಹುಪ್ರಧಾನವಾದುದು. ಸ್ಮಾರಕ ಶಿಲ್ಪಗಳು ಆಯಾ ಪರಿಸರದ ರಾಜಕೀಯ ಇತಿಹಾಸ, ಯುದ್ಧ ಮತ್ತು ಸೈನ್ಯ ವ್ಯವಸ್ಥೆ, ವೀರತ್ವ, ಹೋರಾಟ, ದೇಶಭಕ್ತಿ, ಜನಾಂಗೀಯವಾಗಿ ಸಮುದಾಯಗಳ ಚರಿತ್ರೆ, ಪಶುಪಾಲನೆ, ಗ್ರಾಮಸಂಸ್ಕೃತಿ, ಸಾಮಾಜಿಕವಾಗಿ ಸ್ತ್ರೀಯರ ಪಾವಿತ್ರ್ಯತೆ ಈ ತೆರನಾದ ಗತದ ಕುರಿತ ಭಿನ್ನ ಸಾಂಸ್ಕೃತಿಕ ಆಯಾಮಗಳ ವಸ್ತುನಿಷ್ಠ ವಿಶ್ಲೇಷಣೆ ಸಾಧ್ಯವಾಗುವುದು. ಹೊಸದುರ್ಗ ತಾಲೂಕು ಪರಿಸರದ ಸ್ಮಾರಕಶಿಲ್ಪಗಳ ಅಧ್ಯಯನ ಈ ನೆಲೆಯಲ್ಲಿ ಸಾಗಿದೆ. ಇಲ್ಲಿನ ಸ್ಮಾರಕ ಶಿಲ್ಪಗಳನ್ನು ವೀರಗಲ್ಲು, ಮಾಸ್ತಿಗಲ್ಲು ಹಾಗೂ ನಿಷದಿಗಲ್ಲುಗಳು ಎಂಬ ವಿಭಾಗದೊಂದಿಗೆ ಚರ್ಚಿಸಲಾಗಿದೆ. ವೀರಗಲ್ಲುಗಳಲ್ಲಿ ವಿಶೇಷವಾಗಿ ತುರುಗೋಳ್ ಶಿಲ್ಪಗಳು ಅಪಾರ ಸಂಖ್ಯೆಯಲ್ಲಿ ದೊರೆತಿರುವುದನ್ನು ಗಮನಿಸಿದರೆ, ಇಲ್ಲಿನ ಪಶುಪಾಲನ ಸಂಸ್ಕೃತಿ ಹಾಗೂ ಅವುಗಳ ರಕ್ಷಣೆಗಾಗಿ ವೀರರ ಹೋರಾಟದ ವಿಚಾರಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ರಾಷ್ಟ್ರಕೂಟ, ಚಾಲುಕ್ಯ ಹಾಗೂ ಹೊಯ್ಸಳ ಕಾಲದ ತುರುಗೋಳ್ ಸ್ಮಾರಕಶಿಲ್ಪಗಳು ಅಪಾರ ಪ್ರಮಾಣದಲ್ಲಿ ದೊರೆತಿವೆ. ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕ ಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿವೆ. ಇನ್ನು ಮಾಸ್ತಿ ಶಿಲ್ಪಗಳು ಇಲ್ಲಿನ ಸ್ತ್ರೀಯರ ಪತಿಭಕ್ತಿ, ಪಾವಿತ್ರ್ಯತೆಯ ಸಂಕೇತ ಹಾಗೂ ಸೂಚಕಗಳಾಗಿ ಉಳಿದುಬಂದಿವೆ. ಮಾಸ್ತಿಗಲ್ಲುಗಳಲ್ಲಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಶಿಲ್ಪಗಳೇ ಅಧಿಕ. ಇದು ಮಧ್ಯಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನಮಾನದ ಬಗ್ಗೆ ತಿಳಿಸಿಕೊಡುತ್ತದೆ. ಇಲ್ಲಿನ ಮಾಸ್ತಿಶಿಲ್ಪಗಳು ಪ್ರಭುತ್ವದ ಸ್ತ್ರೀಯರ ಸಹಗಮನವನ್ನು ಕುರಿತು ಹೆಚ್ಚಾಗಿ ಪ್ರಸ್ತಾಪಿಸುತ್ತವೆ. ಇನ್ನು ಕ್ರಿ.ಶ. ೧೧-೧೨ನೇ ಶತಮಾನದಿಂದ ೧೩ನೇ ಶತಮಾನದಲ್ಲಿ ಜೈನಧರ್ಮ ಪ್ರಾಬಲ್ಯವನ್ನು ಹೊಂದಿದ್ದಿತು. ಹೆಗ್ಗೆರೆ ಜೈನಬಸದಿಯ ಬಳಿಯ ನಿಷದಿ ಸ್ಮಾರಕಗಳು 'ಸಲ್ಲೇಖನ ವ್ರತ ಪರಂಪರೆ'ಯನ್ನು ಕುರಿತು ಹೇಳುತ್ತವೆ. ಹೀಗೆ ಹೊಸದುರ್ಗ ತಾಲೂಕು ಪರಿಸರದ ಸ್ಮಾರಕ ಶಿಲ್ಪಗಳನ್ನು ಅನೇಕ ಸಾಂಸ್ಕೃತಿಕ ನೆಲೆಯಲ್ಲಿ ಭಿನ್ನ ಆಯಾಮಗಳಲ್ಲಿ ಸವಿವರವಾಗಿ ಚರ್ಚಿಸಲಾಗಿದೆ.

ಒಟ್ಟಾರೆ 'ವಾಸ್ತು ಮತ್ತು ಶಿಲ್ಪ' ಕುರಿತ ಈ ಅಧ್ಯಾಯದಲ್ಲಿ ದೇವಾಲಯ, ಕೋಟೆ, ಕೆರೆ-ಕಟ್ಟೆ, ಮೂರ್ತಿಶಿಲ್ಪ ಹಾಗೂ ಸ್ಮಾರಕ ಶಿಲ್ಪಗಳನ್ನು ಸಮಗ್ರವಾಗಿ ಅಧ್ಯಯಿನಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕುರಿತು ವಿವೇಚಿಸಲಾಗಿದೆ. ಮೌಖಿಕ ಆಕರಗಳು ಯಾವುದೇ ಒಂದು ಪರಿಸರದ ಚರಿತ್ರೆಯ ರಚನೆಗೆ ಸಹಾಯಕವಾಗುವ ಅಲಿಖಿತ ಸಂಪತ್ತು. ಇವು ಸ್ಥಳೀಯ ಚರಿತ್ರೆಯ ರಚನೆಗೆ ಮೂಲ ಸಾಮಗ್ರಿಗಳಾಗಿದ್ದು, ವಸ್ತುನಿಷ್ಠ ವಿಶ್ಲೇಷಣೆ ನೈಜತೆಗೆ ಸಹಕಾರಿಯಾಗಿವೆ. ಮೌಖಿಕ ಆಕರಗಳಲ್ಲಿ ಲಾವಣಿ, ಕಥನಗೀತೆ, ಐತಿಹ್ಯ, ಪುರಾಣ, ನಂಬಿಕೆ, ಆಚರಣೆ, ಜನಪದಗೀತೆ, ಕೋಲಾಟಪದ ಇತ್ಯಾದಿ ಸೇರಿವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಮಿತಿಗೆ ತಕ್ಕಂತೆ ಕೇವಲ ಐತಿಹ್ಯ ಹಾಗೂ ನಂಬಿಕೆ-ಆಚರಣೆಗಳನ್ನು ಕುರಿತು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿನ ಐತಿಹ್ಯಗಳನ್ನು ೧. ವ್ಯಕ್ತಿಪ್ರಧಾನ, ೨. ಸ್ಥಳಪ್ರಧಾನ ಎಂಬ ವಿಭಾಗದ ಮೂಲಕ ಚರ್ಚಿಸಲಾಗಿದೆ. ನಂಬಿಕೆ-ಆಚರಣೆಗಳು ಇಲ್ಲಿನ ಮಧ್ಯಕಾಲೀನ ಧಾರ್ಮಿಕ ಪಂಥಗಳನ್ನು ಕುರಿತು ಹೆಚ್ಚು ಪ್ರಸ್ತಾಪಿಸುತ್ತವೆ.

ಇನ್ನು ಸಾಂಸ್ಕೃತಿಕವಾದ ಜಾತ್ರೆ-ಉತ್ಸವಗಳು ಇಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ಕುರಿತು ಹೇಳುತ್ತವೆ. ಕೃಷಿ, ಕಸುಬುಗಳು, ಸಮುದಾಯಗಳ ಭಿನ್ನ ಜೀವನ ಸಂಸ್ಕೃತಿಯ ಚಿತ್ರಣವನ್ನು ಜಾತ್ರೆ-ಉತ್ಸವಗಳು ನೀಡುತ್ತವೆ. ಆದುದರಿಂದ ಈ ಅಧ್ಯಾಯದಲ್ಲಿ ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಬಹುಮುಖ್ಯ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ.

ಏಳನೇ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳನ್ನು ಒಳಗೊಂಡ ಸಂಕ್ಷಿಪ್ತ ರೂಪವೆನ್ನಬಹುದು.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿ, ಲೇಖನ, ಶಾಸನ ಸಂಪುಟ, ಅಪ್ರಕಟಿತ ಸಂಶೋಧನ ಪ್ರೌಢ ಪ್ರಬಂಧ ಮುಂತಾದ ವಿವರಗಳನ್ನು ಗ್ರಂಥ ಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು, ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

೧.೫. ವಿಧಾನ

ಸಂಶೋಧನೆಗೆ ಬಹುಮುಖ್ಯವಾಗಿ ಅಧ್ಯಯನ ವಿಧಾನವಿರಬೇಕು. ಅಧ್ಯಯನ ವಿಧಾನವು ವ್ಯವಸ್ಥಿತ ಹಾಗೂ ವೈಜ್ಞಾನಿಕವಾದ ಮಾರ್ಗ. ಪ್ರಸ್ತುತ ಅಧ್ಯಯನ ವಿಧಾನವು ಬಹುತೇಕ ಕ್ಷೇತ್ರಕಾರ್ಯ ಅಧಾರಿತವಾಗಿದೆ. ಸಂಶೋಧನೆಗಾಗಿ ಹೊಸದುರ್ಗ ತಾಲೂಕನ್ನು ಆಯ್ದುಕೊಂಡಾಗ ತಾಲೂಕು ಕಛೇರಿಯಲ್ಲಿ ತಾಲೂಕಿನ ಗ್ರಾಮಗಳ ಪಟ್ಟಿಯನ್ನು ಪಡೆದೆನು. ಆ ಪ್ರಕಾರ ತಾಲೂಕಿನಲ್ಲಿ ಕಸಬಾ, ಮಾಡದಕೆರೆ, ಮತ್ತೋಡು ಹಾಗೂ ಶ್ರೀರಾಂಪುರ ಹೋಬಳಿಗಳು, ೨೨೪ ಗ್ರಾಮಗಳು, ಅವುಗಳಲ್ಲಿ ೧೮೬ ಚರಾಕ್ ಉಳಿದವು ಬೇಚರಾಕ್ ಆಗಿವೆ. ತಾಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಭೇಟಿನೀಡಿ ಅಲ್ಲಿನ ಪ್ರಾಚೀನ ಸ್ಮಾರಕಗಳಾದ ದೇವಾಲಯ, ಮೂರ್ತಿಶಿಲ್ಪ, ಶಾಸನ, ವೀರಗಲ್ಲು, ಸತಿಗಲ್ಲು, ನಿಷದಿಗಲ್ಲು, ಕೆರೆ-ಕಟ್ಟೆ, ಕೋಟೆ ಮುಂತಾದುವುಗಳನ್ನು ಕುರಿತು ಛಾಯಾಚಿತ್ರ ಹಾಗೂ ಅಗತ್ಯ ನಕ್ಷೆಗಳ ಮೂಲಕ ದಾಖಲಿಸಿಕೊಳ್ಳಲಾಯಿತು. ಗ್ರಾಮಗಳ ಕ್ಷೇತ್ರಕಾರ್ಯದ ಜೊತೆಗೆ ಗ್ರಾಮ ಪರಿಸರದಲ್ಲಿ ಕಂಡುಬರುವ ನಿಸರ್ಗದತ್ತ ಬೆಟ್ಟ-ಗುಡ್ಡ, ಕಲ್ಲಾಸರೆ, ಗವಿ, ಹಳ್ಳ-ಕೊಳ್ಳಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಪ್ರಾಗೈತಿಹಾಸಿಕ ಕಾಲದ ಮಾನವನ ವಾಸದ ನೆಲೆಗಳನ್ನು ಪತ್ತೆಹಚ್ಚಿ ದಾಖಲೀಕರಣ ಮಾಡಿಕೊಳ್ಳಲಾಯಿತು. ಅದೇ ರೀತಿ ಪ್ರಾಗೈತಿಹಾಸಿಕ ಪ್ರಾಚ್ಯಾವಶೇಷಗಳನ್ನು ಅವಶೇಷಗಳ ಸ್ವರೂಪ ಹಾಗೂ ಕಾಲಘಟ್ಟದ ಆಧಾರದ ಮೇಲೆ ವಿಂಗಡಿಸಿಕೊಂಡು ದಾಖಲಿಸಲಾಯಿತು.

ಪುರಾತತ್ವ ಮತ್ತು ಪ್ರಾಗೈತಿಹಾಸಿಕ ಅವಶೇಷಗಳನ್ನು ಪತ್ತೆಹಚ್ಚಿ ದಾಖಲೀಕರಣ ಮಾಡಿ ಕೊಳ್ಳುವುದರ ಜೊತೆ ಜೊತೆಗೆ ಆಯಾ ಪರಿಸರದಲ್ಲಿರುವ ಐತಿಹ್ಯ, ಪೌರಾಣಿಕ ಕತೆ, ನಂಬಿಕೆ-ಆಚರಣೆ ಮುಂತಾದ ಮೌಖಿಕ ಅಂಶಗಳನ್ನು ದಾಖಲಿಸಿಕೊಳ್ಳಲಾಯಿತು. ಸಾಂಸ್ಕೃತಿಕವಾಗಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ-ಉತ್ಸವಗಳಿಗೆ ಭೇಟಿನೀಡಿ ಛಾಯಾಚಿತ್ರ ಸಹಿತ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹೀಗೇ ತಾಲೂಕು ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ,

ಚಾರಿತ್ರಿಕ, ಪುರಾತತ್ತ್ವೀಯ, ಮೌಖಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿಯೊಂದರಿಂದಲೇ ಸಂಶೋಧನೆ ಪೂರ್ಣಗೊಳ್ಳುವುದಿಲ್ಲ. ಇದಕ್ಕೆ ಪೂರಕವಾಗಿ ಆನುಷಂಗಿಕವಾದ(ಸಾಹಿತ್ಯಕ ಆಧಾರಗಳು) ಆಕರಗಳು ಬೇಕು. ಆದ್ದರಿಂದ ಕರ್ನಾಟಕದ ಕೆಲವು ವಿಶ್ವವಿದ್ಯಾಲಯಗಳು ಹಾಗೂ ಸಂಘ ಸಂಸ್ಥೆಗಳ ಗ್ರಂಥ ಭಂಡಾರಕ್ಕೆ ಭೇಟಿನೀಡಿ ವಿಪುಲವಾದ ಆನುಷಂಗಿಕ ಆಕರಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಒಟ್ಟಾರೆ ಪ್ರಸ್ತುತ ಅಧ್ಯಯನ ವಿಧಾನದಲ್ಲಿ ಕ್ಷೇತ್ರಕಾರ್ಯ ಹಾಗೂ ಗ್ರಂಥಾಲಯ ಕಾರ್ಯದ ಮೂಲಕ ಸಂಗ್ರಹಿಸಿದ ಪ್ರಾಥಮಿಕ ಹಾಗೂ ಆನುಷಂಗಿಕ ದತ್ತಾಂಶಗಳನ್ನು ವಿಮರ್ಶೆಗೆ ಒಳಪಡಿಸಿ ವೈಜ್ಞಾನಿಕವಾಗಿ ವಿಶ್ಲೇಷಿಸಿ ಮಹಾಪ್ರಬಂಧವನ್ನು ರಚಿಸಲಾಗಿದೆ.

ಟಿಪ್ಪಣಿಗಳು

೧. ಶ್ರೀಕಂಠಶಾಸ್ತ್ರಿ, ಎಸ್., ೨೦೦೬, **ಭಾರತೀಯ ಸಂಸ್ಕೃತಿ**, ಪು.೧

೨. ಚಿದಾನಂದಮೂರ್ತಿ, ಎಂ., ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು. ೫.

೩. ಚಿದಾನಂದಮೂರ್ತಿ, ಎಂ., ೨೦೦೬, **ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ**, ಪು. ೨.

೪. ಶ್ರೀಕಂಠಶಾಸ್ತ್ರಿ, ಎಸ್., ೨೦೦೬, **ಪೂರ್ವೋಕ್ತ**, ಪು. ೨.

೫. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, **ವಿಜಯನಗರ ಕಾಲದ ಸಂಸ್ಕೃತಿ**, ಪು. ೩೧.

೬. ಕೃಷ್ಣಮೂರ್ತಿ, ಎಂ.ಎಸ್., ೧೯೮೭, **'ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು'**, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ.), ಪು. ೩೭.

೭. ಚಂದ್ರಪೂಜಾರಿ, ಎಂ., ೨೦೦೮, **ಸಂಶೋಧನಾ ಪ್ರಸ್ತಾವ**, ಪು. ೧೯–೨೦.

□□□

ಅಧ್ಯಾಯ : ಎರಡು

ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ

೨.೨. ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಎರಡು

ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ

ಸಂಶೋಧನ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಪರಿಸರದ ಭೌಗೋಳಿಕ ವೈಶಿಷ್ಟ್ಯಗಳನ್ನು ಕುರಿತು ಅರಿಯುವುದು ಅತ್ಯಂತ ಅವಶ್ಯಕ. ಭೂಗೋಳ ಸಮಾಜದ ಪರಿವರ್ತನೆಗೆ ಕಾರಣವಾಗುವ ಒಂದು ಭೌತಿಕ ಅಂಶ. ಹಾಗಾಗಿ ಭೂಗೋಳ ಸಮಾಜದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಅದರೊಂದಿಗೆ ಚರಿತ್ರೆ ಮತ್ತು ಭೂಗೋಳ ನಿಕಟವಾದ ಸಂಬಂಧವನ್ನು ಹೊಂದಿವೆ. ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಒಂದಕ್ಕೊಂದು ಪೂರಕವಾಗಿವೆ. ಭೂಗೋಳದ ಅರಿವಿಲ್ಲದೆ ಚರಿತ್ರೆ ಬರೆಯುವುದು ಕಷ್ಟಸಾಧ್ಯ. ಭೌಗೋಳಿಕ ಅಂಶಗಳು ಪ್ರಭಾವ ಬೀರದ ಪ್ರದೇಶವಿಲ್ಲ. ಪ್ರತಿಯೊಂದು ಚಾರಿತ್ರಿಕ ಸನ್ನಿವೇಶ, ಸ್ಮಾರಕ ಹಾಗೂ ಅವಶೇಷಗಳ ಮೇಲೆ ಭೂಗೋಳದ ಪ್ರಭಾವ ಇದ್ದೇ ಇರುತ್ತದೆ. ಮಾನವನು ಬದುಕುವುದಕ್ಕಾಗಿ ಉತ್ತಮ ಭೌಗೋಳಿಕ ಪರಿಸರವನ್ನು ಶೋಧಿಸಿ ಅಲ್ಲಿ ವಾಸ ಮಾಡುತ್ತಾನೆ. ಹಾಗಾಗಿ ಯಾವುದೇ ಒಂದು ಪ್ರದೇಶದ ಸರ್ವತೋಮುಖ ಬೆಳವಣಿಗೆಯು ಅಲ್ಲಿನ ಭೌಗೋಳಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಯಾವ ದೇಶಕ್ಕೆ ಹೆಚ್ಚು ಪ್ರಕೃತಿಯ ಸಹಾಯವಿರುತ್ತದೆಯೋ ಅದು ಬಹುಬೇಗ ಅಭಿವೃದ್ಧಿಯನ್ನು ಸಾಧಿಸುತ್ತದೆ. ಒಂದು ಪ್ರದೇಶದ ಪರ್ವತಶ್ರೇಣಿ, ಬೆಟ್ಟ-ಗುಡ್ಡ, ನದಿ, ನದಿಯ ಬಯಲು, ತೀರಪ್ರದೇಶ, ಬಂದರು, ಮಣ್ಣಿನ ರಚನೆ, ಹವಾಮಾನ, ಉಷ್ಣಾಂಶ, ರೇಖಾಂಶ ಮುಂತಾದ ಭೌಗೋಳಿಕ ಅಂಶಗಳು ಮಾನವನನ್ನು ಆ ಪ್ರದೇಶದಲ್ಲಿ ವಾಸಿಸುವಂತೆ ಅನುವು ಮಾಡಿಕೊಡುತ್ತವೆ. ಉತ್ತಮ ಭೌಗೋಳಿಕ ಪರಿಸರ ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸಿ, ಜನಜೀವನ, ನಾಗರೀಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಆ ಪ್ರದೇಶ ತನ್ನದೆ ಆದ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಲು ಭೌಗೋಳಿಕ ಪರಿಸರ ಬಹಳ ಮುಖ್ಯ.

ಪ್ರತಿಯೊಂದು ಚಾರಿತ್ರಿಕ ಸನ್ನಿವೇಶಗಳು ಸ್ಮಾರಕಗಳು ಹಾಗೂ ಅವಶೇಷಗಳ ಮೇಲೆ ಭೂಗೋಳದ ಪ್ರಭಾವ ಇದ್ದೇ ಇರುತ್ತದೆ ಎಂದು ಮೇಲೆಯೆ ಹೇಳಲಾಗಿದೆಯಷ್ಟೆ. ಭಾರತದ ಪ್ರಾಚೀನ ನಾಗರೀಕತೆ ಹರಪ್ಪ ಸಂಸ್ಕೃತಿಯು ಹುಟ್ಟಿ ಪ್ರಬುದ್ಧವಾಗಿ ಬೆಳೆದು ಅವನತಿಯಾದುದು ಸಿಂಧೂ ನದಿ ಪರಿಸರದಲ್ಲಿ. ಇಲ್ಲಿನ ಭೌಗೋಳಿಕ ಪರಿಸರವು ಮಾನವನು ಒಂದೆಡೆ ನೆಲೆನಿಂತು

ತನ್ನದೇ ನಾಗರೀಕತೆ ಹಾಗೂ ಸಂಸ್ಕೃತಿ ಹೊಂದಲು, ಅದರ ಕುರುಹುಗಳನ್ನು ಬಿಟ್ಟು ಹೋಗಲು ಕಾರಣವಾಯಿತು. ಮಧ್ಯಕಾಲೀನ ಭಾರತದಲ್ಲಿ ವಿದೇಶಿಯರು ಅವ್ಯಾಹತವಾಗಿ ಭಾರತದ ಮೇಲೆ ದಾಳಿ ಮಾಡಿ ಇಲ್ಲಿಯೇ ಶಾಶ್ವತವಾಗಿ ನೆಲೆ ನಿಂತು ಸಾಮ್ರಾಜ್ಯಗಳನ್ನು ನಿರ್ಮಾಣ ಮಾಡಿ ಹೊಸ ಸಂಸ್ಕೃತಿ ನೆಲೆಗೊಳ್ಳಲು ಕಾರಣವಾದ ಅಂಶಗಳಲ್ಲಿ ಭೌಗೋಳಿಕ ಸಂಪತ್ತು ಸಹ ಒಂದು. ದಕ್ಷಿಣ ಭಾರತದ ಮಧ್ಯಕಾಲದ ಪ್ರಮುಖ ರಾಜಮನೆತನಗಳಾದ ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯಗಳು ನಿರಂತರ ಯುದ್ಧಗಳಲ್ಲಿ ತೊಡಗಿದ್ದುದಕ್ಕೆ ಕಾರಣ ರಾಯಚೂರು ದೊ-ಅಬ್ ಪ್ರದೇಶ.[೧] ಕೃಷ್ಣ-ತುಂಗಾಭದ್ರ ನದಿಗಳ ಮಧ್ಯಭಾಗದ ರಾಯಚೂರು ದೊ-ಅಬ್ ಪ್ರದೇಶವು ತುಂಬಾ ಫಲವತ್ತತೆಯಿಂದ ಕೂಡಿದ್ದುದು ನಿರಂತರ ಯುದ್ಧಗಳಿಗೆ ಕಾರಣವಾಗಿದ್ದಿತು.[೨] ನಾಗರೀಕತೆ, ಸಂಸ್ಕೃತಿಯ ಹುಟ್ಟು-ಬೆಳವಣಿಗೆ-ಅವನತಿ, ಸಾಮ್ರಾಜ್ಯಗಳ ಸ್ಥಾಪನೆ, ಯುದ್ಧಗಳು ಮುಂತಾದ ಚಾರಿತ್ರಿಕ ಅಂಶಗಳ ಮೇಲೆ ಭೌಗೋಳಿಕ ಪರಿಸರವು ಬೀರಿರುವ ಪ್ರಭಾವ ಗಮನಾರ್ಹ.

ಐತಿಹಾಸಿಕ ಸ್ಮಾರಕ ಹಾಗೂ ಅವಶೇಷಗಳ ಮೇಲೆಯೂ ಭೌಗೋಳಿಕ ಅಂಶಗಳು ಅತ್ಯಂತ ಹೆಚ್ಚಿನ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಸ್ಮಾರಕಗಳು ಆಯಾ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿರುತ್ತವೆ. ಅಂತಹ ಸ್ಮಾರಕಗಳಲ್ಲಿ ಕೋಟೆ-ಕೊತ್ತಲ, ಅರಮನೆ, ನಗರ ನಿವೇಶನ, ಕೆರೆ-ಕಟ್ಟೆ ಹಾಗೂ ದೇವಾಲಯ ಮುಂತಾದವುಗಳನ್ನು ಕಾಣಬಹುದು. ಇವು ಆಯಾ ಭೌಗೋಳಿಕ ಪರಿಸರದ ಚರಿತ್ರೆ ಮತ್ತು ಅಂದಿನ ಸಂಸ್ಕೃತಿಯನ್ನು ಸಾರುವ ಸ್ಮಾರಕಗಳಾಗಿವೆ. ಭೌಗೋಳಿಕವಾಗಿ ಬಾದಾಮಿಯನ್ನು ಕೆಂಪು ಮರಳುಗಲ್ಲಿನ ಬೆಟ್ಟಗಳು ಸುತ್ತಿ ಕೊಂಡಿದ್ದು, ಈ ಪ್ರದೇಶವನ್ನು ಚಾಲುಕ್ಯರು ರಾಜಧಾನಿ ಮಾಡಿಕೊಂಡು ಆಳಲು ಪ್ರಾರಂಭಿಸಿದಾಗ ಇವರ ಪ್ರೋತ್ಸಾಹದಿಂದಾಗಿ ಬಾದಾಮಿ ಮತ್ತು ಐಹೊಳೆಗಳಲ್ಲಿ ಗುಹಾಂತರ ದೇಗುಲಗಳು ರಚನೆಗೊಂಡು ಜಗತ್ತಿನ ವಾಸ್ತುಶಿಲ್ಪಕ್ಕೆ ವಿಶೇಷವಾದ ಕೊಡುಗೆ ಲಭಿಸಿತು.[೩] ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ಮನೆತನಗಳ ಕಾಲದಲ್ಲಿ ಭೌಗೋಳಿಕವಾಗಿ ದೊರೆಯುತ್ತಿದ್ದ ಹಸಿರು ಮಿಶ್ರಿತ ಕಪ್ಪುಶಿಲೆ(Chloritic Shirt)ಗಳನ್ನು ಬಳಸಿ ನಾಜೂಕು, ಕುಸುರಿ ಕೆತ್ತನೆಗಳು ಮೂಡಿಬಂದು ಒಂದು ಹೊಸ ಕಲಾ ಪ್ರಪಂಚಕ್ಕೆ ಕಾರಣವಾಯಿತು.[೪] ವಿಜಯನಗರದ ಅರಸರು ಭೌಗೋಳಿಕವಾಗಿ ದೊರೆಯುವ ಗ್ರಾನೈಟ್ ಕಲ್ಲುಗಳನ್ನು ಬಳಸಿ ದೇವಾಲಯ, ಕೋಟೆಗಳು ಹಾಗೂ ಇತರ ಕಟ್ಟಡಗಳನ್ನು ನಿರ್ಮಾಣ ಮಾಡಿದರು. ಈ ರೀತಿ ಸ್ಮಾರಕಗಳ ನಿರ್ಮಾಣದ ಹಿಂದೆ ಭೌಗೋಳಿಕ ಪರಿಸರ ವಿಶೇಷ ಪಾತ್ರವಹಿಸಿರುತ್ತದೆ. ಒಟ್ಟಾರೆ ಭೌಗೋಳಿಕ ಪರಿಸರವು ಸಾಂಸ್ಕೃತಿಕ ಚರಿತ್ರೆಯ ಮೇಲೆ ತನ್ನದೆ ಪ್ರಭಾವವನ್ನು ಬೀರಿರುತ್ತದೆ. ಪ್ರಸ್ತುತ ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ ಮಾಡುವುದಕ್ಕೂ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಹೊಸದುರ್ಗ ತಾಲೂಕಿನ ಭೌಗೋಳಿಕ ಲಕ್ಷಣಗಳನ್ನು ಕುರಿತು ಅರಿಯುವುದು ಒಳಿತು.

೨.೧.೧. ಚಿತ್ರದುರ್ಗ ಜಿಲ್ಲೆ

ದಕ್ಷಿಣ ಭಾರತದ ಕರ್ನಾಟಕ ರಾಜ್ಯದ ಮಧ್ಯರಂಗವನ್ನು ಆಕ್ರಮಿಸಿ ಕೇಂದ್ರಭೂಮಿ ಯಾಗಿರುವ ಚಿತ್ರದುರ್ಗ ಜಿಲ್ಲೆಯು ಒಂದು ಆಯಕಟ್ಟಿನ ಸ್ಥಳದಲ್ಲಿರುವುದಲ್ಲದೆ ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು, ಭೌಗೋಳಿಕವಾಗಿಯೂ ಹಲವಾರು ವೈಶಿಷ್ಟ್ಯತೆಗಳನ್ನೊಳಗೊಂಡಿದೆ. ಜಿಲ್ಲೆಯ

ಈಶಾನ್ಯಕ್ಕೆ ಬಳ್ಳಾರಿ, ಆಗ್ನೇಯಕ್ಕೆ ತುಮಕೂರು, ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ, ನೈರುತ್ಯಕ್ಕೆ ಚಿಕ್ಕಮಗಳೂರು, ಪಶ್ಚಿಮಕ್ಕೆ ದಾವಣಗೆರೆ ಜಿಲ್ಲೆಗಳು ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಮೊದಲು ೯ ತಾಲೂಕುಗಳು ಅಸ್ಥಿತ್ವದಲ್ಲಿದ್ದವು. ೧೯೯೭ರಲ್ಲಿ ಜಿಲ್ಲೆ ಪುನರ್‌ವಿಂಗಡಣೆಯಾದಾಗ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲೂಕುಗಳು ದಾವಣಗೆರೆ ಜಿಲ್ಲೆಗೆ ಸೇರ್ಪಡೆ ಗೊಂಡವು. ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೬ ತಾಲೂಕುಗಳಿದ್ದು ಅವುಗಳಲ್ಲಿ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ ಹಾಗೂ ಹೊಸದುರ್ಗ ತಾಲೂಕುಗಳನ್ನು ಕಾಣಬಹುದು. ಈ ಜಿಲ್ಲೆಯು ೨೨ ಹೋಬಳಿಗಳನ್ನು ಹಾಗೂ ೧೮೫ ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ.[೫] ಜಿಲ್ಲೆಯ ವಿಸ್ತೀರ್ಣ ೮.೩೮೮ ಚ.ಮೀ.ಗಳು ಆಗಿದ್ದು[೬] ೯೩೨ ಜನವಸತಿ ಇರುವ ಗ್ರಾಮಗಳು ಇವೆ.[೭] ಇಲ್ಲಿನ ಜನಸಂಖ್ಯೆ ೨೦೦೧ರ ಜನಗಣತಿ ಪ್ರಕಾರ ೧೫,೧೦,೨೨೭ ಆಗಿದ್ದು, ಪುರುಷರ ಸಂಖ್ಯೆ ೭.೭೬ ಲಕ್ಷ ಹಾಗೂ ಮಹಿಳೆಯರ ಸಂಖ್ಯೆ ೭.೪೨ ಲಕ್ಷ ಆಗಿರುತ್ತದೆ. ೨೦೧೧ರ ಜನಗಣತಿ ಪ್ರಕಾರ ೧೯,೬೦,೨೭೮ ಆಗಿದೆ.[೮] ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ನೆಲೆಯು ಉತ್ತರ ಅಕ್ಷಾಂಶ ೧೩.೧೫°ರಿಂದ ೧೫.೨೦° ಮತ್ತು ಪೂರ್ವ ರೇಖಾಂಶ ೭೬.೨೪° ರಿಂದ ೭೭°ರಲ್ಲಿದೆ.[೯]

ನಿಸರ್ಗದ ಕೊಡುಗೆಗಳಲ್ಲಿ ಬೆಟ್ಟ-ಗುಡ್ಡಗಳಿಗೆ ಮಹತ್ವದ ಸ್ಥಾನವಿದೆ. ಇವು ಮಾನವನ ಜೀವನದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಅದರಂತೆ ಮಾನವನು ತನ್ನ ಬುದ್ಧಿ, ಚಾತುರ್ಯದಿಂದ ಪರಿಸರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾನೆಯಾದರೂ ಆತನು ಪರಿಸರದಿಂದ ನಿರ್ಬಂಧಿತನಾಗಿ ಅದರ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತಾನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಇಂತಹ ಬೆಟ್ಟ-ಗುಡ್ಡ, ಗಿರಿಶಿಖರಗಳು ಸಹಜವಾಗಿಯೆ ಆದಿಮಾನವನ ವಾಸಕ್ಕೆ ಕೋಟೆ-ಕೊತ್ತಲಗಳ ನಿರ್ಮಾಣಕ್ಕೆ ಸಹಕಾರಿಯಾಗಿವೆ. ಜಿಲ್ಲೆಯ ಹೆಚ್ಚು ಭಾಗ ತಗ್ಗಾದ ಕಣಶಿಲೆಯ ಬೋಳು ಬೆಟ್ಟಗಳಿಂದಲೂ ಮಧ್ಯೆ ಮಧ್ಯೆ ಇರುವ ಸ್ವಲ್ಪ ಮಟ್ಟಸವಾದ ಕಣಿವೆಗಳಿಂದಲೂ ಕೂಡಿದೆ.[೧೦] ಮುಖ್ಯ ಬೆಟ್ಟಸಾಲುಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಸಮಾಂತರವಾಗಿ ಸಾಗಿವೆ. ಪೂರ್ವಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗ (೯೮೪ ಮೀ) ಪರ್ಯಂತ ಹಬ್ಬಿ, ಮುಂದೆ ಸ್ವಲ್ಪ ದೂರಬಿಟ್ಟು ವಾಯುವ್ಯದಲ್ಲಿ ಕಣಕುಪ್ಪೆ ಬೆಟ್ಟದಲ್ಲಿ (೮೯೯ ಮೀ) ಮುಂದುವರೆದು ಜಿಲ್ಲೆಯ ಎಲ್ಲೆಯವರೆಗೂ ಸಾಗುತ್ತದೆ. ಚಿತ್ರದುರ್ಗದ ದಕ್ಷಿಣಕ್ಕಿರುವ ಜೋಗಿಮರಡಿ (೧.೧೯೯ ಮೀ), ಐಚಲದುರ್ಗ (೧.೧೬೦ ಮೀ) ಮತ್ತು ಭೀರನ ಕಲ್ಲುದುರ್ಗ (೧.೧೭೭ ಮೀ) ಈ ಸಾಲಿನ ಉನ್ನತ ಶಿಖರಗಳು. ಮೊಳಕಾಲ್ಮೂರು ಬಳಿ ಕೆಲವು ಬೆಟ್ಟಗಳುಂಟು, ಇವುಗಳಲ್ಲಿ ಮುಖ್ಯವಾದವು ನುಂಕೆ ಭೈರವ (೯೨೧ ಮೀ), ಜಟಿಂಗರಾಮೇಶ್ವರ (೧.೦೫೭ಮೀ) ಮತ್ತು ಶಾಂತಿಗುಡ್ಡ (೭೯೧ಮೀ). ಈ ಪ್ರದೇಶ ವಿಶಿಷ್ಟ ಸೌಂದರ್ಯದಿಂದ ಕೂಡಿದೆಂದು ರಾಬರ್ಟ್ ಬ್ರೂಸ್‌ಫೂಟ್ ಅವರು ಬರೆದಿದ್ದಾರೆ. ಚಿತ್ರದುರ್ಗ ಜಿಲ್ಲೆ ಸಾಮಾನ್ಯವಾಗಿ ಸಮುದ್ರ ಮಟ್ಟದಿಂದ ೬೦೦ ಮೀ ಎತ್ತರದಲ್ಲಿದೆ.[೧೧]

ಚಿತ್ರದುರ್ಗ ಜಿಲ್ಲೆಯಲ್ಲಿ ಕೆರೆ-ಕಟ್ಟೆ, ಬಾವಿ, ಚಿಕ್ಕಮಟ್ಟ ತೊರೆ, ಹಳ್ಳ-ಕೊಳ್ಳ, ನದಿಗಳು ನೀರಾವರಿಯ ಮುಖ್ಯ ಮೂಲಗಳಾಗಿವೆ. ಜಿಲ್ಲೆಯ ಪ್ರಮುಖ ನದಿ ವೇದಾವತಿ. ಜಿಲ್ಲೆಯ

ದಕ್ಷಿಣ ಮತ್ತು ಪೂರ್ವ ಭಾಗದ ಎಲ್ಲೆಗೆ ಸುಮಾರು ಸಮನಾಂತರವಾಗಿ ಸಾಗುವ ಈ ನದಿ ನೈಋತ್ಯದಲ್ಲಿ ಹೊಸದುರ್ಗ ತಾಲೂಕನ್ನು ಪ್ರವೇಶಿಸಿ ಹಿರಿಯೂರು ಮತ್ತು ಚಳ್ಳಕೆರೆ ತಾಲೂಕುಗಳ ಮೂಲಕ ೨೦೭ ಕಿ.ಮೀ. ದೂರ ಹರಿಯುತ್ತದೆ. ಚಿನ್ನಹಗರಿ (ಜನಗಿಹಳ್ಳ), ಸುವರ್ಣಮುಖಿ ನದಿಗಳು ಈ ಜಿಲ್ಲೆಯ ಇತರ ನದಿಗಳಾಗಿದ್ದು ನೀರಾವರಿ ಸೌಲಭ್ಯವನ್ನು ಅಲ್ಪವಾಗಿ ಕಲ್ಪಿಸಿವೆ. ಜನಗನಹಳ್ಳ (ಚಿಕ್ಕಹಗರಿ) ಎಂಬುದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆ ಜಗಳೂರು ತಾಲೂಕುಗಳಲ್ಲಿ ಹರಿದು ವೇದಾವತಿಯನ್ನು ಸೇರುತ್ತದೆ. ಸುವರ್ಣಮುಖಿ ನದಿ ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲೂಕಿನ ಇಕ್ಕನೂರು ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿ ೧೧ ಕಿ.ಮೀ. ದೂರ ಹರಿದು ವೇದಾವತಿಯನ್ನು ಸೇರುತ್ತದೆ. ಜನಗಿಹಳ್ಳಕ್ಕೆ ಅಡ್ಡಲಾಗಿ ಭಟ್ಟರಹಳ್ಳಿ, ಮಲ್ಲಳ್ಳಿ ಮತ್ತು ದೇವಸಮುದ್ರ ಕೆರೆಗಳನ್ನು ಕಟ್ಟಲಾಗಿದೆ. ಚಿತ್ರದುರ್ಗ ತಾಲೂಕಿನ ಭೀಮಸಮುದ್ರ, ಚಳ್ಳಕೆರೆ ತಾಲೂಕಿನ ಧರ್ಮಪುರಕೆರೆ, ಹೊಳಲ್ಕೆರೆ ತಾಲೂಕಿನ ಮುತ್ತುಗದೂರು ಮುಂತಾದವುಗಳನ್ನು ಕಾಣಬಹುದು. ಜಿಲ್ಲೆಯಲ್ಲಿ ಮಳೆ ಕಡಿಮೆ ಬೇಸಿಗೆಯ ತಾಪ ಹೆಚ್ಚು, ಚಳಿಗಾಲ ಹಿತಕರ. ಚಳಿಗಾಲದ ಸರಾಸರಿ ಉಷ್ಣತೆ ೨೭.೯೦ ಸೆಂ. ಬೇಸಿಗೆಯಲ್ಲಿ ೩೬.೨೦ ಸೆಂ.ನಿಂದ ೪೧೦ ಸೆಂ. ಈ ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ ೬೫೫ ಮಿ.ಮೀ.[೧೨]

ಜಿಲ್ಲೆಯಲ್ಲಿ ಫಲವತ್ತಾದ ಭೂಮಿ ಇದೆ. ಇಲ್ಲಿ ಏರೆ, ಕೆಂಗಲು ಮತ್ತು ಕಲ್ ಮರಡಿಯೆಂಬ ಮೂರು ರೀತಿಯ ನೆಲವಿದೆ. ಜಿಲ್ಲೆಯ ಬಹುಭಾಗ ಕಪ್ಪು ಎರೆಮಣ್ಣು ಹಾಗೂ ಉಳಿದಂತೆ ಕೆಂಪು ಮಣ್ಣು ಕಂಡುಬರುತ್ತದೆ.[೧೩] ಚಿತ್ರದುರ್ಗ ಸಮೀಪದ ಗಾರೆಹಟ್ಟಿಯಲ್ಲಿನ ಚೋಳೇಶ್ವರ ದೇವಸ್ಥಾನದ ಶಾಸನ ಮತ್ತು ವಿಜಯನಗರ ಕಾಲದ ಹಿರೇಗುಂಟನೂರು ಶಾಸನಗಳಲ್ಲಿ ಜಮೀನುಗಳ ವರ್ಗೀಕರಣ ಎರೆ, ಗದ್ದೆ, ಕೆನ್ನೆಲ ಮತ್ತು ತೋಟ ಇತ್ಯಾದಿಯಾಗಿ ದಾಖಲಿಸಲ್ಪಟ್ಟಿವೆ.[೧೪] ನೀರಾವರಿ ಹೆಚ್ಚು ಇಲ್ಲದ ಕಾರಣ ಕುಷ್ಕಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುವುದು. ಮುಖ್ಯ ಬೆಳೆಗಳು ರಾಗಿ ಮತ್ತು ಜೋಳ. ಇತರ ಬೆಳೆಗಳಾಗಿ ಹತ್ತಿ, ಭತ್ತ, ಕಬ್ಬು, ಕಡಲೆಕಾಯಿ, ಎಣ್ಣೆಬೀಜಗಳು, ಹೊಗೆಸೊಪ್ಪು, ತೊಗರಿ, ನವಣೆ, ಸಾಸುವೆ, ಬಾಳೆ, ಅಡಿಕೆ, ತೆಂಗು, ಈರುಳ್ಳಿ, ಮೆಣಸಿನಕಾಯಿ, ಇತರೆ ತರಕಾರಿಗಳು ಹಾಗೂ ವಿವಿಧ ಹಣ್ಣುಗಳನ್ನು ಬೆಳೆಯಲಾಗುವುದು.[೧೫]

ಜಗತ್ತಿನ ಅತ್ಯಂತ ಪುರಾತನ ಭೂಮಿ ಕರ್ನಾಟಕ ಪೀಠಭೂಮಿ; ಇದು ಪರ್ಯಾಯ ದ್ವೀಪಭಾಗದ ಪ್ರಸ್ಥಭೂಮಿಯಾಗಿದೆ. ಇಂತಹ ಪೀಠಭೂಮಿಯ ಕೇಂದ್ರ ಭೂಭಾಗ ಚಿತ್ರದುರ್ಗ ಜಿಲ್ಲೆ.[೧೬] ಕರ್ನಾಟಕ ಪೀಠಭೂಮಿ ಸುಮಾರು ೪೦ ಕೋಟಿ ವರುಷಗಳಷ್ಟು ಹಿಂದೆ ದಕ್ಷಿಣ ಆಫ್ರಿಕಾ ಖಂಡಕ್ಕೆ ಅಂಟಿಕೊಂಡಿದ್ದಿತು. ಅಂತಹ ಅಖಂಡ ಭೂಭಾಗದಿಂದ ಸೀಳಿಕೆಗಳು ಮೂಡಿ ತ್ರಿಕೋನಾಕೃತಿಯ ತುಣುಕು (ಇಂದಿನ ದಕ್ಷಿಣ ಭಾರತ) ತೆಪ್ಪದಂತೆ ನಿಧಾನವಾಗಿ ತೇಲಿಬಂದು ಅಂದರೆ, ವರ್ಷಕ್ಕೆ ೩ ರಿಂದ ೪ ಸೆಂ.ಮೀ. ಗಳಷ್ಟು ಸ್ಥಳಾಂತರವಾಗಿ ಟಿಬೆಟ್ ಪ್ರಸ್ಥಭೂಮಿಗೆ ಡಿಕ್ಕಿ ಹೊಡೆದಾಗ ಈ ಭೂಭಾಗಗಳೆರಡರ ಮಧ್ಯೆ ಇದ್ದ ಅಗಾಧ ಶಿಲಾಸ್ತರಗಳ ಸಂಚಯನವು ಸುಕ್ಕುಗಟ್ಟಿ ಮಡಿಸಿಕೊಂಡು, ಹಿಮಾಲಯ ಪರ್ವತ ಪಂಕ್ತಿಗಳಾಗಿ ಮೇಲೆದ್ದುವು. ಭರತಖಂಡದ ಪರ್ಯಾಯ ದ್ವೀಪವು ಇಂದಿನ ಸ್ಥಳದಲ್ಲಿ ನೆಲೆಯಾಗಿ ನಿಂತಿತು. ಅಂದರೆ ಮುಂಚೆ ಇದು ಅಲೆಮಾರಿ ಭೂಖಂಡವಾಗಿದ್ದಿತು. ಇಂತಹ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ

ಕಂಡುಬರುವ ಪದರುಶಿಲೆ ಮತ್ತು ಅದರೊಡನಿರುವ ಒರಟು ಕಣಶಿಲೆ (ಗ್ರಾನೈಟ್), ಸ್ಲೇಟುಶಿಲೆ, ಬ್ಲೇಡುಶಿಲೆ, ಕ್ಲೋರೈಟ್ ಮತ್ತು ಹಾರ್ನ್‌ಬ್ಲೆಂಡ್ ಶಿಲೆ ಸೇರಿದಂತೆ ಒಟ್ಟಾರೆ 'ಚಿತ್ರದುರ್ಗ ಪದರು ಶಿಲಾವಲಯ' (ಚಿತ್ರದುರ್ಗ ಶಿಷ್ಟ ಬೆಲ್ಟ್) ಎಂದೇ ಪ್ರಪಂಚದ ಭೂ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.[೧೭]

ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ಖನಿಜ ಸಂಪತ್ತುಗಳಿವೆ. ಅವುಗಳಲ್ಲಿ ಮುಖ್ಯವಾಗಿ ತಾಮ್ರ, ಕಬ್ಬಿಣ, ಮ್ಯಾಂಗನೀಸ್, ಸೀಸ, ಚಿನ್ನ, ಅಂಟಿಮೋನಿ ಮತ್ತು ಕ್ರೋಮೈಟ್ ಲೋಹದ ಅದಿರುಗಳಾದ ಬೈಕೆಟಿಸ್, ಕಯನೈಟ್, ಸುಣ್ಣಶಿಲೆ, ಬಣ್ಣದ ಮಣ್ಣುಗಳನ್ನು ಹಲವಾರು ಪ್ರದೇಶಗಳಲ್ಲಿ ಕಾಣಬರುತ್ತವೆ.[೧೮] ಚಿತ್ರದುರ್ಗ ಸುತ್ತಮುತ್ತಲ ಕೆಲವು ಹಳ್ಳಿಗಳಲ್ಲಿ ಚಿನ್ನದ ಹಳೆಯ ಗಣಿಗಳಿವೆ. ಜಾವನಹಳ್ಳಿ, ಆನೆಸಿದ್ಧ, ದಿಂಡಾವರ, ಕೋಟೆಮರಡಿ, ಬಂಡಿಮರಡಿ, ಗುಡ್ಡದ ರಂಗವ್ವನಹಳ್ಳಿ, ಹಳೇಕಲ್ ಮತ್ತು ಹೊನ್ನೇ ಮರಡಿಗಳಲ್ಲಿ ಕಾಣಬಹುದು. ಉತ್ತಮ ಮಟ್ಟದ ತಾಮ್ರದ ಅದಿರು ಜಿಲ್ಲೆಯ ಇಂಗಳದಾಳು ಮತ್ತು ಕುಂಚಿಗನಹಾಳು ಪ್ರದೇಶಗಳಲ್ಲಿ ಅಗ್ನಿಶಿಲೆಗಳಲ್ಲಿಯ ಬೆಣಚು ಶಿರಬಳ್ಳಿಗಳಲ್ಲಿ ಚಾಲ್ಕೋಪಿರೈಟ್ ಎಂಬ ತಾಮ್ರದ ಅದಿರು ರೂಪದಲ್ಲಿ ದೊರೆಯುತ್ತದೆ.[೧೯] ಶ್ರೇಷ್ಠಮಟ್ಟದ ಕಬ್ಬಿಣದ ಅದಿರು ಲಕ್ಕಿಹಳ್ಳಿ, ಕರೇಕಲ್ಲುಗುಡ್ಡ, ಜೋಡಿಮರಡಿ, ಮೇದಕೇರಿಪುರ, ಹನುಮನಕಟ್ಟೆ ಮತ್ತು ಭೀಮಸಮುದ್ರ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕಬ್ಬಿಣದ ಅದಿರು ದೊರೆಯುವ ಸ್ಥಳಗಳಲ್ಲೆ ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳೂ ಇವೆ. ಕುದುರೆಕಣಿವೆಯ ವನ್ಯ ಪ್ರದೇಶದಲ್ಲಿ ಸುಣ್ಣಶಿಲೆಯ ಸ್ತರಗಳು ಚಿಕ್ಕಬೈಲಕೆರೆ, ಜೋಡಿಮರಡಿ, ಹೊರಕೆರೆದೇವಪುರ, ಪಿಟ್ಲಾಳಿ ಹಾಗೂ ಜವಗೊಂಡನಹಳ್ಳಿಗಳಲ್ಲಿ ಹೆಚ್ಚು ಕ್ಯಾಲ್ಸಿಯಂಯುಕ್ತ ಸುಣ್ಣಶಿಲೆಯು ಕಂಡು ಬರುತ್ತವೆ.[೨೦] ಮಲ್ಲಾಪುರ, ಮತ್ತೋಡು, ಕಂಚೀಪುರ ಹಾಗೂ ಇಟ್ಟಿಗೆಹಳ್ಳಿಗಳಲ್ಲಿಯೂ ಮುದ್ದೆಯಂತಿರುವ ಸುಣ್ಣಶಿಲೆ ದೊರೆಯುತ್ತದೆ. ಜಿಲ್ಲೆಯಲ್ಲಿ ಈ ರೀತಿಯಾದ ಹಲವು ಖನಿಜ ವರ್ಗಗಳಿವೆ.

ಬಯಲುಸೀಮೆಯಾಗಿರುವ ಈ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ಅರಣ್ಯ ಸಂಪತ್ತು ಕಡಿಮೆ ಇದೆ. ಜಿಲ್ಲೆಯಲ್ಲಿ ಒಟ್ಟು ೭೩.೭೧೯ ಹೆಕ್ಟೇರ್ ಅರಣ್ಯವಿದೆ. ದಟ್ಟವಾದ ಕಾಡುಗಳು ಇರಲು ಬೇಕಾದ ಭೌಗೋಳಿಕ ಅಂಶಗಳು ಈ ಜಿಲ್ಲೆಯಲ್ಲಿ ಕಂಡುಬರದ ಕಾರಣ ಕುರುಚಲು ಕಾಡುಗಳು ಹೆಚ್ಚು. ಮಳೆ ಹೆಚ್ಚಾಗಿಲ್ಲದ ಭಾಗಗಳಲ್ಲಿ ಹುಣಸೆ, ಮಾವು, ಹಿಪ್ಪೆ ಮರಗಳು, ಜಾಲಿ ಜಾತಿಯ ಗಿಡಗಳು ಮತ್ತು ಸೀತಾಫಲ ಬೆಳೆಯುತ್ತವೆ. ತಂಪು ತಿಂಗಳುಗಳಲ್ಲಿ ಚಳ್ಳಕೆರೆ ಮತ್ತು ಹೊಸದುರ್ಗ ತಾಲೂಕುಗಳ ಅಮೃತಮಹಲ್ ಹುಲ್ಲುಗಾವಲುಗಳು ಅಚ್ಚ ಹಸಿರಾಗಿರುತ್ತವೆ. ಜೋಗಿಮಟ್ಟಿ ಬೆಟ್ಟಗಳ ಬಳಿ ಬಿದಿರು ಮೆಳೆಗಳು ಉಂಟು. ಚೌಬೀನೆಗೆ ಯೋಗ್ಯವಾದ ಕಮ್ಮರ, ಸೋಮೆ, ಕೆಂಪುಖೈರ ಮರಗಳು ಅಲ್ಲಿ ಬೆಳೆಯುತ್ತವೆ. ದಿಂಡಿಗ, ಬೇವು, ಕಕ್ಕಿ, ಚುಜ್ಜಲು, ತಂಗಡಿ ಇತರೆ ಮರಗಳು ಕಂಡುಬರುತ್ತವೆ.[೨೧]

ಜಿಲ್ಲೆಯ ಪ್ರಾಣಿ ಪಕ್ಷಿ ಸಂಪತ್ತನ್ನು ಗಮನಿಸಿದಾಗ ವಿವಿಧ ಪ್ರಾಣಿ, ಪಕ್ಷಿ ವರ್ಗಗಳನ್ನು ಕಾಣಬಹುದು. ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿಗಳಿವೆ. ಹುಲಿಗಳು, ಜಿಂಕೆಗಳು ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ತಾಲೂಕುಗಳಲ್ಲಿ ಹೆಚ್ಚು. ನಾಗರಹಾವು, ಮಂಡಲದಹಾವು, ಮಂಡರಗಪ್ಪೆ ಮತ್ತು ಇತರ ಬಗೆಯ ಚೇಳುಗಳಿವೆ. ಕಾಡುಕಾಗೆ, ಮೈನ, ಮರಕುಟಿಗ,

ಕಾಡುಪಾರಿವಾಳ, ಕಾಡುಕೋಳಿ, ಕವುಜುಗ, ನೀರುಕೋಳಿ, ಕೋಗಿಲೆ, ಬಾನಾಡಿ ಇವು ಜಿಲ್ಲೆಯಲ್ಲಿರುವ ಪಕ್ಷಿಗಳಲ್ಲಿ ಮುಖ್ಯವಾದವು.[೨೨]

೨.೧.೨. ಹೊಸದುರ್ಗ ತಾಲೂಕು

ಚಿತ್ರದುರ್ಗ ಜಿಲ್ಲೆಯ ೬ ತಾಲೂಕುಗಳಲ್ಲಿ ಹೊಸದುರ್ಗ ತಾಲೂಕು ಒಂದು. ಈ ತಾಲೂಕು ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವ ಪಡೆದಿದೆ. ಪ್ರಾಗೈತಿಹಾಸಿಕ ಕಾಲದ ಆದಿಮಾನವನಿಂದ ಹಿಡಿದು ಚಾರಿತ್ರಿಕ ಕಾಲಘಟ್ಟದ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಅರಸರು, ಬೂದಿಹಾಳು–ಮತ್ತೋಡು–ಚಿತ್ರದುರ್ಗ–ಸಂತೇಬೆನ್ನೂರು–ಬೇಲೂರು ನಾಯಕ ಅರಸರು, ಮೈಸೂರು ಒಡೆಯರು, ಶ್ರೀರಂಗಪಟ್ಟಣದ ನವಾಬರು, ಬ್ರಿಟಿಷರವರೆಗಿನ ಹಲವು ಚಾರಿತ್ರಿಕ ಕುರುಹುಗಳು ಕಂಡುಬರುತ್ತವೆ. ಚಿತ್ರದುರ್ಗಕ್ಕಿಂತಲೂ ಹೊಸದುರ್ಗ ಪ್ರಾಂತ್ಯದ ಭೌಗೋಳಿಕ ಲಕ್ಷಣ ವಿಶಿಷ್ಟವಾದುದು. ಇತ್ತ ಬಯಲುಸೀಮೆಯೂ, ಅತ್ತ ಮಲೆನಾಡು ಅಲ್ಲದೆ ಅರೆಮಲೆನಾಡು ಭಾಗವಾಗಿದ್ದು, ಜನಜೀವನಕ್ಕೆ ಅತ್ಯಂತ ಉಪಯೋಗವಾದುದು.[೨೩] ಈ ತಾಲೂಕು ಉತ್ತರದಲ್ಲಿ ಹೊಳಲ್ಕೆರೆ, ಪೂರ್ವದಲ್ಲಿ ಹಿರಿಯೂರು, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ದಕ್ಷಿಣದಲ್ಲಿ ಸ್ವಲ್ಪ ಭಾಗ ಕಡೂರು ಹೆಚ್ಚು ಭಾಗ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ.[೨೪] ಹೊಸದುರ್ಗ (ಕಸಬಾ), ಮತ್ತೋಡು, ಶ್ರೀರಾಂಪುರ ಹಾಗೂ ಮಾಡದಕೆರೆ ಎಂಬ ನಾಲ್ಕು ಹೋಬಳಿಗಳು ಹಾಗೂ ೨೨೪ ಗ್ರಾಮಗಳು ಅದರಲ್ಲಿ ಸುಮಾರು ೧೮೬ ಚರಾಕ್ ಗ್ರಾಮಗಳು ಕಂಡುಬರುತ್ತವೆ.[೨೫]

ಭೌಗೋಳಿಕವಾಗಿ ೧,೨೩,೮೩೪.೬೦ ಹೆಕ್ಟೇರ್ ಭೂಮಿ ಈ ತಾಲೂಕಿನಲ್ಲಿದೆ.[೨೬] ಈ ತಾಲೂಕಿನ ನಾಲ್ಕು ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಮಣ್ಣಿನ ಫಲವತ್ತತೆ ವೈವಿಧ್ಯಮಯವಾಗಿದೆ. "ಕಸಬಾ ಹೋಬಳಿಯಲ್ಲಿ ಚೌಳುಭೂಮಿ, ಕಪ್ಪುಭೂಮಿ, ಮರಳುಮಿಶ್ರಿತ ಕೆಂಪು ಭೂಮಿಯನ್ನು ಕಾಣಬಹುದು. ಮತ್ತೋಡು ಹೋಬಳಿಯಲ್ಲಿ ಕೆಂಪು ಮತ್ತು ಮರಳುಮಿಶ್ರಿತ ಮಣ್ಣು, ಮರಬು ಮಣ್ಣು, ಕಬ್ಬಿಣದ ಅಂಶವನ್ನೊಳಗೊಂಡ ಫಲವತ್ತಾದ ಭೂಮಿ ಇದೆ. ಶ್ರೀರಾಂಪುರ ಹೋಬಳಿಯಲ್ಲಿ ಮರಳು ಮಿಶ್ರಿತ ಕೆಂಪು ಭೂಮಿಯಿದೆ. ಒಟ್ಟಾರೆ ತಾಲೂಕಿನಾದ್ಯಂತ ಮರಳು ಮಿಶ್ರಿತ ಕೆಂಪುಮಣ್ಣು, ಮರಬ ಮಣ್ಣು ಕಬ್ಬಿಣದ ಅಂಶವನ್ನೊಳಗೊಂಡ ಮಣ್ಣು, ಕರಲು(ಜಾಳು)ಮಣ್ಣು ಸ್ವಲ್ಪಭಾಗ ಮಾತ್ರ ಕಪ್ಪು ಮಣ್ಣಿದೆ."[೨೭]

ಇಲ್ಲಿ ಸರಾಸರಿ ೫೧೧.೯೮ ಮಿ.ಮೀ. ಮಳೆಯಾಗುತ್ತಿದ್ದು, ತಾಲೂಕಿನ ಪ್ರಮುಖ ನದಿ ವೇದಾವತಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿ ಪೂರ್ವಭಾಗದಲ್ಲಿ "ವೇದಾ ಮತ್ತು ಆವತಿ ಎಂಬ ಎರಡು ನದಿಗಳು ಸೇರಿ ವೇದಾವತಿಯಾಗಿದೆ. ವೇದಾ ಮುಳ್ಳಯ್ಯನಗಿರಿ ಸಮೀಪದ ಗೌರಿಹಳ್ಳದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಶಕುನಗಿರಿ ಹತ್ತಿರ ಅಯ್ಯನಕೆರೆ ಅಣೆಕಟ್ಟೆಯಲ್ಲಿ ಜಲಾವೃತಗೊಂಡು ನಂತರ ಮುಂದೆ ಕಡೂರು ಹತ್ತಿರ ಹರಿಯುತ್ತದೆ. ತಾಯಳ್ಳ ಎಂಬ ಹೊಳೆಯಿಂದ ಹರಿದು ಮದಗದ ಕೆರೆಯಲ್ಲಿ ಸೇರಿ ಆವತಿ ಎಂಬ ಹೆಸರಿನ ಮೂಲಕ

ಕಡೂರಿನ ಹತ್ತಿರದ ತಂಗಲಿ, ಮಲ್ಲೇಶ್ವರದ ಹತ್ತಿರವಿರುವ ರಾಮೇಗೊಂದಿ ಹತ್ತಿರ 'ವೇದಾವತಿ' ಎಂಬ ಹೆಸರು ಪಡೆದು ಮುಂದೆ ಚಿತ್ರದುರ್ಗ, ಅನಂತಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಹರಿದು ತುಂಗಾಭದ್ರ ನದಿಯನ್ನು ಸೇರುತ್ತದೆ.[೧೮] ಚಿತ್ರದುರ್ಗ ಜಿಲ್ಲೆಯಲ್ಲಿ ೬೦ ರಿಂದ ೭೦ ಕಿ.ಮೀ. ಹರಿಯುವ ವೇದಾವತಿ ನದಿಯು ಹಿರಿಯೂರು ಚಳ್ಳಕೆರೆ ಭಾಗದ ಜನರಿಗೆ ಜೀವಸೆಲೆಯಾಗಿದೆ. ಹಿರಿಯೂರು ತಾಲೂಕಿನ ಗಡಿಯಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದ್ದು ಇದನ್ನು ಮಾರಿಕಣಿವೆ ಜಲಾಶಯ ಎಂದು ಕರೆಯಲಾಗಿದೆ. ಸುಮಾರು ೫೦ ಕೆರೆಗಳು ಈ ತಾಲೂಕಿನಲ್ಲಿವೆ. ಅವುಗಳಲ್ಲಿ ೧೫ ದೊಡ್ಡ ಕೆರೆಗಳು ೩೫ ಸಣ್ಣಕೆರೆಗಳು. ಗುಡ್ಡದನೇರಲಕೆರೆ, ಬಾಗೂರು ಮೂಡಲ ಮುತ್ತಿನಕೆರೆ, ದೇವಪುರಕೆರೆ, ಹೆಗ್ಗೆರೆಯ ಗೌಡನಕೆರೆ, ಸೂಜಿಕಲ್ ಅಮಾನಿಕೆರೆ, ಕಗ್ಗಲಕಟ್ಟೆ ಹೊಸಕೆರೆ, ಬೆಲಗೂರು ಕೆರೆ, ಗಂಜಿಕೆರೆ ಸೇರಿದಂತೆ ಕೆಲವು ಪ್ರಮುಖ ಕೆರೆಗಳು ಕಂಡುಬರುತ್ತವೆ.[೧೯] ರಾಗಿ, ಜೋಳ, ನವಣೆ, ಸಾಸಿವೆ, ಸಜ್ಜೆ, ಹೆಸರು, ಅಲಸಂದಿ, ಉದ್ದು, ತೊಗರಿ, ಹುರುಳಿ, ಅವರೆ, ಶೇಂಗಾ, ಸೂರ್ಯಕಾಂತಿ, ಎಳ್ಳು, ಸಾಸಿವೆ, ಹತ್ತಿ, ಈರುಳ್ಳಿ ಮತ್ತು ಕಬ್ಬು ಮುಂತಾದವುಗಳನ್ನು ಬೆಳೆಯಲಾಗುತ್ತದೆ.[೨೦]

ಅರೆಮಲೆನಾಡು ಪರಿಸರವಾಗಿರುವ ಈ ತಾಲೂಕು ಪರಿಸರದಲ್ಲಿ ೪೬,೨೪೨ ಎಕರೆ ಅರಣ್ಯವಿದೆ. ದೇವರಗುಡ್ಡ ಅರಣ್ಯ (೫೪೭೨ ಎಕರೆ), ಜಾನಕಲ್ ಅರಣ್ಯ (೪೯೭೩ ಎಕರೆ), ಲಕ್ಕಿಹಳ್ಳಿ ಅರಣ್ಯ(೭೨೭೪ ಎಕರೆ), ಮಾರೀಕಣಿವೆ ಅರಣ್ಯ(೧೦,೩೩೩ ಎಕರೆ), ಕುದುರೆ ಕಣಿವೆ ಅರಣ್ಯ(೫೪೫೬ ಎಕರೆ)ವನ್ನು ಕಾಣಬಹುದು. ದೇವರಗುಡ್ಡ ಕಾಡಿನಲ್ಲಿ ಶ್ರೀಗಂಧ, ಜಾನಕಲ್ ಕಾಡಿನಲ್ಲಿ ಮತ್ತಿ, ಲಕ್ಕಿಹಳ್ಳಿ, ಮಾರೀಕಣಿವೆ ಅರಣ್ಯಗಳಲ್ಲಿ ಕಮರದ ಮರಗಳು ಹೇರಳವಾಗಿವೆ. ಉಳಿದಂತೆ ಕಾಡುಜಾತಿ ಮುಳ್ಳುಗಳಿದ್ದು ಬಂಜರು ಪ್ರದೇಶದಲ್ಲಿ ನೀಲಗಿರಿ ಮಾಮೂಲಾಗಿದೆ.[೨೧]

ಪ್ರಾಕೃತಿಕವಾಗಿ ಕಣಶಿಲೆಯ ಬೆಟ್ಟಗಳನ್ನು ಹೊಸದುರ್ಗ ತಾಲೂಕು ಹೊಂದಿದೆ. ಬೆಟ್ಟಶ್ರೇಣಿಗಳ ಹೆಚ್ಚಿನ ಭಾಗ ಹಿರಿಯೂರು ಹಾಗೂ ಚಿತ್ರದುರ್ಗ ತಾಲೂಕುಗಳಲ್ಲೂ ಕಂಡುಬರುತ್ತವೆ.[೨೨] ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ (೯೮೩ ಮೀ) ಆರಂಭವಾಗಿ ದಾವಣಗೆರೆ ತಾಲೂಕಿನ ಮಾಯಕೊಂಡದ ಮುಖಾಂತರ ಅಣಜಿವರೆಗೂ ಹಬ್ಬಿದೆ.[೨೩] ಇವುಗಳಲ್ಲಿ ಈ ತಾಲೂಕಿಗೆ ಸಂಬಂಧಿಸಿದಂತೆ ನೀರಗುಡ್ಡ ಮತ್ತು ಹಾಲುರಾಮೇಶ್ವರ ಗುಡ್ಡ (೧.೧೮೧ ಮೀ) ಜಿಲ್ಲೆಯ ಅತ್ಯಂತ ಎತ್ತರವಾದ ಬೆಟ್ಟ, ಮೇಲೆ ತಿಳಿಸಿದ ಈ ಎಲ್ಲಾ ಬೆಟ್ಟ ಶ್ರೇಣಿಗಳಲ್ಲಿ ಪ್ರಾಚೀನ ಕಾಲದಲ್ಲಿ ಅನೇಕ ಸ್ಮಾರಕಗಳು ನಿರ್ಮಾಣಗೊಂಡಿವೆ.

ಹೊಸದುರ್ಗ ತಾಲೂಕಿನ ಬೂದಿಹಾಳು, ಗಂಜಿಕೆರೆಗಳಲ್ಲಿ ಕಲ್ನಾರು ದೊರೆಯುತ್ತದೆ. ಬೂದಿಮರಡಿಯಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನವನ್ನು ತೆಗೆಯುತ್ತಿದ್ದ ಸೂಚನೆಗಳಿವೆ.[೨೪] ತಾಲೂಕಿನ ಹಲವೆಡೆ ಕಬ್ಬಿಣದ ಅದಿರಿನ ಕುರುಹುಗಳಿವೆ. ಮಾರಿಕಣಿವೆ, ಮಾಡದಕೆರೆ ಮತ್ತು ಕಂಚಿಪುರಗಳಲ್ಲಿ ಸ್ಫಟಿಕ ಜಾತಿಯ ಸುಣ್ಣಕಲ್ಲಿನ ಪದರುಗಳು ಕಂಡುಬರುತ್ತವೆ. ಮ್ಯಾಂಗನೀಸ್ ಮತ್ತು ಉತ್ತಮವಾದ ವಿವಿಧ ಬಣ್ಣದ ಸುದ್ದೆ ಮಣ್ಣುಗಳು ಈ ಭಾಗದಲ್ಲಿವೆ.[೨೫]

ಒಟ್ಟಾರೆ ಇಲ್ಲಿನ ಭೌಗೋಳಿಕ ಅಂಶಗಳ ಅಧ್ಯಯನದಿಂದ ಅನೇಕ ಬಹುಮುಖ್ಯ ವಿಚಾರಗಳು ಗೋಚರಿಸುತ್ತವೆ. ಮಾನವನ ಉಗಮ ಮತ್ತು ವಿಕಾಸದ ವಿಭಿನ್ನ ಅಂಶಗಳು ಇಲ್ಲಿನ ಭೌಗೋಳಿಕ

ಪರಿಸರಕ್ಕೆ ಅನುಗುಣವಾಗಿಯೇ ಕಂಡುಬರುತ್ತವೆ. ಮಾನವನ ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಈ ಲಕ್ಷಣಗಳ ಅಧ್ಯಯನ ಬಹುಮುಖ್ಯ.

೨.೨. ಚಾರಿತ್ರಿಕ ಹಿನ್ನೆಲೆ

ಹೊಸದುರ್ಗ ತಾಲೂಕು ಪರಿಸರದಲ್ಲಿ ಬಹುಮುಖ್ಯವಾಗಿ ಮತ್ತೋಡು, ಬೂದಿಹಾಳು ಹಾಗೂ ಚಿತ್ರದುರ್ಗ ನಾಯಕ ಅರಸರ ಚಾರಿತ್ರಿಕ ಪಳೆಯುಳಿಕೆಗಳು ಕಂಡುಬರುತ್ತವೆ. ಹೀಗಿದ್ದೂ ಇಲ್ಲಿನ ಪ್ರಾಚೀನತೆಯನ್ನು ಪ್ರಾಗೈತಿಹಾಸಿಕ ಕಾಲಘಟ್ಟದಿಂದಲೇ ಗುರುತಿಸಬಹುದು. ಹೊಸದುರ್ಗ ತಾಲೂಕು ಪರಿಸರವನ್ನು ಒಳಗೊಂಡು ಇಡಿ ಚಿತ್ರದುರ್ಗ ಜಿಲ್ಲೆಯು ಶಿಲಾಯುಗ ಕಾಲದಿಂದಲೂ ಮಾನವನಿಗೆ ವಾಸಸ್ಥಾನವಾಗಿತ್ತೆಂಬುದಕ್ಕೆ ಜಿಲ್ಲೆಯಾದ್ಯಂತ ಇದುವರೆಗೆ ಪತ್ತೆಯಾಗಿರುವ ನೂರಾರು ಪ್ರಾಗೈತಿಹಾಸಿಕ ನೆಲೆಗಳೇ ಸಾಕ್ಷಿ. ಜಿಲ್ಲೆಯಲ್ಲಿ ಆದಿ ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನಶಿಲಾಯುಗ ಹಾಗೂ ಬೃಹತ್‌ಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿವೆ.

ಹೊಸದುರ್ಗ ತಾಲೂಕಿನ ಪರಿಸರದ ಪ್ರಾಗೈತಿಹಾಸಿಕ ನೆಲೆಗಳನ್ನು ಗಮನಿಸಿದಾಗ ಆದಿ ಹಳೇಶಿಲಾಯುಗ ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಈ ಪರಿಸರದಲ್ಲಿ ಮೈದುಂಬಿ ಹರಿಯುವ ವೇದಾವತಿ ನದಿ ತೀರದಲ್ಲಿ ಆದಿ ಹಳೇಶಿಲಾಯುಗ ಸಂಸ್ಕೃತಿಯ ಕೆಲವು ನೆಲೆಗಳನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ ಹೊಸದುರ್ಗ ತಾಲೂಕಿನ ಜಾನಕಲ್ಲು ಹಾಗೂ ಸುತ್ತಲಿನ ಹೊಳಲ್ಕೆರೆ ತಾಲೂಕಿನ ತಾಳ್ಯಗಳನ್ನು ಗಮನಿಸಬಹುದು. ೧೮೬೩ರಲ್ಲಿ 'ಭಾರತದ ಪ್ರಾಗೈತಿಹಾಸದ ಪಿತಾಮಹ'ರೆನಿಸಿದ ರಾಬರ್ಟ್ ಬ್ರೂಸ್‌ಫೂಟ್ ಅವರು ಹೊಳಲ್ಕೆರೆ ತಾಲೂಕಿನ ತಾಳ್ಯದಲ್ಲಿ ಆದಿ ಹಳೇಶಿಲಾಯುಗದ ೩ ಆಯುಧಗಳನ್ನು ಪತ್ತೆಹಚ್ಚಿದರು.[೩೬] ಅದೇ ರೀತಿ ೧೯೫೬ರಲ್ಲಿ ಎಂ. ಶೇಷಾದ್ರಿ ಅವರು ಜಾನಕಲ್ಲಿನಲ್ಲಿ ಆದಿ ಹಳೇಶಿಲಾಯುಗದ ೨ ಆಯುಧಗಳನ್ನು ಪತ್ತೆಹಚ್ಚಿದರು. ಈ ಎರಡು ಪ್ರದೇಶಗಳಲ್ಲಿ ದೊರೆತ ಆದಿ ಹಳೇಶಿಲಾಯುಧಗಳನ್ನು ಕ್ವಾರ್ಟ್‌ಸೈಟ್ ಶಿಲೆಯಲ್ಲಿ ರೂಪಿಸಲಾಗಿದೆ.[೩೭] ಇವುಗಳಲ್ಲಿ ಎರಡು ಕೈಗೊಡಲಿಗಳು, ಒಂದು ಮಚ್ಚುಗತ್ತಿ ಹಾಗೂ ಒಂದು ಅಂಡಾಕಾರದ ಉಪಕರಣ.[೩೮] ಆದಿ ಹಳೇಶಿಲಾಯುಗಕ್ಕೆ ಸಂಬಂಧಿಸಿದಂತೆ ಹೊಸದುರ್ಗ ತಾಲೂಕು ಪರಿಸರದ ಈ ಎರಡು ಪ್ರದೇಶಗಳು ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿವೆ.

ನೂತನ ಶಿಲಾಯುಗ ಸಂಸ್ಕೃತಿಯನ್ನು ಕುರಿತು ಹೇಳುವುದಾದರೆ ಹೊಸದುರ್ಗ ತಾಲೂಕಿನ ಸುತ್ತಲಿನ ಪ್ರದೇಶಗಳಲ್ಲಿ ಕೆಲವು ನೆಲೆಗಳನ್ನು ಹೆಸರಿಸಬಹುದು. ವೇದಾವತಿ ನದಿ ತೀರದಲ್ಲಿರುವ ಹಿರಿಯೂರು ತಾಲೂಕಿನ ರಂಗನಾಥಪುರ, ಹರ್ತಿಕೋಟೆ, ಬಸಪ್ಪನ ಮಾಳಿಗೆ, ಕಂದಿಕೆರೆ, ಹಳೇಯಳನಾಡು ನೆಲೆಗಳು[೩೯], ಚಿತ್ರದುರ್ಗ ತಾಲೂಕಿನ ಚಂದ್ರವಳ್ಳಿ, ಬಾರ್ಲಗೊಂದಿ, ತಮಟಕಲ್ಲು, ಸಂಗೇನಹಳ್ಳಿ ನೆಲೆಗಳು[೪೦] ಸೇರಿದಂತೆ ಮೊದಲಾದ ಎಡೆಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅನೇಕ ಅವಶೇಷಗಳು ಕಂಡುಬಂದಿವೆ. ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಯ ಕುರುಹುಗಳು ಕಂಡುಬಂದಿವೆ. ಅದರಲ್ಲಿ ಹೊಸದುರ್ಗ ತಾಲೂಕಿನ ಸುತ್ತಲಿನ ಪರಿಸರವನ್ನು ಗಮನಿಸಿದಾಗ, ಚಿತ್ರದುರ್ಗ ತಾಲೂಕಿನ ನೇರಲಗೊಂದಿ, ಬಾರಲಗೊಂದಿ,

ಇಂಗಳದಾಳು, ಕೂನಬೇವು, ಚಂದ್ರವಳ್ಳಿ, ಚಿತ್ರದುರ್ಗ, ಚಿಕ್ಕನಕೆರೆ, ತಮಟಕಲ್ಲು, ಜಂಪಣ್ಣನಾಯಕನ ಕೋಟೆ ಹಾಗೂ ಹೊಳಲ್ಕೆರೆ ತಾಲೂಕಿನ ಗಂಜಿಗುಂಟೆ, ತಾಳ್ಯ, ನಂದನಹೊಸೂರು ಒಳಗೊಂಡಂತೆ ಹಲವು ಭಾಗಗಳಲ್ಲಿ ಬೃಹತ್ ಶಿಲಾಗೋರಿಗಳು ಪತ್ತೆಯಾಗಿವೆ.[೮]

ಪ್ರಾಗೈತಿಹಾಸಿಕ ಕಾಲದ ಮಾನವನ ಭಿನ್ನ ಜೀವನ ಹಾಗೂ ಕಲಾಭಿರುಚಿಯನ್ನು ತಿಳಿಯುವ ಮುಖ್ಯ ಆಧಾರಗಳಲ್ಲಿ ಅಂದಿನ ಚಿತ್ರಕಲೆಯು ಒಂದು. ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಗಳು ಬೆಳಕಿಗೆ ಬಂದಿವೆ. ಲಕ್ಷ್ಮಣ್‌ತೆಲಗಾವಿ, ಎಚ್. ಶ್ರೀಶೈಲ ಆರಾಧ್ಯ ಸೇರಿದಂತೆ ಅನೇಕ ವಿದ್ವಾಂಸರು ಜಿಲ್ಲೆಯ ಹಲವೆಡೆ ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ಕುರಿತು ಕೆಲಸ ಮಾಡಿದ್ದಾರೆ.[೨] ಹೊಸದುರ್ಗ ತಾಲೂಕಿನ ಜಾನಕಲ್ಲು ಹಾಗೂ ತಣಿಗೆಕಲ್ಲುಗಳಲ್ಲಿ ಬಯಲು ಬಂಡೆ ರೇಖಾಕೃತಿಗಳು ಬೆಳಕಿಗೆ ಬಂದಿವೆ. ಜಾನಕಲ್ಲು ಪರಿಸರದಲ್ಲಿ ಕುಳಿಗಳು, ಕುಳಿವಿನ್ಯಾಸಗಳು ಸಾಕಷ್ಟು ಪ್ರಮಾಣದಲ್ಲಿವೆ. ಹೀಗೆ ಹೊಸದುರ್ಗ ತಾಲೂಕು ಪರಿಸರದಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಪ್ರಾಚ್ಯಾವಶೇಷಗಳು ದೊರೆತಿದ್ದು ಅವುಗಳಿಂದ ಇಲ್ಲಿನ ಪ್ರಾಚೀನತೆಯನ್ನು ಅರಿಯಬಹುದು. (ಪ್ರಸ್ತುತ ಹೊಸದುರ್ಗ ತಾಲೂಕು ಪರಿಸರದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಸುಮಾರು ೩೬ ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆಹಚ್ಚಲಾಗಿದ್ದು, ಅವುಗಳನ್ನು ಕುರಿತು 'ಪ್ರಾಗೈತಿಹಾಸಿಕ ನೆಲೆಗಳು' ಎಂಬ ಅಧ್ಯಾಯದಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ.)

೨.೨.೧. ಮೌರ್ಯರು

ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದು ಸದ್ಯ ನಮಗೆ ತಿಳಿದಂತೆ, ಕ್ರಿಪೂ. ೪-೩ನೇ ಶತಮಾನಗಳಿಂದ.[೩] ಕರ್ನಾಟಕದ ಬಹುಭಾಗವು ಮೌರ್ಯ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದಿತು. ಕರ್ನಾಟಕದಲ್ಲಿ ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ, ಸಿದ್ಧಾಪುರ, ಜಟಂಗಿ ರಾಮೇಶ್ವರಗಳಲ್ಲಿಯ ಅಶೋಕನ ಶಾಸನಗಳು ಮೌರ್ಯ ಸಾಮ್ರಾಜ್ಯದ ಆಳ್ವಿಕೆಯನ್ನು ಕುರಿತು ಹೇಳುತ್ತವೆ. ಹೀಗಾಗಿ ಜಿಲ್ಲೆಯ ಉತ್ತರಭಾಗ ನೇರವಾಗಿ ಮೌರ್ಯರ ಆಳ್ವಿಕೆ ಒಳಪಟ್ಟಿತ್ತೆಂದು ವೇದ್ಯವಾಗುತ್ತದೆ. ಚಿತ್ರದುರ್ಗದ ಚಂದ್ರವಳ್ಳಿಯು ಮೌರ್ಯರ ಕಾಲದ ಒಂದು ಸಣ್ಣ ಊರಾಗಿತ್ತೆಂದು ತಿಳಿದುಬರುವುದು.[೪] ಇತ್ತೀಚೆಗೆ ನಡೆದ ಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಜಿಲ್ಲೆಯ ಪೂರ್ಣಭಾಗವನ್ನು ಒಳಗೊಂಡಿತ್ತು ಎಂದು ತಿಳಿಯಲು ಅನೇಕ ಸಾಕ್ಷ್ಯಾಧಾರಗಳು ದೊರೆತಿವೆ. ಮೌರ್ಯರ ಮನೆಗಳು ಎಂದು ಕರೆಯಲ್ಪಡುವ ಬೃಹತ್ ಶಿಲಾಸಮಾಧಿಗಳು ಜಿಲ್ಲೆಯ ಅನೇಕ ಕಡೆ ದೊರೆತಿರುವುದನ್ನು ಕಾಣಬಹುದು. ಈ ಬೃಹತ್ ಶಿಲಾಸಮಾಧಿಗಳು ಮೌರ್ಯರೊಂದಿಗೆ ಇರುವ ಸಂಬಂಧವನ್ನು ಸೂಚಿಸುತ್ತವೆಂದು ಮಾರ್ಟಿಮರ್ ವ್ಹೀಲರ್ ಅಭಿಪ್ರಾಯಪಟ್ಟಿದ್ದಾರೆ. ಬೃಹತ್ ಶಿಲಾಸಂಸ್ಕೃತಿಯ ಜನರು ಕಬ್ಬಿಣ ಬಳಸುತ್ತಿದ್ದು, ಬೆಟ್ಟಗಳ ಇಳಿಜಾರುಗಳಲ್ಲಿ ವಾಸಿಸುತ್ತಿದ್ದರು. ಇವರು ಕಬ್ಬಿಣದ ಅದಿರನ್ನು ಕರಗಿಸುವುದು ಮತ್ತು ಕಮ್ಮಾರಿಕೆಯಲ್ಲಿ ತೀರಾ ಪರಿಣಿತರಾಗಿದ್ದರು. ಈ ಕಾರಣಕ್ಕಾಗಿಯೇ ಅಶೋಕ ತನ್ನ ಗಮನವನ್ನು ಇತ್ತ ಹರಿಸಿದನೆಂದು ಹೇಳಲಾಗಿದೆ.[೫] ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ಪತ್ತೆಯಾಗಿರುವ ಬೃಹತ್ ಶಿಲಾಸಮಾಧಿಗಳ ಪರಿಸರದಲ್ಲಿ ಪ್ರಾಚೀನ ಕಾಲದ

ಕಬ್ಬಿಣ ತಯಾರಿಕಾ ನೆಲೆಗಳು, ಮಣ್ಣಿನ ಮೂಸೆಗಳು, ಕಿಟ್ಟದ ರಾಶಿ ಅಪಾರ ಪ್ರಮಾಣದಲ್ಲಿ ದೊರೆತಿರುವುದು ಗಮನಾರ್ಹ.

ಹೊಸದುರ್ಗ ತಾಲೂಕಿನಲ್ಲಿ ೨೮ ಬೃಹತ್ ಶಿಲಾಸಮಾಧಿ ನೆಲೆಗಳು ಪತ್ತೆಯಾಗಿದ್ದು, ಅವುಗಳಲ್ಲಿ ಕಿಟ್ಟದಾಳು, ದೊಡ್ಡ ಕಿಟ್ಟದಹಳ್ಳಿ, ಸಣ್ಣ ಕಿಟ್ಟದಹಳ್ಳಿ, ದೊಡ್ಡ ಬ್ಯಾಲದಕೆರೆ, ಚಿಕ್ಕ ಬ್ಯಾಲದ ಕೆರೆ, ಜಾನಕಲ್ಲು ಹಾಗೂ ದುಗ್ಗಾವರ ಮುಂತಾದೆಡೆಗಳಲ್ಲಿ ಅತ್ಯಂತ ಪ್ರಾಚೀನ ಕಬ್ಬಿಣ ತಯಾರಿಕಾ ಕುಹುರುಗಳು ದೊರೆತಿವೆ. ಚಿತ್ರದುರ್ಗ ಜಿಲ್ಲಾ ಪ್ರದೇಶದ ಕಬ್ಬಿಣಯುಗದ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಕಾಲಮಾನವನ್ನು ಕ್ರಿಪೂ. ೨೦೦ ರಿಂದ ಕ್ರಿಶ. ೧ನೇ ಶತಮಾನದವರೆಗೆ ಇರಬಹುದೆಂದು ಅಂದಾಜಿಸಲಾಗಿದ್ದು,[೪೬] ಈ ಕಾಲಮಾನದಲ್ಲೇ ಮೌರ್ಯಕಾಲೀನ ಸಂಸ್ಕೃತಿಯನ್ನು ಗುರುತಿಸಲಾಗಿದೆ. ಒಟ್ಟಾರೆ ಹೊಸದುರ್ಗ ತಾಲೂಕನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆಯು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

೨.೨.೨. ಶಾತವಾಹನರು

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೌರ್ಯರ ತರುವಾಯ ಶಾತವಾಹನರ ಆಳ್ವಿಕೆ ಕಂಡುಬರುವುದು. ಇದಕ್ಕೆ ಕರ್ನಾಟಕದ ಬಹುತೇಕ ಶಾಸನಗಳು ಸಾಕ್ಷಿಯಾಗಿವೆ.[೪೭] ಶಾತವಾಹನ ಅರಸರು ತಮ್ಮನ್ನು ಶಾಸನಗಳಲ್ಲಿ 'ಶಾತವಾಹನ ಕುಲ' ಹಾಗೂ 'ಶಾತವಾಹನ' ಎಂದು ಕರೆದುಕೊಂಡಿದ್ದಾರೆ.[೪೮] ಕರ್ನಾಟಕದಲ್ಲಿ ದೊರೆತ ೬೦ಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಶಾತವಾಹನರ ಆಳ್ವಿಕೆಯನ್ನು ಕುರಿತು ಪ್ರಸ್ತಾಪಿಸುತ್ತವೆ.[೪೯] ಚಿತ್ರದುರ್ಗ ಜಿಲ್ಲೆಯಲ್ಲಿ ಶಾತವಾಹನರ ಶಾಸನಗಳು ದೊರೆತಿಲ್ಲವಾದರೂ ಪುರಾತತ್ವ ವಸ್ತುವಿಶೇಷತೆಗಳು ಶಾತವಾಹನರ ಸಾಂಸ್ಕೃತಿಕ ಚರಿತ್ರೆಯನ್ನು ಕುರಿತು ಹೇಳುವಲ್ಲಿ ಸಹಾಯಕವಾಗಿವೆ. ಉತ್ಖನನ ನೆಲೆಗಳಲ್ಲಿ ಸಿಕ್ಕಿರುವ ಮಡಿಕೆ ಚೂರುಗಳು, ಕ್ಯಾವಲಿನ್ ಪೈಂಟೆಡ್ ರಸ್ಸೆಡ್ ಕೋಟೆಡ್ ಮಡಿಕೆಗಳು, ನಾಣ್ಯಗಳು, ಆಯುಧಗಳು, ಆಭರಣಗಳು, ಕಲಾಕೌಶಲ್ಯವುಳ್ಳ ವಸ್ತುಗಳು ಮತ್ತು ಇತರ ಅವಶೇಷಗಳು ಶಾತವಾಹನ ಕಾಲೀನ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುತ್ತವೆ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಬ್ರಹ್ಮಗಿರಿ, ಚಿಟ್ಟಿನಕೆರೆ, ನೆಲೆಗಳು[೫೦] ವೇದಾವತಿ ತೀರದ ಪ್ರದೇಶಗಳಾದ ತಣಿಗೆಕಲ್ಲು,[೫೧] ತೊರೆಓಬೇನಹಳ್ಳಿ[೫೨] ಮುಂತಾದ ಎಡೆಗಳಲ್ಲಿ ಶಾತವಾಹನ ಕಾಲೀನ ಅನೇಕ ವಸ್ತು ವಿಶೇಷತೆಗಳು ಕಂಡುಬಂದಿವೆ. ಕೆಲವು ಶತಕಗಳ ಹಿಂದೆ ಚಂದ್ರವಳ್ಳಿ ಕಣಿವೆಯಿಂದ ಹರಿಯುವ ಮಳೆನೀರನ್ನು ಒಂದು ಕೆರೆಗೆ ಕೊಂಡೊಯ್ಯಲು ಕಾಲುವೆ ತೋಡುತ್ತಿದ್ದಾಗ ಅನೇಕ ಸೀಸದ ನಾಣ್ಯಗಳು ದೊರೆತವು. ಇ.ಜೆ. ರ್‍ಯಾಪ್ಸೆನ್ ಎಂಬ ಪ್ರಸಿದ್ಧ ನಾಣ್ಯಶಾಸ್ತ್ರಜ್ಞ ಅವುಗಳನ್ನು ಪರೀಕ್ಷಿಸಿ ೧೮೦೦ ವರ್ಷಗಳ ಹಿಂದೆ ಚಂದ್ರವಳ್ಳಿ ಪ್ರದೇಶವನ್ನು ಆಳುತ್ತಿದ್ದ ಶಾತವಾಹನ ಮಾಂಡಳಿಕ ಅರಸರ ನಾಣ್ಯಗಳೆಂದು ತೋರಿಸಿಕೊಟ್ಟ.[೫೩] ಆನಂತರ ೧೯೨೮ರಲ್ಲಿ ಎಂ.ಎಚ್. ಕೃಷ್ಣ ಅವರು ನಡೆಸಿದ ಉತ್ಖನನದಿಂದ ೧೫ನೇ ಸಂಖ್ಯೆಯ ಗುಂಡಿಯಲ್ಲಿ ಒಂದು ಮನೆಯ ನೆಲಗಟ್ಟು, ಶಾತವಾಹನ ದೊರೆ ಯಜ್ಞಶ್ರೀ ಶಾತಕರ್ಣಿಯ ಹೆಸರುಳ್ಳ ನಾಣ್ಯ ಸಿಕ್ಕಿತು.[೫೪] ಅಲ್ಲದೆ ಮುದಾನಂದ, ಗೌತಮಿಪುತ್ರ, ವಿಳನಾಯಕ ಕುರ, ಮಹಾರತಿ ಚುಟುಕುಲಾನಂದ ಸದಕಣ ಕುಲಲಾಯ ಮತ್ತು ರೋಮನ್ ಚಕ್ರವರ್ತಿಗಳಾದ ಅಗಸ್ಟಸ್, ಟೈಬಿರಿಯಸ್ ನಾಣ್ಯಗಳು ರೌಲೆಟೆಡ್ ಹಾಗೂ ಬಿಳಿಬಣ್ಣದ ಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳು ದೊರೆತಿವೆ.[೫೫] ಚಂದ್ರವಳ್ಳಿಯಲ್ಲಿ

ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ಬಹು ಪ್ರಮಾಣದಲ್ಲಿ ದೊರೆತಿರುವುದನ್ನು ಗಮನಿಸಿದರೆ ಇದು ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಊಹಿಸಬಹುದು.[೩೪] ವೇದಾವತಿ ನದಿ ತೀರದಲ್ಲಿರುವ ಹೊಸದುರ್ಗ ತಾಲೂಕು ಪ್ರದೇಶವು ಮೌರ್ಯರ ಪತನದ ಬಳಿಕ ಶಾತವಾಹನರ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿತ್ತು. ಇಲ್ಲಿನ ತಣಿಗೆಕಲ್ಲು ಗ್ರಾಮದಲ್ಲಿ ಶಾತವಾಹನ ಕಾಲೀನ ನಯವಾದ ಹೊಳೆಯುವ ಮಡಿಕೆ ಚೂರುಗಳು ದೊರೆತಿವೆ.[೩೫] ಇದೇ ನದಿ ತೀರದಲ್ಲಿರುವ ತೊರೆ ಓಬೇನಹಳ್ಳಿ(ಹಿರಿಯೂರು ತಾಲೂಕು)ಯ ಪರಿಸರದಲ್ಲಿ ಶಾತವಾಹನ ಕಾಲದ ಇಟ್ಟಿಗೆ ಅವಶೇಷಗಳು, ವಾಶಿಷ್ಟಪುತ್ರ ಪುಳುಮಾವಿಯ ಸೀಸದ ನಾಣ್ಯಗಳು ದೊರೆತಿದ್ದು ಇದು ಶಾತವಾಹನ ಕಾಲೀನ ಸಾಂಸ್ಕೃತಿಕ ನೆಲೆ ಎಂದು ಅರಿಯಬಹುದು.[೩೬] ಈ ಮೇಲಿನ ಪ್ರಾಚ್ಯಾವಶೇಷಗಳ ಆಧಾರದ ಮೇಲೆ ಹೊಸದುರ್ಗ ತಾಲೂಕು ಪರಿಸರವು ಶಾತವಾಹನ ಕಾಲೀನ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿತ್ತು ಎಂಬುದು ವೇದ್ಯವಾಗುತ್ತದೆ.

೨.೨.೩. ಕದಂಬರು

ಕದಂಬರು ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಧಾರವಾಡ, ಬೆಳಗಾವಿ, ದಾವಣಗೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗ ಭಾಗಗಳಲ್ಲಿ ಕ್ರಿ.ಶ. ೩ನೇ ಶತಮಾನದ ಅಂತ್ಯದಿಂದ ೭ನೇ ಶತಮಾನದ ಮಧ್ಯಭಾಗದವರೆಗೆ ಸುಮಾರು ೩೭೫ ವರ್ಷಗಳ ಕಾಲ ಆಳಿದರು.[೩೭] ಶಾತವಾಹನರ ಆಳ್ವಿಕೆ ಕ್ರಿ.ಶ. ೩ನೇ ಶತಮಾನದ ಹೊತ್ತಿಗೆ ಮುಕ್ತಾಯಗೊಂಡು ಅವರ ಸಾಮ್ರಾಜ್ಯ ಹರಿದು ಹಂಚಿ ಹೋಗುತ್ತಿದ್ದ ಹಾಗೆಯೇ, ದಕ್ಷಿಣ ಮತ್ತು ಪಶ್ಚಿಮ ಭಾಗಗಳ ಒಡೆತನವು ಆಗತಾನೆ ತಲೆ ಎತ್ತಿದ ಕದಂಬರ ವಶವಾಯಿತು. ಇವರ ಆಳ್ವಿಕೆಯನ್ನು ಗುರುತಿಸಲು ಕೆಲವು ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿವೆ. ಕದಂಬರ ಆಳ್ವಿಕೆ ಜಿಲ್ಲೆಯಲ್ಲಿ ಪ್ರಾರಂಭವಾಗಿರುವುದು ಮಯೂರವರ್ಮನಿಂದ. ಇವನ ಶಾಸನವನ್ನು ಪ್ರಪ್ರಥಮ ಬಾರಿಗೆ ಎಂ.ಎಚ್. ಕೃಷ್ಣ ಅವರು ಚಂದ್ರವಳ್ಳಿಯಲ್ಲಿ ಶೋಧಿಸಿ ಪ್ರಕಟಿಸಿದರು. ನಂತರ ಚಿತ್ರದುರ್ಗದ ಬಿ. ರಾಜಶೇಖರಪ್ಪ ಅವರು ಈ ಶಾಸನವನ್ನು ಪುನರ್ ಅಧ್ಯಯನ ಮಾಡಿ ಕೆಲವು ಗಮನಾರ್ಹ ಅಂಶಗಳನ್ನು ಬೆಳಕಿಗೆ ತಂದರು. ಅವರ ಪ್ರಕಾರ ಮಯೂರವರ್ಮನು ಇಲ್ಲಿದ್ದ ಕೆರೆಯನ್ನು ದೃಢಕೃತ ಮಾಡಿ ಕಾಡಿನ ವಾಸದ ನೆಲೆಯನ್ನು ಸ್ಥಾಪಿಸಿಕೊಂಡಿದ್ದನು.[೪೦] ಅಲ್ಲದೆ ಮಯೂರವರ್ಮನು ಕಂಚಿಯಲ್ಲಿ ಪಲ್ಲವರಿಂದ ಅವಮಾನಗೊಂಡ ತರುವಾಯ ಬ್ರಾಹ್ಮಣತ್ವ ತ್ಯಜಿಸಿ ಕ್ಷತ್ರಿಯತ್ವ ಸ್ವೀಕರಿಸಿ, ತನ್ನದೆ ರಾಜ್ಯ ಕಟ್ಟುವ ಪೂರ್ವದಲ್ಲಿ ದುರ್ಗಮವಾದ ಪರ್ವತಾರಣ್ಯದಲ್ಲಿ ವಾಸವಾಗಿದ್ದ ಎಂದು ತಾಳಗುಂದ ಶಾಸನ ಹೇಳುತ್ತಿದ್ದು, ಅದು ಚಿತ್ರದುರ್ಗದ ಚಂದ್ರವಳ್ಳಿ ಬಳಿಯ ಧವಳಪ್ಪನ ಗುಡ್ಡದ ಸುತ್ತಲಿನ ಪ್ರದೇಶವೆಂದು ಅಭಿಪ್ರಾಯ ಪಡಲಾಗಿದೆ.[೪೧]

ಕದಂಬರ ಆಳ್ವಿಕೆಯಲ್ಲಿ ರವಿವರ್ಮ ಮಹಾರಾಜ ಬರೆಯಿಸಿದ ಕಾಶೀಪುರದ ಶಾಸನದಲ್ಲಿ ದಾನಕೊಟ್ಟ ದುರ್ಮಾಯ ಹಳ್ಳಿಯಲ್ಲಿ ಆಸಂದಿ ವಿಷಯ ಕರಂಜ ಎಂಬ ಗ್ರಾಮದಲ್ಲಿ ಆಳವೂರಿನಲ್ಲಿ ಮತ್ತು ಆನೆಗಲ್ಲಿಯಲ್ಲಿ ಇದ್ದವು. ಈ ದುರ್ಮಾಯ ಎಂಬ ಗ್ರಾಮ ಬಹುಶಃ ಹೊಳಲ್ಕೆರೆ ತಾಲೂಕಿನ ದುಮ್ಮಿ ಆಗಿರಬೇಕು.[೪೨] ಆಸಂದಿ ವಿಷಯ ಚಿತ್ರದುರ್ಗ ಜಿಲ್ಲೆಯ

ದಕ್ಷಿಣ ಭಾಗಗಳನ್ನು ಕಡೂರು ತಾಲೂಕಿನ ಭಾಗಗಳನ್ನು ಒಳಗೊಂಡಿತ್ತು.[೬೩] ಅಂದರೆ ಇಂದಿನ ಹೊಸದುರ್ಗ ತಾಲೂಕು ಹಾಗೂ ಸುತ್ತಲಿನ ಅನೇಕ ಪ್ರದೇಶಗಳು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ಇದರಿಂದ ವೇದ್ಯವಾಗುತ್ತದೆ. ಕದಂಬರ ಆಳ್ವಿಕೆಯ ಭಾಗವಾದ 'ಕದಂಬಳಿಗೆ ಸಾಸಿರ' ಚಿತ್ರದುರ್ಗ ಜಿಲ್ಲೆಯ ಬಹುಭಾಗವನ್ನು ವ್ಯಾಪಿಸಿತ್ತು.[೬೪] ಈ ಭಾಗದಲ್ಲಿ ಹೊಸದುರ್ಗ ಪ್ರಾಂತ್ಯವನ್ನು ಸಹ ಗುರುತಿಸಬಹುದು.

೨.೨.೪. ಚಾಲುಕ್ಯರು

ಹೊಸದುರ್ಗ ತಾಲೂಕು ಪರಿಸರದಲ್ಲಿ ಚಾಲುಕ್ಯರ ಆಳ್ವಿಕೆಯ ಕೆಲವು ಕುರುಹುಗಳು ಗೋಚರಿಸುತ್ತವೆ. ಚಾಲುಕ್ಯರಲ್ಲಿ ಮೂರು ಶಾಖೆಗಳಿದ್ದವು. ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು ಮತ್ತು ವೆಂಗಿ ಚಾಲುಕ್ಯರು.[೬೫] ಚಾಲುಕ್ಯ ಮತ್ತು ಪಲ್ಲವರಲ್ಲಿ ನಿರಂತರ ನಡೆಯುತ್ತಿದ್ದ ಕಾದಾಟದಿಂದ ಎರಡು ರಾಜ್ಯಗಳ ಗಡಿಭಾಗಗಳಲ್ಲಿನ ಚಿತ್ರದುರ್ಗ ಜಿಲ್ಲೆಯಲ್ಲಿ ಅಶಾಂತಿ ಏರ್ಪಟ್ಟಿದ್ದಿತು. ಜಿಲ್ಲೆಯಲ್ಲಿ ದೊರೆತಿರುವ ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ಅನೇಕ ಶಾಸನಗಳಿಂದ ಈ ಭೂಭಾಗವು ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದಿತೆಂದು ತಿಳಿಯುವುದು. ಚಾಲುಕ್ಯರ ಆಳ್ವಿಕೆಯಲ್ಲಿ 'ನೊಳಂಬವಾಡಿ-೩೨೦೦೦' ಪ್ರಾಂತ್ಯದ ಹೆಸರಿನಿಂದ ಕರೆಸಿಕೊಳ್ಳುತ್ತಿದ್ದ ಚಿತ್ರದುರ್ಗ ಜಿಲ್ಲೆ ಕಾದಾಟಕ್ಕೆ ಕಾರಣದ ಪ್ರದೇಶವಾಗಿತ್ತು. ಬಾದಾಮಿ ಚಾಲುಕ್ಯರಿಗೆ ಪಲ್ಲವರು, ಕಲ್ಯಾಣ ಚಾಲುಕ್ಯರಿಗೆ ಚೋಳರು ವೈರಿಗಳಾಗಿದ್ದರು. ಚೋಳ ಮತ್ತು ಚಾಲುಕ್ಯ ರಾಜ್ಯಗಳ ನಡುವೆ ಅನೇಕ ಬಾರಿ ಯುದ್ಧಗಳು ನಡೆಯುತ್ತಿದ್ದವು.[೬೬] ಇದೇ ಕಾಲದಲ್ಲಿ ಚಾಲುಕ್ಯರ ಸಾಮಂತರಾಗಿ ಈ ಪ್ರಾಂತ್ಯವನ್ನು ಆಳಿಕೊಂಡು ಹೋಗುತ್ತಿದ್ದ ಮುಖ್ಯ ಮನೆತನಗಳೆಂದರೆ ಹೆಂಜೇರಿನ ನೊಳಂಬರು (ಕ್ರಿ.ಶ. ೭೦೦-೧೦೫೦) ಮತ್ತು ಉಚ್ಚಂಗಿಯ ಪಾಂಡ್ಯರು (ಕ್ರಿ.ಶ. ೧೦೭೩-೧೧೮೩) ಜಿಲ್ಲೆಯ ಕೆಲವು ಭಾಗಗಳನ್ನು ಕದಂಬಳಿಗೆ ಮತ್ತು ನೊಳಂಬಳಿಗೆ ಎಂದು ಶಾಸನಗಳಲ್ಲಿ ಕರೆಯಲಾಗಿದೆ. 'ನೊಳಂಬವಾಡಿ-೩೨೦೦೦' ಪ್ರಾಂತ್ಯ ಹೊಸದುರ್ಗವನ್ನು ಒಳಗೊಂಡಿತ್ತು. ಚಳ್ಳಕೆರೆ ತಾಲೂಕಿನ ೩ನೇ ಜಯಸಿಂಹನ ಎರಡು ಶಾಸನಗಳಿಂದ ಇವನು ಶಿರಾ, ನೊಳಂಬವಾಡಿ ಹಾಗೂ ಕದಂಬಳಿಗೆ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ತಿಳಿದುಬರುವುದು.[೬೭] ದಾವಣಗೆರೆ ಬಳಿ ಹದಡಿಯಲ್ಲಿನ ೧೦೪೨ರ ಶಾಸನ ತ್ರೈಲೋಕ್ಯಮಲ್ಲನು ಕದಂಬಳಿಗೆಯನ್ನು ಆಳುತ್ತಿದ್ದನೆಂಬುದಾಗಿ ಹೇಳುತ್ತದೆ.[೬೮] ಸೋಮೇಶ್ವರನ ಮಕ್ಕಳಲ್ಲಿ ಒಬ್ಬನಾದ ವಿಷ್ಣುವರ್ಧನನು ಕ್ರಿ.ಶ. ೧೦೬೪ ರಿಂದ ಕ್ರಿ.ಶ. ೧೦೬೬ರ ವರೆಗೆ ನೊಳಂಬವಾಡಿ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಅನೇಕ ಶಾಸನಗಳಿಂದ ತಿಳಿಯುವುದು.[೬೯] ವಾಸ್ತುಶಿಲ್ಪವು ಇಲ್ಲಿನ ಸಾಂಸ್ಕೃತಿಕ ಚರಿತ್ರೆಯ ಮೇಲೆ ವಿಶೇಷವಾದ ಪ್ರಭಾವ ಬೀರಿದ ಚಾಲುಕ್ಯ ವಾಸ್ತುವಿನಲ್ಲಿ ಅನೇಕ ದೇವಾಲಯಗಳು ಇಲ್ಲಿ ನಿರ್ಮಾಣಗೊಂಡಿರುವುದು ತಿಳಿದು ಬರುವುದು. ಕದಂಬಳಿಗೆ ಹಾಗೂ ನೊಳಂಬಳಿಗೆ ಪ್ರಾಂತ್ಯಗಳಲ್ಲಿ ಚಾಲುಕ್ಯರ ಸಾಮಂತರಾಗಿ ಆಳುವ ಅನೇಕ ಸಾಮಂತ ಮನೆತನಗಳು ಚಾಲುಕ್ಯ ವಾಸ್ತುಶೈಲಿಯನ್ನು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಕಲ್ಲೇದೇವರ ಕಟ್ಟೆಯ ಕಲ್ಲೇಶ್ವರ, ಜಾನಕಲ್ಲಿನ ಶಂಕರಲಿಂಗೇಶ್ವರ, ಸೂಜಿಗಲ್ಲಿನ ಸೋಮೇಶ್ವರ, ಬೆಲಗೂರಿನ ಪ್ರಸನ್ನ ರಾಮೇಶ್ವರ ದೇವಾಲಯಗಳು ಮುಖ್ಯವಾಗಿವೆ. ಇವುಗಳನ್ನು ಸ್ಥಳೀಯವಾಗಿ ಲಭ್ಯವಿರುವ ಹಸಿರು, ಕಪ್ಪು, ಬಿಳಿಕಣ ಶಿಲೆಗಳಲ್ಲಿ

ನಿರ್ಮಿಸಿದ್ದಾರೆ. ಚಾಲುಕ್ಯ ಶೈಲಿಯ ಅನೇಕ ಅಂಶಗಳು ಇವುಗಳ ಮೇಲೆ ಪ್ರಭಾವ ಬೀರುವುದು ವೇದ್ಯವಾಗುವುದು.

ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದಲ್ಲಿನ ಚಾಲುಕ್ಯರಿಗೆ ಸಂಬಂಧಿಸಿದ ಶಾಸನಾತ್ಮಕ ಮಾಹಿತಿ ಹಾಗೂ ದೇವಾಲಯ ವಾಸ್ತುಶೈಲಿ ಅವರ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಬಹುಮುಖ್ಯ ಆಕರಗಳಾಗಿವೆ.

೨.೨.೫. ರಾಷ್ಟ್ರಕೂಟರು

ಹೊಸದುರ್ಗ ತಾಲೂಕನ್ನು ಒಳಗೊಂಡಂತೆ ಇಡೀ ಜಿಲ್ಲೆ ಕ್ರಿ.ಶ. ೭೯೮ ರಿಂದ ೯೮೨ ರವರೆಗೆ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದಿತು. ರಾಷ್ಟ್ರಕೂಟ ದೊರೆ ೩ನೇ ಗೋವಿಂದನ ಕಾಲದಲ್ಲಿ ನೊಳಂಬ ರಾಜನಾದ ಚಾರುಪೊನ್ನೇರ ಜಗತ್ತುಂಗ ಪ್ರಭೂತವರ್ಷನು 'ಸುಳುಂಗಲ್-೭೦' ಅಥವಾ 'ಸುಲಗಲ್-೭೦'ರ ಸಾಮಂತನಾಗಿ ಆಳುತ್ತಿದ್ದನು.[೬೦] ಅಲ್ಲದೆ 'ಕದಂಬಳಿಗೆ-೧೦೦೦', 'ಮಂಡಳಿ-೧೦೦೦' ಇವುಗಳು 'ನೊಳಂಬವಾಡಿ-೩೨೦೦೦'ದಲ್ಲಿ ಅಂತರ್ಗತವಾಗಿದ್ದು ರಾಷ್ಟ್ರಕೂಟರ ಆಳ್ವಿಕೆಗೆ ಒಳಗಾಗಿದ್ದ ಸಂಗತಿಗಳನ್ನು ಶಾಸನಗಳು ಹರಹುತ್ತವೆ.[೬೧] ಹೊಸದುರ್ಗದ ಬಳಿ ಮಳಲಿ ಗ್ರಾಮದ ಕಲ್ಲೇಶ್ವರ ದೇವಾಲಯವು ರಾಷ್ಟ್ರಕೂಟರ ಕಾಲದ ನಿರ್ಮಿತಿ. ಇಟ್ಟಿಗೆ ದೇವಾಲಯವಾಗಿರುವ ಇದರ ತಲವಿನ್ಯಾಸದಲ್ಲಿ ಗರ್ಭಗೃಹ ಹಾಗೂ ಅಂತರಾಳವಿದೆ. ಗರ್ಭಗೃಹ ದಲ್ಲಿ ಶಿವಲಿಂಗ, ಅಂತರಾಳದಲ್ಲಿ ಗಣೇಶ, ವಿಷ್ಣುವಿನ ಮೂರ್ತಿಗಳಿವೆ. ಈ ತಾಲೂಕಿನ ಅತ್ಯಂತ ಪ್ರಾಚೀನ ದೇವಾಲಯ ಇದಾಗಿದ್ದು ರಾಷ್ಟ್ರಕೂಟ ಶೈಲಿಯ ನಿರ್ಮಿತಿಯಾಗಿದೆ. ಒಟ್ಟಿನಲ್ಲಿ ಶಾಸನ ಹಾಗೂ ವಾಸ್ತುಶೈಲಿಯ ನೆಲೆಯಲ್ಲಿ ಹೊಸದುರ್ಗ ತಾಲೂಕು ಪರಿಸರದಲ್ಲಿ ರಾಷ್ಟ್ರಕೂಟರ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಬಹುದಾಗಿದೆ.

೨.೨.೬. ನೊಳಂಬರು

ನೊಳಂಬ ಪಲ್ಲವರು ಕರ್ನಾಟಕದ ಪ್ರಾಚೀನ ಹಾಗೂ ಪ್ರಮುಖ ರಾಜಮನೆತನಗಳಲ್ಲಿ ಒಂದು. ಕಂಚಿಯ ಪಲ್ಲವ ವಂಶದೊಂದಿಗೆ ಮೂಲವನ್ನು ಕಲ್ಪಿಸಿಕೊಳ್ಳುವ ಇವರು ಕರ್ನಾಟಕದ ಆಗ್ನೇಯ ಭಾಗದಲ್ಲಿ ಕ್ರಿ.ಶ. ೮ನೇ ಶತಮಾನದಿಂದ ೩ ಶತಮಾನಗಳ ಕಾಲ ಆಳಿದರು. ಕ್ರಿ.ಶ. ೮ನೇ ಶತಮಾನದ ಪೂರ್ವಾರ್ಧದಲ್ಲಿ ಉದಯಿಸಿದ ನೊಳಂಬ ಪಲ್ಲವರು ಬಾದಾಮಿ ಚಾಲುಕ್ಯ ಹಾಗೂ ಕಂಚಿ ಪಲ್ಲವರ ನಡುವಿನ ಗಡಿ ಪ್ರಾಂತ್ಯಗಳಲ್ಲಿ ಆಳಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಶತಮಾನಗಳವರೆಗೆ ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳಿದರು.[೬೨] ಕ್ರಿ.ಶ. ೭೩೫ರಲ್ಲಿ 'ನೊಳಂಬಳಿಗೆ ಸಾಸಿರ' ಎಂಬ ಸಣ್ಣ ಪ್ರಾಂತ್ಯದ ಆಡಳಿತ ನಡೆಸಲಾರಂಭಿಸಿದರು. ತರುವಾಯ ಕ್ರಿ.ಶ.೯೦೦ರ ವೇಳೆಗೆ ರಾಜ್ಯವು ಮತ್ತಷ್ಟು ವಿಸ್ತರಿಸಿಟ್ಟು 'ನೊಳಂಬವಾಡಿ-೩೨೦೦೦'ವಾಯಿತು.[೬೩] ನೊಳಂಬರ ರಾಜ್ಯ 'ನೊಳಂಬವಾಡಿ-೩೨೦೦೦' ಪ್ರಾಂತ್ಯವು ಈಗಿನ ಕರ್ನಾಟಕದ ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಜೊತೆಗೆ ಆಂಧ್ರ ಹಾಗೂ ತಮಿಳುನಾಡಿನ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು.[೬೪] ಈ ಆಧಾರಗಳಿಂದಾಗಿ ಹೊಸದುರ್ಗ ತಾಲೂಕನ್ನು ಒಳಗೊಂಡಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆಯನ್ನು

ಗುರುತಿಸಬಹುದು. ಈ ಜಿಲ್ಲೆಯ ದಕ್ಷಿಣಕ್ಕಿದ್ದ 'ನಿರ್ಗುಂದ-೩೦೦' ಪ್ರಾಂತ್ಯ ನೊಳಂಬರ ಅಧೀನದಲ್ಲಿತ್ತು.[೭೫] ಚಳ್ಳಕೆರೆ ತಾಲೂಕು ಚಿಕ್ಕಮಧುರೆ ಗ್ರಾಮದ ಮಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೮೧೫ರ ಕಾಲದ ಸ್ಥಂಭ ಶಾಸನಗಳು ಜಯತುಂಗ ಪ್ರಭೂತವರ್ಷ ಪ್ರತಾಪಾವಲೋಕ ಶ್ರೀವಲ್ಲಹ' ತನ್ನ ಚಕ್ರಾಧಿಪತ್ಯವನ್ನಾಳುತ್ತಿರಲು ಪರಮೇಶ್ವರ ಪಲ್ಲವಾದಿ 'ನೊಳಂಬಳಿಗೆ-೧೦೦೦' ಮತ್ತು 'ನೀರ್ಗುಂದ-೩೦೦' ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದ ಅಂಶವನ್ನು ತಿಳಿಸುತ್ತವೆ.[೭೬] ಬಾಗೇನುಹಾಳು ಗ್ರಾಮದ ಈಶ್ವರ ದೇವಾಲಯದ ಕ್ರಿ.ಶ. ೯೧೮ರ ಶಾಸನ[೭೭] ಮತ್ತು ಮುಷ್ಟೂರಿನ ಕಲ್ಲೇಶ್ವರ ದೇವಾಲಯದ ಕ್ರಿ.ಶ. ೯೨೦ರ ಶಾಸನ[೭೮] ಇವುಗಳು ನೊಳಂಬಾಧಿರಾಜ ಅಯ್ಯಪ್ಪದೇವನು 'ನೊಳಂಬವಾಡಿ' ಮತ್ತಿತರ ನಾಡುಗಳನ್ನು ಆಳುತ್ತಿದ್ದನೆಂದು ಮಾಹಿತಿ ನೀಡುತ್ತವೆ. ಒಟ್ಟಿನಲ್ಲಿ ಹೊಸದುರ್ಗ ತಾಲೂಕನ್ನು ಒಳಗೊಂಡಂತೆ ಇಡೀ ಜಿಲ್ಲೆಯು ನೊಳಂಬರ ಸಾಂಸ್ಕೃತಿಕ ಚರಿತ್ರೆಯ ಪರಿಧಿಗೆ ಒಳಗಾಗಿತ್ತು.

೨.೨.೭ ಉಚ್ಚಂಗಿ ಪಾಂಡ್ಯರು

ಹೊಸದುರ್ಗ ತಾಲೂಕು ಪರಿಸರವನ್ನು ಒಳಗೊಂಡಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಉಚ್ಚಂಗಿ ಪಾಂಡ್ಯರ ರಾಜಕೀಯ ಚರಿತ್ರೆಯ ಕುರುಹುಗಳನ್ನು ಗುರುತಿಸಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ಉಚ್ಚಂಗಿ ಪಾಂಡ್ಯರಿಗೆ ಸಂಬಂಧಿಸಿದಂತೆ ಸುಮಾರು ೪೨ಕ್ಕೂ ಹೆಚ್ಚು ಶಾಸನಗಳು ದೊರೆತಿವೆ.[೭೯] ಕ್ರಿ.ಶ. ೧೧ ರಿಂದ ಕ್ರಿ.ಶ. ೧೩ನೇ ಶತಮಾನದವರೆಗೂ ಆಳ್ವಿಕೆ ನಡೆಸಿರುವ ಇವರು ತಮ್ಮನ್ನು ಪ್ರಸಿದ್ಧ ಚಂದ್ರವಂಶದವರು, ಯಾದವಕುಲಮಣಿಗಳು ಎಂದೂ ಕರೆದು ಕೊಂಡಿದ್ದಾರೆ. ಜಿಲ್ಲೆಯ ಹೊಳಲ್ಕೆರೆ, ಹೊಸದುರ್ಗ, ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲೂಕುಗಳನ್ನು ಒಳಗೊಂಡ ಪ್ರದೇಶವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ 'ನೊಳಂಬವಾಡಿ-೩೨೦೦೦' ಪ್ರಾದೇಶಿಕ ವಿಭಾಗವಾಗಿತ್ತು. ಈ ವಿಭಾಗವನ್ನು ಮಹಾಮಂಡಳೇಶ್ವರ ತ್ರಿಭುವನಮಲ್ಲ ವೀರಪಾಂಡ್ಯದೇವನು ಕ್ರಿ.ಶ. ೧೨೦೦ರವರೆಗೂ ಆಳಿದ ಕಾರಣದಿಂದಾಗಿ, ಆನಂತರ ಬಂದ ಹೊಯ್ಸಳರು ಈ ಪ್ರದೇಶವನ್ನು ಪಾಂಡ್ಯದೇಶವೆಂದು ಕರೆದರು.[೮೦] ಉಚ್ಚಂಗಿ ಪಾಂಡ್ಯರ ತ್ರಿಭುವನಮಲ್ಲ ಪಾಂಡ್ಯನನ್ನು ಇರುಕ್ಕವೇಲ ಎಂದು ಕರೆಯುತ್ತಿದ್ದರು. ಇವನು ಪ್ರಾರಂಭದಲ್ಲಿ 'ನೊಳಂಬಳಿಗೆ ಸಾಸಿರ'ವನ್ನು ಆಳುತ್ತಿದ್ದವನು ನಂತರ 'ನೊಳಂಬವಾಡಿ-೩೨೦೦೦' ಪ್ರಾಂತ್ಯಕ್ಕೆ ರಾಜ್ಯಭಾರ ವಿಸ್ತರಿಸಿದನೆಂದು ಚೆನ್ನಗಿರಿಯ ಕ್ರಿ.ಶ. ೧೦೮೩ರ ಶಾಸನದಿಂದ ತಿಳಿಯುವುದು.[೮೧] ಚಿತ್ರದುರ್ಗದ ಗಾರೇಹಟ್ಟಿಯ ಕ್ರಿ.ಶ. ೧೧೨೪ರ ಶಾಸನದ ಪ್ರಕಾರ ಇರುಕ್ಕವೇಲನು "ಶೌಚಗಾಂಗೆಯಮ್/ಕಾಯ್ವರ ಭೀಮಮ್, ಸಂಗ್ರಾಮ ರಾಮಮ್, ಅಳಿಂಗ ಬಳಂಜಿಗಮ್, ನೊಳಬನಾಗರುಡಮ್। ಮಾರ್ತಾಂಡದೇವ ಪಾದಾರಾಧಕಂ। ರಣಮೂರ್ಖ ಕುಳಪ್ರದೀಪಂ, ಚೋಳೇಶ್ವರ ದೇವಲಬ್ಧ ವರಪ್ರಸಾದಮ್" ಇತ್ಯಾದಿ ಪ್ರಶಸ್ತಿಗಳನ್ನು ಹೊಂದಿದ್ದನು ಎಂದು ಅದು ಹೇಳುತ್ತದೆ.[೮೨] ಹೊಳಲ್ಕೆರೆ ತಾಲೂಕಿನ ಗುಂಜಿಗನೂರು ಗ್ರಾಮದ ಕ್ರಿ.ಶ.೧೧೨೭ರ ಶಾಸನವೇ ತ್ರಿಭುವನಮಲ್ಲ ಪಾಂಡ್ಯನ ಆಳ್ವಿಕೆಯ ಕಟ್ಟಕಡೆಯ ಶಾಸನವಾಗಿದೆ.[೮೩] ಆನಂತರ ಅವನ ಮಗ ರಾಯಪಾಂಡ್ಯನು 'ನೊಳಂಬವಾಡಿ-೩೨೦೦೦', 'ಸಾಂತಳಿಗೆ-೧೦೦'ನ್ನು ಆಳಿದನು.[೮೪] ಕ್ರಿ.ಶ. ೧೧೨೫ರ ಜಿಗಳಿ ಶಾಸನದ ಪ್ರಕಾರ ಮಹಾಮಂಡಲೇಶ್ವರ ರಾಯಪಾಂಡ್ಯನು 'ಕದಂಬಳಿಗೆ'

ಪ್ರಾಂತ್ಯವನ್ನು ಆಳಿದನೆಂದು ತಿಳಿಯುತ್ತದೆ. ಒಟ್ಟಾರೆ 'ನೊಳಂಬವಾಡಿ-೩೨೦೦೦' ಮತ್ತು 'ಕದಂಬಳಿಗೆ' ಪ್ರಾಂತ್ಯಗಳು ಉಚ್ಚಂಗಿ ಪಾಂಡ್ಯರ ಆಳ್ವಿಕೆಗೆ ಒಳಪಟ್ಟಿದ್ದವು.

೨.೨.೮. ಹೊಯ್ಸಳರು

ಮಧ್ಯಕಾಲಿನ ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಹೊಯ್ಸಳ ರಾಜಮನೆತನವು ಒಂದು. ಹೊಯ್ಸಳ ರಾಜಮನೆತನವು ಕ್ರಿ.ಶ. ೧೧ ರಿಂದ ೧೪ನೇ ಶತಮಾನದವರೆಗೂ ಕರ್ನಾಟಕ ಮಾತ್ರವಲ್ಲದೆ ದಕ್ಷಿಣ ಭಾರತದ ಬಹುಭಾಗಗಳಲ್ಲಿ ಆಳ್ವಿಕೆ ನಡೆಸಿತು. ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ, ವಾಸ್ತು ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಇವರ ಆಳ್ವಿಕೆ ಅವಧಿ ಅತ್ಯಂತ ಪ್ರಧಾನಯುತವಾದುದು. ಹೊಸದುರ್ಗ ತಾಲೂಕು ಪರಿಸರವನ್ನು ಒಳಗೊಂಡಂತೆ ಇಡಿ ಚಿತ್ರದುರ್ಗ ಜಿಲ್ಲೆಯು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಇದಕ್ಕೆ ಸಾಕ್ಷಿಯಾಗಿ ಜಿಲ್ಲೆಯಲ್ಲಿ ೬೫ಕ್ಕೂ ಹೆಚ್ಚು ಹೊಯ್ಸಳ ಶಾಸನಗಳು ದೊರೆತಿವೆ. ಹೊಯ್ಸಳರು ಈ ಭಾಗದಲ್ಲಿ ನಿರ್ಮಿಸಿರುವ ಕೆರೆ-ಕಾಲುವೆ, ದೇವಾಲಯ, ಅಗ್ರಹಾರ ಮುಂತಾದವುಗಳ ಉಲ್ಲೇಖ ಇಲ್ಲಿನ ಶಾಸನಗಳಲ್ಲಿ ಕಂಡುಬರುತ್ತದೆ. ಕೇವಲ ರಾಜಕೀಯವಾಗಿ ಅಲ್ಲದೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಹೊಯ್ಸಳರ ಕೊಡುಗೆ ಮಹತ್ವವಾದುದೆಂಬುದನ್ನು ಇಲ್ಲಿನ ಶಾಸನಗಳ ಅಧ್ಯಯನದಿಂದ ಮನಗಾಣಬಹುದು.

ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು 'ನೊಳಂಬವಾಡಿ' ಪ್ರಾಂತ್ಯ ಅಂದರೆ ಇಂದಿನ ಚಿತ್ರದುರ್ಗ ಜಿಲ್ಲಾ ಪರಿಸರದ ಮೇಲೆ ಗಮನಹರಿಸಿದ್ದರು.[೮೫] ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನ ಕ್ರಿ.ಶ. ೧೧೯೩ರ ಶಾಸನ ಈ ಭಾಗದಲ್ಲಿ ಕಂಡುಬರುವ ಮೊದಲ ಶಾಸನ. ಇವನಿಂದ ಮೊದಲ್ಗೊಂಡು ಮುಮ್ಮಡಿ ಬಲ್ಲಾಳನವರೆಗಿನ ಶಾಸನಗಳು ಇಲ್ಲಿ ದೊರೆತಿವೆ.[೮೬] ಇಮ್ಮಡಿ ಬಲ್ಲಾಳನ ಕಾಲದಲ್ಲಿ ಅವನ ಸಾಮಂತರು ಈ ಭಾಗದಲ್ಲಿ ಆಡಳಿತ ನಡೆಸುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ. ಹೊಳಲ್ಕೆರೆ ತಾಲೂಕು ಹಿರೇಎಮ್ಮಿಗನೂರು ಕಲ್ಲೇಶ್ವರ ದೇವಾಲಯದ ಕ್ರಿ.ಶ. ೧೨೨೦ರ ಶಾಸನ ಇಮ್ಮಡಿ ಬಲ್ಲಾಳನು ಪಾಂಡ್ಯರ ಅದೀನದಲ್ಲಿದ್ದ 'ನೊಳಂಬವಾಡಿ-೩೨೦೦೦' ಪ್ರಾಂತ್ಯವನ್ನು ಹೋರಾಟದಲ್ಲಿ ಗೆದ್ದನೆಂದು ಹೇಳುತ್ತದೆ.[೮೭] ಈಗಾಗಲೆ ತಿಳಿದಂತೆ ಹೊಸದುರ್ಗ ತಾಲೂಕು ಪರಿಸರ 'ನೊಳಂಬವಾಡ-೩೨೦೦' ಪ್ರಾಂತ್ಯದ ಒಂದು ಭಾಗವಾಗಿತ್ತು. ಬಾಗೂರು ಸಮೀಪದ ಮಳಲಿ ಗ್ರಾಮದ ಈಶ್ವರ ದೇವಾಲಯದ ಮುಂದಿನ ಕ್ರಿ.ಶ. ೧೨೨೬ರ ವೀರಗಲ್ಲು ಶಾಸನದಲ್ಲಿ 'ವೀರನಾರಸಿಂಹ ದೇವನು' 'ಗಂಗವಾಡ-೯೬೦೦೦' ಮತ್ತು 'ನೊಳಂಬವಾಡಿ-೩೨೦೦೦' ನಾಡುಗಳನ್ನು ಆಳುವಾಗ ಶ್ರೀ ಕೇಶವಪುರವಾದ ಮಣಲಿಯ ಚಿಕ್ಕಗವುಡನ ಮಗ ಮಾಚಗವುಡ, ಅವನ ಮಗ ಮಾದಿಗವುಡ ಹೋರಾಟದಲ್ಲಿ ಮರಣ ಹೊಂದಲು ಆ ಗ್ರಾಮದ ಗೌಡರು ಅವನ ಹೆಸರಿನಲ್ಲಿ ಶ್ರೀ ಕಲಿದೇವರಿಗೆ ಭೂದತ್ತಿ ಬಿಟ್ಟುಕೊಟ್ಟರು' ಎಂದು ಹೇಳಲಾಗಿದೆ.[೮೮] ಇದೇ ಸ್ಥಳದ ಕ್ರಿ.ಶ. ೧೨೩೬ರ ತುರುಗೋಳು ಸ್ಮಾರಕ ಶಾಸನದಲ್ಲಿ ಸೋಮೇಶ್ವರನು ಆಳುವಾಗ ಮಾವಿನಹಳ್ಳಿಯ ಕೆಲವರು ಹಸುಗಳನ್ನು ಕದ್ದು ಒಯ್ಯುವಾಗ ಚಿಕ್ಕಬೊಮನೆಂಬುವವನು ಅವರೊಡನೆ ಕಾದಾಡಿ ವೀರಸ್ವರ್ಗ ಪಡೆದ ಸಂದರ್ಭದಲ್ಲಿ ಅವನ ಹೆಸರಲ್ಲಿ ಮಾರಬೊವ ಎಂಬುವವನು ವೀರಗಲ್ಲು ನಿಲ್ಲಿಸಿದ ಎಂದಿದೆ.[೮೯] ಈ ಎರಡು

ವೀರಗಲ್ಲುಗಳು ದೊರೆತಿರುವ ಮಳಲಿಯು ವೀರನಾರಸಿಂಹ ಹಾಗೂ ಸೋಮೇಶ್ವರನ ಕಾಲದಲ್ಲಿ ಒಂದು ಪ್ರಮುಖ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಕಾರಣ ಇದನ್ನು ಶಾಸನದಲ್ಲಿ 'ಶ್ರೀ ಕೇಶವಪುರ' ಎಂದು ಕರೆದಿರುವುದು.

ಜಾನಕಲ್ಲು ಗ್ರಾಮದ ಶಂಕರಲಿಂಗೇಶ್ವರ ದೇವಾಲಯದ ಬಳಿಯ ಕ್ರಿ.ಶ. ೧೩೦೨ರ ಒಂದು ವೀರಗಲ್ಲು ಶಾಸನದಲ್ಲಿ ಮುಮ್ಮಡಿ ಬಲ್ಲಾಳನು ಆಳುತ್ತಿರುವ ಕಾಲದಲ್ಲಿ ಸೇವುಣರಾಜ ಶಂಕರದೇವನ ಸೇನೆ ಹೊಯ್ಸಳನಾಡನ್ನು ಮುತ್ತಿಗೆ ಹಾಕಿತು, ಬೆಮ್ಮತ್ತೂರಿನಲ್ಲಿ ಆಳುತ್ತಿದ್ದ ಬಲ್ಲಾಳ ಭಾವ ಸೋಮದಂಡನಾಯಕ ಸೇವುಣ ದಂಡನಾಯಕ ಕಂಪಿಲನೊಂದಿಗೆ ಹೋರಾಡುತ್ತಾ ವೀರಸ್ವರ್ಗವನ್ನು ಹೊಂದಿದನು. ಈ ಸಂದರ್ಭದಲ್ಲಿ ಹೊಳಲ್ಕೆರೆ ವೃತ್ತಿಯ ಮಹಾಮಂಡಳೇಶ್ವರ ಮಾಚಿದೇವನ ಪಾದಪದ್ಮಾರಾಧಕರ ಕೆಂದಾರಿ ದೇವರಸನ ಮೈದುನ ಬಸಪ್ಪನು ಹೋರಾಟದಲ್ಲಿ ಪಾಲ್ಗೊಂಡು ವೀರಸ್ವರ್ಗದಲ್ಲಿ ಪಾಲ್ಗೊಂಡನೆಂದು ಹೇಳಲಾಗಿದೆ.[೧೦] ನೀರಗುಂದ ಗ್ರಾಮವು ಹೊಸದುರ್ಗ ಪರಿಸರದ ಪ್ರಮುಖ ಚಾರಿತ್ರಿಕ ಎಡೆಗಳಲ್ಲಿ ಒಂದಾಗಿದ್ದು, ಹೊಯ್ಸಳ ವಾಸ್ತುಶಿಲ್ಪ ಹಾಗೂ ಶಾಸನ ಸಂಪತ್ತನ್ನು ಒಳಗೊಂಡಿದೆ. ಇಲ್ಲಿನ ಪ್ರಸಿದ್ಧ ಸಿದ್ದೇಶ್ವರ ದೇವಾಲಯವು ಹೊಯ್ಸಳ ವಾಸ್ತುಶಿಲ್ಪವನ್ನು ಹೊಂದಿದ್ದು, ಇವರ ಕಾಲದಲ್ಲೇ ಅನೇಕ ದಾನ-ದತ್ತಿಗಳನ್ನು ಪಡೆದಿರುವುದಕ್ಕೆ ಕೆಲವು ಶಾಸನಗಳು ಆಧಾರವಾಗಿವೆ. ದೇವಾಲಯವು ತ್ರಿಕೂಟಾಚಲವಾಗಿದ್ದು ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗ, ಬಲಭಾಗದ ಗರ್ಭಗುಡಿಯಲ್ಲಿ ವಿಷ್ಣುವಿನ ಮೂರ್ತಿಶಿಲ್ಪ, ಎಡಭಾಗದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಶಿಲ್ಪವಿದೆ. ದೇವಾಲಯದ ನವರಂಗದಲ್ಲಿ ಗಂಟಾಕಾರದ ಕಂಭಗಳಿವೆ. ಮೆದುಗಲ್ಲಿನಲ್ಲಿ ನಿರ್ಮಾಣ ಗೊಂಡಿರುವ ಈ ದೇವಾಲಯವು ಹೊಯ್ಸಳ ಕಾಲದ ನಿರ್ಮಿತಿಯಾಗಿದೆ. ಹೊಯ್ಸಳ ಚಕ್ರವರ್ತಿ ಸೋಮೇಶ್ವರನ ಕ್ರಿ.ಶ. ೧೨೪೦ರ ಇಲ್ಲಿನ ಒಂದು ಶಾಸನದ ಪ್ರಕಾರ 'ಸಿದ್ದೇಶ್ವರ ದೇವಾಲಯವನ್ನು ನಲ್ಲಸೆಟ್ಟಿ ಎಂಬುವವನು ಜೀರ್ಣೋದ್ಧಾರ ಮಾಡಿಸಿ ಸೇವಾಕರ್ತರಾದ, ಕಲ್ಯಾಣಜೀಯ, ಉಮಾಳಜೀಯ, ನಲ್ಲಜೀಯ ಇವರುಗಳಿಗೆ ಹಿರಿಯ ಕೆರೆಯ ಕೆಳಗಿನ ಗದ್ದೆ, ಕೊಂಡಜ್ಜಿ, ಆಸಂದಿ, ಬೇವಿನಹಳ್ಳಿ, ಆನೀವಾಳ, ಕುಂದೂರು ಗ್ರಾಮದ ಗದ್ದೆಗಳನ್ನು ಹಾಗೂ ಅನೇಕ ಸಂತೇ ಆಯಗಳನ್ನು ಧಾರಪೂರ್ವಕವಾಗಿ ಬಿಟ್ಟುಕೊಟ್ಟನು.[೧೧] ೧ನೇ ನರಸಿಂಹನ ಕ್ರಿ.ಶ. ೧೧೪೨ರ ಶಾಸನದಲ್ಲಿ ನೀರಗುಂದವನ್ನು 'ಉದ್ಭವ ನರಸಿಂಹಪುರ' ಎಂದು ಮುಮ್ಮಡಿ ಬಲ್ಲಾಳನ ಕ್ರಿ.ಶ. ೧೩೦೮ರ ಶಾಸನದಲ್ಲಿ ೧೨೦ ಜನ ಬ್ರಾಹ್ಮಣರನ್ನೊಳಗೊಂಡ 'ಉದ್ಭವ ಸೋಮನಾಥಪುರ' ಎಂಬ ಅಗ್ರಹಾರವಾಗಿತ್ತೆಂದು ಹೇಳಲಾಗಿದೆ.[೧೨] ಇದೇ ಗ್ರಾಮದ ರಾಮೇಶ್ವರ ದೇವಾಲಯವು ಸಹ ಹೊಯ್ಸಳ ಕಾಲದ್ದಾಗಿದೆ.[೧೩] ಕೆಂಪು ಮರಳುಗಲ್ಲಿನಲ್ಲಿ ನಿರ್ಮಾಣಗೊಂಡಿರುವ ಇದರ ಗರ್ಭಗೃಹದ ಮೇಲೆ ಕದಂಬನಾಗರ ಶಿಲ್ಪವಿದೆ. ನವರಂಗದಲ್ಲಿ ಗಂಟಾಮಾದರಿ ಸ್ತಂಭಗಳಿವೆ. ಇದರೊಂದಿಗೆ ಚನ್ನಕೇಶವ ದೇವಾಲಯವು ಇದೇ ಗ್ರಾಮದ ಮಧ್ಯ ಭಾಗದಲ್ಲಿದ್ದು, ಹೊಯ್ಸಳ ಕಾಲದ್ದಾಗಿದೆ.[೧೪] ಹೀಗೆ ನೀರಗುಂದ ಹೊಯ್ಸಳ ಕಾಲದಲ್ಲಿ ಒಂದು ಪ್ರಮುಖ ಅಗ್ರಹಾರ ಹಾಗೂ ವಾಸ್ತುಶೈಲಿಯ ಪ್ರವೇಶವಾಗಿತ್ತು.

ಹೊಸದುರ್ಗ ತಾಲೂಕು ಪರಿಸರದ ಹೆಗ್ಗೆರೆಯು ಹೊಯ್ಸಳ ಕಾಲದ ಅನೇಕ ಪ್ರಾಚ್ಯಾವಶೇಷ ಗಳನ್ನು ಹೊಂದಿದೆ. ಇವುಗಳಲ್ಲಿ ದೇವಾಲಯ, ಮೂರ್ತಿಶಿಲ್ಪ, ಶಾಸನ, ನಿಷದಿ ಸ್ಮಾರಕಗಳು

ಬಹುಮುಖ್ಯವಾಗಿವೆ. ಇಲ್ಲಿನ ಸುಪಾರ್ಶ್ವನಾಥ ಜೈನಬಸದಿ ಹೊಯ್ಸಳ ಶೈಲಿ ಹಾಗೂ ನಿರ್ಮಿತಿಯಾಗಿದೆ. ಇದು ಕ್ರಿ.ಶ. ೧೧೬೧ರಲ್ಲಿ ಹೊಯ್ಸಳ ದೊರೆ ಒಂದನೇ ನರಸಿಂಹನ ಕಾಲದ್ದು.[೯೫] ಈ ಶಾಸನದಲ್ಲಿ ಗೋಪಿದೇವನು ತನ್ನ ಮಡದಿ ಮಹಾದೇವಿ ನಾಯಕಿತ್ತಿಗೆ 'ಪರೋಕ್ಷ ವಿನಯ'ವಾಗಿ 'ಚನ್ನಪಾರ್ಶ್ವದೇವರ ಬಸದಿ'ಯನ್ನು ಕಟ್ಟಿಸಿದನೆಂದು ಹೇಳಲಾಗಿದೆ.[೯೬] ಬಹುಶಃ ಗೋಪಿದೇವನು ಹೊಯ್ಸಳ ಅಧಿಕಾರಿಯಾಗಿ ಈ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದನೆಂದು ಅನ್ನಿಸುತ್ತದೆ. ಗೋಪಿದೇವನು ಈ ಬಸದಿಯನ್ನು ನಿರ್ಮಿಸಿದ್ದಲ್ಲದೆ ಇದರ ನಿರ್ವಹಣೆಗೆ ಎಣ್ಣೆಗೆರೆ ಹಾಗೂ ಸವಣುಗೆರೆಯನ್ನು ದಾನ ನೀಡಿರುವುದು ವೇದ್ಯವಾಗುತ್ತದೆ. ಇಷ್ಟೇ ಅಲ್ಲದೆ ಅನೇಕ ದಾನ–ದತ್ತಿಗಳ ವಿವರವನ್ನು ಇದೇ ಶಾಸನದಲ್ಲಿ ಕಾಣಬಹುದು.[೯೭] ಹಸಿರು ಮೆದುಗಲ್ಲಿನ ಈ ಬಸದಿಯ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವಿದೆ. ನವರಂಗದ ಕಂಬಗಳ ರಚನೆಯಲ್ಲಿ ಪೀಠ, ಪಾದ, ಉಂಗುರಾಕಾರದ ಕಾಂಡ, ಘಂಟಾಕಾರದ, ವೃತ್ತಾಕಾರದ ಫಲಕ ಮತ್ತು ತರಂಗ ಬೋಧಿಗೆ ಇದೆ. ದೇವಾಲಯದ ಗರ್ಭಗೃಹದಲ್ಲಿ ಸಿಂಹ ಪೀಠದ ಮೇಲೆ ಬ್ರಹ್ಮದೇವರು, ಅದರ ಹಿಂಭಾಗದ ಕಿರು ಜಗತಿಯ ಮೇಲೆ ಸುಪಾರ್ಶ್ವನಾಥನ ಮೂರ್ತಿಶಿಲ್ಪವಿದೆ. ಒಟ್ಟಿನಲ್ಲಿ ಹೊಯ್ಸಳ ಕಾಲದ ಈ ದೇವಾಲಯ ಅತ್ಯಂತ ಸುಂದರವಾಗಿದೆ. ಬಸದಿಯ ಹೊರಗೆ ಎರಡು ನಿಷದಿ ಶಾಸನಗಳಿದ್ದು, ಮೊದಲನೆಯ ನಿಷದಿಯು 'ಕ್ರಿ.ಶ. ೧೧೨೩ರಲ್ಲಿ ಶ್ರೀ ಮೂಲ ಸಂಘದ ದೇಶಿಯ ಗುಣದ ಪುಸ್ತಕ ಗಚ್ಚದ ಕೊಣ್ಣ ಕುನ್ದಾನ್ವಯದ ಶ್ರೀ ಮಾಣಿಕ್ಯನನ್ದಿ ಸಿದ್ಧಾಂತದೇವರ ಶಿಷ್ಯ ಮೇಘಚಂದ್ರ ಭಟ್ಟಾರಕಾ ದೇವರು ಸನ್ಯಾಸಿಯಿಂದ ಸಮಾಧಿ ಹೊಂದಿ ಸ್ವರ್ಗಸ್ಥರಾದರು ಎಂದು ಹೇಳಿದೆ.[೯೮] ಮತ್ತೊಂದು ನಿಷದಿ ಶಾಸನದಲ್ಲಿ ಕ್ರಿ.ಶ. ೧೨೯೮ರಲ್ಲಿ ಚಂದ್ರಕೀರ್ತಿ ಎಂಬುವರು ಸ್ವರ್ಗಸ್ಥನಾದಾಗ ಹೆಗ್ಗೆರೆಯ ಹಲವು ಮಂದಿ ನಿಷದಿಯನ್ನು ನಿಲ್ಲಿಸಿದ್ದರು ಎಂದು ಹೇಳಲಾಗಿದೆ.[೯೯] ಹೆಗ್ಗೆರೆಯಲ್ಲಿನ ಈ ಮೇಲಿನ ಜೈನ ಸ್ಮಾರಕಗಳು ಹೊಯ್ಸಳ ಕಾಲದ ನಿರ್ಮಿತಿಯಾಗಿದ್ದು ಅದರ ಕಾಲದ ಬಹುಮುಖ್ಯ ಕೊಡುಗೆಗಳಾಗಿವೆ. ಇದೇ ಗ್ರಾಮದಲ್ಲಿ ಮತ್ತೆ ಮೌರ್ಯ ಮತ್ತು ಶೈವ ದೇವಾಲಯಗಳು ಹೊಯ್ಸಳ ಕಾಲದಲ್ಲೇ ನಿರ್ಮಾಣಗೊಂಡು ಅನೇಕ ದಾನ ದತ್ತಿಗಳನ್ನು ಪಡೆದು ನಿರ್ವಹಣೆ ಹೊಂದಿರುವುದು ಆಧಾರಯುಕ್ತ. ಅವುಗಳೆಂದರೆ ಗಲಗೇಶ್ವರ ಹಾಗೂ ಕಲ್ಲೇಶ್ವರ ದೇವಾಲಯಗಳು ಕ್ರಿ.ಶ. ೧೨೩೨ರ ಎರಡನೇ ನರಸಿಂಹನ ಕಾಲದ್ದಾಗಿದ್ದು ಶಾಸನೋಕ್ತವಾಗಿವೆ.[೧೦೦] ಗಲಗೇಶ್ವರ ದೇವಾಲಯವು ಬಹುತೇಕ ಉಳಿದು ಬಂದಿರುವುದನ್ನು ಕಾಣಬಹುದು. ಇದು ಹಸಿರು ಮೆದುಗಲ್ಲಿನಲ್ಲಿ ನಿರ್ಮಾಣವಾಗಿದ್ದು, ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವಿದೆ. ಗರ್ಭಗೃಹದಲ್ಲಿ ಅತ್ಯಂತ ಸುಂದರವಾದ ೩ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡದಲ್ಲಿ ಸುಂದರವಾದ ಜಾಲಂದ್ರವಿರುವುದು ಕಂಡುಬರುವುದು. ನವರಂಗದಲ್ಲಿ ನಂದಿ, ಕೇಶವ, ಮಹಿಷಮರ್ಧಿನಿ, ಗಣೇಶನ ಮೂರ್ತಿ ಶಿಲ್ಪಗಳಿದ್ದು ಇವು ಹೊಯ್ಸಳ ಶೈಲಿಯಲ್ಲಿ ಇವೆ. ಒಟ್ಟಾರೆ ಹೆಗ್ಗೆರೆ ಹೊಯ್ಸಳರ ಕಾಲದಲ್ಲಿ ಒಂದು ಬಹುಮುಖ್ಯ ಸಾಂಸ್ಕೃತಿಕ ಕೇಂದ್ರವಾಗಿದ್ದಂತೆ ತೋರುತ್ತದೆ.

ಹೊಯ್ಸಳ ದೊರೆಗಳು ಈ ಭಾಗದಲ್ಲಿ ಕೆರೆ ನೀರಾವರಿಗೆ ಹೆಚ್ಚಿನ ಒತ್ತು ನೀಡಿರುವುದು ಶಾಸನೋಕ್ತವಾಗಿದೆ. ನೀರಗುಂದ ಸಿದ್ದೇಶ್ವರ ದೇವಾಲಯದ ಬಳಿಯಿರುವ ಹೊಯ್ಸಳ ಚಕ್ರವರ್ತಿ ಸೋಮೇಶ್ವರ(ಕ್ರಿ.ಶ. ೧೨೩೩-೬೭)ನ ಕಾಲದ ಶಾಸನದಲ್ಲಿ ಇಲ್ಲಿನ ದೊಡ್ಡಕೆರೆಯು ಉಲ್ಲೇಖವಾಗಿದೆ.[೧೦೧] ಈ ಶಾಸನದಲ್ಲಿನ ಮಾಹಿತಿಯಂತೆ ನೀರಗುಂದ ಪರಿಸರದ ಯಾವುದೇ ಕೆರೆ ಹೊಡೆದು ಹೋಗಿದ್ದರೆ ಅಥವಾ ದುರಸ್ಥಿ ಕಾಣದೇ ಇದ್ದರೆ ಇಲ್ಲಿನ ನಲ್ಲಸೆಟ್ಟಿ ಎಂಬುವವನು ಅವುಗಳನ್ನು ಜೀರ್ಣೋದ್ಧಾರ ಮಾಡಿಸುತ್ತಿದ್ದನಂತೆ. ಇದರಿಂದಾಗಿ ಅವನು 'ಒಡಗೆರೆಮಲ್ಲ' ಎಂಬ ಬಿರುದನ್ನು ಹೊಂದಿದ್ದನು. ಅದೇ ರೀತಿ ಕ್ರಿ.ಶ. ೧೧೪೨ರ ೧ನೇ ನರಸಿಂಹನ ಶಾಸನ ನೀರಗುಂದದ ಕೆರೆ ನೀರಾವರಿಯನ್ನು ಕುರಿತು ಅನೇಕ ಅಮೂಲ್ಯ ಮಾಹಿತಿಗಳನ್ನು ನೀಡುತ್ತದೆ. 'ಉದ್ಭವ ನರಸಿಂಹಪುರ' ಹೆಸರಿನ ಅಗ್ರಹಾರವಾಗಿದ್ದ ನೀರಗುಂದದ ಮಹಾಜನಗಳು ಸಭೆ ಸೇರಿ ರೂಪಿಸಿದ ಒಂದು 'ಸಮಯಪುತ್ರ'ದ ಶಾಸನಾಗಿದ್ದು, ಅಗ್ರಹಾರದ ಬ್ರಾಹ್ಮಣರ ಸಮಾನ ಆದಾಯದ ಭೂಮಿಯ ನಾಲ್ಕು ಭಾಗಗಳು, ಅವುಗಳ ತೆರಿಗೆ ಪ್ರಮಾಣ, ನೀರಿನ ಹಂಚಿಕೆ, ಕೆರೆ-ಕಟ್ಟೆ-ಕಾಲುವೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ, ನೀರಾವರಿ ನಿರ್ವಹಣೆಯ ವ್ಯಾಜ್ಯ ಮುಂತಾದ ಅನೇಕ ವಿಚಾರಗಳನ್ನು ಕುರಿತು ಪ್ರಸ್ತಾಪ ಮಾಡುತ್ತದೆ.[೧೦೨] ಈ ಮೇಲಿನ ಶಾಸನಗಳು ಹೊಸದುರ್ಗ ತಾಲೂಕಿನಲ್ಲಿ ಹೊಯ್ಸಳರು ಕೆರೆ ನೀರಾವರಿಗೆ ನೀಡಿದ್ದ ಆದ್ಯತೆ ವ್ಯಕ್ತವಾಗುವುದು.

ಒಟ್ಟಾರೆ ಈ ಮೇಲೆ ವಿವರಿಸಿದ ಶಾಸನ, ದೇವಾಲಯ, ಶಿಲ್ಪ, ಸ್ಮಾರಕ ಶಿಲ್ಪ, ಕೆರೆ ನೀರಾವರಿ ನಿರ್ವಹಣೆ ಮುಂತಾದ ಅನೇಕ ಆಧಾರಗಳು ಹೊಸದುರ್ಗ ತಾಲೂಕು ಪರಿಸರದಲ್ಲಿ ಹೊಯ್ಸಳರ ಸಾಂಸ್ಕೃತಿಕ ಚರಿತ್ರೆಯನ್ನು ಕುರಿತು ಹೇಳುತ್ತವೆ.

೨.೨.೯. ವಿಜಯನಗರದ ಅರಸರು

ಮಧ್ಯಕಾಲಿನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಹಾಗೂ ಆಳ್ವಿಕೆ ಅತ್ಯಂತ ಮಹತ್ವಪೂರ್ಣವಾದ ಘಟನೆ. ಇದನ್ನು ಮರೆತುಹೋದ ಹಾಗೂ ಎಂದೆಂದೂ ಮರೆಯಲಾಗದ ಮಹಾಸಾಮ್ರಾಜ್ಯ ಎಂದು ಇತಿಹಾಸಕಾರರು ಕರೆದಿದ್ದಾರೆ. ಕ್ರಿ.ಶ.೧೪ನೇ ಶತಮಾನದ ನಾಲ್ಕನೆಯ ದಶಕದಲ್ಲಿ ಹುಟ್ಟಿ ಕ್ರಿ.ಶ. ೧೬ನೇ ಶತಮಾನದ ಆರನೆಯ ದಶಕದಲ್ಲಿ ಅಸ್ತಂಗತವಾದ ವಿಜಯನಗರವು ಆ ಅವಧಿಯಲ್ಲಿ ಭಾರತದಲ್ಲಿ ಮಾತ್ರವಲ್ಲದೆ, ಪ್ರಪಂಚದಲ್ಲಿಯೇ ಖ್ಯಾತಿ ಪಡೆದಿದ್ದಿತು.[೧೦೩] ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಒಂದು ಭಾಗವನ್ನಾಗಿಸಿಕೊಡಿದ್ದರು.[೧೦೪] ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಶಾಸನಗಳು ಕ್ರಿ.ಶ. ೧೩೫೬ ರಿಂದ ಎರಡನೇ ದೇವರಾಯನ ಕಾಲದವರೆಗೂ ನಂತರ ಕೃಷ್ಣದೇವರಾಯನಿಂದ ಅಳಿಯರಾಮರಾಯನ ಕಾಲದವರೆಗೂ ದೊರೆಯುತ್ತವೆ.[೧೦೫] ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರದ ಅರಸರೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿಯೂ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು.[೧೦೬] ಇವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ಆಡಳಿತ ವಿಭಾಗಗಳನ್ನು ಮಾಡಿಕೊಂಡಿದ್ದರು. ಈ ಜಿಲ್ಲೆಯ ವಿಜಯನಗರ

ಮತ್ತು ನಂತರದ ಶಾಸನಗಳನ್ನು ಗಮನಿಸಿದರೆ ದೇಶ, ರಾಜ್ಯ, ವಳಿತ, ವೇಂಠೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಂಮತು, ಹೋಬಳಿ, ಕಸಬೆ ಮತ್ತು ವಿತ್ತಿ ಎಂಬ ಬೇರೆ ಬೇರೆ ಪ್ರಾದೇಶಿಕ ವಿಭಾಗಗಳು ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದಂತೆ ಕಂಡುಬರುತ್ತವೆ.[೧೦೭]

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಂಡುಬರುವ ವಿಜಯನಗರ ಕಾಲದ ಆಡಳಿತ ವಿಭಾಗಗಳನ್ನು ಕುರಿತು ಗಮನಿಸೋಣ ಇಲ್ಲಿನ ಬಾಗೂರು ಸೀಮೆ ವಿಜಯನಗರ ಕಾಲದ ಪ್ರಮುಖ ಆಡಳಿತ ವಿಭಾಗವಾಗಿದ್ದಿತು. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕುಗಳಿಗೆ ಸೇರಿದ ಅನೇಕ ಗ್ರಾಮಗಳಲ್ಲಿನ ಶಾಸನಗಳಲ್ಲಿ ಬಾಗೂರು ಸೀಮೆಯ ಉಲ್ಲೇಖವಿದೆ. ಇದರ ಕೇಂದ್ರಸ್ಥಳ ಬಾಗೂರು ಗ್ರಾಮ ಹೊಸದುರ್ಗ ತಾಲೂಕಿನ ಕಸಬ ಹೋಬಳಿಯಲ್ಲಿದೆ. ಹೊಸದುರ್ಗದಿಂದ ಪಶ್ಚಿಮಕ್ಕೆ ಸು. ೧೦ ಕಿ.ಮೀ ದೂರದಲ್ಲಿರುವ ಈ ಊರನ್ನು ಶಾಸನಗಳಲ್ಲಿ 'ಬಾಗೇಊರು', 'ಬಾಗೂರು', 'ಬಾಗೂರು ಚರಂತಿ', 'ಬಾಗೂರು ಸೀಮೆ', 'ಭಗೂರು', 'ಭಾಗ್ಯಪುರ' ಎಂದೂ, ಜಾನಪದದಲ್ಲಿ 'ಸಣ್ಣಕ್ಕಿ ಬಾಗೂರು' ಮುಂತಾಗಿ ಕರೆಯಲಾಗಿದೆ.[೧೦೮] ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕುಗಳಲ್ಲಿ ಸಮಾವೇಶಗೊಂಡಿರುವ ಶ್ರೀರಾಂಪುರ, ಹೊಸದುರ್ಗ, ಹೊಳಲ್ಕೆರೆ, ರಾಮಗಿರಿ ಹೋಬಳಿಗಳನ್ನೊಳಗೊಂಡಂತೆ ಚಿತ್ರದುರ್ಗಕ್ಕೆ ನೈಋತ್ಯದಿಕ್ಕು ಅಂದರೆ ಚಿಕ್ಕಮಗಳೂರು ಜಿಲ್ಲೆಗೆ ಹೊಂದಿಕೊಂಡಂತಿರುವ ಪ್ರದೇಶವು 'ಬಾಗೂರು ಸೀಮೆ'ಯಲ್ಲಿ ಸಮಾವೇಶಗೊಂಡಿದ್ದಿತು.[೧೦೯] ಬಾಗೂರು ಪರಿಸರದಲ್ಲಿ ವಿಜಯನಗರ ಅರಸರ ಕೆಲವು ಶಾಸನಗಳಿದ್ದು, ಅವುಗಳಲ್ಲಿ ಕೃಷ್ಣದೇವರಾಯ, ಅಚ್ಯುತದೇವರಾಯ ಹಾಗೂ ಸದಾಶಿವರಾಯನಿಗೆ ಸಂಬಂಧಿಸಿದಂತಿವೆ. ಅಧಿಕವಾಗಿ ಈ ಶಾಸನಗಳಿಂದ ವಿಜಯನಗರ ಕಾಲದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಗುರುತಿಸಲು ಸಾಧ್ಯವಾಗುವುದು. ಬಾಗೂರು ಸೀಮೆಯು ಸಾಳವ ಮನೆತನದ ಕಾಲದಿಂದಲೇ ಅಸ್ತಿತ್ವದಲ್ಲಿದ್ದಂತೆ ತೋರುತ್ತದೆ. ಕ್ರಿ.ಶ. ೧೪೯೨ರ ಶಾಸನದಲ್ಲಿ ಮಲ್ಲರಾಜನಾಯಕನು ಬಾಗೂರು ಸೀಮೆಯ ಕಡೂರು ಕೆರೆಯನ್ನು ಜೀರ್ಣೋದ್ಧಾರ ಮಾಡಿದ ಸಂಗತಿ ತಿಳಿದುಬರುತ್ತದೆ.[೧೧೦] ಕ್ರಿ.ಶ. ೧೫೧೫ರಲ್ಲಿ ಬಾಗೂರಿನ ಮಲ್ಲರಸ ಎಂಬುವವನು ಕೃಷ್ಣದೇವರಾಯನ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು.[೧೧೧] ಕ್ರಿ.ಶ. ೧೫೧೫ರಲ್ಲಿ ಬಾಗೂರು ಮಲ್ಲರಸನು ಆಲದ ಹಳ್ಳಿಯನ್ನು ಅದೇ ಗ್ರಾಮದ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದನು.[೧೧೨] ಇದೇ ಕಾಲದ ಬಾಗೂರಿನ ಒಂದು ಶಾಸನದಲ್ಲಿ ಮಲ್ಲರಸನು ಸಿಂಗರಸನ ತೋಪು ಮತ್ತು ಮಲ್ಲರಸನ ತೋಪುಗಳನ್ನು ಮಾಡಿಸಿದ ಉಲ್ಲೇಖವಿದೆ.[೧೧೩] ಕ್ರಿ.ಶ. ೧೫೨೯ರಲ್ಲಿ ಬಾಗೂರಿನಲ್ಲಿ ಮಾರಸಯ್ಯನು ಅಧಿಕಾರಿ ಯಾಗಿದ್ದಂತೆ ಕಂಡುಬರುತ್ತದೆ.[೧೧೪] ತರುವಾಯ ಅಚ್ಯುತದೇವರಾಯನ ಕಾಲದಲ್ಲಿ 'ಬಾಗೂರುಸೀಮೆ'ಯನ್ನು ಬೇಲೂರು ನಾಯಕರು ಅಮರ ಮಾಗಣಿಯಾಗಿ ಪಡೆದು ಆಳಿದರು. ಬೇಲೂರು ನಾಯಕರಾದ ಎರ್ರಕೃಷ್ಣಪ್ಪ ಹಾಗೂ ವೆಂಕಟಾದ್ರಿನಾಯಕರ ಶಾಸನಗಳು 'ಬಾಗೂರು ಸೀಮೆ'ಗೆ ಸಂಬಂಧಿಸಿದಂತೆ ದೊರೆತಿವೆ. ವಿಜಯನಗರ ಅರಸರಿಂದ ಬಾಗೂರು ಸೀಮೆಯನ್ನು ಅಮರ ಮಾಗಣಿಯಾಗಿ ಪಡೆದ ಈ ನಾಯಕರು ಕ್ರಿ.ಶ. ೧೫೪೩ ರಿಂದ ೧೫೯೯ರವರೆಗೆ ಆಳಿದ್ದಾರೆ.[೧೧೫] ಒಟ್ಟಾರೆ 'ಬಾಗೂರು ಸೀಮೆ' ವಿಜಯನಗರ ಕಾಲದ ಆಡಳಿತ ವಿಭಾಗವಾಗಿದ್ದಿತು.

ಹೊಸದುರ್ಗ ತಾಲೂಕು ಪರಿಸರದ ವಿಜಯನಗರ ಕಾಲದ ಮತ್ತೊಂದು ಆಡಳಿತ ವಿಭಾಗವೆಂದರೆ 'ಬೂದಿಹಾಳು ಸೀಮೆ'. ಶ್ರೀರಾಂಪುರದ ಮೊದಲ ಹೆಸರು ಬೂದಿಹಾಳು. ಬೂದಿಹಾಳು 'ಬೂದಿಹಾಳು ಸೀಮೆ'ಯ ಕೇಂದ್ರಸ್ಥಳ. ಇದು ಮೊದಲು ಬಯಕಾರ ರಾಮಪಯನ ಮಾಗಣಿಗೆ ಸೇರಿದ ಗ್ರಾಮವಾಗಿದ್ದಿತು. ಕಲ್ಲಕೆರೆ ಹಾಗೂ ಹಿರಿಯೂರು ಬೂದಿಹಾಳು ಸೀಮೆಯಲ್ಲಿ ಸೇರಿದ್ದವು.[೧೯೬] ಕ್ರಿ.ಶ. ೧೫೨೫ರ ಕೃಷ್ಣದೇವರಾಯನ ಶಾಸನದಲ್ಲಿ ಬೂದಿಹಾಳು ಸೀಮೆ ಮಗರೆನಾಡು ವೇಂಠೆಯಲ್ಲಿತ್ತೆಂದು, ಈ ಸೀಮೆಯ ವೋಮಯಹಳ್ಳಿ, ತುಂಬಿನಕೆರೆ, ಚಿಕ್ಕೊಂಡಹಳ್ಳಿ, ಯಾದಗಟ್ಟ ನಡುವಿನ ಲಖುಮಾಪುರವನ್ನು ಕೃಷ್ಣದೇವರಾಯ ಪುರವೆಂದು ಪ್ರತಿನಾಮವಾಗಿಸಿ ಕೃಷ್ಣದೇವರಾಯನು ಲಕ್ಷ್ಮೀಧರಭಟ್ಟನಿಗೆ ದಾನವಾಗಿ ನೀಡಿರುವ ಸಂಗತಿಯನ್ನು ತಿಳಿಯಬಹುದು.[೧೯೭] ಬೂದಿಹಾಳಿನ ಬಸವಣ್ಣನಗುಡಿ ಬಳಿ ಇರುವ ಶಾಸನವು ಕ್ರಿ.ಶ. ೧೫೩೫ರ ಕಾಲದ್ದಾಗಿದ್ದು, ಅಚ್ಯುತದೇವರಾಯನು ವಿಜಯನಗರದಲ್ಲಿ ಆಳುತ್ತಿರುವ ಸಂದರ್ಭದಲ್ಲಿ ಬಯಕಾರ ರಾಮಪ್ಪನು ಬೂದಿಹಾಳು ಸೀಮೆಯ ಮದುವೆಯ ಸುಂಕವನ್ನು ಬಿಟ್ಟುಕೊಟ್ಟುದ್ದನ್ನು ತಿಳಿಸುತ್ತದೆ.[೧೯೮] ಲಕ್ಷ್ಮೀಕಾಂತ ದೇವಾಲಯದ ಬಳಿಯ ಕ್ರಿ.ಶ. ೧೫೫೪ ಹಾಗೂ ೧೫೫೫ರ ಎರಡು ಶಾಸನಗಳು ಸದಾಶಿವರಾಯನ ಕಾಲದವಾಗಿದ್ದು ಮಹಾಮಂಡಳೇಶ್ವರ ಶ್ರೀಪತಿ ರಾಜರಂಗದೇವರಿಗೆ ಬೂದಿಹಾಳು ಪ್ರದೇಶವನ್ನು 'ಅಮರ ಮಾಗಣಿ'ಯಾಗಿ ಪಾಲಿಸಿದ ಸಂಗತಿ ತಿಳಿದುಬರುತ್ತದೆ.[೧೯೯] ಬೂದಿಹಾಳಿನ ಆಂಜನೇಯ ದೇವಾಲಯದ ಕ್ರಿ.ಶ. ೧೫೮೪ರ ಶಾಸನ ವಿಜಯನಗರದ ಮಹಾರಾಜ ಶ್ರೀ ವೀರಪ್ರತಾಪ ಶ್ರೀರಂಗದೇವರಾಯನು ಪೆನುಗೊಂಡೆಯಲ್ಲಿ ಆಳುತ್ತಿರುವುದನ್ನು ಪ್ರಸ್ತಾಪಿಸುವುದರೊಂದಿಗೆ ಮಹಾಮಂಡಳೇಶ್ವರನಾಗಿದ್ದ ಶ್ರೀಪತಿರಾಜ ವಲ್ಲಭರಾಜದೇವನು ಅಮರನಾಯಕನಾಗಿದ್ದು ಬೂದಿಹಾಳಿನ ಆಳ್ವಿಕೆ ಇವನ ಕೈಕೆಳಗಿತ್ತು. ಈತ ಶ್ರೀಪತಿ ರಾಜರಂಗದೇವನ ಮಗನಾಗಿದ್ದು, ತನ್ನ ತಂದೆಗೆ ಪುಣ್ಯವಾಗಲಿ ಎಂದು ಬೂದಿಹಾಳು ಸೀಮೆಯ ಅಡೆವಳ ಹಣ ಬಿಟ್ಟುಕೊಟ್ಟಿದ್ದನ್ನು ಹೇಳುತ್ತದೆ.[೨೦೦] ಈ ಎಲ್ಲಾ ಅಂಶಗಳು ಬೂದಿಹಾಳು ಸೀಮೆಯು ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗವಾಗಿ, ಅಮರಮಾಗಣಿಯಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ.

ವಿಜಯನಗರ ಕಾಲದ 'ಮತ್ತನಡುವಿನ ಸೀಮೆ' ಹೊಸದುರ್ಗ ತಾಲೂಕು ಪರಿಸರದ ಮತ್ತೊಂದು ಆಡಳಿತ ವಿಭಾಗವಾಗಿತ್ತು. ಇದು ಸಹ ಒಂದು ಹೋಬಳಿ ಕೇಂದ್ರವಾಗಿದೆ. ಪಾಳೆಯಗಾರರ ಕಾಲದ ಶಾಸನವೊಂದರಲ್ಲಿ ಈ ಸೀಮೆಯ ಉಲ್ಲೇಖವಿದೆ.[೨೦೧] ಮತ್ತೋಡು ಹೋಬಳಿಗೆ ಸೇರಿದ ಬಹುಭಾಗ ಈ ಸೀಮೆಯಲ್ಲಿ ಅಂತರ್ಗತವಾಗಿದ್ದಿತು.[೨೦೨] ಇದೇ ತಾಲೂಕು ಪರಿಸರದಲ್ಲಿ ಕಂಡುಬರುವ ರಾಮಗಿರಿ ಸೀಮೆಯು ವಿಜಯನಗರ ಕಾಲದ ಮತ್ತೊಂದು ಆಡಳಿತ ವಿಭಾಗವಾಗಿತ್ತು. ರಾಮಗಿರಿ ಸೀಮೆಯ ರಾಜಧಾನಿಯಾದ ರಾಮಗಿರಿಯು ಇಂದಿನ ಹೊಳಲ್ಕೆರೆ ತಾಲೂಕಿನ ಹೋಬಳಿಯೊಂದರ ಕೇಂದ್ರಸ್ಥಳ ಹೊನ್ನುಗೊಂಡನಹಳ್ಳಿ, ಬಾಗೂರು ಗ್ರಾಮಗಳು ಈ ಸೀಮೆಯ ಅಂತರ್ಭಾಗವೆಂದು ಶಾಸನವೊಂದರಿಂದ ತಿಳಿದು ಬರುತ್ತದೆ.[೨೦೩] ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲೂಕುಗಳು ಸಂದಿಸುವ ಪ್ರದೇಶ ಈ ಸೀಮೆಯ ಭಾಗವಾಗಿದ್ದಿತೆಂದು ಸ್ಥೂಲವಾಗಿ ಹೇಳಬಹುದು. ಒಟ್ಟಾರೆ ವಿಜಯನಗರ ಅರಸರ ಕಾಲದಲ್ಲಿ

ಈ ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ವಿವಿಧ ಘಟಕಗಳಾಗಿ ವಿಭಾಗಿಸಿ ಆಡಳಿತ ನಡೆಸಿರುವುದಕ್ಕೆ ಈ ಮೇಲೆ ವಿವರಿಸಿದ ಅನೇಕ ಶಾಸನೋಕ್ತ ಸಂಗತಿಗಳೇ ಆಧಾರಗಳಾಗಿವೆ. ರಾಜಕೀಯವಾಗಿ ಈ ಪ್ರದೇಶದಲ್ಲಿ 'ಬಾಗೂರು ಸೀಮೆ', 'ಮತ್ತನಡುವಿನ ಸೀಮೆ', 'ಬೂದಿಹಾಳು ಸೀಮೆ', 'ರಾಮಗಿರಿ ಸೀಮೆ', ಹಾಗೂ 'ಬಯಕಾರ ರಾಮಪಯನ ಮಾಗಣಿ'ಗಳು ವಿಜಯನಗರ ಕಾಲದ ಆಡಳಿತ ಘಟಕಗಳಾಗಿದ್ದವು. ವಿಜಯನಗರ ಅರಸರಿಂದ ನೇಮಕಗೊಂಡ ಅಧಿಕಾರಿ, ಅಮರ ನಾಯಕರು ಈ ಘಟಕಗಳಲ್ಲಿ ಅವರ ನಿರ್ದೇಶನದಂತೆ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಸ್ಥಳೀಯವಾಗಿ ಅನೇಕ ಪ್ರಜಾಕಾರ್ಯಗಳನ್ನು ಮಾಡಿದ್ದಾರೆ. ದೇವಾಲಯ, ಕೆರೆ-ಕಟ್ಟೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ, ಅವುಗಳ ನಿರ್ವಹಣೆಗೆ ಅನೇಕ ದಾನ-ದತ್ತಿಗಳನ್ನು ನೀಡಿರುವುದು ಸಹ ಕಂಡುಬರುತ್ತದೆ.

೨.೨.೧೦. ಪಾಳೆಯಗಾರರು

ಕರ್ನಾಟಕ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಸ್ಥಳೀಯ ನಾಯಕರು/ ಪಾಳೆಯಗಾರರ ಸ್ಥಾನ ಅತ್ಯಂತ ಮಹತ್ವವಾದುದು. ಮಧ್ಯಕಾಲೀನ ಕರ್ನಾಟಕ ಅದರಲ್ಲೂ ವಿಜಯನಗರ ಸಾಮ್ರಾಜ್ಯದ ಕಾಲ ಹಾಗೂ ಅದರ ಪತನಾನಂತರದ ರಾಜಕೀಯ ಚರಿತ್ರೆಯಲ್ಲಿ ಇವರು ವಹಿಸಿದ ಪಾತ್ರ ಅದ್ವಿತೀಯವಾದುದು. ವಿಜಯನಗರ ಸಾಮ್ರಾಜ್ಯದ ಇತಿಹಾಸದ ಭಾಗವಾಗಿ ಮತ್ತು ಅದರ ಆಧಾರ ಸ್ಥಂಭಗಳಾಗಿ ಪಾಳೆಯಗಾರರು 'ಅಮರನಾಯಕ'ರಾಗಿ ಅಥವಾ 'ನಾಯಕ'ರಾಗಿ ಕಾಣಿಸಿಕೊಳ್ಳುತ್ತಾರೆ. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾ ವಿಭಾಗ, ಶಿಬಿರ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ. ಆದರೆ ಕರ್ನಾಟಕದಲ್ಲಿ ಸಂಭವಿಸಿದ ಕೆಲವು ಚಾರಿತ್ರಿಕ ಆಗುಹೋಗುಗಳಿಂದ ಚಿಕ್ಕಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಪಾಳೆಯಗಾರರು ಎಂಬ ಹೆಸರು ರೂಢಿಗತವಾಯಿತು. ಕನ್ನಡದ ಪಾಳೆಯಗಾರ ಎಂಬ ಹೆಸರಿನ ಇವರು ತೆಲುಗಿನಲ್ಲಿ 'ಪಾಳೆಗಾಡು', ತಮಿಳಿನಲ್ಲಿ 'ಪಾಲೈಕಾರನ್', ಮರಾಠಿಯಲ್ಲಿ ಪಾಳೇಗಾರ ಎಂದು ಪ್ರಸಿದ್ಧರಾಗಿದ್ದರು. ಇವರ ಅಧೀನವಾಗಿದ್ದ ಭೂಪ್ರದೇಶಕ್ಕೆ 'ಪೊಲ್ಲಂ' ಎಂದು ಹೆಸರಿದ್ದ ಕಾರಣ ಇವರಿಗೆ 'ಪಾಳೆಯಗಾರ' ಎಂಬ ಹೆಸರು ಪ್ರಾಪ್ತವಾದಂತೆ ತೋರುತ್ತದೆ.[೮೪] ಎಂ.ಎಸ್. ಪುಟ್ಟಣ್ಣನವರು ಪಾಳೆಯಗಾರ ಎಂಬ ಪದವನ್ನು ಈ ರೀತಿ ಅರ್ಥೈಸಿದ್ದಾರೆ. "ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧನಾಗಿರ ತಕ್ಕವರು ಪಾಳೆಯಗಾರರು'. ಇನ್ನೂ ಮುಂದುವರೆದು ಹೇಳುತ್ತಾ "ಒಂದೊಂದು ಚಿಕ್ಕಚಿಕ್ಕ ಪ್ರಾಂತ್ಯಗಳಲ್ಲಿ ದೊಡ್ಡ ಪ್ರಮಾಣವಾಗಿ ದೊರೆಗಳಂತೆ ಆಳಿಕೊಂಡು ಜನರಿಗೆ ಕಂದಾಯ, ಕಾಣಿಕೆ ಮೊದಲಾದ ವರಿಗಳನ್ನು ತೆಗೆದುಕೊಳ್ಳುತ್ತಾ ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಕಾಪಾಡುತ್ತಿದ್ದ ಮುಖಂಡರನ್ನು 'ಪಾಳೇಗಾರ' ಎಂಬ ಹೆಸರಿನಿಂದ ಕರೆಯುತ್ತಿದ್ದರೋ ಅಥವಾ ವಿಜಯನಗರದ ದಂಡು ಶತ್ರುಗಳ ಮೇಲೆ ಹೊರಟಾಗ, ಈ ಪ್ರಭುಗಳೂ ತಮ್ಮ ದಂಡಿನೊಡನೆ ಅವರ ಸಹಾಯಕ್ಕೆ ಹೋಗಿ ಒಂದೊಂದು ಸ್ಥಳದಲ್ಲಿ ಇಳಿದುಕೊಳ್ಳುತ್ತಿದ್ದುದರಿಂದ ಅವರಿಗೆ 'ಪಾಳೆಯಗಾರ' ಎಂಬ ಹೆಸರು ಅಭಿದಾನವಾಯಿತೋ ಖಂಡಿತವಾಗಿ ಯಾವ ಮೂಲವೋ ಗೊತ್ತಾಗಿಲ್ಲ. ಆದರೆ ಪಾಳೆಯಗಾರರೆಂಬ ಹೆಸರೇನೋ ರೂಢಿಗೆ ಬಂತು ಎಂದಿದ್ದಾರೆ.[೮೫] ಪಾಳೆಯಗಾರರು

ಮೂಲತಃ ಸಾಹಸಿಗರು, ಶೂರರು ರಣಕಲಿಗಳು ಆಗಿದ್ದು ತಮ್ಮ ಸಾಹಸಗಳಿಂದ ಕ್ರಮವಾಗಿ ಕರ್ನಾಟಕ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮೇಲೇರುತ್ತ ಬಂದರು.

ವಿಶ್ವವಿಖ್ಯಾತ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಖ್ಯಾತಿಗೆ ಅವರ ಕಾಲದ ರಾಜಕೀಯ ಘಟಕಗಳಲ್ಲಿನ 'ಅಮರನಾಯಕ'ರು ಪ್ರಮುಖ ಪಾತ್ರ ವಹಿಸಿದ್ದಾರೆ. ವಿಜಯನಗರ ಅರಸರ ವಿಶಿಷ್ಟ ಆಡಳಿತ ವಿಧಾನಗಳಲ್ಲಿ ಅಮರನಾಯಕ ಅಥವಾ ನಾಯಂಕರ ವ್ಯವಸ್ಥೆ ಒಂದು. ಅಮರ ನಾಯಕತನ ಎಂದರೆ, ಒಬ್ಬ ಅರ್ಹ ವ್ಯಕ್ತಿಗೆ ಕೆಲ ನಿರ್ದಿಷ್ಟ ಪ್ರದೇಶದ ಆಡಳಿತವನ್ನು ನೀಡುವುದರ ಮೂಲಕ; ಅವನಿಗೆ ಆ ಪ್ರದೇಶವನ್ನು ದಾನವಾಗಿ ನೀಡುವುದಾಗಿದೆ. ಇದಕ್ಕೆ ಪ್ರತಿಯಾಗಿ ಆ ಪ್ರದೇಶವನ್ನು ಸ್ವೀಕರಿಸಿದ ನಾಯಕ ತನ್ನ ಸಾರ್ವಭೌಮನಿಗೆ ನಿಷ್ಠನಾಗಿರಬೇಕಾದುದಲ್ಲದೆ; ತನಗೆ ನೀಡಿದ ಪ್ರದೇಶವನ್ನು ರಕ್ಷಣೆ ಮಾಡಿಕೊಳ್ಳಲು ನಿರ್ದಿಷ್ಟಪಡಿಸಿದ ಸೇನಾಬಲವನ್ನು ಇಟ್ಟುಕೊಂಡು, ಅಗತ್ಯ ಬಿದ್ದಾಗ ಅದನ್ನು ಸಾರ್ವಭೌಮನ ಸೇವೆಗೆ ಉಪಯೋಗಿಸ ಬೇಕಾಗಿತ್ತು. ಹಾಗೂ ಆ ಪ್ರದೇಶದ ಕಂದಾಯ, ತೆರಿಗೆಗಳನ್ನು ವಸೂಲಿ ಮಾಡಿ ಅದರಲ್ಲಿ ೧/೩ ಭಾಗವನ್ನು ತನ್ನ ಸಾರ್ವಭೌಮರಿಗೆ ಪ್ರತಿವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ಸಲ್ಲಿಸಬೇಕಾಗಿತ್ತು.[೧೩] ಇವರಿಗೆ ನೀಡುತ್ತಿದ್ದ ಭೂಮಿಯನ್ನು 'ಅಮರಂ' ಎಂದು ಕರೆಯಲಾಗುತ್ತಿತ್ತು.[೧೪] ಅಮರಂ ಪಡೆಯುತ್ತಿದ್ದ ಅಮರನಾಯಕರಿಗೆ ರಾಜಕೀಯ, ಆಡಳಿತೀಯ, ಆರ್ಥಿಕ ಮತ್ತು ನ್ಯಾಯಿಕ ಅಧಿಕಾರಿಗಳು ತಮ್ಮ ಪ್ರದೇಶ ವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದವು.[೧೫] ಅಮರನಾಯಕರ, ಅಮರ ಮಹಲೆ, ಅಮರ ಅಂಬಲಿ, ಅಮರ ಪಂದೆಯನಾಯಕ ಎಂದು ವಿಧಿವಿಧವಾಗಿ ಕರೆಯುತ್ತಿದ್ದರು.[೧೬] ಈ ಅಮರ ನಾಯಕರು ರೂಢಿಯಲ್ಲಿ ಪಾಳೆಯಗಾರರೆಂದೇ ಪ್ರಸಿದ್ಧರಾಗಿದ್ದಾರೆ. ಹೀಗೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬಂದ ಅಮರನಾಯಕರು ಕ್ರಿ.ಶ. ೧೫೬೫ರಲ್ಲಿ ಈ ಸಾಮ್ರಾಜ್ಯದ ಪತನದ ಬಳಿಕ ಸ್ವತಂತ್ರರಾಗಿ ನಾಯಕ ಅರಸರು ಅಥವಾ ಪಾಳೆಯಗಾರರು ಎಂದು ಪ್ರಸಿದ್ಧರಾದರು.

ಶಾಸನ ಮತ್ತು ಸಾಹಿತ್ಯ ಗ್ರಂಥಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಪಾಳೆಯಗಾರರು ಆಳ್ವಿಕೆ ನಡೆಸಿದ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರ ಮನೆತನಗಳು ಒಟ್ಟು ಏಳು : ರಾಯದುರ್ಗ, ಹರತಿ (ಹರ್ತಿಕೋಟೆ), ಬೇಲೂರು, ಚಿತ್ರದುರ್ಗ, ಸಂತೇಬೆನ್ನೂರು, ಹಟ್ಟಿ (ನಾಯಕನಹಟ್ಟಿ), ಮತ್ತಿನಾಡು (ಮತ್ತೋಡು).[೧೭] ಹೊಸದುರ್ಗ ತಾಲೂಕು ಪರಿಸರಕ್ಕೆ ಸಂಬಂಧಿಸಿದಂತೆ ಆಳಿದ ಪಾಳೆಯಗಾರರೆಂದರೆ ಮತ್ತೋಡು, ಬೂದಿಹಾಳು, ಸಂತೇಬೆನ್ನೂರು, ಬೇಲೂರು ಮತ್ತು ಚಿತ್ರದುರ್ಗ.

೨.೨.೧೦.೧. ಮತ್ತೋಡು ನಾಯಕ ಅರಸರು

ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಮತ್ತೋಡು ಸಹ ಒಂದು. ವೇದಾವತಿ ನದಿಕಣಿವೆಯಲ್ಲಿರುವ ಮತ್ತೋಡು ಅತ್ಯಂತ ಸಂಮೃದ್ಧಿ ನಾಡು. ಅರೆಮಲೆನಾಡಿನ ಪ್ರದೇಶದಲ್ಲಿರುವ ಮತ್ತೋಡನ್ನು ಜನಪದ ಸಾಹಿತ್ಯ 'ಮತಿವಂತರ ನಾಡು', 'ಮುತ್ತೈದೆಯರ ನಾಡು' ಎಂದು ಕರೆದಿದೆ.[೧೮] ಶಾಸನ ಮತ್ತು ಸಾಹಿತ್ಯಕ ದಾಖಲೆಗಳಲ್ಲಿ ಇದನ್ನು ಮತ್ತಿನಡು, ಮತ್ತಿನಾಡು,

ಮತ್ತನಡು, ಮತನಡು, ಮತ್ತೇಡು, ಮತ್ತೋಡು ಎಂದು ಕರೆಯಲ್ಪಟ್ಟಿದ್ದು, ಐತಿಹಾಸಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿತ್ತು. ಮತ್ತೋಡನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದವರೆ ಮತ್ತೋಡು ನಾಯಕ ಅರಸರು. ಕ್ರಿ.ಶ. ೧೬೦೪ ರಿಂದ ೧೭೭೮ರವರೆಗೆ ೧೭೫ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಮತ್ತೋಡು ಪಾಳೆಯಪಟ್ಟನ್ನು ಸ್ಥಾಪಿಸಿದವನು ಬೇಡಜನಾಂಗದ ಗಿರಿಯಪ್ಪನಾಯಕ. ಇವನು ತಿಮ್ಮಣ್ಣನಾಯಕ ಮತ್ತು ಲಕ್ಕವ್ವ ದಂಪತಿಗಳ ಮಗನೆಂದೂ, ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿದ ಊರೇ ಲಕ್ಕವ್ವನಹಳ್ಳಿ.

ಗಿರಿಯಪ್ಪನಾಯಕ ಅತ್ಯಂತ ಸುಂದರ, ಅಜಾನುಬಾಹು, ಶೂರ, ಒಳ್ಳೆಯ ಬೇಟೆಗಾರ ಆಗಿದ್ದನು. ತನ್ನದೆ ಆದ ಪಡೆಯನ್ನು ಕಟ್ಟಿಕೊಂಡು ಕಳ್ಳರನ್ನು ಸದೆಬಡಿದು, ಬೇಟೆಯಾಡುತ್ತಾ ಆ ಪ್ರಾಂತ್ಯದ ಸುತ್ತಲೂ ಪರಾಕ್ರಮಿ ಎಂದು ಹೆಸರಾಗಿದ್ದನು. ಇದರ ಸಮೀಪದಲ್ಲೇ ಬೂದಿಹಾಳ ನಲ್ಲವಲ್ಲಭರಾಯ ರಾಜನು ಆಳ್ವಿಕೆ ನಡೆಸುತ್ತಿದ್ದನು. ಅವನು ಗಿರಿಯಪ್ಪನಾಯಕನ ಜನಪ್ರಿಯತೆಯನ್ನು ಕೇಳಿದುದಲ್ಲದೆ ತನ್ನ ಪ್ರಾಂತ್ಯದಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದ ಕ್ರೂರಪ್ರಾಣಿ, ಕಳ್ಳಕಾಕರನ್ನು ಅಡಗಿಸಿದ್ದರಿಂದ ಸಂತೋಷಗೊಂಡು ಬಹುಮಾನವನ್ನು ಕಳುಹಿಸಿ ಕೊಟ್ಟನು. ಕೆಲವು ದಿನಗಳ ನಂತರ ವಲ್ಲಭರಾಯ ವಿಜಯನಗರದ ದೊರೆಯಾದ ವೆಂಕಟಪತಿಗೆ ಗೌರವ ಸಲ್ಲಿಸಲು ಪೆನುಗೊಂಡೆಗೆ ತೆರಳಿದನು. ಸಮಯನೋಡಿ ವೆಂಕಟಪತಿ ರಾಯರಿಗೆ ತನ್ನ ಪ್ರಾಂತ್ಯದಲ್ಲಿ ಹಾವಳಿ ಮಾಡುತ್ತಿದ್ದ ಕ್ರೂರಪ್ರಾಣಿಗಳು ಮತ್ತು ದರೋಡೆಕೋರರನ್ನು ಅಡಗಿಸಿ ಶಾಂತಿ ಸ್ಥಾಪಿಸಲು ಅಜಾನುಬಾಹುವೂ ಸುಂದರನೂ ಆದ ಗಿರಿಯಪ್ಪನಾಯಕನೇ ಕಾರಣ ಎಂದು ಅವನ ವ್ಯಕ್ತಿತ್ವದ ಬಗೆಗೆ ದೊರೆಗಳಿಗೆ ತಿಳಿಸಿದನು. ದೊರೆಗಳು ಅವನನ್ನು ನೋಡಲು ಬಯಸಿದನು. ಗಿರಿಯಪ್ಪ ನಾಯಕನನ್ನು ನೋಡಿದ ವೆಂಕಟಪತಿ ಅವನನ್ನು ತಮ್ಮ ಬಳಿಯಲ್ಲಿಯೆ ಇಟ್ಟುಕೊಂಡನು. ಇದೇ ವೇಳೆಯಲ್ಲಿ ರಾಜಧಾನಿಯಲ್ಲಿ ರಾಜಗೋಪಾಲ ಎಂಬ ಆನೆ ಸಿಟ್ಟಿಗೆದ್ದು ಬೀದಿಗಳಲ್ಲಿ ಹಾವಳಿ ಮಾಡುತ್ತಿದ್ದಾಗ ಇದನ್ನು ಮಣಿಸಲು ಯಾವ ವೀರನೂ ಮುಂದೆ ಬರದಿದ್ದಾಗ, ಇದೇ ಸಂದರ್ಭವನ್ನು ಕಾಯುತ್ತಿದ್ದ ಗಿರಿಯಪ್ಪನಾಯಕ ಅದನ್ನು ಮಣಿಸಿ ಕೊಂದುಹಾಕಿದನು. ಈ ಸಾಹಸವನ್ನು ಕಂಡ ವೆಂಕಟಪತಿಯು ವಲ್ಲಭರಾಯನ ಅರಿಕೆಯ ಮೇರೆಗೆ ಗಿರಿಯಪ್ಪನನ್ನು ಲಕ್ಕವ್ವನಹಳ್ಳಿಗೆ ಪಾಳೆಯಗಾರನಾಗಿ ನೇಮಿಸಿದನು.

ವಿಜಯನಗರದ ದೊರೆ ವೆಂಕಟಪತಿಯು ಗಿರಿಯಪ್ಪನಾಯಕನಿಗೆ ಪಾಳೆಯಗಾರರ ಹುದ್ದೆ ನೀಡುವುದರ ಜೊತೆಗೆ ಕುದುರೆ, ಪಲ್ಲಕ್ಕಿ, ಆನೆ, ಎರಡು ಶ್ವೇತಛತ್ರಿ, ಐದು ಬಣ್ಣದ ರೇಷ್ಮೆ ಮುಂಡಾಸು, ಮುತ್ತಿನಸರ, ಹಳದಿಧ್ವಜ, ಬಾಸಿಂಗ, ಎದೆಕಾವು, ಪಲ್ಲಕ್ಕಿಗೆ ಬಳಸುವ ಸಿಂಹ ತಲೆಯ ಅಮೂಲ್ಯ ಕಾಣಿಕೆಗಳನ್ನು ಕೊಟ್ಟನು. ಇವುಗಳನ್ನು ತನ್ನ ಮುಂದೆ ಉಪಯೋಗಿಸುವ ಅನುಮತಿಯನ್ನು ನೀಡಿ, ಅವನಿಗೆ 'ಶ್ರೀಮನ್ ಮಹಾನಾಯಕ ಶಿರೋಮಣಿ' ಎಂಬ ಬಿರುದನ್ನು ನೀಡಿ ಸೂರ್ಯ ಚಂದ್ರರು ಇರುವ ತನಕ ಈ ಪ್ರಾಂತ್ಯವನ್ನು ಆಳ್ವಿಕೆ ಮಾಡಬಹುದು ಎಂದು ದತ್ತಿಕೊಟ್ಟನು. ಕ್ರಿ.ಶ. ೧೬೦೪ರಲ್ಲಿ ಅಮರನಾಯಕ ಹುದ್ದೆಗೆ ನೇಮಕಗೊಂಡ ಗಿರಿಯಪ್ಪನಾಯಕನು ಅದೇ ವರ್ಷ ಲಕ್ಕವ್ವನ ಹಳ್ಳಿಯಲ್ಲಿ ಅರಣ್ಯ ನಿರ್ಮೂಲನೆಮಾಡಿ ಕೋಟೆ ಕಟ್ಟಿದನು. ಅಲ್ಲದೆ

ಬೇವಿನಹಳ್ಳಿ ಮತ್ತು ಮಾಡದಕೆರೆ ಹಳ್ಳಿಗಳನ್ನು ಸ್ಥಾಪಿಸಿದನು.[೯೮] ಕೆಲವು ದಿನಗಳ ಬಳಿಕ ಪುನಹ ವೆಂಕಟಪತಿಯ ಆಹ್ವಾನದ ಮೇರೆಗೆ ಪೆನುಗೊಂಡೆಗೆ ತೆರಳಿ ಸಾಹಸ ಪ್ರದರ್ಶಿಸಿದನು. ವೆಂಕಟಪತಿಯು ಅವನ ಧೈರ್ಯವನ್ನು ಮೆಚ್ಚಿ ತನ್ನ ಬಳಿಯಲ್ಲಿಯೆ ಇಟ್ಟುಕೊಂಡನು. ಗಿರಿಯಪ್ಪ ನಾಯಕನ ಮಗ ದೊಡ್ಡಳನಾಯಕನನ್ನು ಮತ್ತೋಡು ಸಂಸ್ಥಾನಕ್ಕೆ ಅರಸನಾಗಿ ನೇಮಕ ಮಾಡಿದನು.[೯೯] ಹೀಗೆ ಮತ್ತೋಡು ಪಾಳೆಯಪಟ್ಟು ಸ್ಥಾಪನೆಯಾದದ್ದು ವಿಜಯನಗರದ ಪೆನುಗೊಂಡೆ ವೆಂಕಟಪತಿಯ ಪ್ರೇರಣೆಯಿಂದ.

ಗಿರಿಯಪ್ಪನಾಯಕನ ಬಳಿಕ ಅವನ ಮಗ ದೊಡ್ಡಳನಾಯಕ, ಅವನಾದ ಮೇಲೆ ಅವನ ಮಗ ಹಾಲಪ್ಪನಾಯಕ, ತರುವಾಯ ಅವನ ಮಗ ದೊಡ್ಡಳನಾಯಕ ಇವರು ಆಳಿದಂತೆ ಕಾಣುತ್ತದೆ.[೧೦೦] ಕ್ರಿಶ ೧೬೭೫ರ ಒಂದು ಶಾಸನವು ದೊಡ್ಡಳನಾಯಕನಿಗೆ ಸಂಬಂಧಿಸಿದ್ದು ಚಿನ್ನದ ಗಿರಿಯಪ್ಪನಾಯಕನ ವಿವಾಹದ ಸಂದರ್ಭದಲ್ಲಿ ದೊರೆ ಕ್ಷೌರಿಕರ ಮೇಲಿನ ತೆರಿಗೆಯನ್ನು ಬಿಟ್ಟಿದ್ದನ್ನು ತಿಳಿಸುತ್ತದೆ.[೧೦೧] ಕ್ರಿ.ಶ.೧೭೩೬ರ ಶಾಸನದ ಪ್ರಕಾರ ದೊಡ್ಡಳನಾಯಕನ ನಂತರ ಅವನ ಮಗ ಸಂಗಪ್ಪನಾಯಕ ಆಳಿದುನು.[೧೦೨] ಸಂಗಪ್ಪನಾಯಕನು ಅಪಾರ ಶೂರ, ಧೀರನೂ ಆಗಿದ್ದನು. ಇವನ ನಂತರ ಅಧಿಕಾರಕ್ಕೆ ಬಂದವನೇ ಮಗ ಹಾಲಪ್ಪನಾಯಕ. ಶಾಸನಗಳಲ್ಲಿ ಇವನನ್ನು ಹಾಲರಾಜ, ಹಿರಿಯ ಹಾಲಪ್ಪನಾಯಕ ಎಂದು ಕರೆಯಲಾಗಿದೆ.[೧೦೩] ಈತ ಕ್ರಿ.ಶ.೧೭೦೭ ರಿಂದ ೧೭೩೬ರವರೆಗೆ ಆಳ್ವಿಕೆ ನಡೆಸಿದನು. ಹಿರಿಯ ಅಥವಾ ದೊಡ್ಡ ಹಾಲಪ್ಪನಾಯಕ ಉತ್ತಮ ಆಡಳಿತಗಾರ, ವಿದ್ಯಾಪ್ರೇಮಿ, ಪ್ರಜಾಚಿಂತಕ, ಧರ್ಮಾಭಿಮಾನಿಯೂ ಆಗಿದ್ದನು. ಇವನು ಕ್ರಿ.ಶ. ೧೭೧೦ರಲ್ಲಿ ಮತ್ತೋಡಿನ ನಗರದ ಸುತ್ತಲೂ ಭದ್ರವಾದ ಕೋಟೆ ಕೊತ್ತಲ, ಬತೇರಿ, ಮಹಾದ್ವಾರ, ದೇವಾಲಯ, ಅರಮನೆ, ಉಗ್ರಾಣ, ಗಜಶಾಲೆ, ಅಶ್ವಶಾಲೆ, ಸದರಚಾವಡಿ, ಸಚಿವ ಗೃಹ, ಬಾವಿ, ರಾಜಬೀದಿಗಳನ್ನು ನಿರ್ಮಿಸಿದನು.[೧೦೪] ಶೈವಶಾಸ್ತ್ರದಲ್ಲಿ ನಿಪುಣನಾಗಿದ್ದ ಈ ನಾಯಕನ ಬುದ್ಧಿಮತ್ತೆಯನ್ನು ಕಂಡು ಆಕರ್ಷಿತರಾದ ಮತಿವಂತರು, ವ್ಯಾಪಾರ ಕುಶಲಿಗಳು ಮತ್ತೋಡಿಗೆ ಬಂದು ನೆಲೆಸಿದರು. ದೊಡ್ಡಹಾಲಪ್ಪನಾಯಕನ ಮತ್ತೊಂದು ಮುಖ್ಯ ಕಾರ್ಯ, ಗಂಜಿಗೆರೆ ಅಗ್ರಹಾರವನ್ನು ನಿರ್ಮಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ್ದು, ಶ್ರೀಶೈಲದ ಕಡೆಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳ ಕೃಪೆಗೆ ಪಾತ್ರನಾದ ಈತ ಸ್ವಾಮಿಗಳಿಗೆ ಮಠವೊಂದನ್ನು ಕಟ್ಟಿಸಿಕೊಟ್ಟನು.[೧೦೫]

ಹಾಲಪ್ಪನಾಯಕನ ಕಾಲದಲ್ಲಿ ಮತ್ತೋಡಿನ ನಾಯಕ ಅರಸರು ಲಿಂಗದೀಕ್ಷೆ ಪಡೆದು ವೀರಶೈವರಾದುದು ಕಂಡುಬರುತ್ತದೆ. ಹೀಗಾಗಿ ಇವರ ಚರಿತ್ರೆ ಧಾರ್ಮಿಕವಾಗಿ ಹೊಸ ತಿರುವನ್ನು ಪಡೆದುಕೊಂಡಿತು. ಈತನು ತಂದೆ ತಾಯಿಯರಿಗೆ ಶಿವಸಾನಿಧ್ಯ ಲಭಿಸಲೆಂದು ಕ್ರಿ.ಶ. ೧೭೦೭ರಲ್ಲಿ ಮತ್ತೋಡಿನಲ್ಲಿ ಮುರಿಗೆಸ್ವಾಮಿಗಳ ಮಠವೊಂದನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಅರೆಹಳ್ಳಿಯನ್ನು ದತ್ತಿ ಬಿಟ್ಟನು.[೧೦೬] ಇವನು ಕ್ರಿ.ಶ. ೧೭೧೯ರಲ್ಲಿ ಚಿಗತಿಮ್ಮಣ್ಣ ಎಂಬುವನಿಗೆ ಶಿವಾರ್ಪಿತವಾಗಿ ಒಂದು ಗದ್ದೆ ನೀಡಿದ್ದಾಗಿ ಶಾಸನದಲ್ಲಿ ಹೇಳಿದೆ.[೧೦೭] ಕ್ರಿ.ಶ. ೧೭೪೯ರಲ್ಲಿ ಬೇವಿನಹಳ್ಳಿ ಕರಿಯಮ್ಮ ದೇವಿಗೆ ಸಲ್ಲುವ ಕಪ್ಪಕಾಣಿಕೆ ಸರ್ವಮಾನ್ಯ ಅದಕ್ಕೆ ಯಾರು ತಪ್ಪಬಾರದೆಂದು ಕಟ್ಟಳೆ ಮಾಡಿದನು.

ವಿವಿಧ ದೇವರ ಪೂಜಾ ಪಟ್ಟಾಧಿಕಾರವನ್ನು ಹಲವು ಗೌಡರುಗಳಿಗೆ ವಹಿಸಿದುದನ್ನು ಕ್ರಿ.ಶ. ೧೭೩೦ರ ಶಾಸನ ತಿಳಿಸುತ್ತದೆ.[೧೪೮] ತನ್ನ ಪೂರ್ವಿಕರು ಸ್ಥಾಪಿಸಿದ್ದ ಹಂಜಿಗೆರೆ ಅಗ್ರಹಾರ ಹಾಳು ಬಿದ್ದಿರುವುದನ್ನು ಕಂಡು ಕ್ರಿ.ಶ. ೧೭೩೬ರಲ್ಲಿ ಜೀರ್ಣೋದ್ಧಾರ ಮಾಡಿಸಿದನು. ಹೀಗೆ ಹಾಲಪ್ಪನಾಯಕನ ಕಾಲ ಅನೇಕ ರೀತಿಯ ಚಟುವಟಿಕೆಗಳಿಂದ ಕೂಡಿತ್ತು.

ಹಾಲಪ್ಪನಾಯಕನಿಗೆ ಸಿದ್ಧರಾಮಪ್ಪ ಮತ್ತು ದೊಡ್ಡಣ್ಣನೆಂಬ ಇಬ್ಬರು ಮಕ್ಕಳು ಇದ್ದುದಾಗಿ ಶಾಸನವೊಂದು ಸೂಚಿಸುತ್ತದೆ.[೧೪೯] ಇವರಲ್ಲದೆ ಸಂಗಪ್ಪನಾಯಕ ಎಂಬ ಇನ್ನೊಬ್ಬ ಮಗನಿದ್ದುದಾಗಿ ದಾಖಲೆಯೊಂದು ತಿಳಿಸುತ್ತದೆ.[೧೫೦] ಈ ಸಿದ್ಧರಾಮಪ್ಪನಾಯಕನನ್ನು ಸಿದ್ಧಪ್ಪನಾಯಕನೆಂದು; ದೊಡ್ಡಣ್ಣನಾಯಕನನ್ನು ಹಾಲಪ್ಪನಾಯಕನೆಂದು ಕರೆಯಲಾಗಿದೆ. ಇವರಲ್ಲಿ ಸಿದ್ಧಪ್ಪನಾಯಕನು ಈ ಮನೆತನದ ಪೂರ್ವಿಕರಂತೆ ಪರಾಕ್ರಮಿ, ಸುಂದರ, ಅಜಾನೂಬಾಹುವೂ ಆಗಿದ್ದರಿಂದ ತಂದೆ ಅವನನ್ನು ಪಟ್ಟಕ್ಕೆ ಯೋಗ್ಯನೆಂದು ಯೋಚಿಸಿ ಪಟ್ಟ ಕಟ್ಟಿದನು. ಇದರಿಂದ ಕೋಪಿಸಿಕೊಂಡ ದೊಡ್ಡಣ್ಣನಾಯಕ (ಹಾಲಪ್ಪನಾಯಕ) ಪ್ರಬಲರಾಗಿದ್ದ ಚಿತ್ರದುರ್ಗ ಪಾಳೆಯಗಾರರಲ್ಲಿಗೆ ಹೋಗಿ ಪಟ್ಟಕ್ಕೆ ಬರಲು ಅವರ ನೆರವನ್ನು ಯಾಚಿಸಿದನು. ಚಿತ್ರದುರ್ಗದವರ ಬಳಿ ವರ್ಷಕ್ಕೆ ಮೂರು ಸಾವಿರ ಪಗೋಡಗಳ ಕಪ್ಪ ಸಲ್ಲಿಸಬೇಕೆಂಬ ಒಪ್ಪಂದದ ಮೇರೆಗೆ ನೆರವು ನೀಡಲು ಒಪ್ಪಿ ಮತ್ತೋಡಿನ ಮೇಲೆ ದಾಳಿ ಮಾಡಿದರು. ಹಾಲಪ್ಪನಾಯಕನನ್ನು ಪಟ್ಟಕ್ಕೆ ಕೂರಿಸಿ ಸಿದ್ದಪ್ಪ ನಾಯಕನನ್ನು ಸೆರೆಹಿಡಿದು ತಂದು ಚಿತ್ರದುರ್ಗದ ಕಾರಾಗೃಹದಲ್ಲಿಟ್ಟನು.[೧೫೧]

ಚಿತ್ರದುರ್ಗದ ಹಿರೆಮೆದಕೇರಿನಾಯಕನ ಪುತ್ರಿ ದ್ಯಾಮವ್ವ ಸಿದ್ದಪ್ಪನಾಯಕನಿಗೆ ಆಕರ್ಷಿತಳಾಗಿ ವಿವಾಹವಾಗ ಬಯಸಿದಳು. ಆಗ ಚಿತ್ರದುರ್ಗ ನಾಯಕ ಅರಸರು ಸಿದ್ದಪ್ಪನಾಯಕನು ವೀರಶೈವನಾಗಿದ್ದರೂ ಬೇಡಮೂಲದವನಾಗಿದ್ದರಿಂದ ಇವರ ವಿವಾಹಕ್ಕೆ ಒಪ್ಪಿ ರಾಜಕುಮಾರಿಗೆ ಲಿಂಗಧಾರಣೆ ಮಾಡಿ ವಿವಾಹ ಮಾಡಿಸಿಕೊಟ್ಟರು. ಸೆರೆಯಾಳಾಗಿದ್ದವನು ಈಗ ಅಳಿಯನಾದ್ದರಿಂದ ಚಿತ್ರದುರ್ಗ ನಾಯಕರು ಹಿಂದೆ ತಾವೇ ಪಟ್ಟಕ್ಕೆ ಕೂರಿಸಿದ್ದ ಹಾಲಪ್ಪನಾಯಕನನ್ನು ಗದ್ದುಗೆಯಿಂದ ಇಳಿಸಿ ಮತ್ತೆ ಸಿದ್ದಪ್ಪನಾಯಕನನ್ನು ರಾಜನನ್ನಾಗಿ ಮಾಡಿದರು. ಈ ಕಾರಣದಿಂದ ಮತ್ತೋಡು ಚಿತ್ರದುರ್ಗ ನಾಯಕರ ಹಿಡಿತಕ್ಕೆ ಒಳಪಡುವಂತಾಯಿತು. ಈ ಸಿದ್ದಪ್ಪನಾಯಕನಿಗೆ ಹಾಲಪ್ಪನಾಯಕ, ಸಂಗಪ್ಪನಾಯಕ, ದೊಡ್ಡಳನಾಯಕ ಎಂಬ ಮೂವರು ಮಕ್ಕಳು ಇದ್ದು ಇವರಲ್ಲಿ ಹಿರಿಯನಾದ ಹಾಲಪ್ಪನಾಯಕನು ತನ್ನ ತಂದೆಯ ಮರಣಾನಂತರ ಪಟ್ಟಕ್ಕೆ ಬಂದನು. ಸಂಸ್ಕೃತ ಕಾವ್ಯಗಳಲ್ಲಿ ಪಾಂಡಿತ್ಯ ಹೊಂದಿದ್ದ ಹಾಲಪ್ಪನಾಯಕ ಚಿತ್ರದುರ್ಗ ನಾಯಕ ಅರಸು ಮನೆತನದ ಹೆಣ್ಣುಮಗಳನ್ನು ವಿವಾಹವಾಗಿದ್ದನು. ಇವನ ಕಾಲದಲ್ಲಿ ಮೆದಕೇರಿನಾಯಕನಿಗೆ ಮೂರುಸಾವಿರ ಪಗೋಡಗಳನ್ನು ಕೊಡಲು ನಿರಾಕರಿಸಿದನು. ಮೆದಕೇರಿನಾಯಕನು ಮತ್ತೋಡಿನ ಗೌಡ, ಶಾನುಭೋಗರನ್ನು ಕರೆಸಿ ಲೆಕ್ಕಪತ್ರಗಳನ್ನು ಖುದ್ದಾಗಿ ಪರಿಶೀಲಿಸಲಾಗಿ ನಿಜವಾಗಿ ಮತ್ತೋಡಿನ ನಾಯಕನಿಗೆ ಹೆಚ್ಚು ಕಪ್ಪ ಕೊಡಲು ಸಾಧ್ಯವಿಲ್ಲವೆಂದು ತಿಳಿದು, ಮೊದಲಿನ ಕಪ್ಪದ ಮೊತ್ತವನ್ನೇ ಸ್ವೀಕರಿಸಲು ಒಪ್ಪಿದನೆಂದು ತಿಳಿದುಬರುತ್ತದೆ.[೧೫೨] ಆ ತರುವಾಯದಲ್ಲಿ ಕ್ರಿ.ಶ. ೧೭೭೯ರಲ್ಲಿ ಚಿತ್ರದುರ್ಗದ ಮೇಲೆ ಹೈದರಾಲಿಯು ದಾಳಿಮಾಡಿದಾಗ ಹಾಲಪ್ಪನಾಯಕನು ಅವನ ಜೊತೆ ಸೇರಿದ್ದನು.

ಚಿತ್ರದುರ್ಗ ನಾಯಕರ ದನಗಳನ್ನು ಹಿಡಿಯುವುದರ ಮೂಲಕ ಬೂದಿಹಾಳಿನ ಪ್ರದೇಶದಲ್ಲಿ ಯುದ್ಧ ನಡೆಯಿತು. ಆಗ ಹೈದರಾಲಿಯ ಕಡೆಯವರು ಸೋತು ಹೋಡಿಹೋದರು. ಹಾಲಪ್ಪನಾಯಕ ಮತ್ತೋಡಿಗೆ ಓಡಿಹೋದನು. ನಂತರ ಚಿತ್ರದುರ್ಗ ಪಾಳೆಯಗಾರರಿಗೆ ಸೆರೆಸಿಕ್ಕಂತೆ ತಿಳಿದುಬರುತ್ತದೆ. ೧೭೭೯ರಲ್ಲಿ ಹೈದರಾಲಿ ಮತ್ತೆ ಚಿತ್ರದುರ್ಗದ ಮೇಲೆ ದಾಳಿಮಾಡಿ ಮೆದಕೇರಿನಾಯಕ ಸೆರೆಯಾದಾಗ ಹಾಲಪ್ಪನಾಯಕನಿಗೆ ಬಿಡುಗಡೆಯಾಯಿತಾದರೂ ಮತ್ತೋಡಿನ ಪಟ್ಟ ಮಾತ್ರ ದೊರೆಯಲಿಲ್ಲ. ಹೀಗೆ ಅಧಿಕಾರ ಭ್ರಷ್ಟನಾದ ಹಾಲಪ್ಪನಾಯಕ ಹಾಗಲವಾಡಿಗೆ ಹೋಗಿ ಅನೇಕ ವರ್ಷ ಅಲ್ಲೇ ಇದ್ದು ಮತ್ತೋಡಿಗೆ ಮರಳಿ ಬಂದು ಒಂದು ಗುಡಿಸಲಲ್ಲಿ ಇದ್ದನೆಂದು ಫ್ರಾನ್ಸಿಸ್ ಬುಖನನ್ ಹೇಳಿದ್ದಾನೆ.[೧೩೩]

ಮತ್ತೋಡು ನಾಯಕ ಅರಸರು ತಾವು ಆಳುವ ಸಂದರ್ಭದಲ್ಲಿ ತಮ್ಮ ಪ್ರಾಂತ್ಯದಲ್ಲಿ ಅನೇಕ ಸಾಮಾಜಿಕ ಆಡಳಿತಾತ್ಮಕ, ಧಾರ್ಮಿಕ ಹಾಗೂ ಆರ್ಥಿಕ ಕಾರ್ಯಗಳನ್ನು ಮಾಡಿ ಪ್ರಗತಿಪರರಾಗಿದ್ದುದನ್ನು ಹಲವು ಶಾಸನ ಹಾಗೂ ಸಾಹಿತ್ಯಕ ದಾಖಲೆಗಳು ಮಾಹಿತಿ ನೀಡುತ್ತವೆ. ಹಾಲಪ್ಪನಾಯಕ ತನ್ನ ತಂದೆ ತಾಯಿಗೆ ಶಿವಸಾನಿಧ್ಯ ಲಭಿಸಲೆಂದು ಕ್ರಿ.ಶ. ೧೭೦೭ರಲ್ಲಿ ಮತ್ತೋಡಿನಲ್ಲಿ ಮುರಿಗೆಸ್ವಾಮಿಗಳ ಮಠವೊಂದನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಅರೆಹಳ್ಳಿಯನ್ನು ದತ್ತಿ ಬಿಟ್ಟನು.[೧೩೪] ಶ್ರೀಶೈಲದ ಕಡೆಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಮಠವನ್ನು ಕಟ್ಟಿಸಿದನು.[೧೩೫] ಸಂಗಪ್ಪನಾಯಕನೆಂಬುವವನು ಮುರಿಗಾಸ್ವಾಮಿಮಠ, ಚಿತ್ರಮಠ ಹಾಗೂ ಗೂಳಿಹಳ್ಳಿ ಹೊಸಮಠ ಸೇರಿದಂತೆ ಮೂರು ಮಠಗಳನ್ನು ಕಟ್ಟಿಸಿದನು.[೧೩೬] ಮತ್ತೋಡಿನ ಸಿದ್ಧರಾಮ, ಬೇವಿನಹಳ್ಳಿ ಕರಿಯಮ್ಮ, ಕಾಶೀಹಳ್ಳಿ ಹನುಮಂತ, ನಿರುವುಗಲ್ಲು ಹರಿಹರ, ಅಂತರಘಟ್ಟದೇವತೆ, ರೇವಣಸಿದ್ದೇಶ್ವರ, ಘಟ್ಟದ ಮೆರಾದೇವರು ಮುಂತಾದ ದೇವರುಗಳ ಪೂಜಾದಿ ಕಾರ್ಯಗಳಿಗೆ ವಿಶೇಷ ಉಸ್ತುವಾರಿ ಕಟ್ಟುಪಾಡುಗಳನ್ನು ಹಾಲಪ್ಪನಾಯಕ ಮಾಡಿದುದಾಗಿ ತಿಳಿದುಬರುತ್ತದೆ.[೧೩೭] ಅಲ್ಲದೆ ಈ ಮನೆತನದ ನಾಯಕರು ಭಟ್ಟರಹಳ್ಳಿಯ ಬನಶಂಕರಿ ಹಾಗೂ ಯಳನಾಡು ಸಿದ್ಧರಾಮೇಶ್ವರ ದೇವರುಗಳಿಗೆ ನಡೆದುಕೊಳ್ಳುತ್ತಿದ್ದರು.[೧೩೮] ಮೇಲಿನ ಅಂಶಗಳಿಂದ ಧಾರ್ಮಿಕವಾದ ಅನೇಕ ಕಾರ್ಯಗಳನ್ನು ಕೈಗೊಂಡಿದ್ದರು ಎಂಬುದು ವೇದ್ಯವಾಗುತ್ತದೆ.

ಮತ್ತೋಡು ನಾಯಕ ಅರಸರು ಕ್ರಿ.ಶ. ೧೬೦೪ ರಿಂದ ೧೭೭೯ರವರೆಗೆ ಒಟ್ಟು ೧೭೫ ವರ್ಷಗಳ ಕಾಲ ಆಳ್ವಿಕೆ. ಇವರ ಆಳ್ವಿಕೆಯ ಅವಧಿ ಕಡಿಮೆ ಇದ್ದರೂ ಆಡಳಿತ ಶಾಂತಿಯುತ ವಾಗಿತ್ತು. ಇವರು ಕೃಷಿ, ಕುಶಲಕಲೆ, ವ್ಯಾಪಾರ, ಉಧ್ಯಮಗಳಿಗೆ ಪ್ರೋತ್ಸಾಹ ಕೊಟ್ಟಿದ್ದರು. ಪ್ರಜಾಹಿತ ಕಾರ್ಯಗಳಲ್ಲಿ ಆಸಕ್ತಿ ವಹಿಸಿದ್ದರು. ಕೃಷಿಗೆ ಪ್ರಾಮುಖ್ಯತೆ ನೀಡಿದ್ದು, ಕೆರೆ ಕಾಲುವೆಗಳನ್ನು ಕಟ್ಟಿಸಿದ್ದಲ್ಲದೆ ಹಳೆಯ ಮತ್ತು ಹೂಳು ತುಂಬಿದ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರು. ಮತ್ತೋಡಿನಲ್ಲಿ ಮುಖ್ಯವಾದ ಎರಡು ಕೆರೆಗಳಿದ್ದು, ಅವುಗಳಲ್ಲಿ 'ಹಳೆಯ ಕೆರೆ' ಅತ್ಯಂತ ದೊಡ್ಡದಾಗಿದ್ದಿತು.[೧೩೯] ಮತ್ತೋಡು ಗಾಜಿನ ಬಳೆಗಳಿಗೆ ಪ್ರಸಿದ್ಧವಾಗಿದ್ದು, ಇಲ್ಲಿನ ಕಪ್ಪು, ಹಸಿರು, ನೀಲಿ, ಕೆಂಪು ಮತ್ತು ಹಳದಿ ಬಣ್ಣಗಳ ಕಲೆಗಾರಿಕೆಯಿಂದ ಹೊಳಪಿನಿಂದ ಆಕರ್ಷಕವಾಗಿರುತ್ತಿದ್ದವು. ಕಪ್ಪು ಬಣ್ಣದ ಬಳೆಗಳಿಗೆ ಹೆಚ್ಚು ಬೇಡಿಕೆ ಇತ್ತು.[೧೪೦] ಒಟ್ಟಾರೆ ಮತ್ತೋಡು ನಾಯಕ ಅರಸರು ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಚರಿತ್ರೆಯಲ್ಲಿ ವಿಶೇಷವಾದ ಸ್ಥಾನವನ್ನು

ಪಡೆದಿದ್ದಾರೆ. ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು.

೨.೨.೧೦.೨. ಬೂದಿಹಾಳು ನಾಯಕ ಅರಸರು

ಹೊಸದುರ್ಗ ತಾಲೂಕು ಪರಿಸರದ ಪ್ರಮುಖ ಪಾಳೆಯಪಟ್ಟುಗಳಲ್ಲಿ ಬೂದಿಹಾಳು ಸಹ ಒಂದು. ಹೊಸದುರ್ಗ ಪಟ್ಟಣದಿಂದ ಹುಳಿಯಾರುವಿಗೆ ಹೋಗುವ ಮಾರ್ಗದಲ್ಲಿ ಆಗ್ನೇಯಕ್ಕೆ ೧೬ ಮೈಲಿಗಳ ದೂರದಲ್ಲಿರುವುದೇ ಐತಿಹಾಸಿಕ ಬೂದಿಹಾಳು ನಗರ. ಇದು ಈ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದು. ಇದಕ್ಕೆ ಭಸ್ಮಪುರ, ವಿಭೂತಿಪುರ, ಬೂದಿಹಾಲು, ಬೂದಿಹಾಳು ಎಂದೂ,[೧೧] ಈ ಪರಿಸರದಲ್ಲಿ ತೆಂಗಿನ ಫಸಲು ಅಧಿಕವಾಗಿದ್ದರಿಂದ ಹಾಗೂ ಬೂದಿಹಾಳು ಹೆಸರಿನ ಊರುಗಳಿಂದ ಪ್ರತ್ಯೇಕಿಸಲು ಕಾಯಿಬೂದಿಹಾಳು ಎಂದು ಕರೆಯಲಾಗಿದೆ.[೧೨] ಶಾಸನ ಹಾಗೂ ಸಾಹಿತ್ಯ ಗ್ರಂಥಗಳಲ್ಲಿ ಹರಪುರ, ಬೇದಂಡಕೋಟೆ, ಅವನಿಗಿರಿದುರ್ಗ, ಗಿರಿಜಾನಗರ, ಸಿರುಮನನಾಡು ಎಂಬುದಾಗಿ ಕರೆಯಲಾಗಿದೆ.[೧೩] ಬೂದಿಹಾಳು ಹೆಸರಿನ ಬಗ್ಗೆ ಸ್ಥಳೀಯವಾದ ಕೆಲವು ಐತಿಹ್ಯಗಳಿವೆ. "ಬಹುಕಾಲದ ಹಿಂದೆ, ಈ ಸ್ಥಳದ ಗೋವುಗಳು ಹೊರಗೆ ಸಂಮೃದ್ಧ ಹಸಿರು ಮೇಯ್ದು, ಹೆಬ್ಬಾಗಿಲು ಮೂಲಕ ಊರನ್ನು ಪ್ರವೇಶಿಸುವಾಗ ಒಂದಕ್ಕೊಂದು ಒತ್ತಿಯಾಡಿ, ಅವುಗಳ ತುಂಬು ಕೆಚ್ಚಲುಗಳಿಂದ ಹಾಲು ಸೋರುತ್ತಿದ್ದಿತು. ಕೊಟ್ಟಿಗೆಗಳಲ್ಲಿಯೂ ಹಾಲು ಸೇರಿ ಹರಡಿರುತ್ತಿದ್ದಿತು 'ಬೂದಿ'ಯೊಂದಿಗೆ ಮಿಶ್ರಣವಾಗುತ್ತಿದ್ದರ ಪರಿಣಾಮ 'ಬೂದಿಹಾಲು' (ಬೂದಿಹಾಳು) ಹೆಸರೇ ಊರಿಗೆ ಅನ್ವರ್ಥವಾಯಿತು". ಇನ್ನೊಂದು ಐತಿಹ್ಯದ ಪ್ರಕಾರ "ಈ ಪ್ರದೇಶದಲ್ಲಿ ವಿಭೂತಿಯುಂಡೆಗಳು ಅತ್ಯಧಿಕವಾಗಿ ತಯಾರಿಸಲ್ಪಡುತ್ತಿದ್ದರಿಂದ 'ವಿಭೂತಿಪುರ', 'ಭಸ್ಮಪುರ' ಹೆಸರುಗಳು ಬಂದವು".[೧೪] ಹೀಗೆ ಬೂದಿಹಾಳು ಸ್ಥಳನಾಮ ಕುರಿತು ಶಾಸನ-ಸಾಹಿತ್ಯ-ಜಾನಪದ ಐತಿಹ್ಯಗಳು ವಿವಿಧ ಅಂಶಗಳನ್ನು ಹೇಳುತ್ತವೆ. ಆದರೆ ಬೂದಿಹಾಳು ಸ್ಥಳನಾಮ ಪುರಾತತ್ವ ದೃಷ್ಟಿಯಿಂದ ಮಹತ್ವ ಪಡೆದಿದ್ದು, ಇದೊಂದು ಪ್ರಾಗೈತಿಹಾಸಿಕ ಹಿನ್ನೆಲೆಯಿಂದ ನಿಷ್ಪತ್ತಿಗೊಂಡಿದೆ. ಇಲ್ಲಿನ ಬೂದಿ ಮಣ್ಣು ಸಹ ಇದಕ್ಕೆ ಮತ್ತೊಂದು ಕಾರಣವಾಗಿದೆ. ಬೂದಿಹಾಳು ಹೆಸರಿನ ಊರುಗಳು ಕರ್ನಾಟಕದಲ್ಲಿ ಹಲವಾರಿದ್ದರೂ ಪಾಳೆಯಪಟ್ಟೊಂದರ ಕೇಂದ್ರವಾಗಿ ಹೆಸರಾದದ್ದು ಹೊಸದುರ್ಗ ತಾಲೂಕಿನ ಬೂದಿಹಾಳು ಮಾತ್ರ[೧೫] ಬೂದಿಹಾಳು ೧೨ನೆಯ ಶತಮಾನಕ್ಕಾಗಲೇ ಅಸ್ಥಿತ್ವದಲ್ಲಿದ್ದ ಪ್ರಸಿದ್ಧ ಊರಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.[೧೬] ಈಗ ಇದರ ಹೆಸರು ಶ್ರೀರಾಂಪುರ ಎಂದು ಸುಪರಿಚಿತವಾಗಿದೆ.[೧೭] ಬೂದಿಹಾಳು ಪಾಳೆಯಪಟ್ಟನ್ನು ಆಳಿದ ಸಿರುಮಣ ನಾಯಕ ನಿಂದಾಗಿಯೇ ಇದರ ಸ್ಥಳನಾಮ 'ಶ್ರೀರಾಂಪುರ' ಎಂದು ಬದಲಾವಣೆಗೊಂಡಿರಬೇಕೆಂದು ಕೆಲವು ವಿಚಾರವಂತರ ಅಭಿಪ್ರಾಯವಾಗಿದೆ.[೧೮] ಶ್ರೀರಾಂಪುರದ ಸ್ಥಳನಾಮ ನಿಷ್ಪತ್ತಿಯನ್ನು ಹೀಗೆ ಕಾಣಬಹುದು; ಸಿರುಮಣಪುರ>ಸಿರುಮನಪುರ>ಸಿರುಮಪುರ>ಶಿರುಮಪುರ>ಶ್ರೀರಾಮಪುರ>ಶ್ರೀರಾಂಪುರ.[೧೯]

ಬೂದಿಹಾಳನ್ನು ಕೇಂದ್ರವಾಗಿ ಮಾಡಿಕೊಂಡು ಪಾಳೆಯಪಟ್ಟೊಂದನ್ನು ಸ್ಥಾಪಿಸಿ ಕ್ರಿ.ಶ. ೧೫ನೇ ಶತಮಾನದಲ್ಲಿ ಆಳಿದವರೇ 'ಬೂದಿಹಾಳು ನಾಯಕ ಅರಸರು'. ಇವರು ಮೂಲತಹ

ಗೊಲ್ಲಜನಾಂಗದವರಾಗಿದ್ದು ಮಧ್ಯದಲ್ಲಿ ವೀರಶೈವ ಧರ್ಮವನ್ನು ಸ್ವೀಕರಿಸಿದಂತೆ ಕಂಡುಬರುತ್ತದೆ.[೧೦] ಇವರಲ್ಲಿ ಪ್ರಖ್ಯಾತನಾದವನು ಸಿರುಮ ಅಥವಾ ಸಿರುಮಣನಾಯಕ. ಇವನನ್ನು ಅರಸು, ಮಂಡಲೇಶ್ವರ ಎಂದು ಕವಿಗಳು ಕರೆದಿದ್ದಾರೆ.[೧೧]

ಬೂದಿಹಾಳು ನಾಯಕ ಅರಸರನ್ನು ಕುರಿತು ಇದುವರೆಗೂ ಶಾಸನಗಳು ಕಂಡುಬಂದಿಲ್ಲ. ಆದರೂ ಬೂದಿಹಾಳು, ಸೂಜಿಗಲ್ಲು, ಹೆಗ್ಗೆರೆಯಲ್ಲಿ ದೊರಕುವ ಶಾಸನಗಳಲ್ಲಿನ ಕೆಲವು ಅಂಶಗಳು ಬೂದಿಹಾಳು ಅರಸರ ಇತಿಹಾಸದ ಅಧ್ಯಯನಕ್ಕೆ ಸಹಕಾರಿಯಾಗಿವೆ.[೧೨] ಚಾರಿತ್ರಿಕ ಹಾಗೂ ಶಾಸನಗಳ ಆಧಾರಗಳು ಇಲ್ಲದ ಸಂದರ್ಭದಲ್ಲಿ ಸಾಹಿತ್ಯಕ ಆಧಾರಗಳನ್ನು ಅವಲಂಬಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗಮನಿಸಿದಾಗ ಬೂದಿಹಾಳು ಅರಸ ಸಿರುಮ ಹಾಗೂ ಮಹಾಮಂಡಳೇಶ್ವರ ಸಾಳುವ ಒಂದನೆಯ ನರಸಿಂಹರಾಯನ ಮಧ್ಯೆ ಜರುಗಿದ ಯುದ್ಧವನ್ನು ವಸ್ತುವನ್ನಾಗಿಸಿಕೊಂಡು ಸಾಂಗತ್ಯ ಪ್ರಕಾರದಲ್ಲಿ ಮೂರು ಕಾವ್ಯಗಳು ರಚನೆಯಾಗಿವೆ. ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ, ಮಲ್ಲಕವಿಯ ಗೊಲ್ಲಸಿರುಮನಚರಿತೆ, ರಾಮಕವಿಯ ಸಿರುಮನಚರಿತೆ ಕಾವ್ಯಗಳನ್ನು ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ತೆಲುಗಿನ ನಂದಿಮಲ್ಲಯ್ಯ ಹಾಗೂ ಘಂಟಸಿಂಗಯ್ಯ ಕವಿಗಳು ರಚಿಸಿರುವ ತೆಲುಗು 'ವರಾಹ ಪುರಾಣ'ಮು ಕೃತಿಯಲ್ಲಿ ಬೂದಿಹಾಳು ನಾಯಕರನ್ನು ಕುರಿತು ಕೆಲವು ಮಾಹಿತಿಗಳು ದೊರಕುತ್ತವೆ.[೧೩] ಅಲ್ಲದೆ ಬ್ರಿಟೀಷ್ ಸರ್ಕಾರದ ಆದೇಶದಂತೆ ಕ್ರಿ.ಶ. ೧೮೦೧ರಲ್ಲಿ ಪ್ರಾನ್ಸಿಸ್ ಬುಕನನ್ ಕೈಗೊಂಡ ಸರ್ವೇಕ್ಷಣಾ ಪ್ರವಾಸದ ವರದಿ 'ಎ ಜರ್ನಿ ಪ್ರಂ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕ್ಯಾನರಾ ಅಂಡ್ ಮಲಬಾರ್' ಎಂಬ ಮೂರು ಸಂಪುಟಗಳು ೧೮೦೭ರಲ್ಲಿ ಪ್ರಕಟವಾಗಿದ್ದು, ಅದರ ಮೂರನೇ ಸಂಪುಟದಲ್ಲಿ ಬೂದಿಹಾಳು ಪಾಳೆಯಪಟ್ಟಿನ ಬಗ್ಗೆ ಅಮೂಲ್ಯವಾದ ಮಾಹಿತಿಗಳು ದೊರೆಯುತ್ತವೆ.[೧೪]

ಬೂದಿಹಾಳು ಪಾಳೆಯಪಟ್ಟು ಪ್ರಾರಂಭವಾದದ್ದು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಎಂದು 'ಗೊಲ್ಲ ಸಿರುಮನಚರಿತೆ' ಸೂಚಿಸುತ್ತದೆ.[೧೫] ಈ ಪಾಳೆಯಪಟ್ಟಿನ ಸ್ಥಾಪನೆಯ ಕುತೂಹಲಕಾರಿ ಹಿನ್ನೆಲೆಯನ್ನು ಹೀಗೆ ನಿರೂಪಿಸುತ್ತದೆ:- ಪೆನುಗೊಂಡೆಯಲ್ಲಿ ಪ್ರೌಢದೇವರಾಯನು ಇದ್ದಾಗ ಅವನಿಗೆ ಸಮಾನವೂ ಎಂಬಂತೆ ನೂರು ಕುದುರೆಗಳನ್ನಿಟ್ಟುಕೊಂಡು ಸಾಳುವ ಗುಂಡರಾಜ ಎಂಬುವವನು ಲಕ್ಷಸೀಮೆಗೆ ವಜೀರನಾಗಿದ್ದನು. ಆಗ ಪ್ರೌಢರಾಯನ ಅರಮನೆಯಲ್ಲಿ ಬಾಗಿಲು ಕಾವಲುಗಾರನಾಗಿ ಗೊಲ್ಲ ಕಾಚಾನಾಯಕ ಎಂಬುವವನು ಇದ್ದನು. ಒಂದು ದಿನ ದೊರೆ ಏಕಾಂತದಲ್ಲಿದ್ದಾಗ ಅವನನ್ನು ಕಾಣಲೆಂದು ಗುಂಡರಾಜನು ಅಲ್ಲಿಗೆ ಬಂದನು. ಆಗ ಕಾಚನು ಕರ್ತವ್ಯದಂತೆ ಬೆತ್ತವನ್ನು ಅಡ್ಡಹಿಡಿದು ಅವನನ್ನು ಒಳಗೆ ಬಿಡದೆ ತಡೆದನು. ಇದರಿಂದ ಸಿಟ್ಟಿಗೆದ್ದ ಗುಂಡರಾಜ "ಬೆತ್ತವನ್ನು ಅಡ್ಡಹಿಡಿದ ನಿನ್ನ ತಲೆಯನ್ನು ಕತ್ತರಿಸುತ್ತೇನೆ" ಎಂದು ಅಬ್ಬರಿಸಿದನು. "ನನಗೆ ಹೀಗೆ ಮಾತಾಡಿ ಹಲ್ಲುಗಳನ್ನು ತೋರಿ ಸರಸವಾಡುತ್ತಿಯಾ?" ಎಂದೂ ಕಾಚನಾಯಕನು ಪ್ರತಿಯಾಗಿ ಅಬ್ಬರಿಸಿದನು. ಅವರ ನಡುವೆ ಕದನವೇ ನಡೆಯತೊಡಗಿ ಅದರ ಗದ್ದಲ ಪ್ರೌಢರಾಯನಿಗೆ ಕೇಳಿಸಿತು. ನಿಜಸ್ಥಿತಿಯನ್ನು ತಿಳಿದುಕೊಳ್ಳಲು ದೊರೆ ಅವರಿಬ್ಬರನ್ನು

ಓಲಗಕ್ಕೆ ಕರೆಸಿ ಕೇಳಿದಾಗ, ಕಾಚಾನಾಯಕ "ಇವನೊಂದಿಗೆ ಕಾದಾಡಬೇಕು" ಎಂದನು. ಆಗ ಗುಂಡನು ಇವನ ಕೈಯನ್ನು ಕಡಿದು ಕಾಣಿಕೆಯಾಗಿ ನಿಮ್ಮ ಮುಂದಿಡುತ್ತೇನೆ, ದೊರೆಗಳು ನೋಡಬೇಕು ಎಂದನು. ಆಗ ಪ್ರೌಢರಾಯನು ಒಂದು ಹಗೇವನ್ನು ತೋಡಿಸಿ ಒಂದು ಕೋಳಿಕತ್ತಿಯನ್ನು ನೀಡಿದನು. ಆಗ ಇಬ್ಬರು ಆರ್ಭಟಿಸಿ ಒಬ್ಬರನ್ನೊಬ್ಬರು ಮೊದಲಿಸಿ ಉಗ್ರವಾಗಿ ಹೋರಾಡಿದರು. ಕಾಚನಾಯಕ ಗುಂಡರಾಜನ ದವಡೆಯನ್ನು ತಿವಿದು ಹಲ್ಲುಗಳನ್ನು ಉದುರಿಸಿದನು. ಪ್ರೌಢರಾಯನು ಕಾಚನನ್ನು ಕುರಿತು ನಿನಗೇನು ಬೇಕು ಎಂದಾಗ ಕಾಚನು ಎಲ್ಲಾ ಸೌಭಾಗ್ಯವನ್ನು ನೀಡಿದ್ದಿರಿ ನನಗೆ ಈ ಹಲ್ಲುಗಳನ್ನು ಮಾತ್ರ ನೀಡಿರಿ ಎಂದಾಗ ಪ್ರೌಢರಾಯನು ಅವನಿಗೆ ಗುಂಡರಾಜನ ಹಲ್ಲುಗಳನ್ನು ನೀಡುವುದರ ಜೊತೆಗೆ ಬಲ್ಲೆಹ, ಪದಕ, ಚೌಕಳಿ, ಬೊಲ್ಲಗಳನ್ನು ಕೊಟ್ಟು ಸೂಜಿಗಲ್ಲು ದುರ್ಗವನ್ನು ನೀಡಿದನು.[೧೭೬] ಗುಂಡರಾಜನ ಹಲ್ಲುಗಳನ್ನು ಪಾದರಕ್ಷೆಗಳೊಳಗೆ ಹಾಕಿಸಿ ಅವನ್ನು ಮೆಟ್ಟುತ್ತ ರಾಜ್ಯವಾಳಿಕೊಂಡಿದ್ದನು. ಕಾವ್ಯಗಳಲ್ಲಿ ಹೇಳಿರುವ ಸೂಜಿಗಲ್ಲು ಪ್ರಸ್ತುತ ಹೊಸದುರ್ಗ ತಾಲೂಕಿನಲ್ಲಿದೆ. ಇದು ಕಾಚನಾಯಕನ ಕಾಲಕ್ಕಾಗಲೆ ಒಂದು ಪ್ರಮುಖ ಸ್ಥಳವಾಗಿತ್ತು. ಅಲ್ಲಿ ಕಂಡುಬಂದಿರುವ ಕ್ರಿ.ಶ. ೧೨, ೧೩ನೇ ಶತಮಾನದ ಶಾಸನಗಳು ಇದು ಒಂದು ಪ್ರಮುಖ ಊರಾಗಿತ್ತೆಂಬುದನ್ನು ಶೃತಪಡಿಸುತ್ತವೆ.[೧೭೭] ಕಾಚನಾಯಕನು ಸೂಜಿಗಲ್ಲು, ಬೂದಿಹಾಳು ಪಾಳೆಯಪಟ್ಟನ್ನು ಸುಮಾರು ೨೫ ವರ್ಷ ಆಳಿರಬೇಕು.[೧೭೮] ಅವನ ಈ ಅವಧಿಯನ್ನು ಸ್ಥೂಲವಾಗಿ ಕ್ರಿ.ಶ. ೧೪೩೫-೬೦ ಎನ್ನಬಹುದು.[೧೭೯] ಕಾಚನಾಯಕನ ಇಬ್ಬರು ಮಕ್ಕಳು ಸಿರುಮ ಮತ್ತು ಮಲ್ಲ ಇವರು ಕ್ರಮವಾಗಿ ಬೂದಿಹಾಳು ಹಾಗೂ ಹೆಗ್ಗೆರೆಯಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಕಾಚನಾಯಕನ ಮರಣದ ಬಳಿಕ ಸಿರುಮನು ಬೂದಿಹಾಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ಕೋಟೆ ಕೊತ್ತಲಗಳನ್ನು ಬಲಪಡಿಸಿ ಆಳ್ವಿಕೆ ನಡೆಸಿದನು. ಸಿರುಮ ಎಷ್ಟು ವರ್ಷ ರಾಜ್ಯವಾಳಿದ್ದನೆಂದು ಸ್ಪಷ್ಟವಿಲ್ಲ. ಸಿರುಮನು ಸುಮಾರು ಕ್ರಿ.ಶ. ೧೪೬೦ ರಿಂದ ನರಸಿಂಹನೊಂದಿಗೆ ಯುದ್ಧವಾಗುವವರೆಗೂ ಅಂದರೆ ಕ್ರಿ.ಶ. ೧೪೭೬ಕ್ಕೆ ಸ್ವಲ್ಪ ಮುಂಚಿನವರೆಗೆ ಸುಮಾರು ೨೦ ವರ್ಷಕಾಲ ಆಳಿದ್ದಿರಬೇಕು. ಕಾವ್ಯಗಳು ಬೂದಿಹಾಳು ಕೋಟೆಯನ್ನು ರಾವಣನ ಲಂಕೆಗೂ, ಕುಮಾರ ರಾಮನ ಕುಮ್ಮಟದುರ್ಗಕ್ಕೂ ಹೋಲಿಸುತ್ತವೆ. ಬಲಿದುರ್ಗವೆಂದೂ ವರ್ಣಿಸುತ್ತವೆ. ಸಿರುಮನ ಬೂದಿಹಾಳು ರಾಜ್ಯವು ಹಿರಿಯೂರು, ಹೊನ್ನವಳ್ಳಿ, ಎಕ್ಕಟಿ, ಕಂದಿಕೆರೆ, ಹಾರನಹಳ್ಳಿ, ಹಾಲುಕುರಿಕೆ, ಆಸಂದಿ, ಬಾಗೂರು ಈ ಪ್ರಾಂತ್ಯಗಳ ನಡುವೆ ಸಾಕಷ್ಟು ವಿಶಾಲವಾದ ಪ್ರದೇಶವಾಗಿದ್ದಿತು.[೧೮೦] ಸಿರುಮನನ್ನು ನಡುನಾಡಗೂಳಿ, ಹಿಂಡು ಮನ್ನೆಯರ ಕೋಲಾಹಲ ಮಂಡಳೇಶ್ವರ, ನಡುನಾಡಿನ ಮನ್ನೆಯರ ಗಂಡ ಎಂದೆಲ್ಲಾ ಕರೆದಿರುವುದು; ಸಿರುಮನು ಸುತ್ತಣ ಪಾಳೆಯಗಾರರಿಗೆ ಸಿಂಹಸ್ವಪ್ನವಾಗಿದ್ದನೆಂದೂ; ಬೂದಿಹಾಳು ಬಲಿಷ್ಠ ಪಾಳೆಯಪಟ್ಟಾಗಿತ್ತೆಂದೂ ತಿಳಿಯಬಹುದಾಗಿದೆ.[೧೮೧] ಸಿರುಮನು ಗುರುಲಿಂಗ ಜಂಗಮ ಸೇವಿತನಾಗಿ, ಕುಂತಹರನ ಭಕ್ತನೆನಿಸಿ ಪ್ರಥಮ ಕಲ್ಯಾಣವೆನಿಸಿದ್ದ ಬೂದಿಹಾಳು ಪಟ್ಟಣದ ಸೋಮೇಶಲಿಂಗ, ವೀರಭದ್ರದೇವರ ಪರಮ ಆರಾಧಕ, ವೀರಶೈವ ಮತನಿಷ್ಠ, ಬಲಾಢ್ಯ ಪಾಳೆಯಗಾರನೆನಿಸಿ ಮೆರೆಯುತ್ತಿದ್ದ. ಇವನ ಪತ್ನಿ ರಾಣಿ ಚಿಕ್ಕಮ್ಮ, ಕಾಚನಾಯಕ, ಕುಮಾರ ಮಲ್ಲಣ್ಣ, ವೀರಭದ್ರ, ಸೋಮಯ್ಯ, ನಂಬಿಯಣ್ಣ ಎಂಬ ಐವರು ವೀರಪುತ್ತರು,

ಮೂವರು ಪುತ್ರಿಯರು ಇದ್ದರು. ತನ್ನ ಹೆಣ್ಣುಮಕ್ಕಳನ್ನು ಕ್ರಮವಾಗಿ ತಿಪ್ಪಯ್ಯ ಬಸವಯ್ಯ ಭೈರಯ್ಯ ಎಂಬುವವರಿಗೆ ವಿವಾಹ ಮಾಡಿಕೊಟ್ಟಿದ್ದ. ಕಾಚನಾಯಕನಿಗೆ ಬೆಲಗೂರು ಭೈರನಾಯಕನ ಮಗಳನ್ನು ತಂದು ವಿವಾಹ ಮಾಡಿದ್ದ. ಸಿರುಮನ ತಮ್ಮ ಮಲ್ಲನಾಯಕನು ತನ್ನ ಮಗ ಚಿನ್ನನಾಯಕನೊಂದಿಗೆ ಹೆಗ್ಗರೆ ವಳಿತವನ್ನು ನೋಡಿಕೊಳ್ಳುತ್ತಿದ್ದ ಕಲ್ಲರಸನೆಂಬ ನಿಷ್ಠಾವಂತ ಶೂರಮಂತ್ರಿ ಸಿರುಮನಿದ್ದನು. ರಾಣಿ ಚಿಕ್ಕಮ್ಮನ ತಮ್ಮ ಬೆಲಗೂರು ಭೈರನಾಯಕ, ಹಾಲುಕುರಿಕೆ ರುದ್ರರಾಜ, ಹೊನ್ನವಳ್ಳಿಯ ವೇದರಾಜ, ಬಾಗೂರಿನ ಗೋವಿಂದನಾಯಕ ಸಿರುಮನ ಮಿತ್ರರಾಗಿದ್ದರು. ಅದರಲ್ಲೂ ಶ್ರೀಮಂತ ಪಾಳೆಯಪಟ್ಟಾಗಿದ್ದ ಬಾಗೂರಿನ ಗೋವಿಂದ ಹಾಗೂ ಸಿರುಮ ಅಣ್ಣತಮ್ಮಂದಿರಂತೆ ವಾತ್ಸಲ್ಯ ಸ್ನೇಹ ಹೊಂದಿದ್ದರು.[೧೪] ಸಿರುಮನ ಬಳಿ ೩೦೦ ಕುದುರೆ, ೩೦೦೦ ಪರಿವಾರವಿತ್ತು ಎಂದು ಮಲ್ಲಕವಿ ವರ್ಣಿಸುತ್ತಾನೆ. ಹುಲಿಮುಖ, ಐಂಕರಿ, ಕೊತ್ತಳ, ವ್ಯವಸ್ತಿತ ಅಗಳು, ಚಿತ್ರಗೆಲಸದ ತೆನೆಗಳು, ಅಲ್ಲಲ್ಲಿ ಡೆಂಕಣಿಯಂತ್ರ ಹೂಡಿಸಿದ್ದ ಪರಿಘಗಳಿಂದ ಕೂಡಿದ ಕೋಟೆ, ಬಲಿದುರ್ಗ, ಕಂಚಿನ ಕೋಟೆಯೆನಿಸಿತ್ತು. ಸುಭದ್ರ ಜಾಗೃತ ರಕ್ಷಣಾ ವ್ಯವಸ್ಥೆ, ವೀರಭಂಟರು, ತರಾವರಿ, ಯುದ್ಧ ಸಾಮಗ್ರಿಗಳು ಅಲ್ಲಿದ್ದವು. ಸಮೃದ್ಧ ಆದಾಯ ತರುವ ವ್ಯಾಪಾರ ವಹಿವಾಟು, ಕೃಷಿ ಉತ್ಪನ್ನ ಇವನ ರಾಜ್ಯವನ್ನು ಸುಭಿಕ್ಷೆವನ್ನಾಗಿಸಿತ್ತು. ಬೂದಿಹಾಳಿನ ಸಿರುಮನಿಗೂ ಚಂದ್ರಗಿರಿ ಪೆನುಗೊಂಡೆಯಲ್ಲಿದ್ದ ನರಸಿಂಹನಿಗೂ ಕದನವೊಂದು ಕೈಗಟ್ಟಿತ್ತು. ಇದಕ್ಕೆ ಸಿರುಮನ ನೆರೆಹೊರೆಯ ಪಾಳೆಯಗಾರರಾದ ಹಿರಿಯೂರಿನ ಕಸವಿನಾಯಕ ಮತ್ತು ಎಕ್ಕಟಿಯ ಮಿಡಗೇಶಿ ಗಂಗಯ್ಯ ಇವರೊಂದಿಗೆ ಘಟಿಸಿದ ವಿರಸ ರಾಜಕಾರಣ ವಾಯಿತು.[೧೫]

ರಾಮಕವಿಯ ಸಿರುಮನ ಚರಿತೆ ಹೇಳುವಂತೆ ಒಮ್ಮೆ ನಾಡಿಗೆ ನುಗ್ಗಿ ಬೆಳೆಗಳನ್ನು ನಾಶಮಾಡುತ್ತಿದ್ದ ಕಾಡುಮೃಗಗಳನ್ನು ಬೇಟೆಯಾಡಲೆಂದು ದಶರಥ ರಾಮೇಶ್ವರ ಕಾನನಕ್ಕೆ ಸಿರುಮ ಹೋದ, ಅಲ್ಲಿ ಹಿರಿಯೂರು ಸೀಮೆಯನ್ನು ಅತಿಕ್ರಮಿಸಿ ಬೇಟೆಯಾಡಿದ. ಇದನ್ನು ಆಕ್ಷೇಪಿಸಿದ ಹಿರಿಯೂರು ಪಾಳೆಯಗಾರ ಕಸವಿನಾಯಕನ ಮಾತನ್ನು ಸಿರುಮ ಉಪೇಕ್ಷಿಸಿದಾಗ, ಮೇಲೇರಿ ಬಂದ ಕಸವಿನಾಯಕ ಸೋತು ಹಿಂತಿರುಗಿದ. ಮತ್ತೊಂದೆಡೆ ಹುಳಿಯಾರಿನ ಬಳಿ ವೇದರಾಜನು ಸಿರುಮನಿಂದ ಸೋತನು.[೧೬] ಕೊನೆಗೆ ಹಿರಿಯೂರು ಕಸವಿನಾಯಕ, ಎಕ್ಕಟಿಗಂಗಯ್ಯ, ಹಾರ್ನಹಳ್ಳಿ ಕೇಶವರಾಜ, ಕಂದಿಕೆರೆಯ ಚೆಟ್ಟಿಗ, ಚೆನ್ನಮರಾಜರು ಸೇರಿಕೊಂಡು ವೈರಿಕೂಟ ರಚಿಸಿಕೊಂಡು, ಚಂದ್ರಗಿರಿಯ ಸಾಳುವ ನರಸಿಂಹರಾಯನ ಬಳಿ ದೂರು ನೀಡಿದರು. ಇದನ್ನು ತಿಳಿದ ಸಾಳುವ ನರಸಿಂಗನು ತನ್ನ ಮಂತ್ರಿ ಈಶ್ವರನಾಯಕನೊಂದಿಗೆ ಅಪಾರ ಸೈನ್ಯದೊಂದಿಗೆ ಬೂದಿಹಾಳು ಮುತ್ತಿಗೆಗೆ ದಂಡೆತ್ತಿ ಹೊರಟ. ಮಾರ್ಗದುದ್ದಕ್ಕೂ ಅನೇಕ ಚಿಕ್ಕಮಟ್ಟ ಪ್ರದೇಶಗಳಾದ ಡೆಂಕಣಕೋಟೆ, ಕೋಳುಕೋಟೆ, ಅರಗೊಂಡೆ, ಮುಳಬಾಗಿಲು, ಸಾವಂದಿಗೆ, ಯರಮಿಂಚಿ ಗಟ್ಟಲಕುರಿಕೆ, ಕಲ್ಲದುರ್ಗ, ನಿಡುಗಲ್ಲು, ಮಿಡಗೇಶಿಗಳನ್ನು ವಶಪಡಿಸಿಕೊಳ್ಳುತ್ತಾ, ಸಾಗಿಬಂದ ಇವನು ಮೊದಲು ಸಿರುಮನ ಮಿತ್ರ ಪಾಳೆಯದವರನ್ನು ಸೋಲಿಸಲು ತೀರ್ಮಾನಿಸಿ ಸಿರುಮನ ಆಪ್ತಮಿತ್ರ ಬಾಗೂರಿನ ಗೋವಿಂದನಾಯಕನ ಕೋಟೆಗೆ ಮೊದಲು ಲಗ್ಗೆಹಾಕಿದನು. ಅಲ್ಲಿ

ಎಂಬತ್ತು ದಿನಗಳ ಘೋರ ಕಾಳಗ ನಡೆಯಿತು. ಇದರಲ್ಲಿ ಗೋವಿಂದನಾಯಕ ನರಸಿಂಹನೊಂದಿಗೆ ಸಂಧಿ ಮಾಡಿಕೊಂಡು ಅಪಾರ ಮೊತ್ತದ ಹಣ, ಹೊನ್ನು ನೀಡಿದನು.[೧೫೫] ತದನಂತರ ರಾಯನ ದಂಡು ಬೂದಿಹಾಳಿನತ್ತ ನಡೆದು ಪಕ್ಷದವರಿಗೂ ಭೀಕರ ಕದನವೇರ್ಪಟ್ಟು ಒಂದು ತಿಂಗಳ ಕಾಲದವರೆಗೂ ಮುಂದುವರೆಯಿತು. ಇದರಲ್ಲಿ ಸಿರುಮನ ಕಡೆಯವರು ಬಹುವಾಗಿ ಸೋತರು. ಹಲವು ರಾಜಪರಿವಾರದವರು ಅನುಗಮನ ಮಾಡಿಕೊಳ್ಳುತ್ತಾರೆ. ಸಿರುಮನ ಮಗ ಕಾಚನು ವೀರಾವೇಶದಿಂದ ಹೋರಾಡಿ ವೀರಮರಣ ವಪ್ಪುತ್ತಾನೆ. ಆತನ ಮಡದಿಯರು ಉರಿಯುವ ಕೂಂಡಗಳನ್ನು ಪ್ರವೇಶಿಸಿದರು.[೧೫೬] ಅನಂತರ ಸಿರುಮನು ವೈರಿಗಳಿಗೆ ಏನೂ ಸಿಗಬಾರದೆಂದು ಯೋಚಿಸಿ ತನ್ನ ಪ್ರಜೆಗಳಿಗೆಲ್ಲಾ ಅಪಾರ ಧನ, ಧಾನ್ಯ ನೀಡಿ ಊರುಬಿಟ್ಟು ಹೋಗಲು ತಿಳಿಸುತ್ತಾನೆ. ಊರ ಮಧ್ಯದಲ್ಲಿ ದೊಡ್ಡ ದೊಡ್ಡ ಕೊಂಡಗಳನ್ನು ಏರ್ಪಡಿಸುತ್ತಾನೆ. ಅದರಲ್ಲಿ ಕುದುರೆಗಳು ಸಕಲ ದವಸ ಧಾನ್ಯ, ಅಮೂಲ್ಯ ವಸ್ತುಗಳು, ಲೆಕ್ಕಪತ್ರದ ಕಡತಗಳು, ಸಂಪತ್ತು, ಹಣ ಒಡವೆ ಎಲ್ಲವನ್ನೂ ಹಾಕಿಸಿ ಸುಡಿಸುತ್ತಾನೆ. ಅರಮನೆಯ ಸಮಸ್ತ ಹೆಂಗಸು ಮಕ್ಕಳಾದಿಯಾಗಿ ಪರಿವಾರವನ್ನೆಲ್ಲ ಕೊಂಡಕ್ಕೆ ಕಳಿಸುತ್ತಾನೆ. ಆನಂತರ ಸಿರುಮ ವೀರಾವೇಶದಿಂದ ಕಾದಾಡಿ ಗಾಯಗೊಳ್ಳುತ್ತಾನೆ. ವೈರಿಗಳಿಗೆ ತಲೆಯೊಪ್ಪಿಸಬಾರದೆಂದು ಊರಿಗೆ ಬಂದು ಮಡದಿ ಚಿಕ್ಕಮ್ಮನೊಂದಿಗೆ ಶಿರಕಡಿದುಕೊಂಡು ಕೊಂಡಕ್ಕೆ ಬೀಳುತ್ತಾನೆ.[೧೫೭] ಒಟ್ಟಿನಲ್ಲಿ ಬೂದಿಹಾಳು ಕಾಳಗದಲ್ಲಿ ಸಿರುಮ ಹಾಗೂ ಆತನ ವೀರಪುತ್ರರು ಬಂಧು-ಬಳಗ, ವೀರಭಂಟರು ವೀರಮರಣ ಹೊಂದುವುದರೊಂದಿಗೆ ಬೂದಿಹಾಳು ಪತನಗೊಂಡಿತು.[೧೫೮]

ಬೂದಿಹಾಳು ಸೀಮೆ ಮಗರನಾಡು ವೇಂಠಯಕ್ಕೆ ಸೇರಿತ್ತೆಂದು ಗೊತ್ತಾಗುತ್ತದೆ. ಈ ಮಗರನಾಡು ವೆಂಠೆಯು 'ಮಗರ ೩೦೦' ಎಂದು ಶಾಸನಗಳಲ್ಲಿ ಕರೆಯಲಾಗಿತ್ತು. ಗಂಗವಾಡಿ-೯೬೦೦೦ದ ಉಪವಿಭಾಗವಾಗಿದ್ದಿರಬೇಕೆಂದು ತಿಳಿದುಬರುತ್ತದೆ. ಈ ಬೂದಿಹಾಳು ಸೀಮೆಯಲ್ಲಿ ಕುಲವಟ, ನೇರಿಲಕೆರೆ, ಹೆಗ್ಗೆರೆ, ಎಣ್ಣವಗೆರೆ, ಬಿನದರಸದಳ್ಳಿ, ಮಾಳವನಹಳ್ಳಿ, ಬೆಲಗೂರು, ಸಿಂಗಟಕೆರೆ, ಕಂಚಿಗಲ್ಲು, ಬೂದಿಹಾಳು, ಶ್ರೀವೋಮಯಹಳ್ಳಿ, ತುಂಬಿನಕೆರೆ, ಶ್ರೀ ಚಿಕ್ಕಗೊಂಡನಹಳ್ಳಿ, ಯಡಗಟ್ಟ, ಲಕಮಾಪುರ, ಬೊಮ್ಮೇನಹಳ್ಳಿ, ಕೈಮರ, ಭೈರವದೇವರಗುಡ್ಡ, ಕನ್ನೇನಹಳ್ಳಿ, ಉಪ್ಪಿನಹೊಳೆ, ನರಿಯಹಳ್ಳಿ, ಮಾಟನಹಳ್ಳಿ, ನಟ್ಟಕಲ್ಲು, ಕಲ್ಲಕೆರೆ ಮೊದಲಾದ ಗ್ರಾಮಗಳು ಅಂತರ್ಗತವಾಗಿದ್ದವೆಂದು ಶಾಸನಗಳಿಂದ ಗೊತ್ತಾಗುತ್ತದೆ. ಮತ್ತೋಡು, ನಾಯಿಗೆರೆ, ಅರಳಿಹಾಳ, ಗ್ರಾಮಗಳು ಈ ಸೀಮೆಗೆ ಸೇರಿದ್ದವು. ಒಟ್ಟಿನಲ್ಲಿ ಈ ಪಾಳೆಯಪಟ್ಟು ಸಾಕಷ್ಟು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿತ್ತು. ಅಲ್ಲದೆ ಸಿರುಮನು, ಹೊಳಲು, ಹೊನ್ನತ್ತಿ, ಕೆರೆಯಸಂತೆ, ದೇವನೂರು, ಹಳೇಬೀಡುಗಳನ್ನು ಲಕ್ಷ ತೆರಿಗೆ ತರುವಂತಹ ಚಿಕ್ಕಂಗಳ ಹಿರಿಯಂಗಳಗಳನ್ನು, ಹಲಸು, ತೆಂಗು, ಬಾಳೆ, ಕಿತ್ತಳೆ ತೋಟಗಳಿಂದ ಸಂಮೃದ್ಧವಾಗಿರುವ ತಂಗಲಿ ಮಚ್ಚೇರು, ಕಡವೂರು, ಸಿಂಗಟಗೆರೆ, ಗ್ರಾಮಗಳನ್ನು ಹೊಳೆಸಾಲು ಗ್ರಾಮಗಳನ್ನು ವಶಪಡಿಸಿ ಕೊಂಡಿದ್ದನೆಂದು, ಸಿರುಮನ ಕುರಿತ ಕಾವ್ಯಗಳು ಬಣ್ಣಿಸುತ್ತವೆ.[೧೫೯] ಬೂದಿಹಾಳು ಪಾಳೆಯಪಟ್ಟು ಹೊಸದುರ್ಗ ತಾಲೂಕಿನ ಭೌಗೋಳಿಕ ಪರಿಸರದಲ್ಲಿ ಕಂಡುಬರುವ ಪ್ರಮುಖ ಪಾಳೆಯಪಟ್ಟಾಗಿದೆ. ಕೇವಲ ಸಾಹಿತ್ಯಕ

ಹಾಗೂ ಮೌಖಿಕ ಆಕರಗಳಿಂದಲೇ ಈ ನಾಯಕ ಅರಸರ ಇತಿಹಾಸ ಮತ್ತು ಸಂಸ್ಕೃತಿಯನ್ನು ರಚಿಸಲು ಸಾಧ್ಯವಾಗಿದ್ದು, ಶಾಸನಗಳು ಮತ್ತು ಚಾರಿತ್ರಿಕ ದಾಖಲೆಗಳು ಲಭ್ಯವಾದ ಪಕ್ಷದಲ್ಲಿ ಇದರ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕುರಿತು ಇನ್ನಷ್ಟು ವಿಶ್ಲೇಷಿಸಲು ಸಾಧ್ಯವಾಗುತ್ತದೆ.

೨.೨.೧೦.೩ ಸಂತೇಬೆನ್ನೂರು ನಾಯಕ ಅರಸರು

ವಿಜಯನಗರ ಅರಸೊತ್ತಿಗೆಯ ಕೊನೆಯ ಕಾಲದಲ್ಲಿ ಅನೇಕ ಪಾಳೆಯಪಟ್ಟುಗಳು ಅಸ್ತಿತ್ವಕ್ಕೆ ಬಂದುವೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅದರಂತೆ ಕರ್ನಾಟಕದ ಅರೆಮಲೆನಾಡಿನ ಭಾಗವಾಗಿದ್ದ ಈಗಿನ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಬಸವಾಪಟ್ಟಣ, ಸಂತೇಬೆನ್ನೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಗಳಲ್ಲಿ ೧೬ ರಿಂದ ೧೮ನೇ ಶತಮಾನದವರೆಗೆ ಪಾಳೆಯಪಟ್ಟೊಂದನ್ನು ಕಟ್ಟಿ ಆಡಳಿತ ನಡೆಸಿದ ರಾಜವಂಶಕ್ಕೆ ಸಂತೇಬೆನ್ನೂರು ನಾಯಕರೆಂದು ಕರೆಯಲಾಗಿದೆ.[೯೦]

ಈ ವಂಶದ ಮೂಲಪುರುಷನ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಕೆಲವು ಪ್ರಕಟಿತ ಆಕರಗಳಲ್ಲಿ ಮೂಲಪುರುಷ ಧೂಮರಾಜನೆಂದೂ, ಅವನು ವಿಜಯನಗರ ಅರಸರ ಕಡೆಯಿಂದ ಬಂದು ಇಲ್ಲಿಗೆ ಸಮೀಪದ ಬಸವಾಪಟ್ಟಣದ ಬೇಡರ ಯುವತಿಯನ್ನು ಮದುವೆಯಾಗಿ ಇಲ್ಲಿ ರಾಜ್ಯಕಟ್ಟಿದನೆಂದು ಹೇಳಲಾಗಿದೆ.[೯೧] ಆದರೆ ಧೂಮರಾಜನು ಈ ವಂಶದ ಮೂಲಪುರುಷ ಎನ್ನುವುದು ದಂಥಕಥೆಯಾಗಿದ್ದು, ಈ ವಂಶದ ಕೈಫಿಯತ್ತುಗಳು ಮೂಲಪುರುಷ ರಾಮಕೋಟಿ ಹನುಮಪ್ಪನಾಯಕನೆಂದೂ ಈತನು ಹುಚ್ಚಂಗಿ ಕಡೆಯಿಂದ ಬಸವಾಪಟ್ಟಣಕ್ಕೆ ಬಂದು ಪಾಳೆಯಪಟ್ಟು ಕಟ್ಟಿ ರಾಜ್ಯ ಸ್ಥಾಪಿಸಿದನೆಂದು ಹೇಳಲಾಗಿದೆ.[೯೨] ಸಂತೇಬೆನ್ನೂರು ನಾಯಕರು ಈಗಿನ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಹಾವೇರಿ ಜಿಲ್ಲಾ ವ್ಯಾಪ್ತಿಯ ಬಹುಭಾಗವನ್ನು ಆಡಳಿತ ನಡೆಸುತ್ತಿದ್ದುದಾಗಿ ಅವರು ಬರೆಸಿದ ಶಿಲಾಶಾಸನ, ತಾಮ್ರಶಾಸನ, ಕೈಫಿಯತ್ತಿನ ಉಲ್ಲೇಖಗಳು ತಿಳಿಸುತ್ತವೆ.[೯೩]

ವಿಜಯನಗರದ ಸಾಮಂತರಾಗಿದ್ದ ಇವರು ಆ ಸಾಮ್ರಾಜ್ಯದ ಪತನಾನಂತರ ಸ್ವತಂತ್ರರಾಗಿ, ನಂತರ ಬಿಜಾಪುರದ ಆದಿಲ್‌ಶಾಹಿ, ಕೆಳದಿ, ಚಿತ್ರದುರ್ಗ ನಾಯಕ ಅರಸರ ಹಾಗೂ ಕೆಲಕಾಲ ಹೈದರ್, ಟಿಪ್ಪು, ಮರಾಠ, ಮೈಸೂರು ಅರಸರ ಅಧೀನರಾಗಿ, ನಂತರ ಬ್ರಿಟೀಷ್ ಆದಿಪತ್ಯ ಆರಂಭವಾದಾಗ ಅವರ ವಿರುದ್ಧವೂ ಹೋರಾಡಿ ತಮ್ಮ ಅಸ್ಥಿತ್ವ ಕಳೆದುಕೊಂಡು ಮೂರು ಶತಮಾನಗಳ ಕಾಲ ನಮ್ಮ ನಾಡಿನಲ್ಲಿ ಆಳ್ವಿಕೆ ನಡೆಸಿದ್ದಾರೆ.[೯೪] ಚಿತ್ರದುರ್ಗ ಜಿಲ್ಲೆಯ ಅರೆಮಲೆನಾಡು ಪ್ರದೇಶಗಳಾದ ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕುಗಳಲ್ಲಿ ಸಂತೇಬೆನ್ನೂರು ನಾಯಕರ ಆಳ್ವಿಕೆಯನ್ನು ಗುರುತಿಸುವ ಅನೇಕ ಆಧಾರಗಳಿವೆ. ಈ ತಾಲೂಕುಗಳು ನೇರವಾಗಿ ಸಂತೇಬೆನ್ನೂರು ನಾಯಕರ ಆಳ್ವಿಕೆಗೆ ಒಳಪಟ್ಟಿದ್ದವು ಎಂಬುದಕ್ಕೆ ಸಂತೇಬೆನ್ನೂರು ನಾಯಕರಾದ ರಾಜಪ್ಪನಾಯಕ, ಬಾಲಗಿರಿನಾಯಕ, ದಳನಾಯಕ (ಕ್ರಿ.ಶ. ೧೫೭೦–೧೬೧೦) ಈ ಮೂವರ ಹೆಸರಿನಲ್ಲಿ ಹೊಳಲ್ಕೆರೆ ಮತ್ತು ಹೊಸದುರ್ಗಗಳಲ್ಲಿ ಶಾಸನಗಳಿವೆ. ಸಂತೇಬೆನ್ನೂರು ನಾಯಕರು ಚಿತ್ರದುರ್ಗ ಪ್ರದೇಶದ ಹೊಸದುರ್ಗ ಸೀಮೆ, ಬಾಗೂರು ಸೀಮೆ, ಹೊಳಲ್ಕೆರೆ ಸೀಮೆಗಳನ್ನು ವಶಪಡಿಸಿಕೊಂಡು

ನೇರವಾಗಿ ಆಳಿದ್ದಾರೆ.[೧೯೫] ದೈವಭಕ್ತರಾಗಿದ್ದ ಇವರು ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ಸೀಮೆಗಳಲ್ಲಿ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕೈಗೊಂಡು, ದಾನ-ದತ್ತಿಗಳನ್ನು ಬಿಟ್ಟಿರುವರು. ಹನುಮಪ್ಪನಾಯನ ಮಗ ರಾಜಪ್ಪನಾಯಕ ಬಾಗೂರು ಗ್ರಾಮದ ಪ್ರಸಿದ್ಧ ಚನ್ನಕೇಶವ ದೇವಾಲಯದ ಪ್ರಕಾರದಲ್ಲಿರುವ ಲಕ್ಷ್ಮೀದೇವಿ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಕ್ರಿ.ಶ.೧೫೭೧ರಲ್ಲಿ ಮಾಡಿಸಿ ಅದಕ್ಕೆ ಕೆಲವೊಂದು ಗದ್ದೆ ಹಾಗೂ ಇತರ ದಾನ-ದತ್ತಿಗಳನ್ನು ನೀಡಿರುವುದಾಗಿ ತಿಳಿದುಬರುತ್ತದೆ.[೧೯೬] ಅದೇ ರೀತಿ ಹನಿಮಿನಾಯಕನ ಮೊಮ್ಮಗ ದಳನಾಯಕ ಎಂಬುವವನು ಇದೇ ತಾಲೂಕಿನ ಕೆಲ್ಲೋಡು ಹನುಮಂತ ದೇವರಿಗೆ ಕುರುಬರಹಳ್ಳಿಯನ್ನು ಕ್ರಿ.ಶ.೧೬೦೫ರಲ್ಲಿ ದತ್ತಿ ಕೊಟ್ಟಿದ್ದಾಗಿ ಹೇಳಲಾಗಿದೆ.[೧೯೭] ಹನುಮನಾಯಕರಿಗೆ ಧರ್ಮವಾಗಲಿ ಎಂದು ಅವನ ಸಾಮಂತ ವರ್ಗದ ನಾಯಕನೊಬ್ಬನು ಹೊರಕೆರೆ ರಂಗನಾಥದೇವರ ನೈವೇದ್ಯಕ್ಕೆ ಕೋಡಿಹಳ್ಳಿ ಗ್ರಾಮವನ್ನು ದಾನ ನೀಡಿರುವುದಾಗಿ ಕಂಡುಬರುತ್ತದೆ.[೧೯೮] ಹೀಗೆ ಹೊಸದುರ್ಗ ತಾಲೂಕು ಪರಿಸರದಲ್ಲಿ ಸಂತೇಬೆನ್ನೂರು ನಾಯಕರು ಆಳ್ವಿಕೆ ನಡೆಸಿರುವ ಸಂಗತಿಯನ್ನು ಈ ಮೇಲಿನ ಅಂಶಗಳಿಂದ ಮನಗಾಣಬಹುದು.

೨.೨.೧೦.೪. ಚಿತ್ರದುರ್ಗ ನಾಯಕ ಅರಸರು

ವಿಜಯನಗರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಪಾಳೆಯಪಟ್ಟುಗಳಲ್ಲಿ ಚಿತ್ರದುರ್ಗ ತುಂಬಾ ಪ್ರಮುಖವಾದುದ್ದು. ಕ್ರಿ.ಶ. ೧೬ನೇ ಶತಮಾನದ ಮಧ್ಯಕಾಲದಿಂದ ಕ್ರಿ.ಶ. ೧೮ನೇ ಶತಮಾನದ ಉತ್ತರಾರ್ಧದವರೆಗೆ (ಕ್ರಿ.ಶ. ಸುಮಾರು ೧೫೪೯ ರಿಂದ ಕ್ರಿ.ಶ. ೧೭೭೯ರವರೆಗೆ) ೨೩೧ ವರ್ಷಕಾಲ ಈ ಪಾಳೆಯಪಟ್ಟನ್ನು ಆಳಿದವರು 'ಕಾಮಗೇತಲ' ಎಂಬ ಹೆಸರಿನ ಒಂದು ಬೇಡಕುಲದ ನಾಯಕರು.[೧೯೯] ಇವರು ತಮ್ಮನ್ನು 'ವಾಲ್ಮೀಕಿಗೋತ್ರ'ದವರೆಂದು ಕರೆದುಕೊಂಡಿದ್ದಾರೆ. 'ವಾಲ್ಮೀಕಿಗೋತ್ರದ ಶ್ರೀಮನ್ಮಹಾನಾಯಕಚಾರ್ಯ ಕಾಮಗೇತಿ ಕಸ್ತೂರಿ' ಎಂಬ ಅಭಿಧಾನವನ್ನು ತಮ್ಮ ಹೆಸರುಗಳೊಡನೆ ಧರಿಸಿಕೊಂಡುದು ಇವರ ಶಾಸನ ಬರಹಗಳಿಂದ ವ್ಯಕ್ತಪಡುತ್ತದೆ. ಈ ಅರಸರು ಹಗಲು ಕಗ್ಗೊಲೆಯಮಾನ್ಯ, ಗಂಡುಗೊಡಲಿಯ ಸರ್ಜಾ, ಚಂದ್ರಗಾವಿಥಲದಾಂಕ್ಯ, ಧೂಳ್‌ಕೋಟೆ ವಜೀರ, ಗಾದ್ರಿಮಲೆ (ಗಾಧುರಿಮಲೆ) ಹೆಬ್ಬುಲಿ ಇತ್ಯಾದಿ ಬಿರುದುಗಳಿಂದ ಪುರಸ್ಕೃತರಾಗಿದ್ದರು.[೨೦೦] ಚಿತ್ರದುರ್ಗ ನಾಯಕ ಅರಸರು ಹಾಗೂ ಅವರ ಆಳ್ವಿಕೆಯ ಕಾಲಾವಧಿ ಯನ್ನು ಈ ಮುಂದಿನಂತೆ ಕಾಣಬಹುದು. ತಿಮ್ಮಣ್ಣನಾಯಕ(೧೫೪೯–೧೫೫೭), ೧ನೇ ಓಬಣ್ಣನಾಯಕ/೧ನೇ ಮದಕೇರಿನಾಯಕ (೧೫೫೭–೧೬೦೩), ೧ನೇ ಚಿಕ್ಕಣ್ಣನಾಯಕ (೧೬೦೩–೧೬೦೯), ೧ನೇ ಇಮ್ಮಡಿ ಮದಕೇರಿನಾಯಕ (೧೬೦೯–೧೬೨೯), ೧ನೇ ಕಸ್ತೂರಿ ರಂಗಪ್ಪನಾಯಕ (೧೬೨೯–೧೬೫೩), ೨ನೇ ಇಮ್ಮಡಿ ಮದಕೇರಿನಾಯಕ (೧೬೫೩–೧೬೭೫), ೨ನೇ ಓಬಣ್ಣನಾಯಕ (೧೬೭೫), ೨ನೇ ಚಿಕ್ಕಣ್ಣನಾಯಕ (೧೬೭೫–೧೬೮೬), ಮುಮ್ಮಡಿ ಮದಕೇರಿನಾಯಕ (೧೬೮೬–೧೬೮೮), ದೊಣ್ಣೆ ರಂಗಪ್ಪನಾಯಕ (೧೬೮೮–೧೬೮೯), ನರಗನಹಳ್ಳಿ ರಘುವಪ್ಪನಾಯಕ (೧೬೮೯), ಸೂರೇಕಾಂತಿ ರಂಗಪ್ಪನಾಯಕ (೧೬೮೯), ಭರಮಣ್ಣನಾಯಕ (೧೯೮೯–೧೭೨೧), ಹಿರೇಮದಕೇರಿನಾಯಕ (೧೭೨೧–೧೭೪೮), ೨ನೇ ಕಸ್ತೂರಿ ರಂಗಪ್ಪನಾಯಕ(೧೯೪೮–೧೭೫೪), ಕೊನೆಯ ಮದಕೇರಿನಾಯಕ(೧೭೫೪–೧೭೭೯).

ಹೊಸದುರ್ಗ ತಾಲೂಕು ಪರಿಸರದಲ್ಲಿ ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ ಇದ್ದುದನ್ನು ಕೆಲವು ಚಾರಿತ್ರಿಕ ದಾಖಲೆಗಳು ಹಾಗೂ ಶಾಸನ/ಸಾಹಿತ್ಯ ಆಧಾರಗಳು ಸಾರುತ್ತವೆ. ಚಿತ್ರದುರ್ಗದ ಮೊದಲ ದೊರೆ ತಿಮ್ಮಣ್ಣನಾಯಕನು (೧೫೪೫-೧೫೫೭) ಪ್ರಾರಂಭದಲ್ಲಿ ಕಾರ್ಯನಿರ್ವಹಿಸಿದ ಪ್ರದೇಶ ಹೊಳಲ್ಕೆರೆ.[೨೦೧] ಹೊಳಲ್ಕೆರೆ ಸುತ್ತಲಿನ ಸೀಮೆಗಳು ಸಹಜವಾಗಿ ಇವರ ಆಳ್ವಿಕೆಗೆ ಒಳಪಟ್ಟುದುದನ್ನು ಕೆಲವು ಅಂಶಗಳ ಹಿನ್ನೆಲೆಯಲ್ಲಿ ಹೇಳಬಹುದು. ತದನಂತರದಲ್ಲಿ ೧ನೇ ಕಸ್ತೂರಿ ರಂಗಪ್ಪನಾಯಕ (೧೬೦೨-೧೬೫೨)ನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನದ ಗಡಿಗಳಾದ ದೇವಪುರದ ಕೋಟೆ ಹಾಗೂ ಜಾನಕಲ್ಲುದುರ್ಗ ಮುಂತಾದವುಗಳನ್ನು ತರೀಕೆರೆ ಪೂವೊಲ ಹನುಮಪ್ಪನಾಯಕನು ವಶಪಡಿಸಿಕೊಂಡನು. ನಂತರದ ಕೆಲವು ವರ್ಷಗಳ ಬಳಿಕ ೧ನೇ ಕಸ್ತೂರಿ ರಂಗಪ್ಪನಾಯಕನು ತರೀಕೆರೆಯವರಿಂದ ಕಳೆದುಕೊಂಡಿದ್ದ ದೇವಪುರದ ಕೋಟೆ ಜಾನಕಲ್ಲುದುರ್ಗ ಹಾಗೂ ಇವುಗಳೊಂದಿಗೆ ಬಾಗೂರನ್ನು ಸಹ ವಶಪಡಿಸಿಕೊಂಡನು.[೨೦೨] ದೇವಪುರ, ಜಾನುಕಲ್ಲು ಹಾಗೂ ಬಾಗೂರು ಹೊಸದುರ್ಗ ತಾಲೂಕಿಗೆ ಸೇರಿದ್ದು ೧ನೇ ಕಸ್ತೂರಿ ರಂಗಪ್ಪನಾಯಕನ ಕಾಲದಲ್ಲಿ.

೨ನೇ ಓಬಣ್ಣನಾಯಕ(೧೬೭೫)ನ ಕಾಲದಲ್ಲೂ ಸಹ ಜಾನಕಲ್ಲು ಹಾಗೂ ಬಾಗೂರು ಸೀಮೆಗಳು ಚಿತ್ರದುರ್ಗ ಸಂಸ್ಥಾನದ ಅಧೀನದಲ್ಲಿದ್ದವು.[೨೦೩] ನಂತರದಲ್ಲಿ ೨ನೇ ಚಿಕ್ಕಣ್ಣನಾಯಕ (೧೬೭೫-೧೬೮೬)ನ ಕಾಲದಲ್ಲಿ ಶಿರಾ ಪ್ರಾಂತ್ಯದ ಮಹಮದೀಯರ ಅಧೀನದಲ್ಲಿದ್ದ ಬಾಗೂರು ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ, ಹೋರಾಟ ನಡೆಸುವುದಕ್ಕಾಗಿ ಈಗಿನ ಹೊಸದುರ್ಗದ ಪೂರ್ವದಿಕ್ಕಿನ ಬೆಟ್ಟದಲ್ಲಿ ಕ್ರಿ.ಶ. ೧೬೭೫ರಲ್ಲಿ ಕೋಟೆ ನಿರ್ಮಿಸಿಕೊಂಡು ಸೇನಾ ಸಮೇತವಾಗಿ ಅಲ್ಲಿ ತಂಗಿದ್ದನು. ಅದೇ ಕಾಲಕ್ಕೆ ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮ ಪುರೋಹಿತನು ಸದರಿ ಚಿಕ್ಕಣ್ಣನಾಯಕನ ಮೊರೆಹೊಕ್ಕನು. ಆಗ ನಾಯಕನು ಬೆಟ್ಟದ ಕೆಳಗೆ ಹೊರಪೇಟೆ ಯೊಂದನ್ನು ನಿರ್ಮಿಸಿಕೊಂಡಿರುವಂತೆ ಜಂಗಮನಿಗೆ ತಿಳಿಸಿದ್ದರಿಂದ ಬೆಟ್ಟದ ತಪ್ಪಲಿನಲ್ಲಿ ಚಿಕ್ಕ ಪೇಟೆಯೊಂದು ರೂಪುಗೊಂಡಿತು. ಇದಕ್ಕೆ ನಾಯಕನು ಹೊಸದುರ್ಗ ಎಂದು ನಾಮಕರಣ ಮಾಡಿದನು. ಹೊಸದುರ್ಗಕ್ಕೆ ಪ್ರಾರಂಭದಲ್ಲಿ ನವದುರ್ಗ ಎಂಬ ಹೆಸರಿತ್ತೆಂದು ಹೇಳಲಾಗಿದೆ.[೨೦೪] ಚಿಕ್ಕಣ್ಣನಾಯಕನು ಧಾರ್ಮಿಕ ಭಕ್ತಿಯುಳ್ಳವನಾಗಿದ್ದು ತನ್ನ ಮೂಲಗುರುಗಳಾದ ಶೃಂಗೇರಿ ಜಗದ್ಗುರು ಶಂಕರ ಭಾರತಿ ಸ್ವಾಮಿಗಳಿಗೆ ಬಾಗೂರು ಸೀಮೆಯೊಳಗಿನ ಮಾರಬಘಟ್ಟ ಗ್ರಾಮವನ್ನು ದತ್ತಿಯಾಗಿ ಬಿಟ್ಟ ವಿಷಯ ಶಾಸನದಿಂದ ತಿಳಿದುಬರುತ್ತದೆ. ಈ ಗುರುಭಕ್ತಿಯ ಫಲವಾಗಿಯೇ ಹೊಸದುರ್ಗ ನಿರ್ಮಾಣವಾಯಿತೆಂದೂ ಹೇಳಲಾಗಿದೆ.[೨೦೫] ಹೀಗೆ ಚಿತ್ರದುರ್ಗದ ಪಾಳೆಯಗಾರರಿಗೆ ನೇರವಾಗಿ ಒಳಪಟ್ಟಿದ್ದ ಹೊಸದುರ್ಗ ಕೋಟೆಗೆ ಚಿತ್ರದುರ್ಗದ ರಕ್ತಸಂಬಂಧಿ ಗಳನ್ನು ದಳಪತಿಗಳನ್ನಾಗಿ ನೇಮಿಸುತ್ತಿದ್ದರು. ಚಿಕ್ಕಣ್ಣನಾಯಕನ ತರುವಾಯ ದೊಡ್ಡ ಮದಕರಿನಾಯಕ, ದಂಡಿನ ಜಂಪಣ್ಣನಾಯಕ, ಭರಮಣ್ಣನಾಯಕ ಹಿರೇಮದಕರಿನಾಯಕನನ್ನು ಹೊಸದುರ್ಗದ ಕೋಟೆಗೆ ನೇಮಿಸಿರುವುದು ತಿಳಿದುಬರುತ್ತದೆ.[೨೦೬] ಅಲ್ಲದೇ ಚಿಕ್ಕಣ್ಣನಾಯಕನು ಬಾಗೂರು ಚೆನ್ನಿಗರಾಯನ (ಚನ್ನಕೇಶವದೇವರ) ತೇರು ಮತ್ತು ಮುಲಾಮಿನ ಗರುಡೋತ್ಸವ ಮೂರ್ತಿಗಳನ್ನು ಮಾಡಿಸಿಕೊಡುವುದರ ಜೊತೆಗೆ ಕೆತ್ತಿಸೆಕೋಟೆಯ ನಿರ್ಮಾಣಕಾರ್ಯವನ್ನು ಆರಂಭಿಸಿದನು.[೨೦೭]

ಹೀಗೆ ಚಿಕ್ಕಣ್ಣನಾಯಕರ ಕಾಲದಲ್ಲಿ ಹೊಸದುರ್ಗ ಪ್ರಾಂತ್ಯದಲ್ಲಿ ಬಲಿಷ್ಟವಾದ ಆಳ್ವಿಕೆಯನ್ನು ನಡೆಸಿರುವುದು ಕಂಡುಬರುತ್ತದೆ.

ಭರಮಣ್ಣನಾಯಕ(೧೬೮೯–೧೭೨೧)ನ ಕಾಲದಲ್ಲಿ ಹೊಸದುರ್ಗ ತಾಲೂಕಿನಲ್ಲಿರುವ ಹೊಸುದುರ್ಗ ಸೀಮೆ, ದೇವಪುರ ಕೋಟೆ ಹಾಗೂ ಜಾನಕಲ್ಲು ಕೋಟೆ ಇವುಗಳು ಚಿತ್ರದುರ್ಗ ಸಂಸ್ಥಾನದ ಅಧೀನದಲ್ಲಿ ಇದ್ದವು. ಭರಮಣ್ಣನಾಯಕನ ಕಾಲದಲ್ಲಿ ಮತ್ತೋಡು ಸಂಸ್ಥಾನದಲ್ಲಿ ಆಳುತ್ತಿದ್ದವನು ಹಾಲಪ್ಪನಾಯಕ. ಈ ಕಾಲದಲ್ಲಿ ಎರಡೂ ಸಂಸ್ಥಾನಗಳ ನಡುವಣ ಸಂಬಂಧ ತೃಪ್ತಿಕರವಾಗಿರಲಿಲ್ಲ.[೨೦೮] ಎರಡೂ ಸಂಸ್ಥಾನಗಳ ಗಡಿಯಲ್ಲಿ ಬಲವಾದ ಕಾವಲಿದ್ದಿತು. ದುರ್ಗದ ಸಂಸ್ಥಾನದವರು ಅಪ್ಪಣೆಯಿಲ್ಲದೆ ತಮ್ಮ ಗಡಿಯಲ್ಲಿ ಪ್ರವೇಶಿಸುತ್ತಿದ್ದ ಬೇರೆ ಯಾವುದೇ ಸಂಸ್ಥಾನದ ಜನರನ್ನು ಹಿಡಿದು ಸೆರೆಗೆ ಹಾಕಿ ತಲೆ ಕತ್ತರಿಸುತ್ತಿದ್ದರು. ಆದರೂ ಕೆಲವೊಮ್ಮೆ ಹಿರಿಯೂರು ಕಡೆಯ ಪ್ರಜೆಗಳು ಹೊಸದುರ್ಗ ಮಾರ್ಗವಾಗಿ ಉಪಾಯವಾಗಿ ಮತ್ತೋಡು ರಾಜ್ಯದ ಗಡಿಯನ್ನು ಪ್ರವೇಶಿಸುತ್ತಿದ್ದರು. ಅಲ್ಲದೇ ಚಿತ್ರದುರ್ಗ ಸಂಸ್ಥಾನದಲ್ಲಿ ಅಪರಾಧವೆಸಗಿದವರು ಮತ್ತೋಡಿನಲ್ಲಿ ತಲೆಮರೆಸಿಕೊಂಡು ಇರುತ್ತಿದ್ದರು.

೨ನೇ ಕಸ್ತೂರಿರಂಗಪ್ಪನಾಯಕ(೧೭೪೮–೧೭೫೪)ನ ಕಾಲದಲ್ಲಿ ಹೊಸದುರ್ಗ ತಾಲೂಕಿನ 'ಬೂದಿಹಾಳುಸೀಮೆ'ಯ ಮೇಲೆ ಕಾರ್ಯಮಾಡಿ ಹುಳಿಯಾರು, ಯಣ್ಣೆಗೆರೆ, ಹೆಗ್ಗೆರೆ, ಯಳನಾಡು ಈ ನಾಲ್ಕು ಗ್ರಾಮಗಳನ್ನು ವಶಪಡಿಸಿಕೊಳ್ಳಲಾಯಿತು.[೨೦೯] ತರುವಾಯ ಎರಡು ತಿಂಗಳಕಾಲ ಬೂದಿಹಾಳಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡು ಅದಕ್ಕೆ ಗಿರಿಜಾನಗರವೆಂದು ಮರುನಾಮಕರಣ ಮಾಡಲಾಯಿತು.[೨೧೦] ಇವುಗಳೊಂದಿಗೆ ಕಸ್ತೂರಿರಂಗಪ್ಪನಾಯಕನು ಜಾನಕಲ್ಲು, ಹೊಸದುರ್ಗ ಹಾಗೂ ಬಾಗೂರು ಪ್ರದೇಶಗಳನ್ನು ಆಳಿರುವುದು ತಿಳಿದುಬರುತ್ತದೆ. ೨ನೇ ಕಸ್ತೂರಿರಂಗಪ್ಪನಾಯಕನ ಬಳಿಕ ಕೊನೆಯ ಮೆದಕೇರಿನಾಯಕ(೧೭೫೪–೧೭೭೯)ನ ಆಳ್ವಿಕೆಯನ್ನು ಈ ಭಾಗದಲ್ಲಿ ಗುರುತಿಸಬಹುದು. ಅದರಲ್ಲೂ ಮುಖ್ಯವಾಗಿ ಜಾನಕಲ್ಲು ಪರಿಸರದೊಂದಿಗೆ ಹೆಚ್ಚು ಒಡನಾಟವನ್ನು ಹೊಂದಿದ್ದನು. ಇವನು ಜಾನಕಲ್ಲಿನಲ್ಲೆ ಜನಿಸಿದ್ದು ಹಾಗೂ ತನ್ನ ಬಾಲ್ಯಜೀವನವನ್ನು ಕಳೆದಿದ್ದು. ಅಂದರೆ ಜಾನಕಲ್ಲಿನ ತೊದಲು ಬರಮಪ್ಪನಾಯಕನ ಮಗ ಕೊನೆಯ ಮೆದಕರಿನಾಯಕ.[೨೧೧] ಈ ತೊದಲುಭರಮಪ್ಪನಾಯಕನು ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕನ ಎರಡನೆಯ ಪಟ್ಟದರಸಿ ಸಣ್ಣ ಸಿದ್ದಮ್ಮನಾಗತಿಯಲ್ಲಿ ಜನಿಸಿದ ಮಕ್ಕಳಲ್ಲಿ ಮೂರನೆಯವನೆಂದು ಹೇಳಲಾಗಿದೆ.[೨೧೨] ಈ ತೊದಲುಭರಮಪ್ಪನಾಯಕನಿಗೆ ಜಾನಕಲ್ಲುದುರ್ಗದ ನಾಯಕತನ ವಹಿಸಲಾಗಿದ್ದಿತು. ಇವನ ಮಗನೇ ಕೊನೆಯ ಮೆದಕೇರಿನಾಯಕ. ಇವನು ಚಿತ್ರದುರ್ಗದ ಪ್ರಸಿದ್ಧ ದೊರೆಯಾಗಿದ್ದನು. ಕೊನೆಯ ಮೆದಕೇರಿನಾಯಕನ ಕಾಲದಲ್ಲಿ ಶ್ರೀರಂಗಪಟ್ಟಣದ ನವಾಬ ಹೈದರ್‌ನು ಒಟ್ಟು ೪ ಬಾರಿ ಚಿತ್ರದುರ್ಗ ಸಂಸ್ಥಾನದ ಮೇಲೆ ದಾಳಿ ಮಾಡಿದನು. ಕ್ರಿ.ಶ. ೧೭೬೨ರಲ್ಲಿ ಹೈದರಾಲಿಯು ಮೊದಲಭಾರಿಗೆ ಚಿತ್ರದುರ್ಗ ಸಂಸ್ಥಾನದ ಮೇಲೆ ದಾಳಿಮಾಡಿ ಚಿತ್ರದುರ್ಗದ ಪ್ರಮುಖ ಗಡಿದುರ್ಗಗಳನ್ನು ವಶಪಡಿಸಿ ಕೊಂಡನು.[೨೧೩] ಅವುಗಳಲ್ಲಿ ಹೊಸದುರ್ಗ, ಜಾನಕಲ್ಲು, ಬಾಗೂರು ಸಹ ಸೇರಿದ್ದವು.[೨೧೪] ಕೊನೆಯ ಮೆದಕೇರಿನಾಯಕನು ಹೈದರ್‌ನೊಂದಿಗೆ ಎರಡುಲಕ್ಷ ವರಹಗಳನ್ನು ಕೊಡುವುದರೊಡನೆ ಸಂಧಾನ

ಮಾಡಿಕೊಂಡ ಬಳಿಕ ಪುನಹ ಈ ಗಡಿದುರ್ಗಗಳು ಚಿತ್ರದುರ್ಗ ಸಂಸ್ಥಾನಕ್ಕೆ ಸೇರಲ್ಪಟ್ಟವು. ನಂತರ ಕ್ರಿ.ಶ. ೧೭೭೯ರ ಫೆಬ್ರವರಿಯಲ್ಲಿ ಚಿತ್ರದುರ್ಗ ಸಂಸ್ಥಾನ ಹೈದರನಿಗೆ ವಶವಾಗುವವರೆಗೂ ಹೊಸದುರ್ಗ, ಜಾನಕಲ್ಲು ಹಾಗೂ ಬಾಗೂರು ಪ್ರದೇಶಗಳು ಕೊನೆಯ ಮೆದಕರಿನಾಯಕನಿಗೆ ಸೇರಿದ್ದ ಅಂಶವನ್ನು ಗುರುತಿಸಬಹುದು. ಈ ಪ್ರಕಾರ ಚಿತ್ರದುರ್ಗ ನಾಯಕ ಅರಸರು ಹೊಸದುರ್ಗ ತಾಲೂಕಿನ ಬಹುಭಾಗಗಳಲ್ಲಿ ತಮ್ಮ ಆದಿಪತ್ಯ ಸ್ಥಾಪಿಸಿದ್ದ ಅಂಶವನ್ನು ಈ ಮೇಲಿನ ಎಲ್ಲಾ ಆಧಾರಗಳಿಂದ ಅರ್ಥೈಸಬಹುದು.

೨.೨.೧೦.೫. ಬೇಲೂರು ನಾಯಕ ಅರಸರು

ಕ್ರಿ.ಶ. ೧೬ನೇ ಶತಮಾನದಲ್ಲಿ ಹಾಸನ ಪ್ರದೇಶದ ಬೇಲೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದವರೇ ಬೇಲೂರು ನಾಯಕರು (ಪಾಳೆಯಗಾರರು). ಇವರು ಬೇಲೂರಿನ ಸುತ್ತಮುತ್ತಲಿನ ಪ್ರಾಂತ್ಯಗಳನ್ನು ವಿಜಯನಗರದವರಿಂದ ಅಮರಮಾಗಣಿಯಾಗಿ ಪಡೆದುಕೊಂಡು ಕ್ರಿ.ಶ. ೧೬೯೦ರವರೆಗೆ ಆಳ್ವಿಕೆ ನಡೆಸಿದರು.[೨೧೫] ಬೇಲೂರು ನಾಯಕರು ಹೊಸದುರ್ಗ ತಾಲೂಕು ಪರಿಸರದಲ್ಲಿ ತಮ್ಮ ಆಳ್ವಿಕೆಯನ್ನು ನಡೆಸಿದ್ದರು ಎಂಬುದಕ್ಕೆ ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲೂಕುಗಳಲ್ಲಿ ದೊರೆತಿರುವ ಕೆಲವು ಶಾಸನಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಬೇಲೂರು ನಾಯಕರ ಎರಕೃಷ್ಣಪ್ಪನಾಯಕನಿಗೆ ಸಂಬಂಧಿಸಿದ ಕೆಲವು ಶಾಸನಗಳು ಈ ಭಾಗದಲ್ಲಿ ದೊರೆತಿವೆ. ಕ್ರಿ.ಶ. ೧೫೪೩ರ ಶಾಸನದಲ್ಲಿ ಹೇಳಿರುವಂತೆ ಬಾಗೂರು ಸೀಮೆಯು ಎರಕೃಷ್ಣಪ್ಪನಾಯಕನ ಅಮರಮಾಗಣಿಯಾಗಿತ್ತು.[೨೧೬] ಕ್ರಿ.ಶ. ೧೫೪೬ರ ಬಾಗೂರಿನ ಶಾಸನದಲ್ಲಿ 'ವಿಜಯನಗರದ ಶ್ರೀವೀರಪ್ರತಾಪ ಶ್ರೀವೀರಸದಾಶಿವರಾಯರ ನಿರೂಪದಿಂದ ಬಾಗೂರು ಸೀಮೆಯಲ್ಲಿ ಆಳುತ್ತಿದ್ದ ಎರಕೃಷ್ಣಪ್ಪನಾಯಕನು ಬಾಗೂರು ಸೀಮೆಯ ನಾಯಿಂದರಿಗೆ ತೆರಿಗೆ ವಿನಾಯಿತಿಯನ್ನು ನೀಡಿರುವ ಸಂಗತಿ ತಿಳಿದುಬರುತ್ತದೆ.[೨೧೭] ಅದೇ ರೀತಿ ಕ್ರಿ.ಶ.೧೫೫೨ರ ಶಾಸನದಲ್ಲಿ ಎರಕೃಷ್ಣಪ್ಪ ನಾಯಕನು ಪ್ರತಿನಾಮವಾದ ಕೃಷ್ಣಸಮುದ್ರ ಎಂಬ ಗ್ರಾಮವನ್ನು ಸದಾಶಿವರಾಯರಿಗೆ ಪುಣ್ಯವಾಗಲಿ ಎಂದು 'ಬಾಗೂರಿನ ಚೆನ್ನಿಗರಾಯ ದೇವಾಲಯ'ಕ್ಕೆ ದಾನ ನೀಡಿದ್ದಾನೆ.[೨೧೮] ಕ್ರಿ.ಶ. ೧೫೫೪ರ ಶಾಸನೋಕ್ತ ಸಂಗತಿಯಂತೆ ಶ್ರೀವೀರಪ್ರತಾಪ ಸದಾಶಿವರಾಯರು ಸುಖಿರಾಜ್ಯವನ್ನಾಳುತ್ತಾ ಇರಲು ಪೋತಪ್ಪನಾಯಕಯ್ಯನವರ ಕೃಷ್ಣಪ್ಪ ನಾಯಕನ ಕಾರ್ಯಕ್ಕೆ ಕರ್ತರಾದ ವೀರಣ್ಣನಾಯಕರು ಬಾಗೂರು ಸೀಮೆಯ ಪಾರುಪತ್ಯವ ಮಾಡುವಾಗ... ಕೃಷ್ಣಪ್ಪನಾಯಕ ಅಯ್ಯನವರ ಹೆಸರಲ್ಲಿ ಕೃಷ್ಣಪುರವೆಂದು ಪ್ರತಿನಾಮ ಗ್ರಾಮದಲ್ಲಿ ಪೇಠೆಯನ್ನು ಕಟ್ಟಿಸಿ ಕೆಲವು ಒಕ್ಕಲುತನಗಳಿಗೆ ದಾನ ನೀಡಿರುವುದು ಕಂಡುಬರುತ್ತದೆ.[೨೧೯]

ಕ್ರಿ.ಶ. ೧೫೫೫ರಲ್ಲಿ 'ಹಡಪದ ಬೊಮ್ಮನಾಯಕನ ಮಗ ಕೃಷ್ಣಪ್ಪನಾಯಕ ಹಾಗೂ ಕೃಷ್ಣಪ್ಪನಾಯಕನ ಕಾರ್ಯಕರ್ತನಾದ ಕೊಂಡರಾಜ ಹಾಗೂ ಮತ್ತೊಬ್ಬ ವ್ಯಕ್ತಿ ಗೋಪಣ್ಣ ಒಡೆಯರು ಬಾಗೂರಿನ ಚನ್ನಕೇಶವ ದೇವಾಲಯಕ್ಕೆ ನೀಡಿದ ಅನೇಕ ದಾನದತ್ತಿಗಳನ್ನು ಕುರಿತು ವಿವರಿಸುತ್ತದೆ. ಈ ಶಾಸನದಲ್ಲಿ ಚನ್ನಕೇಶವನನ್ನು 'ಭಾಗ್ಯಪುರದ ಚೆನ್ನಿಗರಾಯ' ಎಂದು ಕರೆಯಲಾಗಿದೆ. ಕೃಷ್ಣಪ್ಪನಾಯಕನು ಮಧುರೆಯ ಗ್ರಾಮ, ಅರಳಿಹಳ್ಳಿಯ ಗ್ರಾಮ, ಹಾದರಿಕಟ್ಟೆಯ ಗ್ರಾಮಗಳನ್ನು ಚೆನ್ನಿಗರಾಯನ ಅಂಗಭೋಗ, ರಂಗಭೋಗಕ್ಕೆ ದಾನ ನೀಡಿದ್ದಾನೆ. ಕೃಷ್ಣಪ್ಪ ನಾಯಕನ

ಕಾರ್ಯಕರ್ತರಾದ ಕೊಂಡರಾಜನು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲಿ ಎಂದು ನಾಗೇನಹಳ್ಳಿ ಗ್ರಾಮ, ಕೃಷ್ಣಪುರದ ಗ್ರಾಮ ಇವುಗಳನ್ನು ಚೆನ್ನಿಗರಾಯನ ನೈವೇದ್ಯಕ್ಕೆ ದಾನ ನೀಡಿದ್ದಾನೆ.[೨೦] ಕ್ರಿ.ಶ. ೧೫೫೬ರ ಮತ್ತೊಂದು ಶಾಸನದಲ್ಲಿ ಕೃಷ್ಣಪ್ಪನಾಯಕನು ಬಾಗೂರಿನ ಅಂತರಘಟ್ಟಮ್ಮ ದೇವಾಲಯಕ್ಕೆ ಕೆಲವೊಂದು ದಾನಗಳನ್ನು ನೀಡಿರುವುದನ್ನು ಗುರುತಿಸಬಹುದು.[೨೧] ಬೇಲೂರು ನಾಯಕ ಬಾಗೂರು ಸೀಮೆಯನ್ನು ಆಳಿರುವ ಅಂಶವನ್ನು ಈ ಮೇಲಿನ ಶಾಸನಾಧಾರಗಳಿಂದ ಮನಗಾಣಬಹುದು. ಬೇಲೂರು ನಾಯಕರ ಕಾಲದಲ್ಲಿ 'ಬಾಗೂರುಸೀಮೆ'ಯು ಪ್ರಮುಖ ಆಡಳಿತ ವಿಭಾಗವಾಗಿದ್ದಿತು ಎಂಬುದಕ್ಕೆ ಇಷ್ಟು ಪ್ರಮಾಣದಲ್ಲಿ ಶಾಸನಗಳು 'ಬಾಗೂರುಸೀಮೆ'ಗೆ ಸಂಬಂಧಿಸಿದಂತೆ ಕಂಡುಬರುವುದೇ ಆಗಿದೆ.

೨.೨.೧೧. ಶ್ರೀರಂಗಪಟ್ಟಣದ ನವಾಬರು

ಕ್ರಿ.ಶ. ೧೮ನೇ ಶತಮಾನದ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯಲ್ಲಿ ಶ್ರೀರಂಗಪಟ್ಟಣದ ನವಾಬರಾದ ಹೈದರಾಲಿ ಹಾಗೂ ಟಿಪ್ಪುಸುಲ್ತಾನರ ಆಳ್ವಿಕೆ ಅತ್ಯಂತ ಮಹತ್ವಪೂರ್ಣ ಘಟನೆ. ಈ ಕಾಲದಲ್ಲಿ ಆಂಗ್ಲರು, ಮರಾಠರು ಹಾಗೂ ನಿಜಾಮರ ಪ್ರಾಬಲ್ಯ, ಮೈಸೂರು ಒಡೆಯರ ದೌರ್ಬಲ್ಯ, ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದ ದಳವಾಯಿಗಳು, ಸದಾ ಪರಸ್ಪರ ಯುದ್ಧಗಳಲ್ಲಿ ತೊಡಗಿರುತ್ತಿದ್ದ ಪಾಳೆಯಗಾರರು ಮುಂತಾದ ಅನೇಕ ಕಾರಣಗಳಿಂದಾಗಿ ಹೈದರಾಲಿ ೧೮ನೇ ಶತಮಾನದ ಮಧ್ಯಭಾಗದಲ್ಲಿ ಏಳಿಗೆಗೆ ಬಂದನು. ಇವನು ಕರ್ನಾಟಕದಲ್ಲಿದ್ದ ಪಾಳೆಯಗಾರರ ಅಧಿಕಾರವನ್ನು ಮೊಟಕುಗೊಳಿಸುತ್ತಾ, ಒಂದೊಂದೇ ಪಾಳೆಯಪಟ್ಟನ್ನು ವಶಕ್ಕೆ ತೆಗೆದುಕೊಳ್ಳುತ್ತಾ ಬಂದನು. ಹೀಗೆ ವಶಕ್ಕೆ ತೆಗೆದುಕೊಂಡು ಬಂದ ಕೊನೆಯ ಸಂಸ್ಥಾನವೆ ಚಿತ್ರದುರ್ಗ. ಚಿತ್ರದುರ್ಗ ಸಂಸ್ಥಾನದವರು ತಮ್ಮ ಆಳ್ವಿಕೆಯ ಕಾಲದಲ್ಲಿ ಹೊಸದುರ್ಗ ತಾಲೂಕಿನ ಹೊಸದುರ್ಗ, ಜಾನಕಲ್ಲು ಹಾಗೂ ಬಾಗೂರು ಪ್ರದೇಶಗಳ ಮೇಲೆ ಪ್ರಭುತ್ವ ಸ್ಥಾಪಿಸಿದ್ದರು. ಕ್ರಿ.ಶ. ೧೭೬೨ರಲ್ಲಿ ಕೊನೆಯ ಮದಕೇರಿನಾಯಕ(೧೭೫೪–೧೭೭೯)ನ ಕಾಲದಲ್ಲಿ ಹೈದರಾಲಿಯು ಚಿತ್ರದುರ್ಗ ಪ್ರಾಂತ್ಯದ ಮೇಲೆ ದಾಳಿಮಾಡಿ ಕೆಲವು ಗಡಿದುರ್ಗಗಳನ್ನು ವಶಪಡಿಸಿಕೊಂಡನು. ಅವುಗಳಲ್ಲಿ ಹೊಸದುರ್ಗ ಪರಿಸರದ ಹೊಸದುರ್ಗ, ಜಾನಕಲ್ಲು, ಬಾಗೂರು ಇವುಗಳನ್ನು ಕಾಣಬಹುದು.[೨೨] ತರುವಾಯ ಕೊನೆಯ ಮದಕೇರಿನಾಯಕನು ಹೈದರಾಲಿಯೊಂದಿಗೆ ೨ ಲಕ್ಷ ವರಹಗಳನ್ನು ನೀಡಿ ಸಂಧಾನ ಮಾಡಿಕೊಂಡು ಪುನಹ ಗಡಿದುರ್ಗಗಳನ್ನು ಹಿಂಪಡೆದನು. ಕ್ರಿ.ಶ. ೧೭೭೯ರ ಫೆಬ್ರವರಿಯಲ್ಲಿ ಹೈದರಾಲಿ ನಾಲ್ಕನೇ ಬಾರಿ ದಾಳಿಮಾಡಿ ಚಿತ್ರದುರ್ಗವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡ ಬಳಿಕ ಹೊಸದುರ್ಗ, ಜಾನಕಲ್ಲು ಹಾಗೂ ಬಾಗೂರು ಪ್ರದೇಶಗಳು ಹೈದರಾಲಿಯ ವಶವಾದವು. ಅಲ್ಲಿಂದ ೧೭೯೯ರಲ್ಲಿ ಟಿಪ್ಪು ೪ನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಸೋತು ಮರಣ ಹೊಂದುವವರೆಗೂ ಈ ಭಾಗಗಳು ಹೈದರಾಲಿ ಮತ್ತು ಟಿಪ್ಪು ಅವರುಗಳ ಆಳ್ವಿಕೆಗೆ ಒಳಪಟ್ಟಿದ್ದವು.

೨.೨.೧೨. ಮೈಸೂರು ಒಡೆಯರು

ಕ್ರಿ.ಶ. ೧೭೯೯ರಲ್ಲಿ ಶ್ರೀರಂಗಪಟ್ಟಣದ ನವಾಬ ಟಿಪ್ಪುಸುಲ್ತಾನನು ಬ್ರಿಟೀಷರೊಂದಿಗೆ ನಡೆಸಿದ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಸೋತು ಸಾವನ್ನಪ್ಪಿದನು. ಟಿಪ್ಪುವಿನ ಸಾವಿನ ಬಳಿಕ ಕ್ರಿ.ಶ. ೧೭೯೯ರ ಜುಲೈ ೬ ರಂದು ಬ್ರಿಟೀಷ್ ದಳಪತಿ ಕರ್ನಲ್ ಜೇಮ್ಸ್ ಡಾಲ್ರಿಂಪಲ್

ಚಿತ್ರದುರ್ಗವನ್ನು ಆಕ್ರಮಿಸಿ ಇಡೀ ಪ್ರಾಂತ್ಯವನ್ನು ವಶಪಡಿಸಿಕೊಂಡನು.[೨೫] ಈ ರೀತಿ ಮೈಸೂರು ಸಂಸ್ಥಾನವು ಬ್ರಿಟೀಷರ ಕೈವಶವಾದ ಬಳಿಕ ಲಕ್ಷ್ಮಮ್ಮಣಿ ಅವರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಪುನಹ ಮೈಸೂರು ಸಂಸ್ಥಾನವನ್ನು ಒಡೆಯರುಗಳಿಗೆ ಬಿಟ್ಟುಕೊಟ್ಟುದಲ್ಲದೆ, ಇದರ ಎಲ್ಲೆಗಳನ್ನು ಪುನರ್‌ವಿಂಗಡಿಸಲಾಯಿತು. ಮೈಸೂರು ಸಂಸ್ಥಾನದ ಅರಸರಾಗಿ ಚಾಮರಾಜ ಒಡೆಯರ ಪುತ್ರರೂ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ದತ್ತು ಪುತ್ರರೂ ಆಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೭೯೯ ಜೂನ್ ೩೦ ರಂದು ಬ್ರಿಟೀಷರಿಂದ ನೇಮಕಗೊಂಡರು.[೨೬] ತಮ್ಮ ಖುದ್ದು ರಾಜ್ಯಭಾರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ೧೮ ಕಛೇರಿಗಳನ್ನೂ, ೧೨೫ ಗಡಿ ಅಥವಾ ತಾಲೂಕುಗಳನ್ನೂ, ಈ ಗಡಿಗಳ ಮೇಲೆ ನಿಗಾ ಇಡಲು ೬ ಫೌಜುದಾರಿ ಅಥವಾ ತುಕಡಿಗಳನ್ನು ಸ್ಥಾಪಿಸಿದರು. ೬ ತುಕಡಿಗಳಲ್ಲಿ ಚಿತ್ರದುರ್ಗ ತುಕಡಿಯು ಒಂದಾಗಿದ್ದು, ಇದಕ್ಕೆ ೧೩ ತಾಲೂಕುಗಳು ಸೇರಿದ್ದವು. ಅವುಗಳಲ್ಲಿ ಹೊಸದುರ್ಗ ಮತ್ತು ಮತ್ತೋಡು ತಾಲೂಕುಗಳಾಗಿ, ಚಿತ್ರದುರ್ಗ ತುಕಡಿಯಲ್ಲಿ ಸಮಾವೇಶಗೊಂಡಿದ್ದವು. ಬೂದಿಹಾಳು ಪ್ರಾಂತ್ಯವು ಬೆಂಗಳೂರು ಫೌಜುದಾರಿಗೆ ಸೇರಿದ್ದಿತು. ಈ ಮೂಲಕ ಹೊಸದುರ್ಗ ತಾಲೂಕು ಪರಿಸರದಲ್ಲಿ ಮೈಸೂರು ಒಡೆಯರ ಆಳ್ವಿಕೆಯನ್ನು ಕಾಣಬಹುದು. ಕ್ರಿ.ಶ. ೧೭೯೯ ರಿಂದ ಮೈಸೂರು ಸಂಸ್ಥಾನಕ್ಕೆ ಸೇರಿದ ಹೊಸದುರ್ಗ ಪ್ರದೇಶದಲ್ಲಿ ಸಾಕಷ್ಟು ಬದಲಾವಣೆಗಳಾದವು. ೧೮೧೧ ರಿಂದ ೧೮೩೧ರವರೆಗೆ ಮಾತ್ರ ಮುಮ್ಮಡಿಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದಲ್ಲಿ ಸ್ವತಂತ್ರ ಆಳ್ವಿಕೆ ನಡೆಸಿದರು. ನಂತರ ತಮ್ಮ ಅಧಿಕಾರವನ್ನು ಬ್ರಿಟೀಷರಿಗೆ ಬಿಟ್ಟುಕೊಡಬೇಕಾಯಿತು. ಇದಕ್ಕೆ ಕಾರಣ ಮೈಸೂರು ಸಂಸ್ಥಾನದಲ್ಲಿ ಬುಗಿಲೆದ್ದ ದಂಗೆಗಳನ್ನು ಅಡಗಿಸುವಲ್ಲಿ ಒಡೆಯರು ವಿಫಲರಾದದ್ದು, ಇದರಲ್ಲಿ ರೈತರ ದಂಗೆ ಪ್ರಧಾನವಾಗಿತ್ತು. ಹೊಸದುರ್ಗ ಪರಿಸರದಲ್ಲೂ ಈ ದಂಗೆಗಳು ಎದ್ದವು. ಇಲ್ಲಿನ ಬೂದಿಹಾಳು ಪ್ರಾಂತ್ಯದಲ್ಲಿ ರೈತರು ದಂಗೆ ಎದ್ದರು. ಇದರ ಶಮನಕ್ಕಾಗಿ ಮುಮ್ಮಡಿಕೃಷ್ಣರಾಜ ಒಡೆಯರು ದಂಗೆ ಸಂಭವಿಸಿದ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡರೂ ಸಹ ದಂಗೆಗಳು ಹಡಗಿಹೋಗಲಿಲ್ಲ. ಆಗ ಆಡಳಿತದ ಅಸಮರ್ಥತೆಯನ್ನು ಕಾರಣವಾಗಿಸಿ ಬ್ರಿಟೀಷರು ಅಧಿಕಾರವನ್ನು ವಶಪಡಿಸಿಕೊಂಡರು. ೧೮೩೧ ರಿಂದ ೧೮೮೧ರವರೆಗೆ ಮೈಸೂರು ಸಂಸ್ಥಾನದಲ್ಲಿ ಬ್ರಿಟೀಷ್ ಕಮಿಷನರ್ ಆಳ್ವಿಕೆ ಕಂಡುಬಂದಿತು.

೨.೨.೧೩ ಸ್ವಾತಂತ್ರ್ಯ ಹೋರಾಟ

ಸ್ವಾತಂತ್ರ್ಯ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ ಮೈಸೂರು ಸಂಸ್ಥಾನದ ಒಂದು ಭಾಗವಾಗಿದ್ದು, ಸ್ವಾತಂತ್ರ್ಯ ಹೋರಾಟ ೧೯೨೦ರ ನಂತರ ಪ್ರಾರಂಭವಾಯಿತು. ೧೯೩೦ರಲ್ಲಿ ಬೆಂಗಳೂರು ನಗರದಲ್ಲಿ ನಡೆದ ಯುವಸಮ್ಮೇಳನವು ಚಿತ್ರದುರ್ಗ ಜಿಲ್ಲೆಯ ರಾಜಕೀಯ ಜಡತೆಯನ್ನು ಸ್ವಲ್ಪಮಟ್ಟಿಗೆ ಹೊಡೆದಟ್ಟಿತು.[೨೭] ಅಲ್ಲಿಯವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಮುಖ ರಾಜಕೀಯ ಪತ್ರಿಕೆಗಳಾಗಲಿ ಅಥವಾ ಕಾರ್ಯಕರ್ತರಾಗಲೀ ಇರಲಿಲ್ಲ. ೧೯೩೦ರ ಸಮ್ಮೇಳನದ ಮುಖ್ಯಗುರಿ ಸಂಸ್ಥಾನದಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ ಜನತೆಗೆ ಜವಾಬ್ದಾರಿ ಸರ್ಕಾರದ ಅವಶ್ಯಕತೆಯನ್ನು ಮನನಗೊಳಿಸುವುದೇ ಆಗಿತ್ತು. ಚಿತ್ರದುರ್ಗ ಜಿಲ್ಲೆಯು ೧೯೩೦ರ ಸುಮಾರಿಗೆ ಬ್ರಿಟೀಷ್ ಕರ್ನಾಟಕದೊಂದಿಗೆ ರಾಜಕೀಯ ಬಾಂಧವ್ಯ ಏರ್ಪಡಿಸಿಕೊಂಡಿತು. ೧೯೩೨ರ ಕಾನೂನು

ಭಂಗ ಚಳವಳಿ ಇಲ್ಲಿ ಬಲವಾಗಿಯೇ ಪ್ರಾರಂಭವಾಯಿತು.[೨೨] ೧೯೩೭ರ ಮೇ ೧೬ ರಂದು ಎನ್.ಎಸ್. ಹರ್ಡೀಕರ್, ಶ್ರೀಮತಿ ಉಮಾಬಾಯಿ ಕುಂದಾಪುರ ಮತ್ತು ವಾಸುದೇವರಾವ್ ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ಧವ್ವನಹಳ್ಳಿಗೆ ಬೇಟಿನೀಡಿದ್ದರು. ಹರ್ಡೀಕರ್ ಜನತೆಯನ್ನುದ್ದೇಶಿಸಿ ಮಾತನಾಡುತ್ತಾ "ಮೈಸೂರು ಸಂಸ್ಥಾನವು ರೈತರಿಂದ ಸಂಗ್ರಹಿಸಿದ ಅಧಿಕ ತೆರಿಗೆಯ ಆದಾಯವನ್ನು ವೈಸ್‌ರಾಯ್, ಗೌವರ್ನರ್ ಮತ್ತು ಇತರ ಅಧಿಕಾರಿಗಳು ಸಂಬಳ ರೂಪದಲ್ಲಿ ಪಡೆಯುತ್ತಿದ್ದಾರೆ. ಅವರು ವಿಧಿಸಿದ ಭೂಕಂದಾಯದಲ್ಲಿ ರಿಯಾಯಿತಿಯನ್ನಾಗಲಿ ಅಥವಾ ಭೂಕಂದಾಯವನ್ನು ಕೊಡಲು ತಪ್ಪಿಸಿಕೊಳ್ಳುವುದು ಯಾವ ರೈತರಿಂದಲೂ ಸಾಧ್ಯವಿಲ್ಲ. ತಾವು ಬೆಳೆಯನ್ನು ಬೆಳೆಯದಿದ್ದರೂ, ನಿಗದಿಪಡಿಸಿದ ತೆರಿಗೆಯನ್ನು ನೀಡಲೇಬೇಕು. ಇಂತಹ ವ್ಯವಸ್ಥೆಯ ವಿರುದ್ಧ ಪ್ರತಿಹಳ್ಳಿಯ ರೈತರು ಸಂಘಟಿತರಾಗಿ ಹೋರಾಡುವುದು ಅವಶ್ಯವಾಗಿದೆ" ಎಂದರು.[೨೩] ನಂತರ ಹೊಸದುರ್ಗ ಮತ್ತು ಬಾಗೂರು ಗ್ರಾಮಕ್ಕೆ ಭೇಟಿನೀಡಿ ೧೬ ಮೇ ೧೯೩೭ರಂದು ಹುಬ್ಬಳ್ಳಿಗೆ ಹಿಂದಿರುಗಿದರು. ಪುನಹ ಅಲ್ಲಿಂದ ದಾವಣಗೆರೆಗೆ ಬಂದ ಇವರುಗಳು ಎಸ್. ನಿಜಲಿಂಗಪ್ಪ ಮತ್ತು ಎಸ್.ವಾಸುದೇವರಾವ್ ಮುಂತಾದವರನ್ನು ಬರಮಾಡಿಕೊಂಡು ಚಿತ್ರದುರ್ಗ ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ಪರ ಪ್ರಚಾರ ಕೈಗೊಂಡರು. ಇವರ ಪ್ರವಾಸವು ಜಿಲ್ಲೆಯಲ್ಲಿ ವ್ಯಾಪಕ ಪ್ರಭಾವವನ್ನು ಬೀರಿತು. ಹೊಸದುರ್ಗ ತಾಲೂಕಿನಲ್ಲೂ ಪ್ರವಾಸ ಕೈಗೊಂಡು ತಮ್ಮ ಸಾರ್ವಜನಿಕ ಭಾಷಣದಲ್ಲಿ 'ಜವಾಬ್ದಾರಿ ಸರಕಾರವನ್ನು ರಚಿಸುವುದರ ಜೊತೆಗೆ ವಸಾಹತುಶಾಹಿಯ ವಿರುದ್ಧ ಹೋರಾಟ ಮಾಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.[೨೪]

೧೯೩೭ ನವೆಂಬರ್ ೩ ರಂದು ಹೊಸದುರ್ಗ ತಾಲೂಕು ಕಾಂಗ್ರೆಸ್ ಸಮಿತಿ ರಚನೆಯಾಯಿತು. ನರಸಿಂಹಶೆಟ್ಟಿ ಎಂಬುವವರು ಇದರ ಅಧ್ಯಕ್ಷರಾದರು. ಈ ತಾಲೂಕು ಸಮಿತಿಯ ಆಹ್ವಾನದ ಮೇರೆಗೆ ೧೯೩೭ ನವೆಂಬರ್ ೧೮ ರಂದು ಎಚ್.ಕೆ.ವೀರಣ್ಣಗೌಡ ಹೊಸದುರ್ಗ ಪಟ್ಟಣಕ್ಕೆ ಬಂದರು. ಅವರು ಸ್ಥಳೀಯ ಬನಶಂಕರಿ ದೇವಾಲಯದಲ್ಲಿ ಸಾರ್ವಜನಿಕ ಸಭೆಯನ್ನು ಕುರಿತು ಮಾತನಾಡಿದರು. ಈ ಸಭೆಯನ್ನು ತಡೆಯಲು ಸ್ಥಳೀಯ ಅಮಲ್ದಾರರು ಮ್ಯಾಜಿಸ್ಟ್ರೇಟ್‌ರಾಗಿ ೧೪೪ನೇ ಸೆಕ್ಷನ್ ಕಾಯಿದೆಯನ್ನು ಜಾರಿಗೊಳಿಸಿ ಸಾರ್ವಜನಿಕ ಸಭೆಗಳು ನಡೆಯದಂತೆ ತಡೆದರು. ನಂತರ ಹೆಚ್.ಕೆ. ವೀರಣ್ಣಗೌಡರು ಸಾರ್ವಜನಿಕರನ್ನುದ್ದೇಶಿಸಿ ಭಾಷಣ ಮಾಡುತ್ತಾ ಕಾಂಗ್ರೇಸ್ ಸದಸ್ಯತ್ವವನ್ನು ಪಡೆಯುವುದು ಅತ್ಯವಶ್ಯವೆಂದು ಹೊಸದುರ್ಗ ಜನರು ಹೇಡಿತನದಿಂದ ಬಂದು ಕುಳಿತಿರುವುದನ್ನು ನೋಡಿದರೆ ಕಾಂಗ್ರೆಸ್‌ನ ವಿಚಾರ ಸಂದೇಶವು ನಿಮಗೆ ತಿಳಿದಿಲ್ಲ ಎಂದು ತೋರುತ್ತದೆ. ಸರಕಾರದವರು ಜನತೆಯ ಸೇವಕರು. ಇದನ್ನು ರೈತರು ತಿಳಿಯಬೇಕು. ಆದ್ದರಿಂದ ಈ ವ್ಯವಸ್ಥೆಯನ್ನು ಹೋಗಲಾಡಿಸಲು ತಾವೆಲ್ಲರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದು ಅವಶ್ಯಕವೆಂದು ಮನವರಿಕೆ ಮಾಡಿದರು.[೨೫] ೧೯೩೭ರಲ್ಲಿ ಹೊಸದುರ್ಗ ತಾಲೂಕು ಕಾಂಗ್ರೆಸ್ ಸಮಿತಿಯ ವತಿಯಿಂದ ಹೊಸದುರ್ಗ ಹಾಗೂ ಬಾಗೂರಿನಲ್ಲಿ ತಿಲಕರ ಜಯಂತಿಯನ್ನು ಆಚರಿಸಲಾಯಿತು. ಈ ರೀತಿ ಹೊಸದುರ್ಗ ತಾಲೂಕು ಸ್ವಾತಂತ್ರ್ಯ ಚಳವಳಿಯಲ್ಲಿ ತನ್ನದೆ ಆದ ಪಾತ್ರವನ್ನು ವಹಿಸಿದೆ.

ಹೀಗೆ ಹೊಸದುರ್ಗ ತಾಲೂಕು ಪರಿಸರವನ್ನು ವಿವಿಧ ಕಾಲಘಟ್ಟಗಳಲ್ಲಿ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ನೊಳಂಬ, ಉಚ್ಚಂಗಿ ಪಾಂಡ್ಯ, ಹೊಯ್ಸಳ, ವಿಜಯನಗರ ರಾಜಮನೆತನಗಳು ಹಾಗೂ ಬೂದಿಹಾಳು-ಮತ್ತೋಡು-ಚಿತ್ರದುರ್ಗ-ಸಂತೇಬೆನ್ನೂರು-ಬೇಲೂರು ನಾಯಕ ಅರಸರು, ಶ್ರೀರಂಗಪಟ್ಟಣದ ನವಾಬರು, ಮೈಸೂರು ಒಡೆಯರು, ಬ್ರಿಟೀಷರು ಸೇರಿದಂತೆ ಮುಂತಾದವರು ತಮ್ಮ ಸಾಮ್ರಾಜ್ಯ ಹಾಗೂ ಸಂಸ್ಥಾನದೊಳಗೆ ಸೇರಿಸಿಕೊಂಡು ಆಳ್ವಿಕೆ ನಡೆಸಿದ್ದು, ಕ್ರಿ.ಶ. ೩ನೇ ಶತಮಾನದಿಂದ ಕ್ರಿ.ಶ. ೨೦ನೇ ಶತಮಾನದ ಮಧ್ಯಭಾಗದ ವರೆಗೂ ಈ ಪ್ರದೇಶವು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವ ಪಡೆದಿದೆ.

ಟಿಪ್ಪಣಿಗಳು

೧. ಸೋಮಶೇಖರ್ ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ**, ಪು. ೧೦೮.

೨. ಅದೇ.

೩. ಶೀಲಾಕಾಂತ ಪತ್ತಾರ, ೨೦೦೬, ಬಾದಾಮಿ, ಪು. III.

೪. ಶ್ರೀಪಾದರಾವ್ ಬಿಚ್ಚುಗತ್ತಿ, ೨೦೦೧, **'ಮಲೆನಾಡಿನ ದೇಗುಲಗಳ ವಾಸ್ತುಶಿಲ್ಪದ ಹಿನ್ನೆಲೆ', ಹೊಸಗುಂದ** ಇತಿಹಾಸ ನಿಬಂಧಗಳು, ಕಲ್ಲಾಪುರ ಜಿ.ವಿ.(ಸಂ), ಪು. ೪೨.

೫. **ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ**, ೨೦೦೬-೦೭, ಪು. ೧.

೬. ಅದೇ, ಪು.೫

೭. **ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ**, ಸಂಪುಟ-೧, ೨೦೦೫, ಪು. ೯೬೭.

೮. ಅದೇ.

೯. **ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ**, ೨೦೦೬-೦೭, ಪು. ೮೩.

೧೦. **ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ**, ೨೦೦೫, ಪೂರ್ವೋಕ್ತ, ಪು. ೯೬೭.

೧೧. ಅದೇ.

೧೨. ಅದೇ.

೧೩. ಶಿವರುದ್ರಪ್ಪ, ಟಿ.ವಿ., ೧೯೮೭, **ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ**, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೫೬೮

೧೪. ಉಜ್ಜನಪ್ಪ, ಜಿ.ಎಸ್., ೨೦೦೬, **ದಾಖಲಾಗಿರುವ ಪ್ರಾಚೀನ ಚಿತ್ರದುರ್ಗ ಜಿಲ್ಲೆಯ ಕೃಷಿ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ .ಆರ್(ಸಂ), ಪು. ೨೫೪.

೧೫. **ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ**, ೨೦೦೫, ಪೂರ್ವೋಕ್ತ, ಪು. ೯೬೭.

೧೬. ಶಿವರುದ್ರಪ್ಪ, ಟಿ.ವಿ., ೧೯೮೭, **ಪೂರ್ವೋಕ್ತ**, ಪು. ೫೭೩.

೧೭. ಅದೇ.

೧೮. ಅದೇ, ಪು. ೫೬೮

೧೯. ಅದೇ, ಪು. ೫೬೯.

೨೦. ಅದೇ.

೨೧. **ಕನ್ನಡ ವಿಷಯ ವಿಶ್ವಕೋಶ – ಕರ್ನಾಟಕ**, ೨೦೦೫, ಪೂರ್ವೋಕ್ತ, ಪು. ೯೬೭

೨೨. ಅದೇ.

೨೩. ಬಾಗೂರು ಆರ್. ನಾಗರಾಜಪ್ಪ, ೧೯೮೪, **ಹೊಸದುರ್ಗದ ಸುತ್ತ**, ಪು. ೧.

೨೪. **ಕನ್ನಡ ವಿಷಯ ವಿಶ್ವಕೋಶ**, ೧೯೭೯, ಪು. ೧೬೩೮.

೨೫. ಹೊಸದುರ್ಗ ತಾಲೂಕು ಆಫೀಸಿನಿಂದ ಪಡೆದ ಮಾಹಿತಿ.

೨೬. ಲೋಕೇಶ್ವರಪ್ಪ, ಹಿ.ಎಲ್., ೨೦೦೦, **ಹೊಸದುರ್ಗ ತಾಲೂಕಿನ ನೆಲ-ಜಲ-ಮಳೆ-ಬೆಳೆ**, ಕಲ್ಪಾದ್ರಿ, ಬಾಗೂರು ಆರ್.ನಾಗರಾಜಪ್ಪ, ಬಸವರಾಜ ಶಿವಪುರ(ಸಂ), ಪು. ೬೮.

೨೭. ಅದೇ.

೨೮. ರಾಮದಾಸರೆಡ್ಡಿ.ಎಸ್.ಜಿ., ೨೦೦೯, **ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ**, ಪು. ೧೪೮.

೨೯. ಲೋಕೇಶ್ವರ, ಹಿ.ಎಲ್., ೨೦೦೦, **ಪೂರ್ವೋಕ್ತ**, ಪು. ೬೮.

೩೦. ಅದೇ, ಪು. ೬೮-೬೯

೩೧. ಅದೇ, ಪು. ೬೮-೬೯

೩೨. **ಕನ್ನಡ ವಿಷಯ ವಿಶ್ವಕೋಶ-ಕರ್ನಾಟಕ**, ೨೦೦೫, ಪೂರ್ವೋಕ್ತ, ಪು. ೯೬೭

೩೩. **ಕನ್ನಡ ವಿಷಯ ವಿಶ್ವಕೋಶ-ಕರ್ನಾಟಕ**, ೧೯೭೯, ಪೂರ್ವೋಕ್ತ, ಪು. ೧೬೩೮.

೩೪. **ಕನ್ನಡ ವಿಷಯ ವಿಶ್ವಕೋಶ-ಕರ್ನಾಟಕ**, ೨೦೦೫, ಪೂರ್ವೋಕ್ತ, ಪು. ೯೬೭

೩೫. ಅದೇ.

೩೬. ಸೋಮಶೇಖರ್, ಎಸ್.ವೈ., ೨೦೦೬, **'ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು'**, ದುರ್ಗಸಿರಿ, ರಾಜಶೇಖರಪ್ಪ .ಬಿ(ಸಂ), ಪು. ೧೪.

೩೭. ಅದೇ, ಪು. ೧೫.

೩೮. ಶಿವತಾರಕ್, ಕೆ.ಬಿ., ೨೦೦೬, **ಪೂರ್ವೋಕ್ತ**, ಪು. ೨೫.

೩೯. ರಾಮದಾಸರೆಡ್ಡಿ, ಎಸ್.ಜಿ., ೨೦೦೯, **ಪೂರ್ವೋಕ್ತ**, ಪು. ೧೫೩.

೪೦. ಸೋಮಶೇಖರ್, ಎಸ್.ವೈ., ೨೦೦೬, **ಪೂರ್ವೋಕ್ತ**, ಪು. ೩೦.

೪೧. ಶಿವತಾರಕ್, ಕೆ.ಬಿ., ೨೦೦೬, **ಪೂರ್ವೋಕ್ತ**, ಪು. ೩೧.

೪೨. ಲಕ್ಷ್ಮಣ್ ತೆಲಗಾವಿ, ೨೦೦೫, **ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾಕ್ಚಾರಿತ್ರಿಕ ಕಲೆ, ಚಿತ್ರದುರ್ಗ** ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ .ಆರ್(ಸಂ), ಪು. ೪೬.

೪೩. ಷೇಕ್‌ಅಲಿ. ಬಿ(ಪ್ರ.ಸಂ)., ೧೯೯೭, **ಕರ್ನಾಟಕ ಚರಿತ್ರೆ**, ಸಂಪುಟ-೧, ಪು. ೨೮೬.

೪೪. ಕೃಷ್ಣ, ಎಂ.ಹೆಚ್., **ಕರ್ನಾಟಕ ಪೂರ್ವಚರಿತ್ರೆ**, ಪು. ೩೨.

೪೫. ಲಕ್ಷ್ಮಣ್ ತೆಲಗಾವಿ, ೨೦೦೪, ಪು. ೩೭.

೪೬. ಶಿವತಾರಕ್, ಕೆ.ಬಿ., ೨೦೦೫, **ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ .ಆರ್(ಸಂ), ಪು. ೩೩.

೪೭. ಕೃಷ್ಣರಾವ್, ಎಂ.ವಿ., ೧೯೭೦, **ಕರ್ನಾಟಕ ಇತಿಹಾಸ ದರ್ಶನ**, ಪು. ೩೦.

೪೮. ಲಕ್ಷ್ಮಣ್ ತೆಲಗಾವಿ, ೨೦೦೪, **ಪೂರ್ವೋಕ್ತ**, ಪು. ೮೫.

೪೯. ಅದೇ, ಪು. ೮೬

೫೦. ಅದೇ, ೨೧೭

೫೧. ಬಾಗೂರು ಆರ್. ನಾಗರಾಜಪ್ಪ, ೧೯೮೪, **ಪೂರ್ವೋಕ್ತ**, ಪು. ೨೬

೫೨. ಲಕ್ಷ್ಮಣ್ ತೆಲಗಾವಿ, ೨೦೦೨, **ವೇದಾವತಿ ನದಿದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನಕಾಲೀನ ಹೊಸನಾಣ್ಯಗಳು**, ಇತಿಹಾಸ ದರ್ಶನ, ಸಂಪುಟ-೧೭, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ.(ಸಂ), ಪು. ೪೦.

೫೩. ರಘುನಾಥಭಟ್, ಎಚ್.ಆರ್., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆ**, ಚಂದ್ರವಳ್ಳಿ, ಶ್ರೀನಿವಾಸ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೭

೫೪. ಅದೇ, ಪು. ೭-೮.

೫೫. ಅದೇ, ಪು. ೮.

೫೬. ಅದೇ, ಪು. ೧೦.

೫೭. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೨೬

೫೮. ಲಕ್ಷ್ಮಣ್ ತೆಲಗಾವಿ., ೨೦೦೨, **ವೇದಾವತಿ ನದಿದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನಕಾಲೀನ ಹೊಸನಾಣ್ಯಗಳು**, ಪೂರ್ವೋಕ್ತ, ಪು. ೪೦.

೫೯. ಶ್ರೀನಿವಾಸಮೂರ್ತಿ ಎಚ್.ಎಂ., ರಾಮಕೃಷ್ಣ.ಆರ್., **ಸಮಗ್ರ ಕರ್ನಾಟಕ ಚರಿತ್ರೆ**, ಪು. ೪೭.

೬೦. ರಾಜಶೇಖರಪ್ಪ ಬಿ., ೨೦೦೧, **ದುರ್ಗಶೋಧನ**, ಪು. ೭-೯.

೬೧. ರಾಜಶೇಖರಪ್ಪ ಬಿ., ೨೦೦೧, **ಇತಿಹಾಸ ಕಥನ**, ಪು. ೩೭-೩೯.

೬೨. ಉಷಾ ಎಂ.ಎಚ್., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ**, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೧೪.

೬೩. ಅದೇ, ಪು. ೧೫.

೬೪. ಅದೇ.

೬೫. ದೀಕ್ಷಿತ್ ಸಿ.ಕೆ.ವೈ., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಚಾಲುಕ್ಯರ ಆಳ್ವಿಕೆ**, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೧೭

೬೬. ಅದೇ, ಪು. ೧೯

೬೭. ಅದೇ.

೬೮. ಅದೇ, ಪು.೨೦

೬೯. ಅದೇ.

೭೦. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಚಳ್ಳಕೆರೆ, ಸಂಖ್ಯೆ-೩೩ ಮತ್ತು ೩೪.

೭೧. ಸೀತಾರಾಮ್ ಜಾಗೀರ್‌ದಾರ್., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆ**, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೨೩.

೭೨. ಕೃಷ್ಣಮೂರ್ತಿ ಎಂ.ಎಸ್., ೧೯೮೭, **ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು**, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೩೬೫.

೭೩. Krishnamurthy .M.S., 1980, **The Nolambas,** P. 55.

೭೪. ಕೃಷ್ಣಮೂರ್ತಿ ಎಂ.ಎಸ್., ೧೯೮೭, **ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು**, ಪೂರ್ವೋಕ್ತ, ಪು. ೩೬೬.

೭೫. ಜಯಮ್ಮ ಕರಿಯಣ್ಣ ಎಚ್., ೨೦೦೫, **'ಚಿತ್ರದುರ್ಗ ಜಿಲ್ಲೆ ಮತ್ತು ನೊಳಂಬ ಪಲ್ಲವರು'**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು. ೭೧.

೭೬. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಚಳ್ಳಕೆರೆ, ಸಂಖ್ಯೆ-೩೩ ಮತ್ತು ೩೪.

೭೭. ಅದೇ, ಚಿತ್ರದುರ್ಗ, ಸಂಖ್ಯೆ-೬೨.

೭೮. ಅದೇ, ಜಗಳೂರು, ಸಂಖ್ಯೆ-೨೯.

೭೯. ನಾಗರಾಜು ಡಿ.ಎಂ., ೨೦೦೫, **ಚಿತ್ರದುರ್ಗ ಪ್ರದೇಶದ ಉಚ್ಚಂಗಿ ಪಾಂಡ್ಯರ ಒಂದು ರಾಜಕೀಯ ಅಧ್ಯಯನ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು. ೭೫.

೮೦. ಕೃಷ್ಣಮೂರ್ತಿ ಪಿ.ವಿ., ೧೯೮೭, **ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ**, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೩೯೩.

೮೧. ನಾಗರಾಜು ಡಿ.ಎಂ., ೨೦೦೫, **ಚಿತ್ರದುರ್ಗ ಪ್ರದೇಶದ ಉಚ್ಚಂಗಿ ಪಾಂಡ್ಯರ ಒಂದು ರಾಜಕೀಯ ಅಧ್ಯಯನ**, ಪೂರ್ವೋಕ್ತ, ಪು. ೭೫.

೮೨. ಅದೇ, ಪು. ೭೫-೭೬.

೮೩. ಅದೇ, ಪು. ೭೬.

೮೪. ಅದೇ.

೮೫. ಶ್ರೀಲತೆ., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆ**, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೪೩.

೮೬. ಅದೇ, ಪು. ೪೪.

೮೭. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೫೬

೮೮. ಅದೇ, ಹೊಳಲ್ಕೆರೆ, ಸಂಖ್ಯೆ-೧೩೦.

೮೯. ಅದೇ, ಹೊಳಲ್ಕೆರೆ, ಸಂಖ್ಯೆ-೧೩೧.

೯೦. ಅದೇ, ಹೊಳಲ್ಕೆರೆ, ಸಂಖ್ಯೆ-೧೦೬

೯೧. ಅದೇ, ಹೊಳಲ್ಕೆರೆ, ಸಂಖ್ಯೆ-೧೨೧.

೯೨. ಅದೇ, ಹೊಳಲ್ಕೆರೆ, ಸಂಖ್ಯೆ-೧೩೬

೯೩. Seshadri M., 1947-1956, **Annual Reports of Mysore Archaeological Department,** P. 34.

೯೪. Ibid.

೯೫. ದಯಾನಂದ ಪಾಟೀಲ್ ವಿ., ೨೦೦೫, **ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳ ವಾಸ್ತುಶಿಲ್ಪ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು. ೧೯೨.

೯೬. ಬಾಗೂರು ಆರ್. ನಾಗರಾಜಪ್ಪ., ೨೦೦೨, **ಹೆಗ್ಗೆರೆ ಬಸದಿ : ಒಂದು ಪರಿಚಯ**, ಪು. ೫.

೯೭. ಅದೇ.

೯೮. ಅದೇ, ಪು. ೧೮.

೯೯. ಅದೇ, ಪು. ೧೮-೧೯.

೧೦೦. ದಯಾನಂದ ಪಾಟೀಲ್ ವಿ., ೨೦೦೫, **ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳ ವಾಸ್ತುಶಿಲ್ಪ, ಪೂರ್ವೋಕ್ತ**, ಪು.೧೯೩.

೧೦೧. ರಾಜಶೇಖರಪ್ಪ ಬಿ., ೨೦೦೨, **ಚಿತ್ರದುರ್ಗ ಪ್ರದೇಶದ ಕೆರೆಗಳು : ನಿರ್ವಹಣೆಯ ಐತಿಹಾಸಿಕ ಅವಲೋಕನ**, ಕೆರೆ ನೀರಾವರಿ ನಿರ್ವಹಣೆ: ಚಾರಿತ್ರಿಕ ಅಧ್ಯಯನ, ರಾಜಾರಾಮ ಹೆಗಡೆ(ಸಂ), ಪು. ೧೧೩.

೧೦೨. ಅದೇ, ಪು. ೧೧೪.

೧೦೩. ಶಿವಣ್ಣ ಕೆ.ಎಸ್., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ, ಚಂದ್ರವಳ್ಳಿ**, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು. ೫೭

೧೦೪. ಅದೇ.

೧೦೫. ಅಪರ್ಣ ಕೂ.ಸ., ೨೦೦೫, **ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು. ೧೯೬

೧೦೬. ಶಿವಣ್ಣ ಕೆ.ಎಸ್., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ, ಪೂರ್ವೋಕ್ತ**, ಪು. ೫೭.

೧೦೭. ಕೃಷ್ಣಮೂರ್ತಿ ಪಿ.ವಿ., ೧೯೮೭, **ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ, ಪೂರ್ವೋಕ್ತ**, ಪು. ೩೭೬

೧೦೮. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೪೨.

೧೦೯. ಕೃಷ್ಣಮೂರ್ತಿ ಪಿ.ವಿ., ೧೯೮೭, **ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ, ಪೂರ್ವೋಕ್ತ**, ಪು.೩೯೫.

೧೧೦. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೭೨.

೧೧೧. ಪರಮಶಿವಮೂರ್ತಿ ಡಿ.ವಿ., ೨೦೧೦, **ಕೃಷ್ಣದೇವರಾಯನ ಶಾಸನಗಳು**, ಸಂಪುಟ-೧, ಸಂಖ್ಯೆ-೭೪.

೧೧೨. ಅದೇ, ಸಂಖ್ಯೆ-೭೮.

೧೧೩. ಅದೇ, ಸಂಖ್ಯೆ-೭೮.

೧೧೪. ಅದೇ, ಸಂಖ್ಯೆ-೧೧೬

೧೧೫. ಯೋಗೀಶ್ವರಪ್ಪ ಡಿ.ಎನ್., ೨೦೦೯, **ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು**, ಪು. ೧೭-೨೨.

೧೧೬. **ಎಪಿಗ್ರಾಫಿಯಾ ಕರ್ನಾಟಕ.**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೨೫.

೧೧೭. ಪರಮಶಿವಮೂರ್ತಿ ಡಿ.ವಿ., ೨೦೧೦, **ಕೃಷ್ಣದೇವರಾಯನ ಶಾಸನಗಳು**, ಸಂಪುಟ-೧, ಸಂಖ್ಯೆ-೧೯೧.

೧೧೮. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ-೧೨, ಚಿಕ್ಕನಾಯಕನಹಳ್ಳಿ, ಸಂಖ್ಯೆ-೫.

೧೧೯. **ಅದೇ, ಚಿಕ್ಕನಾಯಕನಹಳ್ಳಿ**, ಸಂಖ್ಯೆ-೬ ಮತ್ತು ೭.

೧೨೦. ಅದೇ, ಚಿಕ್ಕನಾಯಕನಹಳ್ಳಿ, ಸಂಖ್ಯೆ-೭

೧೨೧. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೦೧.

೧೨೨. ಕೃಷ್ಣಮೂರ್ತಿ ಪಿ.ವಿ., ೧೯೮೭, **ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ, ಪೂರ್ವೋಕ್ತ**, ಪು. ೩೯೮.

೧೨೩. ಅದೇ, ಪು. ೪೦೦-೪೦೧.

೧೨೪. ಕನ್ನಡ ವಿಷಯ ವಿಶ್ವಕೋಶ., ೧೯೮೭, ಪು. ೯೦೭ ಮತ್ತು ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ, ೧೯೭೦, **ಕರ್ನಾಟಕದ ಇತಿಹಾಸ ದರ್ಶನ**, ಪು. ೪೫೭.

೧೨೫. ಯೋಗೀಶ್ವರಪ್ಪ ಡಿ.ಎನ್., ೨೦೦೯, **ಪೂರ್ವೋಕ್ತ**, ಪು. ೧-೨.

೧೨೬. ಅದೇ, ಪು. VI.

೧೨೭. ಷೇಕ್ ಅಲಿ ಬಿ(ಪ್ರ.ಸಂ), ೧೯೯೭, **ಪೂರ್ವೋಕ್ತ**, ಪು. ೬೨

೧೨೮. ಅದೇ.

೧೨೯. ಅದೇ, ಪು. ೬೩

೧೩೦. ಲಕ್ಷ್ಮಣ್ ತೆಲಗಾವಿ., ೧೯೭೫, **ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ**, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೬೪.

೧೩೧. ಯೋಗೀಶ್ವರಪ್ಪ ಡಿ.ಎನ್., ೨೦೦೯, **ಪೂರ್ವೋಕ್ತ**, ಪು. ೧೩೨.

೧೩೨. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ(ಸಂ), ಪು. ೧೭೦.

೧೩೩. ಅದೇ, ಪು. ೧೭೧

೧೩೪. ಯೋಗೀಶ್ವರಪ್ಪ ಡಿ.ಎನ್., ೨೦೦೯, **ಪೂರ್ವೋಕ್ತ**, ಪು. ೧೩೩.

೧೩೫. ಅದೇ, ಪು. ೧೩೪

೧೩೬. ಅದೇ, ಪು. ೧೩೫

೧೩೭. ಅದೇ, ಪು. ೧೩೬

೧೩೮. ಅದೇ, ಪು. ೧೩೭

೧೩೯. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು, ಪೂರ್ವೋಕ್ತ**, ಪು. ೧೭೧.

೧೪೦. ಅದೇ. ಪು. ೧೭೨.

೧೪೧. **ಎಪಿಗ್ರಾಫಿಯಾ ಕರ್ನಾಟಿಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೯೮.

೧೪೨. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ಪೂರ್ವೋಕ್ತ, ಪು. ೧೭೨.

೧೪೩. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೬೪

೧೪೪. ಅದೇ

೧೪೫. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ಪೂರ್ವೋಕ್ತ, ಪು. ೧೭೩.

೧೪೬. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೦೧

೧೪೭. ಅದೇ, ಹಿರಿಯೂರು, ಸಂಖ್ಯೆ-೮೦.

೧೪೮. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೭೦.

೧೪೯. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೯೬

೧೫೦. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ಪೂರ್ವೋಕ್ತ, ಪು. ೧೭೪.

೧೫೧. ಅದೇ.

೧೫೨. ಅದೇ, ಪು. ೧೭೫.

೧೫೩. Francis Buchanan., 1999(Reprint), **A Journey from Madras Through the Countries of Mysore, Canara and Malabar**, P.368-369.

೧೫೪. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೦೧.

೧೫೫. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ಪೂರ್ವೋಕ್ತ, ಪು. ೧೭೬.

೧೫೬. ಅದೇ, ಪು. ೧೭೭.

೧೫೭. ಅದೇ, ಪು. ೧೭೭ ಮತ್ತು ಬಾಗೂರು ಆರ್. ನಾಗರಾಜಪ್ಪ, ೧೯೮೪, **ಪೂರ್ವೋಕ್ತ**, ಪು. ೬೫-೭೦.

೧೫೮. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು**, ಪೂರ್ವೋಕ್ತ, ಪು. ೧೭೭.

೧೫೯. ರಾಜಶೇಖರಪ್ಪ ಬಿ., ೨೦೦೨, **ಚಿತ್ರದುರ್ಗ ಪ್ರದೇಶದ ಕೆರೆಗಳು : ನಿರ್ವಹಣೆಯ ಐತಿಹಾಸಿಕ ಅವಲೋಕನ**, ಪೂರ್ವೋಕ್ತ, ಪು. ೧೨೧.

೧೬೦. ಯಶೋಧ ರಾಜಶೇಖರಪ್ಪ ಪಿ., ೨೦೦೧, **'ಮತ್ತೋಡು ಪಾಳೆಯಗಾರರು'**, ಪೂರ್ವೋಕ್ತ, ಪು. ೧೮೦.

೧೬೧. ಬಾಗೂರು ಆರ್. ನಾಗರಾಜಪ್ಪ, ೧೯೮೪, **ಪೂರ್ವೋಕ್ತ**, ಪು. ೫೦.

೧೬೨. ಶೈಲಜಾ ಎಸ್. ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ(ಸಂ), ಪು. ೧೩೦.

೧೬೩. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೫೦.

೧೬೪. ಅದೇ, ಪು. ೫೦-೫೧.

೧೬೫. ರಾಜಶೇಖರಪ್ಪ ಬಿ., ೨೦೦೧, **ಇತಿಹಾಸ ಕಥನ**, ಪು. ೮೯.

೧೬೬. ಶೈಲಜಾ ಎಸ್.ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ಪೂರ್ವೋಕ್ತ, ಪು. ೧೩೦.

೧೬೭. ರಾಜಶೇಖರಪ್ಪ .ಬಿ., ೨೦೦೧, **ಇತಿಹಾಸ ಕಥನ**, ಪು. ೮೯.

೧೬೮. ತಿಪ್ಪಯ್ಯ .ಓ.ಎಂ., **ಶ್ರೀರಾಂಪುರ ಸ್ಥಳನಾಮವಿವೇಚನೆ**, ಸಿರುಮ(ಸ್ಮರಣ ಸಂಚಿಕೆ), ಈರಣ್ಣ.ಹೆಚ್(ಸಂ), ಪು. ೨೮.

೧೬೯. ಅದೇ.

೧೭೦. ರಾಜಶೇಖರಪ್ಪ ಬಿ., ೨೦೦೧, **ಇತಿಹಾಸ ಕಥನ**, ಪು. ೮೯.

೧೭೧. ಅದೇ.

೧೭೨. ಶೈಲಜಾ ಎಸ್. ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ಪೂರ್ವೋಕ್ತ, ಪು. ೧೩೧.

೧೭೩. ಅದೇ.

೧೭೪. Francis Buchanan., 1999(Reprint), **Aforesaid**, P. 379.

೧೭೫. ರಾಜಶೇಖರಪ್ಪ ಬಿ.೨೦೦೧, **ಇತಿಹಾಸ ಕಥನ**, ಪು. ೯೦.

೧೭೬. ಅದೇ, ಪು. ೯೩.

೧೭೭. ಅದೇ, ಪು. ೯೦-೯೪.

೧೭೮. ಅದೇ, ಪು. ೯೧.

೧೭೯. ಅದೇ, ಪು. ೧೦೦.

೧೮೦. ಅದೇ.

೧೮೧. ಶೈಲಜಾ ಎಸ್.ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ಪೂರ್ವೋಕ್ತ, ಪು. ೧೪೦.

೧೮೨. ಅದೇ, ಪು. ೧೪೬.

೧೮೩. ಅದೇ.

೧೮೪. ರಾಜಶೇಖರಪ್ಪ .ಬಿ., ೨೦೦೧, **ಪೂರ್ವೋಕ್ತ**, ಪು.೧೦೧.

೧೮೫. ಶೈಲಜಾ ಎಸ್.ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ಪೂರ್ವೋಕ್ತ, ಪು. ೧೪೭.

೧೮೬. ಅದೇ, ಪು. ೧೪೮.

೧೮೭. ಅದೇ, ಪು. ೧೪೯.

೧೮೮. ಅದೇ.

೧೮೯. ಅದೇ, ಪು. ೧೫೦.

೧೯೦. ಸಂತೇಬೆನ್ನೂರು ಸುಮತೀಂದ್ರ ನಾಡಿಗ್., ೨೦೦೧, **ಸಂತೇಬೆನ್ನೂರು ನಾಯಕರು**, ಮಲೆಕರ್ನಾಟಕದ ಅರಸುಮನೆತನಗಳು, ರಾಜರಾಮ ಹೆಗಡೆ, ಅಶೋಕ್ ಶೆಟ್ಟರ್(ಸಂ), ಪು.೨೪೦.

೧೯೧. ಸಂತೇಬೆನ್ನೂರು ಸುಮತೀಂದ್ರ ನಾಡಿಗ್., ೨೦೦೮, **ಸಂತೇಬೆನ್ನೂರು ನಾಯಕರು**, ಪು. ೨೮.

೧೯೨. ಅದೇ.

೧೯೩. ಅದೇ, ಪು. ೫-೬

೧೯೪. ಸಂತೇಬೆನ್ನೂರು ಸುಮತೀಂದ್ರ ನಾಡಿಗ್., ೨೦೦೧, **ಪೂರ್ವೋಕ್ತ,** ಪು. ೨೪೫.

೧೯೫. ಅದೇ, ಪು. ೨೬೭-೨೬೮.

೧೯೬. **ಎಪಿಗ್ರಾಫಿಯಾ ಕರ್ನಾಟಿಕ.,** ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೧೫.

೧೯೭. ಅದೇ, ಹೊಳಲ್ಕೆರೆ, ಸಂಖ್ಯೆ-೯೨.

೧೯೮. ಅದೇ, ಹೊಳಲ್ಕೆರೆ, ಸಂಖ್ಯೆ-೪೦.

೧೯೯. ರಾಜಶೇಖರಪ್ಪ ಬಿ(ಸಂ)., ೨೦೦೭, **ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು,** ಪು. xxxi.

೨೦೦. ಲಕ್ಷ್ಮಣ್ ತೆಲಗಾವಿ., ೨೦೦೯, **ಚಿತ್ರದುರ್ಗ ನಾಯಕ ಅರಸರು: ರಾಜಕೀಯ ಚಿತ್ರ,** ಪು. ೧.

೨೦೧. ಅದೇ, ಪು.೩.

೨೦೨. ರಾಜಶೇಖರಪ್ಪ ಬಿ(ಸಂ)., ೨೦೦೭, **ಪೂರ್ವೋಕ್ತ,** ಪು. ೬

೨೦೩. ಅದೇ, ಪು.೭.

೨೦೪. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ,** ಪು. ೧೦೩-೧೦೪.

೨೦೫. ಅದೇ, ಪು. ೧೦೪.

೨೦೬. ಅದೇ, ಪು. ೧೦೪-೧೦೫.

೨೦೭. ಲಕ್ಷ್ಮಣ್ ತೆಲಗಾವಿ., ೨೦೦೯, **ಪೂರ್ವೋಕ್ತ,** ಪು. ೪೬

೨೦೮. ಯಶೋಧ ರಾಜಶೇಖರಪ್ಪ .ಪಿ., ೨೦೦೪, **ಮತ್ತೋಡು ಪಾಳೆಯಗಾರರು, ಪೂರ್ವೋಕ್ತ,** ಪು. ೧೭೮.

೨೦೯. ಲಕ್ಷ್ಮಣ್ ತೆಲಗಾವಿ., ೨೦೦೯, **ಪೂರ್ವೋಕ್ತ,** ಪು. ೬೨.

೨೧೦. ಅದೇ, ಪು. ೬೩.

೨೧೧. ಅದೇ, ಪು. ೧೯.

೨೧೨. ಅದೇ.

೨೧೩. ಅದೇ, ಪು. ೨೧.

೨೧೪. ಅದೇ.

೨೧೫. ಯೋಗೀಶ್ವರಪ್ಪ ಡಿ.ಎನ್., ೨೦೦೯, **ಪೂರ್ವೋಕ್ತ,** ಪು. ೫.

೨೧೬. ಅದೇ, ಪು.೨೧.

೨೧೭. **ಎಪಿಗ್ರಾಫಿಯಾ ಕರ್ನಾಟಿಕ,** ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೧೦.

೨೧೮. ಅದೇ, ಹೊಳಲ್ಕೆರೆ, ಸಂಖ್ಯೆ-೧೧೪.

೨೧೯. ಅದೇ, ಹೊಳಲ್ಕೆರೆ, ಸಂಖ್ಯೆ-೧೧೨.

೨೨೦. ಅದೇ, ಹೊಳಲ್ಕೆರೆ, ಸಂಖ್ಯೆ-೧೧೩.

೨೨೧. ಅದೇ, ಹೊಳಲ್ಕೆರೆ, ಸಂಖ್ಯೆ-೧೧೮.

೨೨೨. ಲಕ್ಷ್ಮಣ್ ತೆಲಗಾವಿ., ೨೦೦೯, **ಪೂರ್ವೋಕ್ತ,** ಪು.೨೧.

೨೨೩. ಲಕ್ಷ್ಮಣ್ ತೆಲಗಾವಿ., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಮೈಸೂರು ಒಡೆಯರ ಆಳ್ವಿಕೆ,** ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು. ೧೦೧.

೨೨೪. ಅದೇ, ಪು. ೧೦೨.

೨೨೫. ರಾಮರತನ್ ಜೆ., ೧೯೭೬, **ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ,** ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು. ೧೦೭

೨೨೬. ಅದೇ.

೨೨೭. ಬಸವರಾಜಪ್ಪ ಹೆಚ್.ಈ., ೨೦೦೨, **ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮೇಲೆ ಹೊಸಬೆಳಕು,** ಇತಿಹಾಸ ದರ್ಶನ, ಸಂಪುಟ–೧೭, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ), ಪು. ೩೪೯–೩೫೦.

೨೨೮. ಅದೇ, ಪು. ೩೫೦.

೨೨೯. ಅದೇ, ಪು. ೩೫೧.

❑❑❑

ಅಧ್ಯಾಯ : ಮೂರು

ಸ್ಥಳನಾಮಗಳ ವಿವೇಚನೆ

೩.೧. ಸ್ಥಳನಾಮಗಳ ಉಗಮ ಮತ್ತು ವಿಕಾಸ

೩.೨. ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ

೩.೩. ಕೆಲವು ಪ್ರಮುಖ ಸ್ಥಳನಾಮಗಳ ವಿಶ್ಲೇಷಣೆ

ಅಧ್ಯಾಯ : ಮೂರು

ಸ್ಥಳನಾಮಗಳ ವಿವೇಚನೆ

ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು, ಪ್ರಕೃತಿಯಲ್ಲಿ ತನ್ನ ಜೀವನ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಮನಗಂಡನೋ ಆಗ ಊರು-ಹಳ್ಳಿಗಳ ಉಗಮವಾಯಿತು. "ನೆಲದೊಂದಿಗೆ ಹೋರಾಡುವ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿತ್ತ. ಆ ಸ್ಥಳ ಅವನ ಜೀವನದಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇರದಿರಲಿ, ಒಂದು ಜನಾಂಗದ ಸ್ಮೃತಿಯನ್ನು ಹೊತ್ತ ಆ ಗುರುತು ಪಟ್ಟಿಕೆ ಹಾಗೆಯೇ ಬಳಕೆಯಾಗಹತ್ತಿತ್ತು; ಹಲವು ಜನಾಂಗಗಳ ಸ್ಮೃತಿಯ ಒಂದು ಕೊಂಡಿ ಎನಿಸಿತು, ಈ ಕೊಂಡಿಯೇ ಸ್ಥಳನಾಮ".[೧] ಸ್ಥಳನಾಮಗಳು ಇಂದು ಚರಿತ್ರೆಯ ಪ್ರಧಾನ ಆಕರಗಳೆನಿಸಿದ ಶಾಸನಗಳು ಅಥವಾ ಅವುಗಳಿಗಿಂತ ಹೆಚ್ಚು ವಿಶ್ವಾಸನೀಯವಾಗಿ ಮತ್ತು ಚಾರಿತ್ರಿಕ ಆಕರಗಳು ಒದಗಿಸುವ ಸಾಕ್ಷಾಧಾರಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ಸಾಧನಗಳಾಗಿವೆ.[೨]

ಸ್ಥಳನಾಮಗಳು ಮಾನವ ಜನಾಂಗದ ಅವನು ರೂಪಿಸಿಕೊಂಡ ಜೀವನ ವಿಧಾನದ ಹಾಗೂ ನಾಗರಿಕತೆಯ ವಿವಿಧ ಹಂತದ ಚಿತ್ರಣಗಳನ್ನು ನೀಡುತ್ತವೆ. ಇವುಗಳು ಇತಿಹಾಸ, ಪುರಾಣ, ಧರ್ಮ, ಸಂಸ್ಕೃತಿ, ಜನರ ಆಚಾರ ವಿಚಾರ, ಭಾಷೆಯ ಪ್ರಭಾವ, ಭೂಸ್ಥಿತಿ ಮೊದಲಾದ ವಿಚಾರಗಳನ್ನು ತಿಳಿಸುತ್ತವೆ.[೩] ಸ್ಥಳನಾಮಗಳು ಪುರಾತನ ಕಾಲದಿಂದಲೂ ಹುಟ್ಟಿ ಬೆಳೆದು ಬಂದಿವೆ. ಭೌಗೋಳಿಕ, ಜನಾಂಗಿಕ, ಜಾನಪದೀಯ, ಸಾಂಸ್ಕೃತಿಕ ಮುಂತಾದ ನೆಲೆಗಟ್ಟಿನ ಮೇಲೆ ಇವು ಹುಟ್ಟಿಕೊಂಡಿವೆ. ಸ್ಥಳನಾಮಗಳನ್ನು ಅಧ್ಯಯನಕ್ಕೆ ಅಳವಡಿಸುವುದರಿಂದ ನಾಡಿನ ಭೌಗೋಳಿಕ ಸ್ಥಿತಿಗತಿ ಹಾಗೂ ಮಾನವನ ಸಾಂಸ್ಕೃತಿಕ ಬದುಕನ್ನು ಅರಿಯಬಹುದು.[೪]

ಮಾನವ ತನ್ನ ಅಲೆಮಾರಿ ಜೀವನದಿಂದ ಹೊರಬಂದು ಒಂದೆಡೆ ನೆಲೆನಿಂತು ಬದುಕಲು ಪ್ರಾರಂಭಿಸಿದಾಗ ಅವನಲ್ಲಿ ಒಂದು ಸ್ಥಳದ ಪರಿಕಲ್ಪನೆ ಮೂಡಲು ಆರಂಭಿಸಿತು. ಸಂಘ, ಸಮುದಾಯ ಜೀವನ ಹಾಗೂ ನಾಗರೀಕ ಜೀವನ ಬೆಳೆದ ಈ ಹಂತವು ಗ್ರಾಮ ಕಲ್ಪನೆಯ ಪೂರ್ವಸ್ಥಿತಿ. ಆದಿಮಾನವ ಮೂಲತಹ ಅಲೆಮಾರಿಯಾಗಿ ಪಶುಪಾಲನೆಯನ್ನು ಕೈಗೊಂಡ ಮೇಲೆ ಒಂದೊಂದು ಎಡೆಯಲ್ಲಿ ಅನುಕೂಲಕರ ಸ್ಥಳವನ್ನು ಹರಸುತ್ತಾ ನಿಂತಾಗ ಹುಟ್ಟಿಕೊಂಡ ಇಂಥ 'ಹಟ್ಟಿ'ಗಳು ಸ್ಥಳನಾಮಗಳಲ್ಲೇ ಅತ್ಯಂತ ಪ್ರಾಚೀನ ಘಟಕಗಳು.[೫] ಮಾನವ ಅಲೆಮಾರಿ

ಜೀವನವನ್ನು ಬಿಟ್ಟು ಒಂದೇ ಕಡೆ ಶಾಶ್ವತವಾಗಿ ನೆಲೆ ನಿಂತಾಗ ಆ ಪ್ರದೇಶವನ್ನು ನೆನಪಿಟ್ಟು ಕೊಳ್ಳುವುದಕ್ಕೆ ಪ್ರಕೃತಿ ಅವನ ಸಹಾಯಕ್ಕೆ ಬಂದಂತೆ ತೋರುತ್ತದೆ. ಎತ್ತರದ ಅಥವಾ ತಗ್ಗಿನ ಎಡೆಯಾಗಿರಬಹುದು, ಕಲ್ಲು, ಮಣ್ಣು, ಮಣ್ಣಿನ ಬಣ್ಣ, ಮರ, ಸಸ್ಯ, ಪಶು–ಪಕ್ಷಿ, ನದಿ–ಹೊಳೆ, ಬೆಟ್ಟ–ಗುಡ್ಡ... ಪ್ರಕೃತಿಯ ಈ ಅಂಶಗಳು ಆದಿ ಮಾನವನ ನೆಲೆಯನ್ನು ನೆನಪಿಟ್ಟುಕೊಳ್ಳಲು, ಗುರುತಿಸಲು ಸಹಾಯ ಮಾಡಿದವು. ಆದ್ದರಿಂದಲೇ ಪ್ರಾಚೀನ ಸ್ಥಳನಾಮಗಳು ಹೆಚ್ಚಾಗಿ ನಿಸರ್ಗವಾಚಿಗಳಾಗಿವೆ.[೬] ಹೀಗೆ ಪ್ರಾರಂಭದಲ್ಲಿ ನಿಸರ್ಗವಾಚಿಗಳಾಗಿದ್ದ ಸ್ಥಳನಾಮಗಳು ನಂತರ ಜನಾಂಗವಾಚಿ–ವ್ಯಕ್ತಿವಾಚಿಗೆ ಬದಲಾಗಲು ಮುಂದಾದವು.[೭] ಈ ಕಾಲಘಟ್ಟದಲ್ಲಿ ಯಾವುದೇ ಒಂದು ಸ್ಥಳಕ್ಕೆ ಹೆಸರಿಡುವ ಸಂದರ್ಭದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಇಂತಹ ಬದಲಾವಣೆ ಸಂದರ್ಭದಲ್ಲಿ ಸಂಸ್ಕೃತಿ–ಸಮುದಾಯಗಳ ವಿಕಾಸದ ಹಾದಿಯನ್ನು ಕಂಡುಕೊಳ್ಳ ಬಹುದು. ಪ್ರತಿಯೊಂದು ಗ್ರಾಮ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಸ್ಥಳನಾಮಗಳು ಸಂಸ್ಕೃತಿ ಅಧ್ಯಯನದ ಪ್ರಮುಖ ಅಂಶಗಳಲ್ಲಿ ಒಂದು. ಯಾವುದೇ ಒಂದು ಹೆಸರಿನಲ್ಲಿ ಜೀವನಕ್ರಮದ ಚರಿತ್ರೆಯಿರುತ್ತದೆ ಎಂಬುದನ್ನು ಗಮನಿಸಬೇಕು. ಅಂದರೆ ನೇರವಾಗಿ ಜೀವನಕ್ರಮದ ಸಂಗತಿಗಳನ್ನು ಹೇಳುವುದಿಲ್ಲವಾದರೂ, ಅದರ ಒಟ್ಟಂದವನ್ನು ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರಗಳಾಗಿ ನಾಮಗಳು ಮಹತ್ವದ ಪಾತ್ರವಹಿಸುತ್ತವೆ. ಅದರಲ್ಲಿಯೂ ಸಂಸ್ಕೃತಿಯ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯಲ್ಲಿ ಹೇಳಲು ಅಧ್ಯಯನಕ್ಕೆ ತೊಡಗಿದಾಗ ಸ್ಥಳನಾಮಗಳು ಪ್ರಮುಖ ಪಾತ್ರವಹಿಸುತ್ತವೆ. ನಮ್ಮ ಅತ್ಯಂತ ನಿಕಟ ಸಂಬಂಧ ವನ್ನೊಂದಿದ ಗ್ರಾಮನಾಮ, ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯ. ಕಾರಣ ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಹಾಗೂ ಸಮಾಜ ಸ್ಥಳನಾಮಗಳನ್ನು ಪ್ರಮುಖ ಆಕರಗಳೆಂದು ಭಾವಿಸಿದಲ್ಲಿ ವಾಸ್ತವತೆಯ ತಳಹದಿಯಿಂದ ಸಂಸ್ಕೃತಿ ಅಧ್ಯಯನಕ್ಕೆ ತೊಡಗಲು ಸಾಧ್ಯವಾಗುತ್ತದೆ. ಆದುದರಿಂದ ಯಾವುದೇ ಪ್ರದೇಶದ ಸಾಂಸ್ಕೃತಿಕ ಅಧ್ಯಯನದಲ್ಲಿ ಸ್ಥಳನಾಮಗಳ ವಸ್ತುನಿಷ್ಠ ಅಧ್ಯಯನ ಬಹು ಮುಖ್ಯವಾದುದು.

೩.೧. ಸ್ಥಳನಾಮಗಳ ಉಗಮ ಮತ್ತು ವಿಕಾಸ

The beginning of wisdom is to call things by their right names – Anonymous; Chinese proverb

ಅನುಭವ, ಭಾವ, ಆಲೋಚನೆ, ವಿಷಯ, ಸಂಗತಿ, ವಸ್ತು ಮೊದಲಾದವುಗಳಿಗೆ ಸೂಕ್ತವಾದ ಹೆಸರು ಸಮನಿಸಿದಾಗಲೇ ವಿವೇಕೋದಯ ಹಾಗೂ ಜ್ಞಾನವಿಕಾಸ ಪ್ರಾರಂಭವಾಯಿತೆಂದು ಹೇಳುವ ಚೀನಿ ಗಾದೆಯಲ್ಲಿ ವಿಶೇಷ ಅರ್ಥವಿದೆ.[೮] ನಾಮಗಳ ಸೃಷ್ಟಿ ಹೇಗೆ ಆಗಿರಲಿ ಅವು ತೆರೆಕೊಳ್ಳುವ ತನಕ ನರ ವಾನರತ್ವದಿಂದ ಪಾರಾಗಿರಲಿಲ್ಲ. ನಾಗರೀಕತೆ ಭ್ರೂಣಾವಸ್ಥೆಯಿಂದ ಮುಕ್ತಿ ಪಡೆದಿರಲಿಲ್ಲ. ಅವನ ಭಾವಾಲೋಚನೆಗಳಾಗಲೀ ಕರ್ಮಾನುಭವಗಳಾಗಲೀ ಮೂರ್ತತ್ವ ಪಡೆಯದೆ ಗೋಜಲು ಗೋಜಲಾಗಿದ್ದವು. ಅವನ ಸುತ್ತಮುತ್ತಣ ಪರಿಸರದ, ಜೀವಕೋಟಿಗಳ ಅಥವಾ ವಸ್ತು ಪ್ರಪಂಚದ ಜ್ಞಾನ ಸುಪ್ತಾವಸ್ಥೆಯಲ್ಲಿತ್ತು. ಹೀಗಾಗಿ ಅವನು ಅಜ್ಞಾನದ ಅಂಧಕಾರದಲ್ಲಿ

ತೊಳಲಾಡುತ್ತಿದ್ದನೆಂಬ ವಿಷಯವಂತು ಖಚಿತ. ಹೆಸರುಗಳೇ ಇಲ್ಲದಿದ್ದಾಗ ಸ್ಮರಣ ಸಾಮರ್ಥ್ಯವೂ ಶೂನ್ಯವಾಗಿ, ವಿಕಾಸವಾಗಲೀ ಚರಿತ್ರೆಯಾಗಲೀ ಸ್ಥಗಿತಗೊಂಡಿದ್ದಂತೆಯೇ ಲೆಕ್ಕ ಭಾಷಾನುಭವಗಳು ಅಸ್ಪಷ್ಟವಾಗಿದ್ದಾಗ ವಿನೂತನ ಭಾವಾನುಭವಗಳು ಕೊನರುವಂತಿರಲಿಲ್ಲ. ಒಂದು ವಸ್ತುವಿನ ಅಥವಾ ಪ್ರಾಣಿಯ ಸ್ವರೂಪವೋ ಸ್ವಭಾವವೋ ಸಂವೇದನಾಶೀಲ ಮಾನವನ ಭಾವಕೋಶದಲ್ಲಿ ಪ್ರತಿಧ್ವನಿಗೈದ ಪರಿಣಾಮವಾಗಿ ಅವನ ಉಚ್ಚಾರಣಾವಲಯಗಳಲ್ಲಿ ಮೂಡಿದ ಉದ್ಗಾರವೇ ಹೆಸರು. ಅಂದರೆ ಪ್ರಾರಂಭದ ಅಭಿದಾನಗಳಿಗೆ ಮಾನವನ ಅಂತಃಸ್ಫುರಣವೇ ಕಾರಣ. ಹೆಸರುಗಳ ಮೂಲಕ ಭಾವಾಲೋಚನೆಗಳಿಗೆ ಮೂರ್ತತ್ವವೊದಗಿ, ವಿವಿಧ ವಸ್ತು ಪ್ರಾಣಿಗಳ ಭೇದಪ್ರಭೇದಗಳು ಅರಿವಾಗಿ, ಕಲ್ಪನಾ ಸಾಮರ್ಥ್ಯ ಉದ್ದೀಪನಗೊಂಡು, ವಿಚಾರಶಕ್ತಿ ಪ್ರಖರಗೊಂಡಾಗ ನಾಮ ನಿರ್ಮಾಣ ಕಾರ್ಯದಲ್ಲಿ ಬುದ್ಧಿಯು ಸಮಸಮವಾಗಿ ಅಂತಃಸ್ಫುರಣದೊಡನೆ ಭಾಗಿಯಾಗುತ್ತದೆ. ಆಗ ಒಂದು ಹೆಸರು ಹತ್ತಾಗಿ ಅನಂತವಾಗಿ ಬೆಳೆದು ಮನುಷ್ಯನಿಗೂ ವಿಶ್ವಕ್ಕೂ ಸಂಬಂಧವನ್ನು ಕಲ್ಪಿಸುತ್ತದೆ.'

ಶಬ್ದಕ್ಕೂ ಅದು ಸಂಕೇತಿಸುವ ವಸ್ತುವಿಗೂ ಸಾವಯವ ಅಥವಾ ಅವಿನಾ ಸಂಬಂಧ ವಿರದಿದ್ದರೂ, ಅನೇಕ ಶತಮಾನಗಳ ಬಳಕೆಯಿಂದಾಗಿ ಜನಾಂಗದ ಉಸಿರಾಗಿ ಅದರ ರಕ್ತದಲ್ಲಿ ರಕ್ತವಾಗಿ ಬೆರೆಸಿಕೊಂಡಿದ್ದರ ಪರಿಣಾಮ ಅವುಗಳ ಸಂಬಂಧ ನಿಸರ್ಗ ಸಿದ್ಧವೆಂಬಂತೆ ಪ್ರಾಢವಾಗಿ ತೋರುತ್ತದೆ. ನಾಮಕರಣ ವಿಧಾನ ಒಂದಲ್ಲ ಹಲವು. ಯಾವ ವಿಧಾನದಿಂದಲೇ ಆ ನಾಮಗಳು ಸೃಷ್ಟಿಗೊಂಡಿರಲಿ ಅವು ಆಯಾ ವಸ್ತು, ಪ್ರಾಣಿಯ ಯಾವುದೋ ಒಂದು ಗುಣವನ್ನೋ, ಬಣ್ಣವನ್ನೋ ಸೂಚಿಸುತ್ತದೆಂಬುದು ನಿಜ. ಕಾಗೆ ಹಾಗೂ ಕೋಗಿಲೆ ಎಂಬ ಹೆಸರುಗಳಲ್ಲಿ ಆ ಹಕ್ಕಿಗಳ ಧ್ವನಿ ಸೂಚಿತವಾಗುತ್ತದೆಯೇ ಹೊರತು ಅವುಗಳ ಜೈವಿಕ ಲಕ್ಷಣಗಳೂ ಅಲ್ಲ, ಬಣ್ಣವೂ ಅಲ್ಲ, ಜೀವನವೂ ಅಲ್ಲ.[೧೧]

ಹೆಸರಲ್ಲೇನಿದೆ ಎಂಬ ಕವಿವಾಣಿಯ ಯಥಾರ್ಥತೆ ಸಂದರ್ಭವಶಿಯೇ ಹೊರತು ವ್ಯಾಪಕವಾದುದ್ದಲ್ಲ ಶಾಶ್ವತವಾದುದ್ದಲ್ಲ. ಗುಲಾಬಿಯನ್ನು ಚಂಪಕವೆಂದು ಕರೆದಾಗ ಮೂಡುವ ಭಾವನೆಯೇ ಬೇರೆ. ಸಂಜನಿಸುವ ಅನುಭವವೇ ಬೇರೆ. ಹೆಸರಿನಿಂದ ವಸ್ತುವಿನ ಗುಣವಿಶೇಷ ಪ್ರಕಟವಾಗುವಂತೆ ವಸ್ತುವಿನ ಯೋಗ್ಯತೆಯಿಂದ ಹೆಸರಿನ ಮಹತ್ವ ವಿಗುರ್ವಿಸುವುದುಂಟು. ಈ ಮಾತಿಗೆ ರಾಮ, ಕೃಷ್ಣ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಭಗತ್‌ಸಿಂಗ್, ಐನ್‌ಸ್ಟೈನ್, ಹೋಮರ್, ಕಾಳಿದಾಸ, ಶೇಕ್ಸ್‌ಪೀಯರ್ ಮೊದಲಾದ ಹೆಸರುಗಳೇ ಸಾಕ್ಷಿ. ವಿಶಾಲಾರ್ಥದಲ್ಲಿ ಹೆಸರುಗಳೆಲ್ಲ ಅಂಕಿತನಾಮಗಳ ವರ್ಗಕ್ಕೆ ಸೇರುತ್ತವೆ. ಒಂದು ಪ್ರಾಣಿಯನ್ನೋ, ವಸ್ತುವನ್ನೋ ಕಂಡಾಗ ಮನುಷ್ಯ ಸಮಯ ಸ್ಫೂರ್ತಿಯಿಂದ ಯಾವುದೋ ಹೆಸರಿಡುತ್ತಾನೆ. ಆ ಹೆಸರಿಗೆ ನಾಲ್ಕು ಜನರ ಅಂಗೀಕಾರದ ಮುದ್ರೆ ಬಿದ್ದಾಗ ಶ್ರೇಷ್ಠತೆ ಪ್ರಾಪ್ತವಾಗುತ್ತದೆ. ಅದು ಕಾಲಕ್ರಮೇಣ ಜನರಿಂದ ಜನಕ್ಕೆ ಹರಡಿ ಸಮಾಜದ ಆಸ್ತಿಯಾಗಿ, ಭಾಷೆಯ ಭಾಗವಾಗಿ ಪ್ರವರ್ತಿಸುತ್ತದೆ. ಹೀಗೆ ಹೆಸರುಗಳನ್ನು ವ್ಯಕ್ತಿ, ಸ್ಥಳ, ಜಾತಿ, ಧರ್ಮಗಳಿಗೆ ತಕ್ಕಂತೆ ಇಡಲು ಪ್ರಾರಂಭಿಸಿದರು.[೧೧]

ಆದಿಮಾನವನು ತನ್ನ ಪೋಷಣೆಗೆ ವನ್ಯ ಜೀವಿಯಂತೆ ಪ್ರಕೃತಿಯನ್ನವಲಂಭಿಸಿ ಒಂದೆಡೆ ನೆಲೆ ನಿಲ್ಲದೆ ಬದುಕನ್ನು ಅರಗಿಸಿಕೊಂಡು ಒಂದೆಡೆಯಿಂದ ಇನ್ನೊಂದೆಡೆಗೆ ಗುಳೆ ಹೊರಡುವ

ಅಲೆಮಾರಿಯಾಗಿ ಆದೆಷ್ಟೋ ಶತಮಾನಗಳವರೆಗೆ ಕಾಲವನ್ನು ಸವೆಸಿ ಕಾಲಾನುಕ್ರಮದಲ್ಲಿ ತನ್ನ ಜೀವಕ್ಕೆ ಅನುಕೂಲಕರ ಪರಿಸರದಲ್ಲಿ ಕಾಲಿಟ್ಟೊಡನೆಯೇ ಬೀಡುಬಿಡುತ್ತಿದ್ದನು. ಕಾಲಾಂತರದಲ್ಲಿ ಅವರ ಬೀಡುಗಳೇ ಹಟ್ಟ-ಕೊಪ್ಪಲುಗಳಾಗುತ್ತಿದ್ದವು. ಹಟ್ಟಿಗಳೇ ಆರಂಭಕಾಲದ ವಸತಿಗಳೆಂಬುದು ಶಂ.ಭಾ. ಜೋಶಿಯವರ ಊಹೆ. ಪಾಡು, ಪಾಡಿ, ಪಟ್ಟಣ, ಪೇಟೆ, ಹಾರ, ಆಡಿ, ಬಾಡ, ಬಾಳು, ವಾಡೆ, ವಾಳ, ವಾಟ, ವಠಾರ, ಹಾಟಿ, ಹಾಳು, ಪಾಳ್ಯ, ಪಳ್ಳಿ ಇವೇ ಮೊದಲಾದ ಹತ್ತಾರು ರೂಪಗಳು ಪಟ್ಟಿಯಿಂದ ಸಿದ್ಧವಾದವು.[೧೨]

ಜನಪದರು ಹಟ್ಟಿಗಳನ್ನು ಕಟ್ಟಿಕೊಂಡು, ಊರುಗಳಲ್ಲಿ ನೆಲೆಸಿ ಅಲೆಮಾರಿತನಕ್ಕೆ ವಿರಾಮ ಹಾಕಿರಬೇಕು. ಅಂದಮೇಲೆ ಸಾಮಾಜಿಕ ಕಲ್ಪನೆಗೆ ರಾಜಕೀಯ ಸಂಸ್ಥೆಗಳ ಉಗಮಕ್ಕೆ ಇತಿಹಾಸದ ವಿಕಾಸಕ್ಕೆ ಮೇಲಾಗಿ ಸಂಸ್ಕೃತಿ ನಾಗರೀಕತೆಗಳ ಪ್ರಾದುರ್ಭಾವಕ್ಕೆ ಹಟ್ಟಿ, ಪಾಡು, ಊರುಗಳೇ ಮೂಲ. ಊರುಗಳ ಬೆಳವಣಿಗೆಯೊಡನೆ ಭಾಷೆಯೂ ವಿಕಾಸಗೊಳ್ಳುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಜನರ ಏಳು ಬೀಳುಗಳು, ಇತಿಹಾಸದ ಸ್ಮೃತಿಗಳು, ವಿಚಾರ ಸಂಸರ್ಗ, ಭಾವನಾ ಸಂಘರ್ಷಗಳು ಅವುಗಳಲ್ಲಿ ಪ್ರತಿಫಲನಗೊಳ್ಳುತ್ತವೆ. ಹೀಗಾಗಿ ಸ್ಥಳನಾಮಗಳ ಇತಿಹಾಸವೇ ನಾಗರೀಕತೆಯ ಇತಿಹಾಸವಾಗುತ್ತದೆ.[೧೩]

೩.೨. ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ

ವಸ್ತು, ಸ್ಥಳ, ವ್ಯಕ್ತಿ, ಪ್ರಾಣಿ-ಪಕ್ಷಿಗಳ ಹೆಸರನ್ನು ಸೂಚಿಸುವ ಪದಕ್ಕೆ ನಾಮಪದ ಎನ್ನುತ್ತೇವೆ. ಇದರಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಎಂಬ ಅನೇಕ ಪ್ರಭೇದಗಳಿವೆ. ಅಂಕಿತನಾಮದ ವ್ಯಕ್ತಿ, ಪ್ರಾಣಿ-ಪಕ್ಷಿ, ಸ್ಥಳಗಳು ಬಹುಸಂಖ್ಯೆಯಲ್ಲಿದ್ದಾಗ ಅಥವಾ ಅತಿ ಬಳಕೆ ಯಲ್ಲಿದ್ದಾಗ ಅಂತಹ ಅಂಕಿತನಾಮಗಳು ಸಾಮಾನ್ಯವಾದ ಮಟ್ಟಕ್ಕಿಳಿಯುತ್ತವೆ. ಸ್ಥಳನಾಮಗಳು ಸಾಮಾನ್ಯವಾಗಿ ಅಂಕಿತ ನಾಮಗಳಾಗುತ್ತವೆ.[೧೪]

ಸ್ಥಳದ ಹೆಸರು ಸಾಮಾನ್ಯವಾಗಿ ಅಲ್ಲಿನ ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯತೆಯ ಲಕ್ಷಣದಿಂದ ನಿಯಂತ್ರಿತವಾಗಿರುತ್ತದೆ. ಸ್ಥಳನಾಮ ಅಧ್ಯಯನದ ಸಂದರ್ಭದಲ್ಲಿ ಅಲ್ಲಿನ ಸನ್ನಿವೇಶವನ್ನು ಗುರುತಿಸುವುದು ಅವಶ್ಯವಾಗಿರುತ್ತದೆ. ಕಾರಣ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ತಲೆ ಎತ್ತಿದ ಹೆಸರಿನಲ್ಲಿ ಆ ಪರಿಸರದ ಭೂವಿಶೇಷತೆ ಇರುತ್ತದೆ. ಈ ತೆರನಾದ ಮೂಲಭೂತ ಅಂಶವೇ ಸ್ಥಳನಾಮಗಳ ಹುಟ್ಟಿನ ಹಿಂದಿನ ರಹಸ್ಯವಾಗಿದ್ದು, ಅವು ಶಾಶ್ವತವಾಗಿ ಉಳಿಯುವ ಕ್ರಿಯಾಶಕ್ತಿಯಾಗಿದೆ. ಕೆಲವೊಮ್ಮೆ ಸ್ಥಳನಾಮಗಳು ಚಾರಿತ್ರಿಕ ವ್ಯಕ್ತಿ, ಅಧಿಕಾರಿ, ಕುಲ, ದೇವತೆ ಅಥವಾ ಚಾರಿತ್ರಿಕ ಮಹತ್ವದ ಘಟನೆಗಳನ್ನು ಸ್ಮರಿಸುವ ಉದ್ದೇಶದಿಂದ ಹುಟ್ಟಿರಬಹುದು.

ಹೊಸದುರ್ಗ ತಾಲೂಕಿನ ಸ್ಥಳನಾಮಗಳು ಸಾಮಾನ್ಯವಾಗಿ ಭೌಗೋಳಿಕ, ನೈಸರ್ಗಿಕ, ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ನಿಷ್ಪನ್ನಗೊಂಡಿವೆ. ಹೊಸದುರ್ಗ ತಾಲೂಕು ಅರೆಮಲೆನಾಡು ಪ್ರದೇಶವಾಗಿದ್ದು ಅಸಂಖ್ಯಾತ ಬೆಟ್ಟಗುಡ್ಡಗಳು, ನದಿ/ತೊರೆ/ಹಳ್ಳ-ಕೊಳ್ಳಗಳನ್ನು ಒಳಗೊಂಡಿದೆ. ಆದಿ ಮಾನವನ ಪ್ರಾಗೈತಿಹಾಸಿಕ ಕಾಲಘಟ್ಟದಿಂದ ಹಿಡಿದು

ಚಾರಿತ್ರಿಕ ಕಾಲದ ಕರ್ನಾಟಕದ ಬಹುತೇಕ ರಾಜಮನೆತನಗಳು, ಮಾಂಡಳಿಕರು, ಅಧೀನ ಅರಸರು ಹಾಗೂ ಪಾಳೆಯಗಾರರ ಪ್ರಾಚೀನ ಕುರುಹುಗಳನ್ನು ಈ ಪರಿಸರದಲ್ಲಿ ಗುರುತಿಸಬಹುದು. ಇಲ್ಲಿನ ಬಹುತೇಕ ಸ್ಥಳನಾಮಗಳು ಈ ಹಿನ್ನೆಲೆಯಿಂದಲೇ ನಿಷ್ಪನ್ನಗೊಂಡಿವೆ. ಅಲ್ಲದೇ ಸಾಂಸ್ಕೃತಿಕವಾಗಿ ದೈವವಾಚಿ, ಜಾತಿವಾಚಿ ಸ್ಥಳನಾಮಗಳು ಕಂಡುಬರುತ್ತವೆ. ಒಟ್ಟಾರೆ ಈ ತಾಲೂಕಿನ ಸ್ಥಳನಾಮಗಳು ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಗೊಂಡಿರುವುದು ಕಂಡುಬರುತ್ತದೆ.

ಸ್ಥಳನಾಮಶಾಸ್ತ್ರದ ಮುಖ್ಯ ಉದ್ದೇಶ ಸ್ಥಳನಾಮಗಳನ್ನು ಐತಿಹಾಸಿಕ, ಭೌಗೋಳಿಕ, ಭಾಷಿಕ ಅಲ್ಲದೆ ಜಾನಪದ ಪರಂಪರೆಯ ವಿವಿಧ ಆಧಾರಗಳ ಮೂಲಕ ಅಭ್ಯಾಸ ಮಾಡಿ ಅವುಗಳ ಮೂಲರೂಪವನ್ನು ನಿರ್ಧರಿಸುವುದೇ ಆಗಿದೆ. ಸ್ಥಳನಾಮಗಳನ್ನು ಸ್ಥೂಲವಾಗಿ ಜೆ.ಜೆ. ಎಗ್ಲಿ ಅವರು ಎರಡು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಭೌಗೋಳಿಕ ಪರಿಸರ, ಸ್ವಭಾವ ಅಥವಾ ಗುಣಲಕ್ಷಣಗಳಿಂದ ನಿಷ್ಪನ್ನವಾದ ಪ್ರಾಕೃತಿಕ ಸ್ಥಳನಾಮಗಳು ಹಾಗೂ ಆದಿಮಾನವನ ವಿಕಾಸ ಘಟ್ಟದಿಂದ ನಿಷ್ಪನ್ನವಾದ ಸಾಂಸ್ಕೃತಿಕ ಸ್ಥಳನಾಮಗಳು. ಬಹುತೇಕ ದೇಶಗಳಲ್ಲಿ ಪ್ರಾಕೃತಿಕ ಸ್ಥಳನಾಮಗಳು ಅಧಿಕ ಸಂಖ್ಯೆಯಲ್ಲಿರುತ್ತವೆ.[೧೪] ಹೊಸದುರ್ಗ ತಾಲೂಕು ಪರಿಸರದ ಸ್ಥಳನಾಮಗಳನ್ನು ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಸ್ಥಳನಾಮಗಳು ಎಂದು ವಿಭಾಗಿಸಿಕೊಂಡು ಅಭ್ಯಾಸಿಸಲಾಗಿದೆ.

ಸ್ಥಳನಾಮಗಳ ವರ್ಗೀಕರಣ.

↓

ಪ್ರಾಕೃತಿಕ ಸ್ಥಳನಾಮಗಳು | ಸಾಂಸ್ಕೃತಿಕ ಸ್ಥಳನಾಮಗಳು

೩.೨.೧. ಪ್ರಾಕೃತಿಕ ಸ್ಥಳನಾಮಗಳು

ಮಾನವ ಪ್ರಕೃತಿಯೊಂದಿಗೆ ಸಹಜವಾಗಿ ಬದುಕುತ್ತಿರುವ ಸಂದರ್ಭದಲ್ಲಿ ಕಲ್ಲು, ಬೆಟ್ಟ-ಗುಡ್ಡ, ಗಿರಿಗಳ ನೆಲೆಯಲ್ಲಿ ನೆಲೆ ಮಾಡಿಕೊಂಡಿದ್ದ, ಆ ನೆಲೆಗಳನ್ನು ಗುರುತಿಸುವ ಸಂದರ್ಭದಲ್ಲಿ ಆ ಕಲ್ಲು ಗುಡ್ಡಗಳಿಂದಲೇ ಹೆಸರಿಸಲು ಪ್ರಾರಂಭಿಸಿದನು. ನಾಮಗಳ ಇತಿಹಾಸ ಘಟ್ಟದಲ್ಲೂ ಪ್ರಾಕೃತಿಕ ಸ್ಥಳನಾಮಗಳೇ ಮೊದಲು. ಈ ಪ್ರದೇಶದಲ್ಲಿ ಅನೇಕ ಪ್ರಾಕೃತಿಕ ಸ್ಥಳನಾಮಗಳು ಕಂಡು ಬರುತ್ತವೆ. ಅವುಗಳನ್ನು ಜಲವಾಚಕ, ಶಿಲಾವಾಚಕ, ಭೂವಾಚಕ, ಪ್ರಾಣಿ-ಪಕ್ಷಿವಾಚಕ, ಸಸ್ಯವಾಚಕ, ಪ್ರಮಾಣವಾಚಕ, ದಿಕ್ಕುಸೂಚಕ, ಖನಿಜಸೂಚಕ ಎಂಬುದಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

೩.೨.೧.೧. ಜಲವಾಚಕ

ಆದಿಮಾನವ ತನ್ನ ಜೀವನವನ್ನು ಪ್ರಾರಂಭಿಸಿದುದು ನೀರಿನ ತಾಣಗಳಲ್ಲೆ. ಹಾಗಾಗಿ ಮಾನವನ ಸಾಂಸ್ಕೃತಿಕ ವಿಕಾಸದ ಹಂತದಲ್ಲಿ ನೀರಿಗೆ ಪ್ರಧಾನವಾದ ಸ್ಥಾನ. ಪ್ರಪಂಚದ ಬಹುತೇಕ ನಾಗರೀಕತೆಗಳು ಪ್ರಸಿದ್ಧಿಗೆ ಬಂದಿರುವುದು ನದಿಗಳ ಪರಿಸರದಲ್ಲೇ. ಪ್ರಾರಂಭದಲ್ಲಿ ನೀರಿನ ಸಮೀಪ ತಮ್ಮ ನೆಲೆಗಳನ್ನು ಕಂಡುಕೊಂಡ ಇವನು ಸಹಜವಾಗಿ ಹರಿಯುವ ನೀರಿಗೆ

ಕೆರೆ, ಕೊಳ, ಕುಂಟೆಗಳಂತಹ ಕೃತಕ ಜಲ ಸಂಗ್ರಾಹಕಗಳನ್ನು ನಿರ್ಮಿಸಿಕೊಂಡು ಗ್ರಾಮಗಳನ್ನು ನಿರ್ಮಿಸಿಕೊಂಡನು. ನೀರನ್ನು ಅವಲಂಬಿಸಿಯೆ ಕೆಲವು ಗ್ರಾಮಗಳಿಗೆ ಹೆಸರು ಕರೆದುಕೊಳ್ಳುವ ರೂಢಿ ಆರಂಭವಾಗಿರುವುದು ವೇದ್ಯವಾಗುತ್ತದೆ.

ಈ ಪರಿಸರದಲ್ಲಿ ಕಂಡುಬರುವ ಜಲವಾಚಿ ಸ್ಥಳನಾಮಗಳೆಂದರೆ:- ಕಡದಿನಕೆರೆ, ಕಡವಗೆರೆ, ಕಪ್ಪಗೆರೆ, ಕಬ್ಬಿನಕೆರೆ, ಕಲ್ಲಕೆರೆ, ಕ್ಯಾದಿಗೆರೆ, ಕೊರಟಗೆರೆ, ಗಂಜಿಗೆರೆ, ಗುಡ್ಡದನೇರಲಕೆರೆ, ಚಿಕ್ಕಬ್ಯಾಲದಕೆರೆ, ತಾರೀಕೆರೆ, ತುಂಬಿನಕೆರೆ, ದೇವಿಗೆರೆ, ದೊಡ್ಡಬ್ಯಾಲದಕೆರೆ, ನಗರಗೆರೆ, ನಾಕೀಕೆರೆ, ನಾಯಿಗೆರೆ, ನೇರಲಕೆರೆ, ಬೋಕಿಕೆರೆ, ಹಂದನಕೆರೆ, ಹಾಗಲಕೆರೆ, ಹೊನ್ನೇಕೆರೆ, ಆದ್ರಿಕಟ್ಟೆ, ಅಜ್ಜಿಕಂಸಾಗರ, ಕಡ್ಲೇಕಂಸಾಗರ ಬುಕ್ಕಸಾಗರ, ಚಿನ್ನಸಮುದ್ರ, ಬಲ್ಲಾಸಮುದ್ರ, ಮಾದಸಮುದ್ರ, ಮೆಂಗಸಂದ್ರ, ಸೋಮಸಂದ್ರ ಇತ್ಯಾದಿ.

೩.೨.೧.೨. ಶಿಲಾವಾಚಕ

ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನಿಗೆ ಕಲ್ಲಿನೊಂದಿಗೆ ನಿಕಟ ಸಂಬಂಧವಿದೆ. ಮಾನವ ತನ್ನ ಜೀವನ ನಿರ್ವಹಣೆಗೆ ಮಾಧ್ಯಮವಾಗಿ ಅವಲಂಬಿಸಿದುದು ಶಿಲೆಯನ್ನೇ. ಆಹಾರ ಸಂಗ್ರಹಣೆಯ ಸಂದರ್ಭದಲ್ಲಿ ಪ್ರಾಣಿಗಳನ್ನು ಬೇಟೆಯಾಡಲು ಕಲ್ಲು/ಶಿಲೆಗಳನ್ನು ಆಯುಧಗಳನ್ನಾಗಿ ಬಳಸುತ್ತಿದ್ದನು. ಅಲ್ಲದೆ ಗಾಳಿ, ಮಳೆ, ಬಿಸಿಲು ಇವುಗಳಿಂದ ರಕ್ಷಣೆ ಪಡೆಯಲು ಹಾಗೂ ವಾಸಿಸಲು ಕಲ್ಲಿನ ಪೊಟರೆ, ಕಲ್ಲಾಸರೆ, ಗವಿಗಳನ್ನು ಆಶ್ರಯಿಸಿ ವಾಸಿಸಲು ಪ್ರಾರಂಭಿಸಿದ. ಹೀಗೆ ಆತನು ವಾಸಿಸಲು ಪ್ರಾರಂಭಿಸಿದ ಅಂತಹ ನೆಲೆಗಳಿಗೆ ಶಿಲಾವಾಚಕ ಹೆಸರುಗಳೇ ಪ್ರಾಪ್ತವಾದವು. ಅಂತಹ ಕೆಲವು ಶಿಲಾವಾಚಕ ಸ್ಥಳನಾಮಗಳಲ್ಲಿ ಜಾನಕಲ್ಲು, ತಣಿಗೆಕಲ್ಲು, ಕಲ್ಲಕೆರೆ, ಗೊರವಿನಕಲ್ಲು, ಕಲ್ಲಹಳ್ಳಿ, ಗವಿರಂಗಾಪುರ, ಸೂಜಿಕಲ್ಲು, ಬಂಟನಗವಿ, ಕರೆಕಲ್‌ಹಟ್ಟಿ ಇತ್ಯಾದಿ. ಗವಿ ಎಂದರೆ ಗುಹೆ, ಆಶ್ರಯತಾಣ.[೮] ಇಲ್ಲಿನ ಶಿಲಾವಾಚಕ ಸ್ಥಳನಾಮಗಳಲ್ಲಿ ಜಾನಕಲ್ಲು, ಸೂಜಿಗಲ್ಲು ಹಾಗೂ ತಣಿಗೆಕಲ್ಲು ಮುಖ್ಯವಾಗಿ ಬೃಹತ್ ಶಿಲಾಸಂಸ್ಕೃತಿಯ ನೆಲೆಗಳಾಗಿವೆ. ಹೆಸರೆ ಸೂಚಿಸುವಂತೆ ಈ ಸಂಸ್ಕೃತಿಯ ಮುಖ್ಯ ಲಕ್ಷಣ ದೊಡ್ಡ ಪ್ರಮಾಣದ ಶಿಲಾ ಸಮಾಧಿಗಳ ನಿರ್ಮಾಣ. ಇದರಲ್ಲಿ ಪುನರ್‌ಜನ್ಮದ ಕಲ್ಪನೆ ಇದ್ದಿರಬಹುದಾದ್ದರಿಂದ ಮರಣ ಹೊಂದಿದ ವ್ಯಕ್ತಿಗೆ ದಿನನಿತ್ಯ ಬಳಕೆಯ ವಸ್ತುಗಳನಿಟ್ಟು ಬೃಹತ್ ಪ್ರಮಾಣದ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಈ ಮೇಲೆ ಹೇಳಿದ ಸ್ಥಳನಾಮಗಳಲ್ಲಿ ಕಲ್ಲು ಎಂಬ ಶಿಲಾವಾಚಕ ಪದ ಬಳಕೆಯಾಗಿದೆ. ಅಲ್ಲದೆ ಅಧ್ಯಯನ ನಿಮಿತ್ತ ಕ್ಷೇತ್ರಕಾರ್ಯದಲ್ಲಿ ಈ ಮೂರು ನೆಲೆಗಳಲ್ಲಿ ಬೃಹತ್ ಶಿಲಾಸಮಾಧಿಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಅನೇಕ ಪ್ರಾಚ್ಯಾವಶೇಷಗಳು ದೊರೆತಿವೆ. ಜೊತೆಗೆ ಇವುಗಳು ಈ ಸಂಸ್ಕೃತಿಯ ವಾಸ್ತವ್ಯದ ನೆಲೆಗಳಾಗಿವೆ. ಆದುದರಿಂದ ಬೃಹತ್ ಶಿಲಾ ಸಂಸ್ಕೃತಿಯ ಕಾಲದಿಂದಲೇ ಮಾನವ ವಸತಿ ನೆಲೆಗಳಾದ ಇವುಗಳ ಸ್ಥಳನಾಮಗಳು ಜಾನಕಲ್ಲು, ತಣಿಗೆಕಲ್ಲು ಹಾಗೂ ಸೂಜಿಕಲ್ಲು ಎಂಬುದಾಗಿ ಶಿಲಾಸೂಚಕಗಳಾಗಿ ಬೆಳೆದು ಬಂದಿರುವುದು ಪುರಾತತ್ವ ಅಧ್ಯಯನದ ಹಿನ್ನೆಲೆಯಿಂದ ಅರಿಯಬಹುದಾಗಿದೆ.

೩.೨.೧.೩. ಭೂಸ್ಥಿತಿವಾಚಕ

ಮಾನವನು ತಾನು ಜೀವಿಸಲು ನೆಲೆನಿಂತು ತನ್ನ ಸುತ್ತಲಿನ ಪ್ರದೇಶವನ್ನು, ಅಲ್ಲದೆ ಭೌಗೋಳಿಕ ವೈಶಿಷ್ಟ್ಯಗಳಾದ ಗುತ್ತಿ, ಗುಡ್ಡ, ಬೆಟ್ಟ, ಕಾಡು, ತಗ್ಗು, ದಿಬ್ಬ, ಕೋಟೆ, ದುರ್ಗ,

ಇಳಿಜಾರು ಮುಂತಾದವುಗಳಿಂದ ಗುರುತಿಸಿದನು. ಈ ಭೂಸ್ಥಿತಿಯನ್ನು ಹೊಂದಿದ ಅಂತಹ ಕೆಲವು ಸ್ಥಳನಾಮಗಳು ಹೀಗೆ ಕಂಡುಬರುತ್ತವೆ.

ಗುತ್ತಿ : ಗುತ್ತಿಕಟ್ಟೆ, ಗುತ್ತಿ ಎಂದರೆ ಎತ್ತರವಾದ ಭೂಮಿ ದಿಬ್ಬ.[೯]

ಗುಡ್ಡ : ಗುಡ್ಡದನೇರಲಕೆರೆ

ದುರ್ಗ : ದುಗ್ಗಾವರವು ಭೌಗೋಳಿಕವಾಗಿ ಬೆಟ್ಟ-ಗುಡ್ಡಗಳಿಂದ ಕೂಡಿದ್ದು, ಇಲ್ಲಿನ ಪಶ್ಚಿಮ ದಿಕ್ಕಿನ ಬೆಟ್ಟದಲ್ಲಿ ಮಧ್ಯಕಾಲದಲ್ಲಿ ನಿರ್ಮಾಣಗೊಂಡಿರುವ ಕೋಟೆಯ ಅವಶೇಷಗಳಿವೆ. ಅಲ್ಲದೆ ಕೋಟೆಯ ಅವಶೇಷಗಳ ಮಧ್ಯದಲ್ಲಿ ಕೋಟೆಕಲ್ಲು ರಂಗಪ್ಪ ಎಂಬ ಪ್ರಾಚೀನ ದೇವಾಲಯವಿದ್ದು ಇದರ ಹಿಂದೆ ಕೋಟೆಯನ್ನು ಸೂಚಿಸುವ ಪದದ ಬಳಕೆಯನ್ನು ಕಾಣಬಹುದು. ದುಗ್ಗಾವರ ದುಗ್ಗ+ವರ ಎಂಬುದರಿಂದ ಬಂದಿದೆ. ದುಗ್ಗವು ದುರ್ಗವನ್ನು ವರವು ಪುರ ಎಂಬುದನ್ನು ಸೂಚಿಸುತ್ತದೆ. ಒಟ್ಟಾರೆ ಕೋಟೆಯ ಪಾತ್ರವೇ ಇಲ್ಲಿನ ಸ್ಥಳದ ಮೇಲೆ ಹೆಚ್ಚಿದೆ.

ಕಾನನ/ಅಡವಿ/ಬನ :ಕಾನನ, ಬನ, ಅಡವಿ ಎಂಬುದಕ್ಕೆ ಅರಣ್ಯ, ಕಾಡು ಎಂಬ ಅರ್ಥಗಳಿವೆ.[೧೦]

ಉದಾ: ಬನಸೀಹಳ್ಳಿ, ಕಾನಜೇನಹಳ್ಳಿ, ಅಡವಿಸಂಗೇನಹಳ್ಳಿ.

ಘಟ್ಟ : ಅತ್ತಿಗಟ್ಟ, ಮರಬಗಟ್ಟ, ದೊಡ್ಡಘಟ್ಟ, ಆಲಘಟ್ಟ, ಕುಂಬಾರಘಟ್ಟ, ಯಾದಘಟ್ಟ

೩.೨.೧.೪. ಪ್ರಾಣಿ–ಪಕ್ಷಿವಾಚಕ

ಸ್ಥಳನಾಮ ನಿರ್ದೇಶನದಲ್ಲಿ ಪ್ರಾಣಿ–ಪಕ್ಷಿಗಳು ತಮ್ಮ ಸ್ಥಾನವನ್ನು ಪಡೆದುಕೊಂಡಿವೆ. ಜನಪದ ಅಥವಾ ಶಿಷ್ಟರ ಮನೋಭಾವನೆಯನ್ನು ಇವು ವ್ಯಕ್ತಪಡಿಸುತ್ತವೆ. ತಮ್ಮ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಿ–ಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ನಿರ್ದೇಶಿಸುತ್ತಾರೆ. ಈ ಪರಿಸರದಲ್ಲಿ ಕಂಡುಬರುವ ಆನಿವಾಳ, ಕಡವಗೆರೆ, ಕರಡಿಕಟ್ಟೆ, ಕುದುರೆಕಣಿವೆ, ಗರುವಿನ ಬೀಳು, ಗೂಳಿಹಟ್ಟಿ, ಗೂಳಿಹಳ್ಳಿ, ಗೂಳಿಹೊಸಹಳ್ಳಿ, ನಾಗರಕಟ್ಟೆ, ನಾಯಿಗೆರೆ ಮುಂತಾದವುಗಳು ಪ್ರಾಣಿವಾಚಿ ಹಿನ್ನೆಲೆಯಿಂದ ಉಗಮಗೊಂಡ ಸ್ಥಳನಾಮಗಳಾಗಿವೆ. ಇವುಗಳಲ್ಲಿ ಗೂಳಿಹಳ್ಳಿ, ಗೂಳಿಹಟ್ಟಿ, ಗೂಳಿಹೊಸಹಳ್ಳಿ ಇವುಗಳು ಪ್ರಾಗೈತಿಹಾಸಿಕ ಸಂಸ್ಕೃತಿ ಹಿನ್ನೆಲೆಯ ಸ್ಥಳನಾಮಗಳು. ಬೂದಿಹಾಳು ಪಕ್ಕದಲ್ಲಿರುವ ಗೂಳಿಹಳ್ಳಿ ಸ್ಥಳನಾಮ ಅಲ್ಲಿನ ಹೊನ್ನತ್ತಮ್ಮ ದೇವಾಲಯದ ಹಿಂದಿನ ಒಂದು ಕಲ್ಲಾಸರೆಯಲ್ಲಿ ಬೃಹತ್ ಶಿಲಾಸಂಸ್ಕೃತಿಯ ಗೂಳಿ ಚಿತ್ರಗಳು ಕಂಡುಬಂದಿದ್ದು ಇದೊಂದು ಪ್ರಾಚೀನ ಮಾನವ ವಸತಿ ನೆಲೆಯಾಗಿದೆ. ಈ ಕಾರಣವಾಗಿ ಇದಕ್ಕೆ ಗೂಳಿಹಳ್ಳಿ ಸ್ಥಳನಾಮ ಬಂದಿದೆ. ಇಲ್ಲಿನ ಗೂಳಿಗಳ ಮೇಲಿನ ಭಕ್ತಿ, ಗೌರವ ಅವುಗಳೊಂದಿಗಿನ ಅವಿನಾಭಾವ ಸಂಬಂಧ ಇವುಗಳ ರಚನೆ, ಅದರಿಂದಾಗಿಯೇ ಸ್ಥಳನಾಮಗಳ ಉಗಮ ಕಾಣಬಹುದು. ಅದೇ ರೀತಿ ಗೂಳಿಹಟ್ಟಿ, ಗೂಳಿಹೊಸಹಳ್ಳಿ ಇಲ್ಲಿ ಗೂಳಿಚಿತ್ರಗಳು ಕಂಡುಬರದಿದ್ದರು ಬೃಹತ್ ಶಿಲಾ ಸಂಸ್ಕೃತಿಯ ಅನೇಕ ನೆಲೆಗಳು ಗೋಚರಿಸಿವೆ.

ಆದುದರಿಂದ ಈ ರೀತಿ ಪ್ರಾಚೀನ ಪರಿಸರದಲ್ಲಿನ ಪ್ರಾಣಿಸೂಚಕ ಸ್ಥಳನಾಮಗಳೇ ಇಂದಿನ ಹೆಸರುಗಳಿಗೆ ಮೂಲವಾಗಿವೆ.

೩.೨.೧.೫. ಸಸ್ಯವಾಚಕ

ಪ್ರಾಚೀನ ಕಾಲದಿಂದಲೂ ಪ್ರಾಕೃತಿಕ ಸಂಪತ್ತುಗಳ ಮಧ್ಯೆ ಬದುಕುತ್ತಿರುವ ಮಾನವನು ಗಿಡ-ಮರಗಳ ಬಗ್ಗೆ ಒಂದು ರೀತಿಯ ಆರಾಧನಾ ಮನೋಭಾವ ಮತ್ತು ಪೂಜಿಸುವ, ಪ್ರಾರ್ಥಿಸುವ ಪದ್ಧತಿಯನ್ನು ಬೆಳಸಿಕೊಂಡು ಬಂದಿದ್ದಾನೆ. ಪ್ರಕೃತಿಯ ಮಡಿಲಲ್ಲಿ ಜನರು ತಮ್ಮ ವಾಸ, ನೆಲೆಗಳನ್ನು ಗಿಡಮರಗಳ ಆಸುಪಾಸಿನಲ್ಲಿ ಕಟ್ಟಿಕೊಂಡರು. ಒಂದೊಂದು ಜನಾಂಗ, ಪಂಗಡ ಹಾಗೂ ರಾಜಮನೆತನಗಳ ಮೂಲ ಪುರುಷನು ಒಂದೊಂದು ಮರದಲ್ಲಿ ಹುಟ್ಟಿ ಬಂದನೆಂಬ ಭಾವನೆ ಇತಿಹಾಸ ಕಾಲದಲ್ಲಿ ಇದ್ದುದರಿಂದಾಗಿ ಆಯಾ ಜನಾಂಗಗಳು ತಮಗೆ ಸಂಬಂಧಿಸಿದ ವೃಕ್ಷಗಳು, ಗಿಡಗಳನ್ನು ಆರಾಧನೆ ಮಾಡತೊಡಗಿದವು. ಹಾಗೆಯೇ ಆ ಪರಿಸರದಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದ ಮರ, ಗಿಡ, ದವಸ-ಧಾನ್ಯ ಮುಂತಾದವುಗಳ ಹೆಸರುಗಳನ್ನು ಹೆಸರಿಸಿರುವ ಸಾಧ್ಯತೆಗಳಿವೆ. ಅಂತಹ ಕೆಲವು ಸ್ಥಳನಾಮಗಳು ಹೊಸದುರ್ಗ ತಾಲೂಕಿನಲ್ಲಿ ಕಂಡುಬರುತ್ತವೆ. ಅವುಗಳೆಂದರೆ:- ಅರಳೀಹಳ್ಳಿ, ಕಡಲೇಕಂಸಾಗರ, ಕಬ್ಬಿನಕೆರೆ, ಕಾರೇಹಳ್ಳಿ, ಬ್ಯಾಲದಕೆರೆ, ಬೇವಿನಹಳ್ಳಿ, ಮೆಣಸಿನೋಡು, ಯಾಲಕ್ಕಪ್ಪನಹಟ್ಟಿ, ಹತ್ತಿಮೊಗೆ, ಹಾಗಲಕೆರೆ, ಹುಣಸೇಕಟ್ಟೆ, ಹುರುಳೀಹಳ್ಳಿ, ಹುಲುಕಟ್ಟೆ, ಹೊನ್ನೇಕೆರೆ.

೩.೨.೧.೬. ಪ್ರಮಾಣವಾಚಕ

ಒಂದೇ ಹೆಸರಿನ ಹಲವಾರು ಸ್ಥಳಗಳು ಇರುವ ಕಡೆ ಆ ಪ್ರದೇಶಗಳನ್ನು ಗುರುತಿಸಲು ಹಿರಿದು-ಕಿರಿದು, ಚಿಕ್ಕದು-ದೊಡ್ಡದು, ಮೇಲೆ-ಕೆಳಗೆ ಎಂಬ ಪರಿಮಾಣಗಳನ್ನು ಬಳಸಿಕೊಂಡು ಕೆಲವು ಸ್ಥಳನಾಮಗಳು ನಿಷ್ಪತ್ತಿಯಾಗಿವೆ. ಅವುಗಳೆಂದರೆ:- ಹೆಗ್ಗೆರೆ, ಹೆಬ್ಬಳ್ಳಿ, ಚಿಕ್ಕಯಗಟಿ, ಚಿಕ್ಕಮ್ಮನಹಳ್ಳಿ, ದೊಡ್ಡಕಿಟ್ಟದಹಳ್ಳಿ, ಸಣ್ಣಕಿಟ್ಟದಹಳ್ಳಿ, ದೊಡ್ಡಬ್ಯಾಲದಕೆರೆ, ಚಿಕ್ಕಬ್ಯಾಲದಕೆರೆ, ದೊಡ್ಡಘಟ್ಟ, ಚಿಕ್ಕಹುಲ್ಲೇನಹಳ್ಳಿ, ದೊಡ್ಡಣ್ಣನಪಾಳ್ಯ, ಅಜ್ಜಿಕಂಸಾಗರ, ಸಣ್ಣತಿಪ್ಪೇನಹಳ್ಳಿ, ದೊಡ್ಡಕರ್ಪೂರದಕಟ್ಟೆ, ಚಿಕ್ಕಕರ್ಪೂರದಕಟ್ಟೆ, ಹೇರೂರು ಇತ್ಯಾದಿ.

೩.೨.೧.೭ ದಿಕ್ಕು ಸೂಚಕ

ಒಂದು ಪ್ರದೇಶದ ಸ್ಥಳಗಳನ್ನು ಗುರುತಿಸುವಲ್ಲಿ ದಿಕ್ಕು, ರಸ್ತೆ, ಗಡಿ ಮುಂತಾದ ವಾರ್ಗಿಕಗಳನ್ನು ಒಳಗೊಂಡ ಸ್ಥಳನಾಮಗಳು ಕಂಡುಬರುತ್ತವೆ. ಈ ಪರಿಸರದ ಗಡಿಯಾಪ್ಪನಹಟ್ಟಿ ಇದಕ್ಕೆ ಒಂದು ಉತ್ತಮ ಉದಾಹರಣೆ.

೩.೨.೧.೮. ಖನಿಜ ಸೂಚಕ

ಖನಿಜಗಳು ಯಥೇಚ್ಛವಾಗಿ ದೊರೆಯುವ ಪ್ರದೇಶಗಳಿಗೆ ಅವುಗಳ ಹೆಸರುಗಳು ಬಂದಿರುತ್ತವೆ. ಹೊಸದುರ್ಗ ತಾಲೂಕು ಪರಿಸರದ ಕಂಚೀಪುರ, ಕಿಟ್ಟದಾಳು, ಕಿಟ್ಟದಹಳ್ಳಿ, ದೊಡ್ಡಕಿಟ್ಟದಹಳ್ಳಿ, ಸಣ್ಣ ಕಿಟ್ಟದಹಳ್ಳಿ ಇವುಗಳು ಖನಿಜ ಸೂಚಕ ಸ್ಥಳನಾಮಗಳಾಗಿವೆ. ಹೊಸದುರ್ಗ ತಾಲೂಕು ಪರಿಸರದ ಪ್ರಾಕೃತಿಕ ಸ್ಥಳನಾಮಗಳ ಅಧ್ಯಯನ ಇಲ್ಲಿನ ಪ್ರಾಚೀನತೆಯನ್ನು ಅರಿಯಲು ಸಾಧ್ಯವಾಗುತ್ತದೆ. ಆದಿ ಹಳೆಶಿಲಾಯುಗದ ಕಾಲದಿಂದಲೂ ವಸತಿ ನೆಲೆಯನ್ನಾಗಿ ಬಳಸಿ

ಕೊಂಡಿರುವ ಮಾನವನು ಕಾಲದಿಂದ ಕಾಲಕ್ಕೆ ಪರಿಸರದ ವೈಶಿಷ್ಟ್ಯತೆಗೆ ಅನುಗುಣವಾಗಿ ಜೀವನ ನಡೆಸುತ್ತಾ ಬಂದದ್ದನ್ನು ಇಲ್ಲಿನ ಪ್ರಾಕೃತಿಕ ಸ್ಥಳನಾಮಗಳು ತೋರಿಸಿಕೊಡುತ್ತವೆ. ಇಲ್ಲಿನ ಪ್ರಾಕೃತಿಕ ಸ್ಥಳನಾಮಗಳಲ್ಲಿ ಜಲ, ಶಿಲಾ, ಭೂಸ್ಥಿತಿ, ಪ್ರಾಣಿ–ಪಕ್ಷಿ ಹಾಗೂ ಖನಿಜ ಸೂಚಕ ಸ್ಥಳನಾಮಗಳು ಅಧಿಕಸಂಖ್ಯೆಯಲ್ಲಿ ಹಾಗೂ ವಿಶೇಷವಾಗಿ ಕಾಣಸಿಗುತ್ತವೆ.

ಭೂಮಿಯ ಮೇಲೆ ಮಾನವನ ಹುಟ್ಟು, ವಿಕಾಸದ ಪರಿಸರಕ್ಕೆ ಅಗತ್ಯವಾಗಿ ಜಲ, ಶಿಲಾ, ಭೂಸ್ಥಿತಿ, ಪ್ರಾಣಿ–ಪಕ್ಷಿ ಹಾಗೂ ಖನಿಜಗಳು ಮುಖ್ಯವಾಗಿ ಬೇಕೆ ಬೇಕು. ಪ್ರಾಕೃತಿಕವಾಗಿ ವೇದಾವತಿ ನದಿ, ಅತ್ಯಂತ ಎತ್ತರ ಹಾಗೂ ವಿಸ್ತಾರವಾದ ಬೆಟ್ಟ–ಗುಡ್ಡ, ಅಲ್ಲಲ್ಲಿ ಹರಿಯುವ ಚಿಕ್ಕ ಪುಟ್ಟ ಹಳ್ಳ–ಕೊಳ್ಳ, ಗವಿ–ಕಲ್ಲಾಸರೆ, ನೈಸರ್ಗಿಕವಾಗಿ ದೊರೆಯುವ ಖನಿಜ ಸಂಪತ್ತನ್ನು ಬಳಸಿಕೊಂಡು ಲಿಖಿತಪೂರ್ವದ ಪ್ರಾಗೈತಿಹಾಸಿಕ ಹಾಗೂ ಲಿಖಿತ ಕಾಲದ ಇತಿಹಾಸ ಕಾಲದಲ್ಲಿ ಮಾನವನು ತನ್ನ ಜೀವನ ನಿರ್ವಹಣೆ ಮಾಡಿಕೊಂಡಿದ್ದಾನೆ. ಈ ಕುರಿತ ಪ್ರಾಕ್ಚಾರಿತ್ರಿಕ ಅವಶೇಷಗಳು, ಪುರಾತತ್ವ ಅಧ್ಯಯನ ದೃಷ್ಟಿಕೋನ, ಭೌಗೋಳಿಕ ಪರಿಸರದ ಬಗೆಗಿನ ಅರಿವು ಮುಂತಾದ ಮಾರ್ಗದಲ್ಲಿ ಪ್ರಾಕೃತಿಕ ಸ್ಥಳನಾಮಗಳ ಗುರುತಿಸುವಿಕೆ, ವಿಮರ್ಶೆ ಹಾಗೂ ವಿಶ್ಲೇಷಣೆ ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ ಹೊಸದುರ್ಗ ತಾಲೂಕು ಪರಿಸರದ ಪ್ರಾಕೃತಿಕ ಸ್ಥಳನಾಮಗಳು ಅತ್ಯಂತ ಪ್ರಾಚೀನವಾದವುಗಳು.

೩.೨.೨. ಸಾಂಸ್ಕೃತಿಕ ಸ್ಥಳನಾಮಗಳು

ನಿಸರ್ಗ ಅವಲಂಬಿಯಾಗಿದ್ದ ಮಾನವನು ಪ್ರಾರಂಭದಲ್ಲಿ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದು ನಂತರ ಒಂದೆಡೆ ನೆಲೆನಿಂತು ಪಶುಪಾಲನೆ ಹಾಗೂ ಕೃಷಿಯನ್ನು ಕೈಗೊಂಡು ಆಹಾರ ಉತ್ಪಾದನೆಯಲ್ಲಿ ತೊಡಗಿ ಗ್ರಾಮಗಳನ್ನು ಸ್ಥಾಪಿಸಿಕೊಂಡು ಬದುಕಲು ಪ್ರಾರಂಭಿಸಿದ. ಅಂದಿನಿಂದ ಅವನ ಸಾಂಸ್ಕೃತಿಕ ಬದುಕು ವಿಕಾಸವಾಗಿ ತನ್ನದೆ ಆದ ಜೀವನ, ರೀತಿ–ನೀತಿ, ಆಚಾರ–ವಿಚಾರ, ನಡೆ–ನುಡಿ, ವೇಷ–ಭಾಷೆ, ಜಾತಿ–ಜನಾಂಗ, ವಿಧಿ–ವಿಧಾನಗಳನ್ನು ರೂಪಿಸಿಕೊಂಡನು. ವ್ಯಕ್ತಿಗಳ ಜೀವನ ಕ್ರಮದಿಂದ ಅವನ ಸಂಸ್ಕೃತಿಯನ್ನರಿಯಲು ಸಾಧ್ಯವಿದೆ. ಸ್ಥಳನಾಮಗಳಲ್ಲಿ ಅವನ ಬದುಕಿನ ಬಗ್ಗೆ ಅನೇಕ ವಿಷಯಗಳುಂಟು. ಅವುಗಳ ಅಧ್ಯಯನದಿಂದ ಜನಗಳ ಮನೋಭಾವನೆ, ವ್ಯಕ್ತಿತ್ವ, ಜಾತಿ, ರಾಜಕೀಯ ಮತ್ತು ಸಾಮಾಜಿಕ ವಿಕಸನ ಮೊದಲಾದವುಗಳನ್ನು ಅರಿಯಬಹುದು. ಸಾಂಸ್ಕೃತಿಕ ಸ್ಥಳನಾಮಗಳನ್ನು ಈ ಕೆಳಗಿನಂತೆ ವಿಭಾಗಿಸಿ ನೋಡಬಹುದು.

೩.೨.೨.೧. ಪೌರಾಣಿಕ

ಪುರಾಣ ಎನ್ನುವುದು ಚರಿತ್ರೆಯ ಮಾತೃಕೆ. ಐತಿಹ್ಯ ತನ್ನ ಸುತ್ತಲಿನ ಜನಸಾಮಾನ್ಯರನ್ನು, ವಿಶೇಷ ವ್ಯಕ್ತಿಗಳನ್ನು, ಪುರಾಣ ದೈವೀ ಪುರುಷರನ್ನು ಹೆಣೆದುಕೊಂಡಿರುತ್ತದೆ. ಕಾರಣ ಐತಿಹ್ಯ ಮತ್ತು ಮತಧರ್ಮಗಳೊಡನೆ ಪುರಾಣದ ಸಂಬಂಧವನ್ನು ಅತ್ಯಂತ ನಿಕಟವೆಂದು ಹೇಳಬಹುದು. ಚರಿತ್ರೆಯ ಅಂಶ ಐತಿಹ್ಯಕ್ಕೆ ಆಧಾರವಾದರೆ ಐತಿಹ್ಯ ಪುರಾಣಕ್ಕೆ ಆಧಾರ.[೯] ಇವೆರೆಡರ ನಡುವೆ ಎಳೆಯಷ್ಟು ಭಿನ್ನತೆಯಿದೆಯಷ್ಟೇ. ಇದರಿಂದ ಪೌರಾಣಿಕ ಸ್ಥಳನಾಮಗಳ ಅಧ್ಯಯನ ಕುತೂಹಲಕರ. ರಾಮಾಯಣ, ಮಹಾಭಾರತ ಮತ್ತು ಭಾಗವತದ ಅನೇಕ ವ್ಯಕ್ತಿಗಳು ನಮ್ಮ ಜನಪದರ

ಗ್ರಾಮಗಳಿಗೆ, ಸ್ಥಳಗಳಿಗೆ ಹೆಸರಾಗಿ ನಿಲ್ಲುತ್ತಾರೆ. ಇದರ ಪರಿಣಾಮವಾಗಿ ಕನ್ನಡನಾಡಿನ ಅನೇಕ ಗ್ರಾಮಗಳಿಗೆ ಈ ರೀತಿಯ ಪುರಾಣ ಪ್ರಜ್ಞೆ ಉಳಿದುಬಂದಿದೆ. ಈ ತಾಲೂಕಿನಲ್ಲಿ ಪುರಾಣಕ್ಕೆ ಸಂಬಂಧಿಸಿದ ಕೆಲವು ಸ್ಥಳನಾಮಗಳು ದೊರೆಯುತ್ತವೆ.

ಉದಾ:- ಹಾಲುರಾಮೇಶ್ವರ, ದಶರಥ ರಾಮೇಶ್ವರ, ಶಬರಿವನ.

೩.೨.೨.೨. ದೈವವಾಚಕ

ಸಂಸ್ಕೃತಿಯಲ್ಲಿ ದೇವರ ಪಾತ್ರ ಅನನ್ಯ. ಜೀವನದ ಹಲವಾರು ಸಂಗತಿಗಳಲ್ಲಿ ದೈವದ ಅಸ್ತಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಹಾಗೆಯೇ ಗ್ರಾಮಗಳ ಹೆಸರುಗಳಿಗೂ ದೇವರ ನಾಮವನ್ನು ಆರೋಪಿಸುವುದು ವಾಡಿಕೆ. ಸಮುದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮದೇವತೆ, ಪ್ರಾದೇಶಿಕ ದೇವತೆ- ಹೀಗೆ ಹಲವಾರು ದೇವರುಗಳ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬುತ್ತಾರೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬರುವ ದೈವವಾಚಿ ಸ್ಥಳನಾಮಗಳೆಂದರೆ:- ಲಿಂಗದಹಳ್ಳಿ, ಭೈರಾಪುರ, ಜೋಡಿ ಶ್ರೀರಂಗಾಪುರ, ಕೃಷ್ಣಾಪುರ, ನಾಗೇನಹಳ್ಳಿ, ದೇವರಹಟ್ಟಿ, ದೇವಪುರ, ದೇವಿಗೆರೆ, ಬೊಮ್ಮೇನಹಳ್ಳಿ, ಮೈಲಾರಪುರ, ವೇಂಗಳಾಪುರ, ಬೆನಕನಹಳ್ಳಿ, ಹನುಮನಹಳ್ಳಿ, ಹಿಂಡೇದೇವರಹಟ್ಟಿ, ಲಕ್ಷ್ಮೀದೇವರಹಳ್ಳಿ ಇತ್ಯಾದಿ.

೩.೨.೨.೩. ವ್ಯಕ್ತಿವಾಚಕ

ಕೆಲವು ಪ್ರಮುಖ ಅರಸು ಮನೆತನಗಳು, ಪಾಳೆಯಗಾರರು, ಪ್ರಸಿದ್ಧ ವ್ಯಕ್ತಿಗಳು, ಪ್ರಾಂತ್ಯಾಧಿಕಾರಿಗಳು ಜನಗಳನ್ನು ತಮ್ಮ ಆಳ್ವಿಕೆಯ ಅವಧಿಯಲ್ಲಿ ತುಂಬಾ ವಾತ್ಸಲ್ಯದಿಂದ ಕಂಡು ಅವರ ಇಷ್ಟಾರ್ಥಗಳನ್ನು ಅರಿತು ಸಾಧ್ಯವಾದಷ್ಟೂ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಅವರ ಪ್ರೀತಿಗೆ ಪಾತ್ರರಾಗಿರುತ್ತಾರೆ. ಪ್ರಜೆಗಳು ಅವರನ್ನು ದೇವರಂತೆ ಕೊಂಡಾಡುತ್ತಿದ್ದರು. ಇಂಥ ವ್ಯಕ್ತಿಗಳ ಹೆಸರಿನ ಹಿನ್ನೆಲೆಯಲ್ಲಿ ಗ್ರಾಮಗಳು ನಿರ್ಮಾಣವಾಗಿವೆ. ಅಲ್ಲದೆ ಅಂದಿನ ಅರಸರು ತಮ್ಮ ಪ್ರೀತಿ ಪಾತ್ರರ ಹೆಸರಿನಲ್ಲಿ ಗ್ರಾಮಗಳನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಅಂತವುಗಳನ್ನು ವ್ಯಕ್ತಿವಾಚಿ ಸ್ಥಳನಾಮಗಳೆಂದು ಕರೆಯಲಾಗುತ್ತದೆ. ಹೊಸದುರ್ಗ ತಾಲೂಕಿನ ವ್ಯಕ್ತಿವಾಚಿ ಸ್ಥಳನಾಮಗಳೆಂದರೆ:-

ಜೋಗಮ್ಮನಹಳ್ಳಿ, ಬೊಮ್ಮೇನಹಳ್ಳಿ, ಚಿತ್ತಯ್ಯನಹಟ್ಟಿ, ಸಿದ್ಧಪ್ಪನಹಟ್ಟಿ, ಬಜ್ಜಪ್ಪನಹಟ್ಟಿ, ಯಾಲಕ್ಕಪ್ಪನಹಳ್ಳಿ, ದೊಡ್ಡರಂಗಯ್ಯನಹಟ್ಟಿ, ಮಲ್ಲಪ್ಪನಹಳ್ಳಿ, ಚಿಕ್ಕಮ್ಮನಹಳ್ಳಿ, ಲಕ್ಕಿಹಳ್ಳಿ, ರಾಮಜ್ಜನಹಳ್ಳಿ, ಮುದ್ದಯ್ಯನಹಟ್ಟಿ, ದೊಡ್ಡ ತಿಮ್ಮಯ್ಯನಹಟ್ಟಿ, ದಳವಾಯಿಕಟ್ಟೆ, ರಾಮದಾಸಪುರ, ರಂಗವ್ವನಹಳ್ಳಿ, ವೀರವ್ವನಾಗ್ತಿಹಳ್ಳಿ, ಅಕ್ಕಿ ತಿಮ್ಮಯ್ಯನಹಟ್ಟಿ, ಶ್ರೀರಾಂಪುರ (ಸಿರುಮಣಪುರ), ಬಲ್ಲಾಳಸಮುದ್ರ, ಸುಡಗಾಡಸಿದ್ಧರಹಟ್ಟಿ, ನಾಗತಿಹಳ್ಳಿ, ದಾಸಯ್ಯನಹಟ್ಟಿ, ಹೊಸತಿಮ್ಮಯ್ಯನಹಟ್ಟಿ, ಹಳೇ ತಿಮ್ಮಯ್ಯನಹಟ್ಟಿ, ಈರಣ್ಣನಹಟ್ಟಿ, ಬುಕ್ಕಸಾಗರ, ಅಜ್ಜಯ್ಯನಹಟ್ಟಿ, ಅಮ್ಮನಹಟ್ಟಿ, ಮಾಳಪ್ಪನಹಳ್ಳಿ, ನಾಗನಾಯಕನಕಟ್ಟೆ ಇತ್ಯಾದಿ. ಇವುಗಳಲ್ಲಿ ಕೆಲವನ್ನು ವಿಶೇಷವಾಗಿ ನೋಡಬಹುದು.

ಲಕ್ಕಿಹಳ್ಳಿ : ಮಾಡದಕೆರೆ ಹೋಬಳಿಯ ಈ ಗ್ರಾಮವನ್ನು ಮತ್ತೋಡು ನಾಯಕ ಅರಸ ಗಿರಿಯಪ್ಪನಾಯಕನು ತನ್ನ ತಾಯಿ ಲಕ್ಕವ್ವಳ ಹೆಸರಿನಲ್ಲಿ ನಿರ್ಮಾಣ ಮಾಡಿದನು.[೨೦]

ಲಕ್ಕಿಹಳ್ಳಿಯಲ್ಲಿ ಗಿರಿಯಪ್ಪನಾಯಕ ಕಟ್ಟಿಸಿದ ಎಸ್ನಲಾದ ಕೋಟೆ ಹಾಗೂ ಆಂಜನೇಯ ದೇವಾಲಯವನ್ನು ಕಾಣಬಹುದಾಗಿದೆ. ಒಟ್ಟಾರೆ ಮತ್ತೋಡು ನಾಯಕ ಅರಸ ಗಿರಿಯಪ್ಪನಾಯಕ ತನ್ನ ತಾಯಿಯ ಮೇಲಿನ ಪ್ರೀತಿ, ಭಕ್ತಿಯ ಕುರುಹಾಗಿ ಈ ಲಕ್ಕಿಹಳ್ಳಿ ಗ್ರಾಮ ಸ್ಥಾಪನೆಯಾಯಿತು.

ಶ್ರೀರಾಂಪುರ : ಹಿಂದಿನ ಬೂದಿಹಾಳೇ ಇಂದಿನ ಶ್ರೀರಾಂಪುರ. ಕ್ರಿ.ಶ. ೧೫ನೇ ಶತಮಾನದಲ್ಲಿ ಸೂಜಿಗಲ್ಲು, ಬೂದಿಹಾಳನ್ನು ಕೇಂದ್ರವಾಗಿ ಮಾಡಿಕೊಂಡು ಆಳಿದ ಗೊಲ್ಲ ಜನಾಂಗದ ಸಿರುಮನಾಯಕ ಈ ಪರಿಸರದಲ್ಲಿ ಇಂದಿಗೂ ಜನರ ಬಾಯಲ್ಲಿ ಜೀವಂತವಾಗಿರುವ ಒಬ್ಬ ಸಾಂಸ್ಕೃತಿಕ ವೀರ ಹಾಗೂ ದೊರೆ. ತನ್ನ ಎರಡನೇ ರಾಜಧಾನಿ ಬೂದಿಹಾಳನ್ನು ಹೆಚ್ಚು ಬಲಪಡಿಸಿ, ಕೋಟೆ–ಕೊತ್ತಲ, ಅರಮನೆ, ದೇವಾಲಯ, ಪುಷ್ಕರಣಿ ಮುಂತಾದವುಗಳ ಸುಂದರ ನಗರವಾಗಿ ಮಾರ್ಪಡಿಸಿದ ಸಿರುಮನಾಯಕನ ಕುರಿತು ಮೌಖಿಕ ಹಾಗೂ ಮೂರು ಗ್ರಂಥಸ್ತ ಸಾಹಿತ್ಯದಲ್ಲಿ ಅನೇಕ ಮಾಹಿತಿಗಳು ಲಭ್ಯವಿವೆ.[೫೧] ವಿಜಯನಗರದ ಮಹಾಮಂಡಳೇಶ್ವರ ಸಾಳುವ ಒಂದನೇ ನರಸಿಂಹರಾಯ ಮತ್ತು ಬೂದಿಹಾಳು ಅರಸು ಸಿರುಮನ ಮಧ್ಯೆ ಘೋರವಾಗಿ ಯುದ್ಧ ನಡೆದು, ಸಿರುಮನು ಮರಣ ಹೊಂದಿದನು. ಹೀಗೆ ಸಿರುಮನ ವೀರತನ, ಕಲಿತನ, ಅವನ ಪ್ರಜಾಕಾರ್ಯಗಳು ಈ ಪರಿಸರದಲ್ಲಿ ಇಂದಿಗೂ ಜನಪದ ಸಾಹಿತ್ಯದಲ್ಲಿ ಉಳಿದುಕೊಂಡು ಬಂದಿವೆ. ಈ ಹಿನ್ನೆಲೆಯಲ್ಲಿ ಬೂದಿಹಾಳು ನಂತರದಲ್ಲಿ ಸಿರುಮಣಪುರ> ಸಿರುಮನಪುರ> ಶಿರುಮಪುರ>ಶ್ರೀರಾಮಪುರ>ಶ್ರೀರಾಂಪುರ ಎಂಬುದಾಗಿ ಬಂದಿದೆ.

ನಾಗತಿಹಳ್ಳಿ / ವೀರವ್ವನಾಗತಿಹಳ್ಳಿ : ಮಧ್ಯಕಾಲಿನ ಪಾಳೆಯಗಾರರ ಪತ್ನಿ/ರಾಣಿಯರನ್ನು ನಾಗತಿಯರು ಎಂದು ಕರೆಯಲಾಗಿದೆ. ಮತ್ತೋಡು ಹೋಬಳಿಯಲ್ಲಿ ನಾಗತಿಹಳ್ಳಿ ಹಾಗೂ ವೀರವ್ವ ನಾಗತಿಹಳ್ಳಿ ಎಂಬ ಎರಡು ಗ್ರಾಮಗಳಿದ್ದು ಇವು ಬಹುಶಃ ಮತ್ತೋಡು ನಾಯಕ ಅರಸರ ರಾಣಿಯರ ಹೆಸರಿನಲ್ಲಿ ಸ್ಥಾಪನೆಗೊಂಡ ಗ್ರಾಮಗಳಿರಬಹುದು.

ಹೀಗೆ ಮಧ್ಯಕಾಲಿನ ಹೊಸದುರ್ಗ ಪರಿಸರದಲ್ಲಿನ ಸ್ಥಳನಾಮಗಳ ಮೇಲೆ ಅಂದಿನ ವಿಜಯನಗರೋತ್ತರ ನಾಯಕ ಅರಸರ ರಾಜಕೀಯ ಹಾಗೂ ಸಾಂಸ್ಕೃತಿಕ ಕಾರ್ಯಗಳ ಪ್ರಭಾವ ಅಧಿಕವಾಗಿದ್ದಿತು. ಆದುದರಿಂದಾಗಿಯೇ ಲಕ್ಕೀಹಳ್ಳಿ, ಶ್ರೀರಾಂಪುರ, ನಾಗತಿಹಳ್ಳಿ ಹಾಗೂ ವೀರವ್ವನಾಗತಿಹಳ್ಳಿ ಇವುಗಳು ವ್ಯಕ್ತಿವಾಚಕ ಸ್ಥಳನಾಮಗಳಾಗಿ ಪ್ರಸಿದ್ಧವಾಗಿವೆ.

೩.೨.೨.೪. ಜಾತಿವಾಚಕ

ಸಾಮಾಜಿಕ ರಚನೆಯಲ್ಲಿ ಮಾನವನಿಗೆ ಲಿಂಗ, ವರ್ಗ, ಜಾತಿ ಮುಂತಾದ ಅಂಶಗಳಿವೆ. ಲಿಖಿತ ಆಧಾರಗಳ ಕೊರತೆ ಇದ್ದ ಸಂದರ್ಭದಲ್ಲಿ ಯಾವುದೇ ಜನಾಂಗ ನೆಲೆಸಿದ್ದ ಪ್ರದೇಶದ ಸ್ಥಳನಾಮಗಳಲ್ಲಿ ಸಮಾನ ರೂಪಗಳನ್ನು ಪರಿಶೀಲಿಸಬೇಕು. ಇದರಿಂದ ಆಯಾ ನಾಡಿನ ಸಾಂಸ್ಕೃತಿಕ ಸ್ತರಗಳ ಜನಾಂಗಗಳ ಅಸ್ತಿತ್ವವು ಸ್ಥಳನಾಮಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು. ಸ್ಥಳನಾಮ ನಿರ್ದೇಶನವು ಜಾತಿ, ವರ್ಗದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತದೆ. ಮಾನವ ಪ್ರಾಚೀನ ಕಾಲದಲ್ಲಿ ನಿಸರ್ಗದೊಂದಿಗೆ ಜೀವನವನ್ನು ಸಾಗಿಸುತ್ತಾ ಇದ್ದ ಸಂದರ್ಭದಲ್ಲಿ ನಿಸರ್ಗವಾಚಿ ಸ್ಥಳನಾಮಗಳು ಮೊದಲು ಉಗಮಗೊಂಡವು. ಕಾಲಕ್ರಮೇಣ ನಿಸರ್ಗಕ್ಕಿಂತ

ತನ್ನ ಜನಾಂಗದ ಬಗೆಗೆ ವ್ಯಕ್ತಿಗಳು ಮೋಹ ಬೆಳಸಿಕೊಂಡ ಪರಿಣಾಮ ಜನಾಂಗವಾಚಿ ಸ್ಥಳನಾಮಗಳು ತಲೆದೋರಲಾರಂಭಿಸಿದವು. ಹೀಗಾಗಿ ಜನಾಂಗ ಅಥವಾ ಜಾತಿಯ ನೆಲೆಯಲ್ಲಿ ನಿರ್ದೇಶನಗೊಂಡಿರುವ ಸ್ಥಳನಾಮಗಳನ್ನು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ಕೆಳಗಿನ ವಿವೇಚನೆಯಲ್ಲಿ ಮಾಡಲಾಗಿದೆ.

ಬ್ರಾಹ್ಮಣರು : ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಪ್ರತಿಷ್ಠಿತ ಸಮುದಾಯವಾಗಿದ್ದು, ಗರಿಷ್ಠವಾದ ಸ್ಥಾನಮಾನವನ್ನು ಗುರುತಿಸಿಕೊಂಡು ಸ್ಥಳನಾಮಗಳ ಮೇಲೂ ತನ್ನ ಅಸ್ಥಿತ್ವವನ್ನು ಸ್ಥಾಪಿಸಿರುವುದು ಅವುಗಳ ಅಧ್ಯಯನದಿಂದ ಮನವರಿಕೆಯಾಗುತ್ತದೆ. ಪ್ರಾರಂಭದಲ್ಲಿ ವೈದಿಕರು ತಮ್ಮ ಕೆಲವು ನೆಲೆಗಳಿಗೆ ವೈಷ್ಣವ ಸಂಬಂಧಿ ಹೆಸರುಗಳನ್ನು ನಿರ್ದೇಶಿಸಿಕೊಂಡಿದ್ದರು. ಅಂದಿನ ರಾಜಪರಂಪರೆಯು ಬ್ರಾಹ್ಮಣರಿಗಾಗಿ ಅಗ್ರಹಾರಗಳನ್ನು ನಿರ್ಮಿಸಿಕೊಟ್ಟಿದ್ದುದು ತಿಳಿದುಬರುತ್ತದೆ. ಅಗ್ರಹಾರಗಳಲ್ಲದೆ ಬ್ರಾಹ್ಮಣ, ಭಂಟ, ಬೊಮ್ಮ ಮೊದಲಾದ ಹೆಸರುಗಳಿಂದ ಆರಂಭವಾಗುವ ಸ್ಥಳನಾಮಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಬ್ರಹ್ಮವು ಸಂಸ್ಕೃತದಿಂದ ತದ್ಭವಗೊಂಡು ಬೊಮ್ಮ ಆಗಿದೆ. ಭಟ್ಟ ಪದವು ಬ್ರಾಹ್ಮಣ ವಾಸ್ತವ್ಯದ ಹೆಸರನ್ನು ಪ್ರತಿನಿಧಿಸುತ್ತದೆ. ಈ ಪರಿಸರ ದಲ್ಲಿ ಕಾಣಸಿಗುವ ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಸ್ಥಳನಾಮಗಳೆಂದರೆ:- ಬೊಮ್ಮೇನಹಳ್ಳಿ (ಬೊಮ್ಮ<ಬ್ರಹ್ಮ), ಐಯ್ಯನಹಳ್ಳಿ (ಅಯ್ಯ), ಬಂಟನಗವಿ ಹಟ್ಟಿ (ಬಂಟ< ಭಟ್ಟ), ಅಗ್ರಹಾರ.

ವೈಶ್ಯರು/ಶೆಟ್ಟರು : ವೈಶ್ಯರು ವ್ಯಾಪಾರಿಗಳು, ವ್ಯಾಪಾರ ಮಾಡುವುದರಿಂದ ಈ ಸಮುದಾಯವನ್ನು ಶೆಟ್ಟಿ ಎಂದು ಕರೆಯಲಾಗುತ್ತದೆ. ಪ್ರಾಚೀನ ಕರ್ನಾಟಕದ ಕೆಲವು ಶಾಸನಗಳಲ್ಲಿ ವ್ಯಾಪಾರಿ ಸಂಘಗಳ, ವಣಿಕರ ಹಾಗೂ ಪಟ್ಟಣ ಶೆಟ್ಟಿಗಳ ಉಲ್ಲೇಖಗಳಿವೆ. ಇವರ ಪ್ರಭಾವದಿಂದ ಆಯಾ ಗ್ರಾಮಗಳಿಗೆ ಅವರ ಹೆಸರುಗಳೇ ಕಂಡುಬರುತ್ತವೆ. ಉದಾ:- ಶೆಟ್ಟಿಹಳ್ಳಿ, ಬಾಗಶೆಟ್ಟಿಹಳ್ಳಿ.

ಲಿಂಗಾಯಿತರು : ಲಿಂಗಾಯಿತರ ಊರುಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ಗುರುತಿಸಬಹುದು. ೧೨ನೇ ಶತಮಾನದಲ್ಲಿ ಆರಂಭವಾದ ವೀರಶೈವ ಧರ್ಮದಿಂದ ಹುಟ್ಟಿದ ಸ್ಥಳನಾಮಗಳು. ಇದಕ್ಕೂ ಮುಂಚೆ ಇದ್ದ ಶೈವ ಪಂಥದಿಂದ ನಿರ್ದೇಶಿಸಲ್ಪಟ್ಟ ಸ್ಥಳನಾಮಗಳು. ಶೈವ ಪಂಥದ ದೈವಗಳಾದ ವೀರಭದ್ರ, ಶಿವ, ಭೈರವ, ಲಿಂಗ, ನಂದಿ ಮುಂತಾದ ಹೆಸರುಗಳಿಂದ ಶೈವ ಸ್ಥಳನಾಮಗಳು ಕಂಡುಬಂದರೆ, ವೀರಶೈವ ಪಂಥದ ಪ್ರಭಾವದಿಂದ ಅಯ್ಯ, ಜಂಗಮ, ಒಡೆಯ, ಮಠ, ಬಸವ, ಸಿದ್ಧರಾಮ ಮೊದಲಾದ ಸ್ಥಳನಾಮಗಳು ಕಂಡುಬರುತ್ತವೆ. ಈ ಪರಿಸರದಲ್ಲಿ ಶೈವ ಪಂಥದ ಸ್ಥಳನಾಮಗಳು ಹೆಚ್ಚು ಗೋಚರಿಸುತ್ತವೆ. ಅವುಗಳೆಂದರೆ:- ಲಿಂಗದಹಳ್ಳಿ, ಶಿವನೇಕಟ್ಟೆ, ಭೈರಾಪುರ, ಮೈಲಾರಪುರ, ಸೋಮೇನಹಳ್ಳಿ, ಸಿದ್ಧಪ್ಪನಹಟ್ಟಿ

ಕುರುಬರು : ಕರ್ನಾಟಕದ ಪ್ರಮುಖ ಬುಡಕಟ್ಟುಗಳಲ್ಲಿ 'ಕುರುಬ'ವೂ ಸಹ ಒಂದು. ಕುರುಬ ಪದವು 'ಕುರು' ಎಂಬುದರಿಂದ ನಿಷ್ಪನ್ನಗೊಂಡಿದ್ದು, ಇದು 'ಕುರಿ' ಎಂಬ ಪ್ರಾಣಿಯನ್ನು ಸೂಚಿಸುತ್ತದೆ. ಬೆಟ್ಟ-ಗುಡ್ಡಗಳ ಪರಿಸರದಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡು, ಕುರಿಗಳನ್ನು ಸಾಕಿಕೊಂಡು ವಾಸಿಸುತ್ತಿದ್ದ ಇವರ ನೆಲೆಗಳಿಗೆ ಅದೇ ಹೆಸರಿನಿಂದ ಕರೆದುಕೊಂಡಿರುವುದು ವಿಶೇಷವಾಗಿದೆ. ಹೊಸದುರ್ಗ ತಾಲೂಕು ಪರಿಸರದ ಪ್ರಮುಖ ಬುಡಕಟ್ಟುಗಳಲ್ಲಿ ಕುರುಬ

ಸಮುದಾಯವು ಒಂದು. ಈ ತಾಲೂಕಿನ ಶ್ರೀರಾಂಪುರ (ಬೂದಿಹಾಳು), ಮತ್ತೋಡು ಹಾಗೂ ಕಸಬಾ ಹೋಬಳಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಕುರುಬ ಜನಾಂಗವಿದ್ದು, ಅವರಿಗೆ ಸಂಬಂಧಿಸಿದ ೩ ಕುರುಬರಹಳ್ಳಿಗಳು ಇವೆ.

ಗೊಲ್ಲರು : ಪ್ರಾರಂಭದಲ್ಲಿ ಕಾಡುವಾಸಿಗಳಾಗಿದ್ದ ಗೊಲ್ಲರ ಮುಖ್ಯವೃತ್ತಿ ಪಶುಸಂಗೋಪನೆ ಹಾಗೂ ಹೈನುಗಾರಿಕೆ. ಗೋವುಗಳನ್ನು ಸಾಕಿ ಹಟ್ಟಿ ಕಟ್ಟಿಕೊಂಡು ವಾಸ ಮಾಡುತ್ತಿದ್ದ ಇವರು ಅವುಗಳಿಗೆ ತಮ್ಮ ಜಾತಿಯ ಹೆಸರನ್ನೇ ಆರೋಪಿಸಿದರು. ಹೊಸದುರ್ಗ ತಾಲೂಕಿನ ಮಾಡದಕೆರೆ ಹೋಬಳಿಯಲ್ಲಿ ಅತ್ಯಂತ ಹೆಚ್ಚು ಗೊಲ್ಲ ಸಮುದಾಯವಿದೆ. ಮಧ್ಯಕಾಲಿನ ಹೊಸದುರ್ಗ ಪರಿಸರದ ಬೂದಿಹಾಳು ಸಿರುಮನಾಯಕ ಗೊಲ್ಲ ಜನಾಂಗದವನಾಗಿದ್ದು, ಈ ಜನಾಂಗದ ಪ್ರಭುತ್ವದ ಜನಪದ ಹಾಗೂ ಸಾಂಸ್ಕೃತಿಕ ವೀರನಾಗಿ ಕಂಡುಬರುತ್ತಾನೆ. ಚಾರಿತ್ರಿಕವಾಗಿ ಈ ಪರಿಸರದ ಪ್ರಭುತ್ವದಲ್ಲಿ ಗೊಲ್ಲ ಜನಾಂಗದ ಪಾತ್ರ ಅದ್ವಿತೀಯವಾದುದು ಎಂಬುದನ್ನು ಸಿರುಮನ ಚರಿತ್ರೆಯಿಂದ ತಿಳಿಯಬಹುದು. ಬೂದಿಹಾಳು ಪರಿಸರದಲ್ಲಿ ಗೊಲ್ಲ ಜನಾಂಗವಿಲ್ಲ, ಆದರೆ ಅವರ ಸಾಂಸ್ಕೃತಿಕವಾದ ದೇವಾಲಯ, ಮೂರ್ತಿ, ಆಚರಣೆ, ನಂಬಿಕೆ-ಸಂಪ್ರದಾಯಗಳು ಜೀವಂತವಾಗಿವೆ. ೧೫ನೇ ಶತಮಾನದಲ್ಲಿ ಸಾಳುವ ಒಂದನೇ ನರಸಿಂಹನೊಂದಿಗೆ ಸಿರುಮ ಯುದ್ಧದಲ್ಲಿ ಸೋತು ಸಾವನ್ನಪ್ಪಿ ಬೂದಿಹಾಳು ಸಂಸ್ಥಾನ ಪತನವಾದ ಬಳಿಕ ಇಲ್ಲಿನ ಅಸಂಖ್ಯಾತ ಜನಾಂಗ ಬೇರೆಡೆಗೆ ವಲಸೆ ಹೋಗಿರಬೇಕು. ಹೀಗೆ ಹೋದವರು ಮಾಡದಕೆರೆ ಪರಿಸರದಲ್ಲಿ ನೆಲೆಸಿದ್ದಿರಬೇಕು. ಆದುದರಿಂದಲೇ ಮಾಡದಕೆರೆ ಹೋಬಳಿಯಲ್ಲಿ ಹೆಚ್ಚು ಗೊಲ್ಲ ಜನಾಂಗ ಹಾಗೂ ಗೊಲ್ಲರ ಹಟ್ಟಿಗಳಿವೆ. ಹೊಸದುರ್ಗ ತಾಲೂಕಿನಲ್ಲಿ ಈ ಸಮುದಾಯದ ಗ್ರಾಮಗಳನ್ನು ಗೊಲ್ಲರಹಟ್ಟಿ, ಗೊಲ್ಲರಹಳ್ಳಿ ಎಂದು ಮುಂತಾಗಿ ಕರೆಯಲಾಗಿದ್ದು ಸುಮಾರು ೧೦ ಗ್ರಾಮಗಳಿವೆ.

ವಡ್ಡರು/ಬೋವಿಗಳು : ಕಲ್ಲು ಒಡೆಯುವುದು, ಮನೆಯನ್ನು ಕಟ್ಟುವುದು ಇವರ ಪಾರಂಪರಿಕ ವೃತ್ತಿ. ಇವರನ್ನು ಭೋವಿಗಳು ಎಂದು ಸಹ ಕರೆಯುತ್ತಾರೆ. ಇವರೇ ಹೆಚ್ಚು ಸಂಖ್ಯೆಯಲ್ಲಿ ವಾಸಮಾಡುವ ಹಳ್ಳಿಗೆ ಭೋವಿಹಟ್ಟಿ/ವಡ್ಡರಹಟ್ಟಿ ಎಂದು ಕರೆಯಲಾಗುತ್ತದೆ. ಹೊಸದುರ್ಗ ತಾಲೂಕು ಗುಡ್ಡಗಾಡು ಪರಿಸರವಾಗಿರುವುದರಿಂದ ಪ್ರಾಚೀನ ಕಾಲದಿಂದಲೂ ಇಲ್ಲಿ ನಿರ್ಮಾಣ ಗೊಂಡಿರುವ ಸ್ಮಾರಕಗಳನ್ನು ಗಮನಿಸಿದಾಗ ಇಲ್ಲಿ ಒಡ್ಡ ಜನಾಂಗದ ಪಾತ್ರ ಬಹುವಾಗಿದೆ. ದೇವಾಲಯ, ಕೆರೆ-ಕಟ್ಟೆ, ಕೋಟೆ-ಕೊತ್ತಲ ಇತರೆ ಕಟ್ಟಡಗಳ ನಿರ್ಮಾಣದಲ್ಲಿ ಈ ಜನಾಂಗವು ಬಹುವಾದದ್ದು. ಈ ಪರಿಸರದಲ್ಲಿ ಸುಮಾರು ೧೪ ವಡ್ಡರಹಟ್ಟಿ ಭೋವಿಹಟ್ಟಿಗಳು ಕಂಡುಬರುತ್ತವೆ.

ಅಗಸರು/ಮಡಿವಾಳರು : ಬಟ್ಟೆ ತೊಳೆಯುವುದು ಇವರ ಪ್ರಾಚೀನ ವೃತ್ತಿ. ಕಾವ್ಯ, ಶಾಸನಗಳಲ್ಲಿ ಈ ಸಮುದಾಯದ ಉಲ್ಲೇಖವಿದೆ. ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಇವರು ವಾಸವಾಗಿರುತ್ತಾರೆ. ಈ ಪರಿಸರದಲ್ಲಿ ಅಗಸರಹಳ್ಳಿ ಎಂಬ ಒಂದು ಗ್ರಾಮವಿದೆ.

ಲಂಬಾಣಿಗಳು : ಲಂಬಾಣಿ ಸಮುದಾಯ ವಾಸಿಸುವ ಪ್ರದೇಶಕ್ಕೆ ಸಾಮಾನ್ಯವಾಗಿ ತಾಂಡಾ, ತಾಂಡೆ ಎಂದು ಕರೆಯುತ್ತಾರೆ. ಬುಡಕಟ್ಟು ಜನಾಂಗದವರಾದ ಇವರು ಪ್ರಾರಂಭದಲ್ಲಿ ಕಾಡು, ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿದ್ದು, ವ್ಯಾಪಾರದ ನಿಮಿತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಗುಂಪುಗಳಾಗಿ ಸಂಚರಿಸುತ್ತಿದ್ದರು. ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೊಂದಿಗೆ ಪ್ರತ್ಯೇಕವಾದ ಸಮೂಹ ಗುಂಪುಗಳಲ್ಲಿ ವಾಸಿಸುವ ಇವರ ತಾಂಡಗಳನ್ನು ಲಂಬಾಣಿ ತಾಂಡ, ಲಂಬಾಣಿ ಹಟ್ಟಿ ಎಂದು ಕರೆಯಲಾಗುತ್ತದೆ.

ನಾಯಕರು : ಕರ್ನಾಟಕದ ಪ್ರಮುಖ ಬುಡಕಟ್ಟುಗಳಲ್ಲಿ ನಾಯಕ ಜನಾಂಗವು ಒಂದು. ಇವರನ್ನು ಬೇಡ, ಕಿರಾತ, ವಾಲ್ಮೀಕಿ, ವ್ಯಾಧ, ತಳವಾರ, ಪಾಳೆಗಾರ, ನಾಯಕ ಸೇರಿದಂತೆ ಇನ್ನು ಮುಂತಾದ ಹೆಸರುಗಳಿಂದ ಕರೆಯಲಾಗುವುದು. ಇವರ ಪ್ರಮುಖ ವೃತ್ತಿ ಬೇಟೆಗಾರಿಕೆ. ಹೊಸದುರ್ಗ ತಾಲೂಕಿನ ವ್ಯಾಪ್ತಿಯಲ್ಲಿ ನಾಯಕರು ಬಹು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಮತ್ತೋಡು ಗ್ರಾಮದಲ್ಲಿ ನಾಯಕ ಜನಾಂಗವು ಒಂದು ಪಾಳೆಯಪಟ್ಟನ್ನು ಕಟ್ಟಿ ಆಳಿರುವುದು ಚಾರಿತ್ರಿಕ ಸತ್ಯವಾಗಿದೆ. ಆದರೆ 'ನಾಯಕ' ಎಂಬ ಹೆಸರಿನ ಸ್ಥಳನಾಮಗಳು ಈ ತಾಲೂಕಿನಲ್ಲಿ ಕಂಡುಬರುವುದಿಲ್ಲವಾದರೂ ಮತ್ತೋಡು ಪಾಳೆಯಗಾರ ಲಕ್ಕವ್ವಳ ನೆನಪಿಗಾಗಿ 'ಲಕ್ಕವ್ವನಹಳ್ಳಿ' ಎಂಬುದನ್ನು ನಿರ್ಮಿಸಿದ್ದನು.[೨೨] ಅದೇ ರೀತಿ 'ವೀರವ್ವನಾಗ್ತಿಹಳ್ಳಿ' ಪಾಳೆಯಗಾರನ ಹೆಂಡತಿಯ ಹೆಸರಿನಲ್ಲಿ ನಿರ್ಮಾಣಗೊಂಡ ಗ್ರಾಮವಾಗಿದೆ. ಇನ್ನುಳಿದಂತೆ ನಾಯಕ ಜನಾಂಗದ ಸ್ಥಳನಾಮಗಳು ಕಂಡುಬರುವುದಿಲ್ಲ.

ಕುಂಬಾರರು : ಮಣ್ಣಿನ ಮಡಿಕೆ ಕುಡಿಕೆಗಳನ್ನು ಮಾಡುವ ಕುಂಬಾರ ಜನಾಂಗದವರು ವಾಸಮಾಡುವ ಹಳ್ಳಿಗೆ ಅದೇ ಹೆಸರೇ ಬಂದಿರುವ ಸಾಧ್ಯತೆ ಇರುತ್ತದೆ. ಈ ಭಾಗದಲ್ಲಿ ಕುಂಬಾರ ಕಟ್ಟೆ/ಕುಂಬಾರಗುಡ್ಡು ಎಂಬ ಎರಡು ಹಳ್ಳಿಗಳಿವೆ.

ಸುಡಗಾಡು ಸಿದ್ಧರು : ಸುಡಗಾಡ ಸಿದ್ಧರು ಆಂಧ್ರ ಮೂಲದವರಾಗಿದ್ದ ಕರ್ನಾಟಕದ ಕೆಲವು ಭಾಗಗಳಲ್ಲಿ ವಾಸಮಾಡುತ್ತಿದ್ದಾರೆ. ಹೊಸದುರ್ಗ ಭಾಗದಲ್ಲಿ ಸುಡಗಾಡು ಸಿದ್ಧರಹಳ್ಳಿ, ಸಿದ್ಧಾಪುರ, ಸಿದ್ಧಗೊಂಡನಹಳ್ಳಿ ಎಂಬ ಮೂರು ಹಳ್ಳಿಗಳು ಕಂಡುಬರುತ್ತವೆ.

೩.೨.೨.೫. ವೃತ್ತಿವಾಚಕ

ವೃತ್ತಿಯು ಬೆಳೆದು ಜಾತಿಯಾಗಿ ಮಾರ್ಪಟ್ಟಿತು. ಜಾತಿ ಮತ್ತು ವೃತ್ತಿಗಳು ಒಂದೇ ಬಿಂದುವಿನಲ್ಲಿ ಬರುತ್ತವೆ. ಸಮುದಾಯಗಳು ಜೀವನಕ್ಕಾಗಿ ಬೇಟೆ, ಕೃಷಿ ಮುಂತಾದ ಮಾರ್ಗಗಳನ್ನು ಕಂಡುಕೊಂಡರು. ವೃತ್ತಿಪರ ಜನತೆಯು ತಮಗೆ ಅನುಕೂಲಕರವಾದ ಸ್ಥಳಗಳಲ್ಲಿ ನೆಲೆಸಲು ಪ್ರಾರಂಭಿಸಿದರು. ಬೇಟೆ ವೃತ್ತಿಯವರು ಕಾಡು ಬೆಟ್ಟ-ಗುಡ್ಡಗಳ ಹತ್ತಿರ, ಮೀನುಗಾರರು ಹಾಗೂ ಉಪ್ಪು ಮಾಡುವವರು ನೀರಿನ ಹತ್ತಿರ ನೆಲೆಸಿದರು. ಹೀಗೆ ವೃತ್ತಿ ಆಧಾರಿತ ಜನರು ತಮಗೆ ಇಷ್ಟವಾದ ಸ್ಥಳಗಳಲ್ಲಿ ನೆಲೆಸಿ ವಾಸಮಾಡಿದ್ದರಿಂದ ಆ ಪ್ರದೇಶಗಳಿಗೆ ವೃತ್ತಿಸೂಚಕ ಸ್ಥಳನಾಮಗಳು ಆರೋಪಗೊಂಡಿರುತ್ತವೆ. ಕುಂಬಾರಕಟ್ಟೆ ಎಂಬ ಒಂದು ಸ್ಥಳನಾಮ ಈ ಪರಿಸರದಲ್ಲಿ ವೃತ್ತಿ ಸೂಚಕವಾದದ್ದು.

೩.೨.೨.೬ ನಿರ್ಮಾಣವಾಚಕ

ಮಾನವನ ಜೀವನಕ್ಕೆ ಅತ್ಯವಶ್ಯಕವಾಗಿ ನೀರಿನ ಅಗತ್ಯವಿದೆ. ಪ್ರಾಕೃತಿಕವಾಗಿ ಹರಿಯುತ್ತಿದ್ದ ನೀರಿಗೆ ಅಡ್ಡಲಾಗಿ ಕೆರೆ, ಕಟ್ಟೆ, ಗುಂಡಿ, ಕುಂಟೆಗಳನ್ನು ನಿರ್ಮಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದರು. ಇವುಗಳು ಆ ಸ್ಥಳಗಳಲ್ಲಿ ಪಾತ್ರ ವಹಿಸಿದ್ದು ಅವುಗಳಿಂದಾಗಿಯೇ ಆ ಸ್ಥಳಗಳಿಗೆ ಹೆಸರುಗಳು ಪ್ರಾಪ್ತವಾಗುತ್ತಿದ್ದವು. ಮಾನವ ತಾನು ನಿರ್ಮಿಸಿದ ಕೆರೆ-ಕಟ್ಟೆ, ಕುಂಟೆಗಳಿಗೆ ಒಬ್ಬ ವ್ಯಕ್ತಿಯ ಹೆಸರಿನ ನಾಮನಿರ್ದೇಶನ ಮಾಡಿದ್ದಲ್ಲದೇ ಕೆಲವು ಪ್ರಾಕೃತಿಕ ಹೆಸರುಗಳೂ ಬಂದಿರುವುದು ತಿಳಿಯುತ್ತದೆ. ಕೆಲವೊಮ್ಮೆ ಕೆರೆಯನ್ನು ಕಟ್ಟಿಸಿದ ರಾಜ, ಮಂತ್ರಿ ಅಥವಾ ಊರಿನ ಯಾವುದೋ ಪ್ರಮುಖ ವ್ಯಕ್ತಿಯ ಹೆಸರು ಇರುತ್ತವೆ. ಅರೆ ಮಲೆನಾಡಾದ ಹೊಸದುರ್ಗ ತಾಲೂಕು ಪರಿಸರದಲ್ಲಿ ಈ ತೆರನಾದ ನಿರ್ಮಾಣವಾಚಿ ಸ್ಥಳನಾಮಗಳು ಬಹುವಾಗಿವೆ. ಅಂತಹ ನಿರ್ಮಾಣವಾಚಿ ಸ್ಥಳನಾಮಗಳನ್ನು ಈ ಮುಂದಿನಂತೆ ಗಮನಿಸಬಹುದು.

ಕೆರೆ : ಕಡದಿನಕೆರೆ, ಕಡವಗೆರೆ, ಕಪ್ಪಗೆರೆ, ಕಬ್ಬಿನಕೆರೆ, ಕಲ್ಲಕೆರೆ, ಕ್ಯಾದಿಗೆರೆ, ಕೊರಟಿಗೆರೆ, ಗಂಜಿಗೆರೆ, ಗುಡ್ಡದನೇರಲಕೆರೆ, ಚಿಕ್ಕಬ್ಯಾಲದಕೆರೆ, ದೊಡ್ಡಬ್ಯಾಲದಕೆರೆ, ತಾರೀಕೆರೆ, ತುಂಬಿನಕೆರೆ, ದೇವಿಗೆರೆ, ನಗರಗೆರೆ, ನಾಯಿಗೆರೆ, ನೇರಲಕೆರೆ, ಬೋಕಿಕೆರೆ, ಹಂದನಕೆರೆ, ಹಾಗಲಕೆರೆ, ಹೊನ್ನೇಕೆರೆ, ಹೆಗ್ಗೆರೆ, ಕೆಂಕೆರೆ, ಕಲ್ಕರೆ ಇತ್ಯಾದಿ.

ಕಟ್ಟೆ : ಆದ್ರಿಕಟ್ಟೆ, ಕಗ್ಗಲಕಟ್ಟೆ, ಕಡಿವಾಣಕಟ್ಟೆ, ಕರಡಿಕಟ್ಟೆ, ಗುತ್ತಿಕಟ್ಟೆ, ಚಿಕ್ಕಕರ್ಪೂರದಕಟ್ಟೆ, ದೊಡ್ಡಕರ್ಪೂರದಕಟ್ಟೆ, ನಾಗರಕಟ್ಟೆ, ಬುರುಡೆಕಟ್ಟೆ, ಮಾವಿನಕಟ್ಟೆ, ಶಿವನೇಕಟ್ಟೆ, ಶೀರನಕಟ್ಟೆ, ಹುಣಸೇಕಟ್ಟೆ, ಹುಲುಕಟ್ಟೆ, ಕುಂಬಾರಕಟ್ಟೆ, ಹೊಸಕಡಮಣಕಟ್ಟೆ

ಪುರ/ದುರ್ಗ/ಕೋಟೆ : ಈ ಮೂರು ಪದಗಳು ಒಂದೇ ಅರ್ಥವನ್ನು ಕೊಡುತ್ತವೆ. ಇವುಗಳು ನಿರ್ಮಾಣವಾಚಿಯಾಗಿದ್ದು ಆ ಬಗೆಯ ಸ್ಥಳನಾಮಗಳು ಹೊಸದುರ್ಗ ತಾಲೂಕಿನಲ್ಲಿ ಕಂಡುಬರುತ್ತವೆ. ಅವುಗಳೆಂದರೆ:- ಕಂಚೀಪುರ, ಐಲಾಪುರ, ಕಂಠಾಪುರ, ಕಾಚಾಪುರ, ಕೃಷ್ಣಾಪುರ, ಚಿನ್ನಾಪುರ, ಜಯಾಪುರ, ಜಯಾಸುವರ್ಣಪುರ, ತಿಮ್ಮಲಾಪುರ, ದೇವಪುರ, ನರಸೀಪುರ, ಪೀಲಾಪುರ, ಬಾಣಪುರ, ಶ್ರೀರಾಂಪುರ, ಸಾದರಾಪುರ, ಸಿದ್ದಾಪುರ, ಸಿಂಗಪುರ, ದುಗ್ಗಾವರ, ಹೊಸದುರ್ಗ.

ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಸ್ಥಳನಾಮಗಳು ಇಲ್ಲಿನ ಮಾನವ ಜೀವನ ಸಂಸ್ಕೃತಿಯ ವಿಕಾಸದ ಅನೇಕ ಮಜಲುಗಳನ್ನು ಪರಿಚಯಿಸುತ್ತವೆ. ಇಲ್ಲಿನ ಸಾಂಸ್ಕೃತಿಕ ಸ್ಥಳನಾಮಗಳಲ್ಲಿ ಮುಖ್ಯವಾಗಿ ಪೌರಾಣಿಕ, ವ್ಯಕ್ತಿವಾಚಕ, ಜಾತಿವಾಚಕ ಹಾಗೂ ನಿರ್ಮಾಣವಾಚಕಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಹರಿಯುವ ವೇದಾವತಿ ನದಿಯು ಪೌರಾಣಿಕವಾದ ರಾಮಾಯಣ ಸಂಬಂಧವನ್ನು ಹೊಂದಿದ್ದು, ಇದರ ಘಟನೆ, ವ್ಯಕ್ತಿಗಳ ಹೆಸರು, ಇಲ್ಲಿನ ಅನೇಕ ಸ್ಥಳನಾಮಗಳ ಮೇಲೆ ಪ್ರಭಾವ ಬೀರಿವೆ. ಅಂತಹ ಸ್ಥಳನಾಮಗಳಲ್ಲಿ 'ದಶರಥರಾಮೇಶ್ವರ' ಒಂದು. ಮಧ್ಯಕಾಲದ ಕ್ರಿ.ಶ. ೧೫-೧೬ನೇ ಶತಮಾನದ ವಾಸ್ತುಶೈಲಿಯನ್ನು ಹೊಂದಿರುವ ಇಲ್ಲಿನ ದೇವಾಲಯಗಳು, ಮೂರ್ತಿಶಿಲ್ಪಗಳನ್ನು

ಈ ಭಾಗದಲ್ಲಿ ಪ್ರಭುತ್ವದ ನೆಲೆಯಲ್ಲಿ ಪ್ರಧಾನನಾದ ರಾಮಯ್ಯ ಎಂಬ ವ್ಯಕ್ತಿಯ ಪರೋಕ್ಷ ವಿನಯಾರ್ಥವಾಗಿ ಸ್ಥಾಪನೆಗೊಂಡಿರಬೇಕು. ಆತನ ಶೈವಭಕ್ತಿಯನ್ನು ಸಾರುವಂತೆ ಇಲ್ಲಿ ಶಿವಲಿಂಗ, ವೀರಭದ್ರ ಮೂರ್ತಿಶಿಲ್ಪಗಳಿವೆ. ಈ ವ್ಯಕ್ತಿ ಪೌರಾಣಿಕವಾದ ರಾಮನ ತಂದೆ ದಶರಥನ ಹೆಸರನ್ನು ಪಡೆದು ಇಡೀ ಸ್ಥಳನಾಮ ದಶರಥ ರಾಮೇಶ್ವರ ಎಂದು ಕರೆಯಲ್ಪಟ್ಟಿದೆ. ಇದೇ ರೀತಿಯ ಕಾರಣಗಳನ್ನು ಹಾಲುರಾಮೇಶ್ವರ ಹಾಗೂ ಶಬರಿವನ ಇವುಗಳು ಸಹ ಹೊಂದಿವೆ. ಇನ್ನು ವ್ಯಕ್ತಿವಾಚಕ ಸ್ಥಳನಾಮಗಳು ವಿಜಯನಗರೋತ್ತರ ಕಾಲದಲ್ಲಿ ಪ್ರಾದೇಶಿಕವಾಗಿ ನಾಯಕ ಅರಸರ ಪ್ರಾಬಲ್ಯ, ಪ್ರಜಾಕಾರ್ಯ, ವೀರತನ ಮುಂತಾದ ಕಾರಣಗಳಿಂದಾಗಿ ಲಕ್ಕಿಹಳ್ಳಿ, ನಾಗತಿಹಳ್ಳಿ, ವೀರವ್ವನಾಗತಿಹಳ್ಳಿ, ಶ್ರೀರಾಂಪುರ ಸ್ಥಳನಾಮಗಳು ಕಂಡುಬರುತ್ತವೆ. ಇನ್ನು ಇಲ್ಲಿನ ಸಾಂಸ್ಕೃತಿಕ ಪರಂಪರೆಯ ನೆಲೆಯಲ್ಲಿ ಜಾತಿವಾಚಕ ಸ್ಥಳನಾಮಗಳು ಹೆಚ್ಚಾಗಿ ಉಳಿದಿವೆ. ಅವುಗಳಲ್ಲಿ ನಾಯಕ, ಗೊಲ್ಲ ಹಾಗೂ ಕುರುಬ ಜಾತಿ ಸಮುದಾಯಗಳು ಸಂಖ್ಯೆಯಲ್ಲಿ ಹಾಗೂ ಸಂಸ್ಕೃತಿಯಲ್ಲಿ ಪ್ರಾಬಲ್ಯ ಸಾರಿಸಿವೆ. ನಾಯಕ ಹಾಗೂ ಗೊಲ್ಲ ಜನಾಂಗಗಳು ಪ್ರಭುತ್ವ ವೀರತ್ವಕ್ಕೆ ಹೆಸರಾಗಿ ಇಲ್ಲಿನ ಸ್ಮಾರಕ, ಸ್ಥಳ ಹಾಗೂ ಸಾಂಸ್ಕೃತಿಕ ಚರಿತ್ರೆಯ ಮೇಲೆ ವಿಶೇಷ ಪ್ರಭಾವ ಬೀರಿವೆ. ಈ ಹಿನ್ನೆಲೆಯಲ್ಲಿ ಈ ಜಾತಿಯನ್ನು ಸೂಚಿಸುವ ಸ್ಥಳನಾಮಗಳು ಅನೇಕ ಇವೆ. ಅದೇ ರೀತಿ ನಿರ್ಮಾಣವಾಚಕ ಸ್ಥಳನಾಮಗಳು ಈ ಪರಿಸರದಲ್ಲಿ ಅಧಿಕವಿವೆ. ಮಾನವ ತನ್ನ ಜೀವನ ನಿರ್ವಹಣೆಗಾಗಿ ಕೆರೆ-ಕಟ್ಟೆಗಳ ನಿರ್ಮಾಣ ಮಾಡಿಕೊಂಡಿದ್ದ ಅಂಶಗಳು ಇಲ್ಲಿನ ಸ್ಥಳನಾಮಗಳ ಮೂಲಕ ಅರಿಯಬಹುದು. ಅಲ್ಲದೆ ಇಲ್ಲಿ ಆಳಿದ ರಾಜ ಮನೆತನಗಳು ಪ್ರಜಾ ಕಲ್ಯಾಣಕ್ಕಾಗಿ ಅನೇಕ ಕೆರೆ-ಕಟ್ಟೆಗಳನ್ನು ನಿರ್ಮಾಣ ಮಾಡಿದ್ದರು. ಅವರ ಪ್ರೀತಿ ಪಾತ್ರರ ಹೆಸರಿನಲ್ಲಿಯೂ ಅವುಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ. ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಇಲ್ಲಿ ಅನೇಕ ನಿರ್ಮಾಣ ಕಾರ್ಯಗಳು ನಡೆದಿದ್ದು ಅವುಗಳಿಂದಾಗಿ ಸ್ಥಳನಾಮಗಳು ಹುಟ್ಟಿಕೊಂಡಿವೆ. ಒಟ್ಟಾರೆ ಈ ಪರಿಸರದ ಸಾಂಸ್ಕೃತಿಕ ಸ್ಥಳನಾಮಗಳು ಮಾನವನ ವಿಕಾಸವಾದ, ಸಾಂಸ್ಕೃತಿಕ ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುತ್ತವೆ.

೩.೩. ಕೆಲವು ಪ್ರಮುಖ ಸ್ಥಳನಾಮಗಳ ವಿಶ್ಲೇಷಣೆ

ಸ್ಥಳನಾಮ ಮಾನವ ಜನಾಂಗದ ಅವನು ರೂಪಿಸಿಕೊಂಡ ಜೀವನ ವಿಧಾನದ ಹಾಗೂ ನಾಗರೀಕತೆಯ ವಿವಿಧ ಹಂತದ ಚಿತ್ರಣವನ್ನು ನೀಡುತ್ತದೆ. ಸ್ಥಳನಾಮಗಳು ಪುರಾತನ ಕಾಲದಿಂದಲೂ ಹುಟ್ಟಿ ಬೆಳೆದುಬಂದಂತಹುಗಳು. ಸ್ಥಳನಾಮಾಧ್ಯನದ ಮುಖ್ಯ ಉದ್ದೇಶ ನಿರ್ದಿಷ್ಟ ಹೆಸರಿನ ಪ್ರಾಚೀನತಮ ರೂಪವನ್ನು ಕಂಡುಕೊಳ್ಳುವುದರೊಂದಿಗೆ, ಆ ಸ್ಥಳದ ಇತರ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅರ್ಥವಿವರಣೆಯನ್ನೂ ಮಾಡಬೇಕಾಗುತ್ತದೆ. ಸ್ಥಳನಾಮ ಅಧ್ಯಯನದ ಸಂದರ್ಭದಲ್ಲಿ ಕೇವಲ ಭಾಷಾಶಾಸ್ತ್ರದ ಮಾಹಿತಿಯೊಂದರಿಂದಲೇ ವಿಶ್ಲೇಷಣೆಯನ್ನು ಮಾಡಲು ಸಾಧ್ಯವಾಗದು. ಅದರೊಂದಿಗೆ ಶಾಸನ ಮತ್ತಿತರ ದಾಖಲೆಯ ಮಾಹಿತಿಗಳನ್ನು ಬಳಸಿಕೊಳ್ಳುವುದು ಅಗತ್ಯ ಸ್ಥಳನಾಮಗಳು ನಮ್ಮ ಸಂಸ್ಕೃತಿಯ ಪಳೆಯುಳಿಕೆಗಳು. ಅವು ಪರೋಕ್ಷವಾಗಿಯಾದರೂ ಜನತೆ ಮತ್ತು ನಿರ್ದಿಷ್ಟ ಕಾಲದ ಸಮಾಜದ ಕುರಿತು ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ. ಆದ್ದರಿಂದಲೇ ಚರಿತ್ರೆಕಾರರು ಸ್ಥಳನಾಮಾಧ್ಯಯದ ಕಡೆಗೆ ಹೆಚ್ಚೆಚ್ಚು ವಾಲುತ್ತಾರಲ್ಲದೆ ಆ

ಮೂಲಕ ಶಾಸನ ಇತರೆ ಪ್ರಧಾನ ಚಾರಿತ್ರಿಕ ಆಕರಗಳ ಮಾಹಿತಿಯನ್ನು ಪುಷ್ಟೀಕರಿಸುತ್ತಾರೆ. ಹೊಸದುರ್ಗ ತಾಲೂಕಿನ ಸ್ಥಳನಾಮಗಳು ತನ್ನದೇ ಆದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪರಂಪರೆಯಿಂದ ಬೆಳೆದುಬಂದಿವೆ. ಇವು ಸಾಮಾನ್ಯವಾಗಿ ಭೌಗೋಳಿಕ, ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಗೊಂಡಿವೆ. ಪ್ರಾಕೃತಿಕವಾಗಿ ಅಸಂಖ್ಯಾತ ಬೆಟ್ಟ–ಗುಡ್ಡ, ಅನೇಕ ನದಿ–ತೊರೆ, ಹಳ್ಳ–ಕೊಳ್ಳಗಳು ಸಾವಿರಾರು ಎಕರೆ ಅರಣ್ಯವನ್ನು ಹೊಂದಿರುವ ಈ ಪ್ರದೇಶದಲ್ಲಿ ಆದಿ ಮಾನವನ ಕಾಲದಿಂದಲೂ ಜನವಸತಿ ಇದ್ದ ಪ್ರಾಚೀನ ಕುರುಹುಗಳು ಗೋಚರಿಸುತ್ತವೆ. ಚಾರಿತ್ರಿಕ ಕಾಲಘಟ್ಟದ ಕರ್ನಾಟಕ ಅನೇಕ ರಾಜಮನೆತನಗಳು, ಸಂಸ್ಥಾನಗಳು, ನಾಯಕ ಅರಸರು ಆಳ್ವಿಕೆಯ ಕುರುಹುಗಳನ್ನು ಈ ಪರಿಸರದಲ್ಲಿ ಗುರುತಿಸಬಹುದು; ಈ ಹಿನ್ನೆಲೆಯಿಂದಲೆ ಹೆಚ್ಚಿನ ಸ್ಥಳನಾಮಗಳು ನಿಷ್ಪತ್ತಿಗೊಂಡಿವೆ. ಅಲ್ಲದೇ ಸಾಂಸ್ಕೃತಿಕವಾಗಿ ದೈವವಾಚಿ ಮತ್ತು ಜಾತಿವಾಚಿ ಸ್ಥಳನಾಮಗಳು ಕಂಡುಬರುತ್ತವೆ.

ಒಟ್ಟಾರೆ ಇಲ್ಲಿನ ಸ್ಥಳನಾಮಗಳು ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಗೊಂಡಿರುವುದು ಕಂಡುಬರುತ್ತದೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಸಾಂಸ್ಕೃತಿಕವಾಗಿ ಮಹತ್ವ ಪಡೆದಿರುವ ಕೆಲವು ಸ್ಥಳನಾಮಗಳನ್ನು ದೊರೆತ ಆಧಾರಗಳ ಅನ್ವಯ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಹೆಬ್ಬಳ್ಳಿ

ಶಾಸನಗಳಲ್ಲಿ ಪೆರ್ವಳ್ಳಿ, ಪೆರ್ಬಳ್ಳಿ ಎಂದು ಉಲ್ಲೇಖಗೊಂಡಿರುವ ಈ ಗ್ರಾಮನಾಮ ಪ್ರಸ್ತುತ ಹೆಬ್ಬಳ್ಳಿ ಎಂದೂ ರೂಪಾಂತರಗೊಂಡಿದೆ. ಈ ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ಇರುವ ಸುಮಾರು ನಾಲ್ಕು ಶಾಸನೋಕ್ತ ವೀರಗಲ್ಲುಗಳಲ್ಲಿ ಈ ಸ್ಥಳನಾಮ ಉಲ್ಲೇಖಗೊಂಡಿದೆ. ಇವುಗಳಲ್ಲಿ ಕ್ರಿ.ಶ. ೯೭೭ರ ಒಂದು ಶಾಸನದಲ್ಲಿ 'ಪೆರ್ವಳ್ಳಿಯ ಪೆಲ್ದುವೆಯ್ಯ ಎಂಬುವವನು ತುರುಗೋಳ್ ಹೋರಾಟದಲ್ಲಿ ವೀರಮರಣ ಹೊಂದಿದ'ನೆಂಬ ಮಾಹಿತಿ ದೊರೆಯುತ್ತದೆ.[೨] ಇದು ರಾಷ್ಟ್ರಕೂಟರ ಕಾಲದ ವೀರಗಲ್ಲು. 'ಪ' ಕಾರ 'ಹ' ಕಾರವಾಗಿ 'ವ' ಕಾರ 'ಬ' ಕಾರವಾಗಿ ಬದಲಾಗಿರುವುದು ಈ ಶಾಸನದಿಂದ ತಿಳಿದುಬರುವುದು. ಇದರ ನಿಷ್ಪತ್ತಿಯನ್ನು ಹೀಗೆ ಗುರುತಿಸಬಹುದು.

ಪಿರಿದು + ಹಳ್ಳಿ > ಪಿರಿವಳ್ಳಿ > ಪೆರ್ವಳ್ಳಿ > ಹೆಬ್ಬಳ್ಳಿ.

ಇದರ ಅರ್ಥ ಹಿರಿದಾದ ಅಥವಾ ದೊಡ್ಡದಾದ ಹಳ್ಳಿ ಅಂದರೆ ಇದೊಂದು ಪ್ರಮಾಣವಾಚಕ ಸ್ಥಳನಾಮವಾಗಿದೆ.

ಮಣಲಿ

ಹೊಸದುರ್ಗದಿಂದ ಕೇವಲ ೧೦ ಕಿ.ಮೀ. ದೂರದಲ್ಲಿರುವ ಮಣಲಿಯು ಪ್ರಸ್ತುತ ಮಳಲಿ ಎಂದು ಬದಲಾಗಿದೆ. ಈ ಗ್ರಾಮದ ಕಲ್ಲೇಶ್ವರ ದೇವಾಲಯದ ಮುಂದಿನ ಎರಡು ಹೊಯ್ಸಳ ಕಾಲದ ಶಾಸನೋಕ್ತ ವೀರಗಲ್ಲುಗಳಲ್ಲಿ 'ಮಣಲಿ' ಸ್ಥಳನಾಮ ಉಲ್ಲೇಖಗೊಂಡಿದೆ. ಇದರಲ್ಲಿ ಒಂದು ವೀರಗಲ್ಲು ಕ್ರಿ.ಶ. ೧೦೭೮ರ ಕಾಲಕ್ಕೆ ಸೇರಿದ್ದು, ಹೊಯ್ಸಳ ಚಕ್ರವರ್ತಿ 'ವೀರನಾರಸಿಂಹದೇವ'ನಿಗೆ ಸಂಬಂಧಿಸಿದ್ದು ಮಣಲಿಯ ಚಿಕ್ಕಗೌಡನ ಮಗ ಮಾಚಗೌಡ,

ಇವನ ಮಗ ಮಾದಿಗೌಡನ ಸಂಗಡ ಹರ್ತಿಯ ಹಿರಿಯಣ್ಣನ ಮಗ ಕಲಿಯರಸಗೌಡನ ಮಗ, ಕಲೆಯಮ್ಮೆಜಿ ಶೆಟ್ಟಿಯ ಮಗ ಬಮ್ಮಿಶೆಟ್ಟಿ, ನಾಗಯ್ಯ, ಮಾಳಯ್ಯ, ಜೋಗಯ್ಯ ಇಷ್ಟು ಜನರು ಕಾದಾಡಿ ಮಡಿದರು ಎಂದೂ ಹೇಳುವ ಈ ಶಾಸನದಲ್ಲಿ ಮಣಲಿಯನ್ನು 'ಶ್ರೀ ಕೇಶವಪುರ' ಎಂದು ಕರೆಯಲಾಗಿದ್ದು ಬಹುಶಃ ಇದೊಂದು ಅಗ್ರಹಾರವಾಗಿದ್ದಂತೆ ತೋರುತ್ತದೆ.[೨೯] 'ಣ' ಕಾರ 'ಳ' ಕಾರವಾಗಿ ಬದಲಾಗಿದೆ.

ಬಾಗೂರು

ಹೊಸದುರ್ಗ ತಾಲೂಕಿನ ಚಾರಿತ್ರಿಕ ಸ್ಥಳಗಳಲ್ಲಿ ಬಾಗೂರು ಒಂದು. ಶಾಸನಗಳಲ್ಲಿ ಇದನ್ನು ಬಾಗೂರು,[೩೦] ಬಾಗೂರು ಸೀಮೆ,[೩೧] ಭಾಗ್ಯಪುರ[೩೨] ಎಂದೂ, ಜಾನಪದದಲ್ಲಿ ಸಣ್ಣಕ್ಕಿ ಬಾಗೂರು[೩೩] ಎಂದು ಮುಂತಾಗಿ ಕರೆಯಲಾಗಿದೆ. ಪ್ರಸ್ತುತ ಇದು ಬಾಗೂರು ಎಂಬ ಸ್ಥಳನಾಮವನ್ನೇ ಉಳಿಸಿಕೊಂಡು ಬಂದಿದೆ. ಮಧ್ಯಕಾಲೀನ ವಿಜಯನಗರ ಕಾಲದಲ್ಲಿ ಬಾಗೂರು ಒಂದು ಆಡಳಿತ ವಿಭಾಗವಾಗಿದ್ದಿತು. ಈ ವಿಭಾಗವನ್ನು 'ಬಾಗೂರು ಸೀಮೆ', 'ಬಾಗೂರು ಚರಂತಿ' ಎಂದೆಲ್ಲಾ ಕರೆಯಲಾಗಿದೆ. ಬಾಗೂರು ಸ್ಥಳನಾಮವನ್ನು ಕುರಿತು ವಿಜಯನಗರ, ಚಿತ್ರದುರ್ಗ-ಸಂತೇಬೆನ್ನೂರು-ಬೇಲೂರು ಪಾಳೆಯಗಾರರ ಶಾಸನಗಳು ಪ್ರಸ್ತಾಪಿಸುತ್ತವೆ. ಒಟ್ಟಾರೆ ಶಾಸನಗಳಲ್ಲಿ ಇದರ ಪ್ರಾಚೀನ ರೂಪ 'ಬಾಗೂರು' ಎಂದು ಉಲ್ಲೇಖಗೊಂಡಿದೆ. ಇದು ಬಾಗು+ಊರು>ಬಾಗೂರು ಎಂದಾಗಿರಬೇಕು. ಬಾಗು ಎಂಬುದಕ್ಕೆ ಅನೇಕ ಅರ್ಥಗಳನ್ನು ನೀಡಲಾಗಿದೆ. ಅವುಗಳೆಂದರೆ, ೧. ಡೊಂಕಾಗು, ವಕ್ರವಾಗು, ೨. ಬಾಗಿಸು, ೩. ಕೊಂಕಾದ ಭಾಗ, ೪. ನದಿಯ ತಿರುವಿನಲ್ಲಿ ಇರುವ ಜಮೀನು; ಗದ್ದೆ, ತೋಟ ಮುಂತಾದ ಫಲವತ್ತಾದ ಪ್ರದೇಶ ಎಂಬ ನಾನಾ ಅರ್ಥಗಳನ್ನು ಸೂಚಿಸಲಾಗಿದೆ.[೩೪] ಡೊಂಕಾದ, ವಕ್ರವಾದ, ನದಿಯ ತಿರುವಿನ ಜಮೀನು, ಗದ್ದೆ, ಫಲವತ್ತಾದ ಪ್ರದೇಶದ ಊರು ಎಂದು ಅರ್ಥ ಕೊಡುತ್ತದೆ. ಬಾಗೂರಿನ ಭೌಗೋಳಿಕ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ- 'ಬಾಗೂರಿನ ಭೂಭಾಗ ಅಂಕುಡೊಂಕಾಗಿದ್ದು, ಮೂಡಲಮುತ್ತಿನ ಕೆರೆ ಎಂಬ ದೊಡ್ಡದಾದ ಕೆರೆಯ ತಿರುವಿನಲ್ಲಿ ಈ ಗ್ರಾಮವಿದೆ. ಗ್ರಾಮದಲ್ಲಿ ನೂರಾರು ಬಾವಿಗಳಿವೆ. ಗ್ರಾಮದ ಪರಿಸರ ಅತ್ಯಂತ ಫಲವತ್ತಾಗಿದ್ದು, ವಿಶೇಷವಾಗಿ ತೆಂಗು, ಅಡಿಕೆ, ಭತ್ತವನ್ನು ಬೆಳೆಯಲಾಗುತ್ತದೆ. ಭತ್ತವನ್ನು ಹೆಚ್ಚು ಬೆಳೆಯ ಲಾಗುವುದರಿಂದ ಈ ಗ್ರಾಮವನ್ನು 'ಸಣ್ಣಕ್ಕಿ ಬಾಗೂರು' ಎಂದು ಜನಪದ ಸಾಹಿತ್ಯದಲ್ಲಿ ಕರೆಯಲಾಗಿದೆ. ಒಟ್ಟಾರೆ ಬಾಗೂರು ಸ್ಥಳನಾಮ ಈ ಹಿನ್ನೆಲೆಯಿಂದಲೇ ಬಂದಿದೆ. ಅಲ್ಲದೇ ಕ್ರಿ.ಶ. ೧೫೫೧ರ ಸಂತೇಬೆನ್ನೂರು ಪಾಳೆಯಗಾರ ಎರಕೃಷ್ಣಪ್ಪನಾಯಕನ ಶಾಸನದಲ್ಲಿ ಬಾಗೂರನ್ನು 'ಭಾಗ್ಯಪುರ'ಎಂದು ಕರೆಯಲ್ಪಟ್ಟಿರುವುದರಿಂದ ಇದೊಂದು ಅಗ್ರಹಾರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಮತ್ತೋಡು

ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ 'ಮತ್ತೋಡು' ಸಹ ಒಂದು. ಇದು ಪಾಳೆಯಗಾರರ ಕಾಲದಲ್ಲಿ ರಾಜಧಾನಿ ಹಾಗೂ ಆಡಳಿತ ಕೇಂದ್ರವಾಗಿ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಶಾಸನಗಳಲ್ಲಿ ಮತ್ತೋಡನ್ನು ಮತ್ತಿನಡು,[೩೫] ಮತ್ತನಡು,[೩೬] ಎಂದು ಇತರೆ

ಕೆಲವು ಚಾರಿತ್ರಿಕ ದಾಖಲೆಗಳಲ್ಲಿ ಮತ್ತಿನಾಡು, ಮತನಡು, ಮತ್ತೇಡು, ಮತ್ತೋಡು ಎಂದೆಲ್ಲಾ ಉಲ್ಲೇಖಗೊಂಡಿದೆ.[೨] ಅದೇ ರೀತಿ ಜನಪದ ಸಾಹಿತ್ಯದಲ್ಲಿ 'ಮತಿವಂತರನಾಡು', 'ಮುತ್ತೈದೆಯರ ನಾಡು' ಎಂದು ಕರೆಯಲಾಗಿದೆ.[೩] ಹೀಗೆ ಬಹುತೇಕ ಸಾಹಿತ್ಯಕ ದಾಖಲೆಗಳಲ್ಲಿ ವಿಭಿನ್ನವಾಗಿ ಈ ಸ್ಥಳನಾಮ ಪ್ರಸ್ತಾಪಗೊಂಡಿದೆ. ಕ್ರಿಶ. ೧೬೭೧ರ ಚಿನ್ನದ ಗಿರಿಯಪ್ಪ ನಾಯಕನ ಶಾಸನದಲ್ಲಿ ಮತ್ತಿನಡು ಎಂದೂ, ಕ್ರಿಶ. ೧೭೦೭ರ ಹಾಲಪ್ಪ ನಾಯಕನ ಶಾಸನದಲ್ಲಿ 'ಮತ್ತನಡು' ಎಂದೂ ಕರೆಯಲಾಗಿದೆ. ಒಟ್ಟಾರೆ ಶಾಸನಗಳಲ್ಲಿ ಈ ನಾಮದ ಉತ್ತರಪದ ಮತ್ತಿ, ಮತ್ತ ಎಂದು, ಮತ್ತಿ ಪದಕ್ಕೆ 'ಒಂದು ಬಗೆಯ ಮರ; ಅರ್ಜುನವೃಕ್ಷ[೪] ಎಂಬ ಅರ್ಥಗಳಿವೆ. ಮತ್ತಿ ಮರಗಳು ಯಥೇಚ್ಛವಾಗಿರುವ ಈ ನಾಡಿಗೆ ಮತ್ತಿನಾಡು ಎಂಬ ಸ್ಥಳನಾಮ ಬಂದಿದೆ. ಮತ್ತಿನಡು> ಮತ್ತನಡು>ಮತ್ತನಾಡು>ಮತ್ತೇಡು>ಮತ್ತೋಡು ಎಂದು ರೂಪಾಂತರಗೊಂಡಿದೆ.

ಶ್ರೀರಾಂಪುರ (ಬೂದಿಹಾಳು)

ಹೊಸದುರ್ಗದ ಆಗ್ನೇಯಕ್ಕೆ ೧೬ ಮೈಲಿಗಳ ದೂರದಲ್ಲಿರುವ ಐತಿಹಾಸಿಕ ಪಟ್ಟಣ ಬೂದಿಹಾಳು ಈ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದು. ಬೂದಿಹಾಳಿಗೆ ಭಸ್ಮಪುರ, ವಿಭೂತಿಪುರ, ಬೂದಿಹಾಲು, ಬೂದಿಹಾಳು ಎಂದೂ,[೫] ಈ ಪರಿಸರದಲ್ಲಿ ತೆಂಗಿನ ಫಸಲು ಅಧಿಕವಾಗಿದ್ದರಿಂದ ಹಾಗೂ ಬೂದಿಹಾಳು ಹೆಸರಿನ ಊರುಗಳಿಂದ ಪ್ರತ್ಯೇಕಿಸಲು ಕಾಯಿಬೂದಿ ಹಾಳು ಎಂದೂ ಕರೆಯಲಾಗಿದೆ.[೬] ಸಾಹಿತ್ಯ ಗ್ರಂಥಗಳಲ್ಲಿ ಹರಪುರ, ಬೇದಂಡಕೋಟೆ, ಅವನಿಗಿರಿದುರ್ಗ, ಗಿರಿಜಾನಗರ, ಸಿರುಮನನಾಡು ಎಂಬ ಹೆಸರುಗಳು ಉಲ್ಲೇಖಗೊಂಡಿವೆ.[೭] ಬೂದಿಹಾಳು ಹೆಸರಿನ ಬಗ್ಗೆ ಸ್ಥಳೀಯವಾದ ಕೆಲವು ಐತಿಹ್ಯಗಳಿವೆ. ಒಂದು ಐತಿಹ್ಯದ ಪ್ರಕಾರ "ಬಹುಕಾಲದ ಹಿಂದೆ ಈ ಸ್ಥಳದ ಗೋವುಗಳು ಹೊರಗೆ ಸಂಮೃದ್ಧ ಹಸಿರು ಮೇಯ್ದು ಹೆಬ್ಬಾಗಿಲು ಮೂಲಕ ಊರನ್ನು ಪ್ರವೇಶಿಸುವಾಗ ಒಂದಕ್ಕೊಂದು ಒತ್ತಿಯಾಡಿ, ಅವುಗಳ ತುಂಬು ಕೆಚ್ಚಲುಗಳಿಂದ ಹಾಲು ಸೋರುತ್ತಿದ್ದಿತು. ಕೊಟ್ಟಿಗೆಗಳಲ್ಲೂ ಹಾಲು ಸೇರಿ ಹರಡಿರುತ್ತಿದ್ದಿತು, ಬೂದಿಯೊಂದಿಗೆ ಮಿಶ್ರಣವಾಗುತ್ತಿತ್ತು. ಇದರಿಂದಾಗಿಯೇ ಬೂದಿಹಾಲು>ಬೂದಿಹಾಳು ಹೆಸರೇ ಈ ಊರಿಗೆ ಅನ್ವರ್ಥವಾಯಿತು" ಇನ್ನೊಂದು ಐತಿಹ್ಯದ ಪ್ರಕಾರ "ಈ ಪ್ರದೇಶದಲ್ಲಿ ವಿಭೂತಿ ಯುಂಡೆಗಳು ಅತ್ಯಧಿಕವಾಗಿ ತಯಾರಿಸಲ್ಪಡುತ್ತಿದ್ದರಿಂದ 'ವಿಭೂತಿಪುರ', 'ಭಸ್ಮಪುರ' ಎಂಬ ಹೆಸರುಗಳು ಬಂದಿವೆ" ಎಂದೂ ಹೇಳಲಾಗಿದೆ.[೮] ಬೂದಿಹಾಳು ಸ್ಥಳನಾಮ ವಿಜಯನಗರದ ದೊರೆ ಅಚ್ಯುತದೇವರಾಯನ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.[೯] ಅಚ್ಯುತದೇವರಾಯನ ಕಾಲದಲ್ಲಿ ಬಯಕಾರ ರಾಮಪಯನ ಮಾಗಣಿಗೆ ಸೇರಿದ್ದ ಬೂದಿಹಾಳು 'ಬೂದಿಹಾಳು ಸೀಮೆ' ಎಂಬ ಆಡಳಿತ ವಿಭಾಗವಾಗಿದ್ದಿತು.[೧೦] ಶಾಸನದಲ್ಲಿ ಇದರ ಪ್ರಾಚೀನ ರೂಪ 'ಬೂದಿಹಾಳು' ಎಂದೂ ಉಲ್ಲೇಖವಾಗಿದೆ. ಆದರೆ ಇದರ ಉಗಮ ಕುರಿತು ಈ ಮೇಲೆ ಹೇಳಿದ ಐತಿಹ್ಯಗಳೆಲ್ಲಾ ಕೇವಲ ಕಾಲ್ಪನಿಕವಾದವುಗಳು. ಅವುಗಳಲ್ಲಿ ಸತ್ಯಾಂಶಗಳಿಲ್ಲ. ಬೂದಿಹಾಳು ಸ್ಥಳನಾಮ ಪ್ರಾಗೈತಿಹಾಸಿಕ ಸಂಸ್ಕೃತಿ ಹಿನ್ನೆಲೆಯಿಂದ ಬಂದಿರುವ ಸಾಧ್ಯತೆ ಇದೆ. ಕರ್ನಾಟಕದ 'ಬೂದಿಹಾಳು' ಸ್ಥಳನಾಮದ ಗ್ರಾಮಗಳಲ್ಲಿ ಬೂದಿದಿನ್ನೆಗಳು ಕಂಡುಬಂದಿದ್ದು ಇವುಗಳಿಂದಲೇ ಬೂದಿಹಾಳು ಸ್ಥಳನಾಮ

ಬಂದಿದೆ ಎಂದೂ ಹೇಳಲಾಗಿದೆ.[೪೧] ಈ ಬೂದಿದಿನ್ನೆಗಳು ನೂತನ ಶಿಲಾಯುಗಕ್ಕೆ ಸೇರಿದ ಅವಶೇಷಗಳು ಎಂದೂ ರಾಬರ್ಟ್ ಬ್ರೂಸ್‌ಪೂಟ್ ಅವರು ಒಂದೆಡೆ ಹೇಳಿದ್ದಾರೆ.[೪೨] ಹೊಸದುರ್ಗ ತಾಲೂಕಿನ ಬೂದಿಹಾಳು ಸ್ಥಳನಾಮವು ಸಹ ಇದೇ ತೆರನಾದ ಕಾರಣದಿಂದಲೇ ಬಂದಿರಬೇಕು ಎನಿಸುತ್ತದೆ. ಆದರೆ ಬೂದಿಹಾಳು ಗ್ರಾಮದ ಪರಿಸರದಲ್ಲಿ ನಮ್ಮ ಕ್ಷೇತ್ರಕಾರ್ಯದಲ್ಲಿ ಯಾವುದೇ ಬೂದಿ ದಿನ್ನೆಗಳು ದೊರೆತಿಲ್ಲವಾದರೂ ಸುತ್ತಲಿನ ಕಿಟ್ಟದಾಳು ಹಾಗೂ ಗರಗ ಗ್ರಾಮದ ಮುತ್ತಿನಗಿರಿ ಬೆಟ್ಟ ಪರಿಸರದಲ್ಲಿ ನೂತನ ಶಿಲಾ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗಿದ್ದು ಬೂದಿಹಾಳು ಪ್ರದೇಶವು ಬಹುಶಃ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ಒಂದು ಎಡೆಯಾಗಿರಬೇಕೆಂದು ತೋರುತ್ತದೆ. ಅಲ್ಲದೆ ಬೂದಿಹಾಳು ಗ್ರಾಮವು ಬೂದಿಯಂತಹ ಮಣ್ಣನ್ನು ಹೊಂದಿರುವುದು ವಿಶೇಷವಾಗಿದೆ. ಬೂದಿಹಾಳು ಸ್ಥಳನಾಮ ಪ್ರಸ್ತುತ 'ಶ್ರೀರಾಂಪುರ' ಎಂದು ಬದಲಾಗಿದೆ. ಇದಕ್ಕೆ ಕಾರಣ ಕ್ರಿ.ಶ. ೧೫ನೇ ಶತಮಾನದಲ್ಲಿ ಈ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿ ಕಲಿತನ, ವೀರತನಕ್ಕೆ ಹೆಸರಾಗಿ ಜನಪದ ಸಾಹಿತ್ಯದಲ್ಲಿ ಇಂದಿಗೂ ಸ್ಮರಣೀಯನಾದ ದೊರೆ ಗೊಲ್ಲ ಸಿರುಮನಾಯಕನಿಂದಾಗಿಯೇ ಶ್ರೀರಾಂಪುರ ಎಂದು ಬದಲಾವಣೆಗೊಂಡಿದೆ.[೪೩] ಶ್ರೀರಾಂಪುರ ಸ್ಥಳನಾಮ ನಿಷ್ಪತ್ತಿಯನ್ನು ಹೀಗೆ ಕಾಣಬಹುದು; ಸಿರುಮಣಪುರ>ಸಿರುಮನಪುರ>ಸಿರುಮಪುರ>ಶಿರುಮಪುರ>ಶ್ರೀರಾಮಪುರ>ಶ್ರೀರಾಂಪುರ.[೪೪] ಒಟ್ಟಾರೆ ಪ್ರಾಕ್ಚಾರಿತ್ರಿಕ ಕಾಲದಿಂದ ಕ್ರಿ.ಶ. ೧೫ನೇ ಶತಮಾನದವರೆಗೆ ಬೂದಿಹಾಳು ಎಂದು, ಸಿರುಮ ನಾಯಕನ ಆಳ್ವಿಕೆಯ ತರುವಾಯದಿಂದ ಶ್ರೀರಾಂಪುರ ಸ್ಥಳನಾಮ ಪ್ರಚಲಿತವಾಗಿರುವುದು ವಿಶೇಷ.

ದೊಡ್ಡಘಟ್ಟ

ದೊಡ್ಡಘಟ್ಟವು ಜಾನಕಲ್ಲು ಗ್ರಾಮದ ಪಶ್ಚಿಮಕ್ಕೆ ೫ ಕಿ.ಮೀ. ಸನಿಹದಲ್ಲಿದೆ. ದೊಡ್ಡಘಟ್ಟ ಪರಿಸರವು ಪ್ರಾಗೈತಿಹಾಸಿಕ ಕಾಲದ ಬೃಹತ್ ಶಿಲಾಯುಗದ ಸಮಾಧಿ ನೆಲೆಯನ್ನು ಹೊಂದಿದೆ. ಮಾನವನು ವಸತಿ ನೆಲೆಯಾಗಿ ಮಾಡಿಕೊಂಡಿದ್ದನು ಎಂಬುದಕ್ಕೆ ಇಲ್ಲಿನ ಪ್ರಾಗೈತಿಹಾಸಿಕ ಕಾಲದ ಅವಶೇಷಗಳೇ ಸಾಕ್ಷಿ. ದೊಡ್ಡಘಟ್ಟ ಸ್ಥಳನಾಮವು ಭೂಸ್ಥಿತಿವಾಚಕವಾಗಿದೆ. 'ಘಟ್ಟ' ಎಂಬುದು ಭೌಗೋಳಿಕ ಲಕ್ಷಣವನ್ನು ತಿಳಿಸುವ ಪದ. ಈ ಪದಕ್ಕೆ ಬೆಟ್ಟಗಳ ಸಾಲು, ಪರ್ವತಪಂಕ್ತಿ, ನದಿ, ಕೆರೆ ಮುಂತಾದವುಗಳಲ್ಲಿ ನೀರಿಗೆ ಇಳಿಯುವುದಕ್ಕಾಗಿ ಕಟ್ಟಿರುವ ಮೆಟ್ಟಿಲು-ಸೋಪಾನ ಎಂಬ ಅರ್ಥಗಳಿವೆ.[೪೫] ದೊಡ್ಡಘಟ್ಟವು ಪ್ರಾಕೃತಿಕವಾದ ಲಕ್ಷಣಗಳಿಂದ ಕೂಡಿದ್ದು ಗ್ರಾಮದ ಪಶ್ಚಿಮದಿಕ್ಕಿಗೆ ಕರಡಿಕಲ್ಲು ಹಾಗೂ ಮುದ್ದನಕಲ್ಲು ಎಂಬ ಅತ್ಯಂತ ಬೃಹತ್ತಾದ ಬೆಟ್ಟಗಳಿವೆ. ಅಲ್ಲದೆ ಈ ಗ್ರಾಮದ ಪೂರ್ವದ ದಿಕ್ಕಿನಲ್ಲಿ ಇಳಿಜಾರಾಗಿದ್ದು ಆ ಭಾಗದಲ್ಲಿ ಜನಿಗಿಹಳ್ಳ ಹರಿಯುತ್ತದೆ. ಈ ಮೇಲಿನ ಪ್ರಾಕೃತಿಕ ಲಕ್ಷಣಗಳಿಂದಾಗಿ ಈ ಗ್ರಾಮಕ್ಕೆ ದೊಡ್ಡಘಟ್ಟ ಎಂಬ ಹೆಸರು ಬಂದಿದೆ.

ಸೂಜಿಕಲ್ಲು

ಸೂಜಿಕಲ್ಲು ಅಥವಾ ಸೂಜಿಗಲ್ ಗ್ರಾಮನಾಮ ಕುರಿತು ಒಂದು ಐತಿಹ್ಯವಿದೆ. ಈ ಗ್ರಾಮದ ಪಶ್ಚಿಮ ದಿಕ್ಕಿನ ಸನಿಹದಲ್ಲೇ ಪ್ರಸಿದ್ಧ ಧಾರ್ಮಿಕ ಕ್ಷೇತ್ರ 'ಮೈಲಾರಪುರ'ವಿದೆ.

ಮೈಲಾರಲಿಂಗೇಶ್ವರ ಸ್ವಾಮಿಯ ಪುರಾಣ ಕಥೆಯ ಘಟನೆಯಲ್ಲಿ ಈ ಸ್ಥಳನಾಮದ ಉಲ್ಲೇಖ ಬರುತ್ತದೆ. ಮೈಲಾರಲಿಂಗೇಶ್ವರ ಸ್ವಾಮಿಯು ಮಾರ್ತಾಂಡ ಭೈರವನ ರೂಪತಾಳಿ ಮಣಿಕಾಸುರ ಹಾಗೂ ಮಲ್ಲಾಸುರ ರಾಕ್ಷಸರನ್ನು ಕೊಂದು ಸೂಜಿಗಳ ಮೇಲೆ ಕಾಲಿಟ್ಟು ಮೈಲಾರಪುರಕ್ಕೆ ಹೋದನೆಂದು ಆ ಸೂಜಿಗಳು ಇದ್ದ ಸ್ಥಳವೇ 'ಸೂಜಿಗಲ್ಲು' ಆಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಇಂತಹ ಪುರಾಣ/ಐತಿಹ್ಯಗಳ ಹಿನ್ನೆಲೆ ಈ ಸ್ಥಳನಾಮಕ್ಕೆ ಇದ್ದರೂ ವಾಸ್ತವವಾಗಿ ಇವೆ ಸತ್ಯವಾದವುಗಳಲ್ಲ. ಈ ಗ್ರಾಮ ಸಂಸ್ಕೃತಿ ಹುಟ್ಟಿ ಎಷ್ಟೋ ಕಾಲದ ನಂತರ ಈ ಪುರಾಣ/ಐತಿಹ್ಯ ಆರೋಪಗೊಂಡಿರಬೇಕು ಎನಿಸುತ್ತದೆ. 'ಸೂಜಿಗಲ್' ಸ್ಥಳನಾಮವು ಪ್ರಾಗೈತಿಹಾಸಿಕ ಸಂಸ್ಕೃತಿಯ ಹಿನ್ನೆಲೆಯಿಂದಲೇ ಬಂದಿದೆ. ಸೂಜಿಗಲ್ ಪದದ ಉತ್ತರಪದ ಗಲ್ಲು/ಗಲ್ ಎಂಬುದು ಕಲ್ಲು ಎಂಬುದರಿಂದ ಬಂದಿದೆ. ಕಲ್ಲಿನಿಂದ ಕೊನೆಗೊಳ್ಳುವ ಊರುಗಳು ಹೆಸರಿಡುವ ಮೊದಲನೇ ಘಟ್ಟವನ್ನು ಅಂದರೆ ಪ್ರಾಚೀನತೆಯನ್ನು ಸೂಚಿಸುತ್ತವೆ. ಕ>ಗ ಬದಲಾವಣೆಯಿಂದ ಕಲ್ಲು>ಗಲ್ಲು ಎಂದೂ ಬಳಕೆಯಾಗಿದೆ. ಅಂದರೆ ಸೂಜಿಕಲ್ಲು> ಸೂಜಿಗಲ್ಲು> ಸೂಜಿಗಲ್ ಆಗಿದೆ.[೪೬] ಸೂಜಿಗಳ ಆಕಾರದ ಕಲ್ಲುಗಳು ಇರುವ ಪ್ರದೇಶಕ್ಕೆ ಸೂಜಿಕಲ್ಲು ಎಂಬುದಾಗಿ ಹೆಸರು ಬಂದಿರುವ ಸಾಧ್ಯತೆ ಇದೆ. ಸೂಜಿಗಲ್ಲು ಗ್ರಾಮದಲ್ಲಿ ಈ ಹಿಂದೆ ನೈಸರ್ಗಿಕವಾಗಿ ಸೂಜಿಗಳ ಆಕಾರದ ಕಲ್ಲುಗಳಿದ್ದು ಅವುಗಳಿಂದಾಗಿ ಈ ಪ್ರದೇಶಕ್ಕೆ ಸೂಜಿಗಲ್ಲು ಎಂಬ ಹೆಸರು ಬಂದಿರಬೇಕು. ಅಥವಾ ಬೃಹತ್ ಶಿಲಾಸಂಸ್ಕೃತಿಯ ನಿಲಸುಗಲ್ಲುಗಳು (Menhair) ಈ ಭಾಗದಲ್ಲಿ ಇದ್ದು ಅವುಗಳು ಸೂಜಿಗಳ ರೀತಿ ಕಂಡುಬರುತ್ತಿದ್ದು, ಅವುಗಳಿಂದಾಗಿಯೂ ಈ ಪ್ರದೇಶಕ್ಕೆ ಸೂಜಿಗಲ್ಲು ಎಂದೂ ಬಂದಿರಬೇಕು. ಬೃಹತ್ ಶಿಲಾಯುಗಕ್ಕೆ ಸೇರಿದ 'ಶಿಲಾವೃತ್ತ ಸಮಾಧಿ'ಗಳು ಇಲ್ಲಿ ದೊರೆತಿವೆ. ಆದುದರಿಂದ ಈ ಮೇಲಿನ ಬಹುತೇಕ ಆಧಾರಗಳನ್ವಯ 'ಸೂಜಿಗಲ್' ಸ್ಥಳನಾಮ ಬಂದಿರಬೇಕು. ಒಟ್ಟಾರೆ ಭೌಗೋಳಿಕ ಮತ್ತು ಪ್ರಾಗೈತಿಹಾಸಿಕ ನೆಲೆಯಲ್ಲಿ ರೂಪಗೊಂಡ ಸ್ಥಳನಾಮವಾಗಿದೆ.

ನಿರುವುಗಲ್ಲು

ಮತ್ತೋಡು ಗ್ರಾಮದಿಂದ ಹೊಸದುರ್ಗದ ರಸ್ತೆಯಲ್ಲಿ ಕಾಣಸಿಗುವ ಕಾರೇಹಳ್ಳಿಯ ಬೇಚರಾಕ್ ನಿವೇಶನ 'ನಿರುವುಗಲ್ಲು'. ಇದು ವೇದಾವತಿ ನದಿ ತೀರದಲ್ಲಿದೆ. ಇದರ ಸ್ಥಳನಾಮ ವಿಶೇಷತೆಯಿಂದ ಕೂಡಿದ್ದು, ಪ್ರಾಗೈತಿಹಾಸಿಕ ಸಂಸ್ಕೃತಿಯಿಂದ ನಿಷ್ಪನ್ನಗೊಂಡಿದೆ. ಈ ಗ್ರಾಮವು ಬೃಹತ್ ಶಿಲಾಯುಗ ಸಂಸ್ಕೃತಿಯ ಒಂದು ನೆಲೆಯಾಗಿದೆ. ಗ್ರಾಮದಲ್ಲಿ ಪ್ರಾಚೀನಕಾಲದ ಹರಿಹರೇಶ್ವರ ದೇವಾಲಯವಿದೆ. ದೇವಾಲಯದ ಎಡಭಾಗದಲ್ಲಿ ಸುಮಾರು ೨೦ ಅಡಿ ಎತ್ತರದ ಬೃಹತ್‌ಶಿಲಾಯುಗ ಕಾಲಘಟ್ಟದ ನಿಲಸುಗಲ್ಲು (Menhair) ಇದೆ; ಆದ್ದರಿಂದಾಗಿ ನಿಲಸುಗಲ್ಲು>ನಿಲುವುಗಲ್ಲು>ನಿರುವುಗಲ್ಲು ಎಂಬುದಾಗಿ ಸ್ಥಳನಾಮ ನಿಷ್ಪತ್ತಿಯನ್ನು ಕಾಣಬಹುದು. ಈ ರೀತಿ ಸ್ಥಳನಾಮ ತುಂಬಾ ವಿರಳ ಹಾಗೂ ವಿಶೇಷವಾಗಿದ್ದು, ಬೃಹತ್ ಶಿಲಾ ಸಂಸ್ಕೃತಿಯ ನೆಲೆಯಾಗಿರುವ ನಿರುವುಗಲ್ಲು ಪರಿಸರ ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ವಾಸಸ್ಥಾನವಾಗಿತ್ತೆಂದು ತಿಳಿದು ಬರುತ್ತದೆ.

ದೊಡ್ಡಕಿಟ್ಟದಹಳ್ಳಿ

ಮಾಡದಕೆರೆ ಹೋಬಳಿಗೆ ಸೇರಿರುವ ಕೆಂಕೆರೆ ಗ್ರಾಮದ ಸಮೀಪದಲ್ಲಿ ಎರಡು ಕಿಟ್ಟದಹಳ್ಳಿಗಳಿವೆ. ಒಂದು ದೊಡ್ಡ ಕಿಟ್ಟದಹಳ್ಳಿ ಮತ್ತೊಂದು ಸಣ್ಣ ಕಿಟ್ಟದಹಳ್ಳಿ. ಇದರ ಪೂರ್ವಪದ ಕಿಟ್ಟ ಎಂಬುದರ ಅರ್ಥ ಕೃಷ್ಣ ಎಂದೂ; ಹಾಗೆಂದರೆ ಕಬ್ಬಿಣ ಎಂಬುದಾಗಿ ಹೇಳಲಾಗಿದೆ.[೪೭]

ಮತ್ತೊಂದೆಡೆ 'ಕಿಟ್ಟ' ಎಂಬುದಕ್ಕೆ ಲೋಹಗಳನ್ನು ಅದಿರುಗಳಿಂದ ಪ್ರತ್ಯೇಕಿಸುವಾಗ ಕುಲುಮೆಗಳಿಂದ ಹೊರ ಹರಿಯುವ, ಅದಿರುಗಳಲ್ಲಿನ ಅಶುದ್ಧತೆಗಳನ್ನೊಳಗೊಂಡ, ಒಂದು ದ್ರವರೂಪ ವಸ್ತು (ಸ್ಲಾಗ್). ಅದಿರು ಹಾಗೂ ಅಪಕರ್ಷಣಕಾರಿ ಮತ್ತು ಸ್ರಾವುಕ ವಸ್ತುಗಳ (ಫ್ಲಕ್ಸ್) ಮಿಶ್ರಣವನ್ನು ಕುಲುಮೆಯೊಳಗಡೆ ಚೆನ್ನಾಗಿ ಕಾಯಿಸಿದಾಗ ಲೋಹ ದ್ರವರೂಪದಲ್ಲಿ ಪ್ರತ್ಯೇಕಗೊಳ್ಳುತ್ತದೆ. ಸ್ರಾವಕ ವಸ್ತು ಅದಿರಿನ ಕಲ್ಮಷ ಮತ್ತು ಇಂಧನದ ಬೂದಿಯೊಡನೆ ಸಂಯೋಗ ಹೊಂದಿ ದ್ರವವಾಗುವುದು, ಅದೇ ಕಿಟ್ಟ.[೮೮] ಒಟ್ಟಾರೆ ಕಿಟ್ಟ ಎಂಬುದು ಲೋಹವನ್ನು ಸೂಚಿಸುವ ಅಥವಾ ಅದನ್ನು ಉತ್ಪಾದಿಸುವ/ತಯಾರಿಸುವ ಕುರುಹನ್ನು ಸೂಚಿಸುತ್ತದೆ. ದೊಡ್ಡಕಿಟ್ಟದಹಳ್ಳಿಯು ಲೋಹ ತಯಾರಿಕೆಯ ನೆಲೆ. ಗ್ರಾಮದ ಬಹುಭಾಗದಲ್ಲಿ ಕಬ್ಬಿಣ ಕುಲುಮೆಗಳ ಅವಶೇಷಗಳಿವೆ. ಕುಲುಮೆಗಳ ಪ್ರದೇಶದಲ್ಲಿ ಕಿಟ್ಟದ ಅವಶೇಷಗಳಾದ ಮಣ್ಣಿನ ಮೂಸೆಗಳು(ಕೊಳವೆಗಳು) ದೊರೆತಿವೆ. ಹೀಗಾಗಿ ದೊಡ್ಡಕಿಟ್ಟದಹಳ್ಳಿಯು ಕಬ್ಬಿಣ ತಯಾರಿಕಾ ನೆಲೆಯಾಗಿದ್ದು ಇದರ ಸ್ಥಳನಾಮ ಈ ಹಿನ್ನೆಲೆಯಿಂದಲೇ ಬಂದಿರುವ ಸಾಧ್ಯತೆ ಇದೆ. ದೊಡ್ಡಕಿಟ್ಟದಹಳ್ಳಿಯ ಪರಿಸರದಲ್ಲಿ ಅಸಂಖ್ಯಾತ ಬೃಹತ್ ಶಿಲಾ ಸಮಾಧಿಗಳು ಕಂಡುಬಂದಿದ್ದು, ಇವು ಶಿಲಾವೃತ್ತ ಮಾದರಿಗೆ ಸೇರಿವೆ. ಆದುದರಿಂದ ಈ ಬೃಹತ್ ಶಿಲಾಸಂಸ್ಕೃತಿಯ ಕಾಲದಿಂದಲೇ ಇಲ್ಲಿ ಕಬ್ಬಿಣ ತಯಾರಿಕೆಯ ಚಟುವಟಿಕೆಗಳು ನಡೆದಿರಬೇಕು; ಈ ಕಾರಣದಿಂದಲೇ ಮುಂದೊಂದು ದಿನ ಸ್ಥಳನಾಮವಾಗಿ ಬಳಕೆಗೊಂಡಿದೆ.

ಗೂಳಿಹಳ್ಳಿ

ಗೂಳಿಹಳ್ಳಿಯು ಶ್ರೀರಾಂಪುರ ಹೋಬಳಿ ಕೇಂದ್ರದಿಂದ ದಕ್ಷಿಣಕ್ಕೆ ಕೇವಲ ಒಂದು ಕಿ.ಮೀ. ಅಂತರದಲ್ಲಿದೆ. ಗೂಳಿಹಳ್ಳಿ ಸ್ಥಳನಾಮವನ್ನು ಕುರಿತು ಸ್ಥಳೀಯರು "ನಾವು ತುಂಬಾ ಹಿಂದೆ ಬೇರೊಂದು ಗ್ರಾಮದಲ್ಲಿ ವಾಸವಾಗಿದ್ದೆವಂತೆ ಯಾವುದೋ ಕಾರಣಗಳಿಂದಾಗಿ ಅಲ್ಲಿಂದ ಇಲ್ಲಿಗೆ ಗೂಳಿ ಬಂದಿದ್ದರಿಂದಾಗಿ ಗೂಳೆಹಳ್ಳಿ>ಗೂಳಿಹಳ್ಳಿ ಎಂಬುದಾಗಿ ಈ ಗ್ರಾಮಕ್ಕೆ ಹೆಸರು ಬಂದಿದೆ". ಆದರೆ ಈ ಕಥೆ ಕೇವಲ ಕಾಲ್ಪನಿಕವಾದುದು. ಈ ಗ್ರಾಮ ಪರಿಸರವು ಪ್ರಾಗೈತಿಹಾಸಿಕ ಕಾಲದ ಬೃಹತ್ ಶಿಲಾ ಸಂಸ್ಕೃತಿಯ ಒಂದು ಪ್ರಮುಖ ನೆಲೆ. ಇಲ್ಲಿನ ಹೊನ್ನತ್ತಮ್ಮ ಗುಹಾದೇವಾಲಯದ ಹಿಂಬದಿಯಲ್ಲಿ ಕಲ್ಲಾಸರೆ ಇದ್ದು, ಅದರಲ್ಲಿ ಕಲ್ಲಿನಿಂದ ಕುಟ್ಟಿ ಮೂಡಿಸಿರುವ ಸುಮಾರು ೭ ಗೂಳಿಚಿತ್ರಗಳಿವೆ. ಅವುಗಳನ್ನು ಒಂದೇ ಸಾಲಿನಲ್ಲಿ ಚಿತ್ರಿಸಿದ್ದು, ಬೃಹತ್ ಶಿಲಾಯುಗ ಕಾಲಘಟ್ಟಕ್ಕೆ ಸೇರಿದವುಗಳಾಗಿವೆ. ಈ ಗೂಳಿಚಿತ್ರಗಳ ಕಾರಣವಾಗಿ ಈ ಗ್ರಾಮಕ್ಕೆ ಗೂಳಿಹಳ್ಳಿ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಅದೇ ರೀತಿ ಇದೇ ತಾಲೂಕಿನ ಗೂಳಿಹಳ್ಳಿ ಹಾಗೂ ಗೂಳಿಹಟ್ಟಿಗಳು ಸಹ ಪ್ರಾಗೈತಿಹಾಸಿಕ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಿರಬೇಕು.

ಹೊಸದುರ್ಗ

ಹೊಸದುರ್ಗ ಈ ತಾಲೂಕಿನ ಆಡಳಿತ ಕೇಂದ್ರ. ಕ್ರಿ.ಶ. ೧೭ನೇ ಶತಮಾನದಿಂದ ಈ ಸ್ಥಳ ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಅದಕ್ಕೂ ಪೂರ್ವದಲ್ಲಿ ಈ ಪ್ರದೇಶ ಬಹುಶಃ ಬಾಗೂರು ಸೀಮೆಯಲ್ಲಿ ಅಂತರ್ಗತವಾಗಿತ್ತು. ಕ್ರಿ.ಶ. ೧೬೭೬ರಲ್ಲಿ ಚಿತ್ರದುರ್ಗ ಸಂಸ್ಥಾನದ ದೊರೆ ೩ನೇ ಚಿಕ್ಕಣ್ಣನಾಯಕನು ಶಿರಾ ಪ್ರಾಂತ್ಯದ ಮಹಮದೀಯರ ಅಧೀನದಲ್ಲಿದ್ದ ಬಾಗೂರು ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ, ಹೋರಾಟ ನಡೆಸುವುದಕ್ಕಾಗಿ ಈಗಿನ ಹೊಸದುರ್ಗದ

ಪೂರ್ವದಿಕ್ಕಿನ ಬೆಟ್ಟದಲ್ಲಿ ಒಂದು ಕೋಟೆಯನ್ನು ನಿರ್ಮಿಸಿಕೊಂಡು ಸೇನಾ ಸಮೇತನಾಗಿ ಅಲ್ಲಿ ತಂಗಿದ್ದನು.[೪೯] ಅದೇ ಕಾಲಕ್ಕೆ ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮ ಪುರೋಹಿತನು ಸದರಿ ಚಿಕ್ಕಣ್ಣನಾಯಕನ ಮೊರೆಹೊಕ್ಕನು. ಆಗ ಚಿಕ್ಕಣ್ಣನಾಯಕನು ಬೆಟ್ಟದ ಕೆಳಗೆ ಹೊರಪೇಟೆಯೊಂದನ್ನು ನಿರ್ಮಿಸಿಕೊಂಡಿರುವಂತೆ ಜಂಗಮನಿಗೆ ಸೂಚಿಸಿದ್ದರಿಂದ ಬೆಟ್ಟದ ತಪ್ಪಲಿನಲ್ಲಿ ಚಿಕ್ಕ ಪೇಟೆಯೊಂದು ರೂಪುಗೊಂಡಿತು. ಇದಕ್ಕೆ ಚಿಕ್ಕಣ್ಣನಾಯಕನು ಹೊಸದುರ್ಗ ಎಂದು ನಾಮಕರಣ ಮಾಡಿದನು.[೫೦] ಹೊಸದುರ್ಗಕ್ಕೆ ಪ್ರಾರಂಭದಲ್ಲಿ ನವದುರ್ಗ ಎಂಬ ಹೆಸರು ಇತ್ತೆಂದು ಹೇಳಲಾಗಿದೆ. ಈ ಮೇಲಿನ ಆಧಾರಗಳಿಂದ 'ಹೊಸದುರ್ಗ' ಸ್ಥಳನಾಮ ಕ್ರಿ.ಶ. ೧೭ನೇ ಶತಮಾನದಿಂದ ಉಗಮಗೊಂಡಂತೆ ತಿಳಿದುಬರುವುದು. ಇದೊಂದು ನಿರ್ಮಾಣವಾಚಿ ಸ್ಥಳನಾಮವಾಗಿದೆ.

ಕೆಲ್ಲೋಡು

ಹೊಸದುರ್ಗದಿಂದ ಹುಳಿಯಾರು ಮಾರ್ಗದಲ್ಲಿ ೫ ಕಿ.ಮೀ. ದೂರದಲ್ಲಿರುವ ಗ್ರಾಮ ಕೆಲ್ಲೋಡು. ಕ್ರಿ.ಶ. ೧೬೦೫ರ ಸಂತೇಬೆನ್ನೂರು ಪಾಳೆಯಗಾರ ದಳನಾಯಕನ ಕೆಲ್ಲೋಡು ಹನುಮಂತ ದೇವಾಲಯದ ಶಿಲಾಶಾಸನದಲ್ಲಿ 'ಕೆಲಗೋಡು' ಎಂಬ ಉಲ್ಲೇಖವಿದೆ.[೫೧] ಕೆಲಗೋಡು ಎಂಬುದು ಕೆಲ+ಗೋಡು ಎಂಬ ಎರಡು ಪದಗಳಿಂದ ಉಂಟಾಗಿದೆ. 'ಕೆಲ' ಪದಕ್ಕೆ ಪಕ್ಕ, ಪ್ರದೇಶ, ಹೊರಭಾಗ, ಕೊಂಚ ಎಂಬ ಅರ್ಥಗಳಿವೆ.[೫೨] ಅದೇ ರೀತಿ 'ಗೋಡು' ಪದಕ್ಕೆ ಮಣ್ಣು; ಕೆರೆ ಮುಂತಾದವುಗಳಿಂದ ತೆಗೆದುಹಾಕಿರುವ ಸಾರವತ್ತಾದ ಹೂಳುಮಣ್ಣು ; ರೇವೆಮಣ್ಣು ಮೊದಲಾದ ಅರ್ಥಗಳಿವೆ.[೫೩] ಒಟ್ಟಾರೆ ಇವುಗಳ ಅರ್ಥ ಕೆರೆ ಅಥವಾ ನದಿಯ ಪಕ್ಕದ ಪ್ರದೇಶ. ಭೌಗೋಳಿಕವಾಗಿ ಕೆಲ್ಲೋಡು ಗ್ರಾಮ ವೇದಾವತಿ ನದಿ ತೀರದಲ್ಲಿದೆ. ಈ ಗ್ರಾಮದ ಪಶ್ಚಿಮ ಭಾಗದಲ್ಲಿ ನದಿಯ ಫಲವತ್ತಾದ ಮಣ್ಣು ಕಂಡುಬರುತ್ತದೆ. ಆದುದರಿಂದ ಇದೊಂದು ನಿಸರ್ಗವಾಚಿ ಸ್ಥಳನಾಮವಾಗಿದೆ.

ಒಟ್ಟಾರೆ 'ನಾಮ' ವೈವಿಧ್ಯಪೂರ್ಣವಾದ, ವಿಸ್ತಾರವಾದ ಪ್ರಪಂಚವಾಗಿದ್ದು, ಅನೇಕ ಮನಸ್ಸು, ಪ್ರಭಾವಗಳ ಸೃಷ್ಟಿಯಾಗಿದೆ. ಹಳೆಯ ನಾಮ ನಾಮಶೇಷವಾಗುವುದು, ಹೊಸನಾಮ ಹುಟ್ಟುವುದೂ, ಕೆಲವೊಮ್ಮೆ ಹಳೆಯ ನಾಮ ಹೊಸ ರೂಪದಲ್ಲಿ ಮುಂದುವರೆಯುವುದು ಇತಿಹಾಸದುದ್ದಕ್ಕೂ ನಡೆದೇ ಇದೆ. ಹೀಗಾಗಿ ನಾಮ ಸಮೂಹ ಸೃಜನಶೀಲ, ಸಂಕೀರ್ಣ, ಕುತೂಹಲಕಾರಿಯೂ ಆದ ಪ್ರಪಂಚವಾಗಿ ಬೆಳೆದಿದೆ. ಅದೇ ರೀತಿ ಈ ತಾಲೂಕಿನ ಸ್ಥಳನಾಮಗಳಿಗೆ ಅನೇಕ ಸಾವಿರ ವರ್ಷಗಳ ಇತಿಹಾಸವಿದೆ. ಇತ್ತೀಚಿನ ಸಂದರ್ಭದಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಪುನರ್ರಚಿಸುವಲ್ಲಿ ಶಾಸನ, ಕಾವ್ಯ, ಪುರಾತತ್ವ ಆಕರಗಳಂತೆ ನಾಮಗಳು ಸಹಾಯಕ ಸಾಮಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಇವುಗಳ ಮೂಲಕ ಪ್ರಾಚೀನ ಜನಾಂಗದ ಭಾಷಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಜೀವನದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ. ಜೊತೆಗೆ ಇದರ ಅಭ್ಯಾಸ ಅನೇಕ ಹೊಸ ಕ್ಷೇತ್ರಗಳನ್ನು ಅನಾವರಣಗೊಳಿಸುವಂತೆ, ಪ್ರಸ್ತುತ ತಾಲೂಕಿನಲ್ಲಿ ಪ್ರಚಲಿತವಿರುವ ಸ್ಥಳನಾಮಗಳ ಬಗ್ಗೆ ಶೋಧನೆ ನಡೆಸಿ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಲವು ಮುಖಗಳನ್ನು ಕುರಿತು ವಿವೇಚನೆ ಮಾಡಲಾಗಿದೆ.

ಟಿಪ್ಪಣಿಗಳು

೧. ರಘುಪತಿ ಕೆಮ್ತೂರು., ೧೯೮೭, **ಸ್ಥಳನಾಮಾಧ್ಯಯನದ ಇತ್ತೀಚಿನ ಒಲವುಗಳು : ಒಂದು ಸ್ಥೂಲಚಿತ್ರ,** ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೪೦೮.

೨. ಅದೇ.

೩. ಅಜೇಯಕುಮಾರ .ವಿ.ಎಚ್., ೨೦೦೮, **ಜಗಳೂರು ತಾಲೂಕಿನ ಸ್ಥಳನಾಮಗಳು** (ಅಪ್ರಕಟಿತ ಎಂ.ಫಿಲ್ ನಿಬಂಧ), ಪು. ೬

೪. ಪಾಟೀಲ .ವಿ.ಎಲ್., ೨೦೧೦, **ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗದ ಸ್ಥಳನಾಮಗಳು,** ಜಾನಪದ ಕರ್ನಾಟಕ, ಸಂಪುಟ–೭, ಸಂಚಿಕೆ–೩, ರಮೇಶ.ಸ.ಚಿ.(ಸಂ), ಪು. ೬೧.

೫. ಅಜೇಯಕುಮಾರ .ವಿ.ಎಚ್., ೨೦೦೮, **ಪೂರ್ವೋಕ್ತ,** ಪು. ೩.

೬. ವಿಶ್ವನಾಥಯ್ಯ .ಸಿ.ಎಂ., ೨೦೦೪, **ಕಡೂರು ತಾಲೂಕಿನ ಸ್ಥಳನಾಮಗಳು,** ಪು. ೩.

೭. ಅಜೇಯಕುಮಾರ .ವಿ.ಎಚ್., ೨೦೦೮, **ಪೂರ್ವೋಕ್ತ,** ಪು. ೩.

೮. ದೇಜಗೌ., ೧೯೯೦, **ಸ್ಥಳನಾಮ ವ್ಯಾಸಂಗ,** ಪು. ೧೦.

೯. ಅದೇ, ಪು. ೧೧.

೧೦. ಅದೇ.

೧೧. ಅದೇ, ಪು. ೧೨.

೧೨. ಅಜೇಯಕುಮಾರ .ವಿ.ಎಚ್., ೨೦೦೮, **ಪೂರ್ವೋಕ್ತ,** ಪು. ೭.

೧೩. ಅದೇ, ಪು. ೮.

೧೪. ಅದೇ, ಪು. ೨೪.

೧೫. ಕೆಮ್ತೂರು ರಘುಪತಿಭಟ್ಟ, ೧೯೭೯, **ತುಳುನಾಡಿನ ಸ್ಥಳನಾಮಗಳು,** ಪು. ೧೩.

೧೬. **ಸಂಕ್ಷಿಪ್ತ ಕನ್ನಡ ನಿಘಂಟು,** ೨೦೦೧, ಪು. ೩೭೦.

೧೭. ಅದೇ, ಪು. ೩೮೬

೧೮. ಅದೇ, ಪು. ೨೨ ಮತ್ತು ೨೫೪.

೧೯. ಲಕ್ಕಪ್ಪಗೌಡ ಎಚ್.ಜೆ., ೧೯೯೭, **ಜಾನಪದ ಕೈಪಿಡಿ,** ಪು. ೩೦೧.

೨೦. ಯಶೋಧ ರಾಜಶೇಖರಪ್ಪ ಪಿ., ೨೦೦೧, **ಮತ್ತೋಡು ಪಾಳೆಯಗಾರರು,** ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ(ಸಂ), ಪು. ೧೭೧.

೨೧. ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ, ಮಲ್ಲಕವಿಯ ಗೊಲ್ಲಸಿರುಮನ ಚರಿತೆ, ರಾಮಕವಿಯ ಸಿರುಮನ ಚರಿತೆ ಎಂಬ ಮೂರು ಕಾವ್ಯಗಳನ್ನು ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವರು, ಇವುಗಳು ಸಿರುಮನಾಯಕನ ಜೀವನ–ಸಾಧನೆಗಳನ್ನು ಅರಿಯಲು ಇರುವ ಬಹುಮುಖ್ಯ ಗ್ರಂಥಸ್ಥ ಸಾಹಿತ್ಯವಾಗಿದೆ.

೨೨. ಯಶೋಧ ರಾಜಶೇಖರಪ್ಪ.ಓ., ೨೦೦೧, **ಮತ್ತೋಡು ಪಾಳೆಯಗಾರರು**, **ಪೂರ್ವೋಕ್ತ**, ಪು. ೧೭೧.

೨೩. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೮೫.

೨೪. ಅದೇ, ಸಂಖ್ಯೆ-೩೦.

೨೫. ಅದೇ, ಸಂಖ್ಯೆ-೧೧೯.

೨೬. ಅದೇ, ಸಂಖ್ಯೆ-೧೧೨.

೨೭. ಅದೇ, ಸಂಖ್ಯೆ-೧೧೩

೨೮. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಹೊಸದುರ್ಗದ ಸುತ್ತ**, ಪು. ೪೨.

೨೯. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, ಪು.೮೭೨-೮೭೩.

೩೦. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೯೮.

೩೧. ಅದೇ, ಸಂಖ್ಯೆ-೧೦೧

೩೨. ಯೋಗೀಶ್ವರಪ್ಪ .ಡಿ.ಎನ್., ೨೦೦೯, **ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು**, ಪು. ೧೩೨.

೩೩. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೬೨.

೩೪. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, ಪು. ೯೬೯.

೩೫. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೫

೩೬. ಶೈಲಜಾ ಎಸ್. ಹೊಸಳ್ಳೇರ., ೨೦೦೧, **ಬೂದಿಹಾಳು ಪಾಳೆಯಗಾರರು**, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು.ಎಂ.ವಿ(ಸಂ), ಪು. ೧೩೦.

೩೭. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೧೫೦.

೩೮. ಅದೇ, ಪು. ೫.

೩೯. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೨೫.

೪೦. ಅದೇ,

೪೧. ಜಾಜಿದೇವೇಂದ್ರಪ್ಪ., ೨೦೧೦, **ಬೂದಿಸಂಬಂಧಿತ ಎಡೆಗಳು**, ಬ್ರಹ್ಮಗಿರಿ, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವಮಾಲೆ-೩, ಸೋಮಶೇಖರ್.ಎಸ್.ವೈ(ಸಂ), ಪು. ೧೧.

೪೨. ಷೇಕ್‌ಅಲಿ .ಬಿ (ಪ್ರ.ಸಂ)., ೧೯೯೭, **ಕರ್ನಾಟಕ ಚರಿತ್ರೆ**, ಸಂಪುಟ-೧, ಪು. ೧೭೦.

೪೩. ತಿಪ್ಪಯ್ಯ ಓ.ಎಂ., ೨೦೦೦, **ಶ್ರೀರಾಂಪುರ ಸ್ಥಳನಾಮ ವಿವೇಚನೆ**, ಸಿರುಮ(ಸ್ಮರಣಸಂಚಿಕೆ), ಈರಣ್ಣ .ಹೆಚ್(ಸಂ), ಪು. ೨೮.

೪೪. ಅದೇ,

೪೫. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, ಪು. ೪೧೨.

೪೬. ಅಜೇಯಕುಮಾರ.ವಿ.ಎಚ್., ೨೦೦೮, **ಪೂರ್ವೋಕ್ತ**, ಪು. ೫೮.

೪೭. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, ಪೂರ್ವೋಕ್ತ, ಪು. ೨೬೮.

೪೮. **ಕನ್ನಡ ವಿಶ್ವಕೋಶ**, ಸಂಪುಟ-೩, ಪು. ೭೧೦.

೪೯. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ**, ಪು. ೧೦೩-೧೦೪.

೫೦. ಅದೇ, ಪು. ೧೦೪.

೫೧. **ಎಪಿಗ್ರಾಫಿಯಾ ಕರ್ನಾಟಿಕ**, ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೯೨.

೫೨. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, **ಪೂರ್ವೋಕ್ತ**, ಪು. ೩೧೨.

೫೩. ಅದೇ, ಪು. ೪೦೦.

□□□

ಅಧ್ಯಾಯ : ನಾಲ್ಕು

ಪ್ರಾಗೈತಿಹಾಸಿಕ ನೆಲೆಗಳು

೪.೧. ಹಳೇ ಶಿಲಾಯುಗ

೪.೨. ಸೂಕ್ಷ್ಮ ಶಿಲಾಯುಗ

೪.೩. ನೂತನ ಶಿಲಾಯುಗ

೪.೪. ಬೃಹತ್ ಶಿಲಾಯುಗ

ಅಧ್ಯಾಯ : ನಾಲ್ಕು

ಪ್ರಾಗೈತಿಹಾಸಿಕ ನೆಲೆಗಳು

ಸೂರ್ಯ, ಒಂಬತ್ತು ಗ್ರಹಗಳು, ಕ್ಷುದ್ರ ಗ್ರಹಗಳು, ಉಲ್ಕೆ, ಉಪಗ್ರಹಗಳು, ಧೂಮಕೇತು ಇವೆಲ್ಲವನ್ನು ಒಂದು ಕುಟುಂಬವೆಂದು ಪರಿಗಣಿಸಿ ಸೌರಮಂಡಲ ಎನ್ನಲಾಗಿದೆ.[೧] ಸೌರಮಂಡಲದ ಒಂಬತ್ತು ಮುಖ್ಯ ಗ್ರಹಗಳ ಪೈಕಿ ಭೂಮಿಯೂ ಒಂದು. ಸುಮಾರು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ವಿಶ್ವವು ದೂಳು ಮತ್ತು ಅನಿಲಗಳ ಮಹಾರಾಶಿಯಾಗಿತ್ತು. ಈ ರಾಶಿಯು ಅಧಿಕ ಸಾಂದ್ರತೆಯಿಂದ ಕುಸಿಯಲು ಪ್ರಾರಂಭಿಸಿದಾಗ ಕೇಂದ್ರಬಿಂದುವಿನಲ್ಲಿ ಶಾಖ ಹೆಚ್ಚಾಗಿ ಅದು ಸ್ಫೋಟಿಸತೊಡಗಿತು. ಇದನ್ನೇ 'ಮಹಾಸ್ಫೋಟ' (ಬಿಗ್ ಬ್ಯಾಂಗ್) ಎಂದು ಕರೆಯುತ್ತೇವೆ. ಇದು ಸುಮಾರು ೪೬೦ ಕೋಟಿ ವರ್ಷಗಳ ಹಿಂದೆ ಘಟಿಸಿರಬೇಕೆಂಬ ಊಹೆ ಇದೆ. ಇಂತಹದೊಂದು ಪ್ರಕ್ರಿಯೆಯಲ್ಲಿ ಧೂಳು, ಅನಿಲ ಕಣಗಳ ಮುದ್ದೆಯಾಗಿ ಹೊರಬಿದ್ದ ಕಾಯವೇ ಭೂಮಿ. ಪ್ರಾರಂಭದಲ್ಲಿ ಕುದಿಯುತ್ತಿದ್ದ ಅನಿಲರಾಶಿ ಕ್ರಮೇಣ ತಂಪಾಗತೊಡಗಿದಾಗ ಭೂಮಿಯ ಕಕ್ಷೆ ರಚಿತವಾಯಿತು. ಇದರಲ್ಲಿನ ಲೋಹಗಳು ತೂಕಕ್ಕನುಗುಣವಾಗಿ ಭೂಮಿಯಲ್ಲಿ ಸಂಗ್ರಹ ಗೊಂಡವು. ಅನಿಲಗಳು ಸೋರುತ್ತಾ ವಾತಾವರಣ ಸೃಷ್ಟಿಸಿದವು. ವಾತಾವರಣವು ಅನಿಲದ ಕವಚವಾಗಿ ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್, ಕಾರ್ಬನ್ ಮೋನಾಕ್ಸೈಡ್, ಮಿಥೇನ್, ಅಮೋನಿಯ, ನೀರು ಮುಂತಾದ ಸಂಯುಕ್ತಗಳುಂಟಾದವು; ಹೀಗೆ ರೂಪವಾದ ಭೂಮಿ ಸತತವಾಗಿ ಬಾಹ್ಯ ಮತ್ತು ಆಂತರಿಕ ಬದಲಾವಣೆಗಳನ್ನು, ರಚನೆಯಲ್ಲಿ ಅನೇಕ ಮಾರ್ಪಾಡುಗಳನ್ನು ಹೊಂದುತ್ತಾ ಸಾಗಿದೆ.[೨]

ಭೂ ಇತಿಹಾಸವು ಒಟ್ಟು ೪೫೦೦ ಮಿಲಿಯದಿಂದ ೫೦೦೦ ಮಿಲಿಯ ವರ್ಷಗಳಷ್ಟು ಪುರಾತನ.[೩] ಚಾತುರ್ಥಿಕ ಭೂಯುಗವು ಭೂವಿಕಾಸ ಇತಿಹಾಸದ ಕೊನೆಯ ಭಾಗ. ನಾಲ್ಕುವರೆ, ಐದು ಮಿಲಿಯ ವರ್ಷಗಳಲ್ಲಿ ಚಾತುರ್ಥಿಕ ಯುಗವು ಸುಮಾರು ಎರಡು ಸಾವಿರ ವರ್ಷಗಳಷ್ಟು ದೀರ್ಘವಾಗಿದೆ. ಈ ಚಾತುರ್ಥಿಕ ಯುಗವನ್ನು ಪ್ಲೀಸ್ಟೋಸೀನ್ ಮತ್ತು ಹೋಲೋಸೀನ್ ಎಂದು ಅನುಕ್ರಮವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಚಾತುರ್ಥಿಕ ಕಾಲವು ವೈಶಿಷ್ಟ್ಯಪೂರ್ಣ ಹಾಗೂ ವಿಸ್ಮಯಕರ. ಮೊದಲಿನ ಎಲ್ಲಾ ಭೂಕಾಲಗಳಿಗಿಂತಲೂ ಇದು ಹೆಚ್ಚು ಕುತೂಹಲಕಾರಿ. ಇದೇ ಕಾಲದಲ್ಲಿ ಮಾನವನು ಗೊರಿಲ್ಲಾ-ಚಿಂಪಾಂಜಿ ತರಹದ ತನ್ನ ಪೂರ್ವಜರಿಂದ ವಿಕಾಸ ಹೊಂದುತ್ತಾ ಇಂದಿನ ದೈಹಿಕ ಸ್ವರೂಪವನ್ನು ತಳೆದನು.[೪] ಇತ್ತೀಚೆಗೆ

ಆಫ್ರಿಕೆಯಲ್ಲಿ ನಡೆದ ಪ್ರಾಚೀನ ಮಾನವಶಾಸ್ತ್ರೀಯ (Paleaeo Anthropological) ಸಂಶೋಧನೆಗಳ ಪ್ರಕಾರ ಮಾನವನ ಪ್ರಾಚೀನತೆಯು ಇಂದಿಗೆ ೩.೫ ಮಿಲಿಯದಿಂದ ೪ ಮಿಲಿಯ ವರ್ಷಗಳಷ್ಟು ಪೂರ್ವಕ್ಕೆ ಹೋಗುತ್ತದೆ. ಅತ್ಯಂತ ಪ್ರಾಚೀನ 'ಹೊಮೊನಿಡ'ರು ಅಥವಾ ಪ್ರಾಚೀನ ಮಾನವ ಸದೃಶರಾದ ಹೊಮೊನಿಡರಲ್ಲಿ 'ಅಸ್ಟ್ರಾಲೊಪಿಥೆಕಸ್' ಮತ್ತು 'ಹೊಮೊಹೈಬಿಲಸ್' ಎಂದು ಎರಡು ವರ್ಗಗಳು ಗುರುತಿಸಲಾಗಿದೆ. ಇವರು ಪ್ಲೀಸ್ಟೋಸೀನ್ ಕಾಲದಲ್ಲಿ ಇಂದಿಗೆ ಸುಮಾರು ೪ ರಿಂದ ೨ ಮಿಲಿಯನ್ ವರ್ಷಗಳಷ್ಟು ಹಿಂದೆ ಇದ್ದರೆಂಬುದು ಆಫ್ರಿಕೆಯಲ್ಲಿ ಗೊತ್ತಾಗಿದೆ.[೫] ಅಲ್ಲಿಂದ ಪ್ರಾಚೀನ ಮಾನವನು ಹಳೆಯ ಜಗತ್ತು (Old world) ಹಾಗೂ ಆಗ್ನೇಯ ಏಷ್ಯಾಗಳಿಗೆ ಖಂಡಾಂತರ ಮಾರ್ಗಗಳ (Trans-Continental) ಮೂಲಕ ತಲುಪಿ ನಂತರ ಭಾರತದ ಉಪಖಂಡವನ್ನು ಪ್ರವೇಶಿಸಿದನು.

ಪ್ರಪಂಚದಲ್ಲಿ ಪ್ರಾಚೀನ ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಹಾಗೂ ಅಕ್ಷರ ಜ್ಞಾನವಿಲ್ಲದ ಕಾಲಘಟ್ಟವನ್ನು 'ಪ್ರಾಗೈತಿಹಾಸಿಕ ಸಂಸ್ಕೃತಿ' ಎಂದು ಪುರಾತತ್ವ ಶಾಸ್ತ್ರಜ್ಞರು ಕರೆದಿದ್ದಾರೆ. ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಕಾಲಾನುಕ್ರಮದ ಹಂತಗಳನ್ನು ತಿಳಿಯುವಲ್ಲಿ ಸಿ.ಜೆ. ಥಾಮ್ಸನ್ ನಿರೂಪಿಸಿದ ಮೂರು ಹಂತಗಳ ಪದ್ಧತಿಯು ಸಹಕಾರಿಯಾಗಿದೆ.[೬] ಥಾಮ್ಸನ್‌ನು ಪ್ರಾಗೈತಿಹಾಸಿಕ ವಸ್ತುಗಳನ್ನು ಡ್ಯಾನಿಸ್ ನ್ಯಾಶನಲ್ ಮ್ಯೂಜಿಯಂನಲ್ಲಿ ಕಲೆಹಾಕಿ ಕ್ರಮವಾಗಿ ಶಿಲಾ, ತಾಮ್ರ ಮತ್ತು ಕಬ್ಬಿಣ ಯುಗಗಳೆಂದು ಪ್ರತಿಪಾದಿಸಿದನು. ಶಿಲಾಯುಗದಲ್ಲಿ ಮನುಷ್ಯನು ಬೆಟ್ಟ-ಗುಡ್ಡ, ಗವಿ, ಕಲ್ಲಾಸರೆ, ಪೊಟರೆ, ಕಣಿವೆ-ಕಂದರಗಳಲ್ಲಿ, ನದಿ ಸರೋವರ ಹಳ್ಳ-ಕೊಳ್ಳಗಳ ಪರಿಸರಗಳಲ್ಲಿ ಅಲೆಮಾರಿಯಾಗಿ ಹಣ್ಣು-ಹಂಪಲು, ಪ್ರಾಣಿಗಳ ಮಾಂಸವನ್ನು ತಿಂದು ಜೀವನ ಸಾಗಿಸುತ್ತಿದ್ದನು. ಶಿಲಾಯುಗ ಅತ್ಯಂತ ದೀರ್ಘವಾದುದ್ದಾಗಿದ್ದು ಅದನ್ನು ಅನುಕ್ರಮವಾಗಿ ೧. ಹಳೇ ಶಿಲಾಯುಗ ೨. ಸೂಕ್ಷ್ಮ ಶಿಲಾಯುಗ ಹಾಗೂ ೩. ನೂತನ ಶಿಲಾಯುಗ ಎಂದು ವಿಂಗಡಿಸಲಾಗಿದೆ.[೭] ಶಿಲಾಯುಗದ ಪ್ರತಿಯೊಂದು ಹಂತವನ್ನು ಮಾನವನು ತನ್ನ ಆಯುಧಗಳನ್ನು ತಯಾರಿಸಲು ಬಳಸಿದ ತಾಂತ್ರಿಕತೆ, ಆಯುಧಗಳ ಆಕೃತಿ, ಗುಣಲಕ್ಷಣಗಳಲ್ಲದೆ, ಅವನು ನಾಗರಿಕತೆಯತ್ತ ಸಾಗಿಬಂದ ಪ್ರಗತಿಯ ಪಥವನ್ನು ಆಧರಿಸಿ ನಿರ್ಧರಿಸಲಾಗಿದೆ. ಇವುಗಳು ಮಾನವ ಸಂಸ್ಕೃತಿಯ ಕ್ರಮಬದ್ಧ ಬೆಳವಣಿಗೆಯ ವಿವಿಧ ಕಾಲಘಟ್ಟಗಳಾಗಿವೆ. ಅದೇ ರೀತಿ ತಾಮ್ರಯುಗವನ್ನು ಶಿಲಾತಾಮ್ರಯುಗವೆಂದು, ಕಬ್ಬಿಣಯುಗವನ್ನು ಬೃಹತ್ ಶಿಲಾಯುಗವೆಂತಲೂ ಕರೆಯಲಾಗಿದೆ.

೪.೧. ಹಳೇ ಶಿಲಾಯುಗ

ಗ್ರೀಕ್ ಭಾಷೆಯಲ್ಲಿ ಪ್ಯಾಲಿಯೊ ಎಂದರೆ ಹಳೆಯ ಲಿತಿಕ್ ಎಂದರೆ ಶಿಲೆ ಎಂದು ಅರ್ಥ.[೮] ಈ ಕಾಲದಲ್ಲಿ ಮಾನವ ಶಿಲೆಯಿಂದ ಮಾತ್ರ ಉಪಕರಣಗಳನ್ನು ತಯಾರಿಸಿಕೊಂಡು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಮತ್ತು ಅವನ ರೀತಿ ನೀತಿಗಳು ಸಾಕಷ್ಟು ಸುಧಾರಿಸದೇ ಇನ್ನೂ ಆದಿಮ ಹಂತದಲ್ಲಿ ಇದ್ದುದರಿಂದ ಈ ಕಾಲಘಟ್ಟವನ್ನು ಹಳೆ ಶಿಲಾಯುಗ ಸಂಸ್ಕೃತಿ (Paleolitic Culture) ಎಂದು ಕರೆಯುವರು.[೯] ಹಳೇ ಶಿಲಾಯುಗವು ಅತ್ಯಂತ ಪ್ರಾಚೀನವಾದುದು.

ಈ ಶಿಲಾಯುಗವನ್ನು ಪುನಹ ೧. ಆದಿ ಹಳೆಶಿಲಾಯುಗ, ೨. ಮಧ್ಯ ಹಳೆಶಿಲಾಯುಗ ಮತ್ತು ೩. ಅಂತ್ಯ ಹಳೆಶಿಲಾಯುಗ ಎಂದು ವಿಂಗಡಿಸಲಾಗಿದೆ.

೪.೧.೧. ಆದಿ ಹಳೆಶಿಲಾಯುಗ

ಆದಿ ಹಳೆಶಿಲಾಯುಗವು ಹಳೆಶಿಲಾಯುಗದ ಪ್ರಥಮ ಹಂತ. ಸುಮಾರು ೭ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಹಳೆಯದೆಂದು ಗುರುತಿಸಲಾದ ಈ ಯುಗದ ಅವಶೇಷಗಳು ಭಾರತದಾದ್ಯಂತ ಅನೇಕ ಸ್ಥಳಗಳಲ್ಲಿ ಕಂಡುಬಂದಿವೆ. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಕ್ರಿ.ಶ. ೧೮೬೩ ಮೇ ೩೦ ರಂದು ರಾಬರ್ಟ್ ಬ್ರೂಸ್‌ಪೂಟ್ ಅವರು ತಮಿಳುನಾಡಿನ ಚೆನ್ನೈ ಬಳಿಯ ಪಲ್ಲಾವರಂನಲ್ಲಿ ಆದಿ ಹಳೆಶಿಲಾಯುಗದ ಆಯುಧೋಕರಣಗಳನ್ನು ಪತ್ತೆಹಚ್ಚಿದರು.[೧೦] ಈ ಹಿನ್ನೆಲೆಯಾಗಿ ಭಾರತದ ಪ್ರಾಗೈತಿಹಾಸಿಕ ಕಾಲದ ಅಧ್ಯಯನಕ್ಕೆ ಅವರು ಭದ್ರವಾದ ಬುನಾದಿಯನ್ನು ಹಾಕಿದ್ದರಿಂದ ಅವರನ್ನು 'ಭಾರತೀಯ ಪ್ರಾಗೈತಿಹಾಸಿಕ ಶಾಸ್ತ್ರದ ಪಿತಾಮಹ'ನೆಂದು ಕರೆಯಲಾಗಿದೆ. ಭಾರತದಲ್ಲಿ ಆದಿ ಹಳೆಶಿಲಾಯುಗದ ಹೆಚ್ಚಿನ ನೆಲೆಗಳು ಜೀವನದಿಗಳ ಪಾತ್ರಗಳಲ್ಲಿ ಕಂಡುಬರುತ್ತವೆ. ಸೋಹನ್, ಸಬರ್‌ಮತಿ, ಬಿಯಾಸ್, ನರ್ಮದಾ, ಪ್ರವರಾ, ವಾನಿ ಇನ್ನು ಮುಂತಾದ ನದಿ ದಂಡೆಗಳಲ್ಲಿ ನಡೆದಿರುವ ಅಧ್ಯಯನಗಳು ಆದಿ ಹಳೆಶಿಲಾಯುಗದ ಮಾನವನ ಬದುಕಿಗೂ ಹಾಗೂ ಅಂದಿನ ಭೌಗೋಳಿಕ ಪರಿಸರಕ್ಕೂ ಇರುವ ಸಂಬಂಧವನ್ನು ತಿಳಿಯಲು ಸಹಾಯಕವಾಗಿವೆ.[೧೧]

ಕರ್ನಾಟಕದಲ್ಲೂ ಪ್ರಾಗೈತಿಹಾಸಿಕ ಸಂಸ್ಕೃತಿ ಅಧ್ಯಯನ ಪ್ರಾರಂಭಿಸಿದವರಲ್ಲಿ ರಾಬರ್ಟ್ ಬ್ರೂಸ್‌ಪೂಟ್ ಅವರೇ ಮೊದಲಿಗರು. ೧೮೭೩ರಲ್ಲಿ ಖ್ಯಾಡ(ಕೈರಾ)ದಲ್ಲಿ ಮತ್ತು ಬಿಜಾಪೂರ ಜಿಲ್ಲೆಯ ಬಾದಾಮಿ ಹತ್ತಿರ ಮಲಪ್ರಭಾ ನದಿದಂಡೆಯ ಮೇಲಿನ ಢಾಣಕ ಶಿರೂರ ಮತ್ತು ಮೆಣಸಗಿಗಳಲ್ಲಿ ಆದಿ ಹಳೇಶಿಲಾಯುಗದ ಉಪಕರಣಗಳನ್ನು ಪತ್ತೆಹಚ್ಚಿ ವರದಿ ಮಾಡಿದರು.[೧೨] ತರುವಾಯ ಕರ್ನಾಟಕದ ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ, ಚಿತ್ರದುರ್ಗ ಸೇರಿದಂತೆ ಮೊದಲಾದ ಜಿಲ್ಲೆಗಳಲ್ಲಿ ಬ್ರೂಸ್‌ಫೂಟ್ ಅವರು ಇದೇ ಕಾಲಘಟ್ಟದ ಅನೇಕ ನೆಲೆಗಳನ್ನು ಶೋಧಿಸಿದರು. ೧೯೪೯-೫೨ರಲ್ಲಿ ಆರ್.ವಿ. ಜೋಶಿಯವರು ಮಲಪ್ರಭಾ ಕಣಿವೆಯಲ್ಲಿ ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದಂತೆ ಭೂ ರಚನಾ ಶಾಸ್ತ್ರೀಯ (ಜಿಯೊಮೋರ್ಫಾಲಾಜಿಕ್) ವಾದ ಅನ್ವೇಷಣೆಯನ್ನು ನಡೆಸಿದರು.[೧೩] ದಕ್ಷಿಣ ಕರ್ನಾಟಕದಲ್ಲಿ ಸಂಪತ್ ಅಯ್ಯಂಗಾರ್‌ರು ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯಲ್ಲಿ ಆದಿ ಹಳೇಶಿಲಾಯುಧಗಳನ್ನು ಶೋಧಿಸಿದರು. ಇವರು ಮತ್ತು ರಾಬರ್ಟ್ ಬ್ರೂಸ್‌ಫೂಟ್ ಅವರ ಸಂಗ್ರಹಗಳನ್ನು ಎಂ. ಶೇಷಾದ್ರಿ ಅವರು ವಿಷದವಾಗಿ ಅಧ್ಯಯಿನಿಸಿದ್ದಾರೆ.[೧೪]

ಕರ್ನಾಟಕದ ಅತ್ಯಂತ ಪ್ರಾಚೀನ ಮಾನವ ವಸತಿಯಾದ ಆದಿ ಹಳೆ ಶಿಲಾಯುಗದ ಹಂತದಲ್ಲಿ ಕಲ್ಲಿನ ಉಪಕರಣಗಳ ತಯಾರಿಕೆಯಲ್ಲಿ ಎರಡು ಬಗೆಯ ಸಂಪ್ರದಾಯಗಳು ಪ್ರಚಲಿತವಿದ್ದವು. ೧. ಮಚ್ಚುಗತ್ತಿ ಮಾದರಿ ಸಂಪ್ರದಾಯಗಳು (Chapper chopping Tradition) ೨. ದ್ವಿತೀಯ ಕೈಗೊಡಲಿ ಮತ್ತು ಸೀಳುಗತ್ತಿಯ ಸಂಪ್ರದಾಯ (Byfeshial hand

excleaver).[illegible] ಭಾರತದಲ್ಲಿ ಎರಡನೇ ಸಂಪ್ರದಾಯವೇ ವಿಶೇಷವಾಗಿದ್ದು, ಇದರಲ್ಲಿ ಅಬ್ಬೆವಿಲೆ ಮತ್ತು ಅಶ್ಯೂಲ್ ಎಂಬ ಎರಡು ಸಾಂಸ್ಕೃತಿಕ ಹಂತಗಳಿವೆ.[illegible] ಕರ್ನಾಟಕದ ಬಹುಭಾಗಗಳಲ್ಲಿ 'ಅಶ್ಯೂಲಿಯನ್' ಸಾಂಸ್ಕೃತಿಕ ಹಂತದ ಆಯುಧಗಳೇ ಹೆಚ್ಚಾಗಿವೆ. ಇವುಗಳಲ್ಲಿ ಕೈಗೊಡಲಿಗಳು, ಸೀಳುಗತ್ತಿಗಳು, ಮಚ್ಚುಗಳು, ಕೊರಗತ್ತಿಗಳು, ದಂಡುಚಪ್ಪಟೆ ಮುಂತಾದ ಆಕೃತಿಗಳ ಉಪಕರಣಗಳಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಅಧ್ಯಯನ ಪ್ರಾರಂಭವಾದುದು 'ಭಾರತದ ಪ್ರಾಗೈತಿಹಾಸಿಕ ಶಾಸ್ತ್ರದ ಪಿತಾಮಹ' ರೆನಿಸಿದ ರಾಬರ್ಟ್ ಬ್ರೂಸ್‌ಫೂಟ್ ಅವರಿಂದಲೆ ಎಂಬುದು ಗಮನಾರ್ಹ. ಇವರು ಜಿಲ್ಲೆಯ ವೇದಾವತಿ ನದಿ ತೀರದ ಹೊಳಲ್ಕೆರೆ ತಾಲೂಕಿನ ತಾಳ್ಯದಲ್ಲಿ ಎರಡು ಅಲಗುಳ್ಳ ಅಂಡಾಕಾರದ ಕೈಗೊಡಲಿ ಹಾಗೂ ಇತರೆ ನಮೂನೆ ಆಯುಧಗಳನ್ನು, ಹೊಸದುರ್ಗ ತಾಲೂಕಿನ ಜಾನಕಲ್ಲು ನೆಲೆಯಲ್ಲಿ ವಿವಿಧ ನಮೂನೆ ಕೈಗೊಡಲಿ ಇತರೆ ಆಯುಧಗಳನ್ನು ಸ್ಥಳೀಯವಾಗಿ ಸಿಕ್ಕುವ ಕ್ವಾಟ್ರಜೈಟ್, ಕ್ವಾಟ್ಜ್ ಕಲ್ಲಿನಲ್ಲಿ ತಯಾರಿಸಿರುವುದನ್ನು ಸಂಗ್ರಹಿಸಿದ್ದಾರೆ.[illegible] ಈ ಆಯುಧಗಳನ್ನು ಅಬ್ಬೆವಿಲೆ ಮತ್ತು ಅಶ್ಯೂಲಿಯನ್ ಸಂಸ್ಕೃತಿಗೆ ಹೋಲಿಸಿ ಗುಜರಾತ್ ಮತ್ತು ಅತ್ತಿರಂಪಕ್ಕನ ಆಯುಧಗಳ ಹೋಲಿಕೆ ಇವೆ ಎಂದೂ ಹಾಗೂ ಇವುಗಳನ್ನು ಆದಿ ಹಳೆಶಿಲಾಯುಗಕ್ಕೆ ಸೇರಿಸಬಹುದೆಂದು ಎಂ. ಶೇಷಾದ್ರಿಯವರು ಅಭಿಪ್ರಾಯಪಟ್ಟಿದ್ದಾರೆ.[illegible] ಆದಿ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ೧೯೫೬ರಲ್ಲಿ ಎಂ ಶೇಷಾದ್ರಿಯವರು ಹೊಸದುರ್ಗ ತಾಲೂಕಿನ ಜಾನಕಲ್ಲಿನಲ್ಲಿ ಕೆಲವು ಆಯುಧಗಳನ್ನು ಪತ್ತೆಹಚ್ಚಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಹಾಗೂ ಎಂ. ಶೇಷಾದ್ರಿಯವರ ಸಂಶೋಧನೆಗಳು ಆದಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ಬಹು ಮಹತ್ವದ ಕಾಣಿಕೆಗಳಾಗಿವೆ. ಚಿತ್ರದುರ್ಗ ತಾಲೂಕಿನ ಕೂನಬೇವು ಪರಿಸರದಲ್ಲಿ ಆದಿ ಹಳೆಶಿಲಾಯುಧವನ್ನು ಎಸ್. ನಾಗರಾಜಪ್ಪ ಮತ್ತು ಕೆ.ಎಸ್. ಶರತ್‌ಬಾಬು ಇವರುಗಳು ಶೋಧಿಸಿರುವರು.[illegible]

ಹೊಸದುರ್ಗ ತಾಲೂಕಿನ ಪ್ರಾಗೈತಿಹಾಸಿಕ ಅಧ್ಯಯನವನ್ನು ಕುರಿತು ಹೇಳುವುದಾದರೆ ಈ ಮೇಲೆ ಹೇಳಿದ ವಿಚಾರಗಳನ್ನು ಗಮನಿಸಬೇಕಾಗುತ್ತದೆ. ರಾಬರ್ಟ್ ಬ್ರೂಸ್‌ಫೂಟ್ ಹಾಗೂ ಎಂ. ಶೇಷಾದ್ರಿಯವರ ಬಳಿಕ ಹೊಸದುರ್ಗ ತಾಲೂಕು ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆ ಪತ್ತೆಯಾಗಿ ಪ್ರಕಟವಾಗಿರಲಿಲ್ಲ.

ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಅನೇಕ ಪ್ರಾಗೈತಿಹಾಸಿಕ ನೆಲೆಗಳು/ಅವಶೇಷಗಳು ಕಂಡುಬಂದಿವೆ. ಅವುಗಳಲ್ಲಿ ಆದಿ ಹಳೆಶಿಲಾಯುಗದ ನೆಲೆ ಗರಗದಲ್ಲಿ ದೊರೆತಿದೆ.

ಗರಗ : ಹೊಸದುರ್ಗ ತಾಲೂಕಿನ ಗರಗ ಗ್ರಾಮ ಶ್ರೀರಾಂಪುರ ಹೋಬಳಿಯ ಒಂದು ಪ್ರಾಚೀನ ಎಡೆ. ಹೋಬಳಿ ಕೇಂದ್ರ ಶ್ರೀರಾಂಪುರದಿಂದ ಬೆಲಗೂರು ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ 'ಮುತ್ತಿನಗಿರಿ' ಬೆಟ್ಟ ಪರಿಸರ ಬಹುಮುಖ್ಯವಾದ ಪ್ರಾಗೈತಿಹಾಸಿಕ ನೆಲೆ. ಈ ಬೆಟ್ಟ ಪರಿಸರವು ಬಿಳಿ ಕಣಶಿಲೆಗಳಿಂದ ಆವೃತವಾಗಿದೆ. ನಿಸರ್ಗದತ್ತವಾದ ಈ ಪರಿಸರದಲ್ಲಿ ಹಳ್ಳ, ಝರಿಗಳು ಹರಿಯುತ್ತವೆ. ಅಲ್ಲದೇ ಅನೇಕ ಕಲ್ಲಾಸರೆ ಹಾಗೂ ಗವಿಗಳು ಕಾಣಸಿಗುತ್ತವೆ. ಈ ಪರಿಸರದಲ್ಲಿ ಆದಿ ಹಳೆಶಿಲಾಯುಗಕ್ಕೆ

ಸಂಬಂಧಿಸಿದ ಒಂದು ಶಿಲಾಯುಧೋಪಕರಣ ದೊರೆತಿದೆ. ಇದನ್ನು ಕೆಂಪು ಬೆಣಚು ಕಲ್ಲಿನಿಂದ (Quartzite) ತಯಾರಿಸಲಾಗಿದ್ದು, ೮.೫ ಸೆಂ.ಮೀ. ಉದ್ದ, ೫.೫ ಸೆಂ.ಮೀ. ಅಗಲ ಹಾಗೂ ೩.೫ ಸೆಂ.ಮೀ. ದಪ್ಪವಾಗಿರುವ ಈ ಆಯುಧದ ಸುತ್ತಲೂ ಚಕ್ಕೆಗಳನ್ನು ಎಬ್ಬಿಸಿರುವ ಗುರುತುಗಳು ಗೋಚರಿಸುತ್ತವೆ. ಈ ಆಯುಧವು ಹಿಂದೆ ರಾಬರ್ಟ್ ಬ್ರೂಸ್‌ಫೂಟ್ ಅವರು ಜಾನಕಲ್ಲಿನಲ್ಲಿ ಪತ್ತೆಹಚ್ಚಿದ 'ಅಶ್ಯೂಲಿಯನ್' ಮಾದರಿಯ ಉಪಕರಣದಂತೆಯೇ ಕಂಡುಬರುತ್ತದೆ. ಪ್ರಸ್ತುತ ಆಯುಧ ದೊರೆತ 'ಮುತ್ತಿನಗಿರಿ' ಬೆಟ್ಟ ಪರಿಸರ ಆದಿ ಹಳೆಶಿಲಾಯುಗದ ಒಂದು ನೆಲೆಯಾಗಿದೆ.

೪.೧.೨. ಮಧ್ಯ ಹಳೆಶಿಲಾಯುಗ

ಮಧ್ಯ ಹಳೆಶಿಲಾಯುಗವು ಆದಿ ಮತ್ತು ಅಂತಿಮ ಹಳೆ ಶಿಲಾಯುಗ ಸಂಸ್ಕೃತಿಗಳ ನಡುವಿನ ಕಾಲದ್ದು. ಈ ಶಿಲಾಯುಗವು ಮಧ್ಯ ಪ್ಲೀಸ್ಟೋಸೀನ್ ಅವಧಿಯಿಂದ ಅಂತಿಮ ಪ್ಲೀಸ್ಟೋಸೀನ್ ಅವಧಿಯವರೆಗೆ ಅಂದರೆ ಪ್ರಸ್ತುತ ಅವಧಿಗೆ ೧೦,೦೦೦ ದಿಂದ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿದ್ದಿತೆಂದು ರೇಡಿಯೋ ಕಾರ್ಬನ್ ವೈಜ್ಞಾನಿಕ ಕಾಲ ನಿರ್ಣಯದಿಂದ ನಿರ್ಧರಿಸಲಾಗಿದೆ. ಹೆಚ್ಚಾಗಿ ಮಳೆ ಬಿದ್ದ ಕಾರಣ ಮತ್ತು ಭೂಮಿಯ ರಚನೆಯಲ್ಲಾದ ಬದಲಾವಣೆಗಳಿಂದಾಗಿ ಎತ್ತರದ ಪ್ರದೇಶಗಳ ಸವೆತ, ಮಿತಿಮೀರಿದ ಪ್ರವಾಹಗಳಿಂದಾಗಿ ಭೂಕೊರೆತ, ಸಸ್ಯ ಹಾಗೂ ಪ್ರಾಣಿ ಸಂಕುಲಗಳಲ್ಲಿಯೂ ಹೆಚ್ಚಿನ ಬದಲಾವಣೆಗಳಾದವು. ಇಂತಹ ಸಂದರ್ಭದಲ್ಲಿ ಮಧ್ಯ ಹಳೆಶಿಲಾಯುಗ ಸಂಸ್ಕೃತಿ ರೂಪಗೊಂಡಿತು. ಭಾರತದಲ್ಲಿ ೧೯೫೪ರಲ್ಲಿ ಎಚ್.ಡಿ. ಸಂಕಾಲಿಯಾ ಅವರು ಮೊದಲಬಾರಿಗೆ ಮಧ್ಯ ಹಳೆಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಬೆಳಕಿಗೆ ತಂದರು. ಅವರು ಮಹಾರಾಷ್ಟ್ರದ ಅಹಮದನಗರ ಜಿಲ್ಲೆಯಲ್ಲಿ ಗೋದಾವರಿಯ ಉಪನದಿಯಾದ ಪ್ರವರಾ ನದಿದಂಡೆಯ ಮೇಲಿನ ಮಧ್ಯ ಹಳೆಶಿಲಾಯುಗದ ಉಪಕರಣಗಳನ್ನು ಕಂಡುಹಿಡಿದರು.[೨೦]

ಕರ್ನಾಟಕದಲ್ಲಿ ಮಧ್ಯ ಹಳೆಶಿಲಾಯುಗದ ಆಯುಧಗಳನ್ನು ೧೯೫೭ರಲ್ಲಿ ಆರ್.ಡಿ. ಬ್ಯಾನರ್ಜಿಯವರು ಘಟಪ್ರಭಾ, ಮಲಪ್ರಭಾ ಹಾಗೂ ಕೃಷ್ಣ ನದಿಗಳ ಕೆಲವು ಭಾಗಗಳಲ್ಲಿ ಅನ್ವೇಷಿಸಿದರು.[೨೧] ಅ. ಸುಂದರ ಅವರು ಬಿಜಾಪುರ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಂಡುಬರುವ ಚನಗಾಂ, ಶಿಡ್ಲಪಡಿ ಗುಹೆಗಳು, ಮಟಕ ದೇವನಹಳ್ಳಿ ಮೊದಲಾದ ನೆಲೆಗಳಲ್ಲಿ ಮಧ್ಯ ಹಳೆಶಿಲಾಯುಗದ ಆಯುಧಗಳನ್ನು ಬೆಳಕಿಗೆ ತಂದರು.[೨೨] ಇಷ್ಟೇ ಅಲ್ಲದೆ ಕರ್ನಾಟಕದ ಇನ್ನೂ ಅನೇಕ ಕಡೆ ಮಧ್ಯ ಹಳೆಶಿಲಾಯುಗ ಸಂಸ್ಕೃತಿಯ ನೆಲೆಗಳು ಅನ್ವೇಷಣೆಗೊಂಡು ವರದಿಯಾಗಿವೆ. ಈ ಸಾಂಸ್ಕೃತಿಕ ಹಂತದ ಆಯುಧೋಪಕರಣಗಳು ವಿವಿಧ ನಮೂನೆಗಳಾಗಿವೆ. ೧. ಹೆರೆಯುವ ಉಪಕರಣಗಳು, ೨. ಮೊನಚುಗಳು, ೩. ರಂಧ್ರಕಾರಗಳು, ೪. ಹೆರೆಯುವ ಮತ್ತು ರಂಧ್ರಕಾರಕದ ಉಪಕರಣಗಳು ಹಾಗೂ ರಂದ್ರಕಾರಕ ಮತ್ತು ಮೊನಚು ಉಪಕರಣಗಳು, ೫. ಚೂರಿ ತರಹದ ಚಕ್ಕೆಗಳು, ೬. ದಂತಾಕಾರದ ಉಪಕರಣಗಳು, ೭. ಬೈರಿಗೆಗಳು, ೮. ಕೈಕೊಡಲಿಗಳು, ಕಡಿಗತ್ತಿಗಳು, ಮಚ್ಚುಗಳು.[೨೩] ಈ ಉಪಕರಣಗಳನ್ನು ತಯಾರಿಸಲು ಚರ್ಟ್, ಅಗೇಟ್, ಜಾಸ್ಪರ್, ಚಾಲ್ಸಿಡೋನಿ ಮತ್ತು ಕ್ವಾರ್ಟ್ಸ್ ಶಿಲಾಮಾದರಿಗಳನ್ನು ಉಪಯೋಗಿಸಿದ್ದಾರೆ.[೨೪]

ಚಿತ್ರದುರ್ಗ ಜಿಲ್ಲೆಯಲ್ಲಿ ಮಧ್ಯ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ಕೆಲವೇ ಸಂಶೋಧನೆಗಳು ನಡೆದಿವೆ. ೧೮೬೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಅವರು ಹೊಳಲ್ಕೆರೆ ತಾಲೂಕಿನ ತಾಳ್ಯ ಹಾಗೂ ಹೊಸದುರ್ಗ ತಾಲೂಕಿನ ಜಾನಕಲ್ಲಿನಲ್ಲಿ ಪತ್ತೇ ಹಚ್ಚಿದ್ದ ಆಯುಧಗಳಲ್ಲಿ ಕೆಲವು ಗುಜರಾತ್ ಹಾಗೂ ಅತ್ತಿರಂಪಕ್ಕಂನ ಆಯುಧಗಳ ಮಾದರಿಯಲ್ಲಿ ಇದ್ದು ಮಧ್ಯ ಹಳೆಶಿಲಾಯುಗಕ್ಕೆ ಸೇರಿಸಬಹುದೆಂದು ಎಂ. ಶೇಷಾದ್ರಿಯವರು ಅಭಿಪ್ರಾಯಪಟ್ಟಿದ್ದಾರೆ.[೨೩] ತರುವಾಯ ಎಸ್. ನಾಗರಾಜಪ್ಪ ಅವರು ಚಿತ್ರದುರ್ಗ ತಾಲೂಕಿನ ಗೊಡಬನಹಾಳು ಗ್ರಾಮದ ಕಳ್ಳಿ ದಿಬ್ಬದಲ್ಲಿ ಮಧ್ಯೆಹಳೆ ಶಿಲಾಯುಗ ಕಾಲದ ಎರಡು ಆಯುಧಗಳನ್ನು ಪತ್ತೆಹಚ್ಚಿದ್ದು, ಇವುಗಳನ್ನು ಕ್ಲೋರೈಟಿಕ್ ಶಿಸ್ಟ್‌ನಲ್ಲಿ ತಯಾರಿಸಲಾಗಿದೆ. ಇವುಗಳಲ್ಲಿ ಒಂದು ಮಚ್ಚುಗತ್ತಿ, ಮತ್ತೊಂದು ಅಂಡಾಕಾರದ ಆಯುಧವಾಗಿದೆ.[೨೪] ಪ್ರಸ್ತುತ ಅಧ್ಯಯನ ಕ್ಷೇತ್ರ ಹೊಸದುರ್ಗ ತಾಲೂಕಿನ ಲಂಬಾಣಿಹಟ್ಟಿಯಲ್ಲಿ ಮಧ್ಯ ಹಳೇಶಿಲಾಯುಗದ ಆಯುಧ ದೊರೆತಿದೆ.

ಲಂಬಾಣಿಹಟ್ಟಿ : ಹೊಸದುರ್ಗ ತಾಲೂಕಿನ ಜಾನಕಲ್ಲು ಗ್ರಾಮದಿಂದ ಸುಮಾರು ೫ ಕಿ.ಮೀ. ಅಂತರದ ಲಂಬಾಣಿಹಟ್ಟಿಯು ಹೊಳಲ್ಕೆರೆ ತಾಲೂಕಿನ ಪ್ರಮುಖ ಪ್ರಾಗೈತಿಹಾಸಿಕ ನೆಲೆ ಘಟ್ಟಿಹೊಸಹಳ್ಳಿ ಹಾಗೂ ತಾಳ್ಯದ ಸಮೀಪವಿದೆ. ಲಂಬಾಣಿಹಟ್ಟಿಯು ಭೌಗೋಳಿಕವಾಗಿ ಗ್ರಾನೈಟ್ ಬೆಟ್ಟ-ಗುಡ್ಡಗಳಿಂದ ಆವೃತವಾಗಿದೆ. ಇಲ್ಲಿನ ದಕ್ಷಿಣ ದಿಕ್ಕಿನ ಹೊಲದಲ್ಲಿ ಮಧ್ಯ ಹಳೆಶಿಲಾಯುಗದ ಒಂದು ಆಯುಧ ದೊರೆತಿದೆ. Fluted Core ನಿಂದ ತಯಾರಿಸಲ್ಪಟ್ಟಿರುವ ಈ ಆಯುಧವು ೬ ಸೆಂ.ಮೀ. ಉದ್ದ, ೩.೫ ಸೆಂ.ಮೀ. ಅಗಲ ಹಾಗೂ ೨.೫ ಸೆಂ.ಮೀ. ದಪ್ಪವಾಗಿರುವ ಈ ಆಯುಧವು ಜಿಗ್‌ಜಾಗ್ ಕಟ್ಟಿಂಗ್ ಅನ್ನು ಹೊಂದಿದೆ. ಇದರಿಂದ ಲಂಬಾಣಿ ಹಟ್ಟಿ ಮಧ್ಯ ಹಳೆಶಿಲಾಯುಗ ಕಾಲದ ಒಂದು ನೆಲೆಯೆಂಬುದು ಸ್ಪಷ್ಟವಾಗುತ್ತದೆ.

೪.೧.೩. ಅಂತ್ಯ ಹಳೆಶಿಲಾಯುಗ

ವಿಸ್ತಾರವಾದ ಕಾಲಖಂಡವನ್ನು ವ್ಯಾಪಿಸಿಕೊಂಡಿದ್ದ ಹಳೆಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತಿಮ ಹಳೆಶಿಲಾಯುಗ. ಇದು ಮಧ್ಯ ಹಳೆಶಿಲಾಯುಗದ ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗದ ನಡುವಿನ ಹಂತ. ಈ ಸಂಸ್ಕೃತಿಯು ಇಂದಿಗೆ ಸುಮಾರು ೧೦,೦೦೦ ವರ್ಷಗಳಿಂದ ೨೫,೦೦೦ ವರ್ಷಗಳಷ್ಟು ಪೂರ್ವದಲ್ಲಿತ್ತೆಂದು ವೈಜ್ಞಾನಿಕ ವಿಧಾನದಿಂದ ತಿಳಿದುಕೊಳ್ಳಲಾಗಿದೆ.[೨೫] ೧೮೮೪ರಲ್ಲಿ ರಾಬರ್ಟ್ ಬ್ರೂಸ್‌ಫೂಟ್‌ರವರು ಬಿಲ್ಲಸ್ವರ್ಗ ನೆಲೆಯಲ್ಲಿ ದೊರೆತ ಮೂಳೆಯ ಆಯುಧಗಳನ್ನು ಯೂರೋಪಿನ ಅಂತ್ಯ ಹಳೆಶಿಲಾಯುಗದ ಮ್ಯಾಗ್ಡಲೀನಿಯನ್ ಆಯುಧಗಳೊಂದಿಗೆ ಹೋಲಿಸಿದ್ದರೂ, ಇತರ ಸಾಂದರ್ಭಿಕ ಆಧಾರಗಳ ಅಭಾವದಿಂದ ಈ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗಿರಲಿಲ್ಲ.[೨೬] ಇದರ ಒಂದೆರಡು ದಶಕಗಳ ನಂತರ ಕೊರೆಯುಳಿ ಮಾದರಿಗಳು ದಕ್ಷಿಣ ಭಾರತದಲ್ಲಿನ ಅಂತ್ಯ ಹಳೆಶಿಲಾಯುಗದ ಅಸ್ತಿತ್ವದ ಸಾಧ್ಯತೆಯನ್ನು ಸ್ಪಷ್ಟಪಡಿಸಿದ್ದರೂ ಇವುಗಳಿಗೆ ಪುಷ್ಠಿ ನೀಡುವಂತಹ ಹೆಚ್ಚಿನ ಮಾಹಿತಿ ದೊರೆತಿರಲಿಲ್ಲ. ಕೆ.ಆರ್.ಯು.ಟಾಡ್, ಜನೂರ್ ಮತ್ತು ಎಚ್.ಡಿ. ಸಂಕಾಲಿಯಾ ಅವರು ಖಾಂದಿವಿಲ್ಲಿ, ಗಿಡ್ಡವಾರು ಹಾಗೂ ನೇವಾಸ ನೆಲೆಗಳಲ್ಲಿ ಅನುಕ್ರಮವಾಗಿ ಅಧ್ಯಯನ ನಡೆಸಿ ಈ ಸಂಸ್ಕೃತಿ ಅಸ್ತಿತ್ವದ ಬಗೆಗೆ ಮಂಡಿಸಿದ ಅಭಿಪ್ರಾಯಗಳನ್ನು ಅವು ನಿರ್ದಿಷ್ಟ ಸ್ತರಗಳಲ್ಲಿ ದೊರೆಯಲಿಲ್ಲವೆಂಬ

ಕಾರಣಕ್ಕಾಗಿ ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ ಇತ್ತೀಚಿನ ದಶಕಗಳಲ್ಲಿ ನಡೆಸಿರುವ ಅನೇಕ ಸ್ಥಳ ಪರಿಶೋಧನೆ ಮತ್ತು ಉತ್ಖನನಗಳಿಂದ ಭಾರತದಲ್ಲಿನ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಮಾಹಿತಿಗಳು ಬೆಳಕಿಗೆ ಬಂದಿವೆ.[೨೯]

ಭಾರತದಲ್ಲಿ ೧೯೬೪ರಲ್ಲಿ ಎಂ.ಎಲ್.ಕೆ. ಮೂರ್ತಿ ಅವರು ಮೊದಲಬಾರಿಗೆ ಈ ಸಂಸ್ಕೃತಿಯ ಕುರುಹುಗಳನ್ನು ವೈಜ್ಞಾನಿಕವಾಗಿ ಬೆಳಕಿಗೆ ತಂದರು. ಅವರು ಆಂಧ್ರಪ್ರದೇಶದ ರಾಳ್ಳಕಾಲುವ(ಚಿತ್ತೂರು ಜಿಲ್ಲೆ) ಕೊಳ್ಳದ ಸಮಸ್ತರಗಳಲ್ಲಿ ಕೆಲವೊಂದು ಅಂತ್ಯ ಹಳೆಶಿಲಾಯುಗದ ಆಯುಧಗಳನ್ನು ಕಂಡುಹಿಡಿದರು.[೩೦] ಕರ್ನಾಟಕದಲ್ಲಿ ೧೯೭೫ರಲ್ಲಿ ಅ. ಸುಂದರ ಅವರು ಬಿಜಾಪುರ ಜಿಲ್ಲೆಯ ಸಾಲ್ವಡಗಿಯಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಕಮ್ಮಟ ಇಲ್ಲವೆ ಆಯುಧಗಳಾದ ನೀಳಚಕ್ಕೆಗಳ ಉತ್ಪಾದನಾ ಕೇಂದ್ರವನ್ನು ಗುರುತಿಸಿದರು.[೩೧] ಹುಣಸಗಿಯಲ್ಲಿ ಈ ಸಂಸ್ಕೃತಿಯ ಬಹುತೇಕ ಎಲ್ಲಾ ಆಯುಧಗಳ ವೈವಿಧ್ಯಗಳು ಬೆಳಕಿಗೆ ಬಂದವು.[೩೨] ಬಿಜಾಪುರ ಜಿಲ್ಲೆಯ ಸಿದ್ಧಾಪುರ, ಅರಸನಾಳ್, ಧಾರವಾಡ ಜಿಲ್ಲೆಯ ನಂದಿಹರಳಹಳ್ಳಿ, ನಲ್ವಗತ್, ಕೊಪ್ಪಳ ಜಿಲ್ಲೆಯ ಹಿರೇಬೆನಕಲ್, ಬೆಂಗಳೂರು ಜಿಲ್ಲೆಯ ಸೂಡಸಂದ್ರ ಹಾಗೂ ಸಿದ್ಧಾಪುರಗಳು ಈ ಸಂಸ್ಕೃತಿಯ ಪ್ರಮುಖ ನೆಲೆಗಳಾಗಿವೆ. ಅಲ್ಲದೆ ಕರ್ನಾಟಕದ ಮಂಜ್ರಾ, ದೋಣಿ, ಕೃಷ್ಣ, ತುಂಗಾ, ಶಿಂಷಾ ಹಾಗೂ ಪೆನ್ನಾರ್ ನದಿ ಕೊಳ್ಳಗಳಲ್ಲಿ ಈ ಸಂಸ್ಕೃತಿಯ ಆಯುಧಾವಶೇಷಗಳ ನೆಲೆಗಳಿವೆ.[೩೩] ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯಲ್ಲಿ ನೀಳಚಕ್ಕೆಗಳು, ಹರೆಚಕ್ಕೆಗಳು, ಮೊನೆಗಳು, ಕೊರಗಗಳು, ಕೊರಯಾಳಿ, ಅರ್ಧಚಂದ್ರಾಕೃತಿಯ ಆಯುಧಗಳು ಪ್ರಮುಖವಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಎಸ್.ಜಿ. ರಾಮದಾಸರೆಡ್ಡಿ ಅವರು ೨೦೦೬ರಲ್ಲಿ ಚಳ್ಳಕೆರೆ ತಾಲೂಕಿನ ಯಾದಲಗಟ್ಟೆ ಗ್ರಾಮ ಪರಿಸರದಲ್ಲಿ ಅಂತ್ಯ ಹಳೆಶಿಲಾಯುಗದ ಚಕ್ಕೆ ತೆಗೆದ ಕಲ್ಲಿನ ಆಯುಧವನ್ನು ಪತ್ತೆಹಚ್ಚಿದ್ದಾರೆ.[೩೪] ಪ್ರಸ್ತುತ ಅಧ್ಯಯನಕ್ಷೇತ್ರ ಹೊಸದುರ್ಗ ತಾಲೂಕು ಪರಿಸರದಲ್ಲಿ ಅಂತ್ಯ ಹಳೆಶಿಲಾಯುಗ ಕಾಲದ ಯಾವುದೇ ಆಯುಧೋಪಕರಣ ದೊರೆತಿಲ್ಲ.

೪.೨. ಸೂಕ್ಷ್ಮ ಶಿಲಾಯುಗ

ಪ್ರಾಚೀನ ಮಾನವನ ಜಗತ್ತಿನಲ್ಲಿ ಸೂಕ್ಷ್ಮ ಶಿಲಾಯುಗ ಒಂದು ಪ್ರಮುಖವಾದ ಕಾಲಘಟ್ಟ. ಸೂಕ್ಷ್ಮ ಶಿಲಾಯುಗವು ಅಂತ್ಯ ಹಳೆಶಿಲಾಯುಗ ಹಾಗೂ ನೂತನ ಶಿಲಾಯುಗದ ನಡುವಿನ ಹಂತವಾಗಿದೆ. ಇದರ ಕಲ್ಲಿನ ರೂಪಗಳಲ್ಲಿ ಮಹತ್ವವಾದ ಬದಲಾವಣೆ ಕಂಡುಬಂದು ವಿವಿಧ ರೀತಿಯ ಜೀವ ಪರಿಸರ ವ್ಯವಸ್ಥೆಗೆ ಮಾನವನು ಹೊಂದಿಕೊಂಡ ಕಾಲವಿದು. ಈ ಅವಧಿಯ ಮಾನವನು ತನ್ನ ಜೀವನ ನಿರ್ವಹಣೆಗಾಗಿ ಹರಿತವುಳ್ಳ ಅತಿಸಣ್ಣ ನೀಳ ಆಲಗುಗಳನ್ನು ಬಳಸಿದನು. ಈ ಆಯುಧಗಳು ಸೂಕ್ಷ್ಮವಾದವುಗಳಾಗಿರುವುದರಿಂದ ಈ ಸಂಸ್ಕೃತಿಯನ್ನು ಸೂಕ್ಷ್ಮ ಶಿಲಾಯುಗವೆಂದು ಕರೆಯಲಾಗಿದೆ.[೩೫] ಸೂಕ್ಷ್ಮ ಶಿಲಾಯುಗವು ಇಂದಿಗೆ ಸುಮಾರು ೨,೫೦೦ ವರ್ಷಗಳಿಂದ ೧೦,೦೦೦ ವರ್ಷಗಳಷ್ಟು ಪೂರ್ವದಲ್ಲಿತ್ತೆಂದು ತಿಳಿದುಬಂದಿದೆ. ಭಾರತದಲ್ಲಿ ಎ.ಸಿ.ಎಲ್. ಕಾರ್ಲೈಲ್‌ರವರು ಸುಮಾರು ೧೮೬೭ರ ವೇಳೆಗೆ ಉತ್ತರಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ಹರಡಿಕೊಂಡಿರುವ ಕೈಮಾರ ಬೆಟ್ಟಗಳ ಸಾಲಿನಲ್ಲಿರುವ ಸಾಮೂಹಿಕ ಗುಹೆಗಳಲ್ಲಿ ಮೊದಲಬಾರಿಗೆ ಸೂಕ್ಷ್ಮ ಶಿಲಾಯುಧಗಳನ್ನು ಶೋಧಿಸಿದರು.[೩೬]

ಕರ್ನಾಟಕದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳು ೧೯೩೯ರ ವೇಳೆಗೆ ಶೋಧಗೊಂಡಿದ್ದರೂ ಕೂಡ ಆಯುಧಗಳ ವೈಜ್ಞಾನಿಕ ಅಧ್ಯಯನ ೧೯೫೬ರಲ್ಲಿಯೇ ಆರಂಭ ಮಾಡಲಾಯಿತು.[೭] ಸಂಕಾಲಿಯಾ ಅವರು ೧೯೪೬ರಲ್ಲಿ ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನಲ್ಲಿ ನಡೆಸಿದ ಉತ್ಖನನದಿಂದ ಈ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಗುರುತಿಸಿದರು.[೮] ಕರ್ನಾಟಕದಲ್ಲಿ ಅನೇಕ ಸೂಕ್ಷ್ಮ ಶಿಲಾಯುಗದ ನೆಲೆಗಳು ಬೆಳಕಿಗೆ ಬಂದಿವೆ. ಜಾಲಹಳ್ಳಿ ಹಾಗೂ ಕಿಬ್ಬನಹಳ್ಳಿಗಳಲ್ಲಿ ಬೆಣಚುಕಲ್ಲಿನ ಸೂಕ್ಷ್ಮ ಶಿಲಾಯುಧಗಳು ದೊರೆತಿವೆ. ನಂತರ ಕಾರಂಜಾಕೊಳ್ಳದ ಬೇಗಂಪುರ, ಮಂಜರಾಕೊಳ್ಳದ ಎಕಲಾರ ಮತ್ತು ವನಮಾವುರಪಲ್ಲಿ, ಭೀಮಾಕೊಳ್ಳದ ಹಿಂಗಣಿ, ಡೋಣಿ ನಂದಿಕೊಳ್ಳದ ಇಂಗಳೇಶ್ವರ, ಮಲಪ್ರಭಾ ಕೊಳ್ಳದ ತಮ್ಮಿನಹಾಳ್ ಮತ್ತು ಮರಳಬಾವಿ, ಕೃಷ್ಣಕೊಳ್ಳ, ತುಂಗಾಭದ್ರಾ ಕೊಳ್ಳದ ಸಂಗನಕಲ್ಲು, ಹೊಳೆ ಅರಳಹಳ್ಳ, ತಕ್ಕನಹಳ್ಳಿ, ತುಂಗಾಕೊಳ್ಳದ ಶೃಂಗೇರಿ ಭದ್ರಾಕೊಳ್ಳದ ನಿಂಬೆಗೊಂದಿ, ಮತ್ತಿಗಟ್ಟ, ಗೂಂದಿ, ಹೇಮಾವತಿ ಕೊಳ್ಳದ ಕಟ್ಟೆಬೆಳಗಲಿ, ಜೋಳನಹಳ್ಳಿ, ಸೆಟ್ಟಿನಹಳ್ಳಿ, ಪೆನ್ನಾರಕೊಳ್ಳದ ದೊಡ್ಡಗುಣಿ, ನಾಗರಪುರ, ಕರಾವಳಿಯ ಬೆಲೆಕೇರಿ, ಮೆಣಿ ಇವು ಗಮನಿಸಬೇಕಾದ ಸೂಕ್ಷ್ಮ ಶಿಲಾಯುಗದ ನಿವೇಶನಗಳಾಗಿವೆ.[೯]

ತಮ್ಮ ಪೂರ್ವಿಕರಿಗಿಂತಲೂ ಸೂಕ್ಷ್ಮ ಶಿಲಾಯುಗದ ಜನರು ಹೆಚ್ಚು ಸಂಖ್ಯೆಯ ನಿವೇಶನಗಳಲ್ಲಿ ವಾಸಿಸುತ್ತಿದ್ದರು. ಇವು ವಿವಿಧ ಸನ್ನಿವೇಶಗಳು, ಪರಿಸರಗಳಲ್ಲಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಇವೆ. ಭಿನ್ನ ಭಿನ್ನ ಸಮತಟ್ಟಿನ ಮೇಲೆ ಎತ್ತರದ ಪ್ರಸ್ತಭೂಮಿಯ ಮೇಲೆ, ಬೆಟ್ಟಗಳ ಇಳುಕಲ್ಲಿನಲ್ಲಿ, ಬಯಲುಗಳಲ್ಲಿ, ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ, ನದಿದಡಗಳ ಮೇಲೆ, ಕೆರೆದಂಡೆಗಳ ಮೇಲೆ, ಸಮುದ್ರ ತೀರದಲ್ಲಿ, ವಿರಳ ಕಾಡುಗಳಲ್ಲಿ, ದಟ್ಟ ಅರಣ್ಯಗಳಲ್ಲಿ ಎಲ್ಲೆಡೆಗಳಲ್ಲಿಯೂ ಇವೆ. ಸೂಕ್ಷ್ಮ ಶಿಲಾಯುಗದ ಜನರು ತಯಾರಿಸಿದ ಶಿಲಾ ಉಪಕರಣಗಳು ತುಲನಾತ್ಮಕವಾಗಿ ಗಾತ್ರದಲ್ಲಿ ಅತಿ ಸಣ್ಣ, ಇದು ಈ ಸಂಸ್ಕೃತಿ ಉಪಕರಣಗಳ ವಿಶಿಷ್ಟ ಲಕ್ಷಣ. ಆದ್ದರಿಂದಲೇ ಈ ಸಾಂಸ್ಕೃತಿಕ ಹಂತವನ್ನು ಸೂಕ್ಷ್ಮ ಶಿಲಾಯುಗವೆಂದು ಹೆಸರಿಸಲಾಗಿದೆ. ಈ ಹಂತದಲ್ಲಿ ಎರಡು ಬಗೆಯ ಉದ್ಯಮಗಳು ಇದ್ದವು. ಒಂದರಲ್ಲಿಯ ಸೂಕ್ಷ್ಮ ಶಿಲಾ ಉಪಕರಣಗಳು ತ್ರಿಕೋಣ, ಸಮಾನಾಂತರ ದ್ವಿಬಾಹುಗಳುಳ್ಳ ಚತುರ್ಭುಜ ಅರ್ಧಚಂದ್ರಾಕೃತಿ ಮೊದಲಾದ ಯಾವುದೇ ನಿರ್ದಿಷ್ಟ ರೇಖಾಕೃತಿಗಳಲ್ಲಿರುವುದಿಲ್ಲ. ಇನ್ನೊಂದರಲ್ಲಿ ಸಾಮಾನ್ಯವಾಗಿ ತ್ರಿಕೋನ ಮೊದಲಾದ ನಿರ್ದಿಷ್ಟ ರೇಖಾಕೃತಿಗಳಲ್ಲಿಯ ಉಪಕರಣಗಳು ಅಲ್ಪ ಪ್ರಮಾಣದಲ್ಲಿ ಯಾದರೂ ಇರುತ್ತವೆ. ಮೊದಲನೆಯ ಬಗೆಯದರಲ್ಲಿ ಸಮಾನಾಂತರ ಅಂಚುಗಳನ್ನುಳ್ಳ ಅಲಗುಗಳು, ಚಿಕ್ಕ ಅಲಗುಗಳು, ಬಾಗಿದ ಅಲಗುಗಳು, ಸಣ್ಣಚೂರಿಯ ತರಹದ ಅಲಗುಗಳು, ಒಮ್ಮೊಗದ ಮತ್ತು ಇಮ್ಮೊಗದ ಮೊನಚುಗಳು, ಸಣ್ಣ ಬೈರಿಗೆಗಳು, ತುಂಬ ಅಪರೂಪವಾಗಿ ಚಿಕ್ಕ ಆಕಾರದ ಮಚ್ಚುಗಳೂ ಇವೆ. ತ್ರಿಕೋನಾಕೃತಿಯಲ್ಲಿ ಇದ್ದವುಗಳು ಅಸಮಭುಜ ತ್ರಿಕೋನದಲ್ಲಿ, ಸಮಭುಜ ತ್ರಿಕೋನದಲ್ಲಿ ಸಮದ್ವಿಭುಜ ತ್ರಿಕೋನದಲ್ಲಿ ಇವೆ. ಕೆಲವು ವಿಷಮ ಚತುರಸ್ರಾಕಾರದಲ್ಲಿ ಕೆಲವು ವಿಷಮಕೋನಗಳ ವಜ್ರಾಕೃತಿ ಕೆಲವು ಅರ್ಧ ಚಂದ್ರಾಕೃತಿಯಲ್ಲಿ ಇವೆ.[೧೦]

ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಜನ ಸ್ವಲ್ಪಮಟ್ಟಿಗೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿರುವುದು ಕಂಡುಬರುತ್ತದೆ. ಈ ಹಂತದ ಮನುಷ್ಯನು ತಾತ್ಕಾಲಿಕವಾಗಿ ನೆಲವನ್ನು

ಒಡಿದು ಗಟ್ಟಿಮಾಡಿ ವೃತ್ತಾಕಾರದ ಗುಡಿಸಲುಗಳನ್ನು ನಿರ್ಮಾಣ ಮಾಡಿಕೊಂಡು ವಾಸಿಸುತ್ತಿದ್ದರು. ಈ ಸಂಸ್ಕೃತಿಯ ಪ್ರಮುಖ ಬೆಳವಣಿಗೆಯೆಂದರೆ ಪಶುಸಂಗೋಪನೆಯಲ್ಲದೆ, ಕಾಳುಕಡ್ಡಿಗಳ ಬೇಸಾಯ ಮಾಡುವ ಪದ್ಧತಿಯನ್ನು ಅಭಿವೃದ್ಧಿಪಡಿಸಿಕೊಂಡಿದ್ದರು.[೪೧] ಈ ಸಂಸ್ಕೃತಿಯ ಜನರು ಹದ ಮಾಡಿದ ಕಲಸುಮಣ್ಣಿನಲ್ಲಿ ಕೆಲವು ಪ್ರಕಾರದ ಪಾತ್ರೆಗಳನ್ನು ಮಾಡಿ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಮಸಕು ಹಳದಿ ಹಾಗೂ ಕೆಮ್ಮಣ್ಣು ಬಣ್ಣದ ಈ ಪಾತ್ರೆಗಳನ್ನು ದಬ್ಬಣದಂತಹ ಕಡ್ಡಿಯಿಂದ ಇಲ್ಲವೆ ಎಲುಬಿನಂತಹ ಆಯುಧದಿಂದ ಅರ್ಧಗೋಲಾಕಾರದ ಬಟ್ಟಲುಗಳ ಹೊರಮೈಯಲ್ಲಿ ವಿವಿಧ ವಿನ್ಯಾಸದ ಅಲಂಕಾರಗಳನ್ನು ಮಾಡುತ್ತಿದ್ದರು. ಪಾತ್ರೆಗಳನ್ನು ಒಣಗಿಸಲು ಹೆಣೆದ ಚಾಪೆಯ ಮೇಲೆ ಹಾಕುತ್ತಿದ್ದಾರೆಂದು ಪಾತ್ರೆಗಳ ಹೊರ ಮೈಯಲ್ಲಿ ಹೆಣದ ಚಾಪೆಯ ಗುರುತುಗಳಿರುವುದು ಕಂಡುಬರುತ್ತದೆ. ಗಳಗ ಇಲ್ಲವೆ ಈಚಲಗರಿಗಳಿಂದ ಚಾಪೆಯನ್ನು ಹೆಣೆಯುವ ಕುಶಲಕಲೆಯನ್ನು ತಿಳಿದಿದ್ದರು. ಈ ಸಂಸ್ಕೃತಿಯ ಜನರು ವ್ಯವಸ್ಥಿತವಾಗಿ ಶವಸಂಸ್ಕಾರ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಎಲುಬುಗಳಿಂದ ಅಲಂಕಾರಿಕಾ ಮಣಿಗಳನ್ನು ತಯಾರಿಸುತ್ತಿದ್ದರು. ಅಂದರೆ ಈ ವೇಳೆಗೆ ಮಣಿ ಮತ್ತು ಎಲುಬಿನ ಕಿವಿಯೋಲೆಗಳನ್ನು ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಈ ಸಂಸ್ಕೃತಿಯ ವೇಳೆಗಾಗಲೆ ಗವಿವರ್ಣ ಚಿತ್ರಗಳು ಅಭಿವೃದ್ಧಿಯಾಗಿದ್ದವು.[೪೨]

ಚಿತ್ರದುರ್ಗ ಜಿಲ್ಲೆಯಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದಿವೆ. ಇಡೀ ಜಿಲ್ಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಮೊಟ್ಟಮೊದಲ ಬಾರಿಗೆ ಬೆಳಕಿಗೆ ಬಂದಿದ್ದು, ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ ಉತ್ಖನನದಲ್ಲಿ ಎಂ.ಎಚ್. ಕೃಷ್ಣ ಅವರು ೧೯೪೦ರಲ್ಲಿ ಬ್ರಹ್ಮಗಿರಿಯನ್ನು ವೈಜ್ಞಾನಿಕವಾಗಿ ಸರ್ವೇಕ್ಷಣೆ ಮಾಡಿ, ೧೯೪೨ರಲ್ಲಿ ಉತ್ಖನನ ಮಾಡಿ ಇದರಲ್ಲಿ ಸ್ತರವಿಂಗಡಣೆಯ ೫ನೇ ಪದರಿನಲ್ಲಿ 'ಸೂಕ್ಷ್ಮ ಶಿಲಾಯುಗ ಸಂಸ್ಕೃತಿ'ಯನ್ನು ಗುರುತಿಸಿದರು.[೪೩] ಈ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಗುರುತುಗಳು ಬ್ರಹ್ಮಗಿರಿ ಸಮೀಪದ 'ರೊಪ್ಪ' ಎಂಬ ಗ್ರಾಮದ ಹತ್ತಿರ ತೋಡಿದ ಗುಂಡಿಯಲ್ಲಿ ಸ್ಪಷ್ಟವಾಗಿ ಕಂಡುಬಂದುದರಿಂದ ಈ ಸಂಸ್ಕೃತಿಗೆ 'ರೊಪ್ಪಸಂಸ್ಕೃತಿ' ಎಂದು ಹೆಸರಿಟ್ಟರು.[೪೪] ಅಲ್ಲದೆ ೧೯೪೭–೪೮ರಲ್ಲಿ ಸರ್ ಮಾರ್ಟಿಮರ್ ವೀಲ್ಹರ್ ಅವರು ಬ್ರಹ್ಮಗಿರಿಯಲ್ಲಿ ಕೈಗೊಂಡ ವೈಜ್ಞಾನಿಕ ಉತ್ಖನನದಲ್ಲಿಯೂ ಅನೇಕ ಬಗೆಯ ಸೂಕ್ಷ್ಮ ಶಿಲಾಯುಧಗಳು ದೊರೆತವು.[೪೫] ಇಲ್ಲಿ ಜಾಸ್ಪರ್, ಅಗೇಟ್, ಕಾರ್ನೇಲಿಯನ್, ಕ್ರಿಸ್ಟಲ್ ಮೊದಲಾದ ಶಿಲೆಗಳನ್ನು ಬಳಸಿ ತಯಾರಿಸಿದ ಸೂಕ್ಷ್ಮ ಶಿಲಾಯುಧಗಳು ದೊರೆತಿವೆ. ಇವುಗಳಲ್ಲಿ ನೀಳಚಕ್ಕೆ, ಹರೆಯುವ ಚಕ್ಕೆ, ಮೊನೆ, ಕೊರೆಯುಳಿ, ಅರ್ಧಚಂದ್ರಾಕೃತಿ ಹಾಗೂ ದಬ್ಬಳದಂತಹ ಕಿರುಗಾತ್ರದ ಆಯುಧಗಳು ಆಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಬಹುಮುಖ್ಯ ನೆಲೆಯಾಗಿ ಬ್ರಹ್ಮಗಿರಿ ಕಂಡುಬರುತ್ತದೆ.[೪೬] ತರುವಾಯ ಜಯಣ್ಣ ಉಲ್ಲಾನಹಳ್ಳಿಯವರು ಮೊಳಕಾಲ್ಮೂರು ತಾಲೂಕಿನ ನುಂಕೆಮಲೆ, ಹಳೆಕೆರೆ, ಹಾನಗಲ್ಲು, ಪೂಜಾರಹಳ್ಳಿ ಮತ್ತು ಬೊಮ್ಮಕ್ಕನಹಳ್ಳಿಯಲ್ಲಿ ಅನೇಕ ಸೂಕ್ಷ್ಮ ಶಿಲಾಯುಧಗಳನ್ನು ಪತ್ತೆಹಚ್ಚಿದ್ದಾರೆ.[೪೭] ಈ ನೆಲೆಗಳಲ್ಲಿ ಬೆಣಚುಕಲ್ಲು, ಚರ್ಟ್, ಜಾಸ್ಪರ್ ಶಿಲೆಗಳಲ್ಲಿ ತಯಾರಿಸಿದ ಬ್ಲೇಡ್, ಬ್ಯೂರಿನ್, ಕೋರ್ ಆಯುಧಗಳನ್ನು ಸಂಗ್ರಹಿಸಿದ್ದಾರೆ. ಎಸ್.ಜಿ. ರಾಮದಾಸರೆಡ್ಡಿ

ಅವರು ಚಳ್ಳಕೆರೆ ತಾಲೂಕಿನ ಯಾದಲಗಟ್ಟೆ, ಬೊಮ್ಮನಕುಂಟೆ, ಪುರ್ಲಹಳ್ಳಿ, ಮಹದೇವಪುರ, ದೊಡ್ಡೇರಿ ಮತ್ತು ಕಾಲುವೆಹಳ್ಳಿ, ಹಿರಿಯೂರು ತಾಲೂಕಿನ ಕಂದೀಕೆರೆ ಮತ್ತು ಎಂ.ಡಿ. ಕೋಟೆ, ಚಿತ್ರದುರ್ಗ ತಾಲೂಕಿನ ಚಿಕ್ಕೇನಹಳ್ಳಿ ಪ್ರದೇಶಗಳಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳನ್ನು ಸಂಗ್ರಹಿಸಿದ್ದಾರೆ.[೮೮] ಈ ನೆಲೆಗಳಲ್ಲಿ ಕ್ವಾರ್ಟ್ಜ್, ಕ್ವಾರ್ಟ್‌ಜೈಟ್, ಅಗೇಟ್, ಜಾಸ್ಪರ್, ಬೆಣಚುಕಲ್ಲು, ಶಿಲೆಗಳಿಂದ ತಯಾರಿಸಿದ ಕೋರ್, ಬ್ಲೇಡು, ಫ್ಲೇಕ್, ಪಾಯಿಂಟ್, ಕ್ರೆಸೆಂಟ್, ಬೋರರ್, ಸ್ಕ್ರೇಪರ್ಸ್, ಮೊನೆಗಳು, ಚಕ್ಕೆ ಆಯುಧಗಳು ದೊರೆತಿವೆ.

ಪ್ರಸ್ತುತ ಅಧ್ಯಯನ ಕ್ಷೇತ್ರ ಹೊಸದುರ್ಗ ತಾಲೂಕು ಪರಿಸರದಲ್ಲಿ ಈ ಹಿಂದೆ ಯಾವುದೇ ಸೂಕ್ಷ್ಮ ಶಿಲಾಯುಗದ ನೆಲೆ ಬೆಳಕಿಗೆ ಬಂದಿರಲಿಲ್ಲ. ಪ್ರಸ್ತುತ ಅಧ್ಯಯನ ನಿಮಿತ್ತ ಕ್ಷೇತ್ರಕಾರ್ಯದಲ್ಲಿ ಜಾನಕಲ್ಲು ಮತ್ತು ಲಂಬಾಣಿಹಟ್ಟಿ ಗ್ರಾಮಗಳ ಪರಿಸರಗಳಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳನ್ನು ಪತ್ತೆ ಹಚ್ಚಲಾಗಿದ್ದು ಅವುಗಳನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಜಾನಕಲ್ಲು : ಹೊಸದುರ್ಗ ತಾಳ್ಯ ರಸ್ತೆಯಲ್ಲಿ ಹೊಸದುರ್ಗದಿಂದ ಸು ೧೫ ಕಿ.ಮೀ. ದೂರದಲ್ಲಿ ಜಾನಕಲ್ಲು ಗ್ರಾಮವಿದೆ. ಪ್ರಾಕ್ಚಾರಿತ್ರಿಕವಾಗಿ ಅತ್ಯಂತ ಹೆಚ್ಚು ಮಹತ್ವ ಪಡೆದಿರುವ ಜಾನಕಲ್ಲು ಗ್ರಾಮದ ಶಂಕರಲಿಂಗೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಚಿಕ್ಕಬೆಟ್ಟದಲ್ಲಿ ಕೋರ್ ಹಾಗೂ ಚಕ್ಕೆ ಆಯುಧಗಳು ದೊರೆತಿವೆ.

ಲಂಬಾಣಿಹಟ್ಟಿ : ಜಾನಕಲ್ಲಿನ ಸಮೀಪದಲ್ಲಿರುವ ಲಂಬಾಣಿಹಟ್ಟಿಯ ದಕ್ಷಿಣ ದಿಕ್ಕಿನ ಹೊಲಗಳಲ್ಲಿ ಸೂಕ್ಷ್ಮ ಶಿಲಾಯುಧಗಳು ದೊರೆತಿವೆ. ಚರ್ಟ್, ಅಗೇಟ್, ಜಾಸ್ಪರ್ ಮತ್ತು ಕೋರ್‌ನಿಂದ ತಯಾರಿಸಿದ ಸ್ಕ್ರೇಪರ್, ಬ್ಲೇಡ್ ಹಾಗೂ ಫ್ಲೇಕ್‌ಗಳು ಕಂಡುಬಂದಿವೆ.

ಜಾನಕಲ್ಲು ಹಾಗೂ ಲಂಬಾಣಿಹಟ್ಟಿ ಗ್ರಾಮಗಳು ಅತ್ಯಂತ ಸನಿಹದಲ್ಲಿ ಇದ್ದು ಈ ಹಿಂದೆ ಗಮನಿಸಿದಂತೆ ಜಾನಕಲ್ಲಿನಲ್ಲಿ ಆದಿ ಹಳೆಶಿಲಾಯುಧಗಳು, ಲಂಬಾಣಿಹಟ್ಟಿಯಲ್ಲಿ ಮಧ್ಯಹಳೆ ಶಿಲಾಯುಗದ ಆಯುಧ ದೊರೆತಿದ್ದು ಈ ಪ್ರಾಗೈತಿಹಾಸಿಕ ಸಾಂಸ್ಕೃತಿಕ ಪರಂಪರೆ ಹಾಗೆಯೇ ಮುಂದುವರೆದು ಸೂಕ್ಷ್ಮಶಿಲಾಯುಗದ ಕುರುಹುಗಳು ಯಥೇಚ್ಛವಾಗಿ ದೊರೆತಿರುವುದನ್ನು ಕಾಣಬಹುದು.

ಒಟ್ಟಾರೆ ಅಲೆಮಾರಿಯಾಗಿದ್ದ ಮನುಷ್ಯ 'ಸೂಕ್ಷ್ಮ ಶಿಲಾಯುಗ ಸಂಸ್ಕೃತಿ'ಯ ಕಾಲಘಟ್ಟದಲ್ಲಿ ತಾತ್ಕಾಲಿಕವಾಗಿ ನೆಲೆನಿಂತು ಪ್ರಾಣಿಸಾಕಣಿಕೆಯ ಜೊತೆಗೆ ಕೃಷಿಯನ್ನು ಅವಲಂಬಿಸಿ ಜೀವನ ಆರಂಭಿಸಿದನು. ಪರಸ್ಪರ ತಿಳುವಳಿಕೆಯಿಂದ ವಿವಿಧ ಕಸಬುಗಳನ್ನು ತಮ್ಮಲ್ಲಿ ಹಂಚಿಕೊಂಡು ಒಂದು ವ್ಯವಸ್ಥಿತ ಸಮಾಜವನ್ನು ರಚನೆ ಮಾಡುತ್ತ ದಾಪುಗಾಲು ಹಾಕಿದ್ದು ಈ ಸಂಸ್ಕೃತಿಯ ವೈಶಿಷ್ಟ್ಯ. ಹಿಂದಿನ ಸಂಸ್ಕೃತಿಯ ಮೂರು ಹಂತಗಳಿಗೆ ಹೋಲಿಸಿದರೆ ಈ ಯುಗವನ್ನು ಸ್ಥಿತ್ಯಂತರ ಸಂಸ್ಕೃತಿಯಂತಲೂ ಕರೆಯಲಾಗಿದೆ. ಕೊನೆಯಲ್ಲಿ ಈ ಸಂಸ್ಕೃತಿಯು ನೂತನ ಶಿಲಾಯುಗ ಸಂಸ್ಕೃತಿಯೊಂದಿಗೆ ಮುಂದುವರೆದಿರುವುದು ಕಂಡುಬರುತ್ತದೆ.

೪.೩. ನೂತನ ಶಿಲಾಯುಗ

ಗ್ರೀಕ್ ಭಾಷೆಯಲ್ಲಿ ನಿಯೋ ಎಂದರೆ ನವೀನ/ಹೊಸದು, ಲಿತಿಕ್ ಎಂದರೆ ಸ್ಟೋನ್ ಎಂಬ ಅರ್ಥವಿದೆ.[೮೯] ಮನುಷ್ಯನು ಈ ಹಂತದಲ್ಲಿ ಸ್ವಲ್ಪಮಟ್ಟಿಗೆ ಎಲ್ಲಾ ಕ್ಷೇತ್ರಗಳಲ್ಲಿ ಹೊಸ

ಆವಿಷ್ಕಾರವನ್ನು ನಡೆಸಿದನು. ಟ್ರಾಪ್‌ಡೈಕ್ ಶಿಲೆಯಿಂದ ಉಜ್ಜಿ ನಯಗೊಳಿಸಿದ ಕೈಗೊಡಲಿ (Polished Stone Axe) ಕೈಬಾಚಿ ಹಾಗೂ ವಿವಿಧ ಬಗೆಯ ಆಯುಧಗಳನ್ನು ತಯಾರಿಸಿದನು.[೫೦] ಅಲೆಮಾರಿಯಾಗಿದ್ದ ಮನುಷ್ಯ ಈ ಅವಧಿಯಲ್ಲಿ ಹೊಳೆ ಹಳ್ಳಗಳ ದಂಡೆಯ ಮೇಲಿನ ಫಲವತ್ತಾದ ಜಮೀನುಗಳ ಹತ್ತಿರ ನೆಲೆಯೂರಿ ಜೀವನ ಸಾಗಿಸುವುದು, ಕೃಷಿಯನ್ನು ಅವಲಂಬಿಸುವುದು, ಜೊತೆಗೆ ಸೂಕ್ಷ್ಮ ಶಿಲಾಯುಗದ ಹಂತದಲ್ಲಿ ಈಗಾಗಲೇ ಪ್ರಾರಂಭವಾಗಿದ್ದ ಕುರಿ, ಮೇಕೆ, ಎತ್ತು ಮತ್ತು ದನಗಳನ್ನು ಸಾಕುವುದನ್ನು ಕಲಿತುಕೊಂಡನು.[೫೧] ಸಮಕಾಲೀನ ಇತರ ಜನರೊಂದಿಗೆ ಸಂಪರ್ಕವನ್ನು ಪಡೆದುಕೊಂಡು, ಆರಂಭಿಕ ಹಂತದ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆಗಳು, ಗವಿವರ್ಣ ಚಿತ್ರಗಳು, ಕಲ್ಲಾಸರೆ ರೇಖಾಚಿತ್ರಗಳು, ಮಣಿಗಳು, ಬಳೆಗಳು ಮುಂತಾದ ಅಲಂಕಾರಿಕೆಗಳನ್ನು ಹಾಗೂ ವ್ಯವಸ್ಥಿತವಾದ ಶವಸಂಸ್ಕಾರ ಪದ್ಧತಿಗಳನ್ನು ರೂಪಿಸಿಕೊಂಡು ನಾಗರಿಕ ಜೀವನಕ್ಕೆ ಕಾಲಿರಿಸಿದ್ದರಿಂದ ಮತ್ತು ಶಿಲಾಯುಧಗಳನ್ನು ಸುಧಾರಿಸಿದ್ದರಿಂದ ಈ ಯುಗವನ್ನು ನೂತನ ಅಥವಾ ನವಶಿಲಾಯುಗ (Neolithic)ವೆಂದು ಕರೆಯಲಾಗಿದೆ.[೫೨] ಇ.ಜಿ. ಚೈಲ್ಡ್ ಅವರು ಮಾನವನ ಬದಲಾವಣೆಯ ಹಿಡಿತದ ಸ್ಥಾಪನೆಯನ್ನು 'ನೂತನ ಶಿಲಾಯುಗದ ಕ್ರಾಂತಿ' ಎಂದಿದ್ದಾರೆ.[೫೩] ವಿ.ಡಿ. ಕೃಷ್ಣಸ್ವಾಮಿಯವರು ನೂತನ ಶಿಲಾಯುಗ ಸಂಸ್ಕೃತಿಯನ್ನು ನಾಲ್ಕು ಹಂತಗಳಲ್ಲಿ ವಿಭಾಗಿಸಿದ್ದಾರೆ.[೫೪]

೧. ಆಹಾರ ಉತ್ಪಾದನೆ, ಸಸ್ಯ ಮತ್ತು ಪ್ರಾಣಿಗಳನ್ನು ಪಳಗಿಸಿಕೊಂಡು ಸ್ಥಿರವಾಸದ ಮೂಲಕ ಹಳ್ಳಿಯ ಜೀವನದ ಹಂತ.

೨. ಎರಡನೇ ಹಂತದಲ್ಲಿ ಬುದ್ಧಿ ಬೆಳವಣಿಗೆಯಾಗಿ ಮಾನವ ಮಡಿಕೆ ತಯಾರಿಸಿದ ಹಂತ.

೩. ಮೂರನೇ ಮತ್ತು ಕೊನೆಯ ಹಂತದಲ್ಲಿ ಮಾನವ ಲೋಹಗಳ ಬಳಕೆಯನ್ನು ಆರಂಭಿಸಿದ ಹಂತ. ನೂತನ ಶಿಲಾಯುಗದ ಬಗ್ಗೆ ಅನೇಕ ಸಂಶೋಧನೆಗಳು ನಡೆದಿದ್ದರೂ, ತಾಮ್ರದ ಬಳಕೆ ಕಂಡುಬಂದರೂ ತಾಮ್ರ ಶಿಲಾಯುಗದ ಘಟ್ಟವನ್ನು ಮತ್ತು ನವಶಿಲಾಯುಗದ ಘಟ್ಟವನ್ನು ಸ್ಪಷ್ಟವಾಗಿ ಬೇರ್ಪಡಿಸಲಾಗಿಲ್ಲ. ಆದ್ದರಿಂದ ಈ ಘಟ್ಟಗಳಿಗೆ ನವಶಿಲಾ–ತಾಮ್ರ ಶಿಲಾಯುಗ ಎಂದು ಕರೆಯುವುದು ರೂಢಿಯಲ್ಲಿದೆ.[೫೫]

ಭಾರತದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯನ್ನು ಆರು ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ಗುರುತಿಸಲಾಗಿದೆ.[೫೬] ಅವುಗಳೆಂದರೆ:–

೧. **ಉತ್ತರ ಭಾರತದ ಪ್ರದೇಶ** (ಕಣಿವೆಯನ್ನೊಳಗೊಂಡಂತೆ).

೨. **ವಿಂಧ್ಯಾ ಪ್ರದೇಶ** (ಬೇತಾನ್ ಕಣಿವೆ ಮತ್ತು ವಿಂಧ್ಯಾ ಪ್ರಸ್ಥಭೂಮಿಯನ್ನೊಳಗೊಂಡಂತೆ).

೩. **ಮಧ್ಯ ಪೂರ್ವ ಪ್ರದೇಶ** (ಉತ್ತರ ಬಿಹಾರವನ್ನೊಳಗೊಂಡಂತೆ).

೪. **ಈಶಾನ್ಯ ಭಾಗ** (ಅಸ್ಸಾಂ ಮತ್ತು ಹಿಮಾಲಯ ಪ್ರದೇಶಗಳನ್ನೊಳಗೊಂಡಂತೆ).

೫. **ಪೂರ್ವಭಾಗ** (ಬೇಲಾನ್, ಬಿಹಾರ್ ಮತ್ತು ಒರಿಸ್ಸಾ ಪ್ರದೇಶಗಳನ್ನೊಳಗೊಂಡಂತೆ).

೬. **ದಕ್ಷಿಣ ಪ್ರದೇಶ** (ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಪ್ರದೇಶಗಳನ್ನೊಳಗೊಂಡಂತೆ).

೧. **ಉತ್ತರ ಭಾರತದ ಪ್ರದೇಶ** : ಈ ಪ್ರದೇಶವು ಮುಖ್ಯವಾಗಿ ಕಾಶ್ಮೀರ ಕಣಿವೆಯನ್ನು ಕೇಂದ್ರೀಕರಿಸಿಕೊಂಡಿತ್ತು. ೧೮೬೦ರಲ್ಲಿ ಲಿಮೆಸೂರಿಯರ್ ಅವರು 'ತೋಸ್ಸೆ' ನದಿ ದಂಡೆಯಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳನ್ನು ಗುರುತಿಸಿದರು.[೧೭] ಇಲ್ಲಿನ ಕಾರೆವಾಸ್ ಪ್ರಾಂತ್ಯದಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ೩೬ ನೆಲೆಗಳನ್ನು ಅನ್ವೇಷಿಸಲಾಗಿದೆ.[೧೮] ಇವುಗಳಲ್ಲಿ ಬುರ್ಜಹಾಂ ಪ್ರದೇಶವನ್ನು ಪ್ರಾರಂಭದಲ್ಲಿ ಡಿ. ಟೆರ್ರಾ ಮತ್ತು ಪೀಟರ್ಸನ್ ನಂತರ ೧೯೬೦–೭೧ರ ಅವಧಿಯಲ್ಲಿ ಖುರೂನ್ಸಿ ಉತ್ಖನನ ಮಾಡಿದ್ದಾರೆ. ಗುಫ್‌ಕ್ರಾಲ್ ನಿವೇಶನವನ್ನು ೧೯೮೧ರಲ್ಲಿ ಎ.ಕೆ. ಶರ್ಮ ಅವರು ಉತ್ಖನನ ಮಾಡಿದ್ದಾರೆ.[೧೯]

೨. **ವಿಂಧ್ಯಾ ಪ್ರದೇಶ** : ಈ ಪ್ರದೇಶವು ಬೇಲಾನ್ ಕಣಿವೆ ಮತ್ತು ವಿಂಧ್ಯಾ ಪ್ರಸ್ಥಭೂಮಿಯನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಮುಖ್ಯವಾಗಿ ೩ ನಿವೇಶನಗಳನ್ನು/ನೆಲೆಗಳನ್ನು ಉತ್ಖನನ ಮಾಡಲಾಗಿದೆ. ಚೊಪಾಣಿ ಮಾಂಡೋ, ಕೊಲ್ಡಿಹವ ಮತ್ತು ಮಹಗಡ್ ಇವೇ ಆ ನಿವೇಶನಗಳು.[೨೦] ಹಳೇಶಿಲಾಯುಗ, ಪ್ರಾರಂಭಿಕ ಸೂಕ್ಷ್ಮ ಶಿಲಾಯುಗ ಮತ್ತು ಪ್ರಾರಂಭಿಕ ನವಶಿಲಾಯುಗದ ಕುರುಹುಗಳು ಇಲ್ಲಿ ದೊರೆತಿವೆ.[೨೧]

೩. **ಮಧ್ಯ ಪೂರ್ವ ಪ್ರದೇಶ** : ಬಿಹಾರ್ ರಾಜ್ಯದ ಉತ್ತರ ಭಾಗದಲ್ಲಿ ಕಂಡುಬರುವ ಈ ಪ್ರದೇಶದಲ್ಲಿ ಎರಡು ನಿವೇಶನಗಳನ್ನು ಉತ್ಖನನ ಮಾಡಲಾಗಿದೆ. ಅವುಗಳೆಂದರೆ ಚಿರಾಂಡ್ ಮತ್ತು ಚೆಚ್ಚರ್.[೨೨] ಈ ನಿವೇಶನಗಳ ಉತ್ಖನನಗಳಿಂದ ನೂತನ ಶಿಲಾಯುಗ, ತಾಮ್ರ ಶಿಲಾಯುಗ ಮತ್ತು ಪ್ರಾರಂಭಿಕ ಐತಿಹಾಸಿಕ ಕಾಲವನ್ನು ಗುರುತಿಸಲಾಗಿದೆ.[೨೩]

೪. **ಈಶಾನ್ಯ ಭಾಗ** : ಅಸ್ಸಾಮಿನ ಉತ್ತರ ಭಾಗದ ಕಚಾರ್ ಬೆಟ್ಟ ಪ್ರದೇಶದಲ್ಲಿನ ದಾವೋಜಲಿ ಹಾಡಿಂಗ್ ಶಿಲ್ಲಾಂಗ್ ಪ್ರಸ್ಥಭೂಮಿಯ ಸರುತರು, ಮರಕ್ಡೋಲ ಮತ್ತು ಮೇಘಾಲಯದ ಗಾರೋ ಬೆಟ್ಟ ಪ್ರದೇಶದಲ್ಲಿನ ಸೆಲ್‌ಬಲ್ಗಿರಿ ಇತ್ಯಾದಿ ಪ್ರದೇಶಗಳನ್ನು ಉತ್ಖನನ ಮಾಡಲಾಗಿದೆ.[೨೪]

೫. **ಪೂರ್ವಭಾಗ** : ಈ ಪ್ರದೇಶವು ಬೆಂಗಾಲ್, ಬಿಹಾರ್ ಮತ್ತು ಒರಿಸ್ಸಾದ ಪ್ರದೇಶಗಳನ್ನು ಒಳಗೊಂಡಿದೆ. ಈ ಭಾಗದಲ್ಲಿ ನೂತನ ಶಿಲಾಯುಗದ ಮೊದಲ ಕುರುಹುಗಳನ್ನು ಕ್ಯಾಪ್ಟನ್ ಬೀಚಿಂಗ್‌ನಲ್ಲಿ ೧೮೬೮ರಲ್ಲಿ ಬಿಹಾರದ ಸಿಂಗಭೂಮ್‌ನಲ್ಲಿ ಕಂಡುಹಿಡಿದರು. ಅಲ್ಲಿಂದ ಮುಂದೆ ಸಂತಾಂಪರ್ಗಣ, ಚಕ್ರಾಧರ ರಾಂಚಿ ಇತ್ಯಾದಿ ಪ್ರದೇಶಗಳಲ್ಲಿ ಇದರ ಅವಶೇಷಗಳನ್ನು ಕಂಡುಹಿಡಿಯಲಾಯಿತು.[೨೫] ಅವುಗಳಲ್ಲಿ ಮುಖ್ಯವಾದವುಗಳೆಂದರೆ ಒರಿಸ್ಸಾದ ಮಯೂರ್ ಭಂಜ್ ಜಿಲ್ಲೆಯ ಕುಚೈ ಮತ್ತು ಬಿಹಾರಿನ ಸಂಘಭೂಮಿ ಪ್ರದೇಶದಲ್ಲಿನ ಬರುದಿ ಇವು ಕ್ರಮವಾಗಿ ೧೯೬೭ ಮತ್ತು ೧೯೬೯ರಲ್ಲಿ ಉತ್ಖನನವಾಯಿತು.[೨೬]

೬. **ದಕ್ಷಿಣ ಭಾಗ** : ಈ ಪ್ರದೇಶದಲ್ಲಿ ದಕ್ಷಿಣ ಭಾರತದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಕಂಡುಬರುತ್ತವೆ. ಆಂಧ್ರಪ್ರದೇಶದ ಪಲವೊವ್, ಉತ್ನೂರ್, ನಾಗರ್ಜುನಕೊಂಡ ಮತ್ತು ರಾಮಪುರಂ ಪ್ರದೇಶಗಳಲ್ಲಿ, ಕರ್ನಾಟಕದ ಕೊಡೆಕಲ್, ತೆರೆದಾಳ್, ಮಸ್ಕಿ, ಪಿಕ್ಲಿಹಾಳ್,

ಹಳ್ಳೂರು, ತೆಕ್ಕಲಕೋಟ, ಕಪ್ಪಗಲ್, ಸಂಗನಕಲ್ಲು, ಬ್ರಹ್ಮಗಿರಿ, ಟೀ. ನರಸೀಪುರ ಮತ್ತು ಹೆಮ್ಮಿಗೆ ಪ್ರದೇಶಗಳಲ್ಲಿ, ತಮಿಳುನಾಡಿನ ಪೈಯಂಪಳ್ಳಿ ಮುಂತಾದ ಪ್ರದೇಶಗಳಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ದೊರೆತಿವೆ.[೬೭]

ಕರ್ನಾಟಕದಲ್ಲಿ ಮೊಟ್ಟ ಮೊದಲು ೧೮೭೨ರಲ್ಲಿ ಫ್ರೇಸರ್ ಅವರು ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲು ಬೆಟ್ಟಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಆಯುಧಗಳ ಉತ್ಪಾದನಾ ಕೇಂದ್ರವೊಂದನ್ನು ಶೋಧಿಸಿದರು.[೬೮] ೧೮೮೧–೧೮೮೬ರ ಅವಧಿಯಲ್ಲಿ ರಾಬರ್ಟ್ ಬ್ರೂಸ್‌ಫೂಟ್ ರವರು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ್ತು ಭೀರಮಂಗಲ, ಮೈಸೂರು ಜಿಲ್ಲೆಯ ಲಕ್ಷ್ಮಾಪುರ, ಟಿ.ನರಸೀಪುರ, ಮಂಡ್ಯ ಜಿಲ್ಲೆಯ ಫ್ರೆಂಚ್‌ಹಿಲ್ಸ್ ಇತ್ಯಾದಿ ಕಡೆಗಳಲ್ಲಿ ಈ ಸಂಸ್ಕೃತಿ ಕುರುಹುಗಳನ್ನು ಬೆಳಕಿಗೆ ತಂದರು.[೬೯] ಕೃಷ್ಣ ನದಿ ಬಲದಂಡೆ ಮೇಲಿನ ಅಲಸಂಗಿ (ಬಾಗಲಕೋಟೆ ಜಿಲ್ಲೆ), ಇಂಗಳಿಗಿ (ಬಾಗಲಕೋಟೆ ಜಿಲ್ಲೆ), ತೇರದಾಳ (ಬಿಜಾಪುರ ಜಿಲ್ಲೆ) ಮತ್ತು ಬೂದಿನಹಾಳ (ಗುಲ್ಬರ್ಗ ಜಿಲ್ಲೆ) ಇವೆಲ್ಲವುಗಳು ಈ ಸಂಸ್ಕೃತಿಯ ನೆಲೆಗಳಾಗಿವೆ. ಪಿಕ್ಲಿಹಾಳ ನೆಲೆಯಲ್ಲಿ ಈ ಸಂಸ್ಕೃತಿಯ ವಸತಿ ಹಾಗೂ ಬೂದಿದಿಬ್ಬಗಳು ದೊರೆತಿವೆ. ಮಸ್ಕಿಯಲ್ಲಿ ಉಜ್ಜಿ ನಯಗೊಳಿಸಿದ ಕೈಗೊಡಲಿಗಳು, ತಾಮ್ರ, ಮಣಿ ಹಾಗೂ ಮಡಿಕೆಗಳು ಕಂಡುಬಂದಿವೆ. ತೆಕ್ಕಲಕೋಟೆಯ ಉತ್ಖನನದಲ್ಲಿ ವಸತಿ ಅವಶೇಷಗಳು ವಿವಿಧ ಮಾದರಿಯ ಆಯುಧಗಳು ದೊರೆತಿವೆ.[೭೦]

ಚಿತ್ರದುರ್ಗ ಜಿಲ್ಲೆಯಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಮೊಳಕಾಲ್ಮೂರು ತಾಲೂಕಿನ 'ಬ್ರಹ್ಮಗಿರಿ'ಯಲ್ಲಿ ಎಂ.ಎಚ್. ಕೃಷ್ಣ ಅವರು ೧೯೪೨ರಲ್ಲಿ ಉತ್ಖನನ ಕೈಗೊಂಡು ಅದರಲ್ಲಿ ೪ನೇ ಪದರಿನಲ್ಲಿ 'ನೂತನ ಶಿಲಾಯುಗ ಸಂಸ್ಕೃತಿ'ಯನ್ನು ಗುರುತಿಸಿದರು.[೭೧] ನಂತರ ೧೯೪೭ರಲ್ಲಿ ಸರ್ ಮಾರ್ಟಿಮರ್ ವೀಲ್ಹರ್' ಅವರು ಕೈಗೊಂಡ ಬ್ರಹ್ಮಗಿರಿ ಉತ್ಖನನದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯನ್ನು 'ಕಲ್ಲಿನ ಕೈಕೊಡಲಿ ಸಂಸ್ಕೃತಿ' ಎಂದು ಕರೆದಿದ್ದಾರೆ.[೭೨] ಲಕ್ಷ್ಮಣ್ ತೆಲಗಾವಿ ಹಾಗೂ ಎಸ್.ವೈ. ಸೋಮಶೇಖರ್ ಅವರು ಚಿತ್ರದುರ್ಗ ತಾಲೂಕಿನ ಸಂಗೇನಹಳ್ಳಿ ಕೆರೆ ಪರಿಸರದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ನೂತನ ಶಿಲಾಯುಗಕ್ಕೆ ಸೇರಿದ ಕಲ್ಲಿನ ನಯಗೊಳಿಸಿದ ಕೊಡಲಿ, ಉಂಗುರಕಲ್ಲು, ಮಡಿಕೆ ಚೂರುಗಳು ಹಾಗೂ ಕೆರೆಯ ದಂಡೆಯ ಬಂಡೆಗಲ್ಲುಗಳ ಮೇಲಿರುವ ನೂರಾರು ರೇಖಾಚಿತ್ರಗಳನ್ನು ಬೆಳಕಿಗೆ ತಂದರು.[೭೩] ತಮಟಕಲ್ಲಿನಲ್ಲಿ ಎಸ್.ವೈ. ಸೋಮಶೇಖರ್ ಅವರು ನೂತನ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಕೊಡಲಿ, ಬೂದುಬಣ್ಣದ ಮಡಿಕೆಚೂರು ಹಾಗೂ ಕವಣೆಕಲ್ಲುಗಳನ್ನು ಸಂಗ್ರಹಿಸಿದ್ದಾರೆ. ಅದೇ ರೀತಿ ಇವರು ಬಿ.ಟಿ. ಚಾರುಲತ ಹಾಗೂ ಎಸ್. ನಾಗರಾಜಪ್ಪ ಅವರೊಂದಿಗಿನ ಜಂಪಣ್ಣನಾಯಕನ ಕೋಟೆ ಮತ್ತು ಕುರುಮರಡಿ ಕೆರೆಯ ಕ್ಷೇತ್ರಕಾರ್ಯದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕೈಗೊಡಲಿಗಳನ್ನು ಪತ್ತೆ ಹಚ್ಚಿದ್ದರು. ಬೆಳಗಟ್ಟ ಬಳಿ ನೂತನ ಶಿಲಾಯುಗದ ನೆಲೆಯನ್ನು ಎಸ್. ನಾಗರಾಜಪ್ಪ ಹಾಗೂ ಕೆ.ಎಸ್. ಶರತ್‌ಬಾಬು ಬೆಳಕಿಗೆ ತಂದಿದ್ದಾರೆ.[೭೪] ಬಾರ್ಲೆಗೊಂದಿಯಲ್ಲಿ ಜಿ.ಸಿ. ಚೌಲೇ ಮತ್ತು ಕೆ. ವೆಂಕಟೇಶ್ವರ ರಾವ್ ಅವರು ಅನೇಕ ಆಯುಧೋಪಕರಣಗಳನ್ನು ಪತ್ತೆಹಚ್ಚಿದರು.[೭೫] ಎನ್.ಎಸ್. ರಂಗರಾಜು

ಅವರು ಚಳ್ಳಕೆರೆ ತಾಲೂಕಿನ ಪರಶುರಾಮಪುರದಲ್ಲಿ ನೂತನ ಶಿಲಾಯುಧಗಳನ್ನು ಶೋಧಿಸಿದರು. ಮೊಳಕಾಲ್ಮೂರು ತಾಲೂಕಿನಲ್ಲಿ ಪ್ರಾಕ್ಚಾರಿತ್ರಿಕತೆಯನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಿರುವ ಜಯಣ್ಣ ಉಲ್ಲಾನಹಳ್ಳಿಯವರು ಸುಮಾರು ೧೨ ನೆಲೆಗಳಲ್ಲಿ 'ನೂತನ ಶಿಲಾಯುಗ ಸಂಸ್ಕೃತಿ'ಯನ್ನು ಗುರುತಿಸಿದ್ದಾರೆ.[೬೫] ಅವುಗಳೆಂದರೆ ಕೋನಸಾಗರ, ಕೆಳಗಿನಹಟ್ಟಿ, ಬಸಾಪುರ, ಬಾಂಡ್ರಾವಿ, ಬೊಮಕ್ಕನ ಹಳ್ಳಿ, ವಡೇರಹಳ್ಳಿ, ವೆಂಕಟಾಪುರ, ಸಂತೆಗುಡ್ಡ, ಹನುಮನಗುಡ್ಡ, ಹಳೆಕೆರೆ, ಹಾನಗಲ್ಲು ಹಾಗೂ ಹಿರೇಕೆರೆಹಳ್ಳಿ.[೬೬] ಎಸ್.ಜಿ. ರಾಮದಾಸರೆಡ್ಡಿಯವರು ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅಸಂಖ್ಯಾತ ನೆಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಬೆಳಕಿಗೆ ತಂದಿದ್ದಾರೆ. ಅವುಗಳಲ್ಲಿ ಚಳ್ಳಕೆರೆ ತಾಲೂಕಿನ ಕಾಲುವೆಹಳ್ಳಿ, ಲಿಂಗದಹಳ್ಳಿ ಬೆನಕನಹಳ್ಳಿ, ಹೊಸೂರು, ವಿಡುಪಲಕುಂಟೆ, ಮತ್ಸ್ಯ ಸಮುದ್ರ, ಹಿರೇಮಧುರೆ, ಕ್ಯಾತಗೊಂಡನಹಳ್ಳಿ, ದೊಡ್ಡಉಳ್ಳಾರ್ತಿ, ನನ್ನಿವಾಳ, ಪಿ.ಮಹದೇವಪುರ, ದೊಡ್ಡೇರಿ, ಪುರ್ಲಹಳ್ಳಿ, ರಾಮದುರ್ಗ, ಕರೀಕೆರೆ, ಜಾಜೂರು, ಯಾದಲಗಟ್ಟೆ ಹಿರಿಯೂರು ತಾಲೂಕಿನ ರಂಗನಾಥಪುರ, ಬಸಪ್ಪನಮಾಳಿಗೆ, ನಂದಿಹಳ್ಳಿ, ಹಳೆಯಳನಾಡು, ಕಂದಿಕೆರೆ, ಮೊಳಕಾಲ್ಮೂರು ತಾಲೂಕಿನ ಹಾನಗಲ್ಲು, ಪೂಜಾರಹಟ್ಟಿ ಮತ್ತು ಹಳೇಕೆರೆ ಸೇರಿದಂತೆ ಇನ್ನೂ ಅನೇಕ ಗ್ರಾಮಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ.[೬೭]

ಹೊಸದುರ್ಗ ತಾಲೂಕು ಪರಿಸರದಲ್ಲಿ ಈ ಹಿಂದೆ ಯಾವುದೇ ನೂತನ ಶಿಲಾಯುಗದ ನೆಲೆಗಳು ಬೆಳಕಿಗೆ ಬಂದಿರಲಿಲ್ಲ. ಪ್ರಸ್ತುತ ಅಧ್ಯಯನ ನಿಮಿತ್ತ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ದುಗ್ಗಾವರ, ತಣಿಗೆಕಲ್ಲು, ಕಿಟ್ಟದಾಳು, ಹಿಂಡೇದೇವರಹಟ್ಟಿ ಹಾಗೂ ಗರಗ ಗ್ರಾಮಗಳ ಪರಿಸರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳು ದೊರೆತಿದ್ದು ಅವುಗಳನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ದುಗ್ಗಾವರ : ತಾಳ್ಯ-ಹೊಸದುರ್ಗ ಮಾರ್ಗದಲ್ಲಿರುವ ದುಗ್ಗಾವರ ಗ್ರಾಮವು ಪ್ರಾಕ್ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವದ ಪ್ರದೇಶವಾಗಿದೆ. ದುಗ್ಗಾವರ ಗ್ರಾಮದ ಪೂರ್ವ ದಿಕ್ಕಿಗೆ ಜನಗಿಹಳ್ಳ ಹರಿಯುತ್ತದೆ. ಈ ಹಳ್ಳಕ್ಕೆ ಜಿನಗಿ, ಜನಗಿ ಹಾಗೂ ಜೈನಿಗರ ಹಳ್ಳ ಎಂದು ಕರೆಯುವುದುಂಟು. ಈ ರೀತಿ ಹೆಸರು ಬರಲು ಕಾರಣ ಪ್ರಾಚೀನ ಕಾಲದಲ್ಲಿ ಈ ಹಳ್ಳದಲ್ಲಿ ಜೈನ ಯತಿಗಳು ಸ್ನಾನ ಮಾಡುತ್ತಿದ್ದುದರ ಕುರುಹಾಗಿ ಇದಕ್ಕೆ ಜೈನಿಗರ ಹಳ್ಳ>ಜನಗಿ ಹಳ್ಳ>ಜಿನಗಿ ಹಳ್ಳ ಎಂದು ಬಂದಿತೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಈ ಹಳ್ಳವು ಮಳೆಗಾಲದಲ್ಲಿ ಹೆಚ್ಚು ತುಂಬಿ ಹರಿಯುತ್ತೆ, ಆದರೆ ಬೇಸಿಗೆ ಕಾಲದಲ್ಲಿ ಇಲ್ಲಿ ನೀರು ಜಿನುಗುತ್ತಿರುತ್ತದೆ. ಸದಾ ನೀರು ಜಿನುಗುತ್ತಿರುವುದರಿಂದ ಇದಕ್ಕೆ ಜಿನಗಿಹಳ್ಳ ಎಂದು ಕರೆಯುತ್ತಾರೆ. ಜಿನಗಿಹಳ್ಳದ ದಕ್ಷಿಣ ಭಾಗದಲ್ಲಿ 'ಬರಗೇನಹಳ್ಳಿ' ಪರಿಸರವಿದ್ದು ಇಲ್ಲಿ ಆದಿ ಮಾನವನು ವಾಸಮಾಡಿದ ಪ್ರಾಚೀನ ಕುರುಹುಗಳು ಗೋಚರಿಸುತ್ತವೆ. ಈ ಪರಿಸರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಒಂದು ಕೈಗೊಡಲಿ ದೊರೆತಿದೆ. ಈ ಕೈಗೊಡಲಿಯು ೧೯ ಸೆಂ.ಮೀ. ಉದ್ದ ಹಾಗೂ ೪ ಸೆಂ.ಮೀ. ದಪ್ಪವಿದ್ದು ಹಸಿರು ಬಣ್ಣದ ಗಡುಸಾದ ಶಿಲೆಯಲ್ಲಿ ತಯಾರಿಸಲಾಗಿದೆ. ಈ ಆಯುಧವನ್ನು ಸಂಪೂರ್ಣವಾಗಿ ಉಜ್ಜಿ ನಯಗೊಳಿಸಿರುವುದು ಕಂಡುಬರುತ್ತದೆ.

ತಣಿಗೆಕಲ್ಲು : ತಣಿಗೆಕಲ್ಲು ಬನಸೀಹಳ್ಳಿಯಿಂದ ಉತ್ತರಕ್ಕೆ ಕೇವಲ ೨ ಕಿ.ಮೀ. ಅಂತರದಲ್ಲಿದೆ. 'ತಣಿಗೆಕಲ್ಲು' ಎಂಬ ಸ್ಥಳನಾಮದಿಂದ ಇದೊಂದು ಪ್ರಾಗೈತಿಹಾಸಿಕ ನೆಲೆ ಎಂದು ಹೇಳಬಹುದು. ಈ ಗ್ರಾಮದ ಸಿದ್ಧಪ್ಪನ ಬೆಟ್ಟದ ಗವಿಯು ಪ್ರಾಗೈತಿಹಾಸಿಕ ಕಾಲದ ಮಾನವನ ವಾಸಸ್ಥಾನವಾಗಿದ್ದಂತೆ ತೋರುತ್ತದೆ. ಈ ಗವಿಯ ಒಳಭಾಗದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಒಂದು ಕೈಗೊಡಲಿ ದೊರೆತಿದೆ. ಇದನ್ನು ಹಸಿರು ಶಿಲೆಯಿಂದ ತಯಾರಿಸಲಾಗಿದ್ದು ಸುಮಾರು ೧೬ ಸೆಂ.ಮೀ. ಉದ್ದ, ೬ ಸೆಂ.ಮೀ. ಅಗಲ ೪.೫ ಸೆಂ.ಮೀ. ದಪ್ಪವಾಗಿದೆ. ಆದರೆ ಶಿಲಾಯುಧವು ಹೆಚ್ಚು ಬಳಕೆಗೊಂಡಂತೆ, ಇದರಿಂದಾಗಿ ಸಾಕಷ್ಟು ತೃಟಿತಗೊಂಡಿದೆ. ಗವಿಯ ಒಳಭಾಗದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಬೂದುಬಣ್ಣ, ಬೂದು ಮಿಶ್ರಿತ ಕಪ್ಪುವರ್ಣದ ಮಡಿಕೆ ಚೂರುಗಳು ಅಪಾರ ಪ್ರಮಾಣದಲ್ಲಿ ದೊರೆತಿವೆ. ಗವಿಯ ಒಳಭಾಗ ಹಾಗೂ ಹೊರಗಿನ ಪರಿಸರದಲ್ಲಿ ಬೃಹತ್ ಪ್ರಮಾಣದಲ್ಲಿ ಮಡಿಕೆ ಚೂರುಗಳು ವ್ಯಾಪಿಸಿರುವುದನ್ನು ಗಮನಿಸಿದರೆ ಬಹುಶಃ ಇದು ಮಡಿಕೆ ತಯಾರಿಕೆಯ ಕೇಂದ್ರವಾಗಿದ್ದಂತೆ ಕಂಡುಬರುತ್ತದೆ. ಅಲ್ಲದೆ ನೂತನ ಶಿಲಾಯುಗದ ಒಂದು ವಾಸ್ತವ್ಯದ ನೆಲೆಯಾಗಿರಲೂಬಹುದು.

ಕಿಟ್ಟದಾಳು : ಮತ್ತೋಡು ಹೋಬಳಿಯ ಕಿಟ್ಟದಾಳು ವೇದಾವತಿ ನದಿತೀರದ ಒಂದು ಪ್ರಾಕ್ಚಾರಿತ್ರಿಕ ನೆಲೆ. ಗ್ರಾಮದ ಹಾಳೂರು ಪರಿಸರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಒಂದು ಕೈಕೊಡಲಿ ದೊರೆತಿದ್ದು, ಅದನ್ನು ಕಪ್ಪುಬಣ್ಣದ ಗಡಸು ಶಿಲೆಯಲ್ಲಿ ತಯಾರಿಸಲಾಗಿದೆ. ಈ ಆಯುಧವು ೧೮ ಸೆಂ.ಮೀ. ಉದ್ದ ಹಾಗೂ ೪ ಸೆಂ.ಮೀ. ದಪ್ಪವಿದ್ದು ಕೆಳಭಾಗವು ಒಡೆದಿದೆ. ಇದರೊಂದಿಗೆ ಮಡಿಕೆ ಚೂರುಗಳು ಹಾಗೂ ಇತರೆ ಅವಶೇಷಗಳು ದೊರೆತಿವೆ.

ಹಿಂಡೇದೇವರಹಟ್ಟಿ : ಮತ್ತೋಡು ಹೋಬಳಿಗೆ ಸೇರಿದ ಹಿಂಡೇದೇವರಹಟ್ಟಿ ಗ್ರಾಮವು ವೇದಾವತಿ ನದಿ ಪರಿಸರದಲ್ಲಿದ್ದು, ಕಿಟ್ಟದಾಳು ಗ್ರಾಮಕ್ಕೆ ಸಮೀಪದಲ್ಲಿದೆ. ಹಿಂಡೇದೇವರಹಟ್ಟಿ ಗ್ರಾಮದ ದಕ್ಷಿಣ ದಿಕ್ಕಿನ ಹಾಳೂರು ಪರಿಸರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಒಂದು ಕೈಕೊಡಲಿ ದೊರೆತಿದೆ. ಕಪ್ಪು ಶಿಲೆಯ ಈ ಕೊಡಲಿಯು ೧೯ ಸೆಂ.ಮೀ. ಉದ್ದ, ೪.೫ ಸೆಂ.ಮೀ. ದಪ್ಪವಾಗಿದ್ದು ಇದನ್ನು ಉಜ್ಜಿ ನಯಗೊಳಿಸಲಾಗಿದೆ.

ಗರಗ : ಶ್ರೀರಾಂಪುರ ಹೋಬಳಿಗೆ ಸೇರಿರುವ ಗರಗ ಗ್ರಾಮದ 'ಮುತ್ತಿನಗಿರಿ' ಬೆಟ್ಟದ ಒಂದು ಕಲ್ಲಾಸರೆಯಲ್ಲಿ (ಇದು ಮುತ್ತಿನಗಿರಿ ರಂಗಪ್ಪನ ದೇವಾಲಯಕ್ಕೆ ಹೋಗುವ ಬಲಬದಿಯಲ್ಲಿ ಇದೆ.) ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಗಳು ಪತ್ತೆಯಾದವು. ಇವುಗಳು ನೀಳವಾದ ಕೊಂಬುಗಳುಳ್ಳ ಗೂಳಿ ಚಿತ್ರಗಳಾಗಿದ್ದು, ಇವುಗಳನ್ನು ಕೆಂಪು ಬಣ್ಣದಿಂದ ಬಿಡಿಸಲಾಗಿದೆ. ಒಂದು ಗೂಳಿ ೪೦ ಸೆಂ.ಮೀ. ಅಗಲ ೩೪ ಸೆಂ.ಮೀ. ಉದ್ದವಿದೆ. ಮತ್ತೊಂದು ೬೭ ಸೆಂ.ಮೀ. ಉದ್ದ ೬೫ ಸೆಂ.ಮೀ. ಅಗಲವಿದೆ. ಈ ವರ್ಣಚಿತ್ರಗಳು ಇಲ್ಲಿನ ಕಲ್ಲಾಸರೆ ತುಂಬಾ ಇದ್ದು ಇತ್ತೀಚೆಗೆ ಇಲ್ಲಿನ ಹಳ್ಳಿಜನ ಅಡುಗೆ ಮಾಡಿದ ಹೊಗೆಯಿಂದ ಬಹುತೇಕ ವರ್ಣಚಿತ್ರಗಳು ಹಾಳಾಗಿ ಹೋಗಿವೆ. ಇವು ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದವುಗಳು ಎಂದು

ಹೇಳಬಹುದು. ಈ ಪರಿಸರದ ಸುತ್ತಲಿನ ಕಿಟ್ಟದಾಳು, ಹಿಂಡೇದೇವರಹಟ್ಟಿ ಗ್ರಾಮಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕೈಗೊಡಲಿಗಳು ದೊರೆತಿದ್ದು ಈಗಾಗಲೇ ತಿಳಿದ ಸಂಗತಿ, ಈ ಹಿನ್ನೆಲೆಯಲ್ಲಿ ಗರಗ ಪರಿಸರದ ವರ್ಣಚಿತ್ರಗಳು ಇದೇ ಸಂಸ್ಕೃತಿಯ ಕುರುಹುಗಳಾಗಿವೆ.

ನೂತನ ಶಿಲಾಯುಗ ಸಂಸ್ಕೃತಿಯ ಜನರು ವೃತ್ತಾಕಾರ, ಅಪರೂಪವಾಗಿ ಆಯತಾಕಾರದ ಮನೆಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಬಿದಿರಿನಿಂದ ತಡಿಕೆಗಳನ್ನು ಹೆಣೆದುಕೊಂಡು, ಮನೆಯ ಗೋಡೆಯಾಗಿ ಕಟ್ಟಿಕೊಳ್ಳುತ್ತಿದ್ದರು. ರಾಗಿ, ಭತ್ತ, ಗೋದಿ, ಹುರುಳಿ, ಬಾರ್ಲಿ, ಅಲಸಂದೆ, ಉದ್ದು, ಹೆಸರು, ಅವರೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಅಲ್ಲದೆ ನಿಸರ್ಗದಲ್ಲಿ ದೊರೆಯುವ ಬೋರೆಹಣ್ಣು, ಉತ್ತುತ್ತಿಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದರು. ಜಿಂಕೆ, ಕಾಡುಹಂದಿ, ಹೆಗ್ಗಣ ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಪಶುಸಂಗೋಪನೆಯನ್ನು ರೂಢಿಸಿಕೊಂಡು ಈ ಸಂಸ್ಕೃತಿಯ ಜನರು ಗೂಳಿ, ಎಮ್ಮೆ, ಕುರಿ, ಹೋತ, ನಾಯಿಗಳನ್ನು ಸಾಕುತ್ತಿದ್ದರು. ಕಲ್ಲಾಸರೆ ರೇಖಾಚಿತ್ರಗಳು ಹಾಗೂ ಗವಿ ವರ್ಣಚಿತ್ರಗಳು ಈ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ. ಈ ತರಹದ ಚಿತ್ರಗಳು ರಾಯಚೂರು ಬಳ್ಳಾರಿ ಹಾಗೂ ಚಿತ್ರದುರ್ಗ ಬೆಟ್ಟಗಳ ಪರಿಸರಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.[೮] ಹೊಸದುರ್ಗ ತಾಲೂಕಿನ ಗರಗ ಗ್ರಾಮದ ಮುತ್ತಿನಗಿರಿ ರಂಗನಾಥನ ಬೆಟ್ಟ ಪರಿಸರದಲ್ಲಿ ಕಲ್ಲಾಸರೆ ವರ್ಣಚಿತ್ರಗಳು ಪತ್ತೆಯಾಗಿದ್ದು, ಅವುಗಳನ್ನು ಕುರಿತು ಈ ಮೇಲೆಯೇ ವಿವರಿಸಲಾಗಿದೆ.

ನೂತನ ಶಿಲಾಯುಗ ಸಂಸ್ಕೃತಿಯ ಜನರು ವ್ಯವಸ್ಥಿತವಾಗಿ ಶವಸಂಸ್ಕಾರ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಇವರು ಮೂರು ರೀತಿಯಲ್ಲಿ ಶವಸಂಸ್ಕಾರಗಳನ್ನು ಮಾಡುತ್ತಿದ್ದರು.

೧. ಶವ ಕುಣಿಯಲ್ಲಿ ನೇರವಾಗಿ ಶವವನ್ನು ನೆಟ್ಟಗೆ ಮಲಗಿಸುವುದು: ತಲೆಯು ದಕ್ಷಿಣಕ್ಕಿರುವಂತೆ ಉತ್ತರ-ದಕ್ಷಿಣಾಭಿಮುಖವಾಗಿ ಹಾಗೂ ಅಪರೂಪವಾಗಿ ತಲೆಯು ಪೂರ್ವ ದಿಕ್ಕಿಗೆ ಬರುವಂತೆ, ದಕ್ಷಿಣಕ್ಕೆ ಮುಖ ಮಾಡಿ ಪೂರ್ವ ಪಶ್ಚಿಮಾಭಿಮುಖವಾಗಿ ಶವವನ್ನು ಆಯತಾಕಾರದ ಕುಣಿಯಲ್ಲಿ ಇಡಲಾಗುತ್ತಿತ್ತು. ಶವದ ಸುತ್ತಲೂ ಆಹಾರ ಪಾನೀಯಗಳುಳ್ಳ ಮಣ್ಣಿನ ಪಾತ್ರೆಗಳನ್ನು ಇಡುತ್ತಿದ್ದರು.

೨. ಶವವನ್ನು ಮೊದಲು ಒಂದು ಕಡೆ ಹುಗಿದು ಸ್ವಲ್ಪಕಾಲದ ನಂತರ ಹುಗಿದ ಸ್ಥಳದಿಂದ ಅಸ್ಥಿಗಳನ್ನು ಸಂಗ್ರಹಿಸಿ, ಮತ್ತೊಂದು ಕುಣಿಯಲ್ಲಿ ದೇಹದ ರಚನೆಯಂತೆ ವ್ಯವಸ್ಥಿತವಾಗಿಟ್ಟು ಶವಸಂಸ್ಕಾರವನ್ನು ಮಾಡುತ್ತಿದ್ದರು. ಜೊತೆಗೆ ಮಣ್ಣಿನ ಪಾತ್ರೆಗಳನ್ನು ಇಡುತ್ತಿದ್ದರು.

೩. ಶವ ಕುಣಿಯಲ್ಲಿ ೨, ೩, ೪ ಗುಡಾಣಗಳ ಬುಡಗಳನ್ನು ಒಡೆದು ಸೇರಿಸಿ ಅದರೊಳಗೆ ಅಸ್ಥಿ ಅವಶೇಷಗಳನ್ನು ಇಡುತ್ತಿದ್ದರು. ಅಲ್ಲದೆ ಒಂದೇ ಪಾತ್ರೆ ಅಥವಾ ಅಗಲ ಬಾಯಿಯ ಒರಟು ಕುಂಬಗಳಲ್ಲಿ ಶವವನ್ನು ಇಡುತ್ತಿದ್ದರು. ಈ ರೀತಿಯ ಕುಂಬ ಶವಸಂಸ್ಕಾರವು ಹೆಚ್ಚಾಗಿ ೮-೧೦ ವರ್ಷದ ಶಿಶುಗಳ ಶವಸಂಸ್ಕಾರಕ್ಕೆ ಮಾತ್ರ ಸೀಮಿತವಾಗಿದ್ದಿತು; ಈ ಸಂಸ್ಕೃತಿಯ ಜನರು ವಾಸ್ತವ್ಯ ನೆಲೆಗಳಲ್ಲಿ ಅಥವಾ ಮನೆಯೊಳಗೆ ಶವಸಂಸ್ಕಾರಗಳನ್ನು

ಮಾಡುತ್ತಿದ್ದರು.[೮೦] ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ನೂತನ ಶಿಲಾಯುಗ ಕಾಲದ ಶವಸಂಸ್ಕಾರಕ್ಕೆ ಸಂಬಂಧಿಸಿದ ಯಾವುದೇ ಪ್ರಾಚೀನ ಕುರುಹುಗಳು ದೊರೆತಿಲ್ಲ.

ನೂತನ ಶಿಲಾಯುಗ ಕಾಲಘಟ್ಟದ ಆರಂಭಿಕ ಹಂತದಲ್ಲಿ ಕೈಯಿಂದ ಮಾಡಿದ ಮೃತ್ ಪಾತ್ರೆಗಳು ಹೆಚ್ಚಾಗಿ ಲಭ್ಯವಾಗುತ್ತವೆ. ನಂತರದಲ್ಲಿ ತಿರುಗಿಸುವ ಚಕ್ರ ಮತ್ತು ಪರಿಷ್ಕೃತ ಚಕ್ರಗಳಲ್ಲಿ ಹೆಚ್ಚು ತೆಳ್ಳನೆಯ ಮೃತ್ ಪಾತ್ರೆಗಳನ್ನು ಕೆಂಪು ಮತ್ತು ಬೂದು ಬಣ್ಣದಿಂದ ತಯಾರಿಸಲಾಗುತ್ತಿತ್ತು. ಸಾಧಾರಣವಾಗಿ ಕೆಂಪು ಬಣ್ಣದ ಮೃತ್ ಪಾತ್ರೆಗಳು ಆಂಧ್ರ ಪ್ರದೇಶದ ನೂತನ ಶಿಲಾಯುಗದ ಲಕ್ಷಣವೆಂದು, ಬೂದು ಬಣ್ಣದ ಮೃತ್ ಪಾತ್ರೆಗಳು ತಮಿಳುನಾಡಿನ ನೆಲೆಗಳಲ್ಲಿ ಹೆಚ್ಚಾಗಿ ದೊರೆಯುತ್ತವೆಂದು, ಕರ್ನಾಟಕದಲ್ಲಿ ಇವೆರಡೂ ಪ್ರಕಾರದ ಮೃತ್ ಪಾತ್ರೆಗಳು ವಿವಿಧ ಪ್ರಮಾಣದಲ್ಲಿ ಲಭ್ಯವಾಗುತ್ತವೆಂದು ಅಭಿಪ್ರಾಯಪಡಲಾಗಿದೆ.[೮೧] ದಕ್ಷಿಣ ಭಾರತದಲ್ಲಿ ಕುತೂಹಲ ಕೆರಳಿಸುವಂತಹ ಪ್ರಾದೇಶಿಕ ಲಕ್ಷಣಗಳೆಂದರೆ, ನೂತನ ಶಿಲಾಯುಗ ಸಂಸ್ಕೃತಿಯ ಬೂದಿದಿಬ್ಬಗಳು. ಇದುವರೆಗೂ ಕರ್ನಾಟಕದ ಗುಲ್ಬರ್ಗ, ಬಿಜಾಪುರ, ರಾಯಚೂರು, ಬೆಳಗಾಂ, ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆಂಧ್ರಪ್ರದೇಶದ ಅನಂಥಪುರ, ಮೆಹಬೂಬನಗರ ಮತ್ತು ಕರ್ನೂಲು ಜಿಲ್ಲೆಗಳಲ್ಲಿಯೂ ಈ ಬೂದಿದಿಬ್ಬಗಳು ಬೆಳಕಿಗೆ ಬಂದಿವೆ.[೮೨] ಇಂತಹ ಬೂದಿದಿಬ್ಬಗಳ ಬಗೆಗೆ ಮೊದಲಿಗೆ ಮೆಕೆಂಜಿ ಎಂಬುವವರು ಅಧ್ಯಯನ ಮಾಡುವುದರ ಜೊತೆಗೆ ಬಳ್ಳಾರಿ ಭಾಗದಲ್ಲಿರುವ ಕೆಲವೊಂದು ಬೂದಿದಿನ್ನೆಗಳನ್ನು ಪ್ರಸ್ತಾಪಿಸಿದ್ದಾರೆ. ರಾಬರ್ಟ್ ಬ್ರೂಸ್‌ಫುಟ್‌ರವರು ಈ ಬೂದಿದಿಬ್ಬಗಳ ಬಗ್ಗೆ ವಿವರವಾದ ಅಧ್ಯಯನವನ್ನು ನಡೆಸಿರುವರು. ಆಫ್ರಿಕೇಯ ಮುಕುಂಗ ಮತ್ತು ಆಲ್‌ಬರ್ಟ್ ನೈನ್‌ಝೂ ಎಂಬ ನೆಲೆಗಳಲ್ಲಿ ಬೂದಿದಿಬ್ಬಗಳಿವೆ ಎಂದು ಸ್ಥಳೀಯರು ಅವುಗಳನ್ನು ಝುರಿಬ ಎಂದು ಕರೆಯುತ್ತಾರೆಂಬುದನ್ನು ಸರ್ ಹೆನ್ರಿ ಸ್ಟೆನ್ಲೆ ತಮ್ಮ ಕಡುಕತ್ತಲೆಯ ಆಫ್ರಿಕಾ ಎಂಬ ಪುಸ್ತಕದ ಎರಡನೇ ಸಂಪುಟದಲ್ಲಿ ಬರೆದಿದುದನ್ನು ಬ್ರೂಸ್‌ಫುಟ್‌ರವರು ಗಮನಿಸಿದ್ದರು. ಬೂದಿದಿಬ್ಬಗಳ ಸುತ್ತಮುತ್ತಲ ಭಾಗಗಳಲ್ಲಿ ನೂತನ ಶಿಲಾಯುಗದ ಅವಶೇಷಗಳು ಕಂಡುಬಂದಿದ್ದರಿಂದ ಈ ಬೂದಿದಿಬ್ಬಗಳು ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದವೆಂದು ಅಭಿಪ್ರಾಯಪಟ್ಟರು.[೮೩]

೪.೪. ಬೃಹತ್ ಶಿಲಾಯುಗ

'ಮೆಗಾಲಿಥ್' (Megalith) ಪದವು 'ಮೆಗಾ' ಮತ್ತು 'ಲಿಥೋಸ್' (Lithos) ಎಂಬ ಎರಡು ಗ್ರೀಕ್ ಪದಗಳ ನಿಷ್ಪತ್ತಿ.[೮೪] 'ಮೆಗಾ' ಎಂದರೆ ಬೃಹತ್, 'ಲಿಥಿಯೋ' ಎಂದರೆ ಶಿಲೆ ಎಂದರ್ಥ.[೮೫] Megalithic culture ಎಂಬ ಆಂಗ್ಲ ಪದವು ಬೃಹತ್ ಶಿಲಾಯುಗ ಸಂಸ್ಕೃತಿ ಎಂಬ ಕನ್ನಡ ಪದಕ್ಕೆ ಸಮನಾಗಿದೆ.[೮೬] ಬೃಹತ್ ಗಾತ್ರದ ಕಲ್ಲುಗಳನ್ನು ಬಳಸಿಕೊಂಡು ವಿವಿಧ ನಮೂನೆಯ ಸಮಾಧಿಗಳನ್ನು ನಿರ್ಮಾಣ ಮಾಡಲು ಪ್ರಾರಂಭಿಸಿದುದರಿಂದ ಈ ಸಂಸ್ಕೃತಿಗೆ 'ಬೃಹತ್ ಶಿಲಾ ಸಂಸ್ಕೃತಿ' ಎಂದು ಕರೆಯಲಾಗಿದೆ. ಈ ಸಂಸ್ಕೃತಿಯ ಜನರು ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಆಯುಧಗಳನ್ನು ತಯಾರಿಸಿದ್ದರಿಂದ ಈ ಯುಗವನ್ನು ಕಬ್ಬಿಣದ ಯುಗವೆಂತಲೂ ಕರೆಯಲಾಗಿದೆ. ಈ ಸಂಸ್ಕೃತಿಯು ನೂತನ ಶಿಲಾ-ತಾಮ್ರಯುಗದ ನಂತರ ಪ್ರಚಲಿತಕ್ಕೆ ಬಂದಿತು.[೮೭]

ಭಾರತದಲ್ಲಿ ೧೮೨೩ರಲ್ಲಿ ಬ್ಯಾಬಿಂಗಟನ್‌ರವರು ಪ್ರಥಮಬಾರಿಗೆ ಕೇರಳದ ಕರಾವಳಿ ಪ್ರದೇಶದಲ್ಲಿ ಈ ಸಂಸ್ಕೃತಿಯ ಅವಶೇಷಗಳನ್ನು ಕಂಡುಹಿಡಿದರು.[೫೮] ಈಶಾನ್ಯ ಭಾರತದಲ್ಲಿ ಕಲ್ಮನೆ (Dolmen) ಮತ್ತು ನಿಲುಸುಗಲ್ಲುಗಳೇ ಪ್ರಮುಖ ಶಿಲಾಗೋರಿಗಳು. ೧೯೨೩ರಲ್ಲಿ ಅಸ್ಸಾಂ ಪ್ರದೇಶದ ಜಮಗುರಿ ಮತ್ತು ದೊಮಾಪುರಗಳಲ್ಲಿ ದೊರೆತ ಕಲ್ಗೋರಿಗಳು ಈ ಪ್ರದೇಶದ ಅನ್ವೇಷಣೆಗಳಾಗಿವೆ.[೫೯] ಭಾರತದ ಪೂರ್ವಭಾಗದ ಶೋಧನೆಗಳು ಬಿಹಾರಿನ ಚೋಟಾ ನಾಗಪೂರ್ ಮತ್ತು ರಾಂಚಿ ಪ್ರದೇಶದ ಕಲ್ಗೋರಿ ನೆಲೆಗಳಾಗಿವೆ. ೧೮೭೩-೭೪ರಲ್ಲಿ ಕನ್ನಿಂಗ್ ಹ್ಯಾಂರವರ ಸಹಾಯಕನಾದ ಬರಗ್ಲರ್ ಮಧ್ಯ ಭಾರತ ಪ್ರಾಂತ್ಯಗಳ ಶೋಕಾರ ಗ್ರಾಮದ ಬಳಿಯ ಮೇಲ್ಮುಖವಾಗಿ ನಿಲ್ಲಿಸಿದ್ದ ನಿಲಿಸುಗಲ್ಲು ಹಾಗೂ ಚದುರಿ ಬಿದ್ದಿದ್ದ ಕಲ್ಲುಗಳ ಭಗ್ನಾವಶೇಷಗಳನ್ನು ವರದಿ ಮಾಡಿದರೂ ಅದು ಹೆಚ್ಚಿನ ಗಮನ ಸೆಳೆಯಲಿಲ್ಲ. ಆದರೆ ಇದೇ ನೆಲೆಯನ್ನು ೧೯೩೩-೩೪ರಲ್ಲಿ ಪುನರ್‌ಪರಿಶೀಲನೆ ಮಾಡಿದಾಗ ಅವು ಶಿಲಾಯುಗದ ರುದ್ರಭೂಮಿ ಗಳೆಂದು ಉಲ್ಲೇಖಿಸಲಾಯಿತು.[೬೦] ದಖ್ಖನ್ ಪ್ರಸ್ಥಭೂಮಿ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ. ಈ ಪ್ರದೇಶದ ತಾಕಲ್‌ಘಾಟ್ ಮತ್ತು ನೈಕುಂಡ ಧೂಲಿಯಾ ಜಿಲ್ಲೆಯ ರಂಜಾಳ, ನಾಗಪೂರ ಜಿಲ್ಲೆಯ ಜೂನಾಪಾನಿ, ರಾಯಪುರ, ಅಮರಾವತಿ ಜಿಲ್ಲೆಯ ಕೌಂಡಿನ್ಯಪುರ, ಮಹೋರ್‌ಜಹಾಂ, ವರ್ದಾ ಜಿಲ್ಲೆಯ ಪೌನಾರ್, ಖೈವಾಡ ಇನ್ನೂ ಮೊದಲಾದವುಗಳು ಈ ಪ್ರದೇಶದ ಪ್ರಮುಖ ಬೃಹತ್ ಶಿಲಾಸಮಾಧಿ ನೆಲೆಗಳಾಗಿವೆ.[೬೧]

ಕರ್ನಾಟಕದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಬೃಹತ್ ಶಿಲಾಯುಗದ ನೆಲೆಗಳು ಬೆಳಕಿಗೆ ಬಂದಿವೆ. ಈ ಸಂಸ್ಕೃತಿಯ ನೆಲೆಗಳು ಹೆಚ್ಚಾಗಿ ಬೆಳಗಾವಿ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಮಂಡ್ಯ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಕಂಡುಬಂದಿವೆ.[೬೨]

ದಕ್ಷಿಣ ಭಾರತದಲ್ಲಿ ಕಂಡುಬರುವ ಬೃಹತ್ ಶಿಲಾಸಮಾಧಿಗಳ ವಿಧಗಳು.

I. ಗುಹಾಂತರ ಸಮಾಧಿಗಳು (Rock-cut caves), ಇವುಗಳಲ್ಲಿ ೪ ವಿಧಗಳಿವೆ.

೧. ಕಂಬವಿರುವ ಗುಹಾಂತರ ಸಮಾಧಿಗಳು

೨. ಕಂಬವಿಲ್ಲದ ಗುಹಾಂತರ ಸಮಾಧಿಗಳು.

೩. ಮುಚ್ಚಳವಿರುವ ಸಮಾಧಿಗಳು.

೪. ಕೋಣೆಯ ಸಮಾಧಿಗಳು.

II. ಹುಡ್‌ಸ್ಟೋನ್ ಮತ್ತು ಟೋಪಿಕಲ್ಲು (Hood Stone and Topikal) ಸಮಾಧಿಗಳು. ಇವುಗಳಲ್ಲಿ ೨ ವಿಧಗಳಿವೆ.

೧. ಕುಳಿ ಸಮಾಧಿ (Pit burial) : ಮೇಲೆ ಹುಡ್‌ಸ್ಟೋನ್ ಮತ್ತು ಟೋಪಿಕಲ್ಲು ಇದ್ದು ನೆಲದ ಅಡಿಯಲ್ಲಿ ಶವಸಂಸ್ಕಾರ ಮಡಿರುವುದು ವೃತ್ತದಲ್ಲಿರುತ್ತದೆ.

೨. ಆಯತಾಕಾರವಿರುವ ಇಲ್ಲವೆ ಉದ್ದಯಾತಾಕಾರವಾಗಿರುವ (Oblong) ಹುಡ್‌ಸ್ಟೋನ್ ಮತ್ತು ಟೋಪಿಕಲ್ಲು ಸಮಾಧಿ.

III. ನಿಲುಸುಗಲ್ಲು (Menhirs), ಇವುಗಳಲ್ಲಿ ೩ ವಿಧಗಳಿವೆ.

೧. ನಿಲುಸುಗಲ್ಲು

೨. ಅಲೈನ್‌ಮೆಂಟ್ (Alignment) : ಸಾಲಾಗಿ ನಿಲ್ಲಿಸಿದ ನಿಲುಸುಗಲ್ಲುಗಳು.

೩. ಅವೆನ್ಯೂ (Avenue) : ಎರಡೂ ಬದಿಗೆ ನಿಲ್ಲಿಸಿದ ಕಲ್ಲುಗಳು.

IV. ಡಾಲ್‌ಮೆನೈಡ್ ಸಿಸ್ಟ್ (Dolmenoid cist) : ದೊಡ್ಡ–ದೊಡ್ಡ ಕಲ್ಲುಗಳನ್ನು ವೃತ್ತಾಕಾರದಲ್ಲಿಟ್ಟು, ಅವುಗಳ ಮಧ್ಯೆ ಚಿಕ್ಕ–ಚಿಕ್ಕ ಚಕ್ಕೆ ಕಲ್ಲುಗಳನ್ನು ನೆಟ್ಟು ವೃತ್ತಾಕಾರದ ಕೇಂದ್ರದ ಮಧ್ಯದಲ್ಲಿ ಮೇಲ್ನೋಟಕ್ಕೆ ಕಾಣುವಂತೆ ಕಲ್ಮನೆಯ ರಚನೆಯಿದ್ದು, ಅದರ ಅಡಿಯಲ್ಲಿ ಅಂತರ್ಗತ ಶವಪೆಟ್ಟಿಗೆಯಿರುತ್ತದೆ. ಇದನ್ನು ಡಾಲ್‌ಮೆನೈಡ್ ಸಿಸ್ಟ್ ಎಂದು ಕರೆಯಲಾಗುತ್ತದೆ. ಇದರಲ್ಲಿ ೨ ವಿಧಗಳಿವೆ.

೧. ಡಾಲ್‌ಮೆನ್‌ಸಿಸ್ಟ್ (Dolmen cist) : ಒರಟು ಕಲ್ಲುಗಳನ್ನು ವೃತ್ತಾಕಾರದಲ್ಲಿಟ್ಟು ಅದರ ಮಧ್ಯದಲ್ಲಿ ಅಂತರ್ಗತ ಶವಪೆಟ್ಟಿಗೆಯನ್ನು ನಿರ್ಮಿಸಲಾಗಿರುತ್ತದೆ.

೨. ಮುಚ್ಚಳ ಕಲ್ಲಿರುವ ಸಿಸ್ಟ್‌ಗಳು (cist with capstones) ಇವುಗಳಲ್ಲಿ ಪುನಹ ೨ ವಿಧಗಳು.

ಅ. ಕಿಂಡಿ ಕೋಣೆ ಅಥವಾ ಹಾದಿಕೋಣೆ (Passage tombs)

ಆ. ಕಿಂಡಿಕೋಣೆ ಇಲ್ಲದ ಅಥವಾ ಹಾದಿ ಇಲ್ಲದ ಅಂತರ್ಗತ ಶವಪೆಟ್ಟಿಗೆಗಳು (Without passage)

V. ಕೈರನ್ ವೃತ್ತಗಳು (cairn circle) : ದೊಡ್ಡ–ದೊಡ್ಡ ಕಲ್ಲುಗಳನ್ನು ವೃತ್ತಾಕಾರದಲ್ಲಿಟ್ಟು, ಅದರ ಮಧ್ಯ ಚಿಕ್ಕ ಕಲ್ಲುಗಳನ್ನು ನೆಟ್ಟಿರುತ್ತಾರೆ. ಇದನ್ನು ಅಗೆದರೆ ಅಂತರ್ಗತ ಶವಪೆಟ್ಟಿಗೆ ಸಿಗಬಹುದು ಇಲ್ಲವೆ ಶವಕುಳಿ (Pit circle) ಸ್ಯಾರ್ಕೋಫೊಗಾಸ್, ಅರ್ನ್‌ಬರಿಯಲ್ ಲಭಿಸಬಹುದು. ಇದರಲ್ಲಿ ೩ ವಿಧಗಳನ್ನು ವಿಂಗಡಿಸಬಹುದು.

೧. ಶವಕುಳಿ ಸಮಾಧಿ (Pit circle)

೨. ಸ್ಯಾರ್ಕೋಫೊಗಾಸ್ (Sarcophages)

೩. ಅರ್ನ್ ಬರಿಯಲ್ (Urn burial)

VI. ಕಲ್ಲಿನ ವೃತ್ತಗಳು (Stone circle) : ನೋಡಲು ಕಲ್ಲಿನ ವೃತ್ತದಂತೆ ಕಂಡುಬರುವ ಇದರಲ್ಲಿ ೩ ವಿಧಗಳಿವೆ.

೧. ಶವಕುಳಿ ಸಮಾಧಿ

೨. ಸ್ಯಾರ್ಕೋಫೊಗಾಸ್

೩. ಅರ್ನ್‌ಬರಿಯಲ್

VII. ಶವಕುಳಿ ಸಮಾಧಿ (Pit circle) : ಭೂಮಿಯ ಮೇಲೆ ನೋಡಲು ಏನು ಕಾಣುವುದಿಲ್ಲ. ನೆಲದಲ್ಲಿ ಅರ್ನ್‌ಬರಿಯಲ್ ಇರುತ್ತದೆ. ಆದರೆ ಅದನ್ನು ಅಗೆದಾಗ ಮಾತ್ರ ಈ ರೀತಿಯ ಸಮಾಧಿಯು ಕಂಡುಬರುತ್ತದೆ.

VIII. ಬ್ಯಾರೋಸ್ (Barrows) : ವೃತ್ತಾಕಾರ, ಉದ್ದ, ಆಯತ, ಆಯತಾಕಾರ, ಚೌಕಾಕಾರದ ಮಣ್ಣಿನ ದಿಬ್ಬವಿರುತ್ತದೆ. ಈ ದಿಬ್ಬದ ಅಡಿಯಲ್ಲಿ ಶವಸಂಸ್ಕಾರ ಮಾಡಿರುತ್ತಾರೆ.

ಕರ್ನಾಟಕದಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಏಳು ರೀತಿಯ ಸಮಾಧಿಗಳು ಕಂಡು ಬರುತ್ತವೆ. ಅವುಗಳೆಂದರೆ,

೧. ಹಾದಿಕೋಣೆಗಳು

೨. ಕಿಂಡಿಕೋಣೆಗಳು

೩. ಕಲ್ಲುವೃತ್ತಗಳು

೪. ಚಕ್ಕೆ ಕಲ್ಲುಗಳಿಂದ ತುಂಬಿದ ಕಲ್ಲುವೃತ್ತಗಳು

೫. ವರ್ತುಲ ಗುಡ್ಡೆಗಳು

೬. ಶವಕುಣಿಗಳು

೭. ನಿಲುಸುಕಲ್ಲುಗಳು.

ಚಿತ್ರದುರ್ಗ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿದಿವೆ. ಮೊಳಕಾಲ್ಮೂರು ತಾಲೂಕಿನ 'ಬ್ರಹ್ಮಗಿರಿ'ಯಲ್ಲಿ ಎಂ.ಎಚ್. ಕೃಷ್ಣ ಅವರು ೧೯೪೨ರಲ್ಲಿ ಉತ್ಖನನ ಕೈಗೊಂಡು ಅದರಲ್ಲಿ ೩ನೇ ಪದರಿನಲ್ಲಿ 'ಬೃಹತ್ ಶಿಲಾಯುಗ ಸಂಸ್ಕೃತಿ'ಯ ಕುರುಹುಗಳನ್ನು ಗುರುತಿಸಿದರು.[೧೩] ಇಲ್ಲಿನ ಬೃಹತ್ ಶಿಲಾಸಮಾಧಿಗಳಲ್ಲಿ ಮಾನವನ ಎಲುಬುಗಳು, ಕಪ್ಪು-ಕೆಂಪು, ಪೂರ್ಣಕೆಂಪು, ಕೆಂಪು ಬಣ್ಣದ ಮಣ್ಣಿನ ಪಾತ್ರೆಗಳು ಕಬ್ಬಿಣದ ಸಮಾನುಗಳು ದೊರೆತವು. ಇದನ್ನು ಇವರು 'ಆದಿ ಕಬ್ಬಿಣಯುಗ ಸಂಸ್ಕೃತಿಯ ಜನಸಮುದಾಯ' ಎಂದು ಕರೆದರು.[೧೪] ೧೯೪೭-೪೮ರಲ್ಲಿ ಸರ್ ಮಾರ್ಟಿಮರ್ ವೀಲ್ಹರ್ ಅವರು ಬ್ರಹ್ಮಗಿರಿಯಲ್ಲಿ ಕೈಗೊಂಡ ವೈಜ್ಞಾನಿಕ ಉತ್ಖನನದಲ್ಲಿ ಒಟ್ಟು ೧೦ ಗೋರಿಗಳನ್ನು ಉತ್ಖನನ ಮಾಡಲಾಗಿದ್ದು, ಅವುಗಳಲ್ಲಿ ಕಲ್ಲು ವೃತ್ತ ಗೋರಿಗಳು ಹಾಗೂ ೪ ಶವಕುಳಿ ವೃತ್ತ ಗೋರಿಗಳಾಗಿವೆ. ಉತ್ಖನನದ ಸಮಯದಲ್ಲಿ ಮಣ್ಣಿನ ಮಡಕೆಗಳು ಹೆಚ್ಚು ಪ್ರಮಾಣದಲ್ಲಿ ಕಂಡುಬಂದಿದ್ದು, ಹೊಳಪುಳ್ಳ ಕಪ್ಪು, ಕೆಂಪು, ಪೂರ್ಣಕಪ್ಪು ಹಾಗೂ ಪೂರ್ಣ ಕೆಂಪು ವರ್ಣಗಳು, ಬೋಗುಣಿಗಳು, ಆಲಿಕೆಯಂತಹ ಪಾತ್ರೆ ಹಾಗೂ ವಿವಿಧ ಆಕಾರದ ಮಡಿಕೆಗಳಾಗಿವೆ. ವಾಸ್ತವ್ಯದ ನೆಲೆಗಳಲ್ಲಿ ಕಂಡುಬರುವ ಹಲವು ಮಡಿಕೆ ಮಾದರಿಗಳು ಉತ್ಖನನದಲ್ಲಿ ದೊರೆತಿವೆ.[೧೫] ಚಂದ್ರವಳ್ಳಿಯಲ್ಲಿ ನಡೆದ ಮೊದಲಿನ ಉತ್ಖನನಗಳಲ್ಲಿ ಯಾವುದೇ ಗೋರಿ ಅವಶೇಷಗಳನ್ನು ಗುರುತಿಸದಿದ್ದರೂ ೧೯೭೭-೭೮ರಲ್ಲಿ ಒಂದು ಶಿಲಾವೃತ್ತದ ಗೋರಿಯ ಉತ್ಖನನವನ್ನು ಕೈಗೊಂಡು ಬೃಹತ್ ಶಿಲಾಯುಗ ಸಂಸ್ಕೃತಿಯನ್ನು

ಗುರುತಿಸಲಾಯಿತು.[೯೬] ಇವುಗಳಲ್ಲಿ 'ಬ್ರಹ್ಮಗಿರಿ'ನೆಲೆಯು ಬೃಹತ್ ಶಿಲಾಯುಗ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವವಾದುದಾಗಿದೆ. ಎಂ.ಎಚ್. ಕೃಷ್ಣ ಹಾಗೂ ಸರ್ ಮಾರ್ಟಿಮರ್ ವೀಲ್ಹರ್ ಅವರ ಉತ್ಖನನಗಳಲ್ಲಿ ಶಿಲಾ ಸಮಾಧಿಗಳೂ ಸೇರಿರುವುದು ಇಲ್ಲಿ ೩೦೦ಕ್ಕೂ ಹೆಚ್ಚು ಶಿಲಾಸಮಾಧಿಗಳು ಕಂಡುಬಂದಿರುವುದು ಗಮನಾರ್ಹ.[೯೭]

ಚಿತ್ರದುರ್ಗ ತಾಲೂಕಿನ ಕೂನಬೇವು, ನರೇನಹಾಳು, ಹಿರೇಕಬ್ಬಿಗೆರೆ, ಚಿಕ್ಕಕಬ್ಬಿಗೆರೆ ಹಾಗೂ ಬೆಳಗಟ್ಟ ಗ್ರಾಮಗಳ ಪರಿಸರಗಳಲ್ಲಿ ಎಸ್.ವೈ. ಸೋಮಶೇಖರ್ ಹಾಗೂ ಎಸ್. ತಿಪ್ಪೇಸ್ವಾಮಿ ಅವರು ನಡೆಸಿದ ಶೋಧಕಾರ್ಯದಲ್ಲಿ ನೂರಾರು ಬೃಹತ್ ಶಿಲಾಸಮಾಧಿಗಳು ಬೆಳಕಿಗೆ ಬಂದಿವೆ. ಕೂನಬೇವು ಪರಿಸರದಲ್ಲಿ ಸುಮಾರು ೭೫ಕ್ಕೂ ಹೆಚ್ಚು ಬೃಹತ್ ಶಿಲಾಸಮಾಧಿಗಳು ಕಂಡುಬಂದಿವೆ.[೯೮] ಲಕ್ಷ್ಮಣ್ ತೆಲಗಾವಿಯವರು ಘಟ್ಟಿಹೊಸಹಳ್ಳಿಯಲ್ಲಿ ಬೃಹತ್ ಶಿಲಾಸಮಾಧಿ ನೆಲೆಯನ್ನು ಶೋಧಿಸಿರುವರು. ಜಯಣ್ಣ ಉಲ್ಲಾನಹಳ್ಳಿಯವರು ಮೊಳಕಾಲ್ಮೂರು ತಾಲೂಕಿನಲ್ಲಿ ಸುಮಾರು ೨೪ ನೆಲೆಗಳನ್ನು,[೯೯] ಎಸ್.ಜಿ. ರಾಮದಾಸರೆಡ್ಡಿ ಅವರು ಚಳ್ಳಕೆರೆ ತಾಲೂಕಿನಲ್ಲಿ ೩೯, ಹಿರಿಯೂರು ತಾಲೂಕಿನಲ್ಲಿ ೧೧, ಮೊಳಕಾಲ್ಮೂರು ತಾಲೂಕಿನಲ್ಲಿ ೪ ಹಾಗೂ ಚಿತ್ರದುರ್ಗ ತಾಲೂಕಿನಲ್ಲಿ ೪ ಬೃಹತ್ ಶಿಲಾಯುಗದ ನೆಲೆಗಳನ್ನು ಪತ್ತೆಹಚ್ಚಿದ್ದಾರೆ.[೧೦೦]

ಪ್ರಸ್ತುತ ಅಧ್ಯಯನ ಕ್ಷೇತ್ರ ಹೊಸದುರ್ಗ ತಾಲೂಕಿಲ್ಲಿ ಈ ಹಿಂದೆ ಯಾವುದೇ ಬೃಹತ್ ಶಿಲಾ ಸಂಸ್ಕೃತಿಯ ನೆಲೆಗಳು ಪತ್ತೆಯಾದ ವರದಿಯಾಗಿಲ್ಲ. ಪ್ರಸ್ತುತ ಅಧ್ಯಯನ ನಿಮಿತ್ತ ಕಾರನು ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಹೊಸದುರ್ಗ ತಾಲೂಕಿನ ಹಾಗೂ ಅದರ ಸುತ್ತಲಿನ ಪರಿಸರದಲ್ಲಿ ಅನೇಕ ಬೃಹತ್ ಶಿಲಾಸಂಸ್ಕೃತಿಯ ನೆಲೆಗಳನ್ನು ಪತ್ತೆಹಚ್ಚಿದ್ದು ಅವುಗಳನ್ನು ಕುರಿತು ಈ ಮುಂದಿನಂತೆ ಚರ್ಚಿಸಲಾಗಿದೆ.

ಸೂಜಿಗಲ್ಲು : ಈ ಗ್ರಾಮವು ಶ್ರೀರಾಂಪುರ ಹೋಬಳಿ ಕೇಂದ್ರದಿಂದ ಪಶ್ಚಿಮಕ್ಕೆ ೨.೫ ಕಿ.ಮೀ. ಹತ್ತಿರದಲ್ಲಿದೆ. ಗ್ರಾಮದ ಪಶ್ಚಿಮ ದಿಕ್ಕಿನ ಹೊಲಗಳಲ್ಲಿ ಬೃಹತ್ ಶಿಲಾಸಮಾಧಿಗಳು ಕಂಡುಬರುತ್ತವೆ. ಪ್ರಸ್ತುತ ಕೃಷಿ ಚಟುವಟಿಕೆಗಳಿಂದಾಗಿ ಅನೇಕ ಶಿಲಾಸಮಾಧಿಗಳು ಹಾಳಾಗಿವೆ. ಈಗ ಉಳಿದುಕೊಂಡಿರುವುದು ಕೇವಲ ೬ ಮಾತ್ರ, ಇವು ಶಿಲಾವೃತ್ತ (Cist circle) ಮಾದರಿಯಾಗಿವೆ. ಈ ಸಮಾಧಿಗಳ ನಿರ್ಮಾಣಕ್ಕೆ ಸ್ಥಳೀಯವಾಗಿ ಲಭ್ಯವಿರುವ ಬಿಳಿಕಣಶಿಲೆಯನ್ನು ಬಳಸಲಾಗಿದೆ. ಮಧ್ಯದಲ್ಲಿ ಶವಸಂಸ್ಕಾರ ಮಾಡಿ ಅದರ ಸುತ್ತಲೂ ಈ ಬಿಳಿಕಣಶಿಲೆಯ ದುಂಡು ಕಲ್ಲುಗಳನ್ನು ಇಟ್ಟು ಸಮಾಧಿಗಳನ್ನು ಮಾಡಿದ್ದಾರೆ. ಇಲ್ಲಿ ದೊರೆತ ೬ ಶಿಲಾಸಮಾಧಿಗಳಲ್ಲಿ ಒಂದು ಸುಮಾರು ೬೫ ಅಡಿ ಸುತ್ತಳತೆಯನ್ನು ಹೊಂದಿದ್ದು, ಅತ್ಯಂತ ದೊಡ್ಡದಾಗಿದೆ. ಕೆಲವು ಹಾಳಾದ ಶಿಲಾಸಮಾಧಿಗಳಲ್ಲಿ ಮಡಿಕೆ ಚೂರುಗಳು ಲಭ್ಯವಾದವು. ಅವು ಕಪ್ಪು ಮತ್ತು ಕೆಂಪು, ಕಪ್ಪು-ಕೆಂಪು ಬಣ್ಣದ ಮಡಿಕೆ ಚೂರುಗಳಾಗಿದ್ದು, ಬಟ್ಟಲು, ತಟ್ಟೆ ಮುಂತಾದವುಗಳ ಭಾಗಗಳಾಗಿವೆ.

ಗೂಳಿಹಳ್ಳಿ : ಈ ಗ್ರಾಮವು ಶ್ರೀರಾಂಪುರ ಹೋಬಳಿಯಿಂದ ಬೆಲಗೂರಿಗೆ ಹೋಗುವ ಮಾರ್ಗದಲ್ಲಿ ೧ ಕಿ.ಮೀ. ದೂರದಲ್ಲಿದೆ. ಶ್ರೀರಾಂಪುರದಿಂದ ಗವಿರಂಗಾಪುರಕ್ಕೆ ಹೋಗುವ

ಮಾರ್ಗದಲ್ಲಿ ಬಲಭಾಗಕ್ಕೆ ಹೊನ್ನರಾಜರಾಜೇಶ್ವರಿ ಗುಹಾದೇವಾಲಯವಿದ್ದು (ಇದನ್ನು ಸ್ಥಳೀಯರು ಹೊನ್ನತಮ್ಮ ದೇವಾಲಯ ಎಂದು ಕರೆಯುತ್ತಾರೆ ಹಾಗೂ ಈ ದೇವಾಲಯವು ಗೂಳಿಹಳ್ಳಿ ಗ್ರಾಮಕ್ಕೆ ಸೇರಿದೆ.) ಅದಕ್ಕೆ ಹೊಂದಿಕೊಂಡಂತೆ ಕಲ್ಲಾಸರೆ ಇದೆ. ಈ ಕಲ್ಲಾಸರೆಯಲ್ಲಿ ಕಲ್ಲಿನಿಂದ ಕುಟ್ಟಿ ಮೂಡಿಸಿರುವ ಸುಮಾರು ೭ ಗೂಳಿ ಚಿತ್ರಗಳಿವೆ. ಅವುಗಳನ್ನು ಒಂದೇ ಸಾಲಿನಲ್ಲಿ ಚಿತ್ರಿಸಿದ್ದು, ಅವುಗಳಲ್ಲಿ ಒಂದು ಗೂಳಿ ೬೪ ಸೆಂ.ಮೀ. ಉದ್ದ ೭೫ ಸೆಂ.ಮೀ. ಅಗಲವಿದೆ. ಗೂಳಿ ಚಿತ್ರಗಳು ಬಹುಶಃ ಬೃಹತ್ ಶಿಲಾಯುಗ ಕಾಲಘಟ್ಟಕ್ಕೆ ಸೇರಿವೆ. ಗೂಳಿ ಚಿತ್ರಗಳ ಕಾರಣವಾಗಿ ಈ ಗ್ರಾಮಕ್ಕೆ ಗೂಳಿಹಳ್ಳಿ ಎಂಬ ಹೆಸರು ಬಂದಿದೆ. ಗ್ರಾಮದ ಪಶ್ಚಿಮ ದಿಕ್ಕಿಗಿರುವ 'ಸೂಜಿಗಲ್ ಅಮಾನಿಕೆರೆ'ಯ ದಕ್ಷಿಣ ದಿಕ್ಕಿನ ಪರಿಸರದಲ್ಲಿ ಸುಮಾರು ೧೦ ಬೃಹತ್ ಶಿಲಾ ಸಮಾಧಿಗಳು ಪತ್ತೆಯಾಗಿವೆ. ಇವು ಶಿಲಾವೃತ್ತ ಮಾದರಿಯವು. ಈ ಶಿಲಾಸಮಾಧಿಗಳ ರಚನೆಗೆ ಕರಿಕಾಡುಗಲ್ಲುಗಳನ್ನು ಬಳಸಿದ್ದಾರೆ.

ದೊಡ್ಡಘಟ್ಟ : ದೊಡ್ಡಘಟ್ಟ ಗ್ರಾಮವು ಮಾಡದಕೆರೆ ಹೋಬಳಿಯ ಜಾನಕಲ್ಲು ಗ್ರಾಮಕ್ಕೆ ಸುಮಾರು ೫ ಕಿ.ಮೀ.ದೂರದಲ್ಲಿದೆ. ದೊಡ್ಡಘಟ್ಟ ಗ್ರಾಮದ ಪಶ್ಚಿಮ ದಿಕ್ಕಿಗೆ ಮುದ್ದನಕಲ್ಲು ಬೆಟ್ಟದಲ್ಲಿ ೫೦ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿದ್ದು, ಇವು ಶಿಲಾವೃತ್ತಗಳಾಗಿವೆ. ಶಿಲಾಸಮಾಧಿಗಳ ರಚನೆಗೆ ಕೆಂಪು ಬೆಣಚುಕಲ್ಲುಗಳನ್ನು ಬಳಸಿರುವರು. ಬೆಣಚುಕಲ್ಲು ಚಪ್ಪಡಿಗಳನ್ನು ಸ್ವಸ್ತಿಕ್ ಆಕಾರದಲ್ಲಿ ನಿರ್ಮಿಸಿ ಅದರಲ್ಲಿ ಶವಸಂಸ್ಕಾರ ಮಾಡಿ ನಂತರ ಸುತ್ತಲೂ ಕಲ್ಲು ಚಪ್ಪಡಿಗಳನ್ನು ನೆಟ್ಟಿದ್ದಾರೆ. ಅಲ್ಲದೆ ಕೆಲವು ಶಿಲಾವೃತ್ತಗಳಿಗೆ ಮಧ್ಯದಲ್ಲಿ ಚಿಕ್ಕ ಗಾತ್ರದ ಉರುಟು ಕಲ್ಲು ಹಾಗೂ ಬಿಳಿಕಲ್ಲುಗಳನ್ನು ತುಂಬಿದ್ದಾರೆ. ಈ ಶಿಲಾಸಮಾಧಿಗಳ ರಚನೆಗೆ ಬೇಕಾದ ಕಲ್ಲು ಚಪ್ಪಡಿಗಳನ್ನು ಇಲ್ಲಿನ ಬೆಟ್ಟಗಳ ಬಂಡೆಗಳನ್ನು ಬಳಸಿದ ಗುರುತುಗಳಿವೆ. ಇಲ್ಲಿನ ಸಮಾಧಿಗಳ ರಚನೆಗೆ ಬಳಸಿರುವ ಕಲ್ಲು ಚಪ್ಪಡಿಗಳು ೧೫ ಅಡಿ ಉದ್ದ, ೭ ಅಡಿ ಅಗಲ, ೧.೫ ಅಡಿ ದಪ್ಪವಾಗಿವೆ. ಒಟ್ಟಾರೆ ಇಲ್ಲಿ ನೈಸರ್ಗಿಕವಾಗಿ ದೊರೆಯುವ ಶಿಲಾ ಸಂಪತ್ತನ್ನು ಬೃಹತ್ ಶಿಲಾಯುಗದ ಜನರು ತುಂಬಾ ಅಚ್ಚುಕಟ್ಟಾಗಿ ಬಳಸಿಕೊಂಡಿದ್ದಾರೆ. ಇಲ್ಲಿನ ಶಿಲಾಸಮಾಧಿಗಳಲ್ಲಿ ಕೆಲವನ್ನು ನಿಧಿಗಾಗಿ ಹಾಳುಮಾಡಲಾಗಿದ್ದು ಅವುಗಳಲ್ಲಿ ಕಪ್ಪು, ಕೆಂಪು ಮತ್ತು ಕಪ್ಪು-ಕೆಂಪು, ಕೆಂಪು ಬಣ್ಣದ ಮಡಿಕೆಗಳ ಮೇಲೆ ಕಪ್ಪು ಬಣ್ಣ ಚಿಮುಕಿಸಿ ಚಿತ್ರಿಸಿರುವುದನ್ನು ಕಾಣಬಹುದು. ಇಷ್ಟು ಪ್ರಮಾಣದ ಬೃಹತ್ ಶಿಲಾಸಮಾಧಿಗಳು ದೊರೆತಿರುವ ಈ ಘಟ್ಟ ಪ್ರದೇಶವು ಬೃಹತ್ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆಯಾಗಿದೆ.

ಗೂಳಿಹಟ್ಟಿ ಭೋವಿಹಟ್ಟಿ : ದೊಡ್ಡಘಟ್ಟ ಗ್ರಾಮದಿಂದ ಸುಮಾರು ೩ ಕಿ.ಮೀ. ದೂರದಲ್ಲಿರುವ ಗೂಳಿಹಟ್ಟಿ ಭೋವಿಹಟ್ಟಿ ಗ್ರಾಮವು ಮಾಡದಕೆರೆ ಹೋಬಳಿಗೆ ಸೇರಿದೆ. ಈ ಗ್ರಾಮದ ಉತ್ತರ ದಿಕ್ಕಿನ ಗಿರಿಯಣ್ಣನವರ ಹೊಲದಲ್ಲಿ ೪ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಕಲ್ಲುವೃತ್ತ ಮಾದರಿಗೆ ಸೇರಿವೆ. ಇವುಗಳಲ್ಲಿ ಒಂದು ಶಿಲಾಸಮಾಧಿ ಸುಮಾರು ೧೧೧ ಅಡಿ ಸುತ್ತಳತೆಯನ್ನು ಹೊಂದಿದೆ. ಈ ಸಮಾಧಿಯ ಮಧ್ಯದಲ್ಲಿ ಬಳಸಿರುವ ಕಲ್ಲುಚಪ್ಪಡಿಯು ೧೦ ಅಡಿ ಉದ್ದ, ೧/೨ ಅಡಿ ದಪ್ಪ ಹೊಂದಿದ್ದು ತುಂಬಾ ಬೃಹದಾಕಾರದ ಸಮಾಧಿಯಾಗಿದೆ. ಸ್ಥಳೀಯರು ಈ ಬೃಹತ್ ಶಿಲಾಸಮಾಧಿಗಳನ್ನು 'ಪಾಂಡವರ ಗುತ್ತಿ' ಎಂದು ಕರೆಯುತ್ತಾರೆ.

ಬನಸೀಹಳ್ಳಿ : ಬನಸೀಹಳ್ಳಿಯು ದೊಡ್ಡಘಟ್ಟ ಗ್ರಾಮದಿಂದ ೨ ಕಿ.ಮೀ. ದೂರದಲ್ಲಿದೆ. ಬನಸೀಹಳ್ಳಿ ಗ್ರಾಮದ ದಕ್ಷಿಣ ದಿಕ್ಕಿನಲ್ಲಿರುವ ಹೊಲದಲ್ಲಿ ೭ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಶಿಲಾವೃತ್ತ ಮಾದರಿಗೆ ಸೇರಿವೆ. ಇವುಗಳಲ್ಲಿ ಒಂದು ಶಿಲಾಸಮಾಧಿ ಸುಮಾರು ೧೬೫ ಅಡಿ ಸುತ್ತಳತೆಯನ್ನು ಹೊಂದಿದೆ. ಇಲ್ಲಿನ ಶಿಲಾಸಮಾಧಿಗಳ ರಚನೆಗೆ ಬಿಳಿಕಣಶಿಲೆಯನ್ನು ಬಳಸಿದ್ದು, ಕಲ್ಲು ಚಪ್ಪಡಿಗಳನ್ನು ಒಂದು ಶಿಲಾಸಮಾಧಿಯ ಸುತ್ತಲೂ ವೃತ್ತಾಕಾರವಾಗಿ ಜೋಡಿಸಿದ್ದಾರೆ. ಉಳಿದ ಶಿಲಾಸಮಾಧಿಗಳಿಗೆ ದುಂಡು ಶಿಲೆಗಳನ್ನು ಉಪಯೋಗಿಸಿರುವರು.

ಜಾನಕಲ್ಲು : ಹೊಸದುರ್ಗ ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಜಾನಕಲ್ಲು ಒಂದು. ಇದು ಮಾಡದಕೆರೆ ಹೋಬಳಿಯಲ್ಲಿದೆ. ೧೯೫೬ರಲ್ಲಿ ಎಂ. ಶೇಷಾದ್ರಿಯವರು ಜಾನಕಲ್ಲು ಗ್ರಾಮದಲ್ಲಿ ಆದಿಹಳೇ ಶಿಲಾಯುಧಗಳನ್ನು ಪತ್ತೆಹಚ್ಚಿದ್ದರು. ನಂತರದಲ್ಲಿ ಕೈಗೊಂಡ ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಪಾಳೆಯಗಾರರ ಕೋಟೆಯ ಹಿಂಭಾಗದಲ್ಲಿ ನಾಲ್ಕು ಬೃಹತ್ ಶಿಲಾಸಮಾಧಿಗಳು ಕಂಡುಬಂದವು. ಇವುಗಳಲ್ಲಿ ಒಂದು ಶಿಲಾಸಮಾಧಿಯು ನಿಲಸುಗಲ್ಲು (Menhir) ಮಾದರಿಗೆ ಸೇರಿದ್ದು ಇದು ಸುಮಾರು ೨೦ ಅಡಿ ಎತ್ತರ, ೭ ಅಡಿ ಅಗಲವಿದೆ. ಇದರ ಸುತ್ತಲೂ ಕಲ್ಲು ಚಪ್ಪಡಿಗಳನ್ನು ನೆಟ್ಟಿದ್ದು ಚಪ್ಪಡಿಗಳ ಬಹುಭಾಗ ಹಾಳಾಗಿ ಹೋಗಿವೆ. ಸ್ಥಳೀಯರು ಇದನ್ನು ನಿಲುವುಗಲ್ಲು ಎಂದು ಗುರುತಿಸುತ್ತಾರೆ. ಇನ್ನುಳಿದ ಮೂರು ಶಿಲಾಸಮಾಧಿಗಳು 'ಶಿಲಾವೃತ್ತ ಮಾದರಿ'ಗೆ ಸೇರಿದ್ದು ಅವು ಇದರ ಸಮೀಪದಲ್ಲೇ ಇವೆ.

ಕೆಂಕೆರೆ : ಮಾಡದಕೆರೆ ಹೋಬಳಿಗೆ ಸೇರಿದ ಕೆಂಕೆರೆ ಗ್ರಾಮವು ಮಾಡದಕೆರೆಯಿಂದ ಹೊರಕೆರೆ ದೇವರಪುರಕ್ಕೆ ಹೋಗುವ ಮಾರ್ಗದಲ್ಲಿ ಬಲಭಾಗಕ್ಕೆ ಬರುತ್ತದೆ. ಈ ಗ್ರಾಮದ ದಕ್ಷಿಣ ದಿಕ್ಕಿಗೆ ಗಂಗಾ ಕೊಳದ ಬದಿಯ ಹೊಲದಲ್ಲಿ ೭ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಶಿಲಾವೃತ್ತ ಪ್ರಕಾರಕ್ಕೆ ಸೇರಿವೆ. ಈ ಶಿಲಾವೃತ್ತಗಳ ರಚನೆಗೆ ಕಾಡುಗಲ್ಲು ಅಥವಾ ಕರಿಕಲ್ಲುಗಳನ್ನು ವೃತ್ತಾಕಾರವಾಗಿ ಜೋಡಿಸಿ ಅವುಗಳ ಮಧ್ಯೆ ಚಿಕ್ಕ ಗಾತ್ರದ ಉರುಟುಕಲ್ಲು, ಬೆಣಚುಕಲ್ಲುಗಳನ್ನು ತುಂಬಿದ್ದಾರೆ. ಶಿಲಾವೃತ್ತಗಳಿಗೆ ಬಳಸಿದ ಕಾಡುಗಲ್ಲುಗಳು ಅತ್ಯಂತ ದೊಡ್ಡ ಹಾಗೂ ಚಿಕ್ಕ ಗಾತ್ರದವು. ಇದರಲ್ಲಿ ಅತ್ಯಂತ ದೊಡ್ಡ ಶಿಲಾಸಮಾಧಿ ೮೮ ಅಡಿ ಸುತ್ತಳತೆಯನ್ನು ಹೊಂದಿದೆ. ಚಿಕ್ಕ ಶಿಲಾಸಮಾಧಿಯು ೩೦ ಅಡಿ ಇದೆ. ಇದೇ ಗ್ರಾಮದ ಪೂರ್ವದಿಕ್ಕಿನ ಮಂಟಲ್ ಕಣಿವೆಯಲ್ಲಿ ೫೦ಕ್ಕೂ ಹೆಚ್ಚು ಬೃಹತ್ ಶಿಲಾಸಮಾಧಿಗಳನ್ನು ಪತ್ತೆ ಹಚ್ಚಲಾಯಿತು. ಈ ಕಣಿವೆಯ ಪಶ್ಚಿಮ ದಿಕ್ಕಿನಲ್ಲಿ ಹರಿಯುವ ಗುಂಡಿಹಳ್ಳವು ಹೊಳಲ್ಕೆರೆ ತಾಲೂಕು ಹೊರಕೆರೆದೇವರಪುರ ಗ್ರಾಮದ ಸಮೀಪದಲ್ಲಿ ಹುಟ್ಟಿ ಗೂಳಿಹೊಸಹಳ್ಳಿ, ಸಣ್ಣಕಿಟ್ಟದಹಳ್ಳಿ ಕೆಂಕೆರೆ ಗ್ರಾಮಗಳ ಮೂಲಕ ಹಾದು ವೇದಾವತಿ ನದಿಯನ್ನು ಸೇರುತ್ತದೆ. ಈ ಹಳ್ಳದ ದಂಡೆಯ ಮೇಲಿರುವ ಕೆಂಕೆರೆ ಗ್ರಾಮದ ಮಂಟಲ್ ಕಣಿವೆಯಲ್ಲಿ ಬೃಹತ್ ಶಿಲಾಸಮಾಧಿಗಳು ಶಿಲಾವೃತ್ತ ಮಾದರಿಗಳಾಗಿ ನಿಧಿಗಾಗಿ ಕೆಲವು ಕಿಡಿಗೇಡಿಗಳು ೪ ಬೃಹತ್ ಶಿಲಾಸಮಾಧಿಗಳನ್ನು ಹಾಳು ಮಾಡಿದ್ದಾರೆ. ಶಿಲಾಸಮಾಧಿಗಳ ಬಳಿ ಕಪ್ಪು, ಕೆಂಪು ಮತ್ತು ಕಪ್ಪು-ಕೆಂಪು ಬಣ್ಣದ ಮಡಿಕೆ

ಚೂರುಗಳು ದೊರೆತಿವೆ. ಅಲ್ಲದೇ ಕಬ್ಬಿಣದ ಸಲಕರಣೆಗಳು ದೊರೆತಿರುವುದಾಗಿ ಸ್ಥಳೀಯರು ಹೇಳುತ್ತಾರೆ. ಅನ್ವೇಷಣೆಯ ಹಿನ್ನೆಲೆಯಲ್ಲಿ ಕೆಂಕೆರೆ ಪರಿಸರವು ಬೃಹತ್ ಶಿಲಾಯುಗ ಸಂಸ್ಕೃತಿಯ ಒಂದು ದೊಡ್ಡ ನೆಲೆ ಎಂದು ಹೇಳಬಹುದು.

ದೊಡ್ಡಕಿಟ್ಟದಹಳ್ಳಿ : ಗ್ರಾಮದ ಉತ್ತರದಿಕ್ಕಿನ ಒಂದು ಹೊಲದಲ್ಲಿ ೪ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಶಿಲಾವೃತ್ತ ಮಾದರಿಗೆ ಸೇರಿವೆ. ಇವುಗಳ ರಚನೆಗೆ ಕಾಡುಗಲ್ಲು/ಕರಿಕಲ್ಲುಗಳನ್ನು ಬಳಸಿದ್ದಾರೆ. ದೊಡ್ಡಕಿಟ್ಟದಹಳ್ಳಿಯು ಲೋಹ ತಯಾರಿಕಾ ನೆಲೆ. ಗ್ರಾಮದ ಬಹುಭಾಗದಲ್ಲಿ ಕಬ್ಬಿಣದ ಕುಲುಮೆಗಳ ಅವಶೇಷಗಳು ದೊರೆತಿರುವುದು ಇದಕ್ಕೆ ಇನ್ನಷ್ಟು ಪುಷ್ಠಿಯಾಗಿದೆ. ಕುಲುಮೆಗಳ ಪ್ರದೇಶದಲ್ಲಿ ಅಪಾರ ಪ್ರಮಾಣದ ಕಿಟ್ಟದ ಅವಶೇಷ, ಮಣ್ಣಿನ ಮೂಸೆಗಳು (ಕೊಳವೆಗಳು) ದೊರೆತಿವೆ. ಹೀಗಾಗಿ ದೊಡ್ಡಕಿಟ್ಟದಹಳ್ಳಿಯು ಒಂದು ಕಬ್ಬಿಣ ತಯಾರಿಕಾ ನೆಲೆಯಾಗಿದ್ದು ಇದರ ಸ್ಥಳನಾಮ ಈ ಹಿನ್ನೆಲೆಯಲ್ಲಿ ಬಂದಿರುವುದು ಗಮನಾರ್ಹ.

ಸಣ್ಣಕಿಟ್ಟದಹಳ್ಳಿ : ದೊಡ್ಡಕಿಟ್ಟದಹಳ್ಳಿಯ ಪೂರ್ವಭಾಗದಲ್ಲಿ ಗುಂಡಿಹಳ್ಳ ಹರಿಯುತ್ತದೆ. ಅದರ ಪೂರ್ವಕ್ಕಿರುವ ಗ್ರಾಮವೇ ಸಣ್ಣಕಿಟ್ಟದಹಳ್ಳಿ. ಈ ಗ್ರಾಮದಲ್ಲಿ ಕುಲುಮೆ, ಕಿಟ್ಟ ಹಾಗೂ ಸುಟ್ಟ ಮಣ್ಣಿನ ಅವಶೇಷಗಳು ಕಂಡುಬರುತ್ತವೆ. ಅಲ್ಲದೇ ಕಪ್ಪು ಬಣ್ಣದ ದುಂಡು ಶಿಲೆಗಳನ್ನು ಬಳಸಿ ನಿರ್ಮಿಸಿರುವ ಶಿಲಾವೃತ್ತ ಮಾದರಿಯ ಬೃಹತ್ ಶಿಲಾಸಮಾಧಿಗಳು ದೊರೆತಿದ್ದು, ಅವುಗಳಲ್ಲಿ ೬ ಸಮಾಧಿಗಳು ಉಳಿದಿವೆ.

ನಿರುವುಗಲ್ಲು : ಮತ್ತೋಡು ಗ್ರಾಮದಿಂದ ಮುಂದೆ ಸಾಗಿದರೆ ಕಾರೇಹಳ್ಳಿ ಇದೆ. ಇದು ಹೊಸಗ್ರಾಮ (ಚೆರಾಕ್) ಹಳೇ ಊರನ್ನು (ಬೇಚರಾಕ್) ನಿರುವುಗಲ್ಲು ಎಂದೂ, ಇದು ವೇದಾವತಿ ನದಿಯ ತೀರದಲ್ಲಿದೆ. ಈ ಗ್ರಾಮದಲ್ಲಿ ಪ್ರಾಚೀನವಾದ ಹರಿಹರೇಶ್ವರ ದೇವಾಲಯವಿದೆ. ದೇವಾಲಯದ ಎಡಭಾಗದಲ್ಲಿ ಸುಮಾರು ೨೦ ಅಡಿ ಎತ್ತರದ ಬೃಹತ್ ಶಿಲಾಯುಗ ಕಾಲಘಟ್ಟದ ಬಿಳಿಕಣಶಿಲೆಯ ನಿಲಸುಗಲ್ಲು ಇದೆ. ಇದೇ ಪರಿಸರದಲ್ಲಿ ೨೦ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಶಿಲಾವೃತ್ತ ಮಾದರಿಯವು. ದುಂಡು ಹಸಿರು ಶಿಲೆ ಹಾಗೂ ಬಿಳಿಕಣಶಿಲೆಯನ್ನು ಇವುಗಳಿಗೆ ಬಳಸಿದ್ದಾರೆ. ಶಿಲಾವೃತ್ತಗಳ ಮಧ್ಯಭಾಗದಲ್ಲಿ ಚಿಕ್ಕಗಾತ್ರದ ಹಾಗೂ ಬೆಣಚು ಕಲ್ಲುಗಳನ್ನು ತುಂಬಿರುವರು.

ಅತ್ತಿಮೊಗೆ : ಮಾಡದಕೆರೆ ಹೋಬಳಿಗೆ ಸೇರಿರುವ ಈ ಗ್ರಾಮದ ದಕ್ಷಿಣ ದಿಕ್ಕಿನ ಒಂದು ಚಿಕ್ಕ ಬೆಟ್ಟದಲ್ಲಿ 'ಅಡಗೋಲಜ್ಜಿ ಗುಂಡು' ಎಂದು ಕರೆಯಲ್ಪಡುವ ಮೂರು ದೊಡ್ಡದಾದ ಕಲ್ಲುಗುಂಡುಗಳಿವೆ. ಅದು ಹಿಡಂಬಿಯ ಗುಂಡು ಎಂದು ಕರೆಯಬೇಕಾದದ್ದು ಜನಪದ ಭಾಷೆಯಲ್ಲಿ 'ಅಡುಗೋಲಜ್ಜಿಗುಂಡು' ಎಂಬುದಾಗಿದೆ. ಭೀಮನ ಹೆಂಡತಿ ಹಿಡಂಬಿಯು ಇಲ್ಲಿ ಮೂರು ಒಲೆಗುಂಡುಗಳನ್ನು ಹೂಡಿ ಅಡುಗೆ ಮಾಡಿದಳು ಎಂಬುದು ಐತಿಹ್ಯ. ಪಾಂಡವರ ಕುರಿತು ಐತಿಹ್ಯವಿರುವ ಈ ಪರಿಸರದಲ್ಲಿ ಕೆಲವು ಬೃಹತ್ ಶಿಲಾಸಮಾಧಿಗಳು ಕಂಡುಬರುತ್ತವೆ. ಇವು ಶಿಲಾವೃತ್ತ ಪ್ರಕಾರಕ್ಕೆ ಸೇರಿವೆ.

ಮಲ್ಲಾಪುರ : ಮಾಡದಕೆರೆ ಹೋಬಳಿಗೆ ಸೇರಿರುವ ಮಲ್ಲಾಪುರ ಗ್ರಾಮವು ಗುಂಡಿಹಳ್ಳದ ಪಶ್ಚಿಮ ದಿಕ್ಕಿನಲ್ಲಿದೆ. ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ಸುಮಾರು ೨೦ಕ್ಕೂ ಹೆಚ್ಚು ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಇವು ಕಲ್ಲು ವೃತ್ತ ಮಾದರಿಯವು. ಇವುಗಳಿಗೆ ಕಪ್ಪುಶಿಲೆ, ಬಿಳಿಕಣಶಿಲೆ ಹಾಗೂ ಅದಿರು ಕಲ್ಲುಗಳನ್ನು ಬಳಸಿದ್ದಾರೆ. ಆದರೆ ಈ ಪ್ರದೇಶದಲ್ಲಿ ಇತ್ತೀಚೆಗೆ ಗಣಿಗಾರಿಕೆ ನಡೆಯುತ್ತಿದ್ದು ಬಹುತೇಕ ಶಿಲಾಸಮಾಧಿಗಳು ಹಾಳಾಗಿವೆ.

ಮಾಡದಕೆರೆ : ಮಾಡದಕೆರೆಯು ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರ, ಮಾಡದಕೆರೆಯ ಗುಂಡಿಹಳ್ಳದ ಪೂರ್ವದ ಭಾಗದಲ್ಲಿ ಸತೀಶ್ ಅವರ ಹೊಲದ ಬದಿಯಲ್ಲಿ ಸುಮಾರು ೪ ಬೃಹತ್ ಶಿಲಾಸಮಾಧಿಗಳು ಪತ್ತೆಯಾದವು. ಇವು ಶಿಲಾವೃತ್ತ ಪ್ರಕಾರಕ್ಕೆ ಸೇರಿವೆ.

ಹೊಸದುರ್ಗ : ಹೊಸದುರ್ಗದ ಚನ್ನಸಮುದ್ರದಿಂದ ಕುಮಾರನಕಣಿವೆ ಪರಿಸರದಲ್ಲಿ ೫ ನಿಲುಸುಗಲ್ಲು (Menhair) ಮಾದರಿಯ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ.

ಮೇಲೆ ವಿವರಿಸಿರುವ ಪ್ರದೇಶಗಳಲ್ಲದೆ ಹೊಸದುರ್ಗ ತಾಲೂಕಿನ ಬ್ಯಾಡರಹಳ್ಳಿ, ತಣಿಗೆಕಲ್ಲು, ಲಂಬಾಣಿಹಟ್ಟಿ, ಡಿ. ಮಲ್ಲಾಪುರ, ವೀರವ್ವನಾಗತಿಹಳ್ಳಿ, ಹೊನ್ನೇನಹಳ್ಳಿ, ಅಂಚಿಬಾರಿಹಟ್ಟಿ, ಕೆರೆಕೋಡಿಹಟ್ಟಿ, ಇಟ್ಟಿಗೆಹಳ್ಳಿ, ಬಲ್ಲಾಳಸಮುದ್ರ, ಕೆಲ್ಲೋಡು, ಬೆನಕನಹಳ್ಳಿ ಗ್ರಾಮಗಳ ಪರಿಸರಗಳಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ. ಸುತ್ತಲಿನ ಪರಿಸರದ ಹೊಳಲ್ಕೆರೆ ತಾಲೂಕಿನ ಹುಲಿಕೆರೆ, ಹಳೇಹಳ್ಳಿ ಲಂಬಾಣಿಹಟ್ಟಿ, ಸಿರಾಪ್ಪನಹಳ್ಳಿ, ಘಟ್ಟಿಹೊಸಹಳ್ಳಿ, ಗೂಳಿಹೊಸಹಳ್ಳಿ ಪರಿಸರ, ಹಿರಿಯೂರು ತಾಲೂಕಿನ ಭರಮಪುರ ಪರಿಸರದಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿವೆ.

ಒಟ್ಟಾರೆ ಪ್ರಸ್ತುತ ಅಧ್ಯಯನ ಕ್ಷೇತ್ರ ಹೊಸದುರ್ಗ ತಾಲೂಕು ಪರಿಸರ ಪ್ರಾಗೈತಿಹಾಸಿಕ ಸಂಸ್ಕೃತಿಯ ಅಧ್ಯಯನ ಅತ್ಯಂತ ಮಹತ್ವ ಹಾಗೂ ವಿಶೇಷವಾದುದು. ಪ್ರಾಗೈತಿಹಾಸಿಕ ಮಾನವನ ಹುಟ್ಟು ಮತ್ತು ಬೆಳವಣಿಗೆಗೆ ಇಲ್ಲಿನ ಭೌಗೋಳಿಕ ಪರಿಸರ ಎಲ್ಲಾ ರೀತಿಯ ಅವಕಾಶಗಳನ್ನು ಮಾಡಿಕೊಟ್ಟಿದೆ. ನಿಸರ್ಗದತ್ತವಾದ ಬೆಟ್ಟ-ಗುಡ್ಡ, ಗವಿ-ಕಲ್ಲಾಸರೆ, ಹಳ್ಳ-ಕೊಳ್ಳ, ಜರಿ-ತೊರೆ, ಅರಣ್ಯ ಪ್ರದೇಶ, ಫಲವತ್ತಾದ ಕೃಷಿ ಭೂಮಿ ಒಟ್ಟಾರೆ ಮಾನವ ಸಂಸ್ಕೃತಿಯ ಹುಟ್ಟು-ಬೆಳವಣಿಗೆಗೆ ಅನುಕೂಲಕರವಾದ ಎಲ್ಲಾ ತೆರನಾದ ಭೌಗೋಳಿಕವಾದ ವೈಶಿಷ್ಟ್ಯಗಳು ಈ ತಾಲೂಕು ಪರಿಸರದಲ್ಲಿ ಲಭ್ಯವಿವೆ. ಹೀಗಾಗಿ ಇತಿಹಾಸ ಪೂರ್ವದ ಮಾನವನ ಸಾಂಸ್ಕೃತಿ ಹಂತಗಳೆಲ್ಲವೂ ಸಂಮೃದ್ಧಿಯಾಗಿ ಬೆಳೆದು ಬಂದಿವೆ. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯಲ್ಲಿ ಹುಟ್ಟುವ ವೇದಾ ಮತ್ತು ಆವತಿ ಎರಡು ನದಿಗಳೇ ಹೊಸದುರ್ಗ ತಾಲೂಕು ಪರಿಸರದಲ್ಲಿ ವೇದಾವತಿ ನದಿಯಾಗಿ ಮೈದುಂಬಿ ಹರಿಯುತ್ತದೆ. ಇದಕ್ಕೆ ತಾಲೂಕಿನ ಅನೇಕ ಕಡೆ ಹುಟ್ಟಿ ಹರಿದು ಬರುವ ಹಳ್ಳ-ಕೊಳ್ಳ, ಜರಿ-ತೊರೆಗಳು ಸೇರಿಕೊಳ್ಳುತ್ತವೆ. ಭೌಗೋಳಿಕವಾಗಿ ಗ್ರಾನೈಟ್ ಶಿಲೆಗಳಿಂದ ಆವೃತ್ತವಾಗಿರುವ ಹೊಸದುರ್ಗ ತಾಲೂಕಿನಲ್ಲಿ ನೀರಗುಡ್ಡ, ಹಾಲುರಾಮೇಶ್ವರಗುಡ್ಡ, ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ ಮತ್ತು ತಿರುಮಲಗುಡ್ಡ ಪ್ರಮುಖ

ಬೆಟ್ಟ-ಗುಡ್ಡಗಳಾಗಿದ್ದು, ಇಲ್ಲಿ ಅನೇಕ ಗವಿಕಲ್ಲಾಸರಗಳು ಇವೆ. ಈ ತೆರನಾದ ಕಾರಣಗಳಿಂದಾಗಿಯೇ ಪ್ರಾಚೀನ ಮಾನವನು ಈ ಪ್ರದೇಶವನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದನು. ಈ ಪ್ರದೇಶದಲ್ಲಿ ಇದುವರೆವಿಗೂ ದೊರೆತಿರುವ ಪ್ರಾಚ್ಯಾವಶೇಷಗಳ ಆಧಾರದಿಂದ ಆದಿ ಹಳೇಶಿಲಾಯುಗ ಕಾಲದಿಂದ ಜೀವನ ಕ್ರಮವನ್ನು ಪ್ರಾರಂಭಿಸಿ ಪ್ರಸ್ತುತ ಇಂದಿನವರೆಗೂ ಸತತವಾಗಿ ಮುಂದುವರೆದಿದೆ ಎಂಬುದು ದೃಢಪಟ್ಟಿದೆ.

ಕ್ರಿ.ಶ. ೧೮೭೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಅವರು ಜಾನಕಲ್ಲಿನಲ್ಲಿ ಆದಿ ಹಳೆಶಿಲಾಯುಗದ ಕೈಗೊಡಲಿಗಳನ್ನು ಪತ್ತೆಹಚ್ಚಿದರು. ಇವರು ಪತ್ತೆಹಚ್ಚಿದ ಕೈಗೊಡಲಿಗಳು ಸ್ಥಳೀಯವಾಗಿ ಲಭ್ಯವಿರುವ ಕ್ವಾಟ್ರಜೈಟ್, ಕ್ವಾಟ್ಜ್ ಕಲ್ಲಿನಿಂದ ತಯಾರಿಸಿರುವುದು ಕಂಡುಬಂದಿತು. ಈ ಆಯುಧಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಎಂ. ಶೇಷಾದ್ರಿಯವರು ಇವುಗಳನ್ನು ಅಬ್ಬೆವಿಲೆ ಮತ್ತು ಅಶ್ಯೂಲಿಯನ್ ಸಂಸ್ಕೃತಿಗೆ ಹೋಲಿಸಿ ಗುಜರಾತ್ ಮತ್ತು ಅತಿರಂಪಕ್ಕನ ಆಯುಧಗಳ ಹೋಲಿಕೆ ಇವೆ ಎಂದು ಹೇಳಿದರು. ತರುವಾಯ ೧೯೫೬ರಲ್ಲಿ ಎಂ. ಶೇಷಾದ್ರಿಯವರೆ ಜಾನಕಲ್ಲಿನಲ್ಲಿ ಆದಿ ಹಳೆಶಿಲಾಯುಧಗಳನ್ನು ಶೋಧಿಸಿದರು. ಈ ಇಬ್ಬರು ವಿದ್ವಾಂಸರ ಶೋಧ ಹಾಗೂ ವಿಶ್ಲೇಷಣೆಗಳು ಪ್ರಾಗೈತಿಹಾಸಿಕ ಕಾಲದ ಆದಿ ಹಳೇಶಿಲಾಯುಗ ಸಂಸ್ಕೃತಿಯ ಅಧ್ಯಯನಕ್ಕೆ ಮಹತ್ವದ ಕಾಣಿಕೆಗಳು. ಹೊಸದುರ್ಗ ತಾಲೂಕು ಪರಿಸರದಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಹಾಗೂ ಎಂ. ಶೇಷಾದ್ರಿ ಅವರ ಬಳಿಕ ಮತ್ಯಾವ ಪುರಾತತ್ವ ಶಾಸ್ತ್ರಜ್ಞರು ಈ ಭಾಗದಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ಕುರಿತು ಅಧ್ಯಯನ ಕೈಗೊಳ್ಳಲಿಲ್ಲ. ಇದಕ್ಕೆ ಕಾರಣ ಚಿತ್ರದುರ್ಗ ಜಿಲ್ಲೆಯ ಬಹುತೇಕ ಇತಿಹಾಸಕಾರರು ಕೇಂದ್ರಸ್ಥಳ ಚಿತ್ರದುರ್ಗಕ್ಕೆ ಹೆಚ್ಚು ಒತ್ತು ನೀಡಿ ಅಧ್ಯಯನ ಮಾಡಿದ್ದು. ಪ್ರಸ್ತುತ ಅಧ್ಯಯನ ನಿಮಿತ್ತ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಸುಮಾರು ೩೭ ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆಹಚ್ಚಲಾಗಿದೆ. ಇವುಗಳು ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಕಾಲಘಟ್ಟಕ್ಕೆ ಸೇರಿದವುಗಳು.

ಪ್ರಾಗೈತಿಹಾಸಿಕ ಕಾಲದ ಮಾನವನ ಅತ್ಯಂತ ಪ್ರಾಚೀನವಾದದ್ದು ಹಳೆ ಶಿಲಾಯುಗ, ಇದರಲ್ಲಿ ಆದಿ, ಮಧ್ಯ ಹಾಗೂ ಅಂತಿಮ ಹಳೆ ಶಿಲಾಯುಗವೆಂದು ಮೂರು ವಿಭಾಗಗಳನ್ನು ಮಾಡಿರುವರು. ಆದಿ ಹಳೆಶಿಲಾಯುಗದ ನೆಲೆ ಜಾನಕಲ್ಲನ್ನು ಕುರಿತು ರಾಬರ್ಟ್ ಬ್ರೂಸ್‌ಫೂಟ್ ಹಾಗೂ ಎಂ. ಶೇಷಾದ್ರಿಯವರ ಸಂಶೋಧನ ಕಾರ್ಯಗಳನ್ನು ಕುರಿತು ಈ ಮೇಲಿನಂತೆ ನೋಡಲಾಗಿದೆ. ತರುವಾಯ ಪ್ರಸ್ತುತ ಅಧ್ಯಯನದಲ್ಲಿ ಗರಗ ಪರಿಸರದಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ಕ್ವಾರ್ಟ್ಜೈಟ್ ಶಿಲೆಯ ಒಂದು ಆಯುಧ ದೊರೆತಿದೆ. ಇದರ ರಚನೆಯ ಸಂದರ್ಭದಲ್ಲಿ ಸುತ್ತಲೂ ಚಕ್ಕೆಗಳನ್ನು ಎಬ್ಬಿಸಿರುವ ಗುರುತುಗಳು ಗೋಚರಿಸುತ್ತವೆ. ಹಾಗೂ ಈ ಹಿಂದೆ ರಾಬರ್ಟ್ ಬ್ರೂಸ್‌ಫೂಟ್‌ರ ಅಶ್ಯೂಲ್ ಮಾದರಿ ಕೊಡಲಿಯಂತೆಯೆ ಇದರ ರಚನೆಯು ಇದೆ. ಜಾನಕಲ್ಲು ಪರಿಸರದಲ್ಲಿ ಸ್ಥಳೀಯವಾಗಿ ದೊರೆಯುತ್ತಿದ್ದ ಕ್ವಾಟ್ರಜೈಟ್, ಕ್ವಾಟ್ಜ ಶಿಲೆಯನ್ನು ಆಯುಧಗಳ ತಯಾರಿಕೆ ಬಳಸಿದ್ದರೆ, ಗರಗ ಗ್ರಾಮ ಪರಿಸರದ ಆಯುಧವನ್ನು ಕೇವಲ ಕ್ವಾರ್ಟ್ಜೈಟ್ ಶಿಲೆಯಲ್ಲಿ ಮಾತ್ರ ರೂಪಿಸಲಾಗಿದೆ. ಇದರಿಂದಾಗಿ ತಿಳಿದುಬರುವುದು ವೇದಾವತಿ

ನದಿತೀರದ ಈ ನೆಲೆಗಳು ಸ್ಥಳೀಯವಾಗಿ ದೊರೆಯುವ Quartzite ಶಿಲೆಗಳನ್ನು ಹೆಚ್ಚಾಗಿ ಆಯುಧಗಳ ತಯಾರಿಕೆ ಬೆಳೆಸಿರುವುದು ಗಮನಾರ್ಹ ಸಂಗತಿಯಾಗಿದೆ. ಮಧ್ಯ ಹಳೇಶಿಲಾಯುಗವು ಇದರ ಮುಂದುವರೆದ ಸಂಸ್ಕೃತಿಯಾಗಿದೆ. ಇಲ್ಲಿನ ಲಂಬಾಣಿಹಟ್ಟಿಯ ದಕ್ಷಿಣ ದಿಕ್ಕಿನ ಹೊಲದಲ್ಲಿ 'Fluted Core'ನಿಂದ ತಯಾರಿಸಿದ ಮಧ್ಯ ಹಳೆಶಿಲಾಯುಗದ ಆಯುಧ ದೊರೆತಿದೆ. ಲಂಬಾಣಿಹಟ್ಟಿಯು ಜಾನಕಲ್ಲಿನ ಸಮೀಪವಿದ್ದು ಅಲ್ಲಿನ ಆದಿ ಹಳೆಶಿಲಾಯುಗ ಸಂಸ್ಕೃತಿಯ ಮುಂದುವರೆದ ಮಧ್ಯ ಹಳೆಶಿಲಾಯುಗದ ಜೀವನ ಕ್ರಮವನ್ನು ಲಂಬಾಣಿಹಟ್ಟಿ ಪರಿಸರದಲ್ಲಿ ಆಯುಧದ ಮೂಲಕ ಗುರುತಿಸಬಹುದಾಗಿದೆ. Fluted Core ಇಲ್ಲಿ ಸ್ಥಳೀಯವಾಗಿ ಲಭ್ಯವಿರುವುದು ಕ್ಷೇತ್ರಕಾರ್ಯದ ಮೂಲಕ ದೃಢಪಡಿಸಿಕೊಳ್ಳಲಾಯಿತು. ಒಟ್ಟಾರೆ ಜಾನಕಲ್ಲನ್ನು ಹೊರತುಪಡಿಸಿ ಗರಗ ಹಾಗೂ ಲಂಬಾಣಿಹಟ್ಟಿ ಪರಿಸರಗಳು ಹಳೆಶಿಲಾಯುಗದ ಆದಿ ಮತ್ತು ಮಧ್ಯ ಹಳೆಶಿಲಾಯುಗದ ಪ್ರಮುಖ ನೆಲೆಗಳಾಗಿವೆ. ಚಿತ್ರದುರ್ಗ ಜಿಲ್ಲೆಯ ಪ್ರದೇಶಗಳ ಹಳೇಶಿಲಾಯುಗ ಸಂಸ್ಕೃತಿಯ ಕಾಲಮಾನವನ್ನು ಹೊಸದುರ್ಗ ತಾಲೂಕಿನ ಹಳೆಶಿಲಾಯುಗ ಸಂಸ್ಕೃತಿಗೆ ಹೋಲಿಸ ಬಹುದಾಗಿದ್ದು, ಈ ಹಿನ್ನೆಲೆಯಲ್ಲಿ ಹಳೆಶಿಲಾಯುಗವು ಇಂದಿಗೆ ಸುಮಾರು ೧೦,೦೦೦– ೪,೦೦,೦೦೦ ವರ್ಷಗಳಷ್ಟು ಪೂರ್ವದಲ್ಲಿತ್ತೆಂದು ಹೇಳಲಾಗಿದೆ.[೧೫೫]

ಹಳೆ ಶಿಲಾಯುಗ ಸಂಸ್ಕೃತಿಯ ತರುವಾಯ ಈ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯು ಮುಂದುವರೆದಿದೆ. ಇಲ್ಲಿನ ಜಾನಕಲ್ಲು ಹಾಗೂ ಲಂಬಾಣಿಹಟ್ಟಿ ಪರಿಸರಗಳು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಬಹುಮುಖ್ಯ ನೆಲೆಗಳಾಗಿವೆ. ಜಾನಕಲ್ಲಿನಲ್ಲಿ ಕೋರ್ ಮತ್ತು ಚಕ್ಕೆ ಆಯುಧಗಳು ಲಂಬಾಣಿಹಟ್ಟಿಯಲ್ಲಿ ಸ್ಕ್ರೇಪರ್, ಬ್ಲೇಡ್ ಹಾಗೂ ಫ್ಲೇಕ್‌ಗಳು ದೊರೆತಿವೆ. ಇವುಗಳನ್ನು ಚರ್ಟ್, ಅಗೇಟಾ, ಜಾಸ್ಪರ್ ಮತ್ತು ಕೋರ್ ಶಿಲೆಗಳಲ್ಲಿ ರೂಪಿಸಲಾಗಿದೆ. ಇವುಗಳನ್ನು ಬೇಟೆಗಾರಿಕೆ, ಮೀನುಗಾರಿಕೆ ಮುಂತಾದ ಆಹಾರ ಸಂಗ್ರಹಣೆಗೆ ಬಳಸಿರುವ ಸಾಧ್ಯತೆ ಇದೆ. ಕಾರಣ ಭೌಗೋಳಿಕವಾಗಿ ಬೆಟ್ಟ-ಗುಡ್ಡಗಳಿಂದ ಕೂಡಿರುವ ಜಾನಕಲ್ಲು ಹಾಗೂ ಲಂಬಾಣಿಹಟ್ಟಿ ಪರಿಸರಗಳು ಇವರ ವಾಸಕ್ಕೆ ಅನುವು ಮಾಡಿಕೊಟ್ಟಿರಬಹುದು. ಇಂತಹ ಸೂಕ್ಷ್ಮ ಶಿಲಾಲಯುಗ ಸಂಸ್ಕೃತಿಯ ಮಾನವ ತನ್ನ ಸಾಂಸ್ಕೃತಿಕ ಒಡನಾಟವನ್ನು ಅತ್ಯಂತ ವಿಭಿನ್ನ ಬಗೆಯಲ್ಲಿ ಇಟ್ಟುಕೊಂಡಿದ್ದಾನೆ. ಈ ಸಂಸ್ಕೃತಿಯು ಅಂತ್ಯ ಹಳೆಶಿಲಾಯುಗ ಹಾಗೂ ನೂತನ ಶಿಲಾಯುಗ ಸಂಸ್ಕೃತಿಗಳ ನಡುವಿನ ಹಂತವಾಗಿದ್ದು ಮಾನವ ಜೀವನಕ್ರಮ ಸಾಕಷ್ಟು ಬದಲಾವಣೆಗಳಿಗೆ ಎಡೆಮಾಡಿಕೊಟ್ಟಿತು. ಈ ಸಂಸ್ಕೃತಿಯು ಸುಮಾರು ಕ್ರಿ.ಪೂ. ೨,೫೦೦– ೧೦,೦೦೦ ವರ್ಷಗಳ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತೆಂದು ತಿಳಿದುಬಂದಿದೆ.[೧೫೬]

ಹೊಸದುರ್ಗ ತಾಲೂಕು ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಮುಂದುವರೆದ ಭಾಗವೆಂಬಂತೆ ನೂತನ ಶಿಲಾಯುಗ ಕಾಲಘಟ್ಟದ ಅನೇಕ ಮಹತ್ವದ ನೆಲೆಗಳು ದೊರೆತಿವೆ. ಇವುಗಳಲ್ಲಿ ದುಗ್ಗಾವರ, ತಣಿಗೆಕಲ್ಲು, ಕಿಟ್ಟದಾಳು, ಹಿಂಡೆದೇವರಹಟ್ಟಿ ಹಾಗೂ ಗರಗ ಪರಿಸರಗಳು ಗಮನಾರ್ಹವಾದವುಗಳು. ಇವುಗಳಲ್ಲಿ ತಣಿಗೆಕಲ್ಲು ಅತ್ಯಂತ ಮಹತ್ವದ ನೆಲೆ. ಇಲ್ಲಿನ ಸಿದ್ದಪ್ಪನ ಬೆಟ್ಟದ ಗವಿಯ ಒಳಭಾಗದಲ್ಲಿ ಹಸಿರು ಶಿಲೆಯ ರೂಪಿತ ಉಜ್ಜಿ ನಯಗೊಳಿಸಿದ ಕೈಗೊಡಲಿ

ದೊರೆತಿದೆ. ಅದರೊಟ್ಟಿಗೆ ಇದೇ ಸಂಸ್ಕೃತಿಯ ಬೂದುಬಣ್ಣ, ಬೂದುಮಿಶ್ರಿತ ಕಪ್ಪುವರ್ಣದ ಮಡಿಕೆ ಚೂರುಗಳು ಅಪಾರ ಸಂಖ್ಯೆಯಲ್ಲಿ ದೊರೆತಿವೆ. ತಣಿಗೆಕಲ್ಲು ನೂತನ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆಯಾಗಿರಬಹುದು. ಕಾರಣ ಜಾನಕಲ್ಲು, ಲಂಬಾಣಿಹಟ್ಟಿ ಪರಿಸರಗಳ ಸನಿಹದಲ್ಲೇ ಇರುವ ತಣಿಗೆಕಲ್ಲು ಭೌಗೋಳಿಕವಾಗಿ ಬೆಟ್ಟ-ಗುಡ್ಡ, ಗವಿ-ಕಲ್ಲಾಸರೆಗಳನ್ನು ಹೊಂದಿದೆ. ಅಲ್ಲದೆ ಇದೇ ಸುತ್ತಲಿನ ಪರಿಸರದಲ್ಲಿ ಆದಿ ಹಳೆಶಿಲಾಯುಗ, ಮಧ್ಯ ಹಳೇಶಿಲಾಯುಗದ ಹಾಗೂ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗಳ ಅಸ್ಥಿತ್ವವಿದ್ದುದನ್ನು ಕಾಣಬಹುದಾಗಿದೆ. ಇನ್ನುಳಿದಂತೆ ದುಗ್ಗಾವರ, ಕಿಟ್ಟದಾಳು, ಹಿಂಡೆದೇವರಹಟ್ಟಿ, ಪರಿಸರಗಳಲ್ಲಿ ಕೇವಲ ಕಲ್ಲಿನ ಕೈಗೊಡಲಿಗಳು ಮಾತ್ರ ದೊರೆತಿದ್ದು ಮತ್ತಾವುದೇ ಪ್ರಾಚ್ಯಾವಶೇಷಗಳು ಕಂಡುಬಂದಿಲ್ಲ. ಒಟ್ಟಾರೆ ಇಲ್ಲಿನ ನೂತನ ಶಿಲಾಯುಗ ಸಂಸ್ಕೃತಿಯ ನಿವೇಶನಗಳಲ್ಲಿ ಹಸಿರು ಶಿಲೆ, ಕಪ್ಪುಶಿಲೆಗಳನ್ನು ಬಳಸಿ ರೂಪಿಸಿರುವ ಕೈಗೊಡಲಿಗಳು ದೊರೆತಿವೆ. ಇವು ಸ್ಥಳೀಯವಾಗಿ ಲಭ್ಯವಿದ್ದು ಶಿಲಾ ಮಾದರಿಗಳನ್ನು ಕುರಿತು ಪ್ರಸ್ತಾಪಿಸುತ್ತವೆ. ಸೂಕ್ಷ್ಮ ಶಿಲಾಯುಗಕ್ಕೆ ಹೋಲಿಸಿದರೆ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳು ಅಧಿಕವಾಗಿವೆ. ಈ ತಾಲೂಕಿನ ಪೂರ್ವದ ಭಾಗಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿದ್ದು ಇಲ್ಲೇ ಈ ಸಂಸ್ಕೃತಿಯ ಜನರು ಹೆಚ್ಚು ವಾಸವಾಗಿದ್ದಂತೆ ತೋರುತ್ತದೆ. ಈ ಸಂಸ್ಕೃತಿಯು ಸುಮಾರು ಕ್ರಿಪೂ. ೧೦೦೦-೨,೫೦೦ ವರ್ಷಗಳ ಅವದಿಯಲ್ಲಿ ಅಸ್ತಿತ್ವದಲ್ಲಿದ್ದಂತೆ ಕಂಡುಬರುತ್ತದೆ.[೧೩೩]

ಹೊಸದುರ್ಗ ತಾಲೂಕು ಪರಿಸರದ ಪ್ರಾಗೈತಿಹಾಸಿಕ ಸಂಸ್ಕೃತಿಯ ಮತ್ತೊಂದು ಬಹುಮುಖ್ಯವಾದ ಅಂಶವೆಂದರೆ ಬೃಹತ್ ಶಿಲಾಯುಗ ಸಂಸ್ಕೃತಿಯ ಶೋಧ. ನೂತನ ಶಿಲಾಯುಗ ಸಂಸ್ಕೃತಿಯ ನಂತರದಲ್ಲಿ ಶಿಲಾ-ತಾಮ್ರಯುಗದ ಯಾವುದೇ ಪ್ರಾಚೀನ ಕುರುಹುಗಳು ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿಲ್ಲ. ಆದರೆ ಬೃಹತ್ ಶಿಲಾಯುಗ ಸಂಸ್ಕೃತಿಯ ಸುಮಾರು ೩೩ ನೆಲೆಗಳನ್ನು ಬೆಳಕಿಗೆ ತರಲಾಗಿದೆ. ಇವುಗಳಲ್ಲಿ ೨೮ ನೆಲೆಗಳು ಹೊಸದುರ್ಗ ತಾಲೂಕಿನ ಗಡಿಯ ಒಳಗೆ, ೪ ನೆಲೆಗಳು ಹೊಳಲ್ಕೆರೆ ತಾಲೂಕಿನಲ್ಲಿ, ೧ ನೆಲೆ ಹಿರಿಯೂರು ತಾಲೂಕಿನಲ್ಲಿ ಪತ್ತೆಯಾಗಿವೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿರುವ ಬೃಹತ್ ಶಿಲಾಸಮಾಧಿಗಳನ್ನು ಪ್ರಧಾನವಾಗಿ ಕಲ್ಲುವೃತ್ತ ಸಮಾಧಿಗಳು ಹಾಗೂ ನಿಲಸುಗಲ್ಲುಗಳು ಎಂದು ಅವುಗಳ ರಚನೆಯ ಆಧಾರದಿಂದ ವಿಭಾಗಿಸಬಹುದು. ಕೇವಲ ಅನ್ವೇಷಣೆಯ ಆಧಾರದಿಂದ ಈ ವಿಭಾಗವನ್ನು ಮಾಡಲಾಗಿದೆ. ಉತ್ಖನನ ಮಾಡಿದಾಗ ಅವುಗಳ ರಚನೆ ಆ ಹಿನ್ನೆಲೆಯಲ್ಲಿ ವಿಭಾಗವನ್ನು ಗುರುತಿಸಬಹುದು. ಈ ಎರಡು ವರ್ಗಗಳಲ್ಲಿ ಕಲ್ಲುವೃತ್ತ ಸಮಾಧಿಗಳೇ ಅಧಿಕ ಸಂಖ್ಯಾದೃಷ್ಟಿಯಿಂದ ದೊಡ್ಡಘಟ್ಟ ಅತ್ಯಂತ ದೊಡ್ಡ ನೆಲೆಯಾಗಿದೆ. ಇಲ್ಲಿನ ಮುದ್ದನಕಲ್ಲು ಬೆಟ್ಟ ಪರಿಸರದಲ್ಲಿ ೫೦ ಶಿಲಾ ಸಮಾಧಿಗಳು ದೊರೆತಿರುವುದು ಗಮನಾರ್ಹ. ಸಮಾಧಿಗಳ ರಚನೆಗೆ ಬಳಸಿರುವ ಕಲ್ಲು ಬಿಳಿ, ಕೆಂಪು ಕಣಶಿಲೆಗಳಾಗಿವೆ. ಸಮಾಧಿಗಳ ರಚನೆಯಲ್ಲಿ ದುಂಡುಶಿಲೆಗಳನ್ನು ಸುತ್ತಲೂ ಇಟ್ಟಿರುವುದು; ಮಧ್ಯದಲ್ಲಿ ಸ್ವಸ್ಥಿಕ್ ಆಕಾರದಲ್ಲಿ ಕಲ್ಲು ಚಪ್ಪಡಿಗಳನ್ನು ನೆಟ್ಟು ಅದರ ಒಳಗೆ ಸಮಾಧಿ ಮಾಡಿ ಮೇಲೆ ದುಂಡು ಶಿಲೆಗಳ ಒಳಭಾಗದಲ್ಲಿ ಚಿಕ್ಕಗಾತ್ರದ ಎರಡು ಕಲ್ಲು, ಚಕ್ಕೆ ಕಲ್ಲು ಹಾಗೂ ಬೆಂಚುಕಲ್ಲುಗಳನ್ನು ತುಂಬಿರುವುದನ್ನು ಕಾಣಬಹುದು. ಕೇವಲ ಸಮಾಧಿಗಳಿಗೆ

ದುಂಡುಶಿಲೆಗಳನ್ನು, ಮತ್ತೆ ಕೆಲವಕ್ಕೆ ಚಪ್ಪಡಿ ಕಲ್ಲುಗಳನ್ನು ಸುತ್ತಲೂ ನೆಡಲಾಗಿದೆ. ಇನ್ನು ಸಮಾಧಿಗಳು ಪತ್ತೆಯಾಗಿರುವ ಎಡೆಗಳೆಲ್ಲವು ನಿಸರ್ಗದತ್ತವಾದ ಬೆಟ್ಟ-ಗುಡ್ಡಗಳಿಂದ ಆವೃತ್ತವಾದ ಪ್ರದೇಶಗಳಾಗಿವೆ. ಸಮಾಧಿಗಳ ನಿರ್ಮಾಣಕ್ಕೆ ಇಲ್ಲಿನ ಗುಡ್ಡಗಳನ್ನು ಅಲ್ಲಿನ ಶಿಲೆಗಳನ್ನು ಬೆಳೆಸಿರುವ ಅನೇಕ ಗುರುತುಗಳನ್ನು ಈಗಲೂ ಗುರುತಿಸಬಹುದು. ಈ ಕಾಲಘಟ್ಟದ ವಾಸ್ತವ್ಯದ ನೆಲೆಗಳಾಗಿ ದೊಡ್ಡಘಟ್ಟ, ದೊಡ್ಡಕಿಟ್ಟದಹಳ್ಳಿ, ಸಣ್ಣ ಕಿಟ್ಟದಹಳ್ಳಿ, ಮಲ್ಲಾಪುರ, ಸಿರಾಪ್ಪನಹಳ್ಳಿ, ಹುಲಿಕೆರೆ ಮೊದಲಾದವುಗಳು ಕಂಡುಬರುತ್ತವೆ. ಕಾರಣ ಇಲ್ಲಿ ಅಸಂಖ್ಯಾತ ಸಮಾಧಿಗಳು ಕಂಡುಬರುವುದು, ಕಬ್ಬಿಣ ತಯಾರಿಕಾ ನೆಲೆಗಳ ಅಸ್ಥಿತ್ವ ಹಾಗೂ ಭೌಗೋಳಿಕ ಪರಿಸರವನ್ನು ವಾಸಕ್ಕೆ ಯೋಗ್ಯವಾಗಿ ಮಾಡಿಕೊಂಡಿರುವುದು. ಈ ಸಂಸ್ಕೃತಿಯ ಜನರು ಬಹುಮಟ್ಟಿಗೆ ಕಬ್ಬಿಣ, ಲೋಹ ತಂತ್ರಗಾರಿಕೆಯನ್ನು ಬಲ್ಲವರಾಗಿದ್ದು, ತಾವು ಸಿದ್ಧಪಡಿಸಿದ ಕಬ್ಬಿಣದ ಸಾಮಾನುಗಳನ್ನು ಜನವಸತಿ ನೆಲೆಗಳಿಗೆ ಹೋಗಿ ಕೊಟ್ಟು-ಕೊಳ್ಳುವವರಾಗಿದ್ದಿರಬಹುದು. ಇದಕ್ಕೆ ಸಾಕ್ಷಿಯಾಗಿ ಮೇಲೆ ಹೇಳಿದ ನೆಲೆಗಳಲ್ಲಿ ಕಬ್ಬಿಣ ತಯಾರಿಕೆಯ ಕುಲುಮೆಯ ಅವಶೇಷಗಳು ಕ್ಷೇತ್ರಕಾರ್ಯದಲ್ಲಿ ದೊರೆತಿವೆ. ಇವುಗಳಲ್ಲಿ ದೊಡ್ಡಕಿಟ್ಟದಹಳ್ಳಿ, ಸಣ್ಣ ಕಿಟ್ಟದಹಳ್ಳಿ, ಸಿರಾಪ್ಪನಹಳ್ಳಿ ಪರಿಸರಗಳಲ್ಲಿ ಸುಮಾರು ಎಕರೆ ಪ್ರದೇಶದಲ್ಲಿ ಕಿಟ್ಟದ ಮಣ್ಣು, ಮಣ್ಣಿನ ಮೂಸೆಗಳು, ಕುಲುಮೆಯ ಅವಶೇಷಗಳು ದೊರೆತಿರುವುದು ಗಮನಾರ್ಹವಾದದು. ಈ ನೆಲೆಗಳಲ್ಲಿ ಉತ್ಖನನ ನಡೆದರೆ ಹೆಚ್ಚಿನ ಮಾಹಿತಿಗಳು ಲಭ್ಯವಾಗುತ್ತವೆ. ಈ ಸಂಸ್ಕೃತಿಯ ಕಬ್ಬಿಣದ ಆಯುಧಗಳ ತಯಾರಿಕೆಯಿಂದಾಗಿ ಕೃಷಿ ಕಾರ್ಯವು ಸುಧಾರಿಸಿತಲ್ಲದೆ, ಸ್ವಲ್ಪಮಟ್ಟಿಗೆ ಕಲ್ಲಿನ ಆಯುಧಗಳು ಸ್ಥಗಿತಗೊಂಡವು. ಈ ತೆರನಾದ ಕಾರಣಗಳಿಂದಾಗಿ ಈ ಯುಗವನ್ನು 'ಕಬ್ಬಿಣ ಯುಗ'ವೆಂದು ಕರೆಯಲಾಗಿದೆ. ಇನ್ನು ಸಮಾಧಿ ಸ್ಥಳಗಳಲ್ಲಿ ಕ್ಷೇತ್ರಕಾರ್ಯದಲ್ಲಿ ಮಡಿಕೆ ಚೂರುಗಳು ಲಭ್ಯವಾಗಿವೆ. ನಿಧಿಗಾಗಿ ಅನೇಕ ಸಮಾಧಿಗಳನ್ನು ಹಾಳುಮಾಡಲಾಗಿದ್ದು ಅಂತಹ ಪ್ರದೇಶಗಳಲ್ಲಿ ಮಡಿಕೆ ಅವಶೇಷಗಳು ದೊರೆತಿವೆ. ಇಲ್ಲಿನ ಬೃಹತ್ ಶಿಲಾ ಸಂಸ್ಕೃತಿಯ ಮಡಿಕೆ ಚೂರುಗಳು ಕಪ್ಪು, ಕೆಂಪು, ಕಪ್ಪು-ಕೆಂಪು ವರ್ಣದ ಮಡಿಕೆ ಚೂರುಗಳಾಗಿವೆ. ದೊಡ್ಡಘಟ್ಟದಲ್ಲಿ ದೊರೆತ ಮಡಿಕೆ ಚೂರುಗಳು ವಿಶಿಷ್ಟವಾಗಿವೆ. ಇವು ಕೆಂಪು ಬಣ್ಣದ ಮಡಿಕೆಗಳ ಮೇಲೆ ಕಪ್ಪು ಬಣ್ಣವನ್ನು ಚಿಮುಕಿಸಿರುವುದು; ಈ ರೀತಿಯ ಮಡಿಕೆ ಚೂರುಗಳು ದೊಡ್ಡಘಟ್ಟದಲ್ಲಿ ಮಾತ್ರ ದೊರೆತಿವೆ. ತಣಿಗೆಕಲ್ಲು ಗ್ರಾಮದ ಸಿದ್ಧಪ್ಪನಬೆಟ್ಟದ ಗವಿ ಒಳಭಾಗದಲ್ಲಿ ಅಸಂಖ್ಯಾತ ಮಡಿಕೆ ಚೂರುಗಳು ಲಭ್ಯವಾಗಿವೆ. ಇವುಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಮಡಿಕೆ ಚೂರುಗಳು ಯಥೇಚ್ಛವಾಗಿವೆ. ಬಹುಶಃ ಇದು ಮಡಿಕೆ ತಯಾರಿಕಾ ಕೈಗಾರಿಕಾ ನೆಲೆಯಾಗಿರಬಹುದು. ಅಲ್ಲದೆ ಭೌಗೋಳಿಕವಾಗಿ ಈ ಪರಿಸರದಲ್ಲಿ ಲಭ್ಯವಿರುವ ಕೆಂಪು ಮಣ್ಣನ್ನು ಮಡಿಕೆ ತಯಾರಿಕೆಗೆ ಬಳಸಿಕೊಳ್ಳಲಾಗಿದೆ. ಇಲ್ಲಿ ತಟ್ಟೆ, ಬಟ್ಟಲು, ಗುಡಾಣ, ಮೂರು ಕಾಲುಳ್ಳ ಮಡಿಕೆ ಸೇರಿದಂತೆ ವಿವಿಧ ಮಡಿಕೆ ಭಾಗಗಳು ದೊರೆತಿವೆ. ಬೃಹತ್ ಶಿಲಾ ಸಮಾಧಿಗಳನ್ನು ಕುರಿತು ಅನೇಕ ಐತಿಹ್ಯಗಳು ಸ್ಥಳೀಯವಾಗಿ ಲಭ್ಯವಿವೆ. ಇಲ್ಲಿನ ಬೃಹತ್ ಶಿಲಾಸಮಾಧಿಗಳನ್ನು 'ಪಾಂಡವರ ಗುತ್ತಿ' ಎಂದು ಕರೆಯುತ್ತಾರೆ. ಕ್ಷೇತ್ರಕಾರ್ಯದಲ್ಲಿ ಇವುಗಳ ಅನ್ವೇಷಣೆಗೆ ಈ ಐತಿಹ್ಯಗಳು ಬಹು ಸಹಕಾರಿಯಾದವು. ಪಾಂಡವರು ಇಲ್ಲಿ ಬಂದಿದ್ದರು, ಇಲ್ಲೇ ತಂಗಿದ್ದರು, ವಾಸವಾಗಿದ್ದರು, ಅಡುಗೆ ಮಾಡಿಕೊಂಡು ಊಟ ಮಾಡಿದರು. ಭೀಮನು

ಹಿಡಂಬವನ್ನು ಕೊಂದಿದ್ದನು, ಹಿಡಂಬಿಯು ಅಡುಗೆ ಮಾಡಿದ್ದಳು, ಕುಂತಿಯು ಅಡುಗೆ ಮಾಡಿದ್ದಳು. ಈ ತೆರನಾದ ಅನೇಕ ಐತಿಹ್ಯಗಳು ಬೃಹತ್ ಶಿಲಾ ಸಮಾಧಿಗಳನ್ನು ಕುರಿತು ಪ್ರಚಲಿತವಾಗಿವೆ. ಉತ್ತರ ಕರ್ನಾಟಕದಲ್ಲಿ ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೃಹತ್ ಶಿಲಾಸಮಾಧಿಗಳನ್ನು ಮೊರೆಯರಮಟ್ಟಿ, ಮೊರೆಯರ ಮನೆ ಹಾಗೂ ಮೊರೆಯರ ತಟ್ಟೆ ಎಂಬಿತ್ಯಾದಿ ಹೆಸರುಗಳಿಂದ ಕರೆದಿರುವುದು ಈಗಾಗಲೇ ತಿಳಿದ ಸಂಗತಿ. ಆದರೆ ಹೊಸದುರ್ಗ ತಾಲೂಕಿನ ಬೃಹತ್ ಶಿಲಾ ಸಮಾಧಿಗಳನ್ನು ಸ್ಥಳೀಯರು 'ಪಾಂಡವರ ಮನೆ', 'ಪಾಂಡವರ ಗುತ್ತಿ' ಎಂದೆಲ್ಲಾ ಕರೆಯಲಾಗುತ್ತದೆ. ಅಂತಹ ಐತಿಹ್ಯಗಳಲ್ಲಿ ಕೆಲವನ್ನು ಹೀಗೆ ನೋಡಬಹುದು, ಅತ್ತಿಮೊಗೆ ಗ್ರಾಮದ ದಕ್ಷಿಣ ದಿಕ್ಕಿನ ಬೆಟ್ಟದಲ್ಲಿ ಮೂರು ಅತ್ಯಂತ ದೊಡ್ಡದಾದ ಕಲ್ಲು ಗುಂಡುಗಳು ಇದ್ದು ಅವುಗಳನ್ನು ಅಡಗೋಲಜ್ಜಿ ಗುಂಡುಗಳು ಎಂದು ಕರೆಯಲಾಗುತ್ತದೆ. ಅಡಗೋಲಜ್ಜಿ ಎಂದರೆ ಭೀಮನ ಹೆಂಡತಿ ಹಿಡಂಬಿಯಾಗಿದ್ದಾಳೆ. ಹಿಡಂಬಿಯು ಇಲ್ಲಿ ಮೂರು ಒಲೆಗುಂಡುಗಳನ್ನು ಹೂಡಿ ಅಡುಗೆ ಮಾಡಿದ್ದಳು ಎಂದು ಹೇಳಲಾಗುತ್ತದೆ. ಈ ರೀತಿ ಕರೆಯಲಾಗುವ ಮೂರು ಕಲ್ಲು ಗುಂಡುಗಳ ಬಳಿಯಲ್ಲಿಯೇ ಅನೇಕ ಬೃಹತ್ ಶಿಲಾಸಮಾಧಿಗಳಿದ್ದು ಇವುಗಳನ್ನು 'ಪಾಂಡವರ ಗುತ್ತಿ' ಎಂದು ಕರೆಯಲಾಗುತ್ತದೆ. ಅದೇ ರೀತಿ ಸಿರಾಪ್ಪನಹಳ್ಳಿಯ ಐತಿಹ್ಯ ಹೀಗಿದೆ – ಇಲ್ಲಿನ ಮೂರು ಬೃಹದಾಕಾರದ ಕಲ್ಲುಗುಂಡುಗಳನ್ನು ಕುಂತಿಯ ಗುಂಡುಗಳು ಎಂದೂ, ಇದರ ಅನತಿ ದೂರದ ಒಂದು ಬೃಹದಾಕಾರದ ಕಲ್ಲು ಬಂಡೆಯನ್ನು ಭೀಮನ ಬಂಡೆ ಎಂದು ಕರೆಯಲಾಗುವುದು. ಪಾಂಡವರು ವನವಾಸಕ್ಕೆ ಬಂದಾಗ ಕುಂತಿಯು ಅಡುಗೆ ಮಾಡಲು ಒಲೆಗಾಗಿ ಕಲ್ಲುಗಳನ್ನು ತರಲೆಂದು ಭೀಮನಿಗೆ ಹೇಳಿದಳು. ಭೀಮನು ಒಂದು ಕಲ್ಲು ಹೊತ್ತು ತರುವಾಗ ಕುಂತಿಯು ಆಗಲೇ ಕಲ್ಲು ಗುಂಡುಗಳನ್ನು ಹೂಡಿ ಒಲೆಯನ್ನು ಮಾಡಿಕೊಂಡು ಅಡುಗೆ ಮಾಡುತ್ತಿದ್ದಳು; ಇದನ್ನು ಕಂಡ ಭೀಮನು ತಾನು ಹೊತ್ತು ತರುತ್ತಿದ್ದ ಕಲ್ಲುಗುಂಡನ್ನು ಅಲ್ಲಿಯೇ ಬಿಟ್ಟು ಬಂದನು. ಕುಂತಿ ಅಡುಗೆ ಮಾಡಲು ಹೂಡಿದಳು ಎನ್ನಲಾಗುವ ಕಲ್ಲುಗುಂಡುಗಳನ್ನು ಕುಂತಿಯ ಗುಂಡುಗಳು ಎಂದು, ಭೀಮನು ಬಿಟ್ಟು ಬಂದ ಕಲ್ಲು ಬಂಡೆಯ ಭೀಮನ ಬಂಡೆ ಎಂದು ಕರೆಯಲಾಗುತ್ತದೆ. ಈ ತೆರನಾದ ಐತಿಹ್ಯವಿರುವ ಪರಿಸರದಲ್ಲಿ ಅನೇಕ ಬೃಹತ್ ಶಿಲಾಸಮಾಧಿಗಳು ಕಂಡುಬರುತ್ತವೆ. ಹೀಗೆ ಈ ಪರಿಸರದ ಬೃಹತ್ ಶಿಲಾಸಮಾಧಿಗಳು ಹಾಗೂ ನೆಲೆಗಳನ್ನು ಕುರಿತು ಅನೇಕ ಐತಿಹ್ಯಗಳು ಪ್ರಚಲಿತವಿರುವುದನ್ನು ಕಾಣಬಹುದು. ಸ್ಥಳೀಯರು ಸಮಾಧಿಗಳನ್ನು 'ಪಾಂಡವರ ಗುತ್ತಿ' ಎಂದು ನಂಬಿಕೊಂಡು ಅವುಗಳ ಬಗ್ಗೆ ಭಕ್ತಿ, ಪೂಜ್ಯ ಭಾವನೆ ಹೊಂದಿರುವುದು ಎಷ್ಟೇ ಸಂದರ್ಭದಲ್ಲಿ ಅವುಗಳು ನಾಶವಾಗದಂತೆ ಉಳಿದುಕೊಂಡು ಬರುವುದಕ್ಕೆ ಸಹಾಯಕವಾಗಿವೆ. ಒಟ್ಟಾರೆ ಇಲ್ಲಿನ ಬೃಹತ್ ಶಿಲಾಯುಗ ಸಂಸ್ಕೃತಿಯು ಮುಂದುವರೆದ ಮಾನವ ಸಂಸ್ಕೃತಿಯ ವಿಭಿನ್ನ ಸಾಂಸ್ಕೃತಿಕ ಆಯಾಮಗಳನ್ನು ನಮಗೆ ಪರಿಚಯಿಸಿಕೊಡುತ್ತದೆ. ಇಲ್ಲಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಮಾನ ಕ್ರಿ.ಪೂ. ೨೦೦ ರಿಂದ ಕ್ರಿ.ಶ. ೧ನೇ ಶತಮಾನ.[೫೯]

ಪ್ರಸ್ತುತ ಅಧ್ಯಯನ ಕ್ಷೇತ್ರದ ಪ್ರಾಗೈತಿಹಾಸಿಕ ಚಿತ್ರಕಲೆಯು ಇಲ್ಲಿನ ಮಾನವನ ವಿಕಾಸ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗಿದೆ. ಶಿಲಾಯುಗದಲ್ಲಿ ಹೆಚ್ಚಾಗಿ ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿದ್ದ

ಆದಿಮಾನವ ತನ್ನ ಬದುಕಿನ ಅನುಭವಗಳನ್ನು, ಭಾವನೆಗಳನ್ನು ಚಿತ್ರಗಳ ರೂಪದಲ್ಲಿ ಅಭಿವ್ಯಕ್ತಿಗೊಳಿಸುತ್ತಿದ್ದ. ಇಂಥ ಚಿತ್ರಗಳನ್ನು ಅವನು ತನ್ನ ಖಾಯಂ ವಾಸಸ್ಥಾನ (ಮನೆ)ಗಳಾಗಿದ್ದ ಗುಹೆಗಳು ಇಲ್ಲವೆ ತಾತ್ಕಾಲಿಕ ಆಶ್ರಯ ತಾಣಗಳಾಗಿದ್ದ ಕಲ್ಲಾಸರೆ(Rock Shetter)ಗಳ ಗೋಡೆ, ಭಾವಣಿಗಳ ಮೇಲೆ ಬಣ್ಣದಿಂದ ಬಿಡಿಸುತ್ತಿದ್ದ. ಕೇವಲ ಸಾಂಕೇತಿಕವಾಗಿರುವ ಈ ಚಿತ್ರಗಳು ಇತಿಹಾಸ ಕಾಲದ ಚಿತ್ರಗಳಂತೆ ಪರಿಪೂರ್ಣವಾಗಿರುವುದಿಲ್ಲ, ಆದರೆ ಭಾವಾಭಿವ್ಯಕ್ತಿಯಲ್ಲಿ ಪರಿಣಾಮಕಾರಿಗಳಾಗಿರುತ್ತವೆ. ಇಂತಹ ಚಿತ್ರಗಳನ್ನು 'ಪ್ರಾಗೈತಿಹಾಸಿಕ ಕಾಲದ ಕಲೆ' ಎಂದು ಕರೆಯಲಾಗಿದೆ.[೧೦೫]

ಹೊಸದುರ್ಗ ತಾಲೂಕು ಪರಿಸರದ ಪ್ರಾಗೈತಿಹಾಸಿಕ ಕಲೆಗೆ ಸಂಬಂಧಿಸಿದಂತೆ ಎಚ್. ಶ್ರೀಶೈಲ ಆರಾಧ್ಯ ಅವರು ತಣಿಗೆಕಲ್ಲು ಪರಿಸರದ ರೇಖಾಕೆತ್ತನೆ ಹಾಗೂ ವರ್ಣ ರೇಖಾಚಿತ್ರಗಳನ್ನು ವರದಿ ಮಾಡಿದ್ದಾರೆ. ಜಾನಕಲ್ಲು ಪರಿಸರದ ಕುಳಿಗಳು ಹಾಗೂ ಕುಳಿವಿನ್ಯಾಸಗಳ ಬಗ್ಗೆ ಲಕ್ಷ್ಮಣ್ ತೆಲಗಾವಿಯವರು ತಮ್ಮ ಒಂದು ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.[೧೦೬] ಪ್ರಸ್ತುತ ಅಧ್ಯಯನ ನಿಮಿತ್ತ ಕ್ಷೇತ್ರ ಕಾರ್ಯದಲ್ಲಿ ಗರಗ, ಗೂಳಿಹಳ್ಳಿ ಹಾಗೂ ಸೂಜಿಗಲ್ಲು ಪರಿಸರ ಹಾಗೂ ಹೊಳಲ್ಕೆರೆ ತಾಲೂಕಿನ ಘಟ್ಟಿಹೊಸಹಳ್ಳಿ ಪರಿಸರಗಳಲ್ಲಿ ಕೆಲವು ಪ್ರಾಗೈತಿಹಾಸಿಕ ರೇಖಾಕೃತಿಗಳನ್ನು ಪತ್ತೆಹಚ್ಚಲಾಗಿದೆ. ಇವುಗಳಲ್ಲಿ ವರ್ಣಚಿತ್ರ, ಕುಟ್ಟಿ ಮೂಡಿಸಿದ ಚಿತ್ರ, ಬಟ್ಟಲಾಕಾರದ ಕುಳಿಗಳು(ಪೆಟ್ರೋಗ್ಲಿಫ್ಸ್) ಮುಖ್ಯವಾಗಿವೆ. ಶ್ರೀರಾಂಪುರ ಹೋಬಳಿಗೆ ಸೇರಿದ ಗರಗ ಗ್ರಾಮದ 'ಮುತ್ತಿನಗಿರಿ' ಬೆಟ್ಟ ಪರಿಸರದ ಒಂದು ಕಲ್ಲಾಸರೆಯಲ್ಲಿ ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಗಳು ಪತ್ತೆಯಾಗಿವೆ. ಇವುಗಳು ನೀಳವಾದ ಕೊಂಬುಗಳುಳ್ಳ ಗೂಳಿ ಚಿತ್ರಗಳಾಗಿದ್ದು, ಕೆಂಪು ವರ್ಣದಿಂದ ಬಿಡಿಸಲಾಗಿದೆ. ಇವು ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದವೆಂದು ಹೇಳಬಹುದು. ಈ ಸಂಸ್ಕೃತಿಯ ಶಿಲಾಯುಧಗಳಾವು ದೊರೆತಿಲ್ಲ. ಆದರೆ ತಾತ್ಕಾಲಿಕ ವಾಸಸ್ಥಾನ ಕಲ್ಲಾಸರೆಯಲ್ಲಿ ಅವನು ವಾಸವಾಗಿದ್ದ ಜೀವನ ಸಾಗಿಸುತ್ತಿದ್ದ ಎಂಬುದಕ್ಕೆ ಇದರಲ್ಲಿನ ಅವನ ಭಾವಾಭಿವ್ಯಕ್ತಿಯ ವರ್ಣಚಿತ್ರಗಳು ಹಾಗೂ ಇಲ್ಲೇ ದೊರೆತ ನೂತನ ಶಿಲಾಸಂಸ್ಕೃತಿಯ ಮಡಿಕೆ ಚೂರುಗಳು ಆಧಾರಗಳಾಗಿವೆ. ಅದೇ ರೀತಿ ಶ್ರೀರಾಂಪುರ ಸಮೀಪದ ಗೂಳಿಹಳ್ಳಿಯ ಹೊನ್ನರಾಜರಾಜೇಶ್ವರಿ ದೇವಾಲಯದ ಹಿಂದಿನ ಕಲ್ಲಾಸರೆಯಲ್ಲಿ ಕಲ್ಲಿನಿಂದ ಕುಟ್ಟಿ ಮೂಡಿಸಿರುವ ಸುಮಾರು ೭ ಗೂಳಿ ಚಿತ್ರಗಳಿವೆ. ಇವುಗಳನ್ನು ಒಂದೇ ಸಾಲಿನಲ್ಲಿ ಚಿತ್ರಿಸಲಾಗಿದ್ದು, ಬೃಹತ್ ಶಿಲಾಯುಗ ಕಾಲಘಟ್ಟಕ್ಕೆ ಸೇರಿದವುಗಳು ; ಕಾರಣ ಇದೇ ಪರಿಸರದಲ್ಲಿ ಕಲ್ಲು ವೃತ್ತ ಮಾದರಿ ಸಮಾಧಿಗಳು ದೊರೆತಿವೆ. ಸೂಜಿಕಲ್ಲು ಹಾಗೂ ಮೈಲಾರಪುರ ಪರಿಸರದಲ್ಲಿ ಬಂಡೆಗಳ ಮೇಲೆ ಬಟ್ಟಲಾಕಾರದ ಕುಳಿಗಳು(ಪೆಟ್ರೋಗ್ಲಿಫ್ಸ್) ದೊರೆತಿವೆ. ಇದೇ ರೀತಿಯ ವಿನ್ಯಾಸಗಳನ್ನು ಘಟ್ಟಿಹೊಸಹಳ್ಳಿಯ ಬೃಹತ್ ಶಿಲಾಸಮಾಧಿಗಳ ಮೇಲಿನ ಹಾಗೂ ಬಂಡೆಗಳ ಮೇಲೆ ಕಂಡುಬರುತ್ತವೆ. ಒಟ್ಟಾರೆ ಈ ಪರಿಸರದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಕೇವಲ ಕೆಲವೇ ಪ್ರದೇಶಗಳಲ್ಲಿ ಮಾತ್ರ ಪ್ರಾಗೈತಿಹಾಸಿಕ ಕಲ್ಲಾಸರೆ ಚಿತ್ರಗಳು ದೊರೆತಿದ್ದು ಇವು ನೂತನ ಹಾಗೂ ಬೃಹತ್ ಶಿಲಾಯುಗ ಕಾಲಘಟ್ಟದಲ್ಲಿ ರಚನೆಗೊಂಡಿರುವ ಸಾಧ್ಯತೆ ಇದೆ.

ಹೊಸದುರ್ಗ ತಾಲೂಕಿನ ಶಿಲಾಯುಗ/ಪ್ರಾಗೈತಿಹಾಸಿಕ ಸಂಸ್ಕೃತಿಯು ಇಲ್ಲಿನ ಸ್ಥಳನಾಮಗಳ ಮೇಲೆ ಬೀರಿರುವ ಪ್ರಭಾವ ಗಮನಾರ್ಹ. ಅಂತಹ ಸ್ಥಳನಾಮಗಳೆಂದರೆ–ಜಾನಕಲ್ಲು, ತಣಿಗೆಕಲ್ಲು,

ಸೂಜಿಕಲ್ಲು, ನಿರುವುಗಲ್ಲು, ಗೂಳಿಹಳ್ಳಿ, ದೊಡ್ಡಕಿಟ್ಟದಹಳ್ಳಿ, ಸಣ್ಣಕಿಟ್ಟದಹಳ್ಳಿ, ಕಿಟ್ಟದಹಳ್ಳಿ, ಕಿಟ್ಟದಾಳ್, ಬೂದಿಹಾಳು ಸೇರಿದಂತೆ ಅನೇಕ ಪ್ರದೇಶಗಳ ಸ್ಥಳನಾಮಗಳು ಪ್ರಾಗೈತಿಹಾಸಿಕ ಸಂಸ್ಕೃತಿಯ ಹಿನ್ನೆಲೆಯಿಂದಲೆ ಬಂದಿರುವುದನ್ನು ಕಾಣಬಹುದು.

ಹೀಗೆ ಹೊಸದುರ್ಗ ತಾಲೂಕಿನ ಪ್ರಾಗೈತಿಹಾಸಿಕ ಸಂಸ್ಕೃತಿಯು ಆದಿ ಮಾನವನ ವಿಭಿನ್ನ ಜೀವನ ಸಂಸ್ಕೃತಿಯನ್ನು ವಿವಿಧ ಆಯಾಮಗಳ ನೆಲೆಯಲ್ಲಿ ಅಧ್ಯಯನ ಮಾಡಲು ಸಾಧ್ಯವಾಗಿದೆ. ಇಲ್ಲಿನ ಭೌಗೋಳಿಕ ಪರಿಸರವನ್ನು ಅತ್ಯಂತ ವಸ್ತುನಿಷ್ಠವಾಗಿ ಬಳಸಿಕೊಂಡು ಮಾನವ ಅದರ ಸಂಪತ್ತಿನಿಂದ ತನ್ನ ಜೀವನ ನಿರ್ವಹಣೆಯನ್ನು ಮಾಡಿಕೊಂಡಿದ್ದನು. ಬಯಲು ಪರಿಸರದಲ್ಲೇ ಪ್ರಾಗೈತಿಹಾಸಿಕ ಮಾನವ ಸಂಸ್ಕೃತಿ ವಿಶೇಷವಾಗಿ ಬೆಳೆದಿರುತ್ತದೆ ಎಂಬುದು ಪುರಾತತ್ವಶಾಸ್ತ್ರಜ್ಞರ ಅಭಿಮತ. ಆದರೆ ಜಿಲ್ಲೆಯು ಬಯಲು ಪರಿಸರವಾಗಿದ್ದರು ಹೊಸದುರ್ಗ ತಾಲೂಕು ಮಾತ್ರ ಅರೆಮಲೆನಾಡು ಪರಿಸರ. ಬಹುಶಃ ಇದು ಮುಂಚೆ ಕಾಡಿನಿಂದ ಕೂಡಿದ್ದು ಶಿಲಾಯುಗದ ಮಾನವ ಸಂಸ್ಕೃತಿಯ ವಿಕಾಸವಾದಂತೆ ಕೃಷಿ ಸಂಸ್ಕೃತಿಯ ಪ್ರಗತಿಗಾಗಿ ಕಾಡನ್ನು ನಾಶಮಾಡಿದ್ದರ ಪರಿಣಾಮ ಅದು ಅರೆಮಲೆನಾಡು ಪರಿಸರವಾಗಿದೆ. ಹಾಗಿದ್ದೂ ಇಲ್ಲಿನ ಪ್ರಾಗೈತಿಹಾಸಿಕ ಸಂಸ್ಕೃತಿಯ ಅಗಾಧತೆಗೆ ಕೊರತೆಯೇನಿಲ್ಲ. ಒಟ್ಟಿನಲ್ಲಿ ಹೊಸದುರ್ಗ ತಾಲೂಕು ಪರಿಸರವು ಆದಿ ಹಳೆಯ ಶಿಲಾಯುಗದಿಂದ ಬೃಹತ್ ಶಿಲಾಸಂಸ್ಕೃತಿಯವರೆಗಿನ ಮಾನವನ ಅನೇಕ ನೆಲೆಗಳನ್ನು ಒಳಗೊಂಡಿದ್ದು, ಇದು ಕರ್ನಾಟಕದ ಪ್ರಾಗಿತಿಹಾಸ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಹೊಸದುರ್ಗ ತಾಲೂಕಿನಲ್ಲಿ ಪತ್ತೆಯಾಗಿರುವ ಪ್ರಾಗೈತಿಹಾಸಿಕ ನೆಲೆಗಳು

ಕ್ರ.ಸಂ.	ಗ್ರಾಮದ ಹೆಸರು	ಹಳೇ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿಹಾಸ ಕಾಲ
೧.	ಗರಗ	√		√		
೨.	ತಣಿಗೆಕಲ್ಲು			√	√	
೩.	ಕಿಟ್ಟದಾಳು			√	√	
೪.	ಹಿಂಡೇದೇವರಹಟ್ಟಿ			√		
೫.	ದುಗ್ಗಾವರ			√	√	
೬.	ಜಾನಕಲ್ಲು		√		√	
೭.	ಕೆಂಕೆರೆ				√	
೮.	ದೊಡ್ಡಕಿಟ್ಟದಹಳ್ಳಿ				√	
೯.	ಸಣ್ಣಕಿಟ್ಟದಹಳ್ಳಿ				√	
೧೦.	ಬೆನಕನಹಳ್ಳಿ				√	

೧೧.	ಹೊನ್ನೇನಹಳ್ಳಿ				√	
೧೨.	ವೀರವ್ವನಾಗತಿಹಳ್ಳಿ				√	
೧೩.	ಅಂಚಿಬಾರಿಹಟ್ಟಿ				√	
೧೪.	ಕೆರೆಕೋಡಿಹಟ್ಟಿ				√	
೧೫.	ಇಟ್ಟಿಗೆಹಳ್ಳಿ				√	
೧೬.	ನಿರುವುಗಲ್ಲು				√	
೧೭.	ಅತ್ತಿಮೊಗೆ				√	
೧೮.	ಮಲ್ಲಾಪುರ				√	
೧೯.	ಮಾಡದಕೆರೆ				√	
೨೦.	ಬ್ಯಾಡರಹಳ್ಳಿ				√	
೨೧.	ಬಲ್ಲಾಳಸಮುದ್ರ				√	
೨೨.	ಹೊಸದುರ್ಗ				√	
೨೩.	ಬನಸೀಹಳ್ಳಿ				√	
೨೪.	ಸೂಜಿಗಲ್ಲು				√	
೨೫.	ಗೂಳಿಹಳ್ಳಿ				√	
೨೬.	ಕೆಲ್ಲೋಡು				√	
೨೭.	ಗೂಳಿಹಟ್ಟಿ ಭೋವಿಹಟ್ಟಿ				√	
೨೮.	ದೊಡ್ಡಘಟ್ಟ				√	
೨೯.	ಲಂಬಾಣಿಹಟ್ಟಿ		√		√	
೩೦.	ಡಿ. ಮಲ್ಲಾಪುರ				√	

ಹೊಸದುರ್ಗ ತಾಲೂಕು ಪರಿಸರದ ಹೊಳಲ್ಕೆರೆ ತಾಲೂಕಿನಲ್ಲಿ ಪತ್ತೆಯಾಗಿರುವ ಪ್ರಾಗೈತಿಹಾಸಿಕ ನೆಲೆಗಳು

ಕ್ರಸಂ.	ಗ್ರಾಮದ ಹೆಸರು	ಹಳೇ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿಹಾಸ ಕಾಲ
೧.	ಸಿರಾಪ್ಪನಹಳ್ಳಿ				√	
೨.	ಹುಲಿಕೆರೆ				√	
೩.	ಹಳೇಹಳ್ಳಿ ಲಂಬಾಣಿಹಟ್ಟಿ				√	
೪.	ಗೂಳಿಹೊಸಹಳ್ಳಿ				√	

ಹೊಸದುರ್ಗ ತಾಲೂಕು ಪರಿಸರದ ಹಿರಿಯೂರು ತಾಲೂಕಿನಲ್ಲಿ ಪತ್ತೆಯಾಗಿರುವ ಪ್ರಾಗೈತಿಹಾಸಿಕ ನೆಲೆಗಳು

ಕ್ರ.ಸಂ.	ಗ್ರಾಮದ ಹೆಸರು	ಹಳೇ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿಹಾಸ ಕಾಲ
೧.	ಭರಂಪುರ				√	

ಟಿಪ್ಪಣಿಗಳು

೧. ಶ್ರೀನಿವಾಸ್ ಎಲ್., ೨೦೧೦, **ಹಂಪಿ ಪರಿಸರದ ಆದಿಮಾನವನ ನೆಲೆಗಳು,** ಪು. ೧.

೨. ಅದೇ, ಪು. ೨.

೩. ಷೇಕ್ ಅಲಿ ಬಿ.(ಪ್ರಸಂ), ಸುಂದರ ಅ(ಸಂ)., ೧೯೯೭, **ಕರ್ನಾಟಕ ಚರಿತ್ರೆ,** ಸಂಪುಟ-೧, ಪು. ೯೪.

೪. ಅದೇ, ಪು. ೯೪-೯೫.

೫. ಅದೇ.

೬. ರವಿಕೋರಿಶೆಟ್ಟರ್(ಮೂಲ), ಗಂಗಾಧರ ದೊಡ್ಡಮನಿ(ಅನು)., ೨೦೦೧, **ಪ್ರಾಗೈತಿಹಾಸಿಕ ಜಗತ್ತು-೧,** ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ, ತಂಬಂಡ ವಿಜಯ್ ಪೂಣಚ್ಚ(ಸಂ), ಪು. ೭೬.

೭. ಷೇಕ್ ಅಲಿ ಬಿ(ಪ್ರಸಂ), ಸುಂದರ ಅ(ಸಂ)., ೧೯೯೭, **ಪೂರ್ವೋಕ್ತ,** ಪು. ೯೫.

೮. ಶ್ರೀನಿವಾಸ್ ಎಲ್., ೨೦೧೦, **ಪೂರ್ವೋಕ್ತ,** ಪು. ೧೭.

೯. ಅದೇ.

೧೦. ಶಿವತಾರಕ್ ಕೆ.ಬಿ., ೨೦೦೧, **ಕರ್ನಾಟಕದ ಪುರಾತತ್ವ ನೆಲೆಗಳು,** ಪು. ೪.

೧೧. ಜಯಣ್ಣ ಯು., ೨೦೦೨, **ಮೊಳಕಾಲ್ಮೂರು ತಾಲೂಕಿನ ಪುರಾತತ್ವೀಯ ಪರಿಸರ** (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪು. ೬೮.

೧೨. ಷೇಕ್ ಅಲಿ ಬಿ(ಪ್ರಸಂ), ಸುಂದರ ಅ(ಸ.ಸಂ)., ೧೯೯೭, **ಪೂರ್ವೋಕ್ತ,** ಪು. ೯೬

೧೩. ಅದೇ.

೧೪. Gopal B.R, Devaraj D.V(Edi)., 1995, **Seshachandrika** (A Compendium of Dr. M. Seshadri's Works), P. 14-15.

೧೫. ಷೇಕ್ ಅಲಿ ಬಿ(ಪ್ರಸಂ), ಸುಂದರ ಅ(ಸ.ಸಂ)., ೧೯೯೭, ಪೂರ್ವೋಕ್ತ, ಪು. ೯೬

೧೬. ೧೮೩೬ರಲ್ಲಿ ಫ್ರಾನ್ಸ್ ದೇಶದ ಸಾಮ್ ನದಿ ದಂಡೆಯ ಮೇಲಿನ ಅಬ್ಬೆವಿಲೆ ಮತ್ತು ಅಶ್ಯೂಲ್ ಎಂಬ ಸ್ಥಳಗಳಲ್ಲಿ ಮೊಟ್ಟ ಮೊದಲು ಕ್ರಮವಾಗಿ ಅತೀ ಪ್ರಾಚೀನ ಮತ್ತು ಸ್ವಲ್ಪ ಅನಂತರ ಕಾಲದ ಸುಧಾರಿತ ಆದಿ ಶಿಲಾಯುಗ ಉಪಕರಣಗಳನ್ನು ಬೂಷರ್ ದ ಪಾರ್ಥ್ ಅವರು

ಶೋಧಿಸಿದರು. ಆದ್ದರಿಂದ ಪುರಾತತ್ವಶಾಸ್ತ್ರ ಅಧ್ಯಯನದಲ್ಲಿ ಅನುಸರಿಸುವ ವಿಧಾನದಂತೆ ಈ ಉಪಕರಣಗಳು ಸೂಚಿಸುವ ಸಂಸ್ಕೃತಿಗಳಿಗೆ ಇವುಗಳು ಪ್ರಥಮ ಬಾರಿಗೆ ದೊರೆತ ಸ್ಥಳಗಳ ಹೆಸರುಗಳನ್ನೇ ಕೊಡಲಾಗಿದೆ. ಇಡಿ ವಿಶ್ವದಲ್ಲೆ ಈ ಸಂಸ್ಕೃತಿಗಳ ಅವಶೇಷಗಳ ಶೋಧನೆಗಳಲ್ಲಿ ಇವೇ ಪ್ರಥಮ; ನೋಡಿ. ಷೇಕ್ ಅಲಿ ಬಿ (ಪ್ರ.ಸಂ), ಸುಂದರ ಅ(ಸಂ)., ೧೯೯೭, ಕರ್ನಾಟಕ ಚರಿತ್ರೆ, ಸಂಪುಟ–೧, ಪು. ೯೭

೧೭. Gopal B.R, Devaraj D.V.(Edi)., 1995, **aforesaid,** P. 23.

೧೮. Ibid, P.24-26

೧೯. ನಾಗರಾಜಪ್ಪ ಎಸ್, ಶರತ್‌ಬಾಬು ಕೆ.ಎಸ್., ೨೦೧೨, **ಕೂನಬೇವು ಪರಿಸರದ ಇತ್ತೀಚಿನ ಪ್ರಾಗೈತಿಹಾಸಿಕ ಶೋಧಗಳು,** ಇತಿಹಾಸ ದರ್ಶನ, ಸಂಪುಟ–೨೭, ಕೃಷ್ಣಮೂರ್ತಿ ಪಿ.ವಿ, ದೇವರಾಜ ಸ್ವಾಮಿ ಜಿ.ಕೆ (ಸಂ), ಪು. ೮–೯.

೨೦. ಷೇಕ್ ಅಲಿ ಬಿ(ಪ್ರ.ಸಂ), ಸುಂದರ ಅ(ಸ.ಸಂ)., ೧೯೯೭, **ಪೂರ್ವೋಕ್ತ,** ಪು. ೧೦೮.

೨೧. ಶಿವತಾರಕ್ ಕೆ.ಬಿ., ೨೦೦೧, **ಪೂರ್ವೋಕ್ತ,** ಪು. ೧೨.

೨೨. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೭೦.

೨೩. ಷೇಕ್ ಅಲಿ ಬಿ(ಪ್ರ.ಸಂ), ಸುಂದರ ಅ(ಸ.ಸಂ)., ೧೯೯೭, **ಪೂರ್ವೋಕ್ತ,** ಪು. ೧೦೯.

೨೪. ಶಿವತಾರಕ್ ಕೆ.ಬಿ., ೨೦೦೧, **ಪೂರ್ವೋಕ್ತ,** ಪು. ೧೩.

೨೫. ರಾಮದಾಸರೆಡ್ಡಿ ಎಸ್.ಜಿ., ೨೦೦೯, **ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ,** ಪು. ೧೫೦.

೨೬. ನಾಗರಾಜಪ್ಪ ಎಸ್., ೨೦೧೧, **ಚಿತ್ರದುರ್ಗ ತಾಲೂಕಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳು,** ಇತಿಹಾಸ ದರ್ಶನ, ಸಂಪುಟ–೨೬, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ (ಸಂ), ಪು. ೧೮.

೨೭. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೭೦.

೨೮. ಅದೇ, ಪು. ೭೧.

೨೯. ಅದೇ, ಪು. ೭೧–೭೨

೩೦. ಅದೇ, ಪು. ೭೨

೩೧. ಷೇಕ್ ಅಲಿ ಬಿ(ಪ್ರ.ಸಂ), ಸುಂದರ ಅ(ಸ.ಸಂ)., ೧೯೯೭, **ಪೂರ್ವೋಕ್ತ,** ಪು. ೧೦೮.

೩೨. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು.೭೨.

೩೩. ಅದೇ.

೩೪. ರಾಮದಾಸ ರೆಡ್ಡಿ ಎಸ್.ಜಿ., ೨೦೦೯, **ಪೂರ್ವೋಕ್ತ,** ಪು. ೬೮.

೩೫. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೭೩.

೩೬. ಶಿವತಾರಕ್ ಕೆ.ಬಿ., ೧೯೯೯, ತುಮಕೂರು ಜಿಲ್ಲೆಯ ಪುರಾತತ್ವ ಕುರುಹುಗಳು : ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪು. ೧೯೬

೩೭. ಶಿವತಾರಕ್ ಯು., ೧೯೯೯, **ಪೂರ್ವೋಕ್ತ,** ೧೯೭

೩೮. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೭೪.

೩೯. ಷೇಕ್ ಅಲಿ ಬಿ(ಪ್ರ.ಸಂ), ಸುಂದರ ಅ(ಸ.ಸಂ)., ೧೯೯೭, **ಪೂರ್ವೋಕ್ತ,** ಪು. ೧೨೪.

೪೦. ಅದೇ, ಪು.೧೨೪-೧೨೫.

೪೧. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೭೭

೪೨. ಅದೇ

೪೩. Wheeler R.E.M., 1947, **Brahmagiri and Chandravalli,** Ancient India, No.4, P. 48.

೪೪. ಸುಂದರ ಅ., ೨೦೧೦, **ಬ್ರಹ್ಮಗಿರಿ-ಚಂದ್ರವಳ್ಳಿ,** ಬ್ರಹ್ಮಗಿರಿ (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೩), ಸೋಮಶೇಖರ್ ಎಸ್.ವೈ(ಸಂ), ಪು. ೩೪.

೪೫. Wheeler R.E.M. 1947, **aforesaid,** P. 180.

೪೬. ಸೋಮಶೇಖರ್ ಎಸ್.ವೈ., ೨೦೦೬, **ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು,** ದುರ್ಗಸಿರಿ, ರಾಜಶೇಖರಪ್ಪ ಬಿ(ಸಂ), ಪು. ೧೫.

೪೭. ಅದೇ.

೪೮. ರಾಮದಾಸರೆಡ್ಡಿ ಎಸ್.ಜಿ., ೨೦೦೬, **ವೇದಾವತಿ ನದಿಯ ತೀರದ ಒಂದು ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪು. ೭೫-೭೭.

೪೯. ಶ್ರೀನಿವಾಸ ಎಲ್., ೨೦೧೦, **ಪೂರ್ವೋಕ್ತ,** ಪು. ೨೩.

೫೦. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೮೬

೫೧. ಪ್ರಸನ್ನಕುಮಾರ್., ೨೦೧೦, **ಆರಂಭಿಕ ಕೃಷಿ ಸಂಸ್ಕೃತಿಗಳು ಮತ್ತು ವೈದಿಕ ಯುಗ,** ಚರಿತ್ರೆ ಸಂಪುಟ-೩, ಭಾರತ ಉಪಖಂಡದ ಆಧುನಿಕ ಪೂರ್ವ ಚರಿತ್ರೆ, ವಿಜಯಪೂಣಚ್ಚ ತಂಬಂಡ(ಸಂ)., ಪು. ೧೦೯.

೫೨. ಜಯಣ್ಣ ಯು., ೨೦೦೨, **ಪೂರ್ವೋಕ್ತ,** ಪು. ೮೬.

೫೩. ರಾಮದಾಸರೆಡ್ಡಿ ಎಸ್.ಜಿ., ೨೦೦೬, **ಪೂರ್ವೋಕ್ತ,** ಪು. ೧೦೦.

೫೪. ಅದೇ, ಪು. ೧೦೦-೧೦೧.

೫೫. ಅದೇ, ಪು. ೧೦೧.

೫೬. ಪ್ರಸನ್ನಕುಮಾರ್., ೨೦೧೦, **ಪೂರ್ವೋಕ್ತ,** ಪು. ೧೧೦.

೫೭. Krishnaswamy V.D., **The Neolithic Patran of India,** Ancient India, No.16, P. 26.

೫೮. ಪ್ರಸನ್ನಕುಮಾರ್., ೨೦೧೦, **ಪೂರ್ವೋಕ್ತ,** ಪು. ೧೧೦.

೫೯. ಅದೇ.

೬೦. ಅದೇ, ಪು. ೧೧೧.

೬೧. ಅದೇ

೬೨. ಅದೇ, ಪು. ೧೧೩.

೬೩. ಅದೇ, ಪು. ೧೧೨.

೬೪. ಅದೇ.

೬೫. ಅದೇ, ಪು. ೧೧೧.

೬೬. ಅದೇ, ಪು.೧೧೧-೧೧೨.

೬೭. ಅದೇ, ಪು. ೧೧೨.

೬೮. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೮೯.

೬೯. ಅದೇ.

೭೦. ಅದೇ.

೭೧. ಸುಂದರ ಅ., ೨೦೧೦, **ಬ್ರಹ್ಮಗಿರಿ-ಚಂದ್ರವಳ್ಳಿ**, ಪೂರ್ವೋಕ್ತ, ಪು. ೩೪.

೭೨. ಅದೇ, ಪು. ೩೪-೩೫

೭೩. ಸೋಮಶೇಖರ್ ಎಸ್.ವೈ., ೨೦೦೬, **ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು, ಪೂರ್ವೋಕ್ತ**, ಪು. ೧೬-೧೭.

೭೪. ಅದೇ, ಪು. ೧೭ ಮತ್ತು ಸೋಮಶೇಖರ್ ಎಸ್.ವೈ, ಚಾರುಲತ ಬಿ.ಟಿ, ನಾಗರಾಜಪ್ಪ ಎಸ್., ದಿ. ೨೮.೭.೨೦೦೮, ಜಂಪಣ್ಣ ನಾಯಕ ಕೋಟೆ ಬಳಿ ನವಶಿಲಾಯುಗದ ಕಲ್ಲಿನ ಕೊಡಲಿ ಪತ್ತೆ, ಕನ್ನಡ ಪ್ರಭ; ದಿ. ೧೮.೨.೨೦೦೮, ದುರ್ಗದ ಕುರುಮರಡಿಕೆರೆ ಬಳಿ ನವಶಿಲಾಯುಗದ ಕೊಡಲಿ ಪತ್ತೆ, ಕನ್ನಡ ಪ್ರಭ; ದಿ. ೧೯.೩.೨೦೧೦, ಬೆಳಗಟ್ಟ ಬಳಿ ಕಲ್ಲಿನ ಕೊಡಲಿ ಪತ್ತೆ, ಸಂಯುಕ್ತ ಕರ್ನಾಟಕ.

೭೫. ರಾಮದಾಸರೆಡ್ಡಿ ಎಸ್.ಜಿ., ೨೦೦೯, **ಪೂರ್ವೋಕ್ತ**, ಪು. ೧೫೦-೧೫೧.

೭೬. ಸೋಮಶೇಖರ್ ಎಸ್.ವೈ., ೨೦೦೬, **ಪೂರ್ವೋಕ್ತ**, ಪು. ೧೭

೭೭. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೯೧-೯೨.

೭೮. ರಾಮದಾಸರೆಡ್ಡಿ ಎಸ್.ಜಿ., ೨೦೦೯, **ಪೂರ್ವೋಕ್ತ**, ಪು. ೧೩೨-೧೩೭.

೭೯. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೯೪.

೮೦. ಅದೇ, ಪು. ೯೪.

೮೧. ಅದೇ.

೮೨. ಅದೇ., ಪು. ೯೭

೮೩. ಅದೇ.

೮೪. Srinivasan K.R., Byanarji N.R., **Survey of South Indian Megaliths,** Ancient India, Vol-9, P. 108.

೮೫. Ibid

೮೬. Ibid

೮೭. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೧೦೬

೮೮. Gururaja Rao B.K. 1972, **Megalithic Culture in South India,** P. 44.

೮೯. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೧೦೭.

೯೦. ಅದೇ.

೯೧. ಅದೇ.

೯೨. ಅದೇ., ಪು. ೧೦೯-೧೧೦.

೯೩. ಸುಂದರ ಅ., ೨೦೧೦, **ಬ್ರಹ್ಮಗಿರಿ-ಚಂದ್ರವಳ್ಳಿ**, ಪೂರ್ವೋಕ್ತ, ಪು. ೩೪-೩೫.

೯೪. ಅದೇ., ಪು. ೩೪.

೯೫. ಶಿವತಾರಕ್ ಕೆ.ಬಿ., ೨೦೦೫, **ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ)., ಪು. ೩೨-೩೩.

೯೬. ಅದೇ., ಪು. ೩೩.

೯೭. ಸೋಮಶೇಖರ್ ಎಸ್.ವೈ., ೨೦೦೬, **ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು**, ಪೂರ್ವೋಕ್ತ, ಪು. ೧೭.

೯೮. ಅದೇ., ಪು. ೧೮ ಮತ್ತು ಸೋಮಶೇಖರ್ ಎಸ್.ವೈ, ತಿಪ್ಪೇಸ್ವಾಮಿ ಎಸ್., ದಿ. ೫.೧.೨೦೦೧, ಕೊನಬೇವು ಬಳಿ ಬೃಹತ್ ಶಿಲಾ ಸಮಾಧಿ ನೆಲೆ ಪತ್ತೆ, ಸಂಯುಕ್ತ ಕರ್ನಾಟಕ; ದಿ. ೧೫.೧೨.೨೦೦೫, ಚಿತ್ರದುರ್ಗ ತಾಲೂಕಿನ ಚಿಕ್ಕಗಬ್ಬಿಕೆರೆ ಬಳಿ ಬೃಹತ್ ಶಿಲಾಸಮಾಧಿ ಪತ್ತೆ, ಪ್ರಜಾಪ್ರಗತಿ; ದಿ. ೩.೮.೨೦೦೩, ಬೆಳಗಟ್ಟ ಗ್ರಾಮದಲ್ಲಿ ಶಿಲಾಯುಗದ ಬೃಹತ್ ಶಿಲಾಸಮಾಧಿ ಪತ್ತೆ, ಪ್ರಜಾವಾಣಿ.

೯೯. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೧೧೨-೧೧೩.

೧೦೦. ರಾಮದಾಸರೆಡ್ಡಿ ಎಸ್.ಜಿ., ೨೦೦೬, **ಪೂರ್ವೋಕ್ತ**, ಪು. ೧೮೫-೧೮೯.

೧೦೧. ಜಯಣ್ಣ ಯು., ೨೦೦೨, **ಪೂರ್ವೋಕ್ತ**, ಪು. ೨೬೭.

೧೦೨. ಅದೇ., ಪು. ೨೬೯.

೧೦೩. ಅದೇ., ಪು. ೨೭೨.

೧೦೪. ಶಿವತಾರಕ್ ಕೆ.ಬಿ., ೨೦೦೫, **ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ**, ಪೂರ್ವೋಕ್ತ, ಪು. ೩೪.

೧೦೫. ಶರಣಬಸಪ್ಪ ಕೋಲ್ಕಾರ, ೨೦೧೦, **ಶಿಲಾಯುಗದ ಗವಿ ಚಿತ್ರಗಳು**, ಪು. XIII.

೧೦೬. ಲಕ್ಷ್ಮಣ್ ತೆಲಗಾವಿ., ೨೦೦೫, **ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾಕ್ಚಾರಿತ್ರಿಕ ಕಲೆ**, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ).

□□□

ಅಧ್ಯಾಯ : ಐದು

ವಾಸ್ತು ಮತ್ತು ಶಿಲ್ಪ

೫.೧. ದೇವಾಲಯ

೫.೨. ಕೋಟೆ

೫.೩. ಕೆರೆ–ಕಟ್ಟೆ

೫.೪. ಮೂರ್ತಿಶಿಲ್ಪ

೫.೫. ಸ್ಮಾರಕ ಶಿಲ್ಪ

ಅಧ್ಯಾಯ : ಐದು

ವಾಸ್ತು ಮತ್ತು ಶಿಲ್ಪ

ಅರವತ್ತನಾಲ್ಕು ಕಲೆಗಳಲ್ಲಿ ಒಂದಾದ ಶಿಲ್ಪಕಲೆಯ ಒಂದು ಭಾಗವೇ ವಾಸ್ತು.[೧] ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ ಮುಂತಾದವುಗಳನ್ನು ವಾಸ್ತುವೆಂದು ಹೇಳಲಾಗಿದೆ.[೨] ವಿಶಾಲವಾದ ಅರ್ಥದಲ್ಲಿ ವಾಸ್ತುವೆಂಬುದು ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಾಂಕಗಳನ್ನೊಳಗೊಂಡಿದೆ. ದೇವತಾ ಇಲ್ಲವೆ ಮಹಾತ್ಮರ ಸಂಕೇತ ಇಲ್ಲವೆ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿ ವಾಸ್ತು ಎನಿಸುತ್ತದೆ.[೩] ವಸ್ತುವಿನಿಂದ ರಚನೆಗೊಂಡ, ವಾಸ್ತುಯೋಗ್ಯವಾದ ವಸ್ತುವಿನ (ನಿವೇಶನದ) ಮೇಲೆ ರಚಿಸಲಾದ ಎಲ್ಲಾ ರಚನೆಗಳನ್ನೂ ವಾಸ್ತುರಚನೆ ಎನ್ನಬಹುದು. ವ್ಯಾಪಕವಾಗಿ ಹೇಳುವುದಾದರೆ ಜೀವನಭರಣಕ್ಕೆ ಅವಶ್ಯವಾದ ಯಾವುದೇ ರಚನೆ ಕೂಡ ವಾಸ್ತುವಾಗುತ್ತದೆ. ಹೀಗೆ ಮನೆ, ಕೆರೆ, ಸೇತುವೆ, ಕೋಟೆ, ದೇವಾಲಯ ಎಲ್ಲಾ ರಚನೆಗಳೂ ವಾಸ್ತುಶಿಲ್ಪ ಎನಿಸುತ್ತದೆ.[೪] ಭಾರತೀಯ ವಾಸ್ತು ಕಲೆ ಇತರ ಕಲೆಗಳಂತೆಯೇ ಆಯಾ ಕಾಲ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲದು. ವಾಸ್ತುಕಲೆ ನಾಗರೀಕತೆಯನ್ನು ರೂಪಿಸುವ ಮಾತೃಕೆ. ಇದು ನಾಗರೀಕತೆಯ ಶಿಶುವನ್ನು ತನ್ನ ಗರ್ಭದಲ್ಲಿಟ್ಟುಕೊಂಡು ಬೆಳೆಸುತ್ತಿದ್ದು ಮಾನವ ಜನಾಂಗದ ವಿಕಾಸವನ್ನು ಗುರುತಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತ ಗೂಡಿನಲ್ಲಿ ವಾಸಿಸಬೇಕೆಂದೂ ಎಂದಿನಿಂದ ಬಯಸಿದನೋ ಅಂದಿನಿಂದ ತನಗಾಗಿ 'ಮನೆ'ಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಸುತ್ತ ಗೋಡೆ ಅದರಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು, ಅದರ ಮೇಲೆ ಗಾಳಿ-ಬೆಳಕು ಬರಲು ಕಮಾನೂ ತೆರವು ಹೀಗೆ ಅವನ ಮನೆ ರೂಪುಗೊಂಡಿತು. ಇದು ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ.[೫]

ವಾಸ್ತುಶಿಲ್ಪವನ್ನು ಕುರಿತು ಅನೇಕ ಪ್ರಾಚೀನ ಶಾಸ್ತ್ರಗ್ರಂಥಗಳು ಹಾಗೂ ವಿದ್ವಾಂಸರು ಅನೇಕ ವಿಚಾರಧಾರೆಗಳನ್ನು ಹರಿಸಿದ್ದಾರೆ. ಅಂತಹುಗಳಲ್ಲಿ ಮುಖ್ಯವಾಗಿ ಬೃಹತ್ಸಂಹಿತೆ, ಮಾನಸಾರ, ಮಾಯಮತ, ಸಮರಾಂಗಣ ಸೂತ್ರಧಾರ, ಕಾಶ್ಯಪಶಿಲ್ಪ, ಅಗಸ್ತ್ಯ ಸಕಲಾಧಿಕಾರ, ಅಪರಾಜಿತಪೃಚ್ಛಾ, ಪ್ರಾಸಾದಮಂಡನ, ರೂಪಮಂಡನ, ಅಭಿಲಾಷಿತಾರ್ಥ ಚಿಂತಾಮಣಿ, ತಂತ್ರಸಮುಚ್ಚಯ.[೬] ಮಯಮತ ಗ್ರಂಥ 'ವಾಸ್ತು' ಶಬ್ದವನ್ನು ಎರಡು ಹಂತಗಳಲ್ಲಿ ವಿವರಿಸಿದೆ.

ಅಮರ್ತ್ಯಾಶ್ಚೈವ ಮರ್ತ್ಯಾಶ್ಚ ಯತ್ರ ಯತ್ರ
ವಸತಿ ಹಿತದ್ವಸ್ತು ಇತಿ ವೃತಂ

ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದೂ, ವಸ್ತುವನ್ನು ಆಶ್ರಯಿಸಿದ್ದು ವಾಸ್ತು ಎಂದು ಗುರುತಿಸಲ್ಪಡುತ್ತದೆ.[೭]

ಪ್ರಸಾದಾದೀನಿ ವಾಸ್ತೂನಿ ವಸ್ತುತ್ವಾದ್ ವಸ್ತುಸಂಶ್ರಯಾತ್

ಮುಂದೆ ಪ್ರಸಾದ, ಹರ್ಮ್ಯ, ಸೌಧ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದು ವಾಸ್ತು ಎಂದೆನಿಸಿಕೊಳ್ಳುತ್ತದೆ. ಆದ್ದರಿಂದ ವಾಸ್ತು ಎಂದಲ್ಲಿ ವಸತಿಯೋಗ್ಯ ಭೂಮಿ ಮತ್ತು ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ.[೮]

ಕ್ರಿ.ಶ. ೭ನೇ ಶತಮಾನದ್ದೆನ್ನಲಾದ 'ಹಯಶೀರ್ಷ' ಪಂಚರಾತ್ರ ತಂತ್ರ ಸಾಹಿತ್ಯವು ಪುರಾಣ ಸಾಹಿತ್ಯಗಳಾದ 'ವಿಷ್ಣು ಧರ್ಮೋತ್ತರ', 'ಮತ್ಸ', 'ಗರುಡ' 'ಪುರಾಣಗಳು', 'ಸುಪ್ರಭೇದಾಗಮ', 'ಕಾಮಿಕಾಗಮ', 'ಕಾರಣಾಗಮ', 'ರೌರವಾಗಮ', 'ಅಜಿತಾಗಮ', 'ವೈಖಾನಸಾಗಮ' ಮುಂತಾದ ಆಗಮ ಗ್ರಂಥಗಳು ವಾಸ್ತುಶಿಲ್ಪಶಾಸ್ತ್ರದ ವಿಷಯಗಳನ್ನು ಒಳಗೊಂಡಿವೆ.[೯] ಪ್ರತ್ಯೇಕವಾಗಿ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳನ್ನು ದಾಕ್ಷಿಣಾತ್ಯ ಮತ್ತು ಔತ್ತರೇಯ ಗ್ರಂಥಗಳೆಂದು ವಿಭಾಗಿಸಲಾಗಿದೆ. ಕ್ರಿ.ಶ. ೧೧ನೇ ಶತಮಾನದ ಭುವನ ಪ್ರದೀಪನ 'ಅಪರಾಜಿತ ಪೃಚ್ಛಾ', ಕ್ರಿ.ಶ. ೧೧ನೇ ಶತಮಾನದ ಚಾಳುಕ್ಯ ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ', ಕ್ರಿ.ಶ. ೧೨ನೇ ಶತಮಾನದ ಮಂಡನನ 'ರೂಪಮಂಡನ' ಗ್ರಂಥಗಳು ಔತ್ತರೇಯ ಗ್ರಂಥಗಳು. ಅದರಂತೆ ಕ್ರಿ.ಶ. ೯ನೇ ಶತಮಾನದ 'ಮಯಮತ', ಕ್ರಿ.ಶ. ೫ನೇ ಶತಮಾನದ 'ಮಾನಸಾರ', ಕ್ರಿ.ಶ. ೧೫ನೇ ಶತಮಾನದ 'ತಂತ್ರಸಮುಚ್ಚಯ', 'ಕಾಶ್ಯಪಶಿಲ್ಪ', 'ವಿಮಾನಾರ್ಚನಕಲ್ಪ', 'ಪದ್ಮಸಂಹಿತಾ', 'ಪ್ರಯೋಗಮಂಜರಿ' ಕ್ರಿ.ಶ. ೧೬ನೇ ಶತಮಾನದ 'ವಾಸ್ತುವಿದ್ಯಾ', ಶ್ರೀಕುಮಾರನ 'ಶಿಲ್ಪರತ್ನ' ಮುಂತಾದ ಗ್ರಂಥಗಳು ದಾಕ್ಷಿಣಾತ್ಯ ಗ್ರಂಥಗಳೆಂದು ವಿದ್ವಾಂಸರು ಗುರುತಿಸಿದ್ದಾರೆ.[೧೦] ಒಟ್ಟಿನಲ್ಲಿ ಮರ, ಕಲ್ಲು ಮತ್ತು ಮಣ್ಣುಗಳಿಂದ ನಿರ್ಮಾಣವಾದ ಉದ್ಯಾನ, ಸೇತುಬಂಧ, ರಸ್ತೆ, ತಟಕ, ಕೋಟೆ, ಕಾಲುವೆ, ಬಾವಿ, ಪುಷ್ಕರಣಿ, ಪೀಠೋಪಕರಣಗಳಲ್ಲದೆ ಗೃಹ, ಮಠ, ಮಂದಿರ ಹಾಗೂ ದೇವಾಲಯಗಳು ಈ ಪದದ ಅರ್ಥವ್ಯಾಪ್ತಿಗೆ ಸೇರುತ್ತವೆ.

೫.೧. ದೇವಾಲಯ

ದೇವಾಲಯ ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕ. ಮಾನವನ ಜೀವನದಲ್ಲಿ ಪ್ರಕೃತಿ ಅತಿ ಮಹತ್ತರ ಪಾತ್ರ ವಹಿಸುತ್ತದೆ. ಪ್ರಕೃತಿದತ್ತ ಗಿಡ, ಮರ, ನದಿ, ಹಳ್ಳ-ಕೊಳ್ಳ ಇನ್ನೂ ಮುಂತಾದವುಗಳ ಸೃಷ್ಟಿಯ ಹಿನ್ನೆಲೆಯಲ್ಲಿ ಯಾವುದೋ ಒಂದು ಅನಂತಶಕ್ತಿಯು ಅಡಗಿದೆಯೆಂದು ಭಾವಿಸಿ ಅವುಗಳನ್ನು ಪೂಜಿಸಲು ಮಾನವ ಪ್ರಯತ್ನಿಸಿದನು.[೧೧] ಹಾಗೆಯೇ ಆ ಅನಂತಶಕ್ತಿಗೊಂದು ಮೂರ್ತರೂಪಕೊಟ್ಟು, ಅದರ ರಕ್ಷಣೆಗಾಗಿ ಒಂದು ಆಲಯವನ್ನು ನಿರ್ಮಿಸಿದ. ಇದು ಮುಂದೆ ದೇವಾಲಯವಾಗಿ ಪರಿಣಮಿಸಿತು. ಭೂಮಿಯ ಮೇಲೆ ಕಟ್ಟಲ್ಪಟ್ಟ ವಾಸ್ತುಗಳನ್ನು ಗೃಹ ಮತ್ತು ದೇಗುಲ ವಾಸ್ತುಗಳೆಂದು ಕರೆಯಲಾಗಿದ್ದು ದೇವರಿಗೆಂದು ಕಟ್ಟಿದ

ಕಟ್ಟಡವು ದೇಗುಲ ವಾಸ್ತುವಾಗಿದೆ. ಭಾರತದ ಪ್ರಾಚೀನ ನಾಗರೀಕತೆ ಸಿಂಧೂ ಬಯಲಿನ ಸಂಸ್ಕೃತಿಯ ಜನರು ಪ್ರಕೃತಿಯ ಆರಾಧಕರಾಗಿದ್ದು, ಪಶುಪತಿ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿರುವ ಸಂಗತಿ. ಆದರೆ ಈ ಅವಧಿಯಲ್ಲಿ ವಿಗ್ರಹಗಳಿಗೆಂದು ಕಟ್ಟಿದ ದೇಗುಲ ವಾಸ್ತು ಇದುವರೆಗೆ ಸ್ಪಷ್ಟವಾಗಿ ಗೋಚರಿಸಿಲ್ಲ. ಹಾಗಿದ್ದು ಈ ಸಂಸ್ಕೃತಿಯಿಂದ ಒಂದು ವಿಚಾರ ಸ್ಪಷ್ಟವಾಗುತ್ತದೆ. ಅದೆಂದರೆ ದೇಗುಲ ವಾಸ್ತು ರಚನೆಗೆ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂಬುದು.[೧೨] ಇಲ್ಲಿನ ನಗರಗಳ ಪಶ್ಚಿಮಾಂತ್ಯದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆ, ಸಾರ್ವಜನಿಕರ ಬಳಕೆಗಾಗಿ ನಿರ್ಮಿಸಿರುವ ಬೃಹತ್ ಗಾತ್ರದ ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು, ದೇವಾಲಯ ಗಳಾಗಿರಬಹುದಾದ ಕಟ್ಟಡಗಳು ಇವುಗಳ ಪ್ರಾಚೀನ ಕಾಲದ ವಾಸ್ತುಶಿಲ್ಪ ನಿರ್ಮಿತಿಗಳಿಗೆ ಸಾಕ್ಷಿಗಳಾಗಿವೆ.[೧೩]

ಭಾರತದ ಚರಿತ್ರೆಯಲ್ಲಿ ದೇಗುಲ ವಾಸ್ತುರೂಪ ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ನಂತರ. ಸ್ತೂಪ ಬೌದ್ಧ ಧರ್ಮದ ಒಂದು ಧಾರ್ಮಿಕ ಕಟ್ಟಡ.[೧೪] ಸ್ತೂಪ ಪ್ರಾರಂಭವಾದದ್ದು ಸತ್ತವರ ಶವ ಅಥವಾ ಅಸ್ತಿಗಳ ಮೇಲೆ ನಿರ್ಮಿಸಲಾಗುತ್ತಿದ್ದ ಸಮಾಧಿ ದಿಬ್ಬಗಳಿಂದ.[೧೫] ಅಂದರೆ ಸ್ಮಾರಕವಾಗಿ ಭೂಗತಮಾಡಿದ ಕಳೆಬರಹದ ಮೇಲೆ ಕಟ್ಟಿದ ಗೋಲಾಕಾರದ ದಿಬ್ಬ. ಭಾರತದಲ್ಲಿ ಅಶೋಕನ ಕಾಲಕ್ಕೆ ಹೆಚ್ಚಾಗಿ ನಿರ್ಮಾಣಗೊಂಡಿವೆ. ಸಾಂಚಿ ಹಾಗೂ ಸಾರನಾಥಗಳಲ್ಲಿ ಅನೇಕ ಬಗೆಯ ಸ್ತೂಪಗಳಿವೆ.[೧೬] ಅದೇ ರೀತಿ ಚೈತ್ಯಾಲಯಗಳು ಸಹ ಬೌದ್ಧರ ಧಾರ್ಮಿಕ ಕಟ್ಟಡಗಳಾಗಿದ್ದವು. ಇವನ್ನು ಕಲ್ಲುಗಳನ್ನು ಕೊರೆದು ನಿರ್ಮಿಸಲಾಗುತ್ತಿತ್ತು. ಬುದ್ಧನ ಪ್ರತೀಕವಾಗಿರುವ ಸ್ತೂಪವನ್ನು ಸಭಾಮಂಟಪಗಳಲ್ಲಿಟ್ಟು ಪೂಜಿಸಲಾಗುತ್ತಿತ್ತು. ಇಂತಹ ಮಂಟಪವನ್ನು ಚೈತ್ಯಾಲಯ ಎನ್ನುತ್ತಾರೆ.[೧೭] ಅಶೋಕನ ಕಾಲದಲ್ಲಿಯೇ ಸ್ಥಂಭಗಳೊಂದಿಗಿನ ಚೈತ್ಯಗೃಹಗಳನ್ನು ನಿರ್ಮಿಸಲಾಗಿದೆ. ಕಲ್ಲುಗಳಲ್ಲಿ ಕೊರೆದಿರುವ ಎಂಟು ಚೈತ್ಯಗಳು ಬರಾಬರ್, ನಾಗಾರ್ಜುನ ಬೆಟ್ಟಗಳಲ್ಲಿ ಹಾಗೂ ರಾಜ್‌ಗೀರ್ ಬಳಿ ನಿರ್ಮಾಣಗೊಂಡಿವೆ. ಕಲ್ಲಿನಲ್ಲಿ ಕೊರೆದು ಮಾಡುವ ವಿಹಾರಗಳ ರಚನೆಯ ಈ ಸಂದರ್ಭವನ್ನು ಶಿಲ್ಪವಿನ್ಯಾಸ, ಭಾರತೀಯ ಕಟ್ಟಡ ನಿರ್ಮಾಣ ವಿಜ್ಞಾನಕ್ಕೆ ಹೊಸ ಆಯಾಮವನ್ನು ಒದಗಿಸಿತು. ಕಲ್ಲಿನಲ್ಲಿ ಕೊರೆದು ನಿರ್ಮಿಸುವ ಚೈತ್ಯಗೃಹ, ವಿಹಾರ, ಗುಹಾಂತರ ದೇವಾಲಯಗಳಿಗೆ ಇದೇ ಉಗಮವಾಯಿತು. ಭಾರತೀಯ ಶಿಲ್ಪಕಲೆಗೆ ಇದೊಂದು ಅಪೂರ್ವವಾದ ಕಾಂತಿಯನ್ನು ತಂದುಕೊಟ್ಟಿತು. ಈ ಕಲೆಯ ನಮೂನೆಗಳು ಆಂಧ್ರಪ್ರದೇಶ, ಗುಜರಾತಿನ ಕಾತೇವಾಡ, ದಕ್ಕನ್ ಪ್ರಸ್ಥಭೂಮಿಯ ಚಾಲಿಸ್‌ಗಾವ್‌ನಿಂದ ಕರಾಡ್ ತನಕ ಹಾಗೂ ಮುಖ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ಅಸಂಖ್ಯಾತವಾಗಿ ಇವು ಕಾಣಸಿಗುತ್ತವೆ.[೧೮] ಹೀಗೆ ಸ್ತೂಪ, ಚೈತ್ಯಗಳು ಮತ್ತು ವಿಹಾರಗಳು ಪ್ರಾಚೀನ 'ದೇಗುಲ ವಾಸ್ತು' ರೂಪವನ್ನು ಕುರಿತು ಮಾಹಿತಿ ನೀಡುತ್ತವೆ.

ಗುಪ್ತರ ಕಾಲದಲ್ಲಿ ದೇವಾಲಯ ನಿರ್ಮಾಣದಲ್ಲಿ ಹೊಸರಚನೆಗಳು ನಡೆಯಗೊಡಗಿದವು. ಇಟ್ಟಿಗೆ ಮತ್ತು ಕಲ್ಲನ್ನು ಬಳಸಿ ದೇವಾಲಯ ನಿರ್ಮಾಣ ಗುಪ್ತರ ಕಾಲದಲ್ಲಿ ಪ್ರಾರಂಭವಾಯಿತು. ಗುಪ್ತ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ನಾಲ್ಕನೆಯ ಶತಮಾನದ ದೇವಾಲಯ ಕಟ್ಟಡ ನಿರ್ಮಾಣ ಪ್ರಾರಂಭವಾಯಿತು. ಕಟ್ಟಡ ರಚನಾ ಶಿಲ್ಪದಲ್ಲಿ ಕಲ್ಲನ್ನು ನಿಖರವಾದ ಉದ್ದ-

ಅಗಲಕ್ಕೆ ತಂದು ಅದನ್ನು ನಯಗೊಳಿಸಿ ಕಟ್ಟಡಕ್ಕೆ ಬಳಸುವ ರೂಢಿ ಪ್ರಾರಂಭವಾದದ್ದು ಈ ಕಾಲದಲ್ಲಿಯೇ ರಚನೆಯಲ್ಲಿ ಮರದ ನಿರ್ಮಾಣಗಳನ್ನು ಅನುಸರಿಸದೆ ಇಟ್ಟಿಗೆ ಕಲ್ಲುಗಳನ್ನು ಬಳಸಿ ಅವುಗಳ ಜಾಯಮಾನಕ್ಕೆ ಒಗ್ಗುವಂತೆ ಕಟ್ಟಡ ರಚನೆಯನ್ನು ಪ್ರಾರಂಭಿಸಲಾಯಿತು. ಆದ್ದರಿಂದ ಗುಪ್ತರ ಕಾಲದ ದೇವಾಲಯಗಳು ವಿವಿಧ ರೀತಿಗಳನ್ನು, ರೂಪಗಳನ್ನು ತೋರುತ್ತವೆ. ಇದರ ಫಲವಾಗಿ ದೇವಾಲಯ ನಿರ್ಮಾಣದಲ್ಲಿ ಸೃಜನಾತ್ಮಕ ಪ್ರಯೋಗಶೀಲತೆ ಮೈಗೂಡಿಸಿಕೊಂಡು ಅಭಿವೃದ್ಧಿಯನ್ನು ಗಳಿಸಿತು.[೧೯] ಕಟ್ಟಡ ರಚನೆ, ಮೂರ್ತಿಶಿಲ್ಪ ಮತ್ತು ಚಿತ್ರಗಳಲ್ಲಿ ಸೌಂದರ್ಯ ತತ್ವಗಳನ್ನು ಕಂಡುಕೊಂಡು ಅವನ್ನು ಸೂತ್ರೀಕರಿಸಿದ್ದು ಗುಪ್ತರ ಕಾಲದಲ್ಲಿ ಎಂಬುದು ವಿಮರ್ಶಕರ ಅಭಿಮತ.[೨೦] ಗುಪ್ತರ ಕಾಲಕ್ಕೂ ಮೊದಲು ಮೌರ್ಯರ ಕಾಲದಲ್ಲಿ ತೀರ ಸಾಧಾರಣವಾದ ದೇವಾಲಯಗಳನ್ನು ನಿರ್ಮಿಸಲಾಗುತ್ತಿತ್ತು. ದೇವಾಲಯಗಳ ನಿರ್ಮಾಣದ ಕಲೆ ಗಮನಾರ್ಹವಾದ ರೀತಿಯಲ್ಲಿ ವಿಕಾಸವನ್ನು ಪಡೆದದ್ದು ಗುಪ್ತರ ಕಾಲದಲ್ಲಿ. ದೇವಾಲಯದ ಪ್ರಮುಖವಾದ ಅಂಗಗಳೆಲ್ಲವೂ ವಿಕಾಸಗೊಂಡವು. ಗುಪ್ತರ ಕಾಲದ ಮುಖ್ಯ ದೇಗುಲಗಳಲ್ಲಿ ಭೂಮಾರದ ಶಿವ ದೇವಾಲಯ, ನಾಚ್ನಾದ ಪಾರ್ವತಿ ದೇವಾಲಯ, ಜಬ್ಬಲ್ಪುರದ ವಿಷ್ಣು ಹಾಗೂ ಕಾಳಿಕಾದೇವಿ ದೇವಾಲಯಗಳು.[೨೧] ಗುಪ್ತ ಸಾಮ್ರಾಜ್ಯದ ಪತನದ ನಂತರದ ಶತಮಾನಗಳಲ್ಲಿ ದೇವಾಲಯ ನಿರ್ಮಾಣ ಶೈಲಿಯಲ್ಲಿ ಅಪಾರವಾದ ಪ್ರಗತಿ ಮತ್ತು ಬದಲಾವಣೆಗಳಾದವು. ಭಾರತೀಯ ಶಿಲ್ಪಶಾಸ್ತ್ರಗಳು ದೇವಾಲಯಗಳನ್ನು ನಾಗರ, ವೇಸರ ಮತ್ತು ದ್ರಾವಿಡಗಳೆಂದು ವಿಭಜಿಸುತ್ತವೆ. ಉತ್ತರ ಭಾರತದ ದೇವಾಲಯಗಳು ಬಹುಪಾಲು ನಾಗರ ಶೈಲಿಗೆ ಸೇರಿವೆ. ಆದರೆ ಈ ರೀತಿಯಾಗಿ ಸುಲಭವಾಗಿ ಮತ್ತು ನಿಖರವಾಗಿ ಭೌಗೋಳಿಕ ಸೀಮೆಗಳನ್ನು ಅನುಸರಿಸಿ ದೇವಾಲಯಗಳ ಬಗೆಗಳನ್ನು ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ನಾಗರ ಶೈಲಿಯ ದೇವಾಲಯಗಳು ದಕ್ಷಿಣ ಭಾರತದಲ್ಲಿಯು ಕಂಡುಬರುತ್ತವೆ. ಆದ್ದರಿಂದ ಭಾರತೀಯ ದೇವಾಲಯ ಪರಂಪರೆಯಲ್ಲಿ ಔತರೇಯ, ದಖ್ಖಿನಿ ಹಾಗೂ ದಾಕ್ಷಿಣಾತ್ಯ ದ್ರಾವಿಡ ದೇವಾಲಯಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ.[೨೨]

ಕರ್ನಾಟಕದಲ್ಲಿ ದೇವಾಲಯಗಳ ಪ್ರಾಚೀನತೆಯತ್ತ ಗಮನ ಹರಿಸಿದರೆ ಕ್ರಿ.ಶ.ಕದ ಆರಂಭದಲ್ಲೇ ಇಲ್ಲಿ ದೇವಾಲಯಗಳು ಇದ್ದುವೆಂದು ಪ್ರಾಚ್ಯವಸ್ತು ಅವಶೇಷಗಳು ಮತ್ತು ಲಭ್ಯ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಮೌರ್ಯ ಮತ್ತು ಶಾತವಾಹನ ಕಾಲದ ಹಲವು ನಿವೇಶನಗಳು ಉತ್ಖನನದಿಂದ ಬೆಳಕಿಗೆ ಬಂದಿದ್ದು ಇಲ್ಲಿನ ಕಟ್ಟಡ ಅವಶೇಷ, ಸ್ತೂಪ, ಚೈತ್ಯಗಳು, ಮೋರಿಯರ ಮನೆಗಳೆಂದೂ ಕರೆಯಲ್ಪಡುವ ಬೃಹತ್ ಶಿಲಾಸಮಾಧಿಗಳು ಈ ವಿಧವಾದ ಅವಶೇಷಗಳು ಕರ್ನಾಟಕದಲ್ಲಿ ದೇವಾಲಯಗಳ ಹುಟ್ಟನ್ನು ಕುರಿತು ಹೇಳುತ್ತವೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ಪಟ್ಟದಕಲ್ಲು, ಐಹೊಳೆ ಹಾಗೂ ಇತ್ತೀಚೆಗೆ ಉತ್ಖನನಗೊಂಡ ಸನ್ನತಿಗಳಲ್ಲಿ ಪ್ರಾಚೀನ ಕಟ್ಟಡದ ಅವಶೇಷಗಳು ದೊರೆತಿವೆ.[೨೩] ಆನಂತರದಲ್ಲಿ ಶಿವಸ್ಕಂದವರ್ಮನ ಮಳವಳ್ಳಿ ಶಾಸನ ಮತ್ತು ಪಟ್ಟದೇವರನ್ನು ಕದಂಬರ ತಾಳಗುಂದ ಸ್ತಂಭಶಾಸನ ಶಾತಕರಣಿಗಳಿಂದ ಪೂಜಿತ ಪ್ರಣವೇಶ್ವರ ದೇವಾಲಯವನ್ನು ಉಲ್ಲೇಖಿಸುತ್ತವೆ.[೨೪] ಮೇಲಿನ ಈ ಉಲ್ಲೇಖಗಳು ಕರ್ನಾಟಕದಲ್ಲಿ ಶಾತವಾಹನರ ಕಾಲದ ದೇವಾಲಯಗಳ ವಿಕಾಸದ ಅಂಶಗಳನ್ನು ಕುರಿತು ಹೇಳುತ್ತವೆ.

ಶಾತವಾಹನರ ನಂತರ ಕರ್ನಾಟಕದಲ್ಲಿ ಕದಂಬರ ದೇವಾಲಯ ವಾಸ್ತುಶಿಲ್ಪದ ಬೆಳವಣಿಗೆಯನ್ನು ಗುರುತಿಸಬಹುದು. ಕದಂಬರು ಪ್ರಾಕೃತಿಕವಾಗಿರುವ ಹೆಬ್ಬಂಡೆಗಳನ್ನು ಕೊರೆದು ಗುಹಾಲಯಗಳನ್ನು ರಚಿಸಿರುವುದು ಹಾಗೂ ಸ್ವತಂತ್ರವಾಗಿ ದೇವಾಲಯಗಳನ್ನು ರಚಿಸುವುದು ಕಂಡುಬರುತ್ತದೆ. ಕದಂಬರ ಕಾಲದಲ್ಲಿ ಅರವೇಲಮ್, ನೋರ್ವಾ, ಲಂಪಗಾವ್ ಇತ್ಯಾದಿ ಸ್ಥಳಗಳಲ್ಲಿ ಜಾಂಬಿಟ್ಟಿಗೆ (Laterite) ಬಂಡೆಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ.[೨೫] ಕದಂಬರ ದೊರೆ ಮೃಗೇಶವರ್ಮನಿಂದ ಹಲಸಿಯಲ್ಲಿ ನಿರ್ಮಾಣಗೊಂಡ ಜೈನಬಸದಿ ವಿಶೇಷವಾಗಿದೆ.[೨೬] ತಾಳಗುಂದದ ಪ್ರಣವೇಶ್ವರ, ಬನವಾಸಿಯ ಮಧುಕೇಶವ ಇವು ಕದಂಬರ ಕಾಲದ ಪ್ರಮುಖ ದೇವಾಲಯಗಳು.[೨೭]

ಕರ್ನಾಟಕ ವಾಸ್ತು ಶೈಲಿಯಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಅವಧಿಯೆಂದರೆ ಬಾದಾಮಿ ಚಾಲುಕ್ಯ ಮನೆತನದ ಆಳ್ವಿಕೆಯ ಕಾಲ. ಬಾದಾಮಿ ಚಾಲುಕ್ಯರ ಕಾಲದ ಶಿಲಾದೇಗುಲಗಳು ಪಟ್ಟದಕಲ್ಲು, ಐಹೊಳೆ, ಮಹಾಕೂಟ ಅಲ್ಲದೇ ಪ್ರಸ್ತುತ ಆಂಧ್ರಪ್ರದೇಶದ ಆಲಂಪುರ, ಮಹಾನಂದಿಗಳಲ್ಲೂ ವ್ಯಾಪಿಸಿವೆ.[೨೮] ಚಾಲುಕ್ಯರ ಕಾಲದ ದೇವಾಲಯ ವಾಸ್ತುಶಿಲ್ಪವನ್ನು ೧. ಗುಹಾದೇವಾಲಯ, ೨. ರಾಚನಿಕ ದೇವಾಲಯ ಎಂದು ವಿಭಾಗಿಸಬಹುದು. ಚಾಲುಕ್ಯರುವಾರಿಗಳು ಬಾದಾಮಿ ಐಹೊಳೆಯಲ್ಲಿ ಒಟ್ಟು ಒಂಭತ್ತು ಗುಹಾಲಯಗಳನ್ನು ಕೊರೆದಿದ್ದಾರೆ.[೨೯] ಬಾದಾಮಿಯಲ್ಲಿನ ಗುಹಾದೇವಾಲಯಗಳನ್ನು ಸ್ಥಳೀಯರು 'ಮೇಣದ ಬಸದಿ'ಗಳೆಂದು ಕರೆಯುತ್ತಾರೆ. ಆಯತಾಕಾರದ ಮೊಗಸಾಲೆ, ಹಜಾರ ಮತ್ತು ಮಧ್ಯದಲ್ಲಿ ಗರ್ಭಗುಡಿ ಇದು ಗುಹಾದೇವಾಲಯಗಳ ತಳವಿನ್ಯಾಸ. ಅದೇ ರೀತಿ ಬಾದಾಮಿ ಚಾಲುಕ್ಯರ ಕಾಲದ ರಾಚನಿಕ (ಕಟ್ಟಡ) ದೇವಾಲಯಗಳು ಸಹ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ನಿರ್ಮಿತಿಗಳಾಗಿವೆ. ಅವರ ಕಾಲದಲ್ಲಿ ಐಹೊಳೆ, ಮಹಾಕೂಟ, ಪಟ್ಟದಕಲ್ಲುಗಳಲ್ಲಿ ರಾಚನಿಕ ದೇವಾಲಯಗಳು ಸಹ ಇವೆ. ಈ ಕಾಲದ ದೇವಾಲಯಗಳು ಸರಳವಾದ ತಳವಿನ್ಯಾಸವನ್ನು ಹೊಂದಿದ್ದು, ಸಾಂಧಾರ ಪ್ರದಕ್ಷಿಣಾ ಪಥವನ್ನು ಹೊಂದಿವೆ. ದೇವಾಲಯಗಳ ನಿರ್ಮಾಣಕ್ಕಾಗಿ ಸ್ಥಳೀಯವಾಗಿ ದೊರೆಯುವ ನಸುಗೆಂಪು ಅಥವಾ ತಿಳಿ ಹಳದಿ ಬಣ್ಣದ ಮರಳು ಕಲ್ಲನ್ನೇ ಹೆಚ್ಚಾಗಿ ಬಳಸಿದ್ದಾರೆ.[೩೦] ಬಾದಾಮಿ ಚಾಲುಕ್ಯರಿಂದ ಪ್ರಾರಂಭವಾದ ಚಾಲುಕ್ಯ ವಾಸ್ತುಶೈಲಿಯನ್ನು ಹಲವು ಬದಲಾವಣೆಗಳೊಂದಿಗೆ ಅವರ ವಂಶಜರೆ ಆದ ಕಲ್ಯಾಣ ಚಾಲುಕ್ಯರು ಬೆಳಸಿಕೊಂಡು ಬಂದರು. ಕರ್ನಾಟಕದ ದೇವಾಲಯಗಳ ನಿರ್ಮಾಣದ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಕಾಲ ಅಪೂರ್ವವಾದುದು. ಕಲ್ಯಾಣ ಚಾಲುಕ್ಯರ ದೇವಾಲಯಗಳು ಔರಂಗಾಬಾದದ ಕೊಡದಿಂದ ತುಮಕೂರು ಜಿಲ್ಲೆಯ ಅರಳುಗುಪ್ಪೆಯವರೆಗೆ ಮತ್ತು ಕೊಲ್ಲಾಪುರದಿಂದ ಮಹಬೂಬನಗರ ಜಿಲ್ಲೆಯ ಪಾನುಗಲ್ಲುವರೆಗೆ ಹಬ್ಬಿವೆ. ಕಲ್ಯಾಣ ಚಾಲುಕ್ಯರ ಹೆಚ್ಚಿನ ದೇವಾಲಯಗಳು ನಿರಂಧಾರ ಪ್ರಕಾರದವುಗಳು.[೩೧] ಕಲ್ಯಾಣ ಚಾಲುಕ್ಯರ ದೇವಾಲಯಗಳ ಅಧಿಷ್ಠಾನ ಮೂರರಿಂದ ಐದು ಅಡಿಗಳ ಎತ್ತರವುಳ್ಳದ್ದಾಗಿದ್ದು, ಉಪಾನ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳು ಕಂಡುಬರುತ್ತವೆ. ಇವರ ಕಾಲದ ಜಾಲಂದ್ರಗಳನ್ನು ಸಾಮಾನ್ಯವಾಗಿ ದ್ವಾರಗಳ ಎರಡೂ ಬದಿಗೆ ಅಳವಡಿಸಿರುತ್ತಾರೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಇನ್ನೊಂದು ಗಮನಾರ್ಹ ಲಕ್ಷಣವೆಂದರೆ ಕಂಬಗಳ ವಿನ್ಯಾಸ ಮತ್ತು ಅವುಗಳನ್ನು ಕೆತ್ತುವಿಕೆ. ಸಾಮಾನ್ಯವಾಗಿ ಎರಡು ಪ್ರಕಾರದ ಕಂಬಗಳು ಇಲ್ಲಿ ಕಂಡುಬರುತ್ತವೆ.

ಮೊದಲನೆಯ ವಿಧದ ಕಂಬ ಕಾಂಡಭಾಗದಲ್ಲಿ ಚಚ್ಚೌಕವಾಗಿದ್ದು, ಎರಡನೇ ಪ್ರಕಾರದ ಕಂಬ ಗಂಟೆಯಾಕಾರದ್ದಾಗಿರುತ್ತದೆ. ಇವರ ಕಾಲದ ದೇವಾಲಯಗಳು ದ್ರಾವಿಡ ಮತ್ತು ನಾಗರ ಶೈಲಿಗಳ ಸಮ್ಮಿಲನವಾಗಿ ಸಂಕರಣ ಶೈಲಿಯಾದ ವೇಸರ ಶೈಲಿಯಲ್ಲಿ ನಿರ್ಮಾಣವಾಗಿವೆ. ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ದೇವಾಲಯಗಳೆಂದರೆ ಇಟಗಿಯ ಮಹದೇವ ದೇವಾಲಯ, ಲಕ್ಕುಂಡಿಯ ಕಾಶಿ ವಿಶ್ವನಾಥ, ಕುಕನೂರಿನ ನವಲಿಂಗೇಶ್ವರ ಮತ್ತು ಕಲ್ಲೇಶ್ವರ, ಗದುಗಿನ ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರ ದೇವಾಲಯಗಳು ಮುಖ್ಯವಾಗಿವೆ.

ಹೊಯ್ಸಳರು ಕ್ರಿ.ಶ. ೧೨ನೇ ಶತಮಾನದ ಪೂರ್ವಾರ್ಧದಲ್ಲಿ ಸ್ವತಂತ್ರರಾದ ಬಳಿಕ, ಚಾಲುಕ್ಯರ ಸಾಂಸ್ಕೃತಿಕ ಸಂಸ್ಥೆಗಳಿಗೆ ಉತ್ತರಾಧಿಕಾರಿಗಳಾದರು. ಹೊಯ್ಸಳ ಕಲೆ ಮತ್ತು ವಾಸ್ತುಶಿಲ್ಪ ವಿಶ್ವಪ್ರಸಿದ್ಧಿ ಪಡೆದಿದೆ. ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು 'ಸೋಪ್‌ಸ್ಟೋನ್' ಎಂದು ಕರೆಯಲ್ಪಡುವ ಮೆದುವಾದ ಕಲ್ಲಿನಲ್ಲಿ ರೂಪಿಸಿದ್ದಾರೆ. ಹೊಯ್ಸಳ ಕಾಲದ ದೇವಾಲಯಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬಂದರೂ ಅವು ಹೆಚ್ಚಾಗಿ ಹಾಸನ, ಚಿಕ್ಕಮಂಗಳೂರು, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿವೆ.[೨೨] ತಲವಿನ್ಯಾಸವನ್ನು ಅನುಸರಿಸಿ ಹೊಯ್ಸಳ ದೇವಾಲಯಗಳನ್ನು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳಾಗಿ ವಿಂಗಡಿಸಬಹುದು ಇವರ ಕಾಲದಲ್ಲಿ ಏಕಕೂಟ ದೇವಾಲಯಗಳಿಗೆ ಬೇಲೂರಿನ ಚನ್ನಕೇಶವ, ಹಾರ್ನಳ್ಳಿಯ ಸೋಮೇಶ್ವರ[೨೩], ದ್ವಿಕೂಟ ದೇವಾಲಯಗಳಿಗೆ ಹಳೇಬೀಡಿನ ಹೊಯ್ಸಳೇಶ್ವರ, ಆನೆಕೊಂಡದ ಈಶ್ವರ, ಬೆಳ್ಳೂರಿನ ಕಣ್ಣೇಶ್ವರ[೨೪], ತ್ರಿಕೂಟ ದೇವಾಲಯಗಳಿಗೆ ಕಂಬದಹಳ್ಳಿ, ಭದ್ರಾವತಿ, ಉಂಡಿಗನಾಳ್, ಸೆಟ್ಟಿಕೆರೆ, ಬೆಳ್ಳೂರು, ಆಘಾಲಯ, ಬಂದಳಿಕೆ, ಹೊಸಹೊಳಲು ಇತ್ಯಾದಿಗಳನ್ನು ಹೆಸರಿಸಬಹುದು.[೨೫] ಹೊಯ್ಸಳ ಶೈಲಿಯ ಅತ್ಯಂತ ಶ್ರೀಮಂತ ಶಿಲ್ಪದಿಂದ ಕೂಡಿದ ಪ್ರಾತಿನಿಧಿಕ ದೇವಾಲಯಗಳಲ್ಲಿ ಹಳೇಬೀಡಿನ ಹೊಯ್ಸಳೇಶ್ವರ, ಬೇಲೂರಿನ ಚನ್ನಕೇಶವ ಮತ್ತು ಸೋಮನಾಥಪುರದ ಕೇಶವ ದೇವಾಲಯವನ್ನು ಹೆಸರಿಸಬಹುದು. ಹೀಗೆ ಹೊಯ್ಸಳ ಕಾಲದ ದೇವಾಲಯಗಳು ಕರ್ನಾಟಕದ ಹಲವು ಭಾಗಗಳಲ್ಲಿ ನಿರ್ಮಾಣಗೊಂಡಿದ್ದು ಅವರ ಕಾಲದ ಸಾಂಸ್ಕೃತಿಕ ವೈಭವವನ್ನು ಬಿಂಬಿಸುತ್ತವೆ.

ಕರ್ನಾಟಕದ ಕಲಾ ಮತ್ತು ಸಾಂಸ್ಕೃತಿಕ ಪರಂಪರೆಗೆ ವಿಶೇಷ ಕೊಡುಗೆಯನ್ನು ನೀಡಿದ ಸಾಮ್ರಾಟರಲ್ಲಿ ವಿಜಯನಗರದ ಅರಸರು ಬಹು ಪ್ರಮುಖರು. ದಕ್ಷಿಣ ಭಾರತದ ಉತ್ತರ ಭಾಗದಲ್ಲಿ ಚಾಲುಕ್ಯರ ಕಾಕತೀಯರ ಮತ್ತು ಹೊಯ್ಸಳರ ಪರಂಪರೆಯನ್ನು ವಿಜಯನಗರದ ಅರಸರು ಮುಂದುವರೆಸಿದರು.[೨೬] ಇವರ ಕಾಲದ ದೇವಾಲಯಗಳು ಇಡೀ ದಕ್ಷಿಣ ಭಾರತದಲ್ಲೆಲ್ಲಾ ಹರಡಿಕೊಂಡಿವೆ. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸುಂದರ ಸಂಯೋಜನೆಯನ್ನು ರೂಢಿಸಿ, ರೂಪಿಸಿಕೊಂಡ ವಿಜಯನಗರ ಶಿಲ್ಪಿಗಳು 'ವಿಜಯನಗರ ಶೈಲಿ'ಯೆಂದು ಪ್ರಸಿದ್ಧವೂ, ನವೀನವೂ, ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ವಿಜಯನಗರ ಕಾಲದ ದೇವಾಲಯಗಳ ವಾಸ್ತುಶೈಲಿಯ ಸಾಕಷ್ಟು ಬದಲಾವಣೆ ಹಾಗೂ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಇವರ ಕಾಲದ ದೇವಾಲಯಗಳ ತಲವಿನ್ಯಾಸ ಹೆಚ್ಚು ವಿಸ್ತಾರವಾಗತೊಡಗಿದವು. ಸಾಮಾನ್ಯವಾಗಿ

ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರವಿರುತ್ತದೆ. ಪ್ರಾಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಪ್ರಾಕಾರವನ್ನು ಎರಡು ಅಥವಾ ಮೂರು ಕಡೆಗಳಿಂದ ಪ್ರವೇಶಿಸಲು ಪ್ರವೇಶ ಮಂಟಪಗಳು ಕಂಡುಬರುತ್ತವೆ.[೨೮] ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಇವುಗಳನ್ನು ರಾಯಗೋಪುರಗಳು ಎಂದು ಕರೆಯುತ್ತಾರೆ.[೨೯] ವಿಜಯನಗರ ಕಾಲದ ದೇವಾಲಯಗಳನ್ನು ಸ್ಥಳೀಯವಾಗಿ ದೊರೆಯುವ ಗ್ರ್ಯಾನೈಟ್ ಶಿಲೆಗಳಿಂದಲೇ ನಿರ್ಮಿಸಿದ್ದಾರೆ. ಇದರ ಫಲವಾಗಿ ಹೊಯ್ಸಳ ಕಾಲದ ಸೂಕ್ಷ್ಮ ಕೆತ್ತನೆ ಮರೆಯಾಗಿ ದೊಡ್ಡ ಪ್ರಮಾಣದ ಉಬ್ಬು ಶಿಲ್ಪಗಳು ಕಂಡುಬಂದವು. ಇವರ ಕಾಲದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ವಿಜಯನಗರ ಕಾಲದ ಕಂಬಗಳು ತುಂಬಾ ಕಲಾತ್ಮಕವಾಗಿ ಕಂಡುಬರುತ್ತವೆ. ಇವರ ಕಾಲದ ಕಂಬಗಳಲ್ಲಿನ ಪುಷ್ಪಭೋದಿಗೆಯು ಹೆಚ್ಚು ಬಾಗಿದ್ದು ಅಲಂಕೃತವಾಗಿರುತ್ತವೆ. ಈ ಕಾಲದ ಕಂಬಗಳಲ್ಲಿ ಸಂಗೀತ ಕಂಬಗಳು, ಅಶ್ವಸ್ಥಂಭ, ಯಾಳಿಸ್ಥಂಭ ವಿವಿಧ ಮಾದರಿ ಸ್ಥಂಭಗಳು ಬೆಳೆದುಬಂದವು. ವಿಜಯನಗರ ಕಾಲದ ಪ್ರಮುಖ ದೇವಾಲಯಗಳೆಂದರೆ ವಿರೂಪಾಕ್ಷ, ಹಜಾರಾರಾಮ, ಅನಂತಶಯನ ಹಾಗೂ ವಿಜಯ ವಿಠ್ಠಲಸ್ವಾಮಿ ಸೇರಿದಂತೆ ಇನ್ನೂ ಹಲವು ದೇವಾಲಯಗಳನ್ನು ಹೆಸರಿಸಬಹುದು. ವಿಜಯನಗರ ಸಾಮ್ರಾಜ್ಯದ ಪತನದ ಬಳಿಕ ವಾಸ್ತುಶೈಲಿಯಲ್ಲಿ ಏಕತೆ ಉಳಿದು ಬರಲಿಲ್ಲ. ಕರ್ನಾಟಕದ ಬಹುಭಾಗಗಳಲ್ಲಿ ಪಾಳೆಯಗಾರರು ಆಳ್ವಿಕೆಯ ಪ್ರತಿಫಲವಾಗಿ ದೇವಾಲಯ ವಾಸ್ತುಶೈಲಿಯು ಸರಳಗೊಂಡಿತು.

ಪ್ರಸ್ತುತ ಅಧ್ಯಾಯದಲ್ಲಿ ಹೊಸದುರ್ಗ ತಾಲೂಕು ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ವಿವೇಚಿಸಲಾಗಿದೆ. ಈ ತಾಲೂಕು ಪರಿಸರವು ಪ್ರಾಚೀನ ದೇವಾಲಯಗಳಿಗೆ ಸಂಬಂಧಿಸಿದಂತೆ ಕಣಜವೆಂದೇ ಹೇಳಬೇಕು. ಅರೆ ಮಲೆನಾಡು ಪ್ರಾಂತ್ಯವಾಗಿರುವ ಈ ಭಾಗದಲ್ಲಿ ಹಲವು ಪ್ರಬಲ ಹಾಗೂ ಚಿಕ್ಕ ಪುಟ್ಟ ಅರಸುಮನೆತನಗಳ ಚರಿತ್ರೆ ಮತ್ತು ಸಂಸ್ಕೃತಿಯ ಕುರುಹುಗಳೊಂದಿಗೆ ಅವುಗಳನ್ನು ಪ್ರತಿಬಿಂಬಿಸುವ ಸ್ಮಾರಕಗಳಲ್ಲಿ ದೇವಾಲಯಗಳು ಸಹ ಬಹುಮುಖ್ಯವಾಗಿವೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಸಹಸ್ರ ಸಂಖ್ಯೆಯ ಪ್ರಾಚೀನ ದೇವಾಲಯಗಳು ಉಳಿದುಬಂದಿವೆ. ಈ ಪರಿಸರದಲ್ಲಿ ರಾಷ್ಟ್ರಕೂಟ ಶೈಲಿಯಿಂದ ಹಿಡಿದು ವಿಜಯನಗರೋತ್ತರ ಶೈಲಿಯವರೆಗಿನ ದೇವಾಲಯಗಳನ್ನು ಕಾಣಬಹುದು. ಇವುಗಳಲ್ಲಿ ಬಹುಮುಖ್ಯವಾಗಿ ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ದೇವಾಲಯಗಳೇ ಹೆಚ್ಚು. ಹೊಸದುರ್ಗ ತಾಲೂಕು ಪರಿಸರವನ್ನು ಒಳಗೊಂಡಂತೆ ಇಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಕ್ರಿ.ಶ. ೭೯೮ ರಿಂದ ೯೮೨ರವರೆಗೆ ರಾಷ್ಟ್ರಕೂಟರು ಆಳ್ವಿಕೆ ಮಾಡಿರುವಂತೆ ತೋರುತ್ತದೆ. ಮಳಲಿಯ 'ಕಲ್ಲೇಶ್ವರ ದೇವಾಲಯವು' ರಾಷ್ಟ್ರಕೂಟರ ಕಾಲದ್ದು. ಇದು ಇಟ್ಟಿಗೆ ದೇವಾಲಯವಾಗಿದ್ದು, ಗರ್ಭಗೃಹ ಹಾಗೂ ಅಂತರಾಳವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ನಂದಿ, ಅಂತರಾಳದಲ್ಲಿ ವಿಷ್ಣು ಹಾಗೂ ನಾಗ ಶಿಲ್ಪಗಳಿವೆ. ಈ ತಾಲೂಕಿನ ರಾಷ್ಟ್ರಕೂಟ ಶೈಲಿಯ ಅತ್ಯಂತ ಪ್ರಾಚೀನ ದೇವಾಲಯವಿದು.

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಒಂದು ಭಾಗವಾಗಿದ್ದ ಚಿತ್ರದುರ್ಗ ಜಿಲ್ಲೆಯಲ್ಲಿ ಸಾಮಂತರಾದ ನೊಳಂಬರು, ಹೊಯ್ಸಳರು ಕೆಲಕಾಲ ಆಳ್ವಿಕೆ ನಡೆಸುತ್ತಿದ್ದರು. ಕರ್ನಾಟಕವನ್ನು

ಕ್ರಿ.ಶ. ೧೦–೧೨ನೇ ಶತಮಾನದವರೆಗೆ ಆಳಿದ ಕಲ್ಯಾಣ ಚಾಲುಕ್ಯ ರಾಜವಂಶವು ಕರ್ನಾಟಕದ ಕಲಾ ಪ್ರಪಂಚಕ್ಕೆ ನೀಡಿದ ಕೊಡುಗೆ ಅತ್ಯಮೂಲ್ಯ. ಎಸ್.ನಾಗರಾಜು ಅವರ ಅಭಿಪ್ರಾಯದಂತೆ "ಕಲ್ಯಾಣ ಚಾಲುಕ್ಯ ಸಂಪ್ರದಾಯದ ವಾಸ್ತು ಮತ್ತು ಶಿಲ್ಪಗಳು ದಕ್ಷಿಣ ಭಾರತದ ಕಲೆಯ ಪರಂಪರೆಯಲ್ಲಿ ನೂತನ ಮಾರ್ಗವನ್ನು ಆರಂಭಿಸಿದವು". ಎಸ್. ಶೆಟ್ಟರ್ ಅವರು ಹೊಯ್ಸಳ ವಾಸ್ತುಶಿಲ್ಪದ ಬಗೆಗೆ ತಿಳಿಸುತ್ತಾ "ವರದಾ ಮತ್ತು ವೇದಾವತಿ ನದಿಗಳ ನಡುವಿನ ಭಾಗವಾದ ಅಂದರೆ ಇಂದಿನ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರದೇಶಗಳಲ್ಲಿ ಚಾಲುಕ್ಯ ಮತ್ತು ಹೊಯ್ಸಳ ವಾಸ್ತುಶಿಲ್ಪ ಬೆಳೆದ ಹಂತವನ್ನು ಗುರುತಿಸಬಹುದು" ಎಂದಿದ್ದಾರೆ.[೯] ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ, ಹೊಯ್ಸಳರು ಚಾಲುಕ್ಯರ ವಾಸ್ತುಶೈಲಿಯಲ್ಲೇ ದೇವಾಲಯಗಳನ್ನು ನಿರ್ಮಿಸಿರುವುದನ್ನು ಚಿತ್ರದುರ್ಗ ಜಿಲ್ಲೆಯ ಕೆಲವು ದೇವಾಲಯಗಳ ಶೈಲಿಯು ಸ್ಪಷ್ಟಪಡಿಸುತ್ತದೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯ ದೇವಾಲಯಗಳಲ್ಲಿ ನೀರಗುಂದದ ಸಿದ್ದೇಶ್ವರ, ಚಿಕ್ಕಯಗಟಿ ಗ್ರಾಮದ ಈಶ್ವರ, ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯಗಳು ಮುಖ್ಯವಾಗಿವೆ. ಈ ದೇವಾಲಯಗಳನ್ನು ಬಹುತೇಕ ಹಸಿರು ಮಿಶ್ರಿತ ನಾರುಲ್ಲನ್ನು ಬಳಸಿ ನಿರ್ಮಿಸಲಾಗಿದೆ. ದೇವಾಲಯಗಳ ನವರಂಗ ಮತ್ತು ಇತರ ಭಾಗಗಳಲ್ಲಿ ಕರಿಯ ಮೆದುಗಲ್ಲು (ಕ್ಲೋರೋಟಿಕ್‌ಸಿಸ್ಟ್)ನ್ನು ಉಪಯೋಗಿಸಿ ಕಂಬ ಮತ್ತು ಇತರೆ ರಚನೆಗಳನ್ನು ಮಾಡಿರುವರು. ಕೆಲವೆಡೆ ಗ್ರಾನೈಟ್ ಶಿಲೆಯಿಂದ ದೇವಾಲಯಗಳನ್ನು ವಿಸ್ತಾರ ಮಾಡಿರುವುದು ಕಂಡುಬರುತ್ತದೆ.

ಕ್ರಿ.ಶ. ೧೧ನೇ ಶತಮಾನದಿಂದ ೧೪ನೇ ಶತಮಾನದವರೆಗೆ ಕರ್ನಾಟಕವಲ್ಲದೆ ದಕ್ಷಿಣ ಭಾರತದ ಬಹುಭಾಗಗಳಲ್ಲಿ ಆಳಿದ ಹೊಯ್ಸಳರು ತಮ್ಮ ರಾಜಕೀಯ ಚರಿತ್ರೆ, ಸಾಂಸ್ಕೃತಿಕವಾದ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಇತರ ಸಾಧನೆಗಳಿಂದಾಗಿ ಕರ್ನಾಟಕದ ಚರಿತ್ರೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದ್ದಾರೆ. ಹೊಸದುರ್ಗ ಪರಿಸರದಲ್ಲಿ ಹೊಯ್ಸಳ ರಾಜರು ಅನೇಕ ವರ್ಷಗಳ ಕಾಲ ಆಳ್ವಿಕೆ ನಡೆಸಿದರ (ಕ್ರಿ.ಶ. ೧೧೧೬ ರಿಂದ ೧೩೪೬) ಫಲವಾಗಿ ಇಲ್ಲಿ ನೂರಾರು ಶಿಲಾಶಾಸನಗಳು ಹಾಗೂ ವಾಸ್ತುಶಿಲ್ಪ ಅವಶೇಷಗಳು ಕಂಡುಬಂದಿವೆ. ಈ ಹಿಂದೆ ಇದ್ದ ವಾಸ್ತುಶಿಲ್ಪ ಕಟ್ಟಡಗಳಿಗೆ ಅನೇಕ ದಾನದತ್ತಿಗಳನ್ನು ಕೊಟ್ಟು ಊರ್ಜಿತಗೊಳಿಸಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.[೧೦] ಬಾಗೂರಿನ ಚನ್ನಕೇಶವ ದೇವಾಲಯವು ಹೊಯ್ಸಳ ಕಾಲದ ರಚನೆಯಾಗಿದೆ. ನೀರಗುಂದದ ಸಿದ್ದೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕೊನೆಯ ಕಾಲ ಹಾಗೂ ಹೊಯ್ಸಳರ ಪ್ರಾರಂಭದ ಕಾಲದ್ದಾಗಿದ್ದು, ಹೊಯ್ಸಳ ಅರಸರಿಂದ ಅನೇಕ ದಾನದತ್ತಿಗಳನ್ನು ಪಡೆದಿದೆ.[೧೧] ಅದೇ ರೀತಿ ದೊಡ್ಡಘಟ್ಟದ ಶಂಕರಲಿಂಗೇಶ್ವರ, ಮಳಲಿಯ ಗೋಪಾಲಕೃಷ್ಣ, ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿ, ಗಲಗೇಶ್ವರ, ಕಲ್ಲೇಶ್ವರ ಸೇರಿದಂತೆ ಇನ್ನೂ ಅನೇಕ ದೇವಾಲಯಗಳು ಹೊಯ್ಸಳರ ಕಾಲದಲ್ಲೇ ನಿರ್ಮಾಣಗೊಂಡಿವೆ.

ಹೊಸದುರ್ಗ ತಾಲೂಕು ಪರಿಸರದಲ್ಲಿ ವಿಜಯನಗರ ಕಾಲದ ಶಾಸನಗಳು, ದೇವಾಲಯಗಳು ಹಾಗೂ ಇತರೆ ಪ್ರಾಚ್ಯಾವಶೇಷಗಳಿವೆ. ವಿಜಯನಗರ ಕಾಲದ ದೇವಾಲಯಗಳನ್ನು ಸ್ಥಳೀಯವಾಗಿ ಲಭ್ಯವಿರುವ 'ಗ್ರಾನೈಟ್‌ಶಿಲೆ'ಯನ್ನು ಬಳಸಿ ನಿರ್ಮಿಸಿದ್ದಾರೆ. ಅಂತಹ ದೇವಾಲಯಗಳೆಂದರೆ ಮೈಲಾರಪುರದ ಮೈಲಾರಲಿಂಗೇಶ್ವರ, ಬೂದಿಹಾಳಿನ ವೀರಭದ್ರೇಶ್ವರ ಹಾಗೂ ಲಕ್ಷ್ಮೀಕಾಂತ,

ಬಾಗೂರಿನ ಜೀರ್ಣೋದ್ಧಾರಗೊಂಡ ಚನ್ನಕೇಶವ, ಹಾಗೂ ಮೆಣಸಿನೋಡು ಗ್ರಾಮದ ಮಲ್ಲಿಕಾರ್ಜುನ. ವಿಜಯನಗರ ನಂತರದಲ್ಲಿ ಈ ತಾಲೂಕು ಪರಿಸರದಲ್ಲಿ ವಿಜಯನಗರೋತ್ತರ ಅಥವಾ ಪಾಳೆಯಗಾರರ ಕಾಲದ ದೇವಾಲಯಗಳು ಅಪಾರ ಪ್ರಮಾಣದಲ್ಲಿ ಕಂಡುಬರುತ್ತವೆ. ಈ ತಾಲೂಕು ಪರಿಸರದಲ್ಲಿ ಮತ್ತೋಡು, ಬೂದಿಹಾಳು, ಸಂತೇಬೆನ್ನೂರು, ಚಿತ್ರದುರ್ಗ ಹಾಗೂ ಬೇಲೂರು ಪಾಳೆಯಗಾರರು ಆಳ್ವಿಕೆ ನಡೆಸಿರುವ ಅಂಶವು ತಿಳಿದಿರುವಂತಹದ್ದು. ಪಾಳೆಯಗಾರರು ತಮ್ಮ ಕಾಲದಲ್ಲಿ ವಿಜಯನಗರ ಶೈಲಿಯಲ್ಲಿ ಕೆಲವು ದೇವಾಲಯಗಳನ್ನು ನಿರ್ಮಿಸಿದ್ದರೆ ಇನ್ನೂ ಕೆಲವು ದೇವಾಲಯಗಳು ಸರಳವಾದ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ವಿಜಯನಗರೋತ್ತರ ಕಾಲದ ಮುಖ್ಯ ದೇವಾಲಯಗಳೆಂದರೆ ಹೊಸದುರ್ಗದ ವೀರಭದ್ರ, ಕೆಲ್ಲೋಡು ಹನುಮಂತ ದೇವರು, ಬಾಗೂರಿನ ಜೀವಿಪ್ರಾಣದೇವರು, ಬೋಕಿಕೆರೆಯ ಹನುಮಂತ, ಸೂಜಿಗಲ್ಲಿನ ಬೀರಲಿಂಗೇಶ್ವರ. ಒಟ್ಟಾರೆ ವಾಸ್ತುಶೈಲಿಯ ದೃಷ್ಟಿಯಿಂದ ನೋಡಿದಾಗ ಈ ತಾಲೂಕಿನಲ್ಲಿ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಶೈಲಿಯ ದೇವಾಲಯಗಳು ಕಾಣಸಿಗುತ್ತವೆ. ಇಲ್ಲಿ ಕಂಡುಬಂದ ದೇವಾಲಯಗಳನ್ನು ಧಾರ್ಮಿಕ ದೃಷ್ಟಿಕೋನದಿಂದ ಶೈವ, ವೈಷ್ಣವ, ಶಾಕ್ತ ಹಾಗೂ ಜೈನ(ಬಸದಿ)ದೇವಾಲಯಗಳೆಂದು ವರ್ಗೀಕರಿಸಿ ವಿವರಿಸಲು ಪ್ರಯತ್ನಿಸಲಾಗಿದೆ.

೩.೧.೧ ಶೈವ ದೇವಾಲಯಗಳು

ಶೈವವು ಜಗತ್ತಿನ ಅತ್ಯಂತ ಪ್ರಾಚೀನ ಧರ್ಮವೆಂಬುದಕ್ಕೆ ಪ್ರಬಲವಾದ ಆಧಾರಗಳು ದೊರೆತಿವೆ. ಅವುಗಳಲ್ಲಿ ಕ್ರಿ.ಪೂ.೩೦೦೦ ವರ್ಷಗಳಷ್ಟು ಹಿಂದಿನ ಹರಪ್ಪ-ಮೊಹೆಂಜೋದಾರೋ ಉತ್ಖನನದಲ್ಲಿ ದೊರೆತ ಪಳೆಯುಳಿಕೆಗಳು ಮಹತ್ವವಾದವು.[೨] ಸರ್ ಜಾನ್ ಮಾರ್ಷಲ್ ಅವರು ಇಂತಹ ಕೆಲವು ಪಳೆಯುಳಿಕೆಗಳನ್ನು ಹೀಗೆ ವರ್ಣಿಸಿರುವರು: "One marble statue – He has the head neck and body quite erect and half set eyes fixed on the top of the nose. Another is draped in the upanita fashion ..... His shawl has rosetter having the form of bilva leaf, the most sacred material for the worship of shiva cult. The Philosophy of the age crystalised in the discipline known later as brahmacharya– Sexual restraint is an evidence in the urdhvamedhra representation of shiva on the seal". (ಒಂದು ಮಾರ್ಬಲ್ ಶಿಲೆಯ ಮೇಲಿನ ವಿಗ್ರಹದ ತಲೆ, ಕುತ್ತಿಗೆ ಮತ್ತು ದೇಹಗಳು ಒಂದೇ ರೇಖೆಯಲ್ಲಿ ನೇರನಿಂತಿದ್ದು ಅದರ ಅರ್ಧನಿಮೀಲಿತ ನೇತ್ರಗಳು ಮೂಗಿನ ತುದಿಯ ಮೇಲೆ ಕೇಂದ್ರೀಕೃತವಾಗಿವೆ. ಮತ್ತೊಂದು ಮುದ್ರೆಯ ಮೂರ್ತಿ ಕುಳಿತ ಸ್ಥಿತಿಯಲ್ಲಿದೆ. ಅವನ ಶಾಲಿನಲ್ಲಿ ಶಿವನ ಪೂಜೆಯಲ್ಲಿ ಅತ್ಯಂತ ಪವಿತ್ರ ವಸ್ತುವೆಂದು ಪರಿಗಣಿತವಾದ ಬಿಲ್ವದಲಗಳಿವೆ. ಆ ಯುಗಧರ್ಮದ ಸಿದ್ಧಾಂತವು ಆಮೇಲೆ ಬ್ರಹ್ಮಚರ್ಯವೆಂದು ಹೆಸರು ಪಡೆದುದು ಒಂದು ವಿಗ್ರಹದಲ್ಲಿ ಸ್ಪಷ್ಟವಾಗಿದೆ. ಒಂದು ಮುದ್ರೆಯ ಮೇಲಿನ ಶಿವನು ಊರ್ಧ್ವಮೇಢ್ರನಾಗಿರುವುದು ಬ್ರಹ್ಮಚರ್ಯದ ಕುರುಹಾಗಿದೆ.) ಶೈವಧರ್ಮದ ಇತಿಹಾಸವು ಮೊಹೆಂಜೋದಾರೋ-ಹರಪ್ಪ ಸಂಸ್ಕೃತಿಯ ಕಾಲದವರೆಗೆ ಅಥವಾ ಅದಕ್ಕೂ ಪೂರ್ವದವರೆಗೆ ಹೋಗುತ್ತದೆ ಎಂದು ಸರ್ ಜಾನ್ ಮಾರ್ಷಲ್ ಅವರು ಅಭಿಪ್ರಾಯವಿತ್ತಿರುವುದು ಮಹತ್ವವಾದುದು. ಜಗತ್ತಿನಲ್ಲಿ ಇದುವರೆಗೂ

ಜೀವಂತವಾಗಿರುವ ಪ್ರಾಚೀನ ಧರ್ಮಗಳಲ್ಲಿ ಶೈವವು ಅತ್ಯಂತ ಪ್ರಾಚೀನತಮವಾದುದೆಂಬ ಅಭಿಪ್ರಾಯವನ್ನು ಮಾರ್ಷಲ್ ಅವರು ಅಭಿಪ್ರಾಯ ಪಟ್ಟರುವರು. ಅಲ್ಲದೆ ಮೊಹೆಂಜೋದಾರೋ ಹರಪ್ಪ ಉತ್ಖನನಗಳಲ್ಲಿ ಕೆಲವು ಲಿಂಗಗಳು ದೊರೆತಿವೆ. ಅವುಗಳಲ್ಲಿ ಕೆಲವು ಗಾತ್ರದಲ್ಲಿ ದೊಡ್ಡದಾಗಿ ಸ್ಥಾವರಲಿಂಗಗಳನ್ನು, ಕೆಲವು ಚಿಕ್ಕದಾಗಿ ದೇಹದಲ್ಲಿ ಧಾರಣ ಮಾಡುವ ಲಿಂಗಗಳನ್ನು ಹೋಲುತ್ತವೆ ಎಂದು ಹೇಳಲಾಗಿದೆ.[೪೩]

ಶೈವರು ಪರಬ್ರಹ್ಮ ವಸ್ತುವನ್ನು ಶಿವ, ರುದ್ರ ಎಂದು ಪೂಜಿಸುತ್ತಾರೆ. ಶೃತಿ ಸ್ಮೃತಿಗಳಲ್ಲೂ ಇದಕ್ಕೆ ಆಧಾರವಿದೆ. ಶೈವ ಮತದಲ್ಲಿ ೧. ದ್ವೈತ ಪಾಶುಪತ, ೨. ದ್ವೈತ ಶೈವ ಸಿದ್ಧಾಂತ ೩. ದ್ವೈತಾದ್ವೈತ ಲಕುಲೀಶ ಪಾಶುಪತ, ೪. ವಿಶಿಷ್ಟಾದ್ವೈತ ಶೈವ, ೫. ವಿಶೇಷಾದ್ವೈತ ಶೈವ (ವೀರಶೈವ), ೬. ನಂದಿಕೇಶ್ವರ ಶೈವ ೭. ರಸೇಶ್ವರ ಶೈವ, ೮. ಕಾಶ್ಮೀರ ಶೈವ – ಎಂಬ ಎಂಟು ಪ್ರಬೇಧಗಳಿವೆ.[೪೪] ಕನ್ನಡ ನಾಡಿನ ರಾಜರೂ, ಸಾಮಂತ ಮನ್ನೆಯರೂ, ಜನಸಾಮಾನ್ಯರೂ ಶೈವಧರ್ಮದ ಪುರಸ್ಕೃತರಾಗಿದ್ದರು. ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಶೈವಧರ್ಮ ಅಸ್ತಿತ್ವದಲ್ಲಿದ್ದು ಪಾಲನೆ–ಪೋಷಣೆ ಹೊಂದಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಶೈವಧರ್ಮವನ್ನು ಪ್ರತಿಬಿಂಬಿಸುವ ಸ್ಮಾರಕಗಳಲ್ಲಿ ದೇವಾಲಯಗಳು ಬಹುಪ್ರಧಾನವಾಗಿ ನಿಲ್ಲುತ್ತವೆ. ಕದಂಬರಿಂದ ಪಾಳೆಯಗಾರರವರೆಗೆ ಅನೇಕ ರಾಜಮನೆತನಗಳು ತಮ್ಮ ಪ್ರದೇಶವ್ಯಾಪ್ತಿಯಲ್ಲಿ ಶೈವ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು ಶಾಸನೋಕ್ತ ಸಂಗತಿ. ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಕಾಲದಿಂದಲೇ ಶೈವಧರ್ಮ ಪ್ರಾಬಲ್ಯ ಹೊಂದಿರುವುದು ತಿಳಿದುಬರುವುದು. ಅದೇ ರೀತಿ ಜಿಲ್ಲೆಯ ಅವಿಭಾಜ್ಯ ಅಂಗವಾಗಿರುವ ಹೊಸದುರ್ಗ ತಾಲೂಕಿನಲ್ಲಿ ಶೈವಧಾರ್ಮಿಕ ಕೇಂದ್ರಿತ ಸ್ಮಾರಕಗಳನ್ನು ಕಾಣಬಹುದು. ಅವುಗಳಲ್ಲಿ ದೇವಾಲಯಗಳು ಮುಖ್ಯವಾಗಿವೆ. ಈ ಪರಿಸರದಲ್ಲಿ ರಾಷ್ಟ್ರಕೂಟರಿಂದ ಪಾಳೆಯಗಾರರ ಕಾಲದವರೆಗೂ ಅನೇಕ ಶೈವದೇವಾಲಯಗಳು ನಿರ್ಮಾಣಗೊಂಡಿವೆ. ಅಂತಹ ಕೆಲವು ಪ್ರಮುಖ ಶೈವ ದೇವಾಲಯಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

೧.

ಊರು	: ನೀರಗುಂದ	**ಸ್ಥಳ**	: ಗ್ರಾಮದ ಮಧ್ಯೆ
ಸ್ಮಾರಕ	: ಸಿದ್ದೇಶ್ವರ ದೇವಾಲಯ	**ಅಭಿಮುಖ**	: ಪೂರ್ವ
ಶೈಲಿ	: ಹೊಯ್ಸಳ ಶೈಲಿ.	**ಕಾಲ**	: ಕ್ರಿ.ಶ.ಸು. ೧೦–೧೧ನೇ ಶತಮಾನ

ಹೊಸದುರ್ಗದಿಂದ ೧೩ ಕಿ.ಮೀ. ಅಂತರದಲ್ಲಿ ಅಜ್ಜಂಪುರ ರಸ್ತೆಯಲ್ಲಿ ನೀರಗುಂದ ಎಂಬ ಪ್ರಾಚೀನ ಗ್ರಾಮವಿದೆ. ಅತ್ಯಂತ ಪ್ರಾಚೀನ ಚಾರಿತ್ರಿಕ ಅವಶೇಷಗಳನ್ನು ಹೊಂದಿರುವ ನೀರಗುಂದವು ಶಾಸನೋಕ್ತ ಸ್ಥಳ.[೪೫] ಇದನ್ನು ನೀರಗುಂದ, ನೀರ್ಗುಂದನಾಡು, ಉದ್ಭವ ಸೋಮನಾಥಪುರ ಎಂದು ಕರೆಯಲಾಗಿದೆ.[೪೬] ನೀಲಾವತಿ ಪಟ್ಟಣ, ನೀಲಾವತಿ ನಗರ ಎಂಬ ಹೆಸರುಗಳು ಸಹ ಇದ್ದವೆಂದು ಜಾನಪದ ಸಾಹಿತ್ಯ ಅರಹುತ್ತದೆ. ಇಲ್ಲಿನ ಪ್ರಾಚೀನ ಸಿದ್ಧೇಶ್ವರ

ದೇವಾಲಯವು ಹೊಯ್ಸಳ ಪ್ರಾರಂಭ ಶೈಲಿಯಲ್ಲಿ ನಿರ್ಮಾಣಗೊಂಡಿದೆ.[೬] ಈ ದೇವಾಲಯವನ್ನು ಕಪ್ಪು ಮಿಶ್ರಿತ ಹಸಿರು ಮೆದುಗಲ್ಲನ್ನು ಬಳಸಿ ನಿರ್ಮಿಸಿರುವರು. ಇದು ತ್ರಿಕೂಟಾಚಲವಾಗಿದ್ದು ತಲವಿನ್ಯಾಸದಲ್ಲಿ ಮುಖ್ಯಗರ್ಭಗೃಹ, ಅಂಗರಾಳ, ಬಲಭಾಗದ ಗರ್ಭಗೃಹ, ಎಡಭಾಗದ ಗರ್ಭಗೃಹ, ನವರಂಗ ಹಾಗೂ ಮುಖಮಂಟಪವನ್ನು ಕಾಣಬಹುದು. ಆಯತಾಕಾರದ ತಲವಿನ್ಯಾಸವುಳ್ಳ ಈ ದೇವಾಲಯದ ಭಿತ್ತಿಯು ಹಿಂಚಾಚು, ಮುಂಚಾಚುಗಳಿಂದ ಕೂಡಿದೆ. ಕುಡ್ಯಸ್ತಂಭಗಳಿಂದಾದ ಭಿತ್ತಿಯಲ್ಲಿ ಕೋಷ್ಠಗಳು ಇವೆ. ಮುಖ್ಯ ಗರ್ಭಗೃಹದ ಭಿತ್ತಿಯ ಮುಖ್ಯ ಪಾರ್ಶ್ವದ ಕೋಷ್ಠದಲ್ಲಿ ಮಹೇಶ್ವರ ಶಿಲ್ಪ, ಬಲಪಾರ್ಶ್ವದ ಕೋಷ್ಠದಲ್ಲಿ ವಿಷ್ಣುವಿನ ಶಿಲ್ಪ, ಎಡಭಾಗದ ಕೋಷ್ಠದಲ್ಲಿ ಬ್ರಹ್ಮನ ಶಿಲ್ಪವಿದೆ. ಇದರ ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟಿ ಕುಮುದ, ದಂತಪಕ್ತಿ ಹಾಗೂ ಕಪೋತ ಭಾಗಗಳಿವೆ.

ಮುಖ್ಯಗರ್ಭಗೃಹದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಇದರ ಇಕ್ಕೆಲಗಳಲ್ಲಿ ಪದ್ಮಪುಷ್ಪ ಹಾಗೂ ಲತಾಸುರುಳಿ ಅಲಂಕರಣವನ್ನು ಕಡೆಯಲಾಗಿದೆ. ಸಾಧಾರಣ ಲಲಾಟ ಬಿಂಬವಿದ್ದು ಕೆಳಮುಖದಲ್ಲಿ ಪದ್ಮಪುಷ್ಪದ ಅಲಂಕರಣವಿದೆ. ಗರ್ಭಗೃಹದಲ್ಲಿ ಪದ್ಮಪೀಠದ ಮೇಲೆ ಸು.೩ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡವು ಪಂಚಶಾಖೆಗಳು ಅದರಲ್ಲಿ ರತ್ನಶಾಖೆ, ವಜ್ರಶಾಖೆ, ಪದ್ಮಶಾಖೆ, ಲತಾಸುರುಳಿಶಾಖೆ, ಸ್ತಂಭ ಶಾಖೆಗಳಿವೆ. ಇವುಗಳ ಮಧ್ಯದಲ್ಲಿ ಜಾಲಂಧ್ರದ ರಚನೆ ಇದ್ದು ಅದರಲ್ಲಿ ವಾದ್ಯ ಹಾಗೂ ನೃತ್ಯಗಾರ್ತಿಯರ ಶಿಲ್ಪಗಳಿವೆ. ಬಾಗಿಲುವಾಡದ ಪಾದದಲ್ಲಿ ಶೈವದ್ವಾರಪಾಲಕರಿದ್ದು, ತ್ರಿಶೂಲ, ಢಮರು, ಗಧಾ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವರು. ನವರಂಗದ ಮಧ್ಯದಲ್ಲಿ ನಾಲ್ಕು ಕಲಾತ್ಮಕವಾದ ಗಂಟಾಕಾರದ ಕಂಭಗಳಿವೆ. ತಿರುಗಣೆಯ ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕ, ದಂಡ, ಘಂಟಾ, ಫಲಕ ಹಾಗೂ ಬೋದಿಗೆಗಳಿವೆ. ನವರಂಗದಲ್ಲಿ ೯ ಅಂಕಣಗಳಿದ್ದು ಪ್ರತಿಯೊಂದು ಅಂಕಣದಲ್ಲೂ ವಿವಿಧ ಮಾದರಿ ಭುವನೇಶ್ವರಿಗಳಿವೆ. ಮಧ್ಯಭಾಗದ ಭುವನೇಶ್ವರಿಯು ಹೆಚ್ಚು ಅಲಂಕೃತದಿಂದ ಕೂಡಿದೆ. ಇದರ ಸುತ್ತಲಿನ ಪಟ್ಟಿಕೆಯಲ್ಲಿ ವಜ್ರಮಾದರಿ ಅಲಂಕರಣವನ್ನು ಕಂಡರಿಸಲಾಗಿದೆ. ನಂತರದ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಿದ್ದು ಅದಕ್ಕೆ ಹೊಂದಿಕೊಂಡಂತೆ ವಿವಿಧ ದೇವತೆಗಳ ಉಬ್ಬುಶಿಲ್ಪಗಳಿವೆ. ಅದರ ಮೇಲಿನ ಭಾಗದಲ್ಲಿ ಕಮಲದ ದಳಗಳು ಕೆಳಭಾಗದಲ್ಲಿ ಇಳಿಬಿದ್ದಂತೆ ಸುಂದರವಾಗಿ ಕೆತ್ತಲಾಗಿದೆ. ಮಧ್ಯದಲ್ಲಿ ಬರುವ ಬಾಗಿದ ಬೋದಿಗೆ ಪ್ರಸ್ತುತ ಕಂಡುಬರುವುದಿಲ್ಲ. ಅದರ ಮೂಲೆಗಳಲ್ಲಿ ವ್ಯಾಳ ಹಾಗೂ ಇತರೆ ಉಬ್ಬುಶಿಲ್ಪಗಳಿವೆ. ದೇವಾಲಯದ ಮೇಲಿನ ಪ್ರತಿಯೊಂದು ತೊಲೆಯ ಮೇಲೆ ಕಮಲದ ಕೆತ್ತನೆ ಇದೆ.

ದೇವಾಲಯದ ಬಲಭಾಗದ ಗರ್ಭಗುಡಿಯಲ್ಲಿ ವಿಷ್ಣುವಿನ ಮೂರ್ತಿಶಿಲ್ಪವಿದೆ. ಸ್ಥಾನಕ ಭಂಗಿಯಲ್ಲಿನ ವಿಷ್ಣು ತನ್ನ ಕೈಗಳಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹೊಂದಿರುವನು. ಕಿರೀಟ, ಕೇಯೂರ, ಕಂಠೀಹಾರ, ಭಜಬಂಧ, ಸ್ಕಂದಮಾಲೆ, ಉದರಬಂಧ, ಯಜ್ಞೋಪವಿತ, ವೈಜಯಂತಿ, ಕೈಬಳೆ, ಕಾಲ್ಕಡಗ ಮುಂತಾದವುಗಳನ್ನು ಧರಿಸಿದ್ದಾನೆ. ಬದಿಯಲ್ಲಿ ಶ್ರೀದೇವಿ ಮತ್ತು ಭೂದೇವಿಯರು ತ್ರಿಭಂಗಿಯಲ್ಲಿ ನಿಂತಿರುವುದು. ಇದರ ಬಾಗಿಲುವಾಡದಲ್ಲಿ ಪಂಚ ಶಾಖೆಗಳಿವೆ. ಬಾಗಿಲುವಾಡದ ಪಾದದಲ್ಲಿ ವೈಷ್ಣವ ದ್ವಾರಪಾಲಕರ ಕೆತ್ತನೆಗಳಿವೆ. ಎಡಭಾಗದ

ಗರ್ಭಗೃಹದಲ್ಲಿ ವೇಣುಗೋಪಾಲನ ಮೂರ್ತಿಶಿಲ್ಪವಿದೆ. ಪ್ರಭಾವಳಿಯ ಮಧ್ಯದಲ್ಲಿರುವ ಸಿಂಹಲಲಾಟದ ಕೆಳಗೆ ವೇಣುಗೋಪಾಲನು ಬಲಗಾಲನ್ನು ಕರ್ತರಿ ಕಾಲಾಗಿಸಿ ತ್ರಿಭಂಗಿಯಲ್ಲಿ ನಿಂತು ವೇಣುವನ್ನು ನುಡುಸುತ್ತಿರುವಂತೆ ಇದೆ. ಅದರ ಮೂರ್ತಿ ಭಗ್ನಗೊಂಡಿದೆ. ಗೋಪಾಲನ ಕೊರಳಲ್ಲಿ ಸುಂದರವಾದ ಪದಕದ ಹಾರವಿದೆ. ಕೈ ತೋಳಿನಲ್ಲಿ ಭುಜಕೀರ್ತಿ ತೋಳ್ಬಂದಿಯೂ ಕೈಗಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ಸಣ್ಣದಾದ ಕಟ್ಟಿಗಳುಳ್ಳ ಗೋಪಾಲನ ಕಟ್ಟಿಯಲ್ಲಿ ಸುಂದರವಾದ ಮಣಿ ಮಾಲೆಯಿಂದ ಕೂಡಿದ ಕಟೀಬಂಧವಿದ್ದು ಅದರ ಮುತ್ತಿನ ಮಾಲೆಗಳು ತೊಡೆಯನ್ನು ವರಿಸಿದೆ. ಇದು ಹೊಯ್ಸಳ ಶಿಲ್ಪ ಲಕ್ಷಣಗಳಿಂದ ಕೂಡಿದೆ. ಎಡಭಾಗದ ಗರ್ಭಗೃಹದ ಬಾಗಿಲುವಾಡವು ಪಂಚಶಾಖೆಗಳಿಂದ ಕೂಡಿದೆ. ಲಲಾಟಬಿಂಬವು ಅಲಂಕಾರದಿಂದ ಕೂಡಿದೆ. ತೋರಣವು ಸಾಧಾರಣವಾಗಿದ್ದು ಬಾಗಿದ ಬೋದಿಗೆ ಇದೆ. ನವರಂಗದ ಮುಂದಿನ ಭಾಗವು ಎರಡು ಸ್ವತಂತ್ರ ಕಂಬಗಳಿಂದ ಕೂಡಿದ ಮುಖಮಂಟಪವಿದೆ. ಮುಖಮಂಟಪದ ಛತ್ತಿನಲ್ಲಿ ೯ ಅಂಕಣವಿರುವ ವಿತಾನಗಳಿವೆ. ಅದರಲ್ಲಿ ಪದ್ಮಗಳ ಸುಂದರ ಕೆತ್ತನೆಗಳಿವೆ. ಈ ದೇವಾಲಯದ ಮೇಲ್ಭಾಗದ ಪ್ರಾಚೀನವಾದ ಶಿಖರ ಭಾಗ ನಶಿಸಿ ಹೋಗಿದ್ದು, ಆಧುನಿಕವಾಗಿ ದುರಸ್ಥಿಗೊಳಿಸಲಾಗಿದೆ. ಕ್ರಿ.ಶ. ೧೦೬೫ರ ಹೊಯ್ಸಳರ ವೀರಬಲ್ಲಾಳನ ಕಾಲದ ಶಾಸನದಲ್ಲಿ ನೀರಗುಂದದ ಸಿದ್ದೇಶ್ವರ ದೇವಾಲಯವನ್ನು 'ನಲ್ಲಸೆಟ್ಟಿ' ಎಂಬುವನು ಜೀರ್ಣೋದ್ಧಾರ ಮಾಡಿಸಿ ಸಿದ್ಧನಾಥ ದೇವರ ಸೇವಾಕರ್ತರಾದ ಕಲ್ಯಾಣಜೀಯ, ಉಮಾಳಜೀಯ, ನಲ್ಲಜೀಯ ಈ ಮೂವರಿಗೆ ಧಾರಪೂರ್ವಕವಾಗಿ ಹಿರಿಯ ಕೆರೆಯ ಕೆಳಗಿನ ಗದ್ದೆ, ಕೊಂಡಜ್ಜಿ, ಆಸಂದಿ, ಬೇವಿನಹಳ್ಳಿ, ಆನಿವಾಳ, ಕುಂದೂರು ಗ್ರಾಮದ ಗದ್ದೆಗಳನ್ನು ಅನೇಕ ರೀತಿಯ ಸಂತೆ ಆಯಗಳನ್ನು ಬಿಟ್ಟುಕೊಟ್ಟನು.[೮] ಹೊನ್ನೆಯ ಕೆರೆಯ ಕಲ್ಲೇಶ್ವರ ದೇವಾಲಯದ ಕ್ರಿ.ಶ. ೧೩೦೮ರ ಶಾಸನು "ನೀರಗುಂದವು ೧೨೦ ಜನ ಬ್ರಾಹ್ಮಣರನ್ನೊಳಗೊಂಡ ಉದ್ಭವ ಸೋಮನಾಥಪುರ ಎಂಬ ಅಗ್ರಹಾರವಾಗಿತ್ತು" ಎಂದು ಹೇಳುತ್ತದೆ.[೯] ಒಟ್ಟಿನಲ್ಲಿ ನೀರಗುಂದ ಹೊಯ್ಸಳರ ಕಾಲದ ಅಗ್ರಹಾರವಾಗಿದ್ದು, ಸಿದ್ದೇಶ್ವರ ದೇವಾಲಯವು ಇವರ ಕಾಲದ ನಿರ್ಮಾಣವಾಗಿದೆ. ಈ ದೇವಾಲಯದ ಶಾಶನಗಳ ಅಧ್ಯಯನದಿಂದ ಈ ಪರಿಸರದ ಅತ್ಯಂತ ಹೆಚ್ಚು ಆಶ್ರಯ ಪಡೆಯ ದೇವಾಲಯವೆಂಬ ಸಂಗತಿ ವೇಧ್ಯವಾಗುವುದು.

೨.

ಊರು	: ನೀರಗುಂದ	ಸ್ಥಳ	: ಗ್ರಾಮದ ಪಶ್ಚಿಮಕ್ಕೆ
ಸ್ಮಾರಕ	: ರಾಮೇಶ್ವರ ದೇವಾಲಯ	ಅಭಿಮುಖ	: ಪೂರ್ವ
ಕಾಲ	: ಕ್ರಿ.ಶ.ಸು. ೧೧–೧೨ನೇ ಶತಮಾನ	ಶೈಲಿ	: ರಾಷ್ಟ್ರಕೂಟ

ನೀರಗುಂದ ಶೈವದೇವಾಲಯಗಳಲ್ಲಿ ರಾಮೇಶ್ವರ ದೇವಾಲಯವು ಒಂದು ಹೊಯ್ಸಳ ಕಾಲದ ನಿರ್ಮಿತಿಯಾಗಿರುವ ಈ ದೇವಾಲಯವು[೧೦] ಕೆಂಪು ಮರಳುಗಲ್ಲಿನಲ್ಲಿ ನಿರ್ಮಾಣ ಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಹಾಗೂ ತೆರೆದ ಸಭಾಮಂಟಪ ಕಂಡುಬರುತ್ತವೆ. ಗರ್ಭಗೃಹದಲ್ಲಿ ಪ್ರಸ್ತುತ ಮೂರ್ತಿಶಿಲ್ಪವಿಲ್ಲ. ದೇವಾಲಯದ ನವರಂಗದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿದ್ದು, ಅವುಗಳ ರಚನೆಯಲ್ಲಿ ಪೀಠ, ಕಾಂಡ

ಭಾಗದಲ್ಲಿ ಚಚ್ಚೌಕದ ಒಂದು ಭಾಗ ೧೬ ಮುಖದ ಗಂಟಾಮಾದರಿ ರಚನೆ, ಕುಂಭ, ಚಚ್ಚೌಕದ ಫಲಕ, ಸಾಧಾರಣಾ ಬೋದಿಗೆ ಇವೆ. ಈ ಮಾದರಿ ಕಂಬಗಳನ್ನು ದೇವಾಲಯದ ತೆರೆದ ಸಭಾಮಂಟಪದಲ್ಲೂ ಕಾಣಬಹುದು.

ನವರಂಗ ಹಾಗೂ ತೆರೆದ ಸಭಾಮಂಟಪದ ನಡುವಿನ ನಾಲ್ಕು ಕಂಬಗಳ ಛತ್ತಿನ ಭಾಗದಲ್ಲಿ ಸುಂದರ ಭುವನೇಶ್ವರಿ ಕೆತ್ತನೆ ಇದೆ. ಸಭಾಮಂಟಪದಲ್ಲಿ ಸುತ್ತಲೂ ಜಗುಲಿ ಇದ್ದು ಅದಕ್ಕೆ ಹೊಂದಿಕೊಂಡಂತೆ ಕಕ್ಷಾಸನವಿದೆ. ದೇವಾಲಯದ ಗರ್ಭಗೃಹದ ಮೇಲೆ ಕದಂಬನಾಗರ/ಪಾಂಸನ ಶಿಖರವಿದೆ. ಗ್ರೀವ ಹಾಗೂ ಸ್ತೂಪಿಯ ರಚನೆಗಳು ಇವೆ. ಅದರೊಂದಿಗೆ ಸುಖನಾಸಿಯೂ ಇದೆ. ದೇವಾಲಯದ ಅಧಿಷ್ಠಾನದ ಭಾಗ ಹಾಗೂ ದೇವಾಲಯವನ್ನು ಪ್ರವೇಶಿಸಲು ಇರುವ ಸೋಪಾನಗಳು ಪ್ರಸ್ತುತ ಮಣ್ಣಿನಲ್ಲಿ ಹೂತುಹೋಗಿವೆ.

೩.

ಊರು : ಕಲ್ಲೇದೇವರಕಟ್ಟೆ **ಸ್ಥಳ** : ಡಿ.ಸಿದ್ಧರಾಮಪ್ಪನವರ ತೋಟದಲ್ಲಿ

ಸ್ಮಾರಕ : ಕಲ್ಲೇಶ್ವರ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೧ನೇ ಶತಮಾನ **ಶೈಲಿ** : ಕಲ್ಯಾಣ ಚಾಲುಕ್ಯ

ಕಲ್ಲೇಶ್ವರ ದೇವಾಲಯ ನೀರಗುಂದದಿಂದ ಸಾಣೆಹಳ್ಳಿಗೆ ಹೋಗುವ ಮಾರ್ಗದಿಂದ ೧ ಕಿ.ಮೀ. ದೂರದ ತೋಟದಲ್ಲಿ ಕಂಡುಬರುತ್ತದೆ. ಸ್ಥಳೀಯರಿಂದ ಕಲ್ಲೇದೇವರಕಟ್ಟೆ ಎನಿಸಿಕೊಳ್ಳುವ ಈ ನೆಲೆಯು ಒಂದು ಬೇಚರಾಕ್ ಗ್ರಾಮ. ದೇವಾಲಯದ ಬಹುಭಾಗವು ಗ್ರಾನೈಟ್ ಹಾಗೂ ಕೆಲವು ಕಡೆ ಹಸಿರು ಮಿಶ್ರಿತ ಬಳಪದ ಶಿಲೆಯಿಂದ ನಿರ್ಮಾಣಗೊಂಡಿದೆ. ದ್ವಿಕೂಟಾಚಲವಾಗಿರುವ ಇದರ ತಳವಿನ್ಯಾಸದಲ್ಲಿ ಮುಖ್ಯ ಗರ್ಭಗೃಹ, ಅಂತರಾಳ, ಎಡಭಾಗದ ಗರ್ಭಗೃಹ, ನವರಂಗ ಹಾಗೂ ಮುಚ್ಚಿದ ಮಂಟಪವನ್ನು ಕಾಣಬಹುದು. ದೇವಾಲಯದ ಎದುರಿಗೆ ಸುಮಾರು ೨೦ ಅಡಿ ಎತ್ತರದ ದೀಪ ಸ್ತಂಭವಿದೆ.

ದೇವಾಲಯದ ಮುಖ್ಯ ಗರ್ಭಗೃಹದ ದ್ವಾರವು ಸಾಧಾರಣವಾದ ಏಕಶಾಖೆಯನ್ನು ಹೊಂದಿದೆ. ಲಲಾಟ ಬಿಂಬವನ್ನು ಹೊಂದಿದೆ. ಮುಖ್ಯಗರ್ಭಗೃಹದಲ್ಲಿ ಸುಮಾರು ೧ ಅಡಿ ಎತ್ತರದ ಪಾಣಿಪಟ್ಟದ ಮೇಲೆ ಕಪ್ಪು ಶಿಲೆಯ ಶಿವಲಿಂಗವಿದೆ. ಇದೊಂದು ಸ್ವಯಂಭು ಲಿಂಗವಾಗಿದ್ದು, ಇದರ ಶುದ್ರಭಾಗವು ವೃತ್ತಾಕಾರವಾಗಿದೆ. ಅಂತರಾಳದ ದ್ವಾರದಲ್ಲಿ ಅರ್ಧಗಂಬ ದ್ವಿಶಾಖೆ ಲಲಾಟಬಿಂಬಗಳಿವೆ. ದ್ವಾರದ ಪಾದದಲ್ಲಿ ಶೈವದ್ವಾರಪಾಲಕರ ಉಬ್ಬು ಕೆತ್ತನೆಗಳಿದ್ದು, ಇವರು ಅಂತರಾಳದಲ್ಲಿ ನಂದಿ ಶಿಲ್ಪವಿದ್ದು, ಇದು ಗಂಟೆಹಾರ, ಹಣೆಪಟ್ಟಿ, ಕೊರಳಪಟ್ಟಿ, ಹಗ್ಗ, ಗಂಟೆ, ಡುಬ್ಬ ಬಳಸಿದ ಪದಕಹಾರ, ಗೆಜ್ಜೆಯ ಅಲಂಕಾರ ಹೊಂದಿದೆ. ಎಡಭಾಗದ ಗರ್ಭಗೃಹದ ದ್ವಾರದಲ್ಲಿ ಅರ್ಧಗಂಭ ದ್ವಿಶಾಖೆಗಳ ರಚನೆಗಳನ್ನು ಕಾಣಬಹುದು. ಈ ಗರ್ಭಗೃಹದ ಸುಮಾರು ೫ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದ್ದು, ರಚನೆಯಲ್ಲಿ ನಾಲ್ಕು ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣ, ಗುರಾಣಿಗಳನ್ನು ಹಿಡಿದು, ರುಂಡಮಾಲೆಯನ್ನು ಸೊಂಟದಲ್ಲಿ ಪಟ್ಟಿ ಹಾಗೂ ವಸ್ತ್ರವನ್ನು ಧರಿಸಿರುವ ಸುಂದರ ಕೆತ್ತನೆಯಿದೆ. ನವರಂಗದಲ್ಲಿ ೪ ಕಲಾತ್ಮಕವಾದ ಸ್ತಂಭಗಳನ್ನು

ಹೊಂದಿದೆ. ಈ ಸ್ತಂಭಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ, ಎಂಟು ಮುಖದ ಕೋನ, ಕುಂಭ, ಫಲಕ ಹಾಗೂ ಸಾಧಾರಣ ಬೋದಿಗೆಯನ್ನು ಕಾಣಬಹುದು. ಇದೇ ಛತ್ತುಪಿನಲ್ಲಿ ಪದ್ಮಪುಷ್ಪಗಳಿಂದ ಕೂಡಿದ ಭುವನೇಶ್ವರಿ ಇದೆ. ನವರಂಗದಲ್ಲಿ ನಂದಿ, ಗಣೇಶ ಹಾಗೂ ಗುಂಡಬ್ರಹ್ಮಯ್ಯ ಶಿಲ್ಪವಿದೆ. ಸುಮಾರು ೩ ಅಡಿ ಎತ್ತರ, ೧೧/೨ ಅಡಿ ಅಗಲದ ಈ ಶಿಲ್ಪದಲ್ಲಿ ನಡುವೆ ಎರಡು ಶೂಲಗಳು ಇದ್ದು, ಅಕ್ಕ-ಪಕ್ಕದಲ್ಲಿ ಗುಂಡುಬ್ರಹ್ಮಯ್ಯರು ನಿಂತಿದ್ದಾರೆ. ಇಬ್ಬರ ತಲೆಗಳಲ್ಲಿ ವೀರಮುಡಿ, ಕಿವಿಗಳಲ್ಲಿ ಕುಂಡಲಗಳು ದೇಹದಲ್ಲಿ ವಿವಿಧ ಆಭರಣ ಹಾಗೂ ಸುಂದರ ವಸ್ತ್ರಗಳನ್ನು ಧರಿಸಿದ್ದಾರೆ. ಇವರ ಎಡಗೈಗಳಲ್ಲಿ ಪುಟ್ಟ ಇಷ್ಟಲಿಂಗಗಳಿವೆ ಹಾಗೂ ಬಲಗೈಗಳಲ್ಲಿ ಚಿಕ್ಕ ಕತ್ತಿಯನ್ನು ಹಿಡಿದುಕೊಂಡಿದ್ದಾರೆ. ಇಬ್ಬರ ತಲೆಗಳ ಮೇಲೂ ಸುಂದರ ಅಲಂಕಾರದ ಕಮಾನುಗಳ ರಚನೆ ಇದೆ. ನಂತರದ ಮಂಟಪವು ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು ವಿಶಾಲವಾಗಿದೆ.

೪.

ಊರು	: ಚಿಕ್ಕಯ್ಯಗಟ್ಟ	**ಸ್ಥಳ**	: ಗ್ರಾಮದ ಮಧ್ಯಭಾಗ
ಸ್ಮಾರಕ	: ಈಶ್ವರದೇವಾಲಯ	**ಅಭಿಮುಖ**	: ಪಶ್ಚಿಮ
ಕಾಲ	: ಕ್ರಿ.ಶ.ಸು. ೧೧ನೇ ಶತಮಾನ	**ಶೈಲಿ**	: ಹೊಯ್ಸಳ

ಚಿಕ್ಕಯ್ಯಗಟಿ ಬಾಗೂರಿನಿಂದ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿನ ಪ್ರಾಚೀನ ಹಾಗೂ ಸುಂದರವಾದ ಈಶ್ವರ ದೇವಾಲಯ ಹೊಯ್ಸಳ ವಾಸ್ತುಶೈಲಿಯ ನಿರ್ಮಾಣ.[೫೧] ಈ ದೇವಾಲಯವು ಕ್ರಿ.ಶ. ೧೧ನೇ ಶತಮಾನದ್ದು[೫೨] ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಕಾಣಬಹುದು. ಚಚ್ಚೌಕದ ಗರ್ಭಗೃಹದಲ್ಲಿ ಸುಮಾರು ೪ ಅಡಿ ಎತ್ತರದ ಶಿವಲಿಂಗವಿದ್ದು, ಇದನ್ನು ಕ್ರಿ.ಶ. ೧೮೪೪ರ ಹೊಯ್ಸಳ ಶಾಸನದಲ್ಲಿ 'ಧರ್ಮೇಶ್ವರ' ಎಂದು ಕರೆಯಲಾಗಿದೆ.[೫೩] ಸುಮಾರು ೩ ಅಡಿ ಎತ್ತರದ ಪಾಣಿಪಟ್ಟದ ಮೇಲೆ ೧ ಅಡಿ ಶಿವಲಿಂಗವಿದೆ. ಪಾನವಟ್ಟವು ತ್ರಿಕೋನಾಕೃತಿಯ ಮೂಲೆಗಳಿಂದ ಸುಂದರವಾಗಿದ್ದು, ಬ್ರಹ್ಮಭಾಗದಲ್ಲಿ ಪದ್ಮದ ಅಲಂಕಾರವಿದೆ. ಗರ್ಭಗೃಹದ ಛತ್ತಿನಲ್ಲಿ ಸುಂದರವಾದ ಪದ್ಮಪುಷ್ಪದ ಅಲಂಕರಣೆ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ. ಬಾಗಿಲುವಾಡದಲ್ಲಿ ಅರ್ಧಗಂಭ ದ್ವಿಶಾಖೆಗಳಿವೆ. ಅಂತರಾಳದ ಬಾಗಿಲುವಾಡದಲ್ಲಿ ಅರ್ಧಗಂಭಶಾಖೆ, ಲತಾಸುರುಳಿ ಹಾಗೂ ವಜ್ರ ಶಾಖೆಗಳನ್ನು ಗುರುತಿಸಬಹುದು. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ.

ವಿಶಾಲವಾದ ನವರಂಗದಲ್ಲಿ ಕಲಾತ್ಮಕವಾದ ಗಂಟಾಕಾರದ ಕಂಬಗಳಿವೆ. ಇವುಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚಚ್ಚೌಕ, ದಂಡಾ, ಗಂಟಾ, ಘಟ, ಚಚ್ಚೌಕದ ಫಲಕ, ಸಾಧಾರಣ ಬೋದಿಗೆಗಳಿವೆ. ಇದೇ ಭಾಗದ ಛತ್ತಿನಲ್ಲಿ ಭುವನೇಶ್ವರಿ ಇದೆ. ನವರಂಗದ ಮಧ್ಯದಲ್ಲಿ ೩ ಅಡಿ ಎತ್ತರದ ನಂದಿ ವಿಗ್ರಹವಿದೆ. ನವರಂಗದ ಬಾಗಿಲುವಾಡದಲ್ಲಿ ಅರ್ಧಗಂಭ ದ್ವಿಶಾಖೆಗಳು ಹಾಗೂ ಪಾದದಲ್ಲಿ ಶೈವ ದ್ವಾರಪಾಲಕರು ತ್ರಿಶೂಲ, ಢಮರು, ಗದೆ ಹಾಗೂ ಅಭಯ ಮುದ್ರೆಗಳ ಸಮೇತರಾಗಿದ್ದಾರೆ. ನವರಂಗದಲ್ಲಿ ಹೊಯ್ಸಳ ಶೈಲಿಯಲ್ಲಿ ಚನ್ನಕೇಶವ, ಚಾಮುಂಡೇಶ್ವರಿ, ಗಣೇಶ ಮುಂತಾದ ಮೂರ್ತಿಶಿಲ್ಪಗಳಿವೆ.

ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ಪದ್ಮ, ಕುಮುದ, ದಂತಪಂಕ್ತಿ, ಕಪೋತ ಭಾಗಗಳನ್ನು ಒಳಗೊಂಡಿದೆ. ದೇವಾಲಯದ ಭಿತ್ತಿಯು ಹಿಂಚಾಚು ಮುಂಚಾಚುಗಳಿಂದ ಕೂಡಿದ್ದು, ಕುಡ್ಯ ಸ್ತಂಭಗಳಿಂದ ಆಗಿದೆ. ಮೇಲೆ ಕಪೋತವಿದ್ದು ಅದರ ಮೇಲೆ ಇತ್ತೀಚಿನ ಆಧುನಿಕ ಶಿಖರವನ್ನು ನಿರ್ಮಿಸಲಾಗಿದೆ. ದೇವಾಲಯದ ಹಿಂಭಾಗದಲ್ಲಿ ಒಂದು ಮಂಟಪದ ಮಾದರಿಯ ರಚನೆ ಇದ್ದು ಅದರಲ್ಲಿ ಹೊಯ್ಸಳ ಶೈಲಿಯ ಭೈರವ ಮೂರ್ತಿಶಿಲ್ಪವಿದೆ. ನಗ್ನನಾಗಿರುವ ಭೈರವನು ತನ್ನ ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರು ಹಾಗೂ ರಕ್ತ ಬಸರುತ್ತಿರುವ ರುಂಡವನ್ನು ಹೊಂದಿದ್ದು, ಬಸರುತ್ತಿರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದೆ. ದೇವಾಲಯದ ಮುಂಭಾಗದಲ್ಲಿ ಕ್ರಿ.ಶ.೧೨೯೪ರ ಹೊಯ್ಸಳ ಪ್ರತಾಪ ಚಕ್ರವರ್ತಿಯ ಶಾಸನವಿದ್ದು, ಇದರಲ್ಲಿ ಧರ್ಮೇಶ್ವರ ದೇವರಿಗೆ ಮಾವಿನಕೆರೆಯ ತೋಟವನ್ನು ಇತರೆ ಅನೇಕ ತೆರಿಗೆಯ ದತ್ತಿಗಳನ್ನು ನೀಡಿದ ವಿವರಗಳಿಗೆ.[೫೫] ಹೊಯ್ಸಳ ಕಾಲದ ಒಂದು ಅಪೂರ್ವ ಸ್ಮಾರಕ ಇದಾಗಿದೆ.

೫೫

ಊರು : ಕಂಗುವಳ್ಳಿ **ಸ್ಥಳ** : ಕೆರೆಯ ಬದಿಯಲ್ಲಿ

ಸ್ಮಾರಕ : ಕೋಡಿರಾಮಲಿಂಗೇಶ್ವರ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬-೧೭ನೇ ಶತಮಾನ **ಶೈಲಿ** : ವಿಜಯನಗರೋತ್ತರ ಶೈಲಿ.

ಹೊಸದುರ್ಗದಿಂದ ಸುಮಾರು ೧೫ ಕಿ.ಮೀ. ದೂರದ ಕಂಗುವಳ್ಳಿ ಗ್ರಾಮದಲ್ಲಿ ವಿಜಯನಗರೋತ್ತರ ಶೈಲಿಯ ಕೋಡಿ ರಾಮಲಿಂಗೇಶ್ವರ ದೇವಾಲಯವಿದೆ. ಗ್ರಾಮದ ಕೆರೆಯ ಕೋಡಿ ಭಾಗದಲ್ಲಿ ಈ ದೇವಾಲಯ ನಿರ್ಮಾಣವಾಗಿರುವುದರಿಂದ ಇದಕ್ಕೆ ಕೋಡಿ ರಾಮಲಿಂಗೇಶ್ವರ ದೇವಾಲಯ ಎಂದು ಹೆಸರು. ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದ ತಲವಿನ್ಯಾಸವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಸಭಾಮಂಟಪ ಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ೩ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡವು ಏಕಶಾಖೆಯನ್ನು ಹೊಂದಿದೆ. ಲಲಾಟಬಿಂಬವು ಸರಳವಾಗಿದೆ. ಅಂತರಾಳದ ಬಾಗಿಲುವಾಡವು ಲತಾಸುರುಳಿ, ವಜ್ರ, ಪುಷ್ಪಶಾಖೆಗಳನ್ನು ಒಳಗೊಂಡಿದೆ.

ನವರಂಗದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿವೆ. ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಮೂರು ಭಾಗಗಳು, ಕೆಳಗಿನ ಚಚ್ಚೌಕದ ಭಾಗದಲ್ಲಿ ನಾಗಬಂಧ, ಚಚ್ಚೌಕಗಳ ಮಧ್ಯೆ ಎಂಟು ಹಾಗೂ ಹದಿನಾರು ಭಾಗಗಳು, ಮೇಲಿನ ಭಾಗದಲ್ಲಿ ಸಾಧಾರಣ ಬೋದಿಗೆಯಿದೆ. ಈ ಕಂಬಗಳ ಮೇಲೆ ವಿವಿಧ ಉಬ್ಬು ಶಿಲ್ಪಗಳಿವೆ. ನವರಂಗದ ಮಧ್ಯೆ ಎರಡು ನಂದಿ ಶಿಲ್ಪಗಳಿವೆ. ಅಲ್ಲದೆ ಮೇಲಿನ ಛತ್ತಿನಲ್ಲಿ ಕದಳಿ ಅಂಕಣದ ಸುಂದರ ಭುವನೇಶ್ವರಿ ಇದೆ. ನವರಂಗದ ಬಾಗಿಲುವಾಡದಲ್ಲಿ ಲತಾ ಸುರುಳಿಯ ಏಕಶಾಖೆ, ಹಾಗೂ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಸ್ವತಂತ್ರವಾದ ನಾಲ್ಕು ಕಂಬಗಳಿದ್ದು ನವರಂಗದ ಕಂಬಗಳ ಮಾದರಿಯಲ್ಲಿವೆ. ಸಭಾಮಂಟಪದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಲಲಾಟದಲ್ಲಿ ಶಿವಲಿಂಗ ಮತ್ತು ನಂದಿಗಳ ಉಬ್ಬುಶಿಲ್ಪಗಳಿವೆ. ದೇವಾಲಯದ ಎದುರಿಗೆ ೨೦ ಅಡಿ ಎತ್ತರದ ದೀಪ ಸ್ತಂಭವಿದೆ.

೬

ಊರು	: ಬೋಕಿಕೆರೆ	**ಸ್ಥಳ**	: ಗ್ರಾಮದ ಪ್ರಾರಂಭ
ಸ್ಮಾರಕ	: ಭೀರಲಿಂಗೇಶ್ವರ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೭ನೇ ಶತಮಾನ	**ಶೈಲಿ**	: ವಿಜಯನಗರೋತ್ತರ

ವಿಜಯನಗರೋತ್ತರ ಕಾಲದ ಬೀರಲಿಂಗೇಶ್ವರ ದೇವಾಲಯವು ಬೋಕಿಕೆರೆಯಲ್ಲಿದೆ. ಬೋಕಿಕೆರೆಯು ಹೊಸದುರ್ಗದಿಂದ ಕಂಗುವಳ್ಳಿಗೆ ಹೋಗುವ ಮಾರ್ಗಮಧ್ಯದಲ್ಲಿದೆ. ಇದು ಹೊಯ್ಸಳ ಕಾಲದಲ್ಲಿ ನಿರ್ಗುಂದ ನಾಡಿನ ಭಾಗವಾಗಿದ್ದಿತು.[೫೫] 'ಬೋಗಾರರ ಕೇರಿ'ಯಾಗಿದ್ದ ಈ ಸ್ಥಳಕ್ಕೆ ಬೋಕಿಕೆರೆ ಎಂಬ ಹೆಸರು ಬಂದಿದೆ. ಕ್ರಿ.ಶ.೧೭೪೩ರಲ್ಲಿ ಒಡೆದು ಹೋಗಿದ್ದ ಇಲ್ಲಿನ ಕೆರೆಯನ್ನು ಬೋಕಿಕೆರೆ ಗೌಡವಂಶಸ್ಥರು ದುರಸ್ತಿ ಮಾಡಿಸಿ ಹತ್ತಿರದ ಹೊಲಗದ್ದೆಗಳಿಗೆ ಸೌಕರ್ಯ ಮಾಡಿದ ಬಗ್ಗೆ ಬೋಕಿಕೆರೆ ಶಾಸನದಿಂದ ತಿಳಿಯುವುದು.[೫೬]

ಕಣಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದಲ್ಲಿ ಗರ್ಭಗೃಹ ಹಾಗೂ ಅಂತರಾಳಗಳಿವೆ. ಉಳಿದ ಭಾಗಗಳು ನಶಿಸಿ ಹೋಗಿವೆ. ಗರ್ಭಗೃಹ ಚಚ್ಚೌಕವಾಗಿದ್ದು ಇದರ ವಿಮಾನವು ಆಧುನಿಕವಾಗಿ ನಿರ್ಮಾಣವಾಗಿದೆ. ಗರ್ಭಗೃಹದ ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು ಒಂದು ವಜ್ರಶಾಖೆ ಮತ್ತೊಂದು ಲತಾಸುರುಳಿ ಶಾಖೆಯಾಗಿದೆ. ಬಾಗಿಲುವಾಡದ ಪಾದದಲ್ಲಿ ಶೈವ ದ್ವಾರಪಾಲಕರಿದ್ದು ತ್ರಿಶೂಲ, ಢಮರು, ಗದಾ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವರು. ಗರ್ಭಗೃಹದಲ್ಲಿ ಪ್ರಸ್ತುತ ಯಾವುದೇ ಮೂರ್ತಿಶಿಲ್ಪವಿಲ್ಲ. ಅಂತರಾಳದ ಭಾಗವು ಸರಳವಾಗಿದ್ದು ಅದರ ಮುಂದೆ ಕೆಲವು ಕಂಬಗಳ ಅವಶೇಷಗಳಿವೆ. ಅವುಗಳ ಮೇಲೆ ಹಲವು ಉಬ್ಬುಶಿಲ್ಪಗಳಿವೆ. ದೇವಾಲಯದ ಎದುರಲ್ಲೇ ಸುಮಾರು ೮ ಅಡಿ ಎತ್ತರದ ಪುರಾತನ ಕಣಶಿಲೆಯ ದೀಪಸ್ತಂಭವಿದೆ. ಒಟ್ಟಾರೆ ಬೀರಲಿಂಗೇಶ್ವರ ದೇವಾಲಯವು ಪಾಳೆಯಗಾರರ ಕಾಲದ ಒಂದು ಸ್ಮಾರಕವೆನ್ನಬಹುದು.

೭

ಊರು	: ಆನಿವಾಳ	**ಸ್ಥಳ**	: ಗ್ರಾಮದ ಮಧ್ಯೆದಲ್ಲಿ
ಸ್ಮಾರಕ	: ಕಲ್ಲೇಶ್ವರ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೬-೧೭ನೇ ಶತಮಾನ	**ಶೈಲಿ**	: ವಿಜಯನಗರೋತ್ತರ

ಹೊಸದುರ್ಗ (ಕಸಬಾ) ಹೋಬಳಿಯ ಆನಿವಾಳ ಗ್ರಾಮವು ಬಾಗೂರು ಬಳಿ ಇದೆ. ಈ ಗ್ರಾಮಕ್ಕೆ ಹಿಂದಿನ ಕಾಲದಲ್ಲಿ 'ಆನೆವಾಲ' ಎಂಬ ಹೆಸರಿದ್ದಿತು. ನೀರಗುಂದ ನಾಡಿಗೆ ಸೇರಿದ್ದ ಕಾಲದಲ್ಲಿ ಈ ಸ್ಥಳ ಆನೆಗಳನ್ನು ಕಟ್ಟುತ್ತಿದ್ದ ಸ್ಥಳವಾಗಿತ್ತು.[೫೭] ಕಣಶಿಲೆಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗವಿದೆ. ದೇವಾಲಯದ ಹೊರಭಾಗದ ರಚನೆಗಳು, ಅಂದರೆ ಹೊರಗೋಡೆ, ಗರ್ಭಗೃಹ ಹಾಗೂ ಶಿಖರ ಇತ್ಯಾದಿಗಳನ್ನು ಆಧುನಿಕ ಶೈಲಿಯಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ಅಂದರೆ ಒಳಭಾಗದ ರಚನೆಗಳು ಪ್ರಾಚೀನ ಶೈಲಿಯಲ್ಲೇ ಉಳಿದುಬಂದಿವೆ. ಗರ್ಭಗೃಹದಲ್ಲಿ ಸುಮಾರು ೩ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಭಿತ್ತಿನಲ್ಲಿ ಅಲಂಕೃತ ಭುವನೇಶ್ವರಿ ಇದೆ. ಗರ್ಭಗೃಹದ

ಬಾಗಿಲುವಾಡವು ಅರ್ಧಗಂಭ ಏಕಶಾಖೆ ಹಾಗೂ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪಗಳಿವೆ. ಅಂತರಾಳದ ಭಿತ್ತಿನಲ್ಲಿ ಭುವನೇಶ್ವರಿ ಕೆತ್ತನೆಯಿದೆ. ಅಂತರಾಳದಲ್ಲಿ ಒಂದು ಅಡಿ ಎತ್ತರದ ನಂದಿ ವಿಗ್ರಹವಿದೆ. ಅಂತರಾಳದ ಬಾಗಿಲುವಾಡವು ಸರಳವಾಗಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿವೆ. ಇವು ಪೀಠ, ಕಾಂಡಭಾಗದಲ್ಲಿ ಎರಡು ಚಚ್ಚೌಕ ಅವುಗಳ ಮಧ್ಯೆ ಎಂಟು ಹಾಗೂ ಹದಿನಾರು ಕೋನಗಳ ರಚನೆಗಳಿವೆ. ಅವುಗಳ ಮೇಲೆ ಫಲಕ ನಂತರ ಸಾಧಾರಣ ಬೋದಿಗೆ ಇದೆ. ದೇವಾಲಯದ ಹೊರಭಾಗದಲ್ಲಿ ೬ ವೀರಗಲ್ಲುಗಳು ಇವೆ. ಒಂದು ವೀರಗಲ್ಲಿನಲ್ಲಿ ಮಾತ್ರ ಶಾಸನ ಉಳಿದಿದೆ. ಇದರಲ್ಲಿ 'ಪ್ರಧಾನಿ ಶ್ರೀ ಬಯಣ್ಣನು ಆಳುತ್ತಿದ್ದಾಗ ಶ್ರೀಮನ್ನಾಳ್‌ಪ್ರಭು ಆನೆವಾಳ ಹಳ್ಳಿಗೌಡ ಮತ್ತು ಬಯಿಚಣ್ಣನ ಮಗ ಬೂಚಣ್ಣ ಇವರು ಮರಣ ಹೊಂದಿದ' ವಿವರಗಳಿವೆ.[೫೮]

೮

ಊರು : ಆನಿವಾಳ **ಸ್ಥಳ** : ಗ್ರಾಮದ ಮಧ್ಯದಲ್ಲಿ

ಸ್ಮಾರಕ : ಈಶ್ವರ ದೇವಾಲಯ **ಅಭಿಮುಖ** : ಉತ್ತರ

ಕಾಲ : ಕ್ರಿ.ಶ.ಸು. ೧೬-೧೭ನೇ ಶತಮಾನ **ಶೈಲಿ** : ವಿಜಯನಗರೋತ್ತರ

ಆನಿವಾಳ ಗ್ರಾಮದ ಮಧ್ಯಭಾಗದಲ್ಲಿರುವ ಈಶ್ವರ ದೇವಾಲಯವು ಪಾಳೆಯಗಾರರ ಕಾಲದ್ದು, ದ್ವಿಕೂಟವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ನವರಂಗ ಹಾಗೂ ಮುಖಮಂಟಪಗಳಿವೆ. ಮುಖ್ಯ ಗರ್ಭಗೃಹದಲ್ಲಿ ಸುಮಾರು ೫ ಅಡಿ ಎತ್ತರದ ಸುಂದರ ಕಪ್ಪುಶಿಲೆಯ ಶಿವಲಿಂಗವಿದ್ದು, ತುಂಬಾ ಆಕರ್ಷಣೀಯವಾಗಿದೆ. ಇದರ ಬ್ರಹ್ಮಭಾಗ ಚಚ್ಚೌಕವಾಗಿದ್ದು ವಿಷ್ಣುಭಾಗವು ಮೂರು ತ್ರಿಕೋನಾಕೃತಿಯ ಮೂಲೆಗಳ ರಚನೆಯನ್ನು ಹೊಂದಿದೆ. ಅಲ್ಲದೆ ರುದ್ರಭಾಗವು ವೃತ್ತಾಕಾರವಾಗಿದೆ. ಎಡಭಾಗದ ಗರ್ಭಗೃಹದಲ್ಲಿ ೪$^{1}/_{2}$ ಅಡಿ ಎತ್ತರದ ವೀರಭದ್ರನ ಸುಂದರ ಮೂರ್ತಿಶಿಲ್ಪವಿದೆ. ಇದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದ್ದು, ನಂದಿ ಬಿಂಬದ ಮೇಲೆ ನಿಂತ ವೀರಭದ್ರನು ಕಪಾಲ ಭೂಷಿತ ಕಿರೀಟ, ಸರ್ಪಕುಂಡಲ, ರುಂಡಗಳ ಮಾಲೆ, ಕಾಲುಗಗ್ಗರ, ಕೈಕಂಕಣ, ಯಜ್ಞೋಪವೀತ ಸಾಧನಗಳಿಂದ ಅಲಂಕೃತನಾಗಿದ್ದು, ಕೈಗಳಲ್ಲಿ ಖಡ್ಗ, ಶೂಲ, ಬಿಲ್ಲು, ಟಂಕ ಇವುಗಳನ್ನು ಹೊಂದಿದ್ದಾನೆ. ವೀರಭದ್ರನ ಬಲಭಾಗದ ಬದಿಯಲ್ಲಿ ಆಡಿನ ತಲೆಯು ದಕ್ಷಬ್ರಹ್ಮನ ಶಿಲ್ಪವಿದೆ. ಬಾಗಿಲುವಾಡದಲ್ಲಿ ವಜ್ರಶಾಖೆ, ಪದ್ಮಶಾಖೆ ಹಾಗೂ ಲಲಾಟದಲ್ಲಿ ಬಸವನ ಉಬ್ಬುಶಿಲ್ಪಗಳಿವೆ. ನವರಂಗದಲ್ಲಿ ಸುಮಾರು ೪ ಅಡಿ ಎತ್ತರದ ಸುಂದರ ನಂದಿ ಇದೆ. ನವರಂಗದ ಒಂದು ಕಂಬದ ಚಚ್ಚೌಕದಲ್ಲಿ ಗಜಲಕ್ಷ್ಮಿ ಹಾಗೂ ಭಕ್ತನ ಶಿಲ್ಪವಿದೆ. ಮುಖಮಂಟಪದಲ್ಲಿ ಎರಡು ಕಂಬಗಳು ಇವೆ. ಇಲ್ಲಿನ ಪ್ರಾಚೀನ ಮೂರ್ತಿಶಿಲ್ಪಗಳು ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ಕಾಲದವುಗಳಾಗಿದ್ದು ಆಗಿನ ದೇವಾಲಯ ಸಂಪೂರ್ಣ ನಶಿಸಿಹೋದ ಮೇಲೆ ಪಾಳೆಯಗಾರರ ಕಾಲದಲ್ಲಿ ಪುನರ್ ನಿರ್ಮಾಣ ಮಾಡಿದಂತೆ ತೋರುತ್ತದೆ.

೯

ಊರು : ಹೊಸದುರ್ಗ ಸ್ಥಳ : ಹೊಸದುರ್ಗ-ಹುಳಿಯಾರು ರಸ್ತೆಯಲ್ಲಿ

ಸ್ಮಾರಕ : ವೀರಭದ್ರ ದೇವಾಲಯ ಅಭಿಮುಖ : ಉತ್ತರ

ಕಾಲ : ಕ್ರಿ.ಶ.ಸು. ೧೭ನೇ ಶತಮಾನ ಶೈಲಿ : ವಿಜಯನಗರೋತ್ತರ

ವಿಜಯನಗರೋತ್ತರ ಕಾಲದ ವೀರಭದ್ರ ದೇವಾಲಯವು ಕಣಶಿಲೆಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ದೇವಾಲಯದ ಸುತ್ತಲೂ ಒಂದು ಕಲ್ಲಿನ ಗೋಡೆ ಇದ್ದು ಪ್ರವೇಶದಲ್ಲಿ ದ್ವಾರಮಂಟಪವಿದೆ. ಗರ್ಭಗೃಹದಲ್ಲಿ ಪದ್ಮಪೀಠದ ಮೇಲೆ ಕಪ್ಪು ಶಿಲೆಯ ೪ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದೆ. ದೇವಾಲಯದ ಗೋಡೆಗೆ ನವೀಕರಣ ಮಾಡಿರುವುದರಿಂದ ಇಲ್ಲಿ ಪ್ರಾಚೀನ ಕುರುಹುಗಳಿಲ್ಲ. ದೇವಾಲಯದ ಅಂತರಾಳದ ಬಲಭಾಗದ ಗೋಡೆಯಲ್ಲಿ ಶೂಲಬ್ರಹ್ಮ ಶಿಲ್ಪವಿದೆ. ನವರಂಗದ ಬಾಗಿಲುವಾಡವು ಲತಾಸುರುಳಿ ಶಾಖೆಯನ್ನು ಹೊಂದಿದೆ. ಇದರ ಪಾದದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಲಲಾಟದಲ್ಲಿ ನಂದಿಯ ಉಬ್ಬುಶಿಲ್ಪವಿದೆ. ನವರಂಗದಲ್ಲಿ ಸಾಧಾರಣ ಶೈಲಿಯ ನಾಲ್ಕು ಕಂಬಗಳಿವೆ. ಅವುಗಳು ಚಚ್ಚೌಕದ ಮೂರು ಭಾಗಗಳನ್ನು ಹಾಗೂ ನಡುವೆ ಅಷ್ಟಪೈಲು ಭಾಗಗಳನ್ನು ಹೊಂದಿದೆ. ಚಚ್ಚೌಕದ ಭಾಗದಲ್ಲಿ ಕೈ ಮುಗಿದು ನಿಂತಿರುವ ಭಕ್ತನ, ಗಣೇಶ, ಶಿವಲಿಂಗ, ವ್ಯಾಳ, ಮಯೂರ, ಸೂರ್ಯಕಿರಣ, ಲಿಂಗಪೂಜೆ ಶಿಲ್ಪಗಳನ್ನು ಗುರುತಿಸಬಹುದು. ನವರಂಗದ ಛತ್ತಿನಲ್ಲಿ ವಿತಾನವಿದೆ. ದೇವಾಲಯದ ದ್ವಾರಮಂಟಪವು ಜಗುಲಿಯ ಮೇಲೆ ನಿರ್ಮಾಣವಾಗಿದ್ದು ಅದರಲ್ಲಿ ೬ ಕಂಬಗಳಿವೆ.

೧೦

ಊರು : ಕೈನಡು ಸ್ಥಳ : ಗ್ರಾಮದ ಮಧ್ಯೆ

ಸ್ಮಾರಕ : ಮಲ್ಲೇಶ್ವರ ದೇವಾಲಯ ಅಭಿಮುಖ : ಪೂರ್ವ

ಕಾಲ : ಕ್ರಿ.ಶ.ಸು. ೧೨ನೇ ಶತಮಾನ ಶೈಲಿ : ಹೊಯ್ಸಳ

ಹೊಸದುರ್ಗದಿಂದ ಶ್ರೀರಾಂಪುರಕ್ಕೆ ಹೋಗುವ ಮಾರ್ಗದಲ್ಲಿ ಕೈನಡು ಗ್ರಾಮವಿದೆ. ಈ ಗ್ರಾಮದ ಪ್ರಾಚೀನವಾದ ದೇವಾಲಯವೇ ಮಲ್ಲೇಶ್ವರ. ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಳಿವೆ. ಗರ್ಭಗೃಹದಲ್ಲಿ ೩/೪ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾಗಿದ್ದು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಲಲಾಟದಲ್ಲಿ ಪದ್ಮದ ಅಲಂಕರಣೆ ಇದೆ. ಅಂತರಾಳದ ಬಾಗಿಲುವಾಡವು ದ್ವಿಶಾಖೆಯನ್ನು ಹೊಂದಿದ್ದು ಅದರಲ್ಲಿ ಪದ್ಮ, ಲತಾ, ಕಮಲ, ವಜ್ರಗಳ ಕೆತ್ತನೆಗಳಿವೆ. ಲಲಾಟದಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಪಾದದಲ್ಲಿ ಶೈವದ್ವಾರಪಾಲಕರ ಕೆತ್ತನೆಗಳಿವೆ.

ದೇವಾಲಯದ ನವರಂಗದಲ್ಲಿ ಕಲಾತ್ಮಕವಾದ ನಾಲ್ಕು ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದ ಚಚ್ಚೌಕದ ಎರಡು ಹಂತಗಳು, ಎಂಟುಕೋನ ಅದರ ಮೇಲೆ ಬಳ್ಳಿಯ ಅಲಂಕಾರವಿದೆ. ಚಚ್ಚೌಕದ ಮೇಲೆ ಲಶುನ, ಕುಂಭ, ಫಲಕ ಅದರ ಮೇಲೆ ಸರಳವಾದ

ಬೋದಿಗೆ ಇದೆ. ಈ ರೀತಿ ಕಂಭಗಳ ಚಚ್ಚೌಕದ ಭಾಗಗಳ ಮೇಲೆ ಉಮಾಮಹೇಶ್ವರ, ಯತಿ, ನಟರಾಜ, ಲಿಂಗಕ್ಕೆ ಹಾಲುಣಿಸುತ್ತಿರುವ ಹಸು, ಹುಲಿಯನ್ನು ಬೇಟೆಯಾಡುತ್ತಿರುವ ವೀರ, ಬೇಡರಕಣ್ಣಪ್ಪ, ವ್ಯಾಳಿ, ನವಿಲು, ಶಿವಲಿಂಗ ಮೊದಲಾದ ಉಬ್ಬು ಶಿಲ್ಪಗಳಿವೆ. ದೇವಾಲಯದ ನವರಂಗದಲ್ಲಿ ಗಣೇಶ, ವಿಷ್ಣು, ನಗ್ನಭೈರವ, ನಾಗಶಿಲ್ಪ ಮೂರ್ತಿಶಿಲ್ಪಗಳಿವೆ. ದೇವಾಲಯದ ಗರ್ಭಗೃಹದ ಮೇಲೆ ಕದಂಬನಾಗರ ಶಿಖರ ಹಾಗೂ ಶುಕನಾಸಿ ಇದೆ.

೧೧

ಊರು : ಕೆಲ್ಲೋಡು — **ಸ್ಥಳ** : ಹೊಸದುರ್ಗ–ಕೆಲ್ಲೋಡು ರಸ್ತೆಯಲ್ಲಿ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ — **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬–೧೭ನೇ ಶತಮಾನ — **ಶೈಲಿ** : ವಿಜಯನಗರೋತ್ತರ

ಕೆಲ್ಲೋಡು ಹೊಸದುರ್ಗದಿಂದ ಶ್ರೀರಾಂಪುರಕ್ಕೆ ಹೋಗುವ ಮಾರ್ಗದಲ್ಲಿ ಕಂಡುಬರುತ್ತದೆ. ಶಾಸನಗಳಲ್ಲಿ ಇದನ್ನು ಕೆಲಗೋಡು[*] ಎಂದು ಕರೆಯಲಾಗಿದೆ. ಈ ಗ್ರಾಮದ ಪ್ರಮುಖ ಹಾಗೂ ಪ್ರಾಚೀನ ದೇವಾಲಯಗಳಲ್ಲಿ ಮಲ್ಲಿಕಾರ್ಜುನ ದೇವಾಲಯವು ಒಂದು. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದಮಂಟಪವನ್ನು ಹೊಂದಿದೆ. ಪ್ರಸ್ತುತ ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಅಂತರಾಳವು ಸಾಧಾರಣವಾಗಿದ್ದು ಇದರ ಬಾಗಿಲುವಾಡದಲ್ಲಿ ಶೈವದ್ವಾರಪಾಲಕರು ತ್ರಿಶೂಲ, ಢಮರು, ಗದಾ ಹಾಗೂ ಅಭಯ ಮುದ್ರೆ ಸಮೇತವಾಗಿರುವ ಶಿಲ್ಪಗಳಿವೆ. ನವರಂಗವು ೯ ಅಂಕಣಗಳಿಂದ ಕೂಡಿದ್ದು ಮಧ್ಯೆ ನಾಲ್ಕು ಕಂಬಗಳಿದ್ದು, ಇವುಗಳ ರಚನೆಯಲ್ಲಿ ಚಚ್ಚೌಕ, ಹನ್ನೆರಡು ಮುಖ, ವೃತ್ತಾಕಾರದ ಮೂರುಪಟ್ಟಿ ಚೌಕ ಹಾಗೂ ಸರಳ ಬೋದಿಗೆಗಳಿವೆ.

ದೇವಾಲಯದ ತೆರೆದ ಮಂಟಪದಲ್ಲಿ ನಾಲ್ಕು ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚೌಕ ಮತ್ತು ಸರಳ ಬೋದಿಗೆ ಇದೆ. ದೇವಾಲಯದ ಭಿತ್ತಿಯು ಸರಳವಾಗಿದ್ದು, ಗರ್ಭಗೃಹದ ಮೇಲೆ ದ್ವಿತಲ ವಿಮಾನವಿದೆ. ಇದನ್ನು ಇಟ್ಟಿಗೆ ಗಚ್ಚು ಗಾರೆಯಿಂದ ನಿರ್ಮಿಸಲಾಗಿದೆ. ಅಂತರಾಳದ ಮೇಲೆ ಸುಕನಾಸಿ ಇದೆ.

೧೨

ಊರು : ಹೊನ್ನೇನಹಳ್ಳಿ — **ಸ್ಥಳ** : ಹೊಸದುರ್ಗ–ಜಾನಕಲ್ಲು ರಸ್ತೆಯಲ್ಲಿ

ಸ್ಮಾರಕ : ಹಾಲುರಾಮೇಶ್ವರ ದೇವಾಲಯ — **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೨ನೇ ಶತಮಾನ — **ಶೈಲಿ** : ಹೊಯ್ಸಳ

ಹೊಸದುರ್ಗ ತಾಲೂಕಿನ ಪ್ರಸಿದ್ಧ ದೇವಾಲಯಗಳಲ್ಲಿ ಹಾಲುರಾಮೇಶ್ವರವು ಒಂದು. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ತೆರೆದಮಂಟಪಗಳನ್ನು ಹೊಂದಿದೆ. ಗರ್ಭಗೃಹ, ಅಂತರಾಳದ ಬಾಗಿಲುವಾಡಗಳು ಆಧುನಿಕ ಟೈಲ್ಸ್‌ಗಳಿಂದ ಮುಚ್ಚಲ್ಪಟ್ಟಿದ್ದು ಪ್ರಾಚೀನ ಕುರುಹುಗಳು ಕಾಣಬರುವುದಿಲ್ಲ. ನವರಂಗವು ನಾಲ್ಕು ಕಲಾತ್ಮಕ ಕಂಬಗಳಿಂದ ಕೂಡಿದ್ದು, ರಚನೆಯಲ್ಲಿ ಪೀಠ, ೩ ಚಚ್ಚೌಕ ಭಾಗ ಮಧ್ಯದಲ್ಲಿ ಎಂಟುಕೋನ, ಕುಂಬ, ಫಲಕ, ಸರಳ ಬೋದಿಗೆಗಳಿವೆ. ಸುಮಾರು ೩ ಅಡಿ ಎತ್ತರದ ನಂದಿವಿಗ್ರಹವಿದೆ. ನವರಂಗದ ಬಲಭಾಗದ

ಒಳಭಿತ್ತಿಯಲ್ಲಿ ಸುಬ್ರಮಣ್ಯ ಮಹಿಷಾಸುರಮರ್ಧಿನಿ, ಗಣೇಶ, ವಿಷ್ಣು, ಉಮಾಮಹೇಶ್ವರ ಸೇರಿದಂತೆ ಇತರೆ ಮೂರ್ತಿಶಿಲ್ಪಗಳು ಹೊಯ್ಸಳ ರಚನೆಗಳಾಗಿವೆ. ಗರ್ಭಗೃಹದಲ್ಲಿ ೩/೪ ಅಡಿ ಎತ್ತರದ ನಂದಿ ವಿಗ್ರಹವಿದೆ. ತೆರೆದಮಂಟಪದಲ್ಲಿ ೮ ಕಲಾತ್ಮಕವಾದ ಕಂಬಗಳಿದ್ದು ಅವುಗಳ ರಚನೆಯಲ್ಲಿ ಚಚ್ಚೌಕ ಭಾಗ, ಅಷ್ಟಪೈಲು, ಹದಿನಾರು ಮುಖದ ದಿಂಡು ನಂತರ ಸಾಧಾರಣ ಭೋದಿಗೆ ಇದೆ.

ದೇವಾಲಯದ ಎದುರಿಗೆ ಸುಮಾರು ೩೦ ಅಡಿ ಎತ್ತರದ ದೀಪಸ್ತಂಭವಿದೆ. ದೇವಾಲಯದ ಗರ್ಭಗೃಹದ ಮೇಲಿನ ಶಿಖರವು ಪಾಂಸಾನ ಮಾದರಿಯಲ್ಲಿದೆ. ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಿ ಇದೆ. ದೇವಾಲಯದ ಸಮುಚ್ಚಯದಲ್ಲಿ ಸೀತಾರಾಮ, ಗಂಗಾಮಾತೆ ದೇವಾಲಯಗಳಿವೆ. ಸೀತಾರಾಮ ದೇವಾಲಯದಲ್ಲಿ ರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯ ಏಕಶಿಲಾ ಮೂರ್ತಿಗಳಿವೆ. ಇವುಗಳ ಎಡಭಾಗದಲ್ಲಿ ಒಂದು ಶಿವಲಿಂಗ ಮತ್ತು ನಂದಿಯಿವೆ. ಗಂಗಾಮಾತೆ ದೇವಾಲಯವು ಪಾಂಸಾನ ಮಾದರಿ ಶಿಖರವನ್ನು ಹೊಂದಿದೆ. ಅದರ ಅದಿಷ್ಠಾನದಲ್ಲಿ ಉಪಾನ, ಪೀಠ, ಕಂಠ, ಕುಮುದ, ಕಂಠ, ವೇದಿಕೆ ಮುಂತಾದ ಭಾಗಗಳಿವೆ. ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು ಲತಾಸುರುಳಿ, ಪದ್ಮದಳ, ವಜ್ರಪಟ್ಟಿಕೆ ಮುಂತಾದ ಅಲಂಕರಣಗಳಿವೆ. ಇಲ್ಲಿ ೨ ಲಲಾಟ ಬಿಂಬಗಳಿದ್ದು, ಮೊದಲ ಲಲಾಟದಲ್ಲಿ ನಂದಿ, ನಂತರದ ಲಲಾಟದಲ್ಲಿ ಶಿವಲಿಂಗದ ಉಬ್ಬುಶಿಲ್ಪಗಳಿವೆ. ಬಾಗಿಲುವಾಡದ ಪಾದದಲ್ಲಿ ಶೈವದ್ವಾರಪಾಲಕರಿರುವರು. ಇದರ ಒಳಗೆ ಕೊಳದಲ್ಲಿ ಗಂಗೆ ಉದ್ಭವಿಸುತ್ತಾಳೆ. ಕೊಳದ ಮೇಲೆ ಒಂದು ಚಪ್ಪಡಿ ಇದ್ದು ಅದರ ಮೇಲೆ ಗಂಗಾಮಾತೆಯ ಮೂರ್ತಿಶಿಲ್ಪವಿದೆ. ಅದರ ಪಕ್ಕದಲ್ಲೇ ಒಂದು ಪುಷ್ಕರಣಿ ಇದ್ದು ಗಂಗಾಕೊಳದಲ್ಲಿ ಉದ್ಭವಿಸಿದ ನೀರು ಹರಿದುಬರುತ್ತದೆ. ಎಡಬಿತ್ತಿಯಲ್ಲಿ ಸರ್ಪದ ಉಬ್ಬುಶಿಲ್ಪವಿದೆ. ಹಾಲುರಾಮೇಶ್ವರ ದೇವಾಲಯದ ಎಡಭಾಗದಲ್ಲಿ ಆಧುನಿಕ ಶೈಲಿಯಲ್ಲಿ ಒಂದು ದೇವಾಲಯವಿದ್ದು ಅದರಲ್ಲಿ ವೀರಗಲ್ಲು ಮತ್ತು ನಾಗರಶಿಲ್ಪಗಳಿವೆ. ಅದೇ ರೀತಿ ಗಂಗಾಮಾತೆಯ ದೇವಾಲಯದ ಹಿಂಭಾಗದಲ್ಲಿ ತೆರೆದಮಂಟಪವಿದ್ದು ಅದರಲ್ಲಿ ಹಲವಾರು ಶಿವಲಿಂಗ ಮತ್ತು ನಂದಿ ವಿಗ್ರಹಗಳಿವೆ.

೧೩

ಊರು : ಮೆಣಸಿನೋಡು **ಸ್ಥಳ** : ಮೆಣಸಿನೋಡು-ಕಾರೇಹಳ್ಳಿ ರಸ್ತೆಯಲ್ಲಿ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ. ಸುಮಾರು ೧೬ನೇ ಶತಮಾನ **ಶೈಲಿ** : ವಿಜಯನಗರ

ಮಲ್ಲಿಕಾರ್ಜುನ ದೇವಾಲಯವು ಗರ್ಭಗೃಹ, ಅಂತರಾಳ, ಮುಚ್ಚಿದ ಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ದೇವಾಲಯದ ಎದುರಿಗೆ ಎರಡು ದೀಪಸ್ತಂಭಗಳಿದ್ದು ಅವುಗಳಲ್ಲಿ ಒಂದು ಹಾಳಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೩೦ ಅಡಿ ಎತ್ತರದ ಉಯ್ಯಾಲೆ ಕಂಬವಿದೆ. ಗರ್ಭಗೃಹದಲ್ಲಿ ೧ ಅಡಿ ಎತ್ತರದ ಪೀಠದ ಮೇಲೆ ೧/೪ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಅರೆಗಂಬ ಶಾಖೆ, ಕೆಳಭಾಗದಲ್ಲಿ ಪೂರ್ಣಕುಂಭಗಳ ಕೆತ್ತನೆಗಳಿವೆ. ಅಂತರಾಳದ ಬಾಗಿಲುವಾಡವು ಅರ್ಧಗಂಭ ಶಾಖೆ ಶೈವದ್ವಾರಪಾಲಕರ ಕೆತ್ತನೆಯನ್ನು ಕಾಣಬಹುದು. ಶಾಖೆಯಲ್ಲಿ ಲತಾಸುರುಳಿ, ಪದ್ಮಗಳ ಅಲಂಕರಣೆಗಳಿವೆ. ಬಾಗಿಲುವಾಡದ ಲಲಾಟದಲ್ಲಿ ಶಿವಲಿಂಗ ಮತ್ತು ನಂದಿಯ ಉಬ್ಬುಶಿಲ್ಪಗಳಿವೆ.

ಮುಚ್ಚಿದ ಮಂಟಪದಲ್ಲಿ ಸುಮಾರು ೩ ಅಡಿ ಎತ್ತರ ೪ ಅಡಿ ಉದ್ದವಾದ ನಂದಿ ಶಿಲ್ಪವಿದ್ದು, ಇದನ್ನು ಕಪ್ಪು ಶಿಲೆಯಲ್ಲಿ ಕಡೆದಿರುವರು. ನಂದಿ ವಿಗ್ರಹದ ಎಡಭಾಗದಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಸಪ್ತಮಾತೃಕೆಯರ ಶಿಲ್ಪ ಹಾಗೂ ಗಣೇಶನ ಶಿಲ್ಪವಿದೆ. ಸಪ್ತಮಾತೃಕೆಯರ ಶಿಲ್ಪದಲ್ಲಿ ಬ್ರಾಹ್ಮೀ, ವೈಷ್ಣವಿ, ಮಹೇಶ್ವರಿ, ಕೌಮಾರಿ, ವರಾಹಿ, ಇಂದ್ರಾಣಿ, ಚಾಮುಂಡಾ ಶಿಲ್ಪಗಳಿವೆ. ಮುಚ್ಚಿದ ಮಂಟಪದ ಬಾಗಿಲುವಾಡದಲ್ಲಿ ಅರ್ಧಗಂಬ ಏಕಶಾಖೆ ಹಾಗೂ ಲತಾಸುರುಳಿಯನ್ನು ಕಾಣಬಹುದು. ಲಲಾಟದಲ್ಲಿ ನಂದಿ, ಪಾದದಲ್ಲಿ ಶೈವದ್ವಾರಪಾಲಕ ಶಿಲ್ಪಗಳಿವೆ.

ನವರಂಗದಲ್ಲಿ ನಾಲ್ಕು ಕಲಾತ್ಮಕವಾದ ಕಂಬಗಳಿದ್ದು ಪೀಠ, ೩ ಚಚ್ಚೌಕ ಭಾಗಗಳು, ಮಧ್ಯೆ ಎಂಟುಕೋನ, ೧೬ ಮುಖದ ರಚನೆಗಳಿವೆ. ಕೆಳಗಿನ ಎರಡು ಚಚ್ಚೌಕಗಳ ಮೇಲೆ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ಆಂಜನೇಯ, ಯೋಗಿ, ವೀರಭದ್ರ, ಷಣ್ಮುಖ, ಎಡೆಯೂರು ಸಿದ್ಧಲಿಂಗೇಶ್ವರ, ನಟರಾಜ, ಕಾಳಿಂಗ ಮರ್ದನ, ಗಣೇಶ, ಬೇಡರಕಣ್ಣಪ್ಪ, ಪರಶುರಾಮ, ಉಮಾಮಹೇಶ್ವರ, ಗಂಡಬೇರುಂಡ, ಭೈರವ, ನಂದಿ, ಹಂಸ, ನರ್ತಕಿ, ವೇಣುಗೋಪಾಲ ಮುಂತಾದವುಗಳಿವೆ. ಸ್ಥಂಭಗಳ ಮೇಲೆ ಪುಷ್ಪ ಬೋದಿಗೆ ಇದೆ. ನವರಂಗದ ಮಧ್ಯಭಾಗದಲ್ಲಿ ಅಲಂಕಾರಿಕ ಭುವನೇಶ್ವರಿಯಿದ್ದು, ಅದರ ಕೆಳಭಾಗದಲ್ಲಿ ಹಂಸಗಳಸಾಲು, ಸಿಂಹವ್ಯಾಳಿಯ ಕೆತ್ತನೆಗಳಿವೆ. ನವರಂಗದ ಬಲಭಾಗದ ಚಿಕ್ಕ ಕಟ್ಟೆಯ ಮೇಲೆ ಭೈರವನ ೩ ಮೂರ್ತಿಶಿಲ್ಪಗಳು, ಒಂದು ಮಹಿಷಾಸುರ ಮರ್ಧಿನಿ ಶಿಲ್ಪ, ಎಡಭಾಗದ ಚಿಕ್ಕ ಗೂಡಿನಲ್ಲಿ ವೀರಭದ್ರನ ಶಿಲ್ಪಗಳಿವೆ. ನವರಂಗದ ಬಾಗಿಲುವಾಡವು ಅರ್ಧಗಂಭ ಏಕಶಾಖೆ ಹಾಗೂ ಅದರಲ್ಲಿ ಲತಾಸುರುಳಿ ಕೆತ್ತನೆಯನ್ನು ಕಾಣಬಹುದು. ಲಲಾಟದಲ್ಲಿ ಗಜಲಕ್ಷ್ಮಿಯರು, ಪಾದದಲ್ಲಿ ಶೈವದ್ವಾರಪಾಲಕರಿರುವರು. ದ್ವಾರಗಳ ಬದಿಗಳಲ್ಲಿ ಪೂರ್ಣಸ್ಥಂಭಗಳ ಕೆತ್ತನೆ ಇದೆ. ದೇವಾಲಯದ ಅಧಿಷ್ಠಾನವು ೩^{೧}/೨ ಅಡಿ ಎತ್ತರವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ತ್ರಿಪಟ್ಟ ಕುಮುದ, ಕಂಠ, ವೇದಿ ಭಾಗಗಳಿವೆ.

೧೪

ಊರು	: ಜಾನಕಲ್ಲು	**ಸ್ಥಳ**	: ಕೆರೆಯ ಪಶ್ಚಿಮ ಭಾಗ
ಸ್ಮಾರಕ	: ಶಂಕರಲಿಂಗೇಶ್ವರ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೧ನೇ ಶತಮಾನ	**ಶೈಲಿ**	: ಕಲ್ಯಾಣ ಚಾಲುಕ್ಯ

ಜಾನಕಲ್ಲಿನ ಪ್ರಾಚೀನ ದೇವಾಲಯಗಳಲ್ಲಿ ಶಂಕರಲಿಂಗೇಶ್ವರ ದೇವಾಲಯ ಒಂದು. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ನವರಂಗಕ್ಕೆ ಹೊಂದಿಕೊಂಡಂತೆ ಬಲ ಮತ್ತು ಎಡಭಾಗದಲ್ಲಿ ಮುಖಮಂಟಪಗಳು, ಮತ್ತೊಂದು ನವರಂಗ, ಮುಖ್ಯಮುಖಮಂಟಪ, ಎದುರುಗಡೆ ದೀಪಸ್ಥಂಭಗಳನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದ್ದು, ಸರಳ ಲಲಾಟ ಹಾಗೂ ಕೆಳಭಾಗದಲ್ಲಿ ಪೂರ್ಣಕುಂಭದ ರಚನೆಗಳಿವೆ. ಅಂತರಾಳದ ಬಾಗಿಲುವಾಡವು ಲತಾಸುರುಳಿಯ ಏಕಶಾಖೆಯನ್ನು ಹೊಂದಿದ್ದು ಲಲಾಟದಲ್ಲಿ ಪದ್ಮ ಹಾಗೂ ಪಾದದಲ್ಲಿ ಶೈವದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ಕಲಾತ್ಮಕ ಕಂಭಗಳಿದ್ದು, ಪೀಠ, ಕಾಂಡಭಾಗದಲ್ಲಿ ಎರಡು ಚಚ್ಚೌಕ ಮುಖಗಳು, ಕುಂಭ,

ಫಲಕ, ಸಾಧಾರಣ ಬೋದಿಗೆ ಹೊಂದಿವೆ. ಈ ಕಂಬಗಳ ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ನವರಂಗದಲ್ಲಿ ೩ ೧/೨ ಅಡಿ ಎತ್ತರದ ನಂದಿ ವಿಗ್ರಹವಿದೆ. ನವರಂಗಕ್ಕೆ ಹೊಂದಿಕೊಂಡಂತೆ ಬಲ ಮತ್ತು ಎಡಭಾಗದಲ್ಲಿ ಮುಖಮಂಟಪಗಳಿದ್ದು, ಬಲಭಾಗದ ಮುಖಮಂಟಪದ ಬಾಗಿಲುವಾಡದಲ್ಲಿ ದ್ವಿಶಾಖೆಗಳಲ್ಲಿ ವಜ್ರ, ಪದ್ಮ, ಲತಾಸುರುಳಿ ಕೆತ್ತನೆಗಳನ್ನು ಲಲಾಟದಲ್ಲಿ ಪದ್ಮದ ಕೆತ್ತನೆ ಹಾಗೂ ಪಾದದಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ. ಈ ಮುಖಮಂಟಪವು ವಿಜಯನಗರೋತ್ತರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಆ ಸ್ತಂಭಗಳಲ್ಲಿ ಪದ್ಮಪುಷ್ಪ ಬೋದಿಗೆ ಇದೆ. ಎರಡೂ ಮುಖಮಂಟಪಗಳ ಎದುರು ಸುಮಾರು ೧೫ ಅಡಿ ಎತ್ತರದ ದೀಪಸ್ತಂಭಗಳಿವೆ. ನವರಂಗದ ಬಾಗಿಲುವಾಡದಲ್ಲಿ ದ್ವಿಶಾಖೆಗಳಿದ್ದು, ಪದ್ಮ, ವಜ್ರ, ಲತಾಸುರುಳಿ ಕೆತ್ತನೆಗಳಿವೆ. ಲಲಾಟದಲ್ಲಿ ಪದ್ಮಪುಷ್ಪದ ಅಲಂಕಾರವಿದ್ದು, ಪಾದದಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ.

ಎರಡನೇ ನವರಂಗವು ನಾಲ್ಕು ಕಲಾತ್ಮಕ ಕಂಬಗಳನ್ನು ಹೊಂದಿದ್ದು ಪೀಠ, ಕಾಂಡ ಭಾಗದಲ್ಲಿ ೩ ಚಚ್ಚೌಕ ಮುಖಗಳು, ಮಧ್ಯೆ ಎಂಟುಕೋನ, ಹದಿನಾರು ಕೋನಗಳು ಮೇಲ್ಭಾಗದಲ್ಲಿ ಲಶುನ, ಕುಂಭ, ಫಲಕ, ಸಾಧಾರಣಾ ಬೋದಿಗೆ ಇದೆ. ಈ ಕಂಬಗಳ ಮೇಲ್ಭಾಗದಲ್ಲಿ ಭುವನೇಶ್ವರಿಯಿದ್ದು, ಇದಕ್ಕೆ ಹೊಂದಿಕೊಂಡಂತೆ ಮುಖ್ಯ ಮುಖಮಂಟಪವಿದೆ. ೩ನೇ ನವರಂಗದ ಬಾಗಿಲುವಾಡವು ದ್ವಿಶಾಖೆಗಳನ್ನು ಹೊಂದಿದ್ದು, ಇದರಲ್ಲಿ ಲತಾಸುರುಳಿ, ವಜ್ರದ ಅಲಂಕಾರಗಳಿವೆ. ಲಲಾಟ ಬಿಂಬದಲ್ಲಿ ಪದ್ಮಪುಷ್ಪದ ಕೆತ್ತನೆಯಿದೆ. ಪಾದದಲ್ಲಿ ಶೈವದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ದೇವಾಲಯದ ಎದುರಿಗೆ ೧೫ ಅಡಿ ಎತ್ತರದ ದೀಪಸ್ತಂಭವಿದೆ. ದೇವಾಲಯದ ಬಳಿ ಇರುವ ಕ್ರಿ.ಶ. ೧೩೦೨ರ ಕಾಲದ ಶಾಸನೋಕ್ತ ವೀರಗಲ್ಲಿನ ಪ್ರಕಾರ 'ಮುಮ್ಮಡಿ ಬಲ್ಲಾಳನು ಆಳುತ್ತಿರುವ ಕಾಲದಲ್ಲಿ ಸೇವುಣರಾಜ ಶಂಕರದೇವನ ಸೇನೆಯು ಹೊಯ್ಸಳ ನಾಡನ್ನು ಮುತ್ತಿಗೆ ಹಾಕಿತು, ಬೆಮ್ಮತ್ತೂರಿನಲ್ಲಿ ಆಳುತ್ತಿದ್ದ ಬಲ್ಲಾಳನ ಭಾವ ಸೋಮದಂಡನಾಯಕನು ಸೇವುಣ ದಂಡನಾಯಕ ಕಂಪಿಲನೊಂದಿಗೆ ಹೋರಾಡುತ್ತಾ ವೀರಸ್ವರ್ಗವನ್ನು ಹೊಂದಿದನು. ಈ ಸಂದರ್ಭದಲ್ಲಿ ಹೊಳಲ್ಕೆರೆ ವೃತ್ತಿಯ ಮಹಾಮಂಡಳೇಶ್ವರ ಮಾಚಿದೇವನ ಪಾದಪದ್ಮಾರಧಕರ ಕೆಂದಾರಿ ದೇವರಸನ ಮೈದುನ ಬಸಪ್ಪನು ಹೋರಾಟದಲ್ಲಿ ಪಾಲ್ಗೊಂಡು ವೀರಸ್ವರ್ಗದಲ್ಲಿ ಪಾಲ್ಗೊಂಡನು' ಎಂದು ಹೇಳುತ್ತದೆ.[೬೦]

೧೫

ಊರು : ಬೆಲಗೂರು	**ಸ್ಥಳ** : ಕೆರೆಯ ಬದಿಯಲ್ಲಿ
ಸ್ಮಾರಕ : ಪ್ರಸನ್ನ ರಾಮೇಶ್ವರ ದೇವಾಲಯ	**ಅಭಿಮುಖ** : ದಕ್ಷಿಣ
ಕಾಲ : ಕ್ರಿ.ಶ.ಸು. ೧೧ನೇ ಶತಮಾನ	**ಶೈಲಿ** : ಕಲ್ಯಾಣ ಚಾಲುಕ್ಯ

ಬೆಲಗೂರಿನ ಪ್ರಸಿದ್ಧ ರಾಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಬಾಗಿಲುವಾಡವು ಅರ್ಧಗಂಬ ಏಕಶಾಖೆಯನ್ನು ಹೊಂದಿದೆ. ಅಂತರಾಳದಲ್ಲಿ ಒಂದು ನಂದಿಯ ಶಿಲ್ಪವಿದೆ. ಅಂತರಾಳದ ಬಾಗಿಲುವಾಡದ ತ್ರಿಶಾಖೆಗಳಲ್ಲಿ ಪದ್ಮ, ವಜ್ರ, ಲತಾಸುರುಳಿಯ ಸುಂದರ ಕೆತ್ತನೆಗಳಿವೆ. ಬಾಗಿಲುವಾಡ ದಲ್ಲಿ ಶೈವ ದ್ವಾರಪಾಲಕ ಹಾಗೂ ಲಲಾಟದಲ್ಲಿ ಗಣೇಶನ ಉಬ್ಬುಶಿಲ್ಪಗಳಿವೆ.

ನವರಂಗದಲ್ಲಿ ನಾಲ್ಕು ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚಚ್ಚೌಕದ ಎರಡು ಭಾಗಗಳಿದ್ದು ಅವುಗಳ ಮೇಲೆ ವಿವಿಧ ಉಬ್ಬುಶಿಲ್ಪಗಳಿದ್ದು, ಅವುಗಳಲ್ಲಿ ಶಿವಲಿಂಗಕ್ಕೆ ಹಾಲಿನಿಂದ

ಅಭಿಷೇಕ ಮಾಡುತ್ತಿರುವ ಹಸು, ಹಾವು, ವ್ಯಾಳಿ ಮುಂತಾದವುಗಳಿವೆ. ಚಚ್ಚೌಕದ ಭಾಗಗಳು ನಂತರ ಕುಂಭ, ಲಶುನ, ಫಲಕ ನಂತರ ಭೋದಿಗೆ ಇದೆ. ಗರ್ಭಗೃಹದ ಮೇಲಿನ ಭಾಗದಲ್ಲಿ ಕದಂಬ ನಾಗರ ಶಿಖರವಿದೆ. ನಂತರ ಸ್ತೂಪಿ ಇದೆ. ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಿ ಇದೆ.

೧೬

ಊರು : ಗರಗ | ಸ್ಥಳ : ಹಂಸಾಗರ ಕೆರೆಯ ಪಕ್ಕದಲ್ಲಿ

ಸ್ಮಾರಕ : ಈಶ್ವರ ದೇವಾಲಯ | ಅಭಿಮುಖ : ದಕ್ಷಿಣ

ಕಾಲ : ಕ್ರಿ.ಶ.ಸು. ೧೫ನೇ ಶತಮಾನ | ಶೈಲಿ : ವಿಜಯನಗರ

ವಿಜಯನಗರ ಕಾಲದ ಈಶ್ವರ ದೇವಾಲಯವು ದ್ವಿಕೂಟವಾಗಿದೆ. ತಲವಿನ್ಯಾಸದಲ್ಲಿ ಮುಖ್ಯಗರ್ಭಗೃಹ, ಅಂತರಾಳ, ನವರಂಗ, ಎಡಭಾಗದ ಗರ್ಭಗೃಹ, ಮುಖಮಂಟಪವಿದೆ. ಮುಖ್ಯಗರ್ಭಗೃಹದ ನಂತರದ ಅಂತರಾಳದ ಬಾಗಿಲುವಾಡದಲ್ಲಿ ಅರ್ಧಗಂಭ ಏಕಶಾಖೆ ಇದೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಪಾದದಲ್ಲಿ ಶೈವದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಎಡಭಾಗದ ಗರ್ಭಗೃಹದ ಬಾಗಿಲುವಾಡವು ಅರ್ಧಗಂಬ ಏಕಶಾಖೆಯನ್ನು ಹೊಂದಿದ್ದು ಲಲಾಟಬಿಂಬದಲ್ಲಿ ಪದ್ಮದ ಅಲಂಕರಣವಿದೆ. ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ಸ್ವತಂತ್ರವಾದ ಕಲಾತ್ಮಕವಾದ ಕಂಬಗಳಿವೆ. ಇವುಗಳ ರಚನೆಯಲ್ಲಿ ಮೂರು ಚಚ್ಚೌಕದ ಭಾಗಗಳು ಮಧ್ಯೆ ಎಂಟು ಹಾಗೂ ಹದಿನಾರು ಕೋನಗಳು ಇದ್ದು, ಚಚ್ಚೌಕದ ಮೇಲೆ ಗಣಪತಿ, ಹನುಮ, ಮತ್ಸೇಂದ್ರನಾಥ, ವೀರಭದ್ರ, ಬೇಡರಕಣ್ಣಪ್ಪ, ಮಯೂರ ಸೇರಿದಂತೆ ಅನೇಕ ಶಿಲ್ಪಗಳಿವೆ.

೧೭

ಊರು : ಸೂಜಿಗಲ್ಲು | ಸ್ಥಳ : ಅಮಾನಿಕೆರೆ ಹತ್ತಿರ

ಸ್ಮಾರಕ : ಬೀರಲಿಂಗೇಶ್ವರ ದೇವಾಲಯ | ಅಭಿಮುಖ : ಪೂರ್ವ

ಕಾಲ : ಕ್ರಿ.ಶ.ಸು. ೧೭ನೇ ಶತಮಾನ | ಶೈಲಿ : ವಿಜಯನಗರೋತ್ತರ

ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ತೆರೆದಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಅಂತರಾಳದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದ್ದು ಪಾದದಲ್ಲಿ ಶೈವದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಇವರು ತ್ರಿಶೂಲ, ಢಮರು, ಗಧಾ ಹಾಗೂ ಅಭಯಗಳನ್ನು ಹೊಂದಿರುವರು, ದ್ವಾರದ ಲಲಾಟದಲ್ಲಿ ಸರ್ಪದ ಮಧ್ಯದಲ್ಲಿ ಕುಳಿತಿರುವ ಗಣೇಶನ ಉಬ್ಬುಶಿಲ್ಪವಿದೆ. ಮುಂದೆ ವಿಶಾಲವಾದ ತೆರೆದ ಮಂಟಪವು ಎರಡು ಹಂತಗಳಲ್ಲಿ ಕಂಡುಬರುತ್ತದೆ. ಇಲ್ಲಿ ೧೮ ಸ್ತಂಭಗಳಿವೆ. ಈ ಸ್ತಂಭಗಳಲ್ಲಿ ಮೂರು ಮಾದರಿಗಳಿವೆ. ೧ನೇ ಮಾದರಿ ಕಂಬದ ರಚನೆಯಲ್ಲಿ ಮೂರು

ಚಚ್ಚೌಕದ ಭಾಗಗಳು ಅವುಗಳ ಮಧ್ಯೆ ಅಷ್ಟಕೋನಗಳಿವೆ. ಇನ್ನೇ ಮಾದರಿ ಸ್ತಂಭದಲ್ಲಿ ಮೂರು ಚಚ್ಚೌಕದ ರಚನೆ ಅವುಗಳ ಮಧ್ಯೆ ಅಷ್ಟ ಹಾಗೂ ಹದಿನಾರು ಕೋನಗಳಿವೆ. ಕೆಳಭಾಗದಲ್ಲಿ ನಾಗಬಂಧವಿದೆ. ದೇವಾಲಯದ ತೆರೆದ ಮಂಟಪವು ಮಾತ್ರ ಅಧಿಷ್ಠಾನವನ್ನು ಒಳಗೊಂಡಿದ್ದು ಅದರಲ್ಲಿ ಉಪಾನ, ಗಳಪಾದ(ಕಂಠ), ವೇದಿಕೆ ಭಾಗಗಳಿವೆ.

ದೇವಾಲಯದ ಹೊರಭಿತ್ತಿಯ ಮೇಲೆ ವಿವಿಧ ಉಬ್ಬು ಶಿಲ್ಪಗಳಿದ್ದು, ಅವುಗಳಲ್ಲಿ ನಾಗರಹಾವು, ಮೀನು, ನವಿಲು, ಬೇಡರ ಕಣ್ಣಪ್ಪ, ಯುದ್ಧ ಸನ್ನಿವೇಶ, ಕೋತಿ, ನಾಥಯೋಗಿ ಮುಂತಾದವುಗಳು ಕಂಡುಬರುತ್ತವೆ. ಗರ್ಭಗೃಹದ ಮೇಲೆ ದ್ರಾವಿಡ ಮಾಧರಿ ಶಿಖರವಿದೆ. ಶಿಖರವು ಎರಡು ಹಂತಗಳಲ್ಲಿ ಇದ್ದು, ಇಟ್ಟಿಗೆ ಗಚ್ಚುಗಾರೆಯಿಂದ ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ಸುಖನಾಸಿಯು ಸಹ ಇದೆ.

೧೮

ಊರು	: ಸೂಜಿಗಲ್ಲು	**ಸ್ಥಳ**	: ಗ್ರಾಮದ ಮಧ್ಯಭಾಗ
ಸ್ಮಾರಕ	: ಸೋಮೇಶ್ವರ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೧ನೇ ಶತಮಾನ	**ಶೈಲಿ**	: ಕಲ್ಯಾಣಚಾಲುಕ್ಯ

ಸೂಜಿಗಲ್ಲು ಗ್ರಾಮದಲ್ಲಿ ಅತ್ಯಂತ ಪ್ರಾಚೀನವಾದ ದೇವಾಲಯ ಸೋಮೇಶ್ವರ. ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪವಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾಗಿದೆ. ಗರ್ಭಗೃಹದಲ್ಲಿ ಸುಮಾರು ೨ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡವು ಸಾಧಾರಣವಾದ ಲಲಾಟ ಬಿಂಬವನ್ನು ಹಾಗೂ ಪಾದದಲ್ಲಿ ಕುಂಭಗಳ ಕೆತ್ತನೆಯನ್ನು ಒಳಗೊಂಡಿದೆ. ನವರಂಗದಲ್ಲಿ ನಾಲ್ಕು ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಎರಡು ಚಚ್ಚೌಕ ಮಧ್ಯೆ ಅಷ್ಟ ಹಾಗೂ ಹದಿನಾರು ಕೋನಗಳು ನಂತರ ಕುಂಭ, ಲಶುನ, ಫಲಕ, ಭೋದಿಗೆ ಇವೆ. ಕಂಭಗಳ ಚಚ್ಚೌಕದಲ್ಲಿ ವಿವಿಧ ಉಬ್ಬುಶಿಲ್ಪಗಳಿವೆ. ಅಲ್ಲದೆ ಅಷ್ಟಕೋನ ಹಾಗೂ ಹದಿನಾರು ಕೋನಗಳ ಮೇಲೆ ವಜ್ರದ ಅಲಂಕಾರಗಳಿವೆ. ನವರಂಗದಲ್ಲಿ ಅಲಂಕೃತ ಭುವನೇಶ್ವರಿ ಇದೆ. ನವರಂಗದ ಬಾಗಿಲುವಾಡವು ಲತಾಸುರುಳಿ ಹಾಗೂ ಪದ್ಮಪುಷ್ಪ ಶಾಖೆಗಳಿಂದ ಅಲಂಕೃತಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಪಾದದಲ್ಲಿ ಆನೆಗಳ ಉಬ್ಬುಶಿಲ್ಪಗಳಿವೆ. ನವರಂಗದಲ್ಲಿ ಗಣೇಶ, ಸುಬ್ರಹ್ಮಣ್ಯ, ಮಹಿಷಮರ್ದಿನಿ ಶಿಲ್ಪಗಳಿವೆ. ಸಭಾಮಂಟಪವು ಕಕ್ಷಾಸನದಿಂದ ಕೂಡಿದೆ.

ಗರ್ಭಗೃಹದ ಮೇಲೆ ಕದಂಬನಾಗರ ಶಿಖರ, ಸ್ತೂಪಿ, ಕಳಸವಿದೆ. ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಿಯೂ ಇದೆ. ಗರ್ಭಗೃಹದ ಅಧಿಷ್ಠಾನದಲ್ಲಿ ಉಪಾನ, ಗಳ ಹಾಗೂ ವೇದಿಕೆ ಭಾಗಗಳಿವೆ. ದೇವಾಲಯದ ಪೂರ್ಣಭಾಗ ಬಿಳಿಕಣಶಿಲೆಯಲ್ಲಿ ನಿರ್ಮಾಣ ಗೊಂಡಿದೆ.

ಊರು : ಮೈಲಾರಪುರ **ಸ್ಥಳ** : ಗ್ರಾಮದ ಬೆಟ್ಟದಲ್ಲಿ

ಸ್ಮಾರಕ : ಮೈಲಾರಲಿಂಗೇಶ್ವರ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬ನೇ ಶತಮಾನ **ಶೈಲಿ** : ವಿಜಯನಗರ

ಕರ್ನಾಟಕದ ಕೆಲವೇ ಮೈಲಾರನ ಆರಾಧನೆಯ ಕೇಂದ್ರಗಳಲ್ಲಿ ಹೊಸದುರ್ಗ ತಾಲೂಕಿನ 'ಮೈಲಾರ'ವು ಒಂದು. ಇದನ್ನು ಸೂಜಿಗಲ್ಲು ಮೈಲಾರ ಎಂದು ಕರೆಯಲಾಗುತ್ತದೆ.[೪]

ಮೈಲಾರಪುರದ ಪ್ರಸಿದ್ಧ ಮೈಲಾರಲಿಂಗೇಶ್ವರ ದೇವಾಲಯವು ಮೂಲತಹ ಗುಹಾದೇವಾಲಯ. ಗರ್ಭಗೃಹ ಮಾತ್ರ ಗುಹಾಭಾಗದಿಂದ ಕೂಡಿದ್ದು ಉಳಿದ ಮುಂದಿನ ರಚನೆಗಳು ಕಟ್ಟಡಭಾಗಗಳಾಗಿವೆ. ನವರಂಗವು ನಾಲ್ಕು ಕಲಾತ್ಮಕ ಕಂಭಗಳಿಂದ ಕೂಡಿದ್ದು, ರಚನೆಯಲ್ಲಿ ಪೀಠ, ಕಾಂಡದಲ್ಲಿ ಎರಡು ಚಚ್ಚೌಕಗಳು, ಮಧ್ಯೆ ಅಷ್ಟಪೈಲು ಹಾಗೂ ಹದಿನಾರು ಕೋನಗಳು, ಕುಂಭ, ಲಶುನ, ಫಲಕ ಭೋದಿಗೆಗಳಿವೆ. ಚಚ್ಚೌಕದ ಮೇಲೆ ಆನೆ, ನಂದಿ, ಶಿವಲಿಂಗಕ್ಕೆ ಹಾಲು ನೀಡುತ್ತಿರುವ ಹಸು, ಗಣೇಶ, ವ್ಯಾಳಿ, ರಾಜಪುರುಷ, ಶಿವಲಿಂಗ, ತ್ರಿಶೂಲ, ನವಿಲು ಮುಂತಾದ ಉಬ್ಬುಶಿಲ್ಪಗಳಿವೆ. ನವರಂಗದಲ್ಲಿ ಒಂದು ಗೂಡುಮಂಟಪವಿದ್ದು ಅದರಲ್ಲಿ ಪ್ರಸ್ತುತ ಗಣೇಶನ ಮೂರ್ತಿಶಿಲ್ಪವಿದೆ. ಇದರ ಬಾಗಿಲುವಾಡದ ದ್ವಿಶಾಖೆಗಳಲ್ಲಿ ವಜ್ರದ ಅಲಂಕಾರಗಳಿವೆ. ಪಾದದಲ್ಲಿ ಶೈವ ದ್ವಾರಪಾಲಕರ ಉಬ್ಬು ಶಿಲ್ಪಗಳಿದ್ದು, ಅವರು ತ್ರಿಶೂಲ, ಢಮರು, ಗದೆ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವರು.

ದೇವಾಲಯದ ಎಡಭಾಗಕ್ಕೆ ಒಂದು ಮಂಟಪವಿದ್ದು ಅದನ್ನು ಗಾಳಿಮಂಟಪ ಎನ್ನುವರು. ಇದು ತೆರೆದಮಂಟಪದ ರಚನೆಯೋಪಾದಿಯಲ್ಲಿ ಇದ್ದು ಇದರಲ್ಲಿ ೧೬ ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳು ಕಲಾತ್ಮಕವಾಗಿದ್ದು ನವರಂಗದ ಕಂಬಗಳ ಶೈಲಿಯಲ್ಲಿವೆ. ಮಧ್ಯದಲ್ಲಿ ಭುವನೇಶ್ವರಿ ಇದೆ. ಮಂಟಪದ ಮೇಲಿನ ಭಾಗದಲ್ಲಿ ದ್ರಾವಿಡ ಮಾದರಿ ಶಿಖರವಿದೆ. ಮಂಟಪದ ಒಳಗೆ ಕುಳಿತುಕೊಳ್ಳುವ ವ್ಯವಸ್ಥೆ ಇದ್ದು ಅದಕ್ಕಾಗಿ ಕಕ್ಷಾಸನವೂ ಇದೆ. ದೇವಾಲಯದ ಸ್ವಲ್ಪ ಕೆಳಭಾಗಕ್ಕೆ ಇಳಿದುಬಂದರೆ ಹೆಗ್ಗಪ್ಪ ಮತ್ತು ಗಂಗಮಾಳಮ್ಮನ ದೇವಾಲಯವಿದೆ. ಇದು ಸ್ವಲ್ಪ ಗುಹಾಭಾಗ ಉಳಿದ ಭಾಗ ಕಟ್ಟಡದಿಂದ ಕೂಡಿದೆ. ಇದಕ್ಕೂ ದ್ರಾವಿಡ ಶಿಖರವಿದೆ. ದೇವಾಲಯದ ಒಳಗೆ ಗಂಗಮಾಳಮ್ಮ ಹಾಗೂ ಹೆಗ್ಗಪ್ಪನ ಮೂರ್ತಿಶಿಲ್ಪಗಳಿವೆ. ಅಲ್ಲಿಂದ ಕೆಳಗೆ ಇಳಿದು ಬಂದರೆ ಒಂದು ಕಲ್ಲಿನ ಮಂಟಪವಿದ್ದು ಅದರಲ್ಲಿ ಗಣೇಶನ ಎರಡು ಮೂರ್ತಿಶಿಲ್ಪಗಳು, ಒಂದು ಕಲ್ಲಿನ ತ್ರಿಶೂಲವಿದೆ. ಇಲ್ಲಿನ ಗಣೇಶನನ್ನು ದೊಡ್ಡಯ್ಯನೆಂದು ಕರೆಯುವರು.

ಗಣೇಶನ ಮಂಟಪದ ಕೆಳಗೆ ಮೂರನೇ ಮಹಾದ್ವಾರವಿದೆ. ಈ ಪ್ರವೇಶದ್ವಾರ ಮಂಟಪವು ಅತ್ಯಂತ ಕಲಾತ್ಮಕವಾಗಿದ್ದು ಇದರ ಬಾಗಿಲುವಾಡದಲ್ಲಿ ಲತಾ ಸುರುಳಿ, ವಜ್ರದ ಅಲಂಕಾರದ ಶಾಖೆಗಳಿವೆ. ಪಾದದಲ್ಲಿ ಶೈವದ್ವಾರಪಾಲಕರಿದ್ದು ಅಭಯ, ತ್ರಿಶೂಲ, ಗಧೆ, ಡಮರುಗ ಹಿಡಿದಿದ್ದಾರೆ. ನಂತರ ಎರಡನೇ ಮಹಾದ್ವಾರ ಮಂಟಪವಿದೆ. ಈ ದ್ವಾರಮಂಟಪದಲ್ಲಿ ಎರಡು ಕಲಾತ್ಮಕವಾದ ಕಂಬಗಳು ಅವುಗಳ ಮೇಲೆ ಹಲವು ಉಬ್ಬುಶಿಲ್ಪಗಳಿದ್ದು, ಅವುಗಳಲ್ಲಿ ಬೇಡರ ಕಣ್ಣಪ್ಪ,

ರಾಜಪುರುಷ, ಅಪ್ಸರೆಯರು, ಉಮಾಮಹೇಶ್ವರ ಮುಂತಾದವುಗಳಿವೆ. ಅಲ್ಲಿಂದ ಕೆಳಗೆ ನಡೆದರೆ ಒಂದು ಯಾಗಶಾಲೆ ಇದ್ದು ರಥೋತ್ಸವದ ಕಾಲದಲ್ಲಿ ಯಾಗದ ಕಾರ್ಯಗಳನ್ನು ಮಾಡುವರು. ನಂತರದಲ್ಲಿ ಜುಂಜಪ್ಪನ ದೇವಾಲಯವಿದ್ದು ಅದರಲ್ಲಿ ಗರ್ಭಗುಡಿ ಹಾಗೂ ಒಂದು ಹಜಾರವಿದೆ. ಗರ್ಭಗುಡಿಯಲ್ಲಿ ಪೀಠದ ಮೇಲೆ ಶಿರವನ್ನು ಇಟ್ಟಿದ್ದಾರೆ. ಇದನ್ನು ಜುಂಜಪ್ಪ ಎಂದು ಕರೆಯುತ್ತಾರೆ. ಇದೇ ಪ್ರಾಂಗಣದಲ್ಲಿ ನೀಲಕಂಠೇಶ್ವರ ದೇವಾಲಯವಿದ್ದು ಅದರಲ್ಲಿ ಗರ್ಭಗುಡಿ, ಅಂತರಾಳ ಹಾಗೂ ಮುಖಮಂಟಪವಿದೆ. ಗರ್ಭಗೃಹದಲ್ಲಿ ನೀಲಕಂಠೇಶ್ವರ ಹೆಸರಿನ ಲಿಂಗವಿದೆ. ಈ ಎಲ್ಲಾ ದೇವಾಲಯಗಳ ಸಮುಚ್ಚಯವನ್ನು ಒಟ್ಟಾರೆ ಮೈಲಾರಲಿಂಗೇಶ್ವರ ದೇವಾಲಯ ಎಂದು ಕರೆಯಲಾಗುತ್ತದೆ. ಈ ಎಲ್ಲಾ ದೇವಾಲಯಗಳನ್ನು ಒಳಗೊಂಡು ಒಂದು ಮುಖ್ಯ ಹಾಗೂ ಪ್ರಮುಖ ಪ್ರವೇಶ ಮಹಾದ್ವಾರ ಮಂಟಪವನ್ನು ಕಾಣಬಹುದು. ಅತ್ಯಂತ ಕಲಾತ್ಮಕ ವಾಗಿರುವ ಈ ಮಂಟಪದ ಬಾಗಿಲುವಾಡದಲ್ಲಿ ಸಾಧಾರಣವಾದ ಏಕಶಾಖೆಯನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಪಾದದಲ್ಲಿ ಶೈವದ್ವಾರಪಾಲಕರ ಕೆತ್ತನೆಗಳಿವೆ. "ಕ್ರಿ.ಶ. ೧೭ನೇ ಶತಮಾನದಲ್ಲಿ ಸೂಜಿಗಲ್ಲನ್ನು ಮೊದಲ ರಾಜಧಾನಿಯಾಗಿ ಆಳಿದ ಸಿರುಮನಾಯಕನ ಆರಾಧ್ಯ ದೈವಗಳಲ್ಲಿ ಈ ಮೈಲಾರಲಿಂಗೇಶ್ವರ ಸ್ವಾಮಿಯು ಒಂದು. ಸಿರುಮನ ಸಾಂಗತ್ಯದಲ್ಲಿ ಸೂಜಿಗಲ್ಲು ಮೈಲಾರ ದೇವರನ್ನು 'ಕರಿಮುಖದ ಮೈಲಾರ' ಎಂದು ಸ್ತುತಿಸಲಾಗಿದೆ. ಸಿರುಮ ತನ್ನ ಮನೆದೈವ ಸೂಜಿಕಲ್ಲಿನ ಸೋಮೇಶ್ವರ ದೇವಾಲಯದಲ್ಲಿ ಒಂದು ಮೈಲಾರ ವಿಗ್ರಹ ಸ್ಥಾಪಿಸಿಕೊಂಡಿದ್ದನು. ಜಾತ್ರೆ-ಉತ್ಸವ ಹಾಗೂ ವಿಶೇಷ ಆಚರಣೆಗಳ ಸಂದರ್ಭದಲ್ಲಿ ಇದಕ್ಕೆ ಮೊದಲು ಪೂಜೆ ಸಲ್ಲಿಸಿ ನಂತರ ಮೈಲಾರಗುಡ್ಡದಲ್ಲಿರುವ 'ಮೈಲಾರ ದೇವರಿಗೆ' ಪೂಜೆ ಸಲ್ಲಿಸುವುದು ಇಲ್ಲಿನ ವಾಡಿಕೆಯಾಗಿದೆ. ವರ್ಷಕ್ಕೊಮ್ಮೆ ಇಲ್ಲಿ ಜರಗುವ ಅಂಬಿನೋತ್ಸವ, ಸರಪಳಿ ಪವಾಡ, ಶಸ್ತ್ರಪವಾಡ, ಬಗನೀಗೂಟ ಪವಾಡಗಳು ಹೆಸರುವಾಸಿ. ವಿಜಯದಶಮಿಯ ಮರುದಿನ ಮೈಲಾರ ಬೆಟ್ಟದ ತಪ್ಪಲಿನಲ್ಲಿ ಸಹಸ್ರಾರು ಭಕ್ತರೆದುರು ಈ ಮೇಲಿನ ಆಚರಣೆ, ಉತ್ಸವಗಳು ನಡೆಯುತ್ತವೆ."[೨] ಈ ಸಂದರ್ಭದಲ್ಲಿ ಭಕ್ತರೆಲ್ಲರು 'ಏಳುಕೋಟ್ ಏಳುಕೋಟಿ' ಜಯಕಾರ ಹಾಕುವುದು ಸಿಡಿಲಿನಂತೆ ಕೇಳುತ್ತದೆ.

ಒಟ್ಟಾರೆ ಸೂಜಿಕಲ್ ಮೈಲಾರವು ಸಾಂಸ್ಕೃತಿಕವಾಗಿ ಹೊಸದುರ್ಗ ತಾಲೂಕು ಅಲ್ಲದೆ ಇಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ಪ್ರಮುಖವಾದುದು.

೨೦

ಊರು	: ಶ್ರೀರಾಂಪುರ(ಬೂದಿಹಾಳು)	**ಸ್ಥಳ**	: ಗ್ರಾಮದ ಉತ್ತರ ಭಾಗದಲ್ಲಿ
ಸ್ಮಾರಕ	: ವೀರಭದ್ರ ದೇವಾಲಯ	**ಅಭಿಮುಖ**	: ಉತ್ತರ
ಕಾಲ	: ಕ್ರಿ.ಶ.ಸು. ೧೭ನೇ ಶತಮಾನ	**ಶೈಲಿ**	: ವಿಜಯನಗರ

ವೀರಭದ್ರ ದೇವಾಲಯದ ತಲನಕ್ಷೆಯಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಪ್ರಾಕಾರ ಮಂಟಪವನ್ನು ಒಳಗೊಂಡಿದೆ. ಅಂತರಾಳದ ಬಾಗಿಲುವಾಡವು ಸಾಧಾರಣವಾದ ಏಕಶಾಖೆಯನ್ನು ಒಳಗೊಂಡಿದೆ. ಲಲಾಟದಲ್ಲಿ ಪದ್ಮದ ಅಲಂಕಾರವಿದೆ. ನವರಂಗದಲ್ಲಿನ ಕಲಾತ್ಮಕವಾದ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಎರಡು ಭಾಗಗಳು

ಮಧ್ಯದಲ್ಲಿ ಅಷ್ಟ ಹಾಗೂ ಹದಿನಾರು ಕೋನಗಳು, ಕುಂಭ, ಲಶುನ, ಫಲಕ ಹಾಗೂ ಭೋದಿಗೆ ಇದೆ. ಕಂಬಗಳ ಚಚ್ಚೌಕದಲ್ಲಿ ವ್ಯಾಳಿ, ಬಸವ, ಶಿವಲಿಂಗ, ನಾಥಯೋಗಿ, ನವಿಲು ಮುಂತಾದವುಗಳು ರಚನೆಗೊಂಡಿವೆ. ನವರಂಗದ ಬಾಗಿಲುವಾಡದ ದ್ವಿಶಾಖೆಗಳಲ್ಲಿ ಪದ್ಮ ಹಾಗೂ ವಜ್ರದ ಅಲಂಕಾರಗಳಿವೆ. ಲಲಾಟದಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಗರ್ಭಗೃಹಯದ ಮೇಲೆ ಕದಂಬ ನಾಗರ(ಪಾಂಸಾನ) ಶಿಖರವಿದೆ. ಗರ್ಭಗೃಹದಲ್ಲಿ ಸುಮಾರು ೫ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದ್ದು ಇದು ಸಹ ವಿಜಯನಗರ ಕಾಲದ ಶೈಲಿಯನ್ನು ಒಳಗೊಂಡಿದೆ. ಇದರ ಲಕ್ಷಣದಲ್ಲಿ ಕಪಾಲಭೂಷಿತ ಕಿರೀಟ, ಸರ್ಪಕುಂಡಲ, ರುಂಡಗಳ ಮಾಲೆ, ಕಾಲುಗಗ್ಗರ, ಕೈಕಂಕಣ, ಯಜ್ಞೋಪವೀತ ಸಾಧನಗಳಿಂದ ಅಲಂಕೃತವಾಗಿದ್ದು ಕೈಗಳಲ್ಲಿ ಖಡ್ಗ, ಶೂಲ, ಬಿಲ್ಲು, ಟಂಕ ಹೊಂದಿದ್ದಾನೆ. ಬಲಬದಿಯಲ್ಲಿ ಆಡಿನ ತಲೆಯ ದಕ್ಷಬ್ರಹ್ಮನ ಶಿಲ್ಪವಿದೆ. ನವರಂಗದ ಒಂದು ಕೋಣೆಯಲ್ಲಿ ಗುಂಡುಬ್ರಹ್ಮಯ್ಯ ಶಿಲ್ಪ ಸುಮಾರು ೧.೫ ಅಡಿ ಎತ್ತರ, ೨ ಅಡಿ ಅಗಲವಿರುವ ಈ ಶಿಲ್ಪದ ಮಧ್ಯದಲ್ಲಿ ಎರಡು ಶೂಲಗಳಿವೆ. ಅವುಗಳ ಬಲಕ್ಕೆ ಎಡಕ್ಕೆ ಬಲಗೈಗಳಲ್ಲಿ ಸಣ್ಣ ಕತ್ತಿಗಳನ್ನು ಎತ್ತಿಹಿಡಿದು, ಇಷ್ಟ ಲಿಂಗವಿರುವ ಎಡಗೈಗಳಿಂದ ಶೂಲಗಳನ್ನು ಸ್ಪರ್ಶಿಸಿ ಗುಂಡಯ್ಯ ಬ್ರಹ್ಮಯ್ಯರು ನಿಂತಿದ್ದಾರೆ. ಎರಡೂ ಶೂಲಗಳಿಗೂ ಹೂಮಾಲೆ ಹಾಕಿರುವಂತೆ ಕೆತ್ತಲಾಗಿದೆ.[೬]

೨೧

ಊರು	: ಹೆಗ್ಗೆರೆ	**ಸ್ಥಳ**	: ಹೆಗ್ಗೆರೆ–ಓಬಳಾಪುರ ಮಾರ್ಗ
ಸ್ಮಾರಕ	: ಗಲಗೇಶ್ವರ ದೇವಾಲಯ	**ಅಭಿಮುಖ**	: ದಕ್ಷಿಣ
ಕಾಲ	: ಕ್ರಿ.ಶ.ಸು. ೧೩ನೇ ಶತಮಾನ	**ಶೈಲಿ**	: ಹೊಯ್ಸಳ

ಗಲಗೇಶ್ವರ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗವಿದೆ. ಗರ್ಭಗೃಹದಲ್ಲಿ ೩ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಬಾಗಿಲುವಾಡದಲ್ಲಿ ಗೋಪುರ ಮಾದರಿ ರಚನೆಗಳಿವೆ. ಅಂತರಾಳದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹಾಗೂ ಜಾಲಂದ್ರವನ್ನು ಒಳಗೊಂಡಿದೆ. ಜಾಲಂದ್ರವು ವಜ್ರದ ಅಲಂಕಾರವನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ನವರಂಗದಲ್ಲಿ ತಿರುಗಣೆ ರಚನೆಯ ಘಂಟಾಕಾರದ ಕಲಾತ್ಮಕವಾದ ಕಂಬಗಳು ಇವೆ. ಈ ಕಂಬಗಳ ಮಧ್ಯೆಭಾಗದಲ್ಲಿ ಭುವನೇಶ್ವರಿ ಇದೆ. ದೇವಾಲಯದ ಬಿತ್ತಿಯ ಹೊರ ಭಾಗದ ಅರೆಗಂಬಗಳ ರಚನೆಗಳಿವೆ. ಈ ದೇವಾಲಯವು ಹೊಯ್ಸಳ ದೊರೆ ಎರಡನೆ ನರಸಿಂಹನ ಕಾಲದ್ದಾಗಿದ್ದು ಈ ಕುರಿತು ಕ್ರಿ.ಶ. ೧೨೬೨ರ ಶಾಸನ ಆಧಾರವಿದೆ.[೪೪]

ಈ ಮೇಲೆ ಪ್ರಸ್ತಾಪಿಸಿರುವ ಹೊಸದುರ್ಗ ತಾಲೂಕು ಪರಿಸರ ಶೈವ ದೇವಾಲಯಗಳು ಕ್ರಿ.ಶ. ಸುಮಾರು ೯ನೇ ಶತಮಾನದಿಂದ ೧೮ನೇ ಶತಮಾನದ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿದೆ. ಇಲ್ಲಿನ ಅತ್ಯಂತ ಪ್ರಾಚೀನವಾದ ಶೈವ ದೇವಾಲಯ ಮಣಲಿಯ ಕಲ್ಲೇಶ್ವರ. ರಾಷ್ಟ್ರಕೂಟರ ಕಾಲದ ಈ ದೇವಾಲಯ ಇಟ್ಟಿಗೆಯ ರಚನೆಯದ್ದಾಗಿದೆ. ಇದು ಕ್ರಿ.ಶ. ೯–೧೦ನೇ ಶತಮಾನದ ರಚನೆಯಾಗಿದೆ. ಈ ಆಧಾರದಿಂದ ಕ್ರಿ.ಶ. ೯–೧೦ನೇ ಶತಮಾನದಿಂದಲೇ ಶೈವ ದೇವಲಯ

ಸಂಸ್ಕೃತಿಯ ಪ್ರಾಚೀನತೆಯನ್ನು ಗುರುತಿಸಬಹುದು. ನೀರಗುಂದ ಹೊಯ್ಸಳ ಕಾಲದ ಪ್ರಾಚ್ಯವಶೇಷಗಳನ್ನು ಹೊಂದಿರುವ ಪ್ರಮುಖ ಚಾರಿತ್ರಿಕ ಎಡೆಯಾಗಿದೆ. ಶಾಸನಗಳಲ್ಲಿ ಇದನ್ನು 'ಉದ್ಭವ ಸೋಮನಾಥಪುರ' ಹಾಗೂ 'ಉದ್ಭವ ನರಸಿಂಹಪುರ' ಎಂಬ ಅಗ್ರಹಾರವಾಗಿತ್ತೆಂದು ಹೇಳಲಾಗಿದೆ.[೨] ಇದಕ್ಕೆ ಸಾಕ್ಷಿಯಾಗಿ ನೀರಗುಂದದಲ್ಲಿ ರಾಮೇಶ್ವರ, ಸಿದ್ದೇಶ್ವರ ಹಾಗೂ ಚನ್ನಕೇಶವ ದೇವಾಲಯಗಳು ಕಂಡುಬರುತ್ತವೆ.[೩] ಇವುಗಳಲ್ಲಿ ರಾಮೇಶ್ವರ ಮತ್ತು ಸಿದ್ದೇಶ್ವರ ಪ್ರಮುಖ ಶೈವ ದೇವಾಲಯಗಳಾಗಿದ್ದು, ಸಿದ್ದೇಶ್ವರ ದೇವಾಲಯವು ಹೊಯ್ಸಳ ಕಾಲದಲ್ಲಿ ಹೆಚ್ಚು ದಾನ-ದತ್ತಿಯನ್ನು ಪಡೆದು ಆಶ್ರಯ ಹೊಂದಿತ್ತು. ಕ್ರಿ.ಶ. ೧೨೪೦ರಲ್ಲಿ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ 'ನಲ್ಲಸೆಟ್ಟಿ' ಎಂಬುವವನು ಸಿದ್ದೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಅಲ್ಲಿನ ಸೇವಾಕರ್ತರಾದ ಕಲ್ಯಾಣಜೀಯ, ಉಮಾಳಜೀಯ, ನಲ್ಲಜೀಯ ಈ ಮೂವರಿಗೆ ಧಾರಪೂರ್ವಕವಾಗಿ ಹಿರಿಯಕೆರೆಯ ಕೆಳಗಿನ ಗದ್ದೆ, ಕೊಂಡಜ್ಜಿ, ಆಸಂದಿ, ಬೇವಿನಹಳ್ಳಿ, ಆನೀವಾಳ, ಕುಂದೂರು ಗ್ರಾಮದ ಗದ್ದೆಗಳನ್ನು ಹಾಗೂ ಅನೇಕ ರೀತಿಯ ಸಂತೇ ಆಯಾಗಳನ್ನು ಬಿಟ್ಟುಕೊಟ್ಟನು.[೪] ಈ ದೇವಾಲಯದ ಸೇವಾಕರ್ತರಾದ ಕಲ್ಯಾಣಜೀಯ, ಉಮಾಳಜೀಯ, ನಲ್ಲಜೀಯ ವ್ಯಕ್ತಿನಾಮಗಳನ್ನು ಗಮನಿಸಿದರೆ ಬಹುಶಃ ಇವರು ಪಾಶುಪತ ಅಥವಾ ಕಾಳಮುಖ ಸಂಪ್ರದಾಯದ ಆಚಾರ್ಯಗಳಾಗಿದಂತೆ ಕಂಡುಬರುತ್ತದೆ. ಇನ್ನು ಸಿದ್ದೇಶ್ವರನನ್ನು ಸಿದ್ಧನಾಥ ಎಂದು ಕರೆದಿರುವುದು, ದೇವಾಲಯದ ಹೊರ ಭಾಗದಲ್ಲಿ ಒಮದು ನಗ್ನ ಭೈರವ ಮೂರ್ತಿ ಶಿಲ್ಪವಿರುವುದು ಇಲ್ಲಿ ಇದ್ದಿರಬಹುದಾದ ನಾಥ ಸಂಪ್ರದಾಯದ ಪ್ರಾಚೀನ ಕುರುಹನ್ನು ಸೂಚಿಸುವಂತಿದೆ. ಒಟ್ಟಾರೆ ಇಲ್ಲಿನ ದೇವಾಲಯ ಹಾಗೂ ಶಾಸನಗಳು ಕ್ರಿ.ಶ. ೧೦-೧೧ನೇ ಶತಮಾನಕ್ಕಾಗಲೇ ಹೊಯ್ಸಳ ಕಾಲದಲ್ಲಿ ನೀರಗುಂದ ಪರಿಸರದಲ್ಲಿ 'ನಾಥಪಂಥ' ಅಸ್ಥಿತ್ವ ಹೊಂದಿದ್ದ ಅಮೂಲಾಗ್ರ ವಿಚಾರಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಹೊಯ್ಸಳ ಕಾಲದ ಮತ್ತೊಂದು ಪ್ರಮುಖ ಶೈವ ದೇವಾಲಯವೆಂದರೆ ಚಿಕ್ಕಯಗಟಿಯ ಈಶ್ವರ ದೇವಾಲಯ. ಕ್ರಿ.ಶ. ೧೯೪ರ ಹೊಯ್ಸಳ ದೊರೆ ಪ್ರತಾ ಚಕ್ರವರ್ತಿಯ ಶಾಸನದಲ್ಲಿ ದೇವರನ್ನು 'ಧರ್ಮೇಶ್ವರ' ಎಂದು ಕರೆಯಲಾಗಿದ್ದು, ದೇವಾಲಯಕ್ಕೆ ಮಾವಿನ ಕೆರೆಯ ತೋಟವನ್ನು ಹಾಗೂ ಅನೇಕ ರೀತಿಯ ತೆರಿಗೆಯ ದತ್ತಿಗಳನ್ನು ನೀಡಲಾಗಿದೆ.[೫] ಅದೇ ರೀತಿ ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡ ಹೆಗ್ಗೆರೆಯ ಕಲ್ಲೇಶ್ವರ ಹಾಗೂ ಗಲಗೇಶ್ವರ ದೇವಾಲಯಗಳು ಶಾಸನೋಕ್ತವಾಗಿವೆ. ಈ ಎರಡೂ ದೇವಾಲಯಗಳು ಕ್ರಿ.ಶ. ೧೨೩೦ರಲ್ಲಿ ಎರಡನೆ ನರಸಿಂಹನ ಕಾಲದಲ್ಲಿ ನಿರ್ಮಾಣಗೊಂಡಂತೆ ಕಂಡುಬರುತ್ತದೆ.[೬]

ವಿಜಯನಗರ ಕಾಲದಲ್ಲೂ ಇಲ್ಲಿ ಶೈವ ದೇವಾಲಯಗಳ ನಿರ್ಮಾಣ, ಪಾಲನೆ-ಪೋಷಣೆ, ಸಾಂಸ್ಕೃತಿಕ ಅಂಶಗಳು ಇತ್ಯಾದಿ ಅಂಶಗಳನ್ನು ವಿಶ್ಲೇಷಿಸಬಹುದು. ಗರಗದ ಈಶ್ವರ ದೇವಾಲಯವು ವಿಜಯನಗರ ಕಾಲದ ಪ್ರಮುಖ ಶೈವ ದೇವಾಲಯಗಳಲ್ಲಿ ಒಂದು. ದ್ವಿಕುಟಾಚಲವಾಗಿರುವ ಈ ದೇವಾಲಯದ ನವರಂಗದ ಮೇಲೆ ಬಹುಮುಖ್ಯವಾಗಿ ಶೈವ ಉಬ್ಬುಶಿಲ್ಪಗಳು ಗಮನ ಸೆಳೆಯುತ್ತವೆ. ಇವುಗಳಲ್ಲಿ ಅತ್ಯಂತ ವಿಶಿಷ್ಟವಾದ 'ಮಚೇಂದ್ರನಾಥ'ನ ಉಬ್ಬುಶಿಲ್ಪ. ಅದೇ ರೀತಿ ದೇವಾಲಯದ ಗರ್ಭಗೃಹದ ಮೇಲೆ ಕಂಬನಾಗರ(ಪಾಂಸಾನ)ಶಿಖರದಲ್ಲಿ ಒಬ್ಬ 'ನಾಥಯೋಗಿ'ಯ

ಶಿಲ್ಪವಿದೆ. ಸೂಜಿಕಲ್ ಮೈಲಾರದ ಮೈಲಾರ ಲಿಂಗೇಶ್ವರ ದೇವಾಲಯದ ಸ್ಮಾರಕಗಳು ವಿಜಯನಗರ ಕಾಲದವುಗಳಾಗಿದ್ದು, ಗರ್ಭಗೃಹದ ಭೈರವ ಹಾಗೂ ಭೈರವಿ ಮೂರ್ತಿಶಿಲ್ಪಗಳನ್ನು ಮೈಲಾರ ಹಾಗೂ ಗಂಗಿಮಾಳವ್ವ ಎಂದು ಕರೆಯಲಾಗುವುದು; ಈ ದೇವಾಲಯದ ಎದುರಿಗೆ ಸುಮಾರು ೫ ಅಡಿ ಎತ್ತರದ ಕಲ್ಲಿನ ತ್ರಿಶೂಲವಿದೆ. ಅಲ್ಲದೆ ದೇವಾಲಯದ ಒಂದು ದೀಪಸ್ತಂಬದ ಮೇಲೆ 'ಮಚೇಂದ್ರನಾಥ'ನ ಉಬ್ಬುಶಿಲ್ಪವಿದೆ. ಒಟ್ಟಾರೆ ವಿಜಯನಗರ ಕಾಲದ ಈ ಎರಡು ದೇವಾಲಯಗಳು ನಾಥ ಪಂಥದ ವಜ್ರಯಾನ ಹಾಗೂ ಕಾಪಾಲಿಕ ಪಂಥಗಳ ಪ್ರಭಾವವನ್ನು ಹೊಂದಿದ್ದವು ಎಂಬ ಅಂಶಗಳು ಗೋಚರಿಸುತ್ತವೆ.

ವಿಜಯನಗರೋತ್ತರ ಕಾಲದಲ್ಲಿ ಶೈವಧರ್ಮದ ಪ್ರಾಬಲ್ಯ ಕುಂಠಿತಗೊಂಡಿತು. ಈ ಕಾಲಘಟ್ಟದಲ್ಲಿ ಶೈವ ದೇವಾಲಯಗಳ ನಿರ್ಮಾಣ ಕಡಿಮೆಯಾಗಿ 'ವೀರಶೈವ' ಧರ್ಮದ ಪ್ರಾಬಲ್ಯ ಹೆಚ್ಚಾಗಿ ವೀರಶೈವ ಮಠ ಪರಂಪರೆ ಬೆಳೆದು ಬಂದಿತು. ಹೀಗಿದ್ದೂ ಕೆಲವು ಕಡೆ ಪಾಳೆಯಗಾರರ ಕಾಲದಲ್ಲಿ ಈಶ್ವರ ಹಾಗೂ ವೀರಭದ್ರ ದೇವಾಲಯಗಳು ನಿರ್ಮಾಣಗೊಂಡಿವೆ. ಈ ಕುರಿತು ಮತ್ತೋಡು ಹಾಗೂ ಬೂದಿಹಾಳು ಪಾಳೆಯಗಾರರನ್ನು ಗಮನಿಸಬಹುದಾಗಿದೆ. ಕ್ರಿಶ. ೧೬೦೪ರಿಂದ ೧೭೭೯ರವರೆಗೆ ೧೭೫ ವರ್ಷಗಳ ಕಾಲ ಆಳಿದ ಮತ್ತೋಡು ಪಾಳೆಯಗಾರರು ಹೊಸದುರ್ಗ ತಾಲೂಕಿನ ಸಾಂಸ್ಕೃತಿಕ ಚರಿತ್ರೆಗೆ ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು. ಪ್ರಾರಂಭದಲ್ಲಿ ಬೇಡಕುಲದವರಾಗಿದ್ದ ಇವರು ದೊಡ್ಡ ಹಾಲಪ್ಪನಾಯಕನ ಕಾಲದಲ್ಲಿ ಲಿಂಗಧಾರಣೆ ಮಾಡಿಕೊಂಡು ವೀರಶೈವರಾದರು, ಇದಕ್ಕೆ ಕಾರಣ ಮತ್ತೋಡು ಪಾಳೆಯಗಾರರಿಗೆ ಉಣ್ಣುವ ಅನ್ನದಲ್ಲಿ ಒಂದು ತುತ್ತಿನ ನಂತರ ಮುಂದಿನ ತುತ್ತಿಗೆ ಹುಳುಗಳು ಸಿಗುತ್ತಿದ್ದವು; ಇದು ಒಂದು ರೀತಿಯಲ್ಲಿ ಶಾಪದಂತೆ ಕಾಡುತ್ತಿದ್ದಾಗ, ಶ್ರೀಶೈವದ ಕಡೆಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳ ಕೃಪೆಯಿಂದ ಈ ತೊಂದರೆ ನಿವಾರಣೆಯಾದ್ದರಿಂದ ಆ ಸ್ವಾಮಿಗಳ ಮೇಲೆ ಅಪಾರ ಭಕ್ತಿ ವಿಶ್ವಾಸಗಳು ಮೂಡಿ ಅವರಿಗೆ ಮಠ ಕಟ್ಟಿಸಿಕೊಟ್ಟರು.[೭೦] ದೊಡ್ಡ ಹಾಲಪ್ಪನಾಯಕ ಚಿತ್ರದುರ್ಗದ ಪ್ರಸಿದ್ಧ ವೀರಶೈವ ಮಠವಾದ ಮುರಿಗೆ ಮಠ ಹಾಗೂ ಅದರ ಗುರುಗಳ ಬಗ್ಗೆ ವಿಶೇಷ ಶ್ರದ್ಧಾ ಭಕ್ತಿಗಳನ್ನು ಹೊಂದಿದದನು; ಆದಕಾರಣ ತನ್ನ ತಂದೆ ತಾಯಿಗಳಿಗೆ ಶಿವಸಾನಿಧ್ಯವಾಗಲೆಂದು ಮುರಿಗಾ ಸ್ವಾಮಿಗಳಿಗೆ ಮಠವೊಂದನ್ನು ಕಟ್ಟಿಸಿ ಅದರ ಪಾಲನೆಗಾಗಿ ಅರೆಹಳ್ಳಿ ಗ್ರಾಮವನ್ನು ದತ್ತಿ ಕೊಟ್ಟನು.[೭೧] ಅದೇ ರೀತಿ ಸಂಗಪ್ಪನಾಯಕನು ಮುರಿಗಾ ಸ್ವಾಮಿ ಮಠ, ಚಿತ್ರಮಠ ಹಾಗೂ ಗೂಳಿಹಳ್ಳಿ ಹೊಸಮಠಗಳನ್ನು ಕಟ್ಟಿಕೊಟ್ಟನು.[೭೨] ಹಾಲಪ್ಪನಾಯಕನು ಮತ್ತೋಡಿನಲ್ಲಿ ಮುರಿಗಾಸ್ವಾಮಿಗಳ ಮಠವನ್ನು ಕಟ್ಟಿಸಿದನು.[೭೩] ಅದೇ ರೀತಿ ಮತ್ತೋಡಿನಲ್ಲಿ ಸಿದ್ಧರಾಮ ಅನೇಕ ವೀರಶೈವ ದೇವಾಲಯಗಳ ನಿರ್ಮಾಣಕ್ಕೆ ಕಾರಣೀಭೂತನಾದನು. ಒಂದು ಶಾಸನದಲ್ಲಿ ಹಾಲಪ್ಪನಾಯಕನು 'ಶೈವಶಾಸ್ತ್ರ ಪಾರಂಗತ' ಎಂದು ಕರೆಯಲಾಗಿದೆ.[೭೪] ಹೀಗೆ ಮತ್ತೋಡು ನಾಯಕ ಅರಸರು ಇಲ್ಲಿನ ವೀವಶೈವ ಧರ್ಮ ಹಾಗೂ ಮಠ ಪರಂಪರೆಗೆ ಕೊಟ್ಟ ಕೊಡುಗೆಗಳನ್ನು ತಿಳಿಯಬಹುದಾಗಿದೆ.

ಕ್ರಿ.ಶ. ೧೫ನೇ ಶತಮಾನದಲ್ಲಿ ಬೂದಿಹಾಳನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಪಾಳೆಯಗಾರರ ಸಿರುಮನಾಯಕ ಮೂಲತಹ ಗೊಲ್ಲ ಜನಾಂಗದವನಾಗಿದ್ದು, ಮಧ್ಯಕಾಲದಲ್ಲಿ ವಿಜಯನಗರದ ದೊರೆ ಪ್ರೌಢದೇವರಾಯನು ವೀರಶೈವ ಧರ್ಮದವನಾಗಿದ್ದು ಅದರ ಪ್ರಭಾವದಿಂದ ಹಾಗೂ ಬೂದಿಹಾಳಿನಲ್ಲಿ ನಿರಾಸೆಯ ಮಠ ಎಂಬ ವೀರಶೈವ ಮಠದ ಅಸ್ತಿತ್ವ ಈ ರೀತಿಯ ಕಾರಣದಿಂದ ಸಿರುಮನಾಯಕನು ವೀರಶೈವ ಧರ್ಮವನ್ನು ಸ್ವೀಕರಿಸಿ ತನ್ನ ರಾಜ್ಯ ವ್ಯಾಪ್ತಿಯಲ್ಲಿ ಅದಕ್ಕೆ ಸಂಬಂಧಿಸಿದ ದೇವಾಲಯಗಳು ಹಾಗೂ ಮಠಗಳ ನಿರ್ವಹಣೆಗೆ ಸಾಕಷ್ಟು ಆಶ್ರಯ ನೀಡಿದ್ದನು.[೫೫] ಇವನನ್ನು ಕುರಿತು ಸಾಹಿತ್ಯ ಗ್ರಂಥಗಳಲ್ಲಿ 'ಹರನಭಕ್ತ', 'ಕುಂತುಹರನ ಭಕ್ತ' ಎಂದೆಲ್ಲಾ ಕರೆದಿರುವುದೇ ಇವನ ವೀರಶೈವತ್ವವನ್ನು ಕುರಿತು ಸೂಚಿಸುತ್ತದೆ.[೫೬] ಬೂದಿಹಾಳಿನ ಸೋಮಲ್, ವೀರಭದ್ರ ದೇವರುಗಳಿಗೂ ನಿರಾಶೆಯ ಮಠಕ್ಕೂ ಈತ ನಡೆದುಕೊಳ್ಳುತ್ತಿದ್ದು, ಗುರುಸೇವೆ, ಜಂಗಮ ದಾಸೋಹ ಹೆಚ್ಚಾಗಿದ್ದು, ಬೂದಿಹಾಳು 'ಪ್ರಥಮ ಕಲ್ಯಾಣ' ವೆನಿಸಿತ್ತು ಅಲ್ಲದೆ ಈಶ್ವರ, ಬಸವಣ್ಣ, ಗಣಪತಿ, ಭೈರವ, ಮೈಲಾರಲಿಂಗ ಮುಂತಾದ ದೇವಾಲಯಗಳನ್ನು ಪೋಷಿಸುತ್ತಿದ್ದನೆಂದು ಹೇಳಲಾಗಿದೆ.[೫೭] ಹೀಗೆ ವಿಜಯನಗರೋತ್ತರ ಕಾಲದಲ್ಲಿ ಮತ್ತೋಡು ಹಾಗೂ ಬೂದಿಹಾಳು ಅರಸರು ಈ ಪರಿಸರದಲ್ಲಿ ವೀರಶೈವ ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವುದರ ಮೂಲಕ ದೇವಾಲಯ ಹಾಗೂ ಮಠಗಳ ನಿರ್ಮಾಣ, ಪಾಲನೆ–ಪೋಷಣೆ ಮಾಡಿರುವುದು ಶಾಸನ ಹಾಗೂ ಸಾಹಿತ್ಯ ಆಕರಗಳು ಅರಹುತ್ತವೆ.

ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದಲ್ಲಿನ ಶೈವ ದೇವಾಲಯ ಪರಂಪರೆಯನ್ನು ಕ್ರಿ.ಶ. ೯ನೇ ಶತಮಾನದಿಂದ ಕ್ರಿ.ಶ. ೧೬ನೇ ಶತಮಾನದ ಕಾಲಘಟ್ಟದಲ್ಲಿ ಕಾಣಬಹುದು. ಇಲ್ಲಿನ ಶೈವ ದೇವಾಲಯಗಳಲ್ಲಿ ನಾಥ ಪಂಥದ ಕಾಪಾಲಿಕ ಹಾಗೂ ವಜ್ರಯಾನ ಪಂಥಗಳ ಪ್ರಭಾವವನ್ನು ಗುರುತಿಸಬಹುದು.

೫.೧.೨. ವೈಷ್ಣವ ದೇವಾಲಯಗಳು

ಋಗ್ವೇದದ ಕಾಲದಲ್ಲಿ ರುದ್ರನೇ ಪ್ರಧಾನದೇವತೆಯಾಗಿದ್ದು ವಿಷ್ಣುವಿನ ಸ್ಥಾನ ಗೌಣವಾಗಿತ್ತು.[೫೮] ಸವಿತೃ, ಪೊಷನ್, ಸೂರ್ಯ, ವಿಷ್ಣು, ಭಗ, ಆರ್ಯಮನ್ ಎಂಬ ಸೂರ್ಯನ ಅಂಶಗಳಲ್ಲಿ ವಿಷ್ಣುವೂ ಒಬ್ಬನು. ವೇದದಲ್ಲಿ ಐದಾರು ಸೂಕ್ತಗಳಲ್ಲಿ ವಿಷ್ಣು ವರ್ಣನೆ ಇದೆ. ಇವನು ಮೂರು ಹೆಜ್ಜೆಗಳಲ್ಲಿ ಪೃಥ್ವಿ, ಅಂತರಿಕ್ಷ, ಆಕಾಶಗಳನ್ನು ಕ್ರಮಿಸುವನು.[೫೯] ಮಹಾಕಾವ್ಯಗಳ ಕಾಲದಲ್ಲಿ ವಿಷ್ಣುವು ಪರಮದೇವತೆಯಾಗಿ ಪರಿಣಮಿಸಿದನು. ವೈದಿಕ ಧರ್ಮವು ವರ್ಣಾಶ್ರಮ ಧರ್ಮವನ್ನು ಯಜ್ಞಯಾಗಾದಿ ಪ್ರಕ್ರಿಯೆಗಳನ್ನು ಪುರಷ್ಕರಿಸಿದ್ದಷ್ಟೇ. ಅದರ ಜತೆಗೆ ಬೆಳೆದುಬಂದ ಇನ್ನೊಂದು ಧರ್ಮ ಭಾಗವತ. ಋಗ್ವೇದ ಕಾಲದಲ್ಲಿ ಅಪ್ರಧಾನ ದೇವತೆಯಾಗಿದ್ದ ವಿಷ್ಣುವು ಭಾಗವತ ಕಾಲದಲ್ಲಿ ಭಗವಂತನ ಸ್ಥಾನಕ್ಕೇರಿದ ಮೇಲೆ, ಭಾಗವತ ಧರ್ಮಕ್ಕೆ 'ವೈಷ್ಣವ ಧರ್ಮ' ಎಂಬ ಹೆಸರು ಪ್ರಾಪ್ತವಾಯಿತು.[೬೦] ವೈಷ್ಣವ ಧರ್ಮದಲ್ಲಿ ವಿಷ್ಣುವೇ ಪ್ರಧಾನ ದೇವತೆ. ತ್ರಿಮೂರ್ತಿಗಳಲ್ಲಿ ಇವನು ಎರಡನೇಯವನು, ಜಗತ್ತಿನ ರಕ್ಷಣೆಯು ಇವನ ಕಾರ್ಯ. ಕ್ರಿಪೂ. ೨೦೦ರ ಸುಮಾರಿಗೆ ಸೇರಬಹುದಾದ, ರಜಪೂತಾನದಲ್ಲಿರುವ ಘೋಸುಂಡಿ ಸ್ಥಳದಲ್ಲಿ ದೊರೆತ ಶಿಲಾಲೇಖದಲ್ಲಿ ಸಂಕರ್ಷಣ ವಾಸುದೇವರ ಹೆಸರಿವೆ. ಬೆಸ್ನಗರದಲ್ಲಿ ದೊರೆತ ಇನ್ನೊಂದು ಶಾಸನದಿಂದ

ಹಿಲಿಯೋಡೋರ ಎಂಬುವನು ದೇವದೇವನಾದ ವಾಸುದೇವನಿಗಾಗಿ ಗರುಡ ಧ್ವಜವನ್ನು ನಿಲ್ಲಿಸಿದಂತೆ ಹೇಳಿದೆ. ಕಾಲಮಾನ ಕ್ರಿಪೂ. ೧೨೦ಕ್ಕೆ ಸೇರಬಹುದಾಗಿ ಹೇಳಲಾಗಿದೆ.[೧]

ದಕ್ಷಿಣ ಭಾರತದಲ್ಲಿಯೂ ಕ್ರಿ.ಶ.ಕ್ಕಿಂತ ಪೂರ್ವದಲ್ಲಿಯೇ ವೈಷ್ಣವ ಧರ್ಮ ಇದ್ದಿತೆಂದು ನಾನಾಘಾಟ್ ಶಾಸನದಿಂದ ತಿಳಿದು ಬರುತ್ತದೆ.[೨] ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯ ಅತ್ಯಂತ ಪ್ರಾಚೀನವಾದ ಕ್ರಿ.ಶ. ೪೫೦ರ ಕದಂಬ ದೊರೆ ಕಾಕುಸ್ಥವರ್ಮನ ಹಲ್ಮಿಡಿ ಶಾಸನವು ವಿಷ್ಣುಸ್ತುತಿಯಿಂದ ಪ್ರಾರಂಭವಾಗಿದೆ.[೩] ಗಂಗಕುಲದ ಒಂದನೆಯ ಮಾಧವನು 'ದೇವದ್ವಿಜ ಗುರುಪೂಜನ ಪ್ರಣೀತ ಜನಾನುರಕ್ತ ಗುರು ಗೋಬ್ರಾಹ್ಮಣ ಪೂಜಕ'ನೆಂದು ವರ್ಣಿತನಾಗಿದ್ದಾನೆ. ಕ್ರಿ.ಶ. ೭ನೇ ಶತಮಾನದಲ್ಲಿ ಪ್ರಸಿದ್ಧಿಗೆ ಬಂದವನಾದ ಗಂಗ ಶ್ರೀಪುರುಷನು 'ನಾರಾಯಣ ಚರಣಾನುಧ್ಯಾತ' ನೆಂದು ಕೀರ್ತಿತನಾಗಿದ್ದಾನೆ. ಕ್ರಿ.ಶ. ೬ನೇ ಶತಮಾನದಲ್ಲಿ 'ಮಹಾಭಾಗವತ'ನಾದ ಬಾದಾಮಿ ಚಾಲುಕ್ಯರ ಮಂಗಳೇಶನು ಬಾದಾಮಿಯಲ್ಲಿ ಪ್ರಸಿದ್ಧವಾದ ವೈಷ್ಣವ ಗುಹಾಂತರ ದೇವಾಲಯವನ್ನು ಕೊರೆಯಿಸಿದನು.[೪] ಕರ್ನಾಟಕದ ಪ್ರಮುಖ ರಾಜಮನೆತನಗಳಲೊಂದಾದ ಹೊಯ್ಸಳರು ಸರ್ವಧರ್ಮಕ್ಕೆ ವಿಶೇಷ ಮನ್ನಣೆಯನ್ನು ನೀಡಿದರು. ಕ್ರಿ.ಶ. ೧೧೧೭ರಲ್ಲಿ ವಿಷ್ಣುವರ್ಧನನು ಜೈನಧರ್ಮವನ್ನು ತ್ಯಜಿಸಿ ವೈಷ್ಣವ ಧರ್ಮವನ್ನು ಸ್ವೀಕರಿಸಿ ತನ್ನ ರಾಜ್ಯದಲ್ಲಿ ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದನು.[೫] ವಿಷ್ಣುವರ್ಧನನು ವೈಷ್ಣವ ಧರ್ಮಕ್ಕೆ ಮತಾಂತರಗೊಳ್ಳುವಲ್ಲಿ ತಮಿಳುನಾಡಿನಿಂದ ಕರ್ನಾಟಕಕ್ಕೆ ಆಗಮಿಸಿದ ರಾಮಾನುಜಾಚಾರ್ಯ ಪಾತ್ರ ಮುಖ್ಯವಾದುದು.[೬] ಹೀಗೆ ಕರ್ನಾಟಕಕ್ಕೆ ಬಂದ ರಾಮಾನುಜಾಚಾರ್ಯರು ವಿಷ್ಣುವರ್ಧನನ ಪ್ರೋತ್ಸಾಹವನ್ನು ಪಡೆದು ಶ್ರೀವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ರಾಮಾನುಜರ ಅನುಯಾಯಿಗಳನ್ನು ಶ್ರೀವೈಷ್ಣವರು ಎಂದು ಕರೆಯುತ್ತಾರೆ.[೭] ರಾಮಾನುಜರಿಂದ ವೈಷ್ಣವ ದೀಕ್ಷೆಯನ್ನು ಕೇವಲ ವಿಷ್ಣುವರ್ಧನನು ಮಾತ್ರವಲ್ಲದೇ ಅವನ ರಾಣಿ ಶಾಂತಲದೇವಿಯು ಸಹ ಪಡೆದಳು.[೮] ತಾವು ವೈಷ್ಣವ ಧರ್ಮವನ್ನು ಅಪ್ಪಿದುದರ ಸ್ಮಾರಕವಾಗಿ ವಿಷ್ಣುವರ್ಧನ ಮತ್ತು ಶಾಂತಲೆ ಬೇಲೂರಿನಲ್ಲಿ ಚನ್ನಕೇಶವ ದೇವಾಲಯವನ್ನು ಕಟ್ಟಿಸುತ್ತಾರೆ.[೯]

ವಿಜಯನಗರ ಕಾಲದಲ್ಲಿ ಸಾಳುವ, ತುಳುವ ಹಾಗೂ ಅರವೀಡು ಮನೆತನಗಳು ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದರು. ಅದರಲ್ಲೂ ಕೃಷ್ಣದೇವರಾಯನು ಸಾಮ್ರಾಜ್ಯದ ಬಹುಭಾಗಗಳಲ್ಲಿ ವೈಷ್ಣವ-ಶ್ರೀವೈಷ್ಣವ ಪಂಥದ ದೇವಾಲಯಗಳ ನಿರ್ಮಾಣಕಾರ್ಯ ಮಾಡಿರುವುದು ಶಾಸನಾಧಾರಗಳಿಂದ ಮನಗಾಣಬಹುದು.[೧೦] ಕೃಷ್ಣದೇವರಾಯನು ರಾಜಧಾನಿ ಹಂಪಿಯಲ್ಲಿ ಉಗ್ರನರಸಿಂಹ, ಹಜಾರರಾಮ, ವಿಜಯವಿಠಲ, ಅನಂತಶಯನ, ಕೋದಂಡರಾಮ, ರಘುನಾಥ ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ಅಪಾರ ದಾನ-ದತ್ತಿಗಳನ್ನು ನೀಡಿ ಪೋಷಿಸಿದನು.[೧೧] ವಿಜಯನಗರೋತ್ತರ ಕಾಲದಲ್ಲಿ ಕರ್ನಾಟಕದಲ್ಲಿ ಪಾಳೆಯಗಾರರು ಬಹುತೇಕವಾಗಿ ಶ್ರೀವೈಷ್ಣವ ದೇವಾಲಯಗಳನ್ನು ನಿರ್ಮಿಸಿ ಪೋಷಿಸಿಕೊಂಡು ಬಂದುದು ತಿಳಿದುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕು ಪರಿಸರದಲ್ಲಿ ಸಾಕಷ್ಟು ವೈಷ್ಣವ ದೇವಾಲಯ ಗಳು ನಿರ್ಮಾಣಗೊಂಡಿವೆ. ಈ ತಾಲೂಕು ಪರಿಸರದಲ್ಲಿ ಹೊಯ್ಸಳ, ವಿಜಯನಗರ ಹಾಗೂ

ಪಾಳೆಯಗಾರರ ಕಾಲದಲ್ಲಿ ವೈಷ್ಣವ ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಪ್ರಮುಖ ವೈಷ್ಣವ ದೇವಾಲಯಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

೧.

ಊರು	: ಬಾಗೂರು	**ಸ್ಥಳ**	: ಗ್ರಾಮದ ಪ್ರಾರಂಭದಲ್ಲಿ
ಸ್ಮಾರಕ	: ಚನ್ನಕೇಶವ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೩ನೇ ಶತಮಾನ	**ಶೈಲಿ**	: ಹೊಯ್ಸಳ

ಹೊಸದುರ್ಗದಿಂದ ಪೂರ್ವಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿರುವ ಬಾಗೂರು ಗ್ರಾಮದಲ್ಲಿ ಪ್ರಾಚೀನವಾದುದು ಚನ್ನಕೇಶವ ದೇವಾಲಯ. ಶಾಸನಗಳಲ್ಲಿ 'ಬಾಗೆಊರು', 'ಬಾಗೂರು', 'ಬಾಗೂರು ಚರಂತಿ', 'ಬಾರೂರು ಸೀಮೆ', 'ಭಾಗ್ಯಪುರ' ಎಂದು ಜಾನಪದದಲ್ಲಿ 'ಸಣ್ಣಕ್ಕಿ ಬಾಗೂರು' ಮುಂತಾಗಿ ಕರೆಯಲಾಗಿದೆ.[೮] ಚನ್ನಕೇಶವ ದೇವಾಲಯವು ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡಿದ್ದು, ವಿಜಯನಗರದ ಅರಸರು ಹಾಗೂ ಪಾಳೆಯಗಾರರ ಕಾಲದಲ್ಲಿ ವಿಸ್ತಾರಗೊಂಡಿದೆ.

ಚನ್ನಕೇಶವ ದೇವಾಲಯವು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದ್ದು, ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪ ಇದೆ. ದೇವಾಲಯದ ಬಲಭಾಗದಲ್ಲಿ ಕಲ್ಲಿನ ಪ್ರಾಂಗಣವಿದೆ. ದೇವಾಲಯದ ಎಡಭಾಗದಲ್ಲಿಯೂ ಕಲ್ಲಿನ ಪ್ರಾಂಗಣವಿದ್ದಿರಬಹುದಾದ ಸಾಧ್ಯತೆ ಇದೆ. ದೇವಾಲಯದ ಆಗ್ನೇಯ ಭಾಗದಲ್ಲಿ ಲಕ್ಷ್ಮೀ ದೇವಿಯ ದೇವಾಲಯವಿದೆ. ದೇವಾಲಯಕ್ಕೆ ದ್ವಾರಮಂಟಪವಿದ್ದು ಗೋಪುರ ಅಪೂರ್ಣಗೊಂಡಿದೆ. ದೇವಾಲಯದ ಮುಂಭಾಗದಲ್ಲಿ ಗರುಡಗಂಭ, ಉಯ್ಯಾಲೆಕಂಬ, ತುಳಸಿಕಟ್ಟೆ ಇವೆ. ಚಚ್ಚೌಕದ ಗರ್ಭಗೃಹದಲ್ಲಿ ಪೀಠದ ಮೇಲೆ ನಾಲ್ಕು ಅಡಿ ಎತ್ತರದ ವಿಷ್ಣುವಿನ ಸ್ಥಾನಿಕ ಶಿಲ್ಪವಿದೆ. ಚನ್ನಕೇಶವ ಶಿಲ್ಪದ ರಚನೆಯಲ್ಲಿ ತನ್ನ ಕೈಯಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹೊಂದಿದ್ದು ಕಿರೀಟ, ಕೀಯಾರ, ಕಂಠೀಹಾರ, ಭಂಜಬಂಧ, ಸ್ಕಂದಮಾಲೆ, ಉದರಬಂಧ, ಯಜ್ಞೋಪವೀತ, ವೈಜಯಂತಿ, ಕೈಬಳೆ, ಕಾಲ್ಗಡಗ ಮುಂತಾದವುಗಳನ್ನು ಧರಿಸಿದ್ದಾರೆ. ಸೊಂಟದ ಬಿಗಿತ ಪಾದದವರೆಗೂ ಇದೆ. ಬದಿಯಲ್ಲಿ ಶ್ರೀದೇವಿ ಮತ್ತು ಭೂದೇವಿಯರು ತ್ರಿಭಂಗಿಯಲ್ಲಿ ನಿಂತಿರುವರು. ಗರ್ಭಗೃಹದ ಮುಂಭಾಗದಲ್ಲಿ ಆಯತಾಕಾರದ ಅಂತರಾಳವಿದೆ. ಇಲ್ಲಿ ರಾಮ, ಲಕ್ಷ್ಮಣ, ಸೀತೆಯ ಉತ್ಸವ ಮೂರ್ತಿಶಿಲ್ಪಗಳಿವೆ. ಅಂತರಾಳದ ಬಲಭಾಗದಲ್ಲಿರುವ ಚಿಕ್ಕಕೋಣೆಯಲ್ಲಿ ಆಳ್ವಾರರುಗಳಾದ ನಮ್ಮಾಳ್ವರ್, ಚಕ್ರಾಳ್ವರ್ ಅವರುಗಳ ಕಂಚಿನ ಎರಕದ ಮೂರ್ತಿಗಳಿವೆ. ಅಂತರಾಳದ ಪ್ರವೇಶದ್ವಾರದಲ್ಲಿ ಆಳೆತ್ತರದ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು ಇವರು ಶಂಖ, ಚಕ್ರ, ಗಧಾ ಮತ್ತು ಅಭಯಗಳನ್ನು ಹೊಂದಿರುವರು. ನಂತರ ನವರಂಗದಲ್ಲಿ ಸ್ವತಂತ್ರವಾದ ನಾಲ್ಕು ಕಂಬಗಳಿವೆ. ನವರಂಗವು ಒಂಭತ್ತು ಅಂಕಣಗಳನ್ನು ಒಳಗೊಂಡಿದ್ದು ಮಧ್ಯದ ಅಂಕಣದಲ್ಲಿ ವಿತಾನದಲ್ಲಿ ಪದ್ಮದ ಅಲಂಕಾರವಿದೆ. ನವರಂಗದ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಒಂದು ಭಾಗ, ಬಹುಮುಖದಿಂಡು, ಫಲಕ ಮತ್ತು ಸರಳ

ಭೋದಿಗೆಯಲ್ಲಿವೆ. ಅದರಲ್ಲಿ ಚಿತ್ರದುರ್ಗದ ಪಾಳೆಯಗಾರ ಓಬಣ್ಣನಾಯಕನು (ಕ್ರಿ.ಶ.೧೬೦೧ರಲ್ಲಿ) ಮಾಡಿಸಿದ ಆರು ಅಡಿ ಎತ್ತರದ ಬಂಗಾರದ ಲೇಪನವಿರುವ ಗರುಡವಿಗ್ರಹವಿದೆ.[೯] ನವರಂಗದ ಬಾಗಿಲುವಾಡವು ಲತಾಸುರುಳಿಶಾಖೆ ಹೊಂದಿದೆ. ಇಲ್ಲಿನ ಲಲಾಟಬಿಂಬದಲ್ಲಿ ಪದ್ಮ ಕೆತ್ತನೆಯಿದೆ.

ನವರಂಗದ ಪೂರ್ವ ಪ್ರವೇಶದ್ವಾರಕ್ಕೆ ಹೊಂದಿಕೊಂಡಂತೆ ಮುಚ್ಚಿದ ಸಭಾಮಂಟಪವಿದೆ. ಈ ಸಭಾಮಂಟಪವು ಸ್ವತಂತ್ರವಾದ ಹತ್ತು ಕಂಬಗಳನ್ನು ಹೊಂದಿದೆ. ಅವು ಎತ್ತರದ ಜಗುಲಿಯ ಮೇಲೆ ಇವೆ. ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ ಮುಖದ ಎರಡು ಭಾಗಗಳು, ಕುಂಬ, ಫಲಕ, ಸಾಧಾರಣ ಭೋದಿಗೆಯನ್ನು ಕಾಣಬಹುದು. ಸಭಾಮಂಟಪದ ಮಧ್ಯದಲ್ಲಿ ಆಧುನಿಕ ಯಜ್ಞಕುಂಡವಿದೆ. ಸಭಾಮಂಟಪದ ಮುಂಭಾಗದಲ್ಲಿ ನಾಲ್ಕು ಕಂಬಗಳ ಮುಖಮಂಟಪವಿದೆ. ಮುಖಮಂಟಪದ ಒಂದು ಕಂಬದ ಮೇಲೆ ಹನುಮಂತ ಶಿಲ್ಪವಿದೆ. ಇದರ ಮೇಲೆ ಶಂಕ ಚಕ್ರಗಳ ಕೆತ್ತನೆಯಿದೆ. ಮುಖಮಂಟಪಕ್ಕೆ ಹೊಂದಿಕೊಂಡಂತೆ ಹನ್ನೆರಡು ಕಂಬಗಳ ತೆರೆದ ಮಂಟಪವಿದೆ. ಇಲ್ಲಿಯ ಎರಡು ಕಂಬಗಳ ನಾಲ್ಕು ಮುಖಗಳಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ವಿವಿಧ ಉಬ್ಬು ಶಿಲ್ಪಗಳಿವೆ. ಇವುಗಳಲ್ಲಿ ವರಹ, ಕಾಳಿಂಗಮರ್ಧನ, ನರಸಿಂಹ, ಅನಂತಶಯನ, ಗೋಪಾಲಕೃಷ್ಣ, ಲಜ್ಜಾಗೌರಿ, ಗಜಗಳು, ರಾಮ, ಪರಶುರಾಮ, ಮತ್ಸ್ಯ, ಕೂರ್ಮ, ವಾಮನ, ನೇಗಿಲು ಹಿಡಿದಿರುವ ಸ್ತ್ರೀ ಮುಂತಾದ ಶಿಲ್ಪಗಳಿವೆ.

ದೇವಾಲಯಕ್ಕೆ ಅಭಿಮುಖವಾಗಿ ಗರಡ ಮಂಟಪವಿದೆ. ಗರುಡನು ಅಂಜಲಿ ಮುದ್ರೆ ಯಲ್ಲಿದ್ದಾನೆ. ದೇವಾಲಯದ ವಾಯುವ್ಯದಲ್ಲಿ ಹೋಕಳಿ ಮಂಟಪವಿದೆ. ಇದರ ಅಧಿಷ್ಟಾನದಲ್ಲಿ ಉಪಾನ, ಪದ್ಮ, ಗಳ ಭಾಗಗಳನ್ನು ಕಾಣಬಹುದು. ಗಳಭಾಗದಲ್ಲಿ ವಿವಿಧ ಉಬ್ಬು ಶಿಲ್ಪಗಳಿವೆ. ಅವುಗಳಲ್ಲಿ ಮಿಥನ ಶಿಲ್ಪಗಳು, ಯಕ್ಷನ ಶಿಲ್ಪ, ವ್ಯಾಳ, ಗಜ, ಅಶ್ವ, ಲಜ್ಜಾಗೌರಿ ಶಿಲ್ಪಗಳನ್ನು ಕಾಣಬಹುದು. ಈ ಮಂಟಪದಲ್ಲಿ ನಾಲ್ಕು ಕಲಾತ್ಮಕವಾದ ಕಂಬಗಳಿವೆ. ಇವುಗಳ ರಚನೆಯಲ್ಲಿ ಪೀಠ, ಚಚ್ಚೌಕದ ೩ ಭಾಗಗಳು, ಅವುಗಳ ಮಧ್ಯೆ ಅಷ್ಟಕೋನ ಹಾಗೂ ಹದಿನಾರು ಮುಖದ ಭಾಗಗಳು ನಂತರ ಕುಂಬ, ಕುಮುದ, ಫಲಕ, ಸಾಧಾರಣ ಭೋದಿಗೆ ಇದೆ. ಮೇಲ್ ಭಾಗದಲ್ಲಿ ಇಟ್ಟಿಗೆ ಗಚ್ಚು ಗಾರೆಯಿಂದ ಕೂಡಿದ ವಿಮಾನವಿದೆ. ಇದು ತ್ರಿತಲ ವಿಮಾನವಾಗಿದ್ದು ಈ ಭಾಗಗಳಲ್ಲಿ ವಿವಿಧ ವೈಷ್ಣವ ಮೂರ್ತಿಶಿಲ್ಪಗಳಿವೆ. ಗ್ರೀವ, ಶಿಖರ ಹಾಗೂ ಸ್ತೂಪಿ ಭಾಗಗಳನ್ನು ಕಾಣಬಹುದು. ಗ್ರೀವದ ಭಾಗದಲ್ಲಿ ಪೀಠದ ಮೇಲೆ ಕುಳಿತ ಲಕ್ಷ್ಮೀನಾರಸಿಂಹ ಶಿಲ್ಪವಿದೆ. ಅದರೊಂದಿಗೆ ಇಲ್ಲಿನ ಕಂಬಗಳ ಮೇಲೆ ಆಂಜನೇಯ, ಗರುಡ ಮುಂತಾದ ಉಬ್ಬು ಶಿಲ್ಪಗಳಿವೆ.

ದೇವಾಲಯದ ಪ್ರವೇಶದ್ವಾರದ ಮಂಟಪವು ವಿಜಯನಗರ ವಾಸ್ತುಶೈಲಿಯಲ್ಲಿದ್ದು ಭಿತ್ತಿಯಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ವಿಜಯನಗರದ ರಾಜಪರಿವಾರದವರ ಉಬ್ಬುಶಿಲ್ಪಗಳಿವೆ. ಈ ದ್ವಾರಮಂಟಪದ ಅಧಿಷ್ಠಾನವು ಅತ್ಯಂತ ಎತ್ತರವಾಗಿದ್ದು ಎರಡು ಹಂತಗಳಲ್ಲಿ ಇದೆ. ಕೆಳಗಿನ ಭಾಗದಲ್ಲಿ ಉಪಾನ, ಪದ್ಮ, ಗಳ, ತ್ರಿಪಟ್ಟಿ ಕುಮುಧಗಳ ಮತ್ತು ವೇದಿಕೆ ಕಂಡುಬರುತ್ತದೆ. ವೇದಿಕೆಯಲ್ಲಿ ವ್ಯಾಳದ ಚಿತ್ರಗಳಿವೆ. ಇದರ ಮುಂದುವರೆದ ಅಧಿಷ್ಠಾನದ ಭಾಗದಲ್ಲಿ ಉಪಾನ,

ಪದ್ಮ, ಗಳ, ತ್ರಿಪಟ್ಟಿ ಕುಮುದದ ಮೇಲೆ ಸರಪಳಿಯ ಚಿತ್ರ ನಂತರದ ಪಟ್ಟಿಕೆಯ ಮೇಲೆ ಪುಷ್ಪಗಳ ಚಿತ್ರಗಳನ್ನು ಕೆತ್ತಲಾಗಿದೆ. ನಂತರ ಭಿತ್ತಿಯಲ್ಲಿ ಕೋಷ್ಠಗಳಿವೆ. ದ್ವಾರಮಂಟಪವನ್ನು ಒಳಗೆ ಪ್ರವೇಶಿಸುವ ಭಾಗದಲ್ಲಿ ಅಭಿಮುಖವಾಗಿ ದೊಡ್ಡ ಪ್ರಮಾಣದ ದ್ವಾರಶಾಖೆಯನ್ನು ಕಾಣಬಹುದು. ಅವುಗಳಲ್ಲಿ ವ್ಯಾಳದ ಮೇಲೆ ನಿಂತಿರುವ ಸ್ತ್ರೀಶಿಲ್ಪಗಳು ಅವರ ಮೇಲಿಂದ ಹೋಗಿರುವ ಲತಾಸುರುಳಿ ಪಟ್ಟಿಕೆಯ ಕಲಾತ್ಮಕ ಕೆತ್ತನೆಯಿದೆ. ಈ ದ್ವಾರಮಂಟಪದ ಒಂದು ಕೋಷ್ಠದಲ್ಲಿ ಅಲ್ಲೇ ಸಮೀಪದಲ್ಲೇ ದೊರೆತ ಕೋಟೆ ಹನುಮಂತನ ಮೂರ್ತಿಶಿಲ್ಪವನ್ನು ಸ್ಥಾಪಿಸಲಾಗಿದೆ. ಪ್ರವೇಶ ಮಂಟಪದ ಮುಖ್ಯ ಶಾಖೆಯು ಪದ್ಮಶಾಖೆಯಾಗಿದೆ. ಅದರ ಕಲಾತ್ಮಕವಾದ ವಿಜಯನಗರ ಶೈಲಿಯ ಕಂಬಗಳನ್ನು ಅವುಗಳ ರಚನೆಯಲ್ಲಿ ನಂತರ ಸುಂಧರವಾದ ಭೋದಿಗೆಗಳನ್ನು ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಉಯ್ಯಾಲೆ ಕಂಬ, ಸುಮಾರು ೫೪ ಅಡಿ ಎತ್ತರದ ಗರುಡ ಸ್ಥಂಭವಿದ್ದು, ಇದು ಕ್ರಿ.ಶ. ೧೫೩೦-೪೨ರಲ್ಲಿ ವೀರ ಪ್ರತಾಪರಾಯನ ಕಾಲದಲ್ಲಿ ವಿಶ್ವನಾಥಯ್ಯ ಎಂಬುವವನು ಸ್ಥಾಪಿಸಲ್ಪಟ್ಟನು ಎಂದು ತಿಳಿಸುತ್ತದೆ.[೧೪]

ದೇವಾಲಯದ ಪ್ರಾಂಗಣದ ಒಳಗೆ ಆಗ್ನೇಯಾದಲ್ಲಿ ಲಕ್ಷ್ಮೀದೇವಿಯ ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ, ಮುಖಮಂಟಪ, ೧೨ ಕಂಬಗಳ ವಿಶಾಲ ತೆರೆದ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಲಕ್ಷ್ಮಿದೇವಿಯ ಮೂರ್ತಿಶಿಲ್ಪವಿದೆ. ಲಕ್ಷ್ಮಿದೇವಿಯ ಗುಡಿಯ ಮುಂಭಾಗ ಬದಿಗೆ ಇರುವ ಪ್ರಾಂಗಣದಲ್ಲಿ ವೈಕುಂಠನಾರಾಯಣನ ದೇವಾಲಯವಿದೆ. ಇದರಲ್ಲಿ ಗರುಡನು ಹೊತ್ತುನಿಂತ ವೈಕುಂಠನಾರಾಯಣನ ಶಿಲ್ಪವಿದ್ದು ಇದರ ಇಕ್ಕೆಲೆಗಳಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ದೈವಾಂಶ ಸಂಬೂತರಾದ ಹನ್ನೆರಡು ಆಳ್ವಾರುಗಳ ಮೂರ್ತಿಶಿಲ್ಪಗಳಿವೆ. ಅವುಗಳಲ್ಲಿ ಪೆರಿಯಾಳ್ವರ್, ನಮ್ಮಾಳವರ್, ಮಧುರಕವಿ ಆಳ್ವರ್, ಕೊರತ್ತಾಳ್ವರ್, ತಿರುಪ್ಪನಾಳ್ವರ್, ಪೂದತ್ತಾಳ್ವರ್, ತಿರುಮಳಿ ಶೈಯಾಳ್ವರ್ ಮತ್ತು ಆಂಡಾಳ್ ಇವರುಗಳನ್ನು ಕಾಣಬಹುದು.

ದೇವಾಲಯಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ಇಲ್ಲಿ ಇವೆ. ಅವುಗಳಲ್ಲಿ ಕ್ರಿ.ಶ. ೧೫೭೧ರ ಶಾಸನವು ಸಂತೇಬೆನ್ನೂರು ಹನುಮಪ್ಪನಾಯಕನ ಮಗ ರಾಜಪ್ಪನಾಯಕ ತಮ್ಮ ತಂದೆ ತಾಯಿಗೆ ಪುಣ್ಯವಾಗಲಿ ಎಂದು ಈ ಲಕ್ಷ್ಮಿದೇವಿ ದೇವಾಲಯವನ್ನು ಜೀರ್ಣೋದ್ಧಾರವಾಗಿಸಿ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೧೫]

೨

ಊರು : ಬಾಗೂರು　　　　　ಸ್ಥಳ : ಬಾಗೂರು-ಅಂತರಘಟ್ಟ ರಸ್ತೆಯಲ್ಲಿ

ಸ್ಮಾರಕ : ಜೀವಿ ಪ್ರಾಣದೇವರ ದೇವಾಲಯ　　ಅಭಿಮುಖ : ಉತ್ತರ

ಕಾಲ : ಕ್ರಿ.ಶ.ಸು. ೧೭ನೇ ಶತಮಾನ　　　ಶೈಲಿ : ವಿಜಯನಗರೋತ್ತರ

ಬಾಗೂರಿನ ಪ್ರಮುಖ ವೈಷ್ಣವ ದೇವಾಲಯಗಳಲ್ಲಿ ಜೀವಿ ಪ್ರಾಣದೇವರ ದೇವಾಲಯ ಸಹ ಒಂದು. ಬಿಳಿ ಕಣಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ತೆರೆದ ಸಭಾಮಂಟಪವನ್ನು ಕಾಣಬಹುದು. ಗರ್ಭಗೃಹದಲ್ಲಿ

ಸುಮಾರು ೪ ಅಡಿ ಎತ್ತರದ ಕಪ್ಪು ಶಿಲೆಯಲ್ಲಿ ಆಂಜನೇಯನ ಮೂರ್ತಿಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು ಸಾಧಾರಣವಾಗಿದೆ. ಲಲಾಟದಲ್ಲಿ ಯಾವುದೇ ಅಲಂಕಾರವಿಲ್ಲ. ಅಂತರಾಳದ ಬಾಗಿಲುವಾಡವು ದ್ವಿಶಾಖೆಯನ್ನು ಹೊಂದಿದ್ದು ವಜ್ರ ಹಾಗೂ ಲತಾ ಅಲಂಕಾರಗಳನ್ನು ಕಾಣಬಹುದು. ಬಾಗಿಲುವಾಡದ ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದು ಅವರು ಶಂಖ, ಗಧಾ ಹಾಗೂ ಅಭಯ ಮುದ್ರೆಯನ್ನು ಹೊಂದಿರುವರು.

ನವರಂಗದಲ್ಲಿ ಕಲಾತ್ಮಕವಾದ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಎರಡು ಭಾಗಗಳು ಅವುಗಳ ಮಧ್ಯೆ ಅಷ್ಟ ಹಾಗೂ ೧೬ ಮುಖದ ಭಾಗಗಳು ಇವೆ. ಅದರ ಮೇಲೆ ಕುಂಬ, ಫಲಕ ಸಾಧರಣ ಬೋಧಿಗೆ ಇರುವುದನ್ನು ಕಾಣಬಹುದು. ಈ ಕಂಬಗಳ ಚಚ್ಚೌಕದ ಭಾಗದಲ್ಲಿ ಪುಷ್ಪ, ನಮಿಸುತ್ತಿರುವ ಆಂಜನೇಯ, ಶಿವಲಿಂಗಕ್ಕೆ ತನ್ನ ಕೆಚ್ಚಲಿನ ಮೂಲಕ ಹಾಲಿನ ಅಭಿಷೇಕ ಮಾಡುತ್ತಿರುವ ಹಸುವಿನ ಶಿಲ್ಪ ಮುಂತಾದವುಗಳಿವೆ. ನವರಂಗದಲ್ಲಿ ಸಾಧಾರಣ ಭುವನೇಶ್ವರಿ ಇದೆ.

೩

ಊರು : ಮತ್ತೋಡು	**ಸ್ಥಳ** : ಗ್ರಾಮದ ಪೂರ್ವಭಾಗದಲ್ಲಿ
ಸ್ಮಾರಕ : ಬಾಣದ ರಂಗನಾಥಸ್ವಾಮಿ ದೇವಾಲಯ	**ಅಭಿಮುಖ** : ಪೂರ್ವ
ಕಾಲ : ಕ್ರಿ.ಶ.ಸು. ೧೫–೧೬ನೇ ಶತಮಾನ	**ಶೈಲಿ** : ವಿಜಯನಗರೋತ್ತರ

ಮತ್ತೋಡು ಹೊಸದುರ್ಗ ತಾಲೂಕಿನ ಪ್ರಮುಖ ಚಾರಿತ್ರಿಕ ಎಡೆಗಳಲ್ಲಿ ಒಂದು ಮತ್ತೋಡನ್ನು ಜನಪದ ಸಾಹಿತ್ಯದಲ್ಲಿ 'ಮತಿವಂತರನಾಡು', 'ಮುತ್ತೈದೆಯರ ನಾಡು' ಎಂದು ಕರೆಯಲಾಗಿದೆ.[೮] ಶಾಸನ ಮತ್ತು ಸಾಹಿತ್ಯ ದಾಖಲೆಗಳಲ್ಲಿ ಇದನ್ನು ಮತ್ತಿನಡು, ಮತ್ತಿನಾಡು, ಮತ್ತನಡು, ಮತನಡು, ಮತ್ತೇಡು, ಮತ್ತೋಡು ಎಂದು ಕರೆಯಲ್ಪಟ್ಟಿರುವ ಈ ಊರು ಐತಿಹಾಸಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿದೆ.[೯]

ಬಾಣದ ರಂಗನಾಥ ದೇವಾಲಯ ಮತ್ತೋಡಿನ ಪ್ರಾಚೀನ ದೇವಾಲಯವಾಗಿದೆ. ಇದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ.. ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ವಿಷ್ಣುವಿನ ಸ್ಥಾನಿಕ ಶಿಲ್ಪ ಇರುವುದು. ಪೀಠದಲ್ಲಿ ಕೆತ್ತನೆ ಇದೆ. ಬಾಣದ ರಂಗನಾಥ ಎಂದು ಕರೆಸಿಕೊಳ್ಳುವ ಇಲ್ಲಿನ ವಿಷ್ಣು ತನ್ನ ಮುಂದಿನ ಕೈಗಳಲ್ಲಿ ಬಿಲ್ಲು-ಬಾಣ, ಹಿಂದಿನ ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಹಿಡಿದಿರುವನು. ವಸ್ತ್ರಾಭರಣ ಭೂಷಿತ ಶಿಲ್ಪದ ಸುತ್ತಲೂ ಪ್ರಭಾವಳಿ ಇದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಹಲವು ಶಾಖೆಗಳಿವೆ. ಪಾದದಲ್ಲಿ ಪೂರ್ಣಕಲಶಗಳ ಶಿಲ್ಪಗಳಿವೆ. ಲಲಾಟದಲ್ಲಿ ಚಕ್ರವಿದೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಆಯತಾಕಾರದ ಅಂತರಾಳವಿದೆ. ಸರಳ ಬಾಗಿಲುವಾಡದ ಬದಿಗಳಲ್ಲಿ ವೈಷ್ಣವ ದ್ವಾರಪಾಲಕರು ಶಂಖ, ಚಕ್ರ, ಗಧಾ ಹಾಗೂ ಭಯಗಳನ್ನು ಹೊಂದಿರುವರು. ಅಂತರಾಳಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ನವರಂಗವಿದೆ. ಕಂಬಗಳ ರಚನೆಯಲ್ಲಿ

ಪೀಠ, ಪಾದ, ಬಹುಮುಖದಿಂಡು, ಚೌಕ ಮತ್ತು ಪುಷ್ಪಾಲಂಕಾರದ ಬೋದಿಗೆ ಇದೆ. ನವರಂಗಕ್ಕೆ ಮೂರು ದಿಕ್ಕಿನಿಂದಲೂ ಪ್ರವೇಶ ದ್ವಾರಗಳಿವೆ. ನವರಂಗಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ತೆರೆದ ಮುಖಮಂಟಪವಿದೆ. ಇಲ್ಲಿನ ಕಂಬಗಳು ವಿಜಯನಗರ ಶೈಲಿಯಲ್ಲಿದ್ದು ಸಿಂಹಾಕಾಂತ ಸ್ತಂಭಗಳಾಗಿವೆ. ಇದು ಮತ್ತೋಡು ಪಾಳೆಯಗಾರರ ದೇವಾಲಯವಾಗಿರಬಹುದು.

೪

ಊರು : ಬೋಕಿಕೆರೆ **ಸ್ಥಳ** : ಗ್ರಾಮದ ಮಧ್ಯಭಾಗ

ಸ್ಮಾರಕ : ಹನುಮಂತ ದೇವರ ದೇವಾಲಯ **ಅಭಿಮುಖ** : ಉತ್ತರ

ಕಾಲ : ಕ್ರಿ.ಶ.ಸು. ೧೬–೧೭ನೇ ಶತಮಾನ **ಶೈಲಿ** : ವಿಜಯನಗರೋತ್ತರ

ಬೋಕಿಕೆರೆಯ ಹನುಮಂತ ದೇವರ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ತೆರೆದ ಮಂಟಪವನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾದ ಏಕಶಾಖೆಯನ್ನು ಹೊಂದಿದ್ದು ಅದರ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಅವರು ಶಂಖ, ಚಕ್ರ, ಗದೆ ಮತ್ತು ಅಭಯ ಮುದ್ರೆಗಳನ್ನು ಹೊಂದಿದ್ದಾರೆ. ಗರ್ಭಗೃಹದಲ್ಲಿ ಆಂಜನೇಯ ಮೂರ್ತಿಶಿಲ್ಪವಿದೆ. ತೆರೆದ ಮಂಟದಲ್ಲಿ ನಾಲ್ಕು ಸ್ವತಂತ್ರ ಕಂಬಗಳಿವೆ. ಇವುಗಳ ಮೇಲಿನ ಛತ್ತಿನಲ್ಲಿ ಕಲಾತ್ಮಕವಾಗಿ ಹೆಚ್ಚು ಬಾಗಿದ ಭುವನೇಶ್ವರಿ ಇದೆ. ತೆರೆದ ಮಂಟಪದ ಎದುರಿಗೆ ಎತ್ತರವಾದ ದೀಪದ ಸ್ತಂಭವಿದೆ. ಅದರ ಪಾದದ ನಾಲ್ಕು ಮುಖಗಳಲ್ಲಿ ಶಂಖ, ಚಕ್ರ ಹಾಗೂ ಭಕ್ತರ ಉಬ್ಬುಶಿಲ್ಪಗಳಿವೆ. ದೇವಾಲಯದ ವಿಮಾನವು ದ್ರಾವಿಡ ಶೈಲಿಯಲ್ಲಿದ್ದು ಇಟ್ಟಿಗೆ ಗಚ್ಚು ಗಾರೆಯಿಂದ ಕೂಡಿದೆ. ಅದರಲ್ಲಿ ಕೋಷ್ಟಗಳಿವೆ. ಇದರ ಗ್ರೀವ ಭಾಗದಲ್ಲಿ ವೈಷ್ಣವ ದೇವತಾ ಶಿಲ್ಪಗಳಿವೆ. ದೇವಾಲಯವನ್ನು ಪ್ರವೇಶಿಸಲು ಕಂಬಗಳ ಸಾಲುಗಳಿಂದ ಕೂಡಿದ ದ್ವಾರ ಮಂಟಪವಿದೆ. ಇದರಲ್ಲಿ ೧೮ ಕಂಬಗಳಿವೆ.

೫

ಊರು : ಲಕ್ಕಿಹಳ್ಳಿ **ಸ್ಥಳ** : ಗ್ರಾಮದ ಪ್ರಾರಂಭದಲ್ಲಿ

ಸ್ಮಾರಕ : ಆಂಜನೇಯ ದೇವಾಲಯ **ಅಭಿಮುಖ** : ಉತ್ತರ

ಕಾಲ : ಕ್ರಿ.ಶ.ಸು. ೧೬–೧೭ನೇ ಶತಮಾನ **ಶೈಲಿ** : ವಿಜಯನಗರೋತ್ತರ

ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ತೆರೆದ ಮಂಟಪವನ್ನು ಒಳಗೊಂಡಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದಲೇ ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿ ಶಿಖರವಿದ್ದು ಆಧುನಿಕವಾಗಿ ನವೀಕರಿಸಿದ್ದಾರೆ. ಅದಕ್ಕೆ ಹೊಂದಿಕೊಂಡಂತೆ ಸುಖನಾಸಿಯು ಇದೆ. ಗರ್ಭಗೃಹದಲ್ಲಿ ಸುಮಾರು ೬ ಅಡಿ ಎತ್ತರದ ಆಂಜನೇಯ ಮೂರ್ತಿಶಿಲ್ಪವಿದೆ. ಅಂತರಾಳದ ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು ಅದರಲ್ಲಿ ಅರ್ಧಗಂಭ ಲತಾಸುರುಳಿ, ವಜ್ರದ ಅಲಂಕಾರಗಳನ್ನು ಕಂಡರಿಸಲಾಗಿದೆ. ದೇವಾಲಯದಲ್ಲಿ ಎರಡು ಪ್ರಕಾರದ ಸ್ತಂಭಗಳಿದ್ದು ಒಂದು ಪ್ರಕಾರದ ಸ್ತಂಭದ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಮೂರು ಚಚ್ಚೌಕ

ಭಾಗಗಳು ಮಧ್ಯದಲ್ಲಿ ಅಷ್ಟಕೋನ ರಚನೆಗಳಿವೆ. ಕೆಳಗಿನ ಚಚ್ಚೌಕ ಭಾಗದಲ್ಲಿ ಹಲವು ಉಬ್ಬುಶಿಲ್ಪಗಳಿವೆ. ಆ ಉಬ್ಬು ಶಿಲ್ಪಗಳಲ್ಲಿ ಭಕ್ತರು, ನಾಗತೀಯರು, ಗೋಪಾಲಕೃಷ್ಣ, ಆನೇಸವಾರ, ಬಸವ, ಗಣೇಶ ಮತ್ತು ಮಿಥುನ ಶಿಲ್ಪಗಳಿವೆ. ಇನೇ ಪ್ರಕಾರದ ಕಂಭದ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಮೂರು ಚಚ್ಚೌಕ ಭಾಗಗಳು ಅದರ ಮೇಲೆ ಪುಷ್ಪ ಭೋದಿಗೆ ರಚನೆ ಇದೆ. ಚಚ್ಚೌಕ ಭಾಗಗಳ ಮಧ್ಯೆ ಅಷ್ಟ ಮತ್ತು ಹದಿನಾರು ಮುಖದ ರಚನೆಗಳಿವೆ. ಈ ಸ್ತಂಭಕ್ಕೆ ಹೊಂದಿಕೊಂಡಂತೆ ಯ್ಯಾಳಿ ಆಕಾರದ ರಚನೆ ಇದೆ. ದೇವಾಲಯವು ಕೋಟೆಯ ಗೋಡೆಗೆ ಹೊಂದಿಕೊಂಡಿದ್ದು ಸುತ್ತಲೂ ರಕ್ಷಣಾ ಗೋಡೆ ಇದೆ. ದೇವಾಲಯದ ಮುಂದೆ ಒಂದು ದೀಪಸ್ತಂಭವಿದೆ.

ಲಕ್ಕವ್ವನಹಳ್ಳಿಗೆ ಪಾಳೆಯಗಾರನಾಗಿದ್ದ ಗಿರಿಯಪ್ಪನಾಯಕನು ತನ್ನ ತಾಯಿ ಲಕ್ಕವ್ವಳ ನೆನಪಿಗಾಗಿ ಈ ಮೇಲೆ ಹೇಳಿದ ಲಕ್ಕವ್ವನಹಳ್ಳಿಯನ್ನು ಕಟ್ಟಿದ್ದನೆಂದು ಹೇಳಲಾಗಿದೆ.[೮] ಬಹುಶಃ ಈ ಆಂಜನೇಯ ದೇವಾಲಯವು ಇವನ ಕಾಲದಲ್ಲೇ ನಿರ್ಮಾಣಗೊಂಡಿರಬಹುದು.

೬

ಊರು : ದುಗ್ಗಾವರ　　**ಸ್ಥಳ**: ಕೋಟೆಕಲ್ ರಂಗನಾಥ ಬೆಟ್ಟದ ಬಳಿ

ಸ್ಮಾರಕ : ಕುಮಾರಪ್ಪ ದೇವಾಲಯ　　**ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬-೧೭ನೇ ಶತಮಾನ　　**ಶೈಲಿ** : ವಿಜಯನಗರೋತ್ತರ

ಕುಮಾರಪ್ಪ ದೇವಾಲಯದ ತಲನಕ್ಷೆಯಲ್ಲಿ ಗರ್ಭಗೃಹ ಮಾತ್ರ ಉಳಿದುಕೊಂಡಿದೆ. ಗರ್ಭಗೃಹದಲ್ಲಿ ಹಾಳಾಗಿರುವ ಗರುಡ ಪೀಠವಿದೆ. ಯಾವುದೇ ಮೂರ್ತಿಶಿಲ್ಪವಿಲ್ಲ. ಬಾಗಿಲುವಾಡದಲ್ಲಿ ಅರ್ಧಗಂಬ ಏಕಶಾಖೆಯನ್ನು ಕಾಣಬಹುದು. ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದು ಶಂಖ, ಚಕ್ರ, ಗಧಾ ಮತ್ತು ಅಭಯವನ್ನು ಹೊಂದಿದ್ದಾರೆ. ಲಲಾಟದಲ್ಲಿ ಪುಷ್ಪದ ಅಲಂಕರಣೆಯನ್ನು ಕಾಣಬಹುದು. ಗರ್ಭಗೃಹದ ಮೇಲ್ಭಾಗದಲ್ಲಿ ಪ್ರಾಚೀನ ಶಿಖರ ನಾಶವಾಗಿದ್ದು ಆಧುನಿಕವಾಗಿ ಗಚ್ಚು ಗಾರೆಯಿಂದ ಅವಶೇಷಗಳು ನಶಿಸಿ ಹೋಗಿವೆ. ದೇವಾಲಯಕ್ಕೆ ಅಭಿಮುಖವಾಗಿ ೧/೨ ಫರ್ಲಾಂಗ್ ದೂರದಲ್ಲಿ ವೈಷ್ಣವ ಸಂಬಂಧಿ ಶಾಸನವಿದ್ದು ಅದರಲ್ಲಿ ಶಂಖ, ಚಕ್ರ, ಸೂರ್ಯ, ಚಂದ್ರ ಚಿಹ್ನೆಗಳಿದ್ದು ಉಳಿದ ಲಿಪಿ ಭಾಗ ನಶಿಸಿಹೋಗಿವೆ.

೭

ಊರು : ಕಂಚಿವರದರಾಜಸ್ವಾಮಿ ಬೆಟ್ಟ　　**ಸ್ಥಳ** : ಬೆಟ್ಟದಲ್ಲಿ

ಸ್ಮಾರಕ : ಕಂಚಿವರದರಾಜಸ್ವಾಮಿ ದೇವಾಲಯ　　**ಅಭಿಮುಖ**: ಪೂರ್ವ

ಕಾಲ : ಕ್ರಿ.ಶ.ಸು. ೧೭ನೇ ಶತಮಾನ　　**ಶೈಲಿ** : ವಿಜಯನಗರೋತ್ತರ

ಬಿಳಿಕಣಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದ ತಲನಕ್ಷೆಯಲ್ಲಿ ಗರ್ಭಗೃಹ, ಅಂತರಾಳ ಹಾಗೂ ತೆರೆದ ಮಂಟಪವಿದೆ. ಅಂತರಾಳದ ಬಾಗಿಲುವಾಡವು ಸಾಧಾರಣವಾಗಿದ್ದು

ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ತೆರೆದಮಂಟಪದ ಕಂಬಗಳು ಸಾಧಾರಣವಾಗಿದ್ದು ಅವುಗಳ ರಚನೆಯಲ್ಲಿ ಮೂರು ಚಚ್ಚೌಕದ ರಚನೆಗಳು ಅವುಗಳ ಮಧ್ಯೆ ಅಷ್ಟಕೋನ, ಸಾಧಾರಣ ಬೋಧಿಗೆ ಇದೆ. ಗರ್ಭಗೃಹದ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ದ್ರಾವಿಡ ಮಾದರಿ ಶಿಖರವಿದೆ. ಶಿಖರದಲ್ಲಿ ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ತೆರೆದಮಂಟಪದಲ್ಲಿ ಒಂದು ಗೂಡು ರಚಿಸಿ ಅದರಲ್ಲಿ ಬೂತಪ್ಪನನ್ನು ಪೂಜಿಸುತ್ತಾರೆ. ದೇವಾಲಯದ ಬಲಬದಿಯಲ್ಲಿ ಮತ್ತೊಂದು ಭೂತಪ್ಪನ ದೇವಾಲಯವಿದೆ. ದೇವಾಲಯದ ಎದುರಿಗೆ ೬ ಹಂತಗಳಿಂದ ಕೂಡಿದ ಒಂದು ವೀರಗಲ್ಲು ಇದೆ. ದೇವಾಲಯದ ಸುತ್ತಲೂ ಕಲ್ಲಿನ ಪೌಳಿ ಇದೆ. ಕಂಚೀಪುರವನ್ನು ಕಂಚಿಬೆಟ್ಟವೆಂದು, ಕಂಚಿವರದರಾಜ ದೇವರು ರಾಮಾಯಣ ಕಾಲದ ಸುಗ್ರೀವನ ಅವತಾರವೆಂದು ಇಲ್ಲಿನ ಜನರ ನಂಬಿಕೆ. ಇಲ್ಲಿನ ಪ್ರಸಿದ್ಧ ಅಂಬಿನೋತ್ಸವ ವಿಜಯದಶಮಿಯ ಮುನ್ನ ನಡೆಯುತ್ತದೆ. ಈ ಸಂದರ್ಭದಲ್ಲಿ ಬುತ್ತಿಬಾನ, ಸೂರಗಂಬಲಿ, ಹೊನ್ನಸೂರ ಆಚರಣೆಗಳು ನಡೆಯುತ್ತವೆ.

೮

ಊರು : ಜಾನಕಲ್ಲು **ಸ್ಥಳ** : ಪೋಲೀಸ್ ಠಾಣೆಯ ಎದುರು

ಸ್ಮಾರಕ : ವೆಂಕಟೇಶ್ವರ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬ನೇ ಶತಮಾನ **ಶೈಲಿ** : ವಿಜಯನಗರೋತ್ತರ

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದಮಂಟಪವನ್ನು ಒಳಗೊಂಡಿದೆ. ದೇವಾಲಯದ ಒಳಗೆ ೧೦ ಸ್ವತಂತ್ರ ಕಂಬಗಳಿದ್ದು, ಅವುಗಳ ರಚನೆಯಲ್ಲಿ ಮೂರು ಚಚ್ಚೌಕ ಭಾಗಗಳು ಅವುಗಳ ನಡುವೆ ಅಷ್ಟಮುಖದ ರಚನೆ ಇವೆ. ಮೇಲ್ಭಾಗದಲ್ಲಿ ಸಾಧಾರಣ ಬೋಧಿಗೆ ಇದೆ. ನವರಂಗದಲ್ಲಿ ಭುವನೇಶ್ವರಿ ಇದ್ದು ಆಧುನಿಕವಾಗಿ ನವೀಕರಿಸಿದ್ದಾರೆ. ಗರ್ಭಗೃಹದಲ್ಲಿ ೩೧/೨ ಅಡಿ ಎತ್ತರದ ವೆಂಕಟೇಶ್ವರ ವಿಗ್ರಹವಿದೆ. ಅಂತರಾಳದಲ್ಲಿ ನಗ್ನ ಭೈರವ ಮತ್ತು ಇತರ ಮೂರ್ತಿಶಿಲ್ಪಗಳಿವೆ. ಮತ್ತು ಉತ್ಸವಮೂರ್ತಿ ಇದೆ. ಅಂತರಾಳದ ಬಾಗಿಲುವಾಡವು ನವೀಕರಣಗೊಂಡಿದ್ದು ದ್ವಾರದ ಇಕ್ಕೆಲೆಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ದೇವಾಲಯದ ಹೊರ ಮತ್ತು ಒಳ ಭಿತ್ತಿ ಆಧುನಿಕವಾಗಿ ನವೀಕರಣಗೊಂಡಿದ್ದು ಮೂಲ ರಚನೆಗಳು ಗೋಚರಿಸುತ್ತಿಲ್ಲ. ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡ ಮಾದರಿ ಇಟ್ಟಿಗೆ, ಗಚ್ಚುಗಾರೆಯಿಂದ ನಿರ್ಮಿಸಿದ ಶಿಖರವಿದೆ. ಅದರ ಮೇಲ್ಭಾಗದಲ್ಲಿ ಸ್ತೂಪಿಯು ಕಂಡುಬರುತ್ತದೆ. ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಿಯು ಇದೆ. ಶಿಖರದಲ್ಲಿ ದೇವಕೋಷ್ಠಕಗಳಿದ್ದು ಅವುಗಳಲ್ಲಿ ದೇವತಾ ಮೂರ್ತಿಶಿಲ್ಪಗಳು ಇದ್ದು ಆ ಶಿಖರದ ವಿವಿಧ ಭಾಗಗಳಲ್ಲಿ ಕೆಲವು ಮಿಥುನ ಶಿಲ್ಪಗಳಿವೆ. ದೇವಾಲಯದ ಮುಂಭಾಗದಲ್ಲಿ ಸು. ೧೮ ಅಡಿ ಎತ್ತರದ ದೀಪಸ್ತಂಭವಿದೆ. ಆ ದೀಪಸ್ತಂಭದ ಪಾದದಲ್ಲಿ ಭಕ್ತರ ಶಿಲ್ಪಗಳಿವೆ.

೯

ಊರು : ದೊಡ್ಡಘಟ್ಟ **ಸ್ಥಳ** : ಗ್ರಾಮದ ಮಧ್ಯಭಾಗದಲ್ಲಿ

ಸ್ಮಾರಕ : ರಾಮಾಂಜನೇಯ ದೇವಾಲಯ **ಅಭಿಮುಖ** : ಉತ್ತರ

ಕಾಲ : ಕ್ರಿ.ಶ.ಸು. ೧೬ನೆ ಶತಮಾನ **ಶೈಲಿ** : ವಿಜಯನಗರೋತ್ತರ

ದೇವಾಲಯದ ತಳನಕ್ಷೆಯಲ್ಲಿ ಗರ್ಭಗೃಹ ಮತ್ತು ತೆರೆದ ಮಂಟಪವಿದೆ. ದೇವಾಲಯದ ಮುಂಭಾಗದಲ್ಲಿ ಸು ೪೦ ಅಡಿ ಎತ್ತರದ ದೀಪಸ್ತಂಭವಿದೆ. ಆ ದೀಪಸ್ತಂಭದಲ್ಲಿ ರಾಜದಂಪತಿಗಳ

ಉಬ್ಬುಶಿಲ್ಪವಿದೆ. ಗರ್ಭಗೃಹದಲ್ಲಿ ೪ ಅಡಿ ಎತ್ತರದ ಆಂಜನೇಯ ಮೂರ್ತಿಶಿಲ್ಪವಿದೆ. ಅದರ ಬಲಭಾಗದಲ್ಲಿ ರಾಮ, ಲಕ್ಷ್ಮಣ, ಆಂಜನೇಯ ಮತ್ತು ಸೀತೆಯ ಉತ್ಸವಮೂರ್ತಿಗಳಿವೆ.

ಗರ್ಭಗೃಹದ ಬಾಗಿಲುವಾಡವು ಅರ್ಧಗಂಬ ಶಾಖೆಯನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ತೆರೆದಮಂಟಪದಲ್ಲಿ ನಾಲ್ಕು ಕಲಾತ್ಮಕ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ೩ ಚಚ್ಚೌಕ ಭಾಗಗಳು, ಅವುಗಳ ಮಧ್ಯೆ ಅಷ್ಠ ಮತ್ತು ಹದಿನಾರು ಮುಖದ ಭಾಗಗಳು ಮೇಲ್‌ಭಾಗದಲ್ಲಿ ಸಾಧಾರಣ ಭೋದಿಗೆ ಇದೆ. ಚಚ್ಚೌಕ ಭಾಗಗಳಲ್ಲಿ ಕೋತಿ, ವ್ಯಾಳಿ, ರಾಜಪುರುಷ ದಂಪತಿಗಳ ಶಿಲ್ಪ, ನೃತ್ಯಗಾರ್ತಿ, ಮಯೂರ, ವಿಷ್ಣು ಸೇರಿದಂತೆ ಮುಂತಾದ ಉಬ್ಬುಶಿಲ್ಪಗಳಿವೆ. ದೇವಾಲಯದ ಬಲಭಾಗದಲ್ಲಿ ೧೦ ಅಡಿ ಉದ್ದದ ಬಾಣವಿದೆ ಅದನ್ನು ಬಾಣಪ್ಪ ಎನ್ನುವರು.

ಹೊಸದುರ್ಗ ತಾಲೂಕು ಪರಿಸರದ ವೈಷ್ಣವ ದೇವಾಲಯ ಸಂಸ್ಕೃತಿಯನ್ನು ಕ್ರಿ.ಶ. ೧೧-೧೨ನೇ ಶತಮಾನದಿಂದ ಕ್ರಿ.ಶ. ೧೬-೧೭ನೇ ಶತಮಾನದವರೆಗೆ ಅಂದರೆ ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಕಾಣಬಹುದಾಗಿದೆ. ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡ ಪ್ರಮುಖ ವೈಷ್ಣವ ದೇವಾಲಯಗಳೆಂದರೆ ಮಳಲಿಯ ಗೋಪಾಲಕೃಷ್ಣ, ಹುಣವಿನೋಡುವಿನ ನಾರಾಯಣ, ಮೆಣಸಿನೋಡುವಿನ ಚನ್ನಿಗರಾಯ ಮತ್ತು ಬಾಗೂರಿನ ಚನ್ನಕೇಶವ, ಇವುಗಳಲ್ಲಿ ಮಳಲಿಯ ಗೋಪಾಲಕೃಷ್ಣ ಹಾಗೂ ಬಾಗೂರಿನ ಚನ್ನಕೇಶವ ದೇವಾಲಯಗಳು ಮಾತ್ರ ಸಂರಕ್ಷಿಸಲ್ಪಟ್ಟಿದ್ದು ಉಳಿದ ದೇವಾಲಯಗಳು ಸಂಪೂರ್ಣವಾಗಿ ನಾಶಗೊಂಡಿವೆ. ಮಳಲಿಯ ಗೋಪಾಲಕೃಷ್ಣ ದೇವಾಲಯವು ಸಂಪೂರ್ಣವಾಗಿ ಹೊಯ್ಸಳ ಕಾಲದ ನಿರ್ಮಿತಿಯಾಗಿದೆ. ಕ್ರಿ.ಶ. ೧೨೬೮ರ ಇಮ್ಮಡಿ ನರಸಿಂಹ ಕಾಲದ ವೀರಗಲ್ಲು ಈ ಗ್ರಾಮದಲ್ಲಿ ಲಭ್ಯವಿದ್ದು[೯೯] ಈ ವೀರಗಲ್ಲುಗಳಲ್ಲಿ ಮಳಲಿಯನ್ನು 'ಕೇಶವಪುರ'[೧೦೦] ಎಂದು ಕರೆಯಲಾಗಿದ್ದು ಇದೊಂದು ಅಗ್ರಹಾರವಾಗಿರುವುದರ ಜೊತೆಗೆ ಕ್ರಿ.ಶ. ೧೩ನೇ ಶತಮಾನದಲ್ಲಿ ಇಲ್ಲಿ ವೈಷ್ಣವ ಧರ್ಮದ ಪ್ರಾಬಲ್ಯವನ್ನು ಗುರುತಿಸಬಹುದು.

ಬಾಗೂರಿನ ಚನ್ನಕೇಶವ ದೇವಾಲಯವು ಹೊಯ್ಸಳ ಕಾಲದ ನಿರ್ಮಿತಿಯಾಗಿದ್ದು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯವು ವಿಶೇಷವಾಗಿ ಶ್ರೀವೈಷ್ಣವ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಈ ದೇವಾಲಯ ಸಂಕೀರ್ಣದ ವೈಕುಂಠನಾರಾಯಣ ದೇವಾಲಯದಲ್ಲಿ ೧೨ ಜನ ಆಳ್ವಾರರ ಶಿಲಾಮೂರ್ತಿಗಳು, ಗರುಡಮಂಟಪ, ಬೃಂದಾವನ ಹಾಗೂ ಶೃಂಗಾರ/ತುಳಸಿವನ ಇತ್ಯಾದಿಗಳು ಇಲ್ಲಿನ ಶ್ರೀವೈಷ್ಣವ ಧಾರ್ಮಿಕ ಸಂಸ್ಕೃತಿಯ ಪ್ರಭಾವವನ್ನು ಮನಗಾಣಬಹುದು. ಪಾಂಚರಾತ್ರ ಸಂಪ್ರದಾಯದ ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಸನ್ನಿಧಿಯಿರುವುದು ನಿಯಮವಾದ್ದರಿಂದ ಆಳ್ವಾರರ ಶಿಲಾಮೂರ್ತಿಗಳನ್ನು ವೈಕುಂಠ ನಾರಾಯಣ ದೇವಾಲಯದಲ್ಲಿ ಸ್ಥಾಪಿಸಲಾಗಿದೆ. ಅಂತಹ ಆಳ್ವಾರ್‌ರುಗಳೆಂದರೆ:- ಪೆರಿಯಾಳ್ವರ್, ನಮ್ಮಾಳ್ವರ್, ಮಧುರಕವಿಆಳ್ವಾರ್, ಕೊರತ್ತಾಳ್ವಾರ್, ತಿರುಪ್ಪಾನಾಳ್ವಾರ್, ಪೊದತ್ತಾಳ್ವರ್, ಪೇಯಾಳ್ವರ್, ತಿರುಮಂಗೈಆಳ್ವಾರ್, ತೊಂಡರಪ್ಪೊದಿ ಆಳ್ವಾರ್,

ಕುಲಶೇಖರ್ ಆಳ್ವಾರ್, ತಿರುಮಂಗೈಶಯ್ಯಾಳ್ವರ್, ಶ್ರೀಮತಿ ಆಂಡಾಳ್ ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ ಹೊಯ್ಸಳ, ವಿಜಯನಗರ ಹಾಗೂ ಪಾಳೆಯಗಾರರು ಅದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಶಾಸನಗಳನ್ನು ಹಾಕಿಸಿದ್ದಾರೆ. ಅದೇ ರೀತಿ ಬಾಗೂರಿನ ಚನ್ನಕೇಶವ ದೇವಾಲಯವು ವಿಜಯನಗರದ ಅಧೀನದಲ್ಲಿ ಈ ಭಾಗದಲ್ಲಿ ಆಳುತ್ತಿದ್ದ ಪಾಳೆಯಗಾರರ ಹಾಗೂ ಕೆಲವು ಅಧಿಕಾರಿಗಳ ಆಶ್ರಯ ಪಡೆದು ನಿರ್ವಹಣೆ ಹೊಂದಿರುವುದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಕ್ರಿ.ಶ. ೧೫೫೫ರ ಶಾಸನವು ವಿಜಯನಗರದ ವೀರಪ್ರತಾಪ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ್ದು ಅವನ ಅಧೀನವಾಗಿ ಈ ಪರಿಸರದಲ್ಲಿ ಆಳುತ್ತಿದ್ದ ಹಡಪದ ಬೊಮ್ಮನಾಯಕನ ಮಗ ಕೃಷ್ಣಪ್ಪನಾಯಕ ಹಾಗೂ ಇವನ ಕಾರ್ಯಕರ್ತನಾದ ಕೊಂಡರಾಜ ಹಾಗೂ ಮತ್ತೊಬ್ಬ ವ್ಯಕ್ತಿ ಗೋಪಣ್ಣ ಒಡೆಯರು ಇವರುಗಳು ಸೇರಿ ಈ ದೇವಾಲಯಕ್ಕೆ ನೀಡಿದ ಹಲವು ದಾನದತ್ತಿಗಳನ್ನು ಕುರಿತು ವಿವರಿಸುತ್ತದೆ. ಕೃಷ್ಣಪ್ಪನಾಯಕನು ಮದುರೆಯ ಗ್ರಾಮ, ಅರಳಿಹಳ್ಳಿಯ ಗ್ರಾಮ, ಹಾದರಿಕಟ್ಟೆಯ ಗ್ರಾಮಗಳನ್ನು ಚನ್ನಿಗರಾಯನ ಅಂಗಭೋಗ, ರಂಗಭೋಕ್ಕೆ ದಾನ ನೀಡಿದ್ದಾನೆ. ಕೃಷ್ಣಪ್ಪನಾಯಕನ ಕಾರ್ಯಕರ್ತನಾದ ಕೊಂಡರಾಜನು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ನಾಗೇನಹಳ್ಳಿ ಗ್ರಾಮ, ಕೃಷ್ಣಪುರದ ಗ್ರಾಮ ಇವುಗಳನ್ನು ಚನ್ನಿಗರಾಯನ ನೈವೇದ್ಯಕ್ಕೆ ದಾನ ನೀಡಿರುವುದನ್ನು ಕಾಣಬಹುದು.[೧೦೧] ಇವುಗಳೊಂದಿಗೆ ಚನ್ನಿಗರಾಯನ ಪೂಜಾ ಕಾರ್ಯಕ್ಕೆ ಹಾಲುಮೊಸರು, ತಾಂಬೂಲ, ಬೆಣ್ಣೆ, ತುಪ್ಪ, ಬೆಲ್ಲದ ಕಜ್ಜಾಯ, ಸಾಂಬ್ರಾಣಿದೂಪ ಮುಂತಾದವುಗಳಿಗೆ ಹಲವು ದಾನದತ್ತಿಗಳನ್ನು ನೀಡಿರುವುದನ್ನು ತಿಳಿಯಬಹುದು.[೧೦೨]

ಕ್ರಿ.ಶ. ೧೫೫೫ರ ಮತ್ತೊಂದು ಶಾಸನವು ಕೃಷ್ಣಪ್ಪನಾಯಕನಿಗೆ ಸಂಬಂಧಿಸಿದ್ದು ಇವನು ಸದಾಶಿವರಾಯನಿಗೆ ಪುಣ್ಯವಾಗಲೆಂದು ಕೃಷ್ಣ ಸಮುದ್ರ ಎಂಬ ಗ್ರಾಮವನ್ನು ಚನ್ನಿಗರಾಯನ ದೇವಾಲಯಕ್ಕೆ ದಾನ ನೀಡಿದ್ದಾನೆ. ಅಲ್ಲದೆ ತಿರುವೆಂಗಳಯ್ಯ, ಶಠಗೋಪಯ್ಯ, ಲಕ್ಷಣನಯ್ಯ ಎಂಬ ಮೂವರು ಸೇರಿ ಚೆನ್ನಿಗರಾಯನಿಗೆ ನಿತ್ಯಪೂಜೆ, ಪಂಚಪರ್ವ ಮೊದಲಾದ ಉತ್ಸವಾದಿಗಳಲ್ಲಿ ಸೇವೆ ಮಾಡತಕ್ಕದ್ದು, ಅದಕ್ಕಾಗಿ ಈ ಗ್ರಾಮವನ್ನು ಬಳುವಳಿಯಾಗಿ ನೀಡಲಾಗಿದೆ ಎಂದು ಹೇಳಲಾಗಿದೆ.[೧೦೩] ಇದೆ ದೇವಾಲಯದ ಲಕ್ಷ್ಮೀ ಗುಡಿಯ ನವರಂಗದ ನೆಲದ ಹಾಸುವಿನ ಮೇಲಿರುವ ಶಾಸನವು ಕ್ರಿ.ಶ. ೧೫೭೧ರ ಕಾಲದ್ದಾಗಿದೆ.[೧೦೪] ಇದರಲ್ಲಿ 'ಬ್ರಹೇಂದ್ರಾದಿ ಸುರೈಸೇಬ್ಯಿಂ ಸರ್ವಲೋಕೈಕ ನಾಯಕಂ ಶ್ರೀಮದ್ಭಾಗ್ಯ ಪುರಾಧೀಕೇಶವಯ್ಯ ಶಾಸನಂ' ಎಂಬುದಾಗಿ ಕೇಶವನನ್ನು ಸ್ತುತಿಸಿರುವುದನ್ನು ಕಾಣಬಹುದು. ಸಂತೇಬೆನ್ನೂರು ಹನುಮನಾಯಕರ ಮಗ ರಾಜಪ್ಪ ನಾಯಕನು ತಮ್ಮ ತಂದೆ ತಾಯಿಗೆ ಪುಣ್ಯವಾಗಬೇಕೆಂದು ಲಕ್ಷ್ಮೀದೇವಿ ಗುಡಿಯನ್ನು ಜೀರ್ಣೋದ್ಧರ ಮಾಡಿಸಿ ಬಾಗೂರು ಪರಿಸರದ ಕೆಲವು ಗದ್ದೆ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಈ ದೇವಾಲಯದ ಎದುರಿಗಿರುವ ಗರುಡಕಂಬ ಶಾಸನವು ವಿಜಯನಗರದ ಅರಸು ವೀರಪ್ರತಾಪ ಶ್ರೀ ಅಚ್ಚುತರಾಯನ ಕಾಲದ್ದಾದ್ದು, ಅಯ್ಯಪ್ಪರಸಯ್ಯನವರಿಗೆ ಪುಣ್ಯವಾಗಬೇಕೆಂದು ಅವನ ಕಾರ್ಯಕರ್ತನಾದ ವಿಶ್ವನಾಥಯ್ಯನು ಈ ಗರುಡಕಂಭವನ್ನು ಸ್ಥಾಪಿಸಿರುವುದನ್ನು ಹೇಳುತ್ತದೆ.[೧೦೫]

ಚನ್ನಕೇಶವ ದೇವಾಲಯವು ಇಷ್ಟು ಪ್ರಮಾಣದಲ್ಲಿ ದಾನದತ್ತಿಗಳನ್ನು ಪಡೆದಿರುವುದನ್ನು ಗಮನಿಸಿದಾಗ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯವು ಮಧ್ಯಕಾಲೀನ ಕರ್ನಾಟಕದಲ್ಲಿ ಅದರಲ್ಲೂ ವಿಜಯನಗರ ಕಾಲದಲ್ಲಿ ಹಾಗೂ ಇಲ್ಲಿ ಅವರ ಸಾಮಂತರಾಗಿ ಆಳುತ್ತಿದ್ದ ಪಾಳೆಯಗಾರರ ಕಾಲದಲ್ಲಿ ಅಪಾರ ಪ್ರಮಾಣದಲ್ಲಿ ದಾನದತ್ತಿಗಳನ್ನು ಪಡೆದು ಜೀರ್ಣೋದ್ಧಾರ ಗೊಂಡಿರುವುದಕ್ಕೆ ಇಲ್ಲಿನ ಹಲವು ಶಾಸನಗಳೇ ಸಾಕ್ಷಿಗಳಾಗಿವೆ. ಅಲ್ಲದೆ ಒಂದು ಶ್ರೀವೈಷ್ಣವ ದೇವಾಲಯಕ್ಕೆ ಇಷ್ಟು ಪ್ರಮಾಣದಲ್ಲಿ ಪೋಷಣೆ ದೊರೆತಿರುವುದನ್ನು ಗಮನಿಸಿದಾಗ ಇಲ್ಲಿನ ಶ್ರೀವೈಷ್ಣವ ಧರ್ಮದ ಪ್ರಾಬಲ್ಯವನ್ನು ಗುರುತಿಸಬಹುದು. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಬಾಗೂರಿನಲ್ಲಿ ಸಾಕಷ್ಟು ಶ್ರೀವೈಷ್ಣವ ಧರ್ಮೀಯರು ನೆಲೆಸಿದ್ದಾರೆ.

ಈ ಮೇಲೆ ವಿವರಿಸಿದ ಮೆಣಸಿನೋಡುವಿನ ಚನ್ನಿಗರಾಯ ಹಾಗೂ ಬಾಗೂರಿನ ಚನ್ನಕೇಶವ ದೇವಾಲಯಗಳು ಹೊಯ್ಸಳ ಕಾಲದ ಪ್ರಸಿದ್ಧ ಶ್ರೀವೈಷ್ಣವ ಧಾರ್ಮಿಕ ಕೇಂದ್ರಗಳಾಗಿ ಗುರುತಿಸಿ ಕೊಂಡಿದ್ದವು. ಇವರ ಕಾಲದಲ್ಲಿ ವಿಷ್ಣುವನ್ನು ಚೆನ್ನಿಗ, ಚೆನ್ನ, ಚೆಲುವ ಎಂದು ವಿಶೇಷಣದಿಂದ ಕೇಶವನೊಂದಿಗೆ ಸಮೀಕರಿಸಿ ಕರೆಯಲಾಗಿದೆ.[೧೦೬] ಒಟ್ಟಾರೆ ಈ ಮೇಲಿನ ಅಂಶಗಳಿಂದ ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ಶ್ರೀವೈಷ್ಣವ ಪಂಥದ ಪ್ರಾಬಲ್ಯವನ್ನು ಇಲ್ಲಿನ ದೇವಾಲಯಗಳ ಅಧ್ಯಯನದ ಮೂಲಕ ತಿಳಿಯಬಹುದಾಗಿದೆ.

ಕ್ರಿ.ಶ. ೧೬ನೇ ಶತಮಾನದಿಂದ ೧೮ನೇ ಶತಮಾನದ ಕಾಲಘಟ್ಟದ ಈ ಪರಿಸರದಲ್ಲಿ ರಂಗನಾಥ-ತಿಮ್ಮಪ್ಪ-ವೆಂಕಟೇಶ್ವರ ದೇವಾಲಯಗಳು ಕಂಡುಬರುತ್ತವೆ. ಕರ್ನಾಟಕದ ಬೆಟ್ಟ-ಗುಡ್ಡಗಳಲ್ಲಿ ಕಂಡುಬರುವ ರಂಗನಾಥ-ತಿಮ್ಮಪ್ಪ ದೇವರು ಮೂಲತಃ ಗುಡ್ಡಗಾಡಿನ ದೇವತೆ.[೧೦೭] ಹೊಸದುರ್ಗ ತಾಲೂಕು ಜಿಲ್ಲೆಯಲ್ಲೇ ಅರೆಮಲೆನಾಡು ಪರಿಸರವಾಗಿದ್ದು ಇಲ್ಲಿ ಅಪಾರ ಪ್ರಮಾಣದಲ್ಲಿ ಬೆಟ್ಟ-ಗುಡ್ಡಗಳು ಕಂಡುಬರುವುದರೊಂದಿಗೆ ಅಂತಹ ಬೆಟ್ಟ-ಗುಡ್ಡಗಳಲ್ಲಿ ಅನೇಕ ರಂಗನಾಥ-ತಿಮ್ಮಪ್ಪನ ದೇವಾಲಯಗಳು ಕಾಣಸಿಗುತ್ತವೆ. ಈ ಎಲ್ಲಾ ರಂಗನಾಥ-ತಿಮ್ಮಪ್ಪನ ದೇವಾಲಯಗಳು ವಿಜಯನಗರೋತ್ತರ ಕಾಲ ಅಂದರೆ, ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದವುಗಳು. ಹೊಸದುರ್ಗ ತಾಲೂಕು ಪರಿಸರದಲ್ಲಿ ಆಳಿ ಹೋಗಿರುವ ಚಿತ್ರದುರ್ಗ, ಮತ್ತೋಡು, ಬೂದಿಹಾಳು, ಸಂತೇಬೆನ್ನೂರು ಹಾಗೂ ಬೇಲೂರು ಪಾಳೆಯಗಾರರು ಕ್ರಿ.ಶ. ೧೫ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದ ಕಾಲಘಟ್ಟದಲ್ಲಿ ರಂಗನಾಥ-ತಿಮ್ಮಪ್ಪನ ಧಾರ್ಮಿಕ ಪರಂಪರೆಗೆ ಆಶ್ರಯ ನೀಡಿದ್ದಾರೆ. ಚಿತ್ರದುರ್ಗ ಪಾಳೆಯಗಾರರ ಮೂಲ ಮನೆದೇವರು ಆಹೋಬಿಲಂ ನರಸಿಂಹ.[೧೦೮] ಇವರು ವೈಷ್ಣವ-ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ಶಾಸನಗಳು ಹಾಗೂ ದೇವಾಲಯಗಳ ಅಧ್ಯಯನದಿಂದ ತಿಳಿಯಬಹುದು. ಚಿತ್ರದುರ್ಗ ಪಾಳೆಯಗಾರರು ಹೊಸದುರ್ಗ ತಾಲೂಕಿನ ಹೊಸದುರ್ಗ, ಬಾಗೂರು, ಬೂದಿಹಾಳು, ಜಾನಕಲ್ಲು ಹಾಗೂ ದೇವಪುರ ಪ್ರದೇಶಗಳ ಮೇಲೆ ಆಳ್ವಿಕೆ ಮಾಡುವ ಸಂದರ್ಭದಲ್ಲಿ ಇಲ್ಲಿನ ವೈಷ್ಣವ-ಶ್ರೀವೈಷ್ಣವ ಪಂಥಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದಾರೆ. ೩ನೇ ಚಿಕ್ಕಣ್ಣನಾಯಕ (೧೬೭೫-೧೬೮೬)ನು ಬಾಗೂರಿನ ಚನ್ನಿಗರಾಯನ (ಚನ್ನಕೇಶವದೇವರ) ತೇರು ಮತ್ತು ಮುಲಾಮಿನ

ಗರುಡೋತ್ಸವ ಮೂರ್ತಿಯನ್ನು ಮಾಡಿಸಿಕೊಟ್ಟನು.[೯] ಇವರು ನಿರ್ಥಡಿ ರಂಗನಾಥ ದೇವಾಲಯದ ಭಕ್ತರಾಗಿದ್ದು ಅದನ್ನು ಉದಾರವಾಗಿ ಪೋಷಿಸಿದುದು ತಿಳಿದ ಸಂಗತಿ. ಅದೇ ರೀತಿ ರಂಗನಾಥ ಮತ್ತು ತಿಮ್ಮಪ್ಪನ ದೇವಾಲಯಗಳನ್ನು ನಿರ್ಮಿಸಿ ಹಾಗೂ ಪೋಷಿಸಿಕೊಂಡು ಬಂದಿರುವುದು ತಿಳಿದುಬರುತ್ತದೆ. ಜಾನಕಲ್ಲಿನ ವೆಂಕಟೇಶ್ವರ, ದುಗ್ಗಾವರದ ಕೋಟೆಕಲ್ಲು ರಂಗನಾಥ, ಗವಿರಂಗನಾಥ ಪುರದ ಗವಿರಂಗನಾಥಸ್ವಾಮಿ, ಕಂಚಿವರದರಾಜಸ್ವಾಮಿ ಮುಂತಾದ ದೇವಾಲಯಗಳು ಚಿತ್ರದುರ್ಗ ಪಾಳೆಯಗಾರರಿಂದಲೇ ಪೋಷಿಸಲ್ಪಟ್ಟಿದ್ದವು ಎಂಬುದನ್ನು ಈ ಪರಿಸರದ ಮೌಖಿಕ ಸಾಹಿತ್ಯ ಹೇಳುತ್ತದೆ.[೧೦] ಗವಿರಂಗಾಪುರದ ಗವಿರಂಗನಾಥ ದೇವಾಲಯವು ಈ ಪರಿಸರದ ಪ್ರಮುಖ ಶ್ರೀವೈಷ್ಣವ ದೇವಾಲಯಗಳಲ್ಲಿ ಒಂದು. ಇದು ಮೂಲತಃ ಗುಹಾದೇವಾಲಯವಾಗಿದ್ದು ಕ್ರಿಶ. ೧೬ನೇ ಶತಮಾನದ ರಚನೆಯಾಗಿದೆ. ಇಲ್ಲಿನ ರಂಗನಾಥಸ್ವಾಮಿಯ ಮೂರ್ತಿಯು ಕೂರ್ಮ(ಆಮೆ)ರೂಪದಲ್ಲಿ ಇರುವುದು ವಿಶೇಷವಾಗಿದೆ. ಇವನಿಗೆ ಗವಿರಂಗನಾಥ, ಲಕ್ಷ್ಮಿರಂಗನಾಥ, ಅನ್ನದಾನಿರಂಗ, ಬೆಟ್ಟದ ರಂಗ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಇಲ್ಲಿನ ಮೂಲಮೂರ್ತಿ ದೇವಾಲಯದ ಜೊತೆಗೆ ಅನಂತಪದ್ಮನಾಭಸ್ವಾಮಿ (ಶೇಷಶಯನಮೂರ್ತಿ), ಲಕ್ಷ್ಮೀ, ಆಂಜನೇಯ, ಕೆಂಚಲಕ್ಕಮ್ಮ, ಕೆಂಚರಾಯ, ಕಾಡರಾಯ, ಆಳ್ವಾರರ ದೇವಾಲಯಗಳು ಕಂಡುಬರುತ್ತವೆ. ಕೂರ್ಮಾವತಾರದ ಗವಿರಂಗನಥಸ್ವಾಮಿಯ ಕ್ಷೇತ್ರವು ಕರ್ನಾಟಕದಲ್ಲಿ ಇದೊಂದೆ ಎಂದೂ, ಉಳಿದೆರಡು ತಮಿಳುನಾಡಿನ ತಿರುಕಚ್ಚೂರು ಮತ್ತು ಆಂಧ್ರಪ್ರದೇಶದ ಗಂಜಾಂ ಜಿಲ್ಲೆಯಲ್ಲಿ ಇವೆ ಎಂದು ತಿಳಿದುಬಂದಿದೆ.[೧೧] ಈ ದೇವಾಲಯವು ಪಾಳೆಯಗಾರರ ಕಾಲದಲ್ಲಿ ಹೆಚ್ಚು ಆಶ್ರಯ ಪಡದಿದೆ.

ಮತ್ತೋಡಿನ ಬಾಣದ ರಂಗನಾಥ ದೇವಾಲಯವು ಹೊಸದುರ್ಗ ತಾಲೂಕು ಪರಿಸರದ ಪ್ರಮುಖ ಶ್ರೀವೈಷ್ಣವ ದೇವಾಲಯಗಳಲ್ಲಿ ಒಂದಾಗಿದ್ದು, ವಿಜಯನಗರೋತ್ತರ ಕಾಲದ ರಚನೆಯಾಗಿದೆ. ಬಹುಶಃ ಇದು 'ಮತ್ತೋಡು ಪಾಳೆಯಗಾರರ' ಕಾಲದ್ದಾಗಿರಬಹುದು. ಕರ್ನಾಟಕದಲ್ಲಿ ರಂಗನಾಥ ಎಂದು ಗುರುತಿಸಲ್ಪಡುವ ದೇವತೆ ಕೂಡ ಒಂದು ಬೇಟೆಯಾಡುವ ದೇವತೆಯೇ ಆಗಿದೆ. ಹಾಗಾಗಿ ಆತನಿಗೆ ಬೇಟೆರಂಗನಾಥ, ಬ್ಯಾಟರಾಯ ಎಂದೆಲ್ಲ ಕರೆಯಲಾಗುತ್ತದೆ. ರಂಗನಾಥನ ಕೆಲ ಮೂರ್ತಿಶಿಲ್ಪಗಳಲ್ಲಿ ಆತನು ಬಿಲ್ಲು ಬಾಣಗಳನ್ನು ಹಿಡಿದಿರುವುದರ ಜೊತೆಗೆ, ಆತನ ಕಾಲ ಬಳಿಯಲ್ಲಿ ಬೇಟೆನಾಯಿಗಳನ್ನು ತೋರಿಸಲಾಗುತ್ತದೆ.[೧೨] ಮತ್ತೋಡಿನ ಬಾಣದ ರಂಗನಾಥ ದೇವಾಲಯದ ಬಾಣದ ರಂಗನಾಥನ ಮೂರ್ತಿಶಿಲ್ಪದಲ್ಲಿ ಮುಂದಿನ ಕೈಗಳಲ್ಲಿ ಬಿಲ್ಲು-ಬಾಣ, ಹಿಂದಿನ ಕೈಗಳಲ್ಲಿ ಚಕ್ರ-ಶಂಖ ಹಿಡಿದಿರುವನು. ಈ ರೀತಿಯ ರಂಗನಾಥನ ಮೂರ್ತಿಶಿಲ್ಪವು ಹೊಸದುರ್ಗ ತಾಲೂಕು ಪರಿಸರದಲ್ಲೇ ವಿಶಿಷ್ಟವಾದುದು. ಅದೇ ರೀತಿ ದುಗ್ಗಾವರದ ಪ್ರಸಿದ್ಧ 'ಕೋಟೆಕಲ್ಲು ರಂಗನಾಥ' ದೇವಾಲಯವು ಸಹ ಕ್ರಿಶ. ೧೬-೧೭ನೇ ಶತಮಾನದ್ದಾಗಿದ್ದು ವಿಜಯನಗರೋತ್ತರ ವಾಸ್ತುಶೈಲಿಯನ್ನು ಹೊಂದಿದೆ. ಈ ದೇವಾಲಯವು ದುಗ್ಗಾವರ ಗ್ರಾಮದ ಪಶ್ಚಿಮ ದಿಕ್ಕಿನ ಬೆಟ್ಟದಲ್ಲಿ ಕಂಡುಬರುತ್ತದೆ. ಬೆಟ್ಟದಲ್ಲಿರುವ ಈ ದೇವಾಲಯದ ಸುತ್ತಲೂ ಪಾಳೆಯಗಾರರ ಕಾಲದ ಕೋಟೆ ಇದ್ದು ಅದರಿಂದಾಗಿಯೇ ಇದನ್ನು 'ಕೋಟೆಕಲ್ಲು ರಂಗನಾಥ' ದೇವಾಲಯ ಎಂದು ಕರೆಯಲಾಗುತ್ತದೆ. ಒಟ್ಟಾರೆ ಈ ಪರಿಸರದ ರಂಗನಾಥ-

ತಿಮ್ಮಪ್ಪ ದೇವಾಲಯಗಳು ಕ್ರಿ.ಶ. ೧೬–೧೮ನೇ ಶತಮಾನದ ಪಾಳೆಯಗಾರರ ಕಾಲಕ್ಕೆ ಸಂಬಂಧಿಸಿದವುಗಳು.

ವಿಜಯನಗರೋತ್ತರ ಕಾಲದ ಈ ಪರಿಸರದಲ್ಲಿ ವೈಷ್ಣವ–ಶ್ರೀವೈಷ್ಣವ ದೇವಾಲಯಗಳಲ್ಲಿ ಹನುಮಂತನ ದೇವಾಲಯಗಳು ಅಪಾರ ಪ್ರಮಾಣದಲ್ಲಿ ಕಾಣಸಿಗುತ್ತವೆ. ಅವುಗಳಲ್ಲಿ ಬಹುಮುಖ್ಯವಾಗಿ ಕೆಲ್ಲೋಡಿನ ಹನುಮಂತ, ಅತ್ತಿಘಟ್ಟದ ಹನುಮಂತ, ಬೋಕಿಕೆರೆಯ ಆಂಜನೇಯ ದೇವಾಲಯಗಳು ಕಂಡುಬರುತ್ತವೆ. ಕೆಲ್ಲೋಡಿನ ಹನುಮಂತ ದೇವಾಲಯವು ಸಂತೇಬೆನ್ನೂರು ಪಾಳೆಯಗಾರರ ಕಾಲದಲ್ಲಿ ದಾನ–ದತ್ತಿಯನ್ನು ಪಡೆದು ನಿರ್ವಹಣೆ ಹೊಂದಿರುವುದು ಶಾಸನೋಕ್ತವಾಗಿದೆ.[೧೧೩] ಸಂತೇಬೆನ್ನೂರ ಹನಿಮಿನಾಯ್ಕನ ಮೊಮ್ಮಗ ದಳನಾಯಕನು ಕೆಲಗೋಡಿನ ಹನುಮಂತ ದೇವರಿಗೆ ಕುರುಬರ ಹಳ್ಳಿಯನ್ನು ದಾನ ನೀಡಿರುವ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ.[೧೧೪] ಈ ಮೇಲೆ ವಿವರಿಸಿದ ವೈಷ್ಣವ ದೇವಾಲಯಗಳು ಬಹುಮುಖ್ಯವಾಗಿ ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದವುಗಳಾಗಿವೆ.

೫.೧.೩.ಶಾಕ್ತ ದೇವಾಲಯಗಳು

ಹಿಂದೂ ಧರ್ಮದ ಪೌರಾಣಿಕ ಸಾಹಿತ್ಯದಲ್ಲಿ ಮತ್ತು ತಂತ್ರಗಳಲ್ಲಿ ಶಕ್ತಿಯನ್ನು ಹೆಣ್ಣು ದೇವತೆಯ ರೂಪದಲ್ಲಿ ಚಿತ್ರಿಸಿದ್ದಾನೆ.[೧೧೫] ಯಾವ ಒಂದು ಅಸಾಧಾರಣ ಶಕ್ತಿ ಅಥವಾ ಸದ್ಗುಣ ಇಲ್ಲದಿದ್ದರೆ ದೇವರೂ ಕೂಡ ಈ ಜಗತ್ತಿನಲ್ಲಿ ನಿಷ್ಕ್ರಿಯನಾಗುತ್ತಾನೋ ಆ ಶಕ್ತಿಯನ್ನು ತಮ್ಮ ಮೂಲಾಧಾರವೆಂದು ಶಾಕ್ತ ಸಂಪ್ರದಾಯದವರು ಬಾವಿಸುತ್ತಾರೆ. ಶಕ್ತಿ ಇಲ್ಲದ ಎಲ್ಲಾ ದೇವರು ಅಪೂರ್ಣ. ಹೆಣ್ಣು ದೇವತೆಯ ಶಕ್ತಿ ಮತ್ತು ಸ್ವರೂಪವನ್ನು ಗಂಡು ದೇವರ ತಾಯಿಯಾಗಿ ಸಹೋದರಿಯಾಗಿ ಪತ್ನಿಯಾಗಿ ನಾನಾ ಮಗ್ಗುಲಗಳಿಂದ ಕಾಣಲಾಗಿದೆ. ಇವುಗಳಲ್ಲಿ ಪತ್ನಿ ರೂಪದಲ್ಲಿಯೇ ಶಕ್ತಿಯನ್ನು ಹೆಚ್ಚಾಗಿ ಕಾಣುತ್ತೇವೆ.[೧೧೬] ಶಕ್ತಿ ಪೂಜೆ ಅಥವಾ ಮಾತೃದೇವತೆಯ ಉಪಾಸನೆಯು ಪ್ರಾಚೀನವಾದ ಸಿಂಧೂ ಸಂಸ್ಕೃತಿಯಲ್ಲಿಯೇ ಕಂಡುಬಂದಿದೆ. ಅಲ್ಲಿ ದೊರೆತ ಸ್ತ್ರೀ ವಿಗ್ರಹಗಳನ್ನು ಮಾತೃ ದೇವತೆಯ ವಿಗ್ರಹಗಳೆಂದು ಹೇಳಲಾಗುತ್ತದೆ. ವೈದಿಕ ಕಾಲದಲ್ಲಿ ಇಂದ್ರ, ಅಗ್ನಿ, ವರುಣ, ಸೂರ್ಯ, ವಿಷ್ಣು, ರುದ್ರ ಮುಂತಾದವರು ಪ್ರಧಾನ ದೇವತೆಗಳಾಗಿದ್ದು ಪುರುಷ ಪ್ರಧಾನ ಎನಿಸಿಕೊಂಡರೂ ಋಗ್ವೇದ 'ಅಂಬ್ರಿಸೂಕ್ತ' ಮತ್ತು 'ರಾತ್ರಿಸೂಕ್ತ'ಗಳು ಮಾತೃದೇವತೆಯ ಆರಾಧನೆಯ ಮೂಲಗಳು ಎನಿಸಿವೆ.[೧೧೭] ದೇವತೆಗಳ ತಾಯಿ 'ಅದಿತಿ'ಯನ್ನು ಅಲಂಕಾರವಾಗಿ ಸೃಷ್ಟಿಗೆ ಹೋಲಿಸಲಾಗಿದೆ. ಪುರಾಣಗಳ ಕಾಲದಲ್ಲಿ ಹೆಚ್ಚು ಮಾನ್ಯತೆಯನ್ನು ಪಡೆದ ತ್ರಿಮೂರ್ತಿಗಳನ್ನು ಅವರವರ ಪತ್ನಿಯರ ರೂಪದಲ್ಲಿ ಶಕ್ತಿಯನ್ನು ಗುರುತಿಸಿರುವುದು ಕಂಡುಬರುತ್ತದೆ. ಸೃಷ್ಟಿಕರ್ತನಾದ ಬ್ರಹ್ಮನ ಶಕ್ತಿದೇವತೆ ಸರಸ್ವತಿ. ಅವನ ಮುಖವೇ ಅವಳ ವಾಸಸ್ಥಳ. ಅವಳು ಸರ್ವವಿದ್ಯೆಗಳ ಅಧ್ಯಕ್ಷೆ, ಜಗತ್ ಸೃಷ್ಟಿಗೆ ಕಾರಣಕರ್ತೆ. ಅದರಂತೆ ಸೃಷ್ಟಿಯ ಪಾಲನಕರ್ತನಾದ ವಿಷ್ಣುವಿನ ಶಕ್ತಿದೇವತೆ ಲಕ್ಷ್ಮಿ. ಇವಳು ಸಂಪತ್ತು, ಭಾಗ್ಯ, ಆನಂದಗಳ ಸಂಕೇತ. ಈ ಶಕ್ತಿಯಿಂದಲೇ ಜಗತ್ತು ಸುಸೂತ್ರವಾಗಿ ನಡೆದುಕೊಂಡು ಬರಲು ಅನುಕೂಲವಾಗಿದೆ. ಅದೇ ರೀತಿ ಲಯಕರ್ತನಾದ ಶಿವನ ಶಕ್ತಿಯು ಪಾರ್ವತಿ ಅಥವಾ ಉಮಾ ಸಾಮಾನ್ಯವಾಗಿ

ಅವಳನ್ನು ಕಾಳಿಯ ರೂಪದಲ್ಲಿ ವರ್ಣಿಸಲಾಗಿದೆ. ಸಂಹಾರ ರೂಪವಾದ ಇವಳ ಶಕ್ತಿಯು ಸೃಷ್ಟಿಯನ್ನು ಸಮಸ್ಥಿತಿಯಲ್ಲಿ ಇಡಲು ಸಹಕರಿಸುತ್ತದೆ.[iii]

ವೈದಿಕ ಕಾಲದ ನಂತರ ಶಕ್ತಿ ದೇವತೆ ಬೆಳವಣಿಗೆ ಪ್ರಮುಖವಾಗಿ ಕಂಡುಬರುತ್ತದೆ. ಶಾಕ್ತರ ಆರಾಧ್ಯ ದೇವತೆಯೇ ಶಕ್ತಿ ದೇವತೆ. ಇವರುಗಳನ್ನು ಆದಿಶಕ್ತಿ, ಪರಾಶಕ್ತಿ, ಮಹಾಶಕ್ತಿ, ಮಹಾದೇವಿ ಮುಂತಾಗಿ ಕರೆದು ಉಪಾಸನೆ ಮಾಡುತ್ತಾರೆ. ಈ ಕಾಲದ ದೇವತೆಗಳನ್ನು ಗೃಹ್ಯಸೂತ್ರಗಳು, ಸ್ಮೃತಿಗಳು, ಉಪನಿಷತ್ತುಗಳು, ಪುರಾಣಗಳು ಮುಂತಾದ ಸಾಹಿತ್ಯಕ ಆಕರಗಳು ವಿವಿಧ ಬಗೆಯಿಂದ ವರ್ಣಿಸುತ್ತವೆ. ಬುಡಕಟ್ಟು ನೆಲೆಗಟ್ಟುಗಳಿಂದಲೂ ಶಕ್ತಿ ದೇವತೆಯ ಆರಾಧನೆಯನ್ನು ಕಾಣಬಹುದು. ಅಲ್ಲದೆ ಬೇಟೆ-ಬುಡಕಟ್ಟು ಜನಾಂಗಗಳು ಈ ದೇವತೆಗಳನ್ನು ತಮ್ಮ ಯುದ್ಧ ಸಂಸ್ಕೃತಿಗಳ ಪ್ರತೀಕಗಳಾಗಿ ಅವುಗಳನ್ನು ಆರಾಧಿಸಿಕೊಂಡು ಬರಲಾಗುತ್ತಿದೆ. ಗ್ರಾಮೀಣ ಮಟ್ಟದಿಂದ ಹಿಡಿದು ನಗರ ಮಟ್ಟದವರೆಗೂ ಶಕ್ತಿ ದೇವತೆಗಳ ಆರಾಧನೆಯನ್ನು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಹೊಸದುರ್ಗ ತಾಲೂಕು ಪರಿಸರದ ಕೆಲವು ಶಾಕ್ತ ದೇವಾಲಯಗಳನ್ನು ಕುರಿತು ವಿವೇಚಿಸಲಾಗಿದೆ.

೧

ಊರು	: ಬಾಗೂರು	**ಸ್ಥಳ**	: ಗ್ರಾಮದ ಮಧ್ಯಭಾಗ
ಸ್ಮಾರಕ	: ಓರುಗಲ್ಲಮ್ಮ ದೇವಾಲಯ	**ಅಭಿಮುಖ**	: ಪೂರ್ವ
ಕಾಲ	: ಕ್ರಿ.ಶ.ಸು. ೧೬-೧೭ನೇ ಶತಮಾನ	**ಶೈಲಿ**	: ವಿಜಯನಗರೋತ್ತರ

ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವಿದೆ. ಗರ್ಭಗೃಹದ ಮೇಲಿನ ವಿಮಾನವು ಪಾಂಸಾನ ಶೈಲಿಯದಾಗಿದೆ. ಇದರಲ್ಲಿ ಗ್ರೀವ, ಶಿಖರ, ಸ್ತೂಪಿ ಭಾಗಗಳಿವೆ. ಗರ್ಭಗೃಹದ ಭಿತ್ತಿಯ ಮೇಲೆ ಮೀನು, ಕೋತಿ, ಆನೆ, ನೃತ್ಯಗಾರ್ತಿ, ಲಜ್ಜಾಗೌರಿ, ಪುಂಗಿ ಊದುತ್ತಿರುವ ಹಾವಾಡಿಗ ಮುಂತಾದ ಉಬ್ಬುಶಿಲ್ಪಗಳಿವೆ. ಗರ್ಭಗೃಹದಲ್ಲಿ ಓರುಗಲ್ಲಮ್ಮ ಎನ್ನುವ ಶಕ್ತಿದೇವತೆಯ ಮೂರ್ತಿಶಿಲ್ಪವಿದೆ. ಅಂತರಾಳದ ಬಾಗಿಲುವಾಡವು ಲತಾಸುರುಳಿ ಹಾಗೂ ವಜ್ರಶಾಖೆಗಳನ್ನು ಹೊಂದಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ನವರಂಗವು ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ ಮುಖದ ಭಾಗಗಳು ಅವುಗಳ ಮಧ್ಯೆ ಅಷ್ಟ ಹಾಗೂ ಹದಿನಾರು ಮುಖದ ಭಾಗಗಳಿವೆ. ಈ ಕಂಬಗಳಲ್ಲಿ ಮತ್ಸ್ಯಾವತಾರ, ವರಾಹ, ವ್ಯಾಳಿ ಭಕ್ತರ ಶಿಲ್ಪಗಳನ್ನು ಕಾಣಬಹುದು. ನವರಂಗದ ಒಳಭಾಗದ ಭಿತ್ತಿಯ ಮೇಲೆ ವಿಷ್ಣುವಿನ ಕಾಳಿಂಗಮರ್ಧನ ಶಿಲ್ಪ, ವೇಣುಗೋಪಾಲಸ್ವಾಮಿ, ಗೋವು, ಬೇಡರ ಕಣ್ಣಪ್ಪ ಮುಂತಾದ ಉಬ್ಬುಶಿಲ್ಪಗಳಿವೆ.

೨

ಊರು : ಬನಸೀಹಳ್ಳಿ		**ಸ್ಥಳ**	: ಗ್ರಾಮದ ದಕ್ಷಿಣ ದಿಕ್ಕಿನಲ್ಲಿ
ಸ್ಮಾರಕ : ಏಕನಾಥೇಶ್ವರಿ ದೇವಾಲಯ		**ಅಭಿಮುಖ**	: ಉತ್ತರ
ಕಾಲ : ಕ್ರಿ.ಶ.ಸು. ೧೭ನೇ ಶತಮಾನ		**ಶೈಲಿ**	: ವಿಜಯನಗರೋತ್ತರ

ಪ್ರಾಚೀನವೂ ಪ್ರಸಿದ್ಧವೂ ಆದ ಹಾಲುರಾಮೇಶ್ವರ ಕ್ಷೇತ್ರದ ಸಮೀಪವಿರುವ ಬನಸೀಹಳ್ಳಿಯ ಪ್ರಮುಖ ದೇವಾಲಯ ಏಕನಾಥೇಶ್ವರಿ. ಈ ದೇವಾಲಯವು ತ್ರಿಕೂಟಾಚಲವಾಗಿದ್ದು ತಳವಿನ್ಯಾಸದಲ್ಲಿ ಮುಖ್ಯಗರ್ಭಗೃಹ, ಅಂತರಾಳ, ಬಲಬದಿ ಗರ್ಭಗೃಹ, ಎಡಬದಿ ಗರ್ಭಗೃಹ ನಂತರದಲ್ಲಿ ತೆರೆದ ಮಂಟಪ ಇವುಗಳು ಕಂಡುಬರುತ್ತವೆ. ಮುಖ್ಯ ಗರ್ಭಗೃಹವು ಗುಹಾರಚನೆಯಿಂದ ಕೂಡಿದೆ. ಇದರಲ್ಲಿ ಏಕನಾಥೇಶ್ವರಿ ದೇವಿಯ ಉದ್ಭವಮೂರ್ತಿ ಇದೆ. ಲಲಾಟದಲ್ಲಿ ಗಣಪತಿ ಉಬ್ಬುಶಿಲ್ಪವಿದೆ. ಬಲಭಾಗದ ಗರ್ಭಗೃಹದಲ್ಲಿ ಭೈರವ, ಎಡಭಾಗದ ಗರ್ಭಗೃಹದಲ್ಲಿ ಪರಶುರಾಮ ಮೂರ್ತಿಶಿಲ್ಪಗಳಿವೆ. ಲಲಾಟದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ. ದೇವಾಲಯದ ಒಳಭಾಗದಲ್ಲಿ ಗರ್ಭಗೃಹಗಳ ಆಸುಪಾಸುಗಳಲ್ಲಿ ರಾಜದಂಪತಿಗಳ ಉಬ್ಬುಶಿಲ್ಪಗಳಿವೆ. ಅಲ್ಲದೇ ತೆರೆದ ಮಂಟಪದ ನಾಲ್ಕು ಸ್ವತಂತ್ರ ಕಂಬಗಳಲ್ಲಿ ವಿವಿಧ ಉಬ್ಬುಶಿಲ್ಪಗಳಿದ್ದು ಅವುಗಳಲ್ಲಿ ರಾಜದಂಪತಿಗಳ ಶಿಲ್ಪಗಳು, ಹಂಸ, ಆಂಜನೇಯ ಮತ್ತು ಇತರ ಉಬ್ಬುಶಿಲ್ಪಗಳಿವೆ. ಅಲ್ಲದೇ ತೆರೆದ ಮಂಟಪದ ನಾಲ್ಕು ಸ್ವತಂತ್ರ ಕಂಬಗಳಲ್ಲಿ ವಿವಿಧ ಉಬ್ಬುಶಿಲ್ಪಗಳಿದ್ದು ಅವುಗಳಲ್ಲಿ ರಾಜದಂಪತಿಗಳ ಶಿಲ್ಪಗಳು, ಹಂಸ, ಆಂಜನೇಯ ಮತ್ತು ಇತರ ಉಬ್ಬು ಶಿಲ್ಪಗಳಿವೆ.

ದೇವಾಲಯದ ಮುಖ್ಯಗರ್ಭಗೃಹದ ಮೇಲಿನ ಶಿಖರ ಭಾಗವು ಇಟ್ಟಿಗೆ ಮತ್ತು ಗಚ್ಚುಗಾರೆಗಳಿಂದ ನಿರ್ಮಾಣಗೊಂಡಿದೆ. ಶಿಖರವು ದ್ವಿತಲ ವಿಮಾನದಿಂದ ಕೂಡಿದ್ದು ಅಲ್ಲಲ್ಲಿ ಕೋಷ್ಠಕಗಳ ರಚನೆಗಳಿವೆ. ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಿಯೂ ಇದೆ. ಶಿಖರದ ಮೇಲೆ ಸ್ತೂಪಿ ಅದರ ಮೇಲೆ ಕಳಸವೂ ಇದೆ. ದೇವಾಲಯದ ಎದುರಿಗೆ ದೀಪಸ್ತಂಭವಿದೆ. ಬನಸೀಹಳ್ಳಿ ಏಕನಾಥೇಶ್ವರಿಯನ್ನು ಪಾರ್ವತಿ ಎಂದೂ, ಮೂವತ್ಮೂರು ಹಳ್ಳಿಯ ಅಧೀದೇವತೆ ಎಂದೂ ಜನರು ಕರೆಯುತ್ತಾರೆ. ಗರ್ಭಗೃಹದಲ್ಲಿ ಏಕನಾಥಿಯ ರುಂಡ(ಎದೆಮಟ್ಟ)ದ ವಿಗ್ರಹವಿದೆ. ದೇವಾಲಯದ ಸುತ್ತಲೂ ದೊಡ್ಡ ಪ್ರಕಾರ ಮಂಟಪವಿದ್ದು, ಮುಂಭಾಗದಲ್ಲಿ ಮಾತಂಗಿ ಮತ್ತು ಮಾವುರಾಣಿಯ ಪುಟ್ಟಗುಡಿಗಳು ಎರಡು ಬದಿಗಳಲ್ಲಿ ನಿರ್ಮಿಸಲಾಗಿದೆ. ಬನಸೀಹಳ್ಳಿ ಏಕನಾಥೇಶ್ವರಿ ಜಾತ್ರೆಯು ಪ್ರತಿವರ್ಷ ಮಾಘ ಬಹುಳ ಅವಧಿಯಲ್ಲಿ ಪ್ರಾರಂಭವಾಗಿ ಒಟ್ಟು ಹತ್ತೊಂಬತ್ತು ದಿನಗಳಷ್ಟು ದೀರ್ಘಾವಧಿಯವರೆಗೆ ಜರುಗುತ್ತದೆ. ಜಾತ್ರೆಯ ಸಂದರ್ಭದಲ್ಲಿ ಸಿಡಿ ಉತ್ಸವ ಹಾಗೂ ಗಾವು ಸಿಗಿಯುವ ಆಚರಣೆ ಮಹತ್ವ ಪಡೆದಿದೆ.

೩

ಊರು : ಶ್ರೀರಾಂಪುರ (ಬೂದಿಹಾಳು)		**ಸ್ಥಳ**	: ಊರಿನ ಮಧ್ಯಭಾಗ
ಸ್ಮಾರಕ : ಬನಶಂಕರಿ ದೇವಾಲಯ		**ಅಭಿಮುಖ**	: ಪೂರ್ವ
ಕಾಲ : ಕ್ರಿ.ಶ.ಸು. ೧೭ನೇ ಶತಮಾನ		**ಶೈಲಿ**	: ವಿಜಯನಗರೋತ್ತರ

ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಹಾಗೂ ಪ್ರಾಕಾರವನ್ನು ಒಳಗೊಂಡಿದೆ. ಗರ್ಭಗೃಹ ಹಾಗೂ ಅಂತರಾಳದ ಬಾಗಿಲುವಾಡಗಳು

ಪ್ರಸ್ತುತ ಮಾರ್ಬಲ್ ಶಿಲೆಯಿಂದ ಮುಚ್ಚಲ್ಪಟ್ಟಿದ್ದು, ಹಳೆಯ ಕುರುಹುಗಳು ಗೋಚರಿಸುವುದಿಲ್ಲ. ಅಂತರಾಳದ ಬಾಗಿಲುವಾಡವು ಹಿತ್ತಾಳೆಯಿಂದ ಅಲಂಕರಿಸಲ್ಪಟ್ಟಿದೆ. ನವರಂಗವು ನಾಲ್ಕು ಸ್ವತಂತ್ರ್ಯವಾದ ಕಲಾತ್ಮಕವಾದ ಕಂಬಗಳನ್ನು ಹೊಂದಿದೆ. ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಮೂರು ಭಾಗಗಳು ಇವೆ. ನಡುವೆ ಅಷ್ಟಪೈಲು ರಚನೆಗಳು ಇವೆ. ಮೇಲೆ ಸಾಧಾರಣವಾದ ಭೋದಿಗೆ ಇದೆ. ನವರಂಗದ ಬಾಗಿಲುವಾಡವು ದ್ವಿಶಾಖೆಗಳನ್ನು ಒಳಗೊಂಡಿದೆ. ಅವುಗಳ ಲತಾಸುರುಳಿ ಅಲಂಕಾರವನ್ನು ಒಳಗೊಂಡಿದೆ. ನಂತರದಲ್ಲಿ ಮುಖಮಂಟಪವಿದೆ.

೪.

ಊರು : ಶ್ರೀರಾಂಪುರ(ಬೂದಿಹಾಳು) **ಸ್ಥಳ** : ವೇಂಗಳಾಪುರದ ರಸ್ತೆಯ ಎಡಬದಿಯಲ್ಲಿ

ಸ್ಮಾರಕ : ಕಾಳಿಕಾಂಬ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೬ನೇ ಶತಮಾನ **ಶೈಲಿ** : ವಿಜಯನಗರೋತ್ತರ

ಕಾಳಿಕಾಂಬ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದಮಂಟಪವನ್ನು ಕಾಣಬಹುದು. ಗರ್ಭಗೃಹದಲ್ಲಿ ಕಾಳಿಕಾದೇವಿಯ ಮೂರ್ತಿಶಿಲ್ಪವಿದೆ. ಇದರ ರಚನೆಯಲ್ಲಿ ತನ್ನ ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ, ಕಪಾಲವನ್ನು ಹಿಡಿದಿದ್ದಾಳೆ. ಕೊರಳಲ್ಲಿ ಕಂಠೀಹಾರ, ಪದಕಹಾರ, ಭುಜದಲ್ಲಿ ಸ್ಕಂದಮಾಲೆ ಭುಜಬಂಧ ದೇಹದಲ್ಲಿ ವೈಜಯಂತಿ ಮಾಲೆ ಧರಿಸಿದ್ದಾಳೆ. ಅಂತರಾಳದ ಬಾಗಿಲುವಾಡವು ಸ್ತಂಭ ಶಾಖೆಯನ್ನು ಹೊಂದಿದೆ. ಈ ಶಾಖೆಯ ಮೇಲಿನ ಭಾಗದಲ್ಲಿ ವ್ಯಾಳಿಯ ರಚನೆ ಇದೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಪಾದದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಮಧ್ಯೆ ಅಷ್ಟ ಹಾಗೂ ಹದಿನಾರು ಕೋನಗಳ ರಚನೆಗಳಿವೆ. ಮೇಲೆ ಪುಷ್ಪ ಬೋಧಿಗೆ ಇದೆ. ನಾಲ್ಕು ಕಂಬಗಳ ಮಧ್ಯೆಭಾಗದಲ್ಲಿ ಸುಂಧರವಾದ ಭುವನೇಶ್ವರಿ ಇದೆ. ನವರಂಗದ ಬಾಗಿಲುವಾಡವು ಸಾಧಾರಣವಾದ ಏಕಶಾಖೆಯ ರಚನೆ ಇದೆ. ಲಲಾಟದಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ದೇವಾಲಯದ ಎದುರಿಗೆ ಎರಡು ದೀಪಸ್ತಂಭಗಳಿವೆ.

೫

ಊರು : ಚಿಕ್ಕಬ್ಯಾಲದಕೆರೆ **ಸ್ಥಳ** : ಗ್ರಾಮದ ಮಧ್ಯೆ ಭಾಗ

ಸ್ಮಾರಕ : ಕರಿಯಮ್ಮದೇವಿ ದೇವಾಲಯ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೭ನೇ ಶತಮಾನ **ಶೈಲಿ** : ವಿಜಯನಗರೋತ್ತರ

ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗ ಇವೆ. ಗರ್ಭಗೃಹದಲ್ಲಿ ಕರಿಯಮ್ಮ ದೇವಿಯ ಶಿಲಾಮೂರ್ತಿ ಇದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾಗಿದ್ದು ಲಲಾಟದಲ್ಲಿ ಪದ್ಮದ ಅಲಂಕರಣೆ ಇದೆ. ಅಂತರಾಳದ ಬಾಗಿಲುವಾಡವು ಸಾಧಾರಣ ಶಾಖೆಗಳನ್ನು ಹೊಂದಿದ್ದು ಪಾದದಲ್ಲಿ ಶೈವದ್ವಾರಪಾಲಕರ ಶಿಲ್ಪಗಳು ಹಾಗೂ

ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಮೂರು ಚಚ್ಚೌಕದ ರಚನೆ ಅವುಗಳ ಮಧ್ಯೆ ಅಷ್ಟಪೈಲು ಹಾಗೂ ಹದಿನಾರು ಕೋನಗಳು ಅದರ ಮೇಲೆ ಪುಷ್ಪಬೋಧಿಗೆ ಇದೆ. ಚಚ್ಚೌಕದ ಮೇಲೆ ವಿವಿಧ ಉಬ್ಬುಶಿಲ್ಪಗಳಿದ್ದು ಅವುಗಳಲ್ಲಿ ಆಂಜನೇಯ, ಕೋತಿಗಳು, ದೇವಿ ಮತ್ತು ಇತರೆ ಶಿಲ್ಪಗಳಿವೆ. ದೇವಾಲಯವನ್ನು ಬಳಿಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ ಇಟ್ಟಿಗೆ ಗಾರೆಯಿಂದ ಮಾಡಿದ ಮೂರು ಹಂತದ ದ್ರಾವಿಡ ಶಿಖರವಿದೆ.

ಹೊಸದುರ್ಗ ತಾಲೂಕು ಪರಿಸರದ ಶಾಕ್ತ ದೇವಾಲಯ ಪರಂಪರೆಯು ಹೆಚ್ಚು ಕಂಡುಬರುವುದು ವಿಜಯನಗರೋತ್ತರ ಕಾಲದಲ್ಲಿ. ಅದಕ್ಕೂ ಹಿಂದಿನ ದೇವಾಲಯಗಳು ಈ ಪರಿಸರದಲ್ಲಿ ಕಂಡುಬರುವುದಿಲ್ಲ. ಒಂದು ವೇಳೆ ಅತ್ಯಂತ ಪ್ರಾಚೀನ ದೇವಾಲಯಗಳು ಇದ್ದಿದ್ದರೂ ಅವು ನಾಶವಾಗಿದ್ದಿರಲೂಬಹುದು. ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿರುವ ಬಹುತೇಕ ಶಾಕ್ತದೇವಾಲಯಗಳು ವಿಜಯನಗರೋತ್ತರ ಕಾಲಘಟ್ಟದವುಗಳು.

೫.೧.೪. ಜೈನ ಬಸದಿಗಳು

ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಜೈನಧರ್ಮದ ಕೊಡುಗೆ ಅತ್ಯ ಅಮೂಲ್ಯವಾದುದು. ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ.[೧೯] ಕರ್ನಾಟಕದ ನೂರಾರು ಶಾಸನಗಳು, ಗ್ರಂಥಗಳು, ಇತರ ಸಾಂಸ್ಕೃತಿಕ ಆಕರಗಳು ಜೈನಧರ್ಮ ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳನ್ನು ದಾಖಲಿಸಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ, ಧಾರ್ಮಿಕ, ಆರ್ಥಿಕ ಸಾಮಾಜಿಕ ವಲಯಗಳನ್ನು ರೂಪಿಸುವಲ್ಲಿ ಜೈನಧರ್ಮದ ಪಾತ್ರ ಹಿರಿದು ಹಾಗೂ ಘನವಾದುದು.[೨೦]

ಕರ್ನಾಟಕಕ್ಕೆ ಜೈನಧರ್ಮ ಯಾವಾಗ ಆಗಮನವಾಯಿತು ಎಂದು ಹೇಳುವುದು ಕಷ್ಟ ಉತ್ತರ ಭಾರತದಲ್ಲಿ ೧೨ ವರ್ಷಗಳ ಕಾಲ ಕ್ಷಾಮ ಉಂಟಾದಾಗ ಜೈನಾಚಾರ್ಯ ಭದ್ರಬಾಹು ೧೨೦೦ ಮುನಿಸಂಘದೊಡನೆ ದಕ್ಷಿಣಕ್ಕೆ ಬರುತ್ತಾನೆ. ಭದ್ರಬಾಹುವಿನೊಡನೆ ಶಿಷ್ಯ ಚಂದ್ರಗುಪ್ತನೂ ಕಳ್ವಪ್ಪುವಿಗೆ (ಶ್ರವಣಬೆಳಗೊಳ) ಬಂದನು.[೨೧] ಭದ್ರಬಾಹುವು ಭಟ್ಟಾಕರು ಕಳ್ಪಪ್ಪು ನಾಡನ್ನು ಸಮೀಪಿಸಿದಾಗ ತನ್ನ ಅವಸಾನ ಕಾಲ ಹತ್ತಿರವಾಯಿತೆಂದು ಶಿಷ್ಯ ಚಂದ್ರಗುಪ್ತನೊಡನೆ ಇಲ್ಲಿಯೇ ಉಳಿಯುತ್ತಾರೆ. ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದಂದಿನಿಂದ ಜೈನಧರ್ಮವು ಈ ಪ್ರದೇಶದಲ್ಲಿ ಅಭಿವೃದ್ಧಿಯಾಯಿತು. ಭದ್ರಬಾಹುವು ಸಮಾಧಿ ಮರಣ ಹೊಂದಿದ ಮೇಲೆ ಚಂದ್ರಗುಪ್ತನು ನಿಷಿಧಿ ಪೂಜಿಸುತ್ತ ಇಲ್ಲಿಯೇ ಇದ್ದನು. ದ್ರಾವಿಡ ದೇಶಕ್ಕೆ ಹೋಗಿದ್ದ ಮುನಿಸಂಘ ಮನಹ ಬಂದು ಚಂದ್ರಗುಪ್ತನಿಗೆ ಸನ್ಯಾಸನ ಕೊಟ್ಟು ಹಿಂದುರಿಗಿತು ಎಂದು ಕ್ರಿ.ಶ. ೬೦೦ರ ಚಿಕ್ಕ ಬೆಟ್ಟದ ಶಾಸನ ಉಲ್ಲೇಖಿಸುತ್ತದೆ. ಈ ಹಿನ್ನೆಲೆಯನ್ನು ಗಮನಿಸಿದರೆ ಕ್ರಿ.ಪೂ.೩ನೇ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತೆಂಬುದು ತಿಳಿಯುತ್ತದೆ. ಕರ್ನಾಟಕದ ಪ್ರಬಲ ಮತ್ತು ಪ್ರಮುಖ ಎಲ್ಲಾ ಅರಸುಮನೆತನಗಳು ಜೈನಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿವೆ. ಅದರಲ್ಲಿ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು,

ಮೈಸೂರು ಒಡೆಯರು ಮುಂತಾಗಿ ಜೈನಧರ್ಮವನ್ನು ಅನೇಕ ರೀತಿಯಲ್ಲಿ ಪೋಷಿಸಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ಸಾಳ್ವರು, ಚಂಗಾಳ್ವರು, ಕೊಂಗಾಳ್ವರು, ಸೌದತ್ತಿಯ ರಟ್ಟರು, ಶಿಲಾಹಾರರು, ಕಾರ್ಕಳದ ಭೈರವರಸರು, ಸಾಂತರರಲ್ಲಿಯೂ ಜೈನಧರ್ಮದ ಬಗೆಗಿನ ನಿಷ್ಠೆಯನ್ನು ಕಾಣಬಹುದು.[೧೨]

ಜೈನಧರ್ಮದ ಪ್ರಾರಂಭದ ಘಟ್ಟಗಳಲ್ಲಿ ಬಸದಿ ಕಟ್ಟಿಸುವ, ಜಿನಮೂರ್ತಿಗಳನ್ನು ಮಾಡಿಸುವ ಪದ್ಧತಿ ಇರಲಿಲ್ಲ. ತೀರ್ಥಂಕರ ಮೂರ್ತಿಗಳನ್ನು ಮಾಡಿಸುವ ಬಸದಿಗಳನ್ನು ಕಟ್ಟಿಸುವ ಪದ್ಧತಿ ಆಗಮೋತ್ತರ ಕಾಲದಲ್ಲಿ ಬೆಳೆದ ಸಂಪ್ರದಾಯ.[೧೩] ಈ ಸಂಪ್ರದಾಯವು ಮೌರ್ಯರ ಆಳ್ವಿಕೆಯ ಕಾಲದಲ್ಲಿ ಪ್ರಚಲಿತಗೊಂಡಿತು. ಕ್ರಿಪೂ. ೩೦೦ರ ಆಸುಪಾಸಿನಲ್ಲಿ ಮಹಾವೀರರನ್ನು ವೈಭವೀಕರಿಸಿ ದೈವತ್ವದ ನೆಲೆಗೆ ಒಯ್ಯಲಾಯಿತು. ನಂದರ ಆಳ್ವಿಕೆಯ ವೇಳೆಗೆ ಕ್ರಿಪೂ.೫–೪ನೆಯ ಶತಮಾನದಲ್ಲಿ ಜಿನಮೂರ್ತಿ ಪೂಜೆಯ ಸಂಪ್ರದಾಯ ಪ್ರಾರಂಭವಾಯಿತು.[೧೪] ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಜಿನಮಂದಿರಗಳನ್ನೂ 'ಅರ್ಹಂತಾಲಯ', 'ಜಿನವೇಶ್ಮ', 'ಜಿನಸದ್ಮ', 'ಜಿನಭವನ', 'ಜಿನಾಲಯ', 'ಚೈತ್ಯ', 'ಚೈತ್ಯಾಲಯ', 'ಚೇದೀಯ' ಮೊದಲಾದ ಹೆಸರುಗಳಿಂದ ಕರೆಯಲಾಗಿದೆ.[೧೫] ಕರ್ನಾಟಕದಲ್ಲಿ 'ಬಸದಿ' ಪದ ಪ್ರಯೋಗವು ಮೊದಲ ಬಾರಿಗೆ ಕ್ರಿ.ಶ.೮ನೇ ಶತಮಾನದ ಶ್ರವಣ ಬೆಳಗೊಳದ 'ಸಿವಮಾರನಬಸದಿ' ಶಾಸನದಲ್ಲಿ ಉಲ್ಲೇಖವಾಗಿದೆ.[೧೬] ಸ್ಥಾವರ ಬಸದಿಗಳ ನಿರ್ಮಾಣಕ್ಕೆ ಕಾಲಕ್ರಮದಲ್ಲಿ ನಾಂದಿ ಹಾಡಿದವರು ಗಂಗರು. ಗಂಗರ ಕಾಲದಲ್ಲಿಯೇ ಶ್ರವಣಬೆಳಗೊಳ, ಕೋಗಳಿ, ಪುಲಿಗೆರೆ(ಲಕ್ಷ್ಮೇಶ್ವರ) ಕಂಬದಳ್ಳಿ ಮುಂತಾದ ಕ್ಷೇತ್ರಗಳು ಬಸದಿಗಳ ನಿರ್ಮಾಣ ಮತ್ತು ಜೈನ ಧಾರ್ಮಿಕ ಚಟುವಟಿಕೆಗಳಿಂದಾಗಿ ದೂರ ಪ್ರಾಂತದವರ ಗಮನವನ್ನು ಸೆಳೆದವು.[೧೭] ಬಾದಾಮಿ ಚಾಲುಕ್ಯರು ಐಹೊಳೆ ಮತ್ತು ಬಾದಾಮಿಗಳಲ್ಲಿ ಬಸದಿಗಳನ್ನು ನಿರ್ಮಾಣ ಮಾಡಿದರು. ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರದ ಛೋಟಾ ಕೈಲಾಸ, ಜಗನ್ನಾಥಸಭೆ, ಬಂಕಾಪುರದ ಚೌವ್ವೀಸ ತೀರ್ಥಂಕರ ಜಿನಾಲಯ, ಮಾನ್ಯಖೇಟದ ಮಹಾವೀರ ಬಸದಿ ಇವುಗಳು ಪ್ರಸಿದ್ಧ ಜೈನ ಕೇಂದ್ರಗಳಾಗಿದ್ದವು.[೧೮] ಹೊಯ್ಸಳರು ಶಶಕಪುರ ಅಥವಾ ಸೊಸೆವೂರಿನಿಂದ ಬಂದಿದ್ದು ಈ ಮನೆತನ ವರ್ಧಮಾನ ಅಥವಾ ಸುದತ್ತನೆಂಬ ಜೈನ ಆಚಾರ್ಯರಿಂದ ಸ್ಥಾಪನೆಗೊಂಡಂತೆ ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳ ವಂಶದ ಮೂಲ ಪುರುಷ ಸಳನಿಂದ ಪ್ರಾರಂಭವಾಗಿ ಕ್ರಿ.ಶ. ೧೦೦೬ ರಿಂದ ೧೨೦೦ರವರೆಗೆ ಸುಮಾರು ೧೫೦ ವರ್ಷಗಳವರೆಗೆ ಹೊಯ್ಸಳರು ಜೈನಧರ್ಮದ ಅನುಯಾಯಿಗಳಾಗಿದ್ದರು.[೧೯] ಹೊಯ್ಸಳರ ಕಾಲವೊಂದರಲ್ಲಿಯೇ ನೂರಕ್ಕೂ ಹೆಚ್ಚು ಬಸದಿಗಳ ವಿವರ ಸಿಗುತ್ತಿದ್ದು ಇದರಿಂದ ಆ ಕಾಲಕ್ಕೆ ಜೈನಧರ್ಮಕ್ಕಿದ್ದ ರಾಜಾಶ್ರಯದ ವಿಚಾರವನ್ನು ತಿಳಿಯಬಹುದು.[೨೦]

ಕ್ರಿ.ಶ. ೧೪ನೇ ಶತಮಾನದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಜೈನಧರ್ಮ ತಕ್ಕಮಟ್ಟಿಗೆ ಪ್ರೋತ್ಸಾಹವನ್ನು ಪಡೆಯಿತು. ಇವರ ಕಾಲದಲ್ಲಿ ವೇಣುಪುರ (ಮೂಡುಬಿದರೆ) ಪ್ರಮುಖ ಜೈನ ಕೇಂದ್ರವಾಗಿದ್ದಿತು.[೨೧] ಒಟ್ಟಾರೆ ಕ್ರಿಪೂ. ೩–೪ನೇ ಶತಮಾನಗಳಿಂದ ಕ್ರಿ.ಶ. ೧೧ನೇ ಶತಮಾನದವರೆಗೆ ಅತ್ಯಂತ ವೈಭವದಿಂದ ರಾಜಮಹಾರಾಜರ ಮನ್ನಣೆಯಲ್ಲಿ ಪೋಷಣೆಯಲ್ಲಿ ರಾಜಧರ್ಮವಾಗಿ ಮೆರೆದ ಜೈನಧರ್ಮ ಹೊಯ್ಸಳ ಸಾಮ್ರಾಜ್ಯದಲ್ಲಿ

ರಾಮಾನುಜರ ಆಗಮನ ಹಾಗೂ ಶ್ರೀವೈಷ್ಣವ ಧರ್ಮದ ಪ್ರಾಬಲ್ಯದಿಂದ ನಿಧಾನವಾಗಿ ಅವನತಿಯ ಹೆಜ್ಜೆಗಳನ್ನಿಟ್ಟಿತು.[೨೨]

ಹೊಸದುರ್ಗ ತಾಲೂಕು ಪರಿಸರದಲ್ಲಿ ಕೆಲವು ಜೈನ ಬಸದಿಗಳನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖವಾದ ಎರಡು ಬಸದಿಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

೧

ಊರು : ಹೆಗ್ಗೆರೆ **ಸ್ಥಳ** : ಗ್ರಾಮದ ಮಧ್ಯಭಾಗ

ಸ್ಮಾರಕ : ಸುಪಾರ್ಶ್ವನಾಥ ಬಸದಿ **ಅಭಿಮುಖ** : ಪೂರ್ವ

ಕಾಲ : ಕ್ರಿ.ಶ.ಸು. ೧೨ನೇ ಶತಮಾನ **ಶೈಲಿ** : ಹೊಯ್ಸಳ

ಹೊಸದುರ್ಗ ತಾಲೂಕಿನ ಪ್ರಾಚೀನ ಗ್ರಾಮಗಳಲ್ಲಿ ಹೆಗ್ಗೆರೆಯು ಒಂದು. ಕ್ರಿ.ಶ. ೧೫ನೇ ಶತಮಾನದಲ್ಲಿ ಬೂದಿಹಾಳು ಸೀಮೆಗೆ 'ಹೆಗ್ಗೆರೆ'ಯು ಸೇರಿದ್ದಿತು.[೨೩] ಈ ಗ್ರಾಮದಲ್ಲಿ ಚಾಲುಕ್ಯ ಹಾಗೂ ಹೊಯ್ಸಳ ಸ್ಮಾರಕಗಳು ಹೇರಳವಾಗಿವೆ. ಇಲ್ಲಿನ ಹೊಯ್ಸಳ ಸ್ಮಾರಕಗಳಲ್ಲಿ ಬಹುಮುಖ್ಯವಾಗಿ 'ಸುಪಾರ್ಶ್ವನಾಥ ಬಸದಿ'ಯನ್ನು ಕಾಣಬಹುದು. ಬಸದಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಸಿಂಹಪೀಠದ ಮೇಲೆ ಬ್ರಹ್ಮದೇವರನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಹಿಂಭಾಗ ಕಿರು ಜಗತಿ ನಿರ್ಮಿಸಿ ಅಲ್ಲಿ ಸುಪಾರ್ಶ್ವನಾಥನ ಮೂರ್ತಿಶಿಲ್ಪವನ್ನು ಸ್ಥಾಪಿಸಲಾಗಿದೆ. ಭಿತ್ತಿಯಲ್ಲಿ ಚಾಚುಪಟ್ಟಿಕೆ, ಮೂಲೆ ಕಂಬಗಳಿವೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣೆ ಇದೆ. ಗರ್ಭಗೃಹದ ಬಾಗಿಲುವಾಡವು ಪಂಚಶಾಖೆಗಳನ್ನು ಹೊಂದಿದ್ದು, ಅವು ಸರಳವಾಗಿವೆ. ಸಾಧಾರಣ ಲಲಾಟಬಿಂಬವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಷ್ಟೇ ವಿಸ್ತೀರ್ಣದ ಅಂತರಾಳವಿದೆ. ಅಂತರಾಳದಲ್ಲಿ ನಾಲ್ಕು ಮೂಲೆಗಂಬಗಳಿವೆ. ಅಂತರಾಳದ ಪ್ರವೇಶ ತ್ರಿಶಾಖಾಲಂಕಾರದಲ್ಲಿದೆ. ದ್ವಾರಗಳ ಬದಿಗಳಲ್ಲಿ ಅರೆಗಂಬಗಳಿದ್ದು ಅವುಗಳಿಗೆ ಹೊಂದಿ ಕೊಂಡಂತೆ ಜಾಲಂಧ್ರಗಳಿವೆ.

ನವರಂಗವು ಒಂಭತ್ತು ಅಂಕಣಗಳನ್ನು ಹೊಂದಿದೆ. ಕಂಬಗಳಲ್ಲಿ ಪೀಠ, ಪಾದ, ಉಂಗುರಾಕಾರದ ಕಾಂಡ ಭಾಗ, ಘಂಟಾಕಾರ, ವೃತ್ತಾಕಾರದ ಫಲಕ ಮತ್ತು ತರಂಗ ಬೋಧಿಗೆ ಇದೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣೆ ಇದೆ. ಒಂಬತ್ತು ಅಂಕಣಗಳಲ್ಲಿ ಒಂಭತ್ತು ಪದ್ಮದ ಅಲಂಕರಣೆಗಳು ಇವೆ. ನವರಂಗದ ಭಿತ್ತಿಯಲ್ಲಿ ಹನ್ನೆರಡು ಅರೆಗಂಬಗಳಿವೆ. ದೇವಾಲಯದ ಮುಖ್ಯ ಪ್ರವೇಶದ್ವಾರವು ಸರಳವಾದ ಪಂಚಶಾಖೆಗಳಿಂದ ಕೂಡಿದೆ. ದೇವಾಲಯದ ಬಾಹ್ಯ ಭಿತ್ತಿಯನ್ನು ಗಮನಿಸಿದರೆ ಸಂಪೂರ್ಣ ದೇವಾಲಯ ಅಧಿಷ್ಠಾನದ ಮೇಲೆ ನಿಂತಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಿ, ಕುಮುದ, ಕಂಠ, ದಂತಪಕ್ತಿ ಮತ್ತು ಕಪೋತಗಳಿವೆ. ಗರ್ಭಗೃಹದ ಭಿತ್ತಿ, ತ್ರಿರಥ, ನವರಂಗದ ಭಿತ್ತಿ ಪಂಚರಥ ಮಾದರಿಯಲ್ಲಿ ಗೋಚರಿಸಿದೆ. ಭಿತ್ತಿಯ ಮೇಲೆ ಕಪೋತ, ಕಪೋತದ ಮೇಲೆ ಹಾರಭಾಗ ಕಾಣಿಸಿದೆ. ಹಾರದ ನಂತರದ ಭಾಗ ಆಧುನಿಕವಾಗಿ ಜೀರ್ಣೋದ್ಧಾರಗೊಂಡಿದೆ. ಭಿತ್ತಿಯು ಭದ್ರ ಮತ್ತು ಸಲಿಲಾಂತರಗಳನ್ನು

ಹೊಂದಿದೆ. ಪ್ರತಿ ಭದ್ರ ಸಲಿಲಾಂತರಗಳಲ್ಲಿ ಅರಳಿದ ಪದ್ಮಗಳ ಕೆತ್ತನೆ ಇದೆ. ಸಾಮಾನ್ಯವಾಗಿ ಭಿತ್ತಿಯ ಭದ್ರ ಸಲಿಲಾಂತರಗಳಲ್ಲಿ ಸ್ತಂಭ ಪಂಜರ ಕೋಷ್ಠ ಪಂಜರಗಳನ್ನು ಕಾಣುತ್ತೇವೆ. ಕೆಲವೊಮ್ಮೆ ಕಿರು ಭಿತ್ತಿಶಿಲ್ಪಗಳನ್ನು ಕಾಣಬಹುದು. ಬಸದಿಯ ಮುಂಭಾಗ ಶಾಸನ, ನಿಷದಿ ಇತ್ಯಾದಿಗಳಿವೆ.

೨

ಊರು	: ಜಾನಕಲ್ಲು	**ಸ್ಥಳ**	: ಗ್ರಾಮದ ಮಧ್ಯಭಾಗ
ಸ್ಮಾರಕ	: ನೇಮಿನಾಥ ಮತ್ತು ಪದ್ಮಾವತಿ ಬಸದಿ	**ಅಭಿಮುಖ**	: ಉತ್ತರ
ಕಾಲ	: ಕ್ರಿ.ಶ.ಸು. ೧೧-೧೨ನೇ ಶತಮಾನ	**ಶೈಲಿ**	: ಹೊಯ್ಸಳ

ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವಿದೆ. ಅಂತರಾಳದಲ್ಲಿ ನಾಲ್ಕು ಕಲಾತ್ಮಕ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ೩ ಚಚ್ಚೌಕ ಭಾಗಗಳು ಅವುಗಳ ಮಧ್ಯೆ ಫಲಕ, ಸಾಧಾರಣ ಬೋಧಿಗೆ ಇದೆ. ಕೆಳಗಿನ ಚಚ್ಚೌಕದಲ್ಲಿ ನಾಗಬಂಧವಿದೆ. ಈ ಕಂಬಗಳ ಮೇಲ್ಭಾಗದಲ್ಲಿ ಅಲಂಕೃತ ಭುವನೇಶ್ವರಿ ಇದೆ. ಗರ್ಭಗೃಹ, ಅಂತರಾಳದ ಬಾಗಿಲುವಾಡವು ಆಧುನಿಕವಾಗಿ ನವೀಕರಣಗೊಂಡಿದ್ದು ಮೂಲರಚನೆಗಳು ಕಂಡುಬರುವುದಿಲ್ಲ. ಗರ್ಭಗೃಹದಲ್ಲಿ ೨೧/೨ ಅಡಿ ಎತ್ತರದ ನೇಮಿನಾಥ ಮೂರ್ತಿಶಿಲ್ಪವಿದೆ. ಅಂತರಾಳದಲ್ಲಿ ಪದ್ಮಾವತಿದೇವಿ ಮೂರ್ತಿಶಿಲ್ಪವಿದೆ.

ನವರಂಗದ ಬಾಗಿಲುವಾಡವು ದ್ವಿಶಾಖೆಗಳನ್ನು ಹೊಂದಿದ್ದು ಅವುಗಳಲ್ಲಿ ಪದ್ಮ, ವಜ್ರ, ಲತಾಸುರುಳಿ ಅಲಂಕಾರಗಳಿವೆ. ಲಲಾಟದಲ್ಲಿ ಜಿನಬಿಂಬವಿದೆ. ಪಾದದಲ್ಲಿ ಜೈನ ದ್ವಾರಪಾಲಕರ ಕೆತ್ತನೆಗಳಿವೆ. ದೇವಾಲಯದ ಎದುರಿಗೆ ಆಧುನಿಕ ಮಾನಸ್ಥಂಭವಿದೆ. ಗರ್ಭಗೃಹದ ಮೇಲೆ ಆಧುನಿಕ ಕಾಲದ ನಾಗರಶೈಲಿಯ ಶಿಖರವಿದೆ.

ಹೊಸದುರ್ಗ ತಾಲೂಕು ಪರಿಸರದ ಜೈನ ಧರ್ಮದ ಕುರುಹುಗಳಲ್ಲಿ ಜೈನ ಬಸದಿಗಳು, ಜೈನ ಶಾಸನಗಳು ಹಾಗೂ ನಿಷದಿ ಶಿಲ್ಪಗಳು ಬಹುಮುಖ್ಯವಾಗಿದ್ದು ಈ ಪರಿಸರದ ಜೈನಧರ್ಮದ ಅಧ್ಯಯನಕ್ಕೆ ಸಾಕ್ಷಿಯಾಗಿವೆ. ಈ ಮೇಲೆ ವಿವರಿಸಿದ ಎರಡೂ ಬಸದಿಗಳು ಕ್ರಿ.ಶ. ೧೨ನೇ ಶತಮಾನದವುಗಳಾಗಿದ್ದು ಹೊಯ್ಸಳ ಶೈಲಿಯಲ್ಲಿವೆ. ಈ ಕಾಲಘಟ್ಟದಲ್ಲಿ ಹೆಗ್ಗೆರೆ ಹಾಗೂ ಜಾನಕಲ್ಲು ಪ್ರಮುಖ ಜೈನರ ಧಾರ್ಮಿಕ ಕೇಂದ್ರಗಳಾಗಿದ್ದವು. ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿಯು ಶಾಸನದಲ್ಲಿ ಚನ್ನಪಾರ್ಶ್ವದೇವರ ಬಸದಿ ಎಂದು ಉಲ್ಲೇಖಗೊಂಡಿದೆ.[illegible] ಇಲ್ಲಿನ ಮೂಲ ತೀರ್ಥಂಕರರ ಮೂರ್ತಿಶಿಲ್ಪವು ಇಲ್ಲವಾಗಿ ನಂತರದ ಕಾಲಘಟ್ಟದಲ್ಲಿ ಸುಪಾರ್ಶ್ವನಾಥ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.[illegible] ಕ್ರಿ.ಶ. ೧೧೬೧ರ ಶಾಸನವು ಗೋವಿದೇವನು ತನ್ನ ಮಡದಿ ಮಹಾದೇವಿ ನಾಯಕಿತಿ 'ಪರೋಕ್ಷ ವಿನಯ'ವಾಗಿ ಈ ಬಸದಿಯನ್ನು ಕಟ್ಟಿಸಿ 'ಚನ್ನಪಾರ್ಶ್ವದೇವರ ಬಸದಿ' ಎಂದು ಹೆಸರಿಟ್ಟನೆಂದು ಸಾರುತ್ತದೆ.[illegible] ಈ ಬಸದಿಯಲ್ಲಿ ನಡೆಯುತ್ತಿದ್ದ ಎಂಟು ರೀತಿಯ ಪೂಜೆಗಳಿಗಾಗಿ ಹಾಗೂ ಜೈನ ಸಂನ್ಯಾಸಿಗಳ ಆಹಾರಕ್ಕಾಗಿ ಬಿಟ್ಟಿದೇವನು

ಅನೇಕ ರೀತಿಯ ಸುಂಕಗಳನ್ನು ದತ್ತಿ ಬಿಟ್ಟಿದ್ದನು. ಜಕ್ಕಣನೆಂಬುವನು ಮಲ್ಲಿಗೆರೆ ಬಳಿಯ ಗದ್ದೆ ಹಾಗೂ ಬೆದ್ದಲು ಭೂಮಿಯನು ದತ್ತಿ ನೀಡಿದ್ದನು. ಹೊಯ್ಸಳರ ವಲ್ಲಭರಾಜದೇವನು ಬೂದಾಳು ಸೀಮೆಯ ಈ ಬಸದಿಯ ಜೀರ್ಣೋದ್ಧಾರ ಮಾಡಿಸಿದನೆಂದೂ ಈ ಕಾರ್ಯಕ್ಕಾಗಿ ಅವನು ಕೆಲವು ಗದ್ದೆಗಳನ್ನು ದತ್ತಿಬಿಟ್ಟಿದ್ದನೆಂದೂ ಶಾಸನದಿಂದ ತಿಳಿಯುವುದು.[೨೩] ಸಿರುಮನ ತಮ್ಮನಾದ ಮಲ್ಲಯ್ಯನಾಯಕನು ತನ್ನ ಅಧಿಕಾರಾವಧಿಯಲ್ಲಿ ಬಸದಿಗೆ ಕೆಲವು ಗದ್ದೆ-ಬೆದ್ದಲುಗಳನ್ನು ದತ್ತಿ ನೀಡಿದ್ದನು. ಈ ರೀತಿಯಾಗಿ ಹೆಗ್ಗೆರೆಯ ಬಸದಿಗೆ ಅಪಾರವಾದ ದಾನದತ್ತಿಗಳನ್ನು ಹೊಯ್ಸಳ ಕಾಲದಲ್ಲಿ ನೀಡಿರುವುದನ್ನು ಶಾಸನಗಳು ಹರಹುತ್ತವೆ. ಅದೇ ರೀತಿ ಜಾನಕಲ್ಲು ಪ್ರಾಚೀನ ಕಾಲದಿಂದಲೂ ಒಂದು ಪ್ರಸಿದ್ಧ ಜೈನಕ್ಷೇತ್ರವಾಗಿದ್ದಿತು. ಚಾರಿತ್ರಿಕ ಹಾಗೂ ಜನಪದ ಆಧಾರಗಳಿಂದ ಇಲ್ಲಿ ಬಹು ಹಿಂದಿನ ಕಾಲದಿಂದಲೂ ಜೈನರ ವಾಸಸ್ಥಾನವಾಗಿತ್ತು. ಇಲ್ಲಿ ಒಂದು ಸಾವಿರ ಜೈನ ವಸತಿಗಳಿದ್ದವೆಂದು ಹೇಳಲಾಗಿದೆ.[೨೪] ಈ ಗ್ರಾಮದ 'ದೇವರಮರಡಿ' ಬಂಡೆಗಲ್ಲಿನ ಮೇಲೆ ಜೈನಯತಿಗಳು ಧ್ಯಾನಕ್ಕೆ ಕೂರುತ್ತಿದ್ದುದರಿಂದ 'ಧ್ಯಾನಕಲ್ಲು' ಎಂದೂ ನಂತರ ಅದು ಜೈನಕಲ್ಲು > ಜಾನಕಲ್ಲು ಆಯಿತ್ತೆಂದು ತಿಳಿದುಬರುವುದು.[೨೫] ಇಲ್ಲಿನ ನೇಮಿನಾಥ ಮತ್ತು ಪದ್ಮಾವತಿ ಬಸದಿಯು ಕ್ರಿ.ಶ. ೧೧-೧೨ನೇ ಶತಮಾನದ್ದಾಗಿದ್ದು ಹೊಯ್ಸಳ ಶೈಲಿಯಲ್ಲಿದೆ. ಒಟ್ಟಾರೆ ಹೊಸದುರ್ಗ ತಾಲೂಕಿನ ಜೈನ ಸಾಂಸ್ಕೃತಿಕ ಪರಂಪರೆಗೆ ಇಲ್ಲಿನ ಬಸದಿಗಳು ತನ್ನದೇ ಆದ ಕೊಡುಗೆಯನ್ನು ನೀಡಿವೆ.

ಒಟ್ಟಾರೆ ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕವಾಗಿ ಹುಟ್ಟಿ ಬೆಳೆದವುಗಳಾಗಿವೆ. ಇವು ಮಾನವನ ಸಾಂಸ್ಕೃತಿಕ ಜೀವನದಲ್ಲಿ ವಹಿಸುವ ಪಾತ್ರ ಅದ್ವಿತೀಯವಾದುದು. ಭಾರತದಲ್ಲಿ ಹರಪ್ಪ ಸಂಸ್ಕೃತಿಯ ಕಾಲಘಟ್ಟದಿಂದಲೇ ದೇವಾಲಯಗಳ ಪ್ರಾಚೀನತೆಯನ್ನು ಗುರುತಿಸಬಹುದಾಗಿದ್ದು, ಆಧುನಿಕ ಕಾಲದವರೆಗೂ ಇವುಗಳ ನಿರಂತರತೆಯನ್ನು ಕಾಣಬಹುದು. ದಕ್ಷಿಣ ಭಾರತದ ಸಾಂಸ್ಕೃತಿಕ ಪರಿವಾರದ ಕರ್ನಾಟಕದಲ್ಲಿ ಮೌರ್ಯ ಮತ್ತು ಶಾತವಾಹನರ ಕಾಲಘಟ್ಟದಿಂದಲೇ ದೇವಾಲಯಗಳ ಸಾಂಸ್ಕೃತಿಕ ಚರಿತ್ರೆಯನ್ನು ವಿಭಿನ್ನ ಆಧಾರಗಳ ಮೂಲಕ ಗುರುತಿಸಬಹುದಾಗಿದ್ದು, ಕದಂಬ ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ನೊಳಂಬ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಇವುಗಳ ಪರಂಪರೆಯು ಕೊಂಡಿಯೋಪಾದಿಯಲ್ಲಿ ಆಯಾ ಭೌಗೋಳಿಕ ಪರಿಸರ ಹಾಗೂ ಬದಲಾದ ರಾಜಕೀಯ, ಸಾಮಾಜಿಕ ಧಾರ್ಮಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ರಚನೆಗೊಂಡಿರುವುದು ವೇದ್ಯವಾಗುತ್ತದೆ. ಅದೇ ರೀತಿ ಹೊಸದುರ್ಗ ತಾಲೂಕು ಪರಿಸರದಲ್ಲಿರುವ ದೇವಾಲಯಗಳು ಇಲ್ಲಿನ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಅನೇಕ ಅಮೂಲಾಗ್ರ ಮಾಹಿತಿಗಳನ್ನು ಒದಗಿಸುತ್ತವೆ. ಇಲ್ಲಿನ ದೇವಾಲಯಗಳನ್ನು ವಿವಿಧ ರಾಜಮನೆತನಗಳು, ತಮ್ಮ ಆಡಳಿತಾವಧಿಯ ಆಡಳಿತ ವರ್ಗಗಳ ಮೂಲಕ ತಮ್ಮ ಕಾಲದ ವಾಸ್ತುಶೈಲಿಯಲ್ಲಿ ನಿರ್ಮಾಣ ಹಾಗೂ ಜೀರ್ಣೋದ್ಧಾರ ಮಾಡಿರುವುದು ಆಧಾರಗಳಿಂದ ತಿಳಿದುಬರುತ್ತದೆ. ಇಲ್ಲಿ ದೊರೆತ ವಾಸ್ತುಶೈಲಿಯ ಆಧಾರಗಳಿಂದಾಗಿ ಮಳಲಿಯ ಕಲ್ಲೇಶ್ವರ ದೇವಾಲಯವು ಈ ಪ್ರದೇಶದ ಅತ್ಯಂತ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯವನ್ನು ನಿರ್ಮಿಸಿದವರ ಮಾಹಿತಿ ಲಭ್ಯವಿಲ್ಲ. ಆದರೆ ವಾಸ್ತುಶೈಲಿಯ ರಚನೆಯು

ಆಧಾರಗಳಿಂದಾಗಿ ಇದು ರಾಷ್ಟ್ರಕೂಟರ ಕಾಲದ್ದಾಗಿದೆ. ಇಟ್ಟಿಗೆ ದೇವಾಲಯವಾಗಿರುವ ಇದು ಗರ್ಭಗೃಹ ಹಾಗೂ ಅಂತರಾಳವನ್ನು ಒಳಗೊಂಡಿದ್ದು, ಅತ್ಯಂತ ಕಡಿಮೆ ಎತ್ತರವುಳ್ಳ ದೇವಾಲಯವಾಗಿದೆ. ರಾಷ್ಟ್ರಕೂಟರ ಕಾಲದ ಇಟ್ಟಿಗೆ ದೇವಾಲಯಗಳನ್ನು ಮೊಳಕಾಲ್ಮೂರು ತಾಲೂಕಿನ ಜಟಂಗಿ ಬೆಟ್ಟದ ರಾಮೇಶ್ವರ ಹಾಗೂ ಚಿತ್ರದುರ್ಗ ತಾಲೂಕಿನ ಇಸಾಮುದ್ರದ ಭೋಗೇಶ್ವರ ದೇವಾಲಯವನ್ನು ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಕ್ರಿ.ಶ. ೭೮೮ ರಿಂದ ೯೮೨ ರವರೆಗೆ ರಾಷ್ಟ್ರಕೂಟರು ಆಳಿರುವುದಕ್ಕೆ ಕೆಲವೊಂದು ಶಾಸನಗಳು ಆಧಾರಗಳಾಗಿವೆ. 'ಕದಂಬಳಿಗೆ-೧೦೦೦' ಹಾಗೂ 'ನೊಳಂಬವಾಡಿ-೩೨೦೦೦' ಪ್ರಾಂತ್ಯಗಳಲ್ಲಿ ಹೊಸದುರ್ಗ ಪರಿಸರ ಅಂತರ್ಗತವಾಗಿದ್ದು ಈ ಪರಿಸರದ ಸಾಂಸ್ಕೃತಿಕ ಚರಿತ್ರೆಯ ಮೇಲೆ ರಾಷ್ಟ್ರಕೂಟರ ಪ್ರಭಾವದಿಂದ ಮಳಲಿಯ ಪರಿಸರದ ಹೆಬ್ಬಳ್ಳಿಯ ಕಲ್ಲೇಶ್ವರ ದೇವಾಲಯ ಬಳಿಯ ಸುಮಾರು ನಾಲ್ಕು ಶಾಸನೋಕ್ತ ತುರುಗೋಳ್ ಸ್ಮಾರಕ ಶಿಲ್ಪಗಳಲ್ಲಿ ಕ್ರಿ.ಶ. ೯೭೬, ಕ್ರಿ.ಶ. ೯೭೭ರ ಶಾಸನಗಳ ಈ ಪರಿಸರದಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಪ್ರಸ್ತಾಪಿಸುತ್ತವೆ. ಆದುದರಿಂದಾಗಿ ಕ್ರಿ.ಶ. ೯-೧೦ನೇ ಶತಮಾನದಲ್ಲೇ ರಾಷ್ಟ್ರಕೂಟರು ಮಳಲಿಯಲ್ಲಿ ಕಲ್ಲೇಶ್ವರ ದೇವಾಲಯವನ್ನು ನಿರ್ಮಿಸಿದ್ದರು ಎಂಬುದು ಸ್ಪಷ್ಟಪಡುತ್ತದೆ. ತರುವಾಯ ಹೊಯ್ಸಳರು ಈ ದೇವಾಲಯಕ್ಕೆ ಅನೇಕ ದಾನ-ದತ್ತಿಗಳನ್ನು ನೀಡಿ ಶಾಸನಗಳಲ್ಲಿ 'ಕಲ್ಲೇದೇವರು' ಎಂದು ಕರೆದಿರುವುದು ವೇದ್ಯವಾಗುತ್ತದೆ.

ಕಲ್ಯಾಣದ ಚಾಲುಕ್ಯರು ಕ್ರಿ.ಶ. ೯ ರಿಂದ ೧೨ನೇ ಶತಮಾನದವರೆಗೆ ಕರ್ನಾಟಕವನ್ನೊಳಗೊಂಡಂತೆ ದಕ್ಷಿಣದ ಬಹುಭಾಗವನ್ನು ಅಳಿಯುವುದು ಈಗಾಗಲೇ ತಿಳಿದ ಸಂಗತಿ. 'ನೊಳಂಬವಾಡಿ-೩೨೦೦೦' ಪ್ರಾಂತ್ಯ ಚಾಲುಕ್ಯರ ಆಳ್ವಿಕೆಗೆ ಒಳಗಾಗಿತ್ತು. ಹೆಂಜರಿನ ನೊಳಂಬರು ಈ 'ನೊಳಂಬವಾಡಿ-೩೨೦೦೦' ಪ್ರಾಂತ್ಯದ ಅಧಿಪತಿಗಳಾಗಿ ಚಾಲುಕ್ಯರ ಸಾಮಂತರಾಗಿ ಆಳಿದರು. 'ನೊಳಂಬವಾಡಿ-೩೨೦೦೦' ಪ್ರಾಂತ್ಯದಲ್ಲಿ ಹೊಸದುರ್ಗ ತಾಲೂಕು ಪರಿಸರದ 'ನಿರ್ಗುಂದನಾಡು' ಅಥವಾ 'ನಿರಗುಂದ-೩೦೦' ಪ್ರಾದೇಶಿಕ ಆಡಳಿತ ವಿಭಾಗವು ಅಂತರ್ಗತವಾಗಿತ್ತು. ಈ ಮೂಲಕ ಚಾಲುಕ್ಯರ ಆಳ್ವಿಕೆಗೆ ಈ ಪರಿಸರ ಒಳಪಟ್ಟು ಅವರ ಸಾಂಸ್ಕೃತಿಕ ಚರಿತ್ರೆಯ ಪರದಿಗೆ ಸೇರಿತ್ತೆಂದು ಹೇಳಬಹುದು. ಹೊಸದುರ್ಗ ತಾಲೂಕು ಪರಿಸರದಲ್ಲಿ ಚಾಲುಕ್ಯರು ತಾವೇ ನೇರವಾಗಿ ನಿರ್ಮಿಸಿರುವ ದೇವಾಲಯಗಳು ದೊರೆತಿಲ್ಲ ಇದಕ್ಕೆ ಯಾವುದೇ ಶಾಸನಗಳು ಲಭ್ಯವಿಲ್ಲ. ಆದರೂ ಚಾಲುಕ್ಯ ವಾಸ್ತುಶೈಲಿಯ ಅನೇಕ ಅಂಶಗಳು ಇಲ್ಲಿನ ದೇವಾಲಯಗಳಲ್ಲಿ ಕಂಡುಬರುತ್ತವೆ. ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ಶೈಲಿಗಳನ್ನು ಬೇರ್ಪಡಿಸಲು ಕಷ್ಟಸಾಧ್ಯ

ಎಸ್. ಶೆಟ್ಟರ್ ಅವರು "ವರದಾ ಮತ್ತು ವೇದಾವತಿ ನದಿಗಳ ಸುತ್ತಲಿನ ಪರಿಸರದಲ್ಲಿ ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳ ಚಾಲುಕ್ಯ ವಾಸ್ತುಶೈಲಿಯಲ್ಲೇ ಅನೇಕ ದೇವಾಲಯಗಳನ್ನು ನಿರ್ಮಿಸಿರುವುದು ಇಲ್ಲಿನ ಕೆಲವು ದೇವಾಲಯಗಳ ಅಧ್ಯಯನದ ಮೂಲಕ ಸ್ಪಷ್ಟಪಡುತ್ತದೆ ಎಂದು ಹೇಳಿದ್ದಾರೆ. ಕಲ್ಯಾಣ ಚಾಲುಕ್ಯರು ವಿಶೇಷವಾಗಿ ಕರಿಯ ಮೆದುಗಲ್ಲನ್ನು (ಕ್ಲೋರೋಟಿಕ್ ಸಿಸ್ಟ್)ಬಳಸಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಆದರೆ ವೇದಾವತಿ ನದಿ ತೀರದ ಹೊಸದುರ್ಗ ತಾಲೂಕು ಪರಿಸರದಲ್ಲಿ ಭೌಗೋಳಿಕವಾಗಿ ಕರಿ ಮೆದುಗಲ್ಲು, ಹಸಿರು ನಾರುಗಲ್ಲು, ಕೆಂಪು ಮರಳುಗಲ್ಲು ಹಾಗೂ ಬಿಳಿಕಣಶಿಲೆ ಅಪಾರವಾಗಿ ದೊರೆಯುತ್ತವೆ. ಈ ಶಿಲಾ ವರ್ಗವನ್ನು

ಬಳಸಿಕೊಂಡು ಚಾಲುಕ್ಯ ಶೈಲಿಯ ದೇವಾಲಯಗಳು ನಿರ್ಮಾಣಗೊಂಡಿವೆ. ಅಂತಹ ಕೆಲವು ಪ್ರಮುಖ ದೇವಾಲಯಗಳೆಂದರೆ ಬೇಲಗೂರಿನ 'ಪ್ರಸನ್ನ ರಾಮೇಶ್ವರ', ಜಾನಕಲ್ಲಿನ 'ಶಂಕರ ಲಿಂಗೇಶ್ವರ', ಕಲ್ಲೇದೇವರ ಕಟ್ಟೆಯ 'ಕಲ್ಲೇಶ್ವರ' ಮತ್ತು ಸೂಜಿಗಲ್ಲಿನ 'ಸೋಮೇಶ್ವರ' ದೇವಾಲಯಗಳು. ಇವುಗಳಲ್ಲಿ ಕಲ್ಲೇದೇವರ ಕಟ್ಟೆಯ 'ಕಲ್ಲೇಶ್ವರ' ದೇವಾಲಯ ಮಾತ್ರ ಹಸಿರು ಮೆದುಗಲ್ಲಿನಲ್ಲಿ ನಿರ್ಮಿತಿಯಾಗಿದ್ದು, ಉಳಿದವು ಬಿಳಿಕಣಶಿಲೆಯಲ್ಲಿವೆ. ಇಲ್ಲಿನ ಚಾಲುಕ್ಯ ವಾಸ್ತುಶೈಲಿಯ ದೇವಾಲಯಗಳು ಬಹು ವಿಸ್ತಾರವಾದವುಗಳು. ಇವುಗಳ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಕಾಣಬಹುದು. ಕೆಲವಕ್ಕೆ ಎರಡೆರಡು ನವರಂಗ ಗಳಿರುವುದು ಗಮನಾರ್ಹ. ಅಂತಹುಗಳಲ್ಲಿ ಜಾನಕಲ್ಲಿನ 'ಶಂಕರಲಿಂಗೇಶ್ವರ' ಹಾಗೂ ಕಲ್ಲೇದೇವರ ಕಟ್ಟೆಯ ಕಲ್ಲೇಶ್ವರ ದೇವಾಲಯಗಳನ್ನು ಕಾಣಬಹುದಾಗಿದೆ. ಚಾಲುಕ್ಯ ದೇವಾಲಯಗಳನ್ನು ಎರಡು ಪ್ರಮುಖ ಪ್ರಕಾರದ ಕಂಬಗಳ ರಚನೆಯನ್ನು ಕಾಣಬಹುದು. ಒಂದನೇ ಪ್ರಕಾರದ ಕಂಬದಲ್ಲಿ ಕಾಂಡಭಾಗದಲ್ಲಿ ಚಚ್ಚೌಕವಾಗಿದ್ದು, ಎಂಟು ಹಾಗೂ ಹದಿನಾರು ಮುಖದ ಭಾಗಗಳ ರಚನೆ, ತರಂಗ ಬೋದಿಗೆಯನ್ನು ಕಾಣಬಹುದಾಗಿದೆ. ಎರಡನೇ ಪ್ರಕಾರದ ಕಂಬವು ಗಂಟೆಯಾಕಾರದ ಕಂಬವಾಗಿದೆ. ಹೊಸದುರ್ಗ ತಾಲೂಕಿನ ಚಾಲುಕ್ಯ ದೇವಾಲಯಗಳ ಕಂಬಗಳ ರಚನೆಯಲ್ಲಿ ಮೊದಲನೇ ಪ್ರಕಾರದ ಕಂಬಗಳು ಗೋಚರಿಸುತ್ತವೆ. ಇಂತಹ ಕಂಬಗಳಲ್ಲಿ ಪೀಠ, ಕಾಂಡದಲ್ಲಿ ಎರಡು ಚಚ್ಚೌಕದ ಭಾಗಗಳು, ಮಧ್ಯ ಅಷ್ಟ ಹಾಗೂ ಹದಿನಾರು ಕೋನಗಳ ರಚನೆ, ಕುಂಭ, ತ್ರಿಕೋನ ಹಾಗೂ ತರಂಗ ಬೋದಿಗೆ ಇರುತ್ತದೆ.

ದೇವಾಲಯಗಳ ಅಧಿಷ್ಠಾನವು ಚೌಕಾಕಾರ ಹಾಗೂ ದೀರ್ಘ ಚತುರ್ಷ್ಟಾಕಾರ ರಚನೆಯನ್ನು ಹೊಂದಿದ್ದು ಅವುಗಳಲ್ಲಿ ಉಪಾನ, ಜಗತಿ, ಕಂಠ, ಕುಮುದ ಹಾಗೂ ಪಟ್ಟಿಕೆ ಭಾಗಗಳನ್ನು ಕಾಣಬಹುದು. ಇನ್ನು ಈ ದೇವಾಲಯಗಳು ನಿರಾಧಾರ ಪ್ರಕಾರದವುಗಳು. ಬಹುತೇಕ ಏಕಕೂಟ ದೇವಾಲಯಗಳಾಗಿದ್ದು, ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯ ಮಾತ್ರ ದ್ವಿಕೂಟವಾಗಿದೆ. ಈ ದೇವಾಲಯಗಳ ಗರ್ಭಗೃಹದ ಮೇಲಿನ ಶಿಖರವು ಕದಂಬ, ನಾಗರ ಅಥವಾ ಪಾಂಸಾನ ಶೈಲಿಯಲ್ಲಿ ಪಿರಾಮಿಡ್ಡಿನಾಕಾರದಲ್ಲಿ ಮೆಟ್ಟಲು ಮೆಟ್ಟಲಾಗಿವೆ. ಶಿಖರವು ಸಹ ಶಿಲೆಯಲ್ಲಿಯೇ ರೂಪಿತವಾಗಿದೆ. ಶಿಖರಗಳಿಗೆ ಹೊಂದಿಕೊಂಡಂತೆ ಸುಖನಾಸಿಗಳು ಇವೆ. ಇಲ್ಲಿನ ಚಾಲುಕ್ಯ ಶೈಲಿಯ ದೇವಾಲಯಗಳ ಮೂರ್ತಿಶಿಲ್ಪಗಳ ರಚನೆಗೆ ಕಪ್ಪು ಹಾಗೂ ಹಸಿರು ಮೆದುಗಲ್ಲನ್ನು ಬಳಸಿದ್ದಾರೆ. ಚಾಲುಕ್ಯರ ಕಾಲದ ಶಿಲ್ಪಗಳು, ಶಿಲ್ಪಗಳ ಅಂಗಾಂಗಗಳಿಗೆ ವಿಶೇಷ ಮೆರಗು ನೀಡಿ ಸೌಂದರ್ಯವರ್ಧಿಸುವ ವಿಧಾನವಾಗಿದ್ದು, ಇದರ ಕಾಲದಲ್ಲೇ. ಇಲ್ಲಿನ ಚಾಲುಕ್ಯ ಶಿಲ್ಪಗಳು ಪ್ರಾರಂಭದ ಅಲಂಕಾರದ ಲಕ್ಷಣಗಳನ್ನು ಹೊಂದಿವೆ. ಈ ರೀತಿಯಾದ ಅನೇಕ ಲಕ್ಷಣಗಳನ್ನು ಹೊಂದಿರುವ ಈ ಪರಿಸರದ ಕಲ್ಯಾಣ ಚಾಲುಕ್ಯ ದೇವಾಲಯಗಳು ಕ್ರಿ.ಶ. ಸುಮಾರು ೧೧ನೇ ಶತಮಾನದ ರಚನೆಗಳಾಗಿವೆ. ಚಾಲುಕ್ಯ ಶೈಲಿಯ ಈ ಎಲ್ಲಾ ದೇವಾಲಯಗಳು ಅವರ ಸಾಮಂತಾಧಿಕಾರಿಗಳಾದ ನೊಳಂಬರ ಅಧೀನದ 'ನೀರಗುಂದ-೩೦೦' ಪ್ರಾಂತ್ಯದಲ್ಲಿಯೇ ಕಂಡುಬರುತ್ತವೆಯೆಂಬುದು ಗಮನಾರ್ಹ.

ಕರ್ನಾಟಕ ದೇವಾಲಯ ಸಂಸ್ಕೃತಿಗೆ ವಿಶೇಷ ಕೊಡುಗೆ ನೀಡಿರುವ 'ಹೊಯ್ಸಳ' ಕಾಲದ ಅನೇಕ ದೇವಾಲಯಗಳು ಹೊಸದುರ್ಗ ತಾಲೂಕು ಪರಿಸರದಲ್ಲಿ ಕಂಡುಬರುತ್ತವೆ. ಕ್ರಿ.ಶ. ೧೦-೧೩ನೇ ಶತಮಾನದವರೆಗಿನ ಅನೇಕ ಶಾಸನಗಳು ಈ ಭಾಗದಲ್ಲಿವೆ. ಇವುಗಳು ಹೊಯ್ಸಳ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಅತ್ಯಂತ ಅಮೂಲಾಗ್ರ ಆಕರಗಳು. 'ನೊಳಂಬವಾಡಿ-೩೨೦೦೦' ಪ್ರಾಂತ್ಯವನ್ನು ಹೊಯ್ಸಳರು ಆಳುತ್ತಿರುವಾಗ ಹೊಸದುರ್ಗ ಪರಿಸರ ಅದರಲ್ಲಿ ಅಂತರ್ಗತವಾಗಿತ್ತು. ಈ ಕಾಲಾವಧಿಯಲ್ಲಿ ರಾಜರು, ಸಾಮಂತರು, ಅಧಿಕಾರಿಗಳು ಹಾಗೂ ಸ್ಥಳೀಯರು ಅನೇಕ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಅನೇಕ ದಾನ-ದತ್ತಿಗಳ ಕಾಣಿಕೆ ಮುಂತಾದವುಗಳ ಮೂಲಕ ಇಲ್ಲಿನ ದೇವಾಲಯ ಸಂಸ್ಕೃತಿಗೆ ವಿಶೇಷ ಮಾನ್ಯತೆ ನೀಡಿರುವುದು ಸಾಕ್ಷ್ಯಾಧಾರಗಳಿಂದ ದೃಢಪಡುತ್ತದೆ. ಹೊಯ್ಸಳ ಸ್ಥಪತಿಗಳು ದೇವಾಲಯ ವಾಸ್ತುಶೈಲಿಯಲ್ಲಿ ಚಾಲುಕ್ಯ ಶೈಲಿಯನ್ನೇ ಮುಂದುವರೆಸಿದ್ದಾದರು ಅದರಲ್ಲಿ ಅನೇಕ ಹೊಸ ಬಗೆಯ ಪ್ರಯೋಗಗಳನ್ನು ನಡೆಸಿ ಹೊಸ ಅಂಶಗಳನ್ನು ಅಳವಡಿಸಿದರು. ಇವರು ದೇವಾಲಯಗಳ ರಚನೆಗೆ ಹಸಿರು ನಾರುಗಲ್ಲನ್ನು ಹೆಚ್ಚು ಉಪಯೋಗಿಸಿದರು. ಹೊಸದುರ್ಗ ಪರಿಸರದಲ್ಲಿ ಮಾಡದಕೆರೆ, ನೀರಗುಂದ, ಬುರುಡೆಕಟ್ಟೆ, ಚಿಕ್ಕಮಗಳೂರು ಜಿಲ್ಲೆಯ ಕಡೂರು, ಅಜ್ಜಂಪುರ ಹಾಗೂ ತರೀಕೆರೆಯ ಭಾಗಗಳಲ್ಲಿ ಹಸಿರು ನಾರುಗಲ್ಲು ದೊರೆಯುವುದರಿಂದ ಈ ಶಿಲೆಯನ್ನೇ ಇಲ್ಲಿನ ದೇವಾಲಯಗಳ ನಿರ್ಮಾಣಕ್ಕೆ ಬಳಸಲಾಗಿದೆ. ಈ ಪರಿಸರದ ನೀರಗುಂದದ ಸಿದ್ದೇಶ್ವರ, ಚನ್ನಕೇಶವ, ರಾಮೇಶ್ವರ, ಮಳಲಿಯ ಗೋಪಾಲಕೃಷ್ಣ, ಚಿಕ್ಕಯಗಟಿಯ ಈಶ್ವರ, ಕೈನಡುವಿನ ಮಲ್ಲೇಶ್ವರ, ಹೊನ್ನೇನಹಳ್ಳಿಯ ಹಾಲುರಾಮೇಶ್ವರ, ಹೆಗ್ಗೆರೆಯ ಗಲಗೇಶ್ವರ, ಕಲ್ಲೇಶ್ವರ, ಈಶ್ವರ ಹಾಗೂ ಸುಪಾರ್ಶ್ವನಾಥ ಬಸದಿ, ಹುಣವಿನೋಡುವಿನ ನಾರಾಯಣ ಮುಂತಾದವುಗಳು ಹೊಯ್ಸಳ ಶೈಲಿಯ ಬಹುಮುಖ್ಯ ದೇವಾಲಯಗಳಾಗಿವೆ. ಕೆಲವೊಂದು ಬಾರಿ ಸ್ಥಳೀಯವಾಗಿ ಲಭ್ಯವಿರುವ ಬಿಳಿಕಣಶಿಲೆಯಲ್ಲಿಯೇ ದೇವಾಲಯಗಳು ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಅಂತಹುಗಳೆಂದರೆ, ನೀರಗುಂದದ ಚನ್ನಕೇಶವ ಹಾಗೂ ರಾಮೇಶ್ವರ, ಕೈನಡುವಿನ ಮಲ್ಲೇಶ್ವರ, ಹೊನ್ನೇನಹಳ್ಳಿಯ ಹಾಲುರಾಮೇಶ್ವರ ದೇವಾಲಯಗಳು. ಇನ್ನುಳಿದವುಗಳು ಹಸಿರು ನಾರುಗಲ್ಲನ್ನು ಉಪಯೋಗಿಸಿ ರಚಿಸಿದವುಗಳು. ಇಲ್ಲಿನ ಹೊಯ್ಸಳ ವಾಸ್ತುಶೈಲಿಯ ದೇವಾಲಯಗಳು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮತ್ತು ಮುಖಮಂಟಪವನ್ನು ಒಳಗೊಂಡಿವೆ. ಇಲ್ಲಿನ ಬಹುತೇಕ ದೇವಾಲಯಗಳು ಏಕಕೂಟ ದೇವಾಲಯಗಳಾಗಿದ್ದು, ನೀರಗುಂದದ ಸಿದ್ದೇಶ್ವರ ದೇವಾಲಯ ಮಾತ್ರ ತ್ರಿಕೂಟದ್ದಾಗಿದೆ. ಇದರ ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗ, ಬಲಭಾಗದ ಗರ್ಭಗೃಹದಲ್ಲಿ ವಿಷ್ಣುವಿನ ಮೂರ್ತಿಶಿಲ್ಪ, ಎಡಭಾಗದ ಗರ್ಭಗೃಹದಲ್ಲಿ ವೇಣುಗೋಪಾಲನ ಮೂರ್ತಿಶಿಲ್ಪವಿದೆ. ಹೊಯ್ಸಳ ದೇವಾಲಯಗಳು ಎತ್ತರವಾದ ಜಗತಿಯ ಮೇಲೆ ನಿರ್ಮಾಣ ಗೊಂಡಿರುತ್ತವೆ. ಆದರೆ ಇಲ್ಲಿನ ದೇವಾಲಯಗಳು ಜಗತಿಯ ಮೇಲೆ ನಿರ್ಮಾಣವಾಗಿರದೆ ನೇರವಾಗಿ ಅಧಿಷ್ಠಾನದ ಮೇಲೆ ನಿರ್ಮಾಣವಾಗಿವೆ. ಇಲ್ಲಿನ ದೇವಾಲಯಗಳ ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟಕುಮುದ, ದಂತಪಂಕ್ತಿ, ಕಪೋತ ಭಾಗಗಳಿವೆ. ಇಂತಹ

ವಿಶೇಷವಾದ ಅದಿಷ್ಠಾನಗಳನ್ನು ನೀರಗುಂದದ ಸಿದ್ಧೇಶ್ವರ, ಚಿಕ್ಕಯಗಟಿಯ ಈಶ್ವರ, ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿ, ಗಲಗೇರ್ಶವರ ಹಾಗೂ ಕಲ್ಲೇಶ್ವರ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಆದರೆ ಅಧಿಷ್ಠಾನದಲ್ಲಿ ಬೇಲೂರು ಹಳೇಬೀಡಿನ ದೇವಾಲಯಗಳ ಜಗತಿ ಹಾಗೂ ಅಧಿಷ್ಠಾನದ ಪಟ್ಟಿಗಳು, ಅದರ ಮೇಲಿನ ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ. ಅದಿಷ್ಠಾನಗಳ ಸಾಧಾರಣ ರಚನೆಯನ್ನು ಹೊಂದಿವೆ.

ಹೊಯ್ಸಳ ದೇವಾಲಯಗಳ ಶೈಲಿಯ ಮತ್ತೊಂದು ಬಹುಮುಖ್ಯ ಲಕ್ಷಣ ಬಿತ್ತಿಗಳ ರಚನೆ. ದೇವಾಲಯಗಳ ಹೊರಗೋಡೆಗಳನ್ನು ಅನೇಕ ಸೂಕ್ಷ್ಮ ಕೆತ್ತನೆಗಳ ಮೂಲಕ ಅಲಂಕರಿಸಿರುತ್ತಾರೆ. ಅಲ್ಲದೆ ಕೆಲವೊಂದು ಮೂರ್ತಿಶಿಲ್ಪಗಳ ರಚನೆಯು ಕಂಡುಬರುತ್ತದೆ. ಇಲ್ಲಿನ ಹೊಯ್ಸಳ ದೇವಾಲಯಗಳ ಹೊರಭಿತ್ತಿಯಲ್ಲಿ ಅರ್ಧಗಂಬಗಳ ರಚನೆಯನ್ನು ಕಾಣಬಹುದು. ನೀರಗುಂದದ ಸಿದ್ಧೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಅರ್ಧಗಂಬಗಳು, ಗರ್ಭಗುಡಿಯ ಭಿತ್ತಿಯ ಹೊರಭಾಗದ ಮೂರು ದಿಕ್ಕಿಗೆ ಚಿಕ್ಕದಾದ ಕೋಷ್ಠಗಳಲ್ಲಿ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವವರ ಶಿಲ್ಪಗಳನ್ನು ಕಂಡರಿಸಲಾಗಿದೆ. ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿಯ ಒಳ ಹಾಗೂ ಹೊರ ಭಿತ್ತಿಯ ಮೇಲೆ ಕಮಲದ ಕೆತ್ತನೆಯನ್ನು ಮಾಡಲಾಗಿದೆ. ಈ ರೀತಿಯ ಭಿತ್ತಿಯ ಲಕ್ಷಣಗಳನ್ನು ಇಲ್ಲಿನ ಹೊಯ್ಸಳ ದೇವಾಲಯಗಳಲ್ಲಿ ಕಾಣಬಹುದು.

ದ್ವಾರ ಕೆತ್ತನೆ ಹೊಯ್ಸಳ ಶೈಲಿಯ ಮತ್ತೊಂದು ಮುಖ್ಯ ಲಕ್ಷಣ. ಇವರ ದೇವಾಲಯಗಳ ದ್ವಾರಗಳು ಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸದಿಂದ ಕೂಡಿದ ಅತ್ಯುತ್ತಮ ಕಲಾಕೃತಿಗಳು. ಈ ಪರಿಸರದ ಹೊಯ್ಸಳ ದೇವಾಲಯಗಳ ದ್ವಾರಗಳು ಅತ್ಯಂತ ಸೂಕ್ಷ್ಮ ಕೆತ್ತನೆ, ಕಲಾ ವೈವಿಧ್ಯತೆಗೆ ಸಾಕ್ಷಿಯಾಗಿವೆ. ಇಲ್ಲಿನ ದೇವಲಯಗಳ ದ್ವಾರಗಳು ಅನೇಕ ವೈವಿಧ್ಯಮಯ ದ್ವಾರಶಾಖೆಗಳನ್ನು ಒಳಗೊಂಡಿವೆ. ಅಂತಹ ಶಾಲೆಗಳು ಒಂದರಿಂದ ೪, ೫ ಶಾಖೆಗಳ ದ್ವಾರಗಳನ್ನು ಕಾಣಬಹುದು. ಈ ಶಾಖೆಗಳಲ್ಲಿ ಲತಾ, ವಜ್ರ, ಕಮಲ, ನೃತ್ಯಗಾರರ, ವಾದ್ಯಗಾರರ, ಅರೆಗಂಭ ಮುಂತಾದವುಗಳ ಕೆತ್ತನೆಗಳನ್ನು ಒಳಗೊಂಡಿವೆ. ಅಲ್ಲದೇ ಇಲ್ಲಿನ ಕೆಲವು ದೇವಾಲಯಗಳ ದ್ವಾರಗಳಲ್ಲಿ ಜಾಲಂದ್ರಗಳನ್ನು ಅಳವಡಿಸಿದ್ದಾರೆ. ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿ, ಗಲಗೇಶ್ವರ, ಕಲ್ಲೇರ್ಶವರ ದೇವಾಲಯಗಳು, ನೀರಗುಂದದ ಸಿದ್ಧೇಶ್ವರ, ಮಳಲಿಯ ಗೋಪಾಲಕೃಷ್ಣ ದೇವಾಲಯಗಳ ಗರ್ಭಗೃಹದ ದ್ವಾರದಲ್ಲಿ ಜಾಲಂದ್ರದ ಅಲಂಕರಣೆ ತುಂಬಾ ವೈಶಿಷ್ಟ್ಯತೆಯಿಂದ ಕೂಡಿದೆ. ಜಾಲಂದ್ರಗಳು ವಜ್ರ, ನಕ್ಷತ್ರ ಹಾಗೂ ಲತಾಸುರುಳಿಯ ಅಲಂಕಾರದಲ್ಲಿರುತ್ತವೆ. ಹೆಗ್ಗೆರೆಯ ಬಸದಿ ಹಾಗೂ ಗಲಗೇಶ್ವರ, ಮಳಲಿಯ ಗೋಪಾಲಕೃಷ್ಣ ದೇವಾಲಯಗಳ ಗರ್ಭಗೃಹದ ದ್ವಾರದಲ್ಲಿ ವಜ್ರ ಅಲಂಕರಣೆಯ ಜಾಲಂದ್ರಗಳು ಅತ್ಯಂತ ವೈಶಿಷ್ಟ್ಯವಾಗಿವೆ. ಹೆಗ್ಗೆರೆಯ ಕಲ್ಲೇರ್ಶವರ ದೇವಾಲಯದ ದ್ವಾರದ ಜಾಲಂದ್ರದಲ್ಲಿ ನಕ್ಷತ್ರದ ರಚನೆ ಅದರಲ್ಲಿ ನೃತ್ಯಗಾರ್ತಿಯರ ಕೆತ್ತನೆಗಳಿವೆ. ಅದೇ ರೀತಿ ನೀರಗುಂದದ ಸಿದ್ಧೇಶ್ವರ ದೇವಾಲಯದ ಜಾಲಂದ್ರದಲ್ಲಿ ಲತಾಬಳ್ಳಿ ರಚನೆ ಅದರ ಮಧ್ಯಭಾಗದಲ್ಲಿ ವಾಧ್ಯ ಮತ್ತು ನೃತ್ಯಗಾರ್ತಿಯರ ಶಿಲ್ಪಗಳು ಅತ್ಯಂತ ಮನೋಜ್ಞತೆಯಿಂದ ಕೂಡಿವೆ. ಇನ್ನು ದ್ವಾರಗಳಲ್ಲಿ ಗಮನಿಸಬಹುದಾದ್ದು ಲಲಾಟ ಅಥವಾ ಮಂಗಲ ಫಲಕದಲ್ಲಿನ ಕೆತ್ತನೆಗಳು.

ಇಲ್ಲಿನ ಹೊಯ್ಸಳ ದೇವಾಲಯಗಳ ಗರ್ಭಗೃಹದ ದ್ವಾರದ ಮೇಲಿನ ಮಂಗಲ ಫಲಕದಲ್ಲಿ ಗಜಲಕ್ಷ್ಮಿ ಶಿಲ್ಪಗಳು ವಿಶಿಷ್ಟವಾಗಿವೆ. ದ್ವಾರಗಳ ಕೆಳಭಾಗದಲ್ಲಿ ಖಾಲಿಯಾಗಿದ್ದು ಯಾವುದೇ ಶಿಲ್ಪಗಳ ರಚನೆಯಿಲ್ಲ, ಆದರೆ ಹೆಗ್ಗೆರೆಯ ಕಲ್ಲೇಶ್ವರ ದೇವಾಲಯದ ದ್ವಾರಗಳಲ್ಲಿ ಶೈವದ್ವಾರ ಪಾಲಕರ ಶಿಲ್ಪಗಳಿವೆ. ಇವರು ತ್ರಿಶೂಲ, ಢಮರು, ಗಧೆ ಹಾಗೂ ಅಭಯ ಮುದ್ರೆಗಳನ್ನು ಹೊಂದಿದ್ದಾರೆ. ಇವರಿಗೆ ಇಕ್ಕೆಲಗಳಲ್ಲಿ ಅಪ್ಸರೆಯರ ಶಿಲ್ಪಗಳು ಇವೆ.

ಇಲ್ಲಿನ ಹೊಯ್ಸಳ ದೇವಾಲಯಗಳ ಕಂಬಗಳ ರಚನೆಯಲ್ಲಿ ಎರಡು ವಿಧಗಳನ್ನು ಗಮನಿಸಬಹುದು. ಮೊದಲನೇ ವಿಧದ ಸ್ಥಂಬಗಳು ರಚನೆಯಲ್ಲಿ ಪೀಠ, ಕಾಂಡದಲ್ಲಿ ಚಚ್ಚೌಕ ಭಾಗ, ಅಷ್ಟ ಹಾಗೂ ಹದಿನಾರು ಮುಖದ ರಚನೆಗಳು, ಕುಂಭ, ಫಲಕ ಹಾಗೂ ತರಂಗ ಬೋದಿಗೆಯನ್ನು ಕಾಣಬಹುದು. ಈ ಪ್ರಕಾರದ ಕಂಬಗಳನ್ನು ಕೈನಡುವಿನ ಮಲ್ಲೇಶ್ವರ, ನೀರಗುಂದದ ಚನ್ನಕೇಶವ ಹಾಗೂ ರಾಮೇಶ್ವರ ಮತ್ತು ಹೊನ್ನೇನಹಳ್ಳಿಯ ಹಾಲುರಾಮೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಇವುಗಳಲ್ಲಿ ನೀರಗುಂದದ ಚನ್ನಕೇಶವ ದೇವಾಲಯದ ಸ್ಥಂಭವು ಪೀಠ, ಕಾಂಡದಲ್ಲಿ ಮೂರು ಚಚ್ಚೌಕ ಭಾಗಗಳು, ಅವುಗಳ ಮಧ್ಯೆ ಎಂಟು ಮುಖಕೋನ, ಕುಂಬ, ಫಲಕ ಹಾಗೂ ತರಂಗ ಬೋದಿಗೆಯನ್ನು ಕಾಣಬಹುದಾಗಿದೆ. ಇಲ್ಲಿನ ರಾಮೇಶ್ವರ ದೇವಾಲಯದಲ್ಲಿ ಸೌಮ್ಯಕಾಂತ ಸ್ಥಂಭವನ್ನು ಕಾಣಬಹುದಾಗಿದೆ. ಎರಡನೇ ವಿಧದ ಸ್ಥಂಭಗಳು ಗಂಟಾಕಾರದ ಸ್ಥಂಭಗಳಾಗಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಗಂಟಾಕಾರದ ಸ್ಥಂಭದ ರಚನೆ ಪ್ರಾರಂಭವಾಯಿತು ಎಂದು ಹೇಳುವ ಈ ಪ್ರಕಾರ ತನ್ನ ಉನ್ನತವಾದ ಶ್ರೇಷ್ಠತೆಯನ್ನು ಗಳಿಸಿಕೊಂಡಿದ್ದು ಹೊಯ್ಸಳರ ಕಾಲದಲ್ಲಿ. ಇಲ್ಲಿನ ನೀರಗುಂದದ ಸಿದ್ದೇಶ್ವರ, ಚಿಕ್ಕಯಗಟಿಯ ಈಶ್ವರ, ಹೆಗ್ಗೆರೆಯ ಗಲಗೇಶ್ವರ ಮತ್ತು ಸುಪಾರ್ಶ್ವನಾಥ ಬಸದಿ ಗಂಟಾಕಾರದ ಸ್ಥಂಭಗಳನ್ನು ಕಾಣಬಹುದು. ಈ ಪ್ರಕಾರದ ಸ್ಥಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಕೆಳಗೆ ಚಚ್ಚೌಕದ ಒಂದು ಭಾಗ ಅದರ ಮೇಲೆ ಗಂಟಾಕಾರದ ದಿಂಡು, ಇದರ ಮೇಲ್ಭಾಗ ದುಂಡಾದ ಮುಚ್ಚಳ, ಅದರ ಮೇಲೆ ಅಗಲವೂ ಚೌಕಾಕಾರದ ಫಲಕ, ನಂತರ ತರಂಗ ಬೋದಿಗೆ ಇದೆ. ಹೀಗೆ ಎರಡು ಮುಖ್ಯ ಪ್ರಕಾರದ ಸ್ಥಂಭಗಳು ಇಲ್ಲಿನ ಹೊಯ್ಸಳ ದೇವಾಲಯ ಗಳಲ್ಲಿ ಗುರುತಿಸಬಹುದಾಗಿದೆ. ಇಲ್ಲಿನ ಹೊಯ್ಸಳ ದೇವಾಲಯಗಳ ಮತ್ತೊಂದು ವಿಶಿಷ್ಟ ಲಕ್ಷಣ ಅಲಂಕೃತ ಭುವನೇಶ್ವರಿ ರಚನೆ. ನೀರಗುಂದದ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿನ ಭುವನೇಶ್ವರಿಯ ಸುಮಾರು ಹತ್ತು ಅಡಿ ಸುತ್ತಳತೆಯನ್ನು, ಸುಮಾರು ಐದು ಅಡಿ ಆಳವಾಗಿದೆ. ಇದರಲ್ಲಿ ಕಮಲದ ಎಲೆಗಳ ರಚನೆ ಅಭೂತಪೂರ್ವವಾದದ್ದು. ಸುತ್ತಲೂ ಅಷ್ಟದಿಕ್ಪಾಲರ ಶಿಲ್ಪಗಳನ್ನು ಸಹ ಅಳವಡಿಸಲಾಗಿದೆ. ಇಲ್ಲಿನ ಇತರ ದೇವಾಲಯಗಳಲ್ಲಿ ಇದೊಂದು ಅಲಂಕೃತ ವಲ್ಲದಿದ್ದರೂ ಕಡಿಮೆ ಅಲಂಕೃತ ಭುವನೇಶ್ವರಿಯನ್ನು ಕಾಣಬಹುದಾಗಿದೆ.

ಈ ಹೊಯ್ಸಳ ದೇವಾಲಯಗಳನ್ನು ಅನೇಕ ಹೊಯ್ಸಳ ದೊರೆಗಳು ಹಾಗೂ ಅಧಿಕಾರಿಗಳು ನಿರ್ಮಾಣ, ಜೀರ್ಣೋದ್ಧಾರ ಹಾಗೂ ಆಶ್ರಯ-ನಿರ್ವಹಣೆ ಮಾಡಿರುವುದು ಈ ಹಿಂದೆಯೇ ಚರ್ಚಿಸಲಾಗಿದೆ. ಕ್ರಿ.ಶ. ೧೨೨೮ರ ಹೊಯ್ಸಳ ದೊರೆ ವೀರನಾರಸಿಂಹ ದೇವನ ತುರುಗೋಳ್ ಸ್ಮಾರಕ ಶಿಲ್ಪದಲ್ಲಿ ಮಳಲಿಯನ್ನು 'ಶ್ರೀಕೇಶವಪುರ' ಎಂದು ಕರೆದಿರುವುದು, ಕ್ರಿ.ಶ. ೧೧೪೨ರ

ಒಂದನೇ ನರಸಿಂಹನ ಶಾಸನದಲ್ಲಿ ನೀರಗುಂದವನ್ನು 'ಉದ್ಭವ ನರಸಿಂಹಪುರ' ಎಂದು, ಕ್ರಿ.ಶ. ೧೩೦೭ರ ಮುಮ್ಮಡಿ ಬಲ್ಲಾಳನ ಶಾಸನದಲ್ಲಿ ಇದೇ ನೀರಗುಂದವನ್ನು ೧೨೦ ಜನ ಬ್ರಾಹ್ಮಣರನ್ನೊಳಗೊಂಡ 'ಉದ್ಭವ ಸೋಮನಾಥಪುರ' ಎಂದು ಕರೆದಿರುವುದು ಹಾಗೂ ಇಲ್ಲಿ ಅವರ ಕಾಲದ ದೇವಾಲಯಗಳಿಗೆ ದಾನ-ದತ್ತಿಯನ್ನು ನೀಡಿ ಪೋಷಿಸಿರುವುದು, ಇವುಗಳು ಹೊಯ್ಸಳ ಕಾಲದ ಬಹುದೊಡ್ಡ ಅಗ್ರಹಾರಗಳಾಗಿದ್ದವೆಂದು ತಿಳಿದುಬರುತ್ತದೆ. ಇನ್ನೂ ಹೆಗ್ಗೆರೆಯ ಹೊಯ್ಸಳ ಸ್ಮಾರಕಗಳು ಕ್ರಿ.ಶ. ೧೧೬೧ರಲ್ಲಿ ಒಂದನೇ ನರಸಿಂಹನ ಕಾಲದಲ್ಲಿ ನಿರ್ಮಾಣ, ಜೀರ್ಣೋದ್ಧಾರ, ಆಶ್ರಯ ಹಾಗೂ ನಿರ್ವಹಣೆ ಹೊಂದಿರುವುದು ವೇದ್ಯವಾಗುತ್ತದೆ.

ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದ ಹೊಯ್ಸಳ ವಾಸ್ತುಶಿಲ್ಪವು ವಿಶಿಷ್ಟವಾಗಿ ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಆಯಾಮಗಳ ಹಿನ್ನೆಲೆಯಲ್ಲಿ ರಚನೆಗೊಂಡಿರುವುದು ತಿಳಿದುಬರುತ್ತದೆ. ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗೆ ಆಳಿದ ದಕ್ಷಿಣ ಭಾರತದ ಮಧ್ಯಕಾಲದ ಸಾಮ್ರಾಜ್ಯ ವಿಜಯನಗರದ ಸಾಂಸ್ಕೃತಿಕವಾದ ವೈಶಿಷ್ಟ್ಯತೆಗಳಲ್ಲಿ ವಾಸ್ತುಶೈಲಿಯು ಒಂದು.

ಹೊಸದುರ್ಗ ತಾಲೂಕು ಪರಿಸರದಲ್ಲಿ ವಿಜಯನಗರ ವಾಸ್ತುಶೈಲಿಯ ಅಸ್ಥಿತ್ವವನ್ನು ನಿರೂಪಿಸುವ ಅನೇಕ ದೇವಾಲಯಗಳು ಕಂಡುಬರುತ್ತವೆ. ವಿಜಯನಗರದ ಅರಸರು ರಾಜಕೀಯವಾಗಿ ಈ ಭಾಗದ 'ಬಾಗೂರು ಸೀಮೆ', 'ಬಯಕಾರ ರಾಮಪ್ಪನ ಮಾಗಣಿ', 'ಬೂದಿಹಾಳು ಸೀಮೆ', 'ಮತ್ತಿನಡುವಿನ ಸೀಮೆ' ಹಾಗೂ 'ರಾಮಗಿರಿ ಸೀಮೆ' ಆಡಳಿತ ವಿಭಾಗಗಳನ್ನು ತಮ್ಮ ಅಧಿಕಾರಿಗಳ ಮೂಲಕ ಆಡಳಿತ ನಡೆಸುತ್ತಿದ್ದದ್ದು ಈಗಾಗಲೇ ತಿಳಿದ ಸಂಗತಿ. ವಿಜಯನಗರದ ಕಾಲದ ಪ್ರಾದೇಶಿಕ ಆಡಳಿತ ಘಟಕಗಳಲ್ಲಿ ವಿಜಯನಗರ ಶೈಲಿಯ ಅನೇಕ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಹಾಗೂ ದಾನ-ದತ್ತಿ ಕಾರ್ಯಗಳು ನಡೆದಿರುವುದು ಚರಿತ್ರಾರ್ಹ. ಅಂತಹ ಕೆಲವು ದೇವಾಲಯಗಳೆಂದರೆ-ಮೇಣಸಿನೋಡು ಮಲ್ಲಿಕಾರ್ಜುನ, ಗರಗದ ಈಶ್ವರ, ಸೂಜಿಗಲ್ ಮೈಲಾರ ಬೆಟ್ಟದ ಮೈಲಾರಲಿಂಗೇಶ್ವರ, ಶ್ರೀರಾಂಪುರದ ವೀರಭದ್ರ ಹಾಗೂ ಲಕ್ಷ್ಮಿಕಾಂತ ಮಂಟಪ ಮುಂತಾದವುಗಳಾಗಿವೆ.

ವಿಜಯನಗರ ವಾಸ್ತುಶೈಲಿಯು ದಕ್ಷಿಣ ಭಾರತದ ಶ್ರೇಷ್ಠ ವಾಸ್ತುಶೈಲಿಯಾಗಿದ್ದು ದ್ರಾವಿಢ ಮತ್ತು ಹೊಯ್ಸಳ ಶೈಲಿಗಳ ಸುಂಧರ ಸಂಯೋಜನೆಯನ್ನು ರೂಢಿಸಿ ರೂಪಿಸಿಕೊಂಡು ವಿಶ್ವಪ್ರಸಿದ್ಧವಾಗಿದೆ. ವಿಜಯನಗರ ಸ್ಥಪತಿಗಳು ಹಾಗೂ ರುವಾರಿಗಳು ದೇವಾಲಯಗಳ ನಿರ್ಮಾಣಕ್ಕೆ ಸ್ಥಳೀಯವಾಗಿ ದೊರೆಯುವ ಕಣಶಿಲೆಯನ್ನು ಹೆಚ್ಚು ಹೆಚ್ಚು ಉಪಯೋಗಿಸಿದರು. ಹೊಸದುರ್ಗ ತಾಲೂಕು ಪರಿಸರದ ವಿಜಯನಗರ ಶೈಲಿಯ ದೇವಾಲಯಗಳು ಇಲ್ಲೇ ಅಧಿಕ ಪ್ರಮಾಣದಲ್ಲಿ ದೊರೆಯುವ ಬಿಳಿ ಹಾಗೂ ಕೆಂಪು ಕಣಶಿಲೆಯಲ್ಲಿ ನಿರ್ಮಾಣಗೊಂಡಿವೆ. ಇಲ್ಲಿನ ವಿಜಯನಗರ ಶೈಲಿಯ ದೇವಾಲಯಗಳು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ ಹಾಗೂ ಪ್ರಾಕಾರ ಮಂಟಪಗಳನ್ನು ಒಳಗೊಂಡಿದ್ದು, ಅದರ ಒಳಗೆ ಪರಿವಾರ ದೇವತೆಗಳಿಗಾಗಿ ಅನೇಕ ಚಿಕ್ಕ ಪುಟ್ಟ ಗುಡಿಗಳನ್ನು ನಿರ್ಮಿಸಲಾಗಿದೆ. ಅಲ್ಲದೇ ದೇವಾಲಯದ

ಆವರಣದಲ್ಲಿ ಉಯ್ಯಾಲೆಯ ಸ್ಥಂಭ, ಹೋಕಳಿ ಮಂಟಪ, ಉತ್ಸವ ಮಂಟಪಗಳನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಬಾಗೂರಿನ ಚನ್ನಕೇಶವ ದೇವಾಲಯ. ಇದು ಮೂಲತಹ ವಿಜಯನಗರಕ್ಕಿಂತ ಪೂರ್ವದ ದೇವಾಲಯವಾಗಿದ್ದು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಸಾಕಷ್ಟು ವಿಸ್ತಾರ ಹೊಂದಿರುವುದು ಅನೇಕ ಆಧಾರಗಳಿಂದ ದೃಢಪಡುತ್ತದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ, ಯಜ್ಞಮಂಟಪ, ಮುಖಮಂಟಪ ಹಾಗೂ ಸುತ್ತಲೂ ಪ್ರಾಕಾರ ಮಂಟಪವನ್ನು ಒಳಗೊಂಡಿದೆ. ಪ್ರಾಕಾರ ಮಂಟಪದ ಒಳಗೆ ಲಕ್ಷ್ಮಿದೇವಿ ಗುಡಿ, ಗರುಡಮಂಟಪ, ಬಲಿಪೀಠ, ಧ್ವಜಸ್ಥಂಭ, ಬೃಂದಾವನ, ಹೋಕಳಿ ಮಂಟಪ, ಪ್ರಾಕಾರದ ಹೊರಗೆ ಉಯ್ಯಾಲೆ ಸ್ಥಂಭ, ಗರಡಸ್ಥಂಭ ಹಾಗೂ ದೀಪಸ್ತಂಭವನ್ನು ಹೊಂದಿದೆ. ಇಷ್ಟೊಂದು ವಿಸ್ತಾರವಾದ ತಳವಿನ್ಯಾಸದ ಈ ದೇವಾಲಯವು ಹೊಸದುರ್ಗ ತಾಲೂಕು ಪರಿಸರದಲ್ಲಿ ವಿಶಿಷ್ಟವಾಗಿದೆ.

ವಿಜಯನಗರ ಶೈಲಿಯ ದೇವಾಲಯಗಳಲ್ಲಿ ಎರಡು ಪ್ರಮುಖ ಪ್ರಕಾರದ ಕಂಬಗಳನ್ನು ಗಮನಿಸಬಹುದು. ಮೊದಲನೇ ಪ್ರಕಾರದ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಮೂರು ಚಚ್ಚೌಕ ಭಾಗಗಳಿದ್ದು ಪ್ರತಿಯೊಂದರ ಮಧ್ಯೆ ಎಂಟು, ಹದಿನಾರು ಕೋನಗಳ ರಚನೆಗಳು, ಮೇಲೆ ಪುಷ್ಪಬೋದಿಗೆ ಇರುತ್ತದೆ. ಈ ಪ್ರಕಾರ ಇಲ್ಲಿನ ಮೆಣಸಿನೋಡು ಮಲ್ಲಿಕಾರ್ಜುನ, ಮೈಲಾರ ಬೆಟ್ಟದ ಮೈಲಾರ ಲಿಂಗೇಶ್ವರ, ದೇವಾಲಯಗಳಲ್ಲಿ ಕಾಣಬಹುದಾಗಿದೆ. ಎರಡನೇ ಪ್ರಕಾರದ ಕಂಬಗಳ ರಚನೆಯಲ್ಲಿ ಕಂಬಗಳ ಗಾತ್ರದಲ್ಲಿ ದೊಡ್ಡವು, ಕಂಬವನ್ನು ನೇರವಾಗಿ ಎರಡು ಭಾಗಗಳಾಗಿ ಮೊದಲನೆಯ ಭಾಗದಲ್ಲಿ ಚಚ್ಚೌಕ ಪ್ರಧಾನವಾದ ಮೇಲೆ ಹೇಳಿರುವ ಕಂಬಗಳ ವಿನ್ಯಾಸವಿದ್ದು ಇನ್ನೊಂದು ನೇರ ಭಾಗವನ್ನು ಕಾಲೆತ್ತಿ ನಿಂತ ಯಾಳಿಯಾಕಾರವಾಗಿಯೂ, ಕುದುರೆಯಾಕಾರವಾಗಿಯೂ, ಸಿಂಹದಾಕಾರವಾಗಿಯೂ ಕೆತ್ತಿರುತ್ತಾರೆ. ಕೆಲವು ಸಲ ಈ ರೀತಿ ಹಿಂಗಾಲ ಮೇಲೆ ನಿಂತ ಪ್ರಾಣಿಗಳ ಬದಲು ಚಿಕ್ಕ ಚಿಕ್ಕ ಪ್ರಮಾಣದ ಉಪಕಂಬಗಳನ್ನು ಕೆತ್ತಿರುತ್ತಾರೆ. ಈ ಪ್ರಕಾರದ ಕಂಬಗಳನ್ನು ಶ್ರೀರಾಂಪುರದ ಲಕ್ಷ್ಮಿಕಾಂತ ದೇವಾಲಯದ ಮಂಟಪದಲ್ಲಿ ಕಂಡುಬರುತ್ತವೆ. ಇಲ್ಲಿನ ಕಂಬಗಳು ಯಾಳಿಯಾಕಾರ ಹಾಗೂ ಸಂಯೋಗ ಸ್ಥಂಭಗಳಾಗಿವೆ. ಯಾಳಿಯಾಕಾರದಲ್ಲಿ ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿ ನಿಂತಿರುವಂತೆ ರಚಿಸಲಾಗಿದೆ. ಸಂಯೋಗ ಸ್ಥಂಭಗಳಲ್ಲಿ ಹಿಂದೆ ದೊಡ್ಡದಾದ ಕಂಬ ಅದಕ್ಕೆ ಆಸರೆಯೆಂಬಂತೆ ಮೂರು ಚಿಕ್ಕ ಕಂಬಗಳ ಜೋಡಣೆ ಮಾಡಿರುವುದು ಗೋಚರಿಸುತ್ತದೆ. ಈ ಸಂಯೋಗ ಸ್ಥಂಭದಲ್ಲಿನ ಕಂಬಗಳು ಸಂಗೀತ ಕಂಬಗಳಾಗಿದ್ದು ಈ ಪ್ರಕಾರದ ದೇವಾಲಯವು ಹಂಪಿಯ ವಿಜಯ ವಿಠ್ಠಲ ದೇವಾಲಯದಲ್ಲಿ ಕಾಣಬಹುದು. ಈ ರೀತಿಯ ವಿಶಿಷ್ಟ ಕಂಬಗಳುಳ್ಳ ದೇವಾಲಯ ಹೊಸದುರ್ಗ ತಾಲೂಕು ಪರಿಸರದಲ್ಲೇ ಅಲ್ಲದೇ ಜಿಲ್ಲೆಯಲ್ಲೇ ವಿಶಿಷ್ಟವಾದುದು. ಇನ್ನು ಈ ಎರಡು ಪ್ರಕಾರದ ಕಂಬಗಳ ಚಚ್ಚೌಕಗಳ ಮೇಲೆ ಅನೇಕ ವಿಧದ ಉಬ್ಬುಶಿಲ್ಪಗಳ ರಚನೆ ವಿಜಯನಗರ ಶೈಲಿಯ ಮತ್ತೊಂದು ಲಕ್ಷಣವಾಗಿದೆ. ಇಲ್ಲಿನ ಲಕ್ಷ್ಮೀಕಾಂತ ದೇವಾಲಯದ ಕಂಬಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ಪೂರ್ಣಕುಂಬ, ಕಾಳಿಂಗಮರ್ಧನ, ವಾಮನ ಮತ್ತು ಬಲಿಚಕ್ರವರ್ತಿ, ಬೇಟೆಗಾರ, ಬೇಟೆಗಾರ್ತಿ, ನೃತ್ಯಗಾರ್ತಿ,

ಶೃಂಗಾರಿಸಿಕೊಳ್ಳುವ ಸುಂದರಿ, ಗೋಪಾಲಕೃಷ್ಣ, ಲಕ್ಷ್ಮಿ, ರಾಮ ಲಕ್ಷ್ಮಣ ಸೀತೆಯ ಶಿಲ್ಪ ಸೇರಿದಂತೆ ಇನ್ನು ಅನೇಕ ವಿಶಿಷ್ಟ ಶಿಲ್ಪಗಳನ್ನು ಕಂಡರಿಸಲಾಗಿದೆ. ಇಲ್ಲಿನ ವಿಜಯನಗರ ಶೈಲಿಯ ದೇವಾಲಯಗಳ ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವನ್ನು ನಿರ್ಮಿಸಿದ್ದಾರೆ. ಈ ಶಿಖರಗಳನ್ನು ಇಟ್ಟಿಗೆ, ಗಚ್ಚುಗಾರೆಯಿಂದ ಕಟ್ಟಿದ್ದಾರೆ. ಈ ಶಿಖರಗಳು ಶಾಲ, ಕೂಟ ಮತ್ತು ಕರ್ಣಕೂಟಗಳಿಂದ ಕೂಡಿವೆ. ದೇವಾಲಯಗಳ ಪ್ರಕಾರದ ಮುಂದೆ ಮುಖ್ಯ ಪ್ರವೇಶದ್ವಾರಕ್ಕೆ ದ್ರಾವಿಡ ಮಾದರಿ ರಾಯಗೋಪುರಗಳ ರಚನೆಯನ್ನು ಗಮನಿಸಬಹುದಾಗಿದೆ. ಅಂತಹ ವಿಶಿಷ್ಟ ಗೋಪುರಗಳನ್ನು ಸೂಜಿಗಲ್ ಮೈಲಾರ ಬೆಟ್ಟದ ಮೈಲಾರ ಲಿಂಗೇಶ್ವರ ದೇವಾಲಯದ ಮುಖ್ಯ ಪ್ರವೇಶ ದ್ವಾರಗಳಲ್ಲಿ ನೋಡಬಹುದು.

ಈ ರೀತಿಯ ವಿಜಯನಗರ ಶೈಲಿಯ ವಿಶಿಷ್ಟ ಲಕ್ಷಣಗಳ ಅನೇಕ ದೇವಾಲಯಗಳು ಈ ಪರಿಸರದಲ್ಲಿದ್ದು ಅವುಗಳು ಇಲ್ಲಿನ ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಬಹುಮುಖ್ಯ ಆಕರಗಳಾಗಿವೆ ಎಂಬುದು ಈ ಮೇಲಿನ ವಿಶ್ಲೇಷಣೆಯಿಂದ ದೃಢಪಡುತ್ತದೆ.

ಹೊಸದುರ್ಗ ತಾಲೂಕು ಪರಿಸರದಲ್ಲಿನ ದೇವಾಲಯಗಳ ವಾಸ್ತುಶೈಲಿಯಲ್ಲಿ ಕೊನೆಯದಾಗಿ ಗಮನಿಸಬೇಕಾಗಿರುವುದು ವಿಜಯನಗರೋತ್ತರ ವಾಸ್ತುಶೈಲಿ. ವಿಜಯನಗರ ಆಳ್ವಿಕೆ ಮತ್ತು ಆನಂತರದ ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹು ಪ್ರಧಾನವಾದ ಪಾತ್ರ ವಹಿಸಿದವರು ಪಾಳೆಯಗಾರರು/ನಾಯಕ ಅರಸರು ಎಂದು ಹೇಳಬಹುದು. ಇವರು ಆಯಾ ಪರಿಸರದ ಸಾಂಸ್ಕೃತಿಕ ಚರಿತ್ರೆಗೆ ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು. ಹೊಸದುರ್ಗ ತಾಲೂಕು ಪರಿಸರದಲ್ಲಿ ಚಿತ್ರದುರ್ಗ, ಮತ್ತೋಡು, ಬೂದಿಹಾಳು, ಸಂತೇಬೆನ್ನೂರು ಹಾಗೂ ಬೇಲೂರು ನಾಯಕ ಅರಸರು ಕ್ರಿ.ಶ. ೧೫ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಆಳಿರುವುದು ಸಾಕ್ಷ್ಯಾಧಾರಗಳಿಂದ ತಿಳಿದ ಸಂಗತಿ. ಈ ಕಾಲದಲ್ಲಿ ದೇವಾಲಯ ವಾಸ್ತುಶೈಲಿಗೆ ಇವರು ನೀಡಿರುವ ಕಾಣಿಕೆ ದಾಖಲಾರ್ಹ. ಬದಲಾದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಇಲ್ಲಿನ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಹಾಗೂ ದಾನ-ದತ್ತಿಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಪಾಳೆಯಗಾರರ ಕಾಲದಲ್ಲಿ ವಾಸ್ತುಶೈಲಿಯು ಸಾಧಾರಣಗೊಂಡ ಕಾಲವೆಂದು ವಿದ್ವಾಂಸರ ಅಭಿಮತ. ರಾಜಕೀಯ ಅನೈಕ್ಯತಾ ಪರಿಸ್ಥಿತಿಯಲ್ಲಿ ಇವರು ವಿಜಯನಗರ ಕಾಲದ ದೇವಾಲಯಗಳನ್ನು ಪೋಷಿಸಿಕೊಂಡು ಬಂದರು. ಹಾಗೂ ಅವರ ವಾಸ್ತುಶೈಲಿಯನ್ನೇ ಯಥಾವತ್ತಾಗಿ ದೇವಾಲಯ ನಿರ್ಮಾಣ ಕಾರ್ಯ ಮಾಡಿರುವುದನ್ನು ಗಮನಿಸಬಹುದು. ಹೊಸದುರ್ಗ ತಾಲೂಕು ಪರಿಸರದಲ್ಲಿ ವಿಜಯನಗರೋತ್ತರ ಶೈಲಿಯ ಅನೇಕ ದೇವಾಲಯಗಳು ಕಂಡುಬರುತ್ತವೆ. ಅಂತಹವುಗಳೆಂದರೆ – ಕಂಗುವಳ್ಳಿಯ ಕೋಡಿರಾಮಲಿಮಗೇಶ್ವರ, ಬೋಕಿಕೆರೆಯ ಬೀರಲಿಂಗೇಶ್ವರ, ಕೆಲ್ಲೋಡಿನ ಮಲ್ಲಿಕಾರ್ಜುನ ಹಾಗೂ ಹನುಮಂತ, ಹೊಸದುರ್ಗದ ವೀರಭದ್ರೇಶ್ವರ, ಸೂಜಿಗಲ್ ಬೀರಲಿಂಗೇಶ್ವರ, ಮತ್ತೋಡಿನ ಬಾಣದ ರಂಗನಾಥ, ಲಕ್ಕಿಹಳ್ಳಿಯ ಆಂಜನೇಯ, ಕಂಚೀಬೆಟ್ಟದ ವರದರಾಜಸ್ವಾಮಿ, ಜಾನಕಲ್ಲಿನ ವೆಂಕಟೇಶ್ವರ, ಬನಸೀಹಳ್ಳಿಯ ಏಕನಾಥೇಶ್ವರಿ, ಶ್ರೀರಾಂಪುರದ ಬನಶಂಕರಿ ದೇವಾಲಯಗಳು ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಾಣಗೊಂಡಿವೆ.

ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದ ದೇವಾಲಯಗಳು ಅತ್ಯಂತ ವೈಶಿಷ್ಟ್ಯತೆಯಿಂದ ಕೂಡಿದವುಗಳು. ಈ ಮೇಲೆ ವಿಶ್ಲೇಷಿಸಿದಂತೆ ಕ್ರಿ.ಶ. ೯ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದವರೆಗೆ ಇಲ್ಲಿನ ದೇವಾಲಯಗಳು ಸಾಂಸ್ಕೃತಿಕ ಕಲಾಕೃತಿಗಳಾಗಿ ಗುರುತಿಸಿಕೊಂಡಿದ್ದವು. ಈ ಕಾಲಘಟ್ಟದ ದೇವಾಲಯಗಳಲ್ಲಿ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರ ಶೈಲಿಯ ದೇವಾಲಯಗಳನ್ನು ಕಾಣಬಹುದಾಗಿದ್ದು, ಹೊಯ್ಸಳ ಹಾಗೂ ವಿಜಯನಗರ ಶೈಲಿಯ ದೇವಾಲಯಗಳೇ ಪ್ರಧಾನವಾಗಿ ಕಂಡುಬರುತ್ತವೆ.

೫.೨. ಕೋಟೆ

ಮಾನವನು ಭೂಮಿಯ ಮೇಲೆ ಕಾಣಿಸಿಕೊಳ್ಳುವ ನೈಸರ್ಗಿಕ ವಿಕೋಪಗಳಾದ ಚಂಡಮಾರುತ, ಭೂಕಂಪ, ಜ್ವಾಲಾಮುಖಿ, ನೆರೆಹಾವಳಿ, ಅಧಿಕ ಬಿಸಿಲು, ಅಧಿಕ ಚಳಿ, ಅತಿವೃಷ್ಟಿಗಳಿಂದ ರಕ್ಷಣೆ ಪಡೆಯುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನವನು ಇಂತಹ ನೈಸರ್ಗಿಕ ವಿಕೋಪಗಳು ಮತ್ತು ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಕೃತಕ ರಕ್ಷಣಾ ಸಾಧನಗಳನ್ನು ಕಂಡುಕೊಂಡನು. ತಾನು ವಾಸಿಸುವ ಪ್ರದೇಶದ ಸುತ್ತಲೂ ಮಣ್ಣಿನ ದಿಬ್ಬವನ್ನು ಏರಿಸುವುದು, ಆಳವಾದ ಕಂದಕವನ್ನು ತೋಡುವುದು, ಇಟ್ಟಿಗೆ ಮತ್ತು ಕಲ್ಲುಗಳಿಂದ ಗೋಡೆ ನಿರ್ಮಿಸಿಕೊಳ್ಳುವ ಕಾರ್ಯವನ್ನು ಮಾಡತೊಡಗಿದನು. ಸಂಘ ಹಾಗೂ ಸಮಾಜ ಜೀವಿಯಾದ ಮಾನವನು ಕುಟುಂಬ ವ್ಯವಸ್ಥೆಯನ್ನು ರೂಪಿಸಿಕೊಂಡು ಗ್ರಾಮ, ಪಟ್ಟಣ, ನಗರ ಬೆಳವಣಿಗೆಗೆ ಕಾರಣೀಭೂತನಾದನು. ಇವುಗಳೇ ಮುಂದೆ ರಾಜ್ಯ ವ್ಯವಸ್ಥೆಯಾಗಿ ಬೆಳೆಯಲು ಕಾರಣವಾಯಿತು. ಅವನು ಪರರ ಆಕ್ರಮಣದಿಂದ ತನ್ನನ್ನು ತನ್ನ ಕುಟುಂಬವನ್ನು, ಗ್ರಾಮ, ಪಟ್ಟಣ, ನಗರ ಹಾಗೂ ರಾಜ್ಯವನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದಲೇ ರಕ್ಷಣ ಗೋಡೆ/ಕೋಟೆಗಳನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು.

ಕೋಟೆ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆಯನ್ನು ಸಂಸ್ಕೃತದಲ್ಲಿ 'ದುರ್ಗ'ವೆಂದು, ವೈದಿಕ ಸಾಹಿತ್ಯದಲ್ಲಿ 'ಪುರ'ವೆಂದು,[೧೦೦] ತಮಿಳು ಸಾಹಿತ್ಯದಲ್ಲಿ 'ಕೋಟ್ಟೈ(Kotai)' ಎಂದು, ೧೫೭ ತೆಲುಗು ಸಾಹಿತ್ಯದಲ್ಲಿ ಕೋಟ(Kota)ಎಂದು,[೧೦೧] ಹಳಗನ್ನಡ ಸಾಹಿತ್ಯದಲ್ಲಿ 'ಕೋಂಟೆ' ಎಂದು[೧೦೨] ಕರೆಯಲಾಗಿದೆ. ಸಾಮಾನ್ಯವಾಗಿ ಕೋಟೆಯನ್ನು ದುರ್ಗ, ಕಿಲ್ಲೆ ಹಾಗೂ ಇತ್ಯಾದಿ ಹೆಸರುಗಳಿಂದ ಕರೆಯುವರು. 'ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎನಿಸಿಕೊಳ್ಳುತ್ತದೆ.'[೧೦೩] ಇನ್ನೊಂದೆಡೆ ಶತ್ರುಗಳ ಸಂಭವನೀಯ ದಾಳಿಗಳಿಂದ ಎತ್ತರದ ಹಾಗೂ ಭದ್ರವಾದ ರಕ್ಷಣಾಗೋಡೆಯನ್ನು ಕೋಟೆ ಎಂದು ಕರೆಯಲಾಗುವುದು.[೧೦೪] ಆಂಗ್ಲ ಭಾಷೆಯ ಫೋರ್ಟ್ ಪದವನ್ನು ವಿಸ್ತರಿಸಿ ಅದಕ್ಕೆ F = Formidable, O = Obstruct, R = Rampart, T = Tractics ಎಂಬ ವಿಶಿಷ್ಟ ಅರ್ಥವೊಂದನ್ನು ಕಲ್ಪಿಸಲಾಗಿದೆ.[೧೦೫]

ಕೋಟೆಗಳನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೆ ಆದ ಕೆಲವು ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ಮುಂದಿನಂತೆ ನೋಡಬಹುದು.

ಜಿ.ಟಿ. ಡಾಟೆ ಪ್ರಕಾರ (Times of yore the Fortress was a capital means of defence)' ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯ ರಕ್ಷಣೆಯ ಸಲುವಾಗಿ ಇರುವಂತಹವು.[೧೦೬]

ಬೆಟಗೇರಿ ಕೃಷ್ಣಶರ್ಮರ ಪ್ರಕಾರ "ಹಿಂದಿನ ಕಾಲದ ನಮ್ಮ ರಾಜಕೀಯ ವ್ಯವಸ್ಥೆಗೆ ನಗರ, ಗ್ರಾಮ, ಹಳ್ಳಿ, ಪಟ್ಟಣಗಳಿಗೆ ಕೋಟೆಗಳು ಸಂರಕ್ಷಕ ಸಾಧನಗಳಾಗಿದ್ದವು".[೧೧೭]

ದ.ರಾ. ಬೇಂದ್ರೆಯವರು ಹೇಳುವಂತೆ "ಕೋಟೆ ಎಂದರೆ ಕೂಟ, ಇದು ಅಚ್ಚ ಕನ್ನಡ ಶಬ್ದ. ಇದರಲ್ಲಿ ಗಟ್ಟಿಯಾದ ಅರ್ಥವಿದೆ. ಒಗ್ಗಟ್ಟಿನ ಬಂಧವಿದೆ. ಕೋಟೆ ಬರೀ ಮಣ್ಣಿನ ಕಾಷ್ಠದ ಕಲ್ಲಿನ ಗೋಡೆ ಅಲ್ಲ. ಅದರ ಭಾವದ ಹಿಂದೆ ಮಾನವನ ಇತಿಹಾಸವಿದೆ, ಸಾಮರ್ಥ್ಯವಿದೆ, ಧೈರ್ಯವಿದೆ, ಬದುಕಿನ ಆಸೆ ಇದೆ, ಸಂಸ್ಕೃತಿ ಇದೆ, ನಾಗರೀಕತೆ ಇದೆ, ಮಾನವನ ಒಲವಿನ ಪ್ರೇಮದ, ವಾತ್ಸಲ್ಯದ, ಭ್ರಾತೃತ್ವದ, ಸ್ವಾರ್ಥದ, ಸೇಡಿನ, ಮಾತ್ಸರ್ಯದ, ಭೀಭತ್ಸದ, ಕ್ರೋಧದ ಮಹಾತ್ವಕಾಂಕ್ಷೆಯೂ ಇತ್ಯಾದಿ ಬದುಕಿನ ಭಾವನೆಗಳ ಕಲ್ಲುಗಳ ಸ್ತರಗಳನ್ನು ಜೋಡಿಸಿ ಕಟ್ಟಲ್ಪಡುತ್ತದೆ. ಕೋಟೆಯ ಗಟ್ಟಿಯಾದ ಬದುಕಿನಲ್ಲಿ ಸೇಡಿನ ಬಿರುಕುಗಳೂ ಹುಟ್ಟುತ್ತವೆ. ಮಹೋದ್ದೇಶಿತ ಶಕ್ತಿಯೊಂದು ಕೋಟೆಯ ಗೋಡೆಯ ಸ್ತರಗಳನ್ನು ಕಟ್ಟುತ್ತ ಅದನ್ನು ಮೇಲೇರಿಸುತ್ತಿರುವಾಗ ಎಲ್ಲಿಯದೋ ಮತ್ಸರದ ಮತ್ತೊಂದು ಶಕ್ತಿಯು ಅದನ್ನು ಕೆಡಹುವುದು ಹೇಗೆ ಎಂದು ಹೊಂಚು ಹಾಕುತ್ತಿರುತ್ತದೆ. ಈ ರೀತಿ ದ್ವಂದ್ವತೆಗಳಲ್ಲಿ ಕಟ್ಟಲ್ಪಟ್ಟ ಆ ಕೋಟೆಯ ಒಳಪಾರ್ಶ್ವ ಜೀವನದಲ್ಲಿ ಕಲೆ, ಸಾಹಿತ್ಯ, ಸಂಗೀತ, ಶಾಸ್ತ್ರ, ನ್ಯಾಯ, ರಾಜಸ್ವ, ವಾಸ್ತುಶಿಲ್ಪ ಇತ್ಯಾದಿ ಗುಣಮೌಲ್ಯಗಳು ಬೆಳೆದು ಬಂದಿವೆ. ನಾಗರೀಕತೆ ಹಾಗೂ ಸಂಸ್ಕೃತಿಗಳ ತೂಗು ತೊಟ್ಟಿಲುಗಳು ಕೋಟೆಕೊತ್ತಲಗಳು ಆಗಿ ಮಾರ್ಪಟ್ಟಿವೆ. ಅವು ನಾಡಿನ ದೇಶದ ಇತಿಹಾಸ ನಿರ್ಮಿಸಿವೆ."[೧೧೮]

ಹೀಗೆ ಕೋಟೆಗಳ ಮಹತ್ವವನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ವಿಚಾರಧಾರೆಗಳನ್ನು ಹರಿಸಿರುವುದು ಗಮನೀಯ.

ಜಗತ್ತಿನಲ್ಲಿ ಕೋಟೆಗಳ ಇತಿಹಾಸವು ಬಹು ಸ್ವಾರಸ್ಯಕರವಾಗಿದೆ. ಕ್ರಿ.ಪೂ. ೩೦೦೦ ರಿಂದ ಏಷಿಯಾ ಮೈನರ್ ಮತ್ತು ಈಜಿಪ್ಟ್ ದೇಶಗಳಲ್ಲಿ ಯುದ್ಧ ತಂತ್ರದ ಅವಶ್ಯಕತೆಗಳಿಗಾಗಿ ಸಂದರ್ಭಾನುಸಾರ ಉಪಯೋಗಿಸಲು ಹಾಗೂ ಸೈನಿಕರನ್ನು ರಕ್ಷಿಸಲು ಹಲವು ಬಗೆಯ ಕೋಟೆಗಳನ್ನು ನಿರ್ಮಿಸಲಾಯಿತು. ಅವು ಬಹುಮುಖ್ಯವಾಗಿ ಬ್ಯಾಬಿಲೋನಿಯಾ, ಆಸ್ಸೀರಿಯಾ, ಹಿಟೈಟ್ ಮತ್ತಿತರ ನಗರಗಳಿಗೆ ೧೩ ಅಡಿ ದಪ್ಪದ ೩೫ ಅಡಿ ಎತ್ತರದ ಕಲ್ಲಿನ ಬಲಿಷ್ಠ ಗೋಡೆಗಳನ್ನು ನಿರ್ಮಿಸಿದ್ದರೆಂದು ಹೇಳಲಾಗಿದೆ.[೧೧೯] ಕ್ರಿ.ಶ. ೩ನೇ ಶತಮಾನದಲ್ಲಿ 'ಷಿ-ಯಾಂಗ್-ಟೀ' ರಾಜನು ಅಕ್ರಮಣಕಾರಿ ದಾಳಿಯನ್ನು ತಡೆಯಲು ಚೀನಾದಲ್ಲಿ ಮಹಾಕೋಟೆಯನ್ನು ನಿರ್ಮಿಸಿದನು.[೧೨೦] ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದು ಎಂದು ಇದನ್ನು ಕರೆಯಲಾಗಿದೆ.

ಭಾರತದಲ್ಲಿ ಪ್ರಾಗ್ಯೆತಿಹಾಸ ಕಾಲದಲ್ಲಿ ತಾವು ವಾಸಿಸುವ ನೆಲೆಯ ಸುತ್ತಲೂ ರಕ್ಷಣೆಗಾಗಿ ಬೇಲಿ ಅಥವಾ ಕಿರುಗಾತ್ರದ ಗೋಡೆಯನ್ನು ನಿರ್ಮಿಸಿದ್ದ ಉದಾಹರಣೆಗಳಿವೆ.[೧೨೧] ಭಾರತದ ಪ್ರಾಚೀನ ಹರಪ್ಪ ಸಂಸ್ಕೃತಿಯ ಪ್ರಮುಖ ನಗರಗಳಾದ ಹರಪ್ಪ, ಮೊಹೆಂಜೋದಾರೊ, ಕಾಲಿಬಂಗನ್, ರೂಪಾರ್, ಲೋಥಾಲ್, ಸುರ್‌ಕೋಟ್ ಮುಂತಾದೆಡೆ ಸಾಕಷ್ಟು ಕೋಟೆಯ ಅವಶೇಷಗಳು ಕಂಡುಬಂದಿವೆ.[೧೨೨] ವೈದಿಕ ಸಾಹಿತ್ಯದಲ್ಲಿ ಇಂದ್ರನನ್ನು 'ಪುರಂಧರ' ಎನ್ನಲಾಗಿದ್ದು ಪುರ ಎಂದರೆ ಕೋಟೆಯಿಂದ ಆವೃತ್ತವಾದ ಪಟ್ಟಣ ಎಂಬ ಅರ್ಥವನ್ನು ವಿದ್ವಾಂಸರು

ನೀಡಿದ್ದಾರೆ.[೧೩೨] ರಾಮಾಯಣದಲ್ಲಿ ಅಯೋಧ್ಯೆಯ ಕೋಟೆಯನ್ನು, ಮಹಾಭಾರತದಲ್ಲಿ ಹಸ್ತಿನಾಪುರದ ಕೋಟೆಯನ್ನು ಉಲ್ಲೇಖಿಸಲಾಗಿದೆ.[೧೩೩] ಮೌರ್ಯರ ಕಾಲದ ಕೋಟೆಗಳ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರವು ಮಾಹಿತಿ ನೀಡುತ್ತದೆ. ಕ್ರಿಪೂ. ೩೨೦ರಲ್ಲಿ ಚಂದ್ರಗುಪ್ತ ಮೌರ್ಯನು ರಾಜಧಾನಿ ಪಾಟಲಿಪುತ್ರದಲ್ಲಿ ಕೋಟೆಯನ್ನು ಕಟ್ಟಿಸಿದ್ದನು. ಅದೇ ರೀತಿ ಈ ಸಾಮ್ರಾಜ್ಯಕ್ಕೆ ಬೇಟಿ ನೀಡಿದ್ದ ಗ್ರೀಕ್ ರಾಯಭಾರಿ ಮೆಗಾಸ್ತಾನೀಸ್‌ನು 'ರಾಜಧಾನಿ ಪಾಟಲಿಪುತ್ರವು ೫೭೦ ಕಾವಲು ಗೋಪುರಗಳು, ೬೪ ದ್ವಾರಗಳಿಂದ ಕೂಡಿದ ಒಂದು ಭದ್ರ ಕೋಟೆಯಾಗಿತ್ತು' ಎಂದು ದಾಖಲಿಸಿದ್ದಾನೆ.[೧೩೪] ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ರಾಜ್ಯಕ್ಕೆ ಕೋಟೆಯು ಅವಶ್ಯಕ ಅನಿವಾರ್ಯವಾಗಿತ್ತು. ಆದುದರಿಂದ ಗುಜರಾತ್, ರಾಜಸ್ಥಾನ, ಗ್ವಾಲಿಯರ್, ಕಾಲಿಂಜರ್, ದೆಹಲಿ ಮತ್ತು ದಕ್ಕನ್ ಇನ್ನೂ ಮುಂತಾದ ಕಡೆಗಳಲ್ಲಿ ವಿವಿಧ ಐತಿಹಾಸಿಕ ಕಾಲಘಟ್ಟಗಳಲ್ಲಿ ಅನೇಕ ಕೋಟೆಗಳು ನಿರ್ಮಾಣವಾದವು.

ಕರ್ನಾಟಕದಲ್ಲಿ ಕೋಟೆಗಳ ಇತಿಹಾಸವನ್ನು ಮೌರ್ಯರ ಕಾಲದಿಂದ ಗುರುತಿಸಬಹುದು. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಇಸಿಲ' ಪದವು ವಿದ್ವಾಂಸರನೇಕರಲ್ಲಿ ಚರ್ಚೆಗೆ ಗ್ರಾಸವಾಗಿದ್ದು ಇಲ್ಲಿ ಡಿ.ಎಲ್. ನರಸಿಂಹಾಚಾರ್ ಅವರ ಅಭಿಪ್ರಾಯವನ್ನು ಗಮನಿಸಿದಾಗ ಇಸಿಲ ಪದಕ್ಕೆ ಸಂವಾದಿಯಾಗಿ ತಮಿಳಿನ ಎಯಿಲ್ ಪದ ಕಂಡುಬರುತ್ತದೆ, ಎಯಿಲ್ ಎಂದರೆ ಕೋಟೆ ಅಥವಾ ಕೋಟೆಯ ಗೋಡೆ ಎಂದೂ ಈ ಮೂಲಕ ಇಸಿಲ ಪದದ ಅರ್ಥ ಕೋಟೆ, ಕೋಟೆಯುಳ್ಳ ಊರು ಅಥವಾ ಕೋಟೆಯೊಳಗಿನ ಊರು ಎಂದು ಹೇಳಿದ್ದಾರೆ.[೧೩೫] ಈ ಮೂಲಕ ಕೋಟೆಯ ಪ್ರಾಚೀನತೆಯನ್ನು ಗುರುತಿಸಬಹುದು. ಶಾತವಾಹನರ (ಕ್ರಿಪೂ. ೧ ಕ್ರಿಶ. ೩) ಕಾಲದಲ್ಲಿ ಸನ್ನತಿ, ಮಾನ್ಯಖೇಟ, ಚಂದ್ರವಳ್ಳಿ, ಬ್ರಹ್ಮಗಿರಿ ಮುಂತಾದ ಕಡೆಗಳಲ್ಲಿ ಕೋಟೆಗಳ ಅವಶೇಷಗಳು ಕಂಡುಬಂದಿವೆ.[೧೩೬] ಪ್ರಾಚೀನ ಕರ್ನಾಟಕದ ರಾಜಕೀಯದಲ್ಲಿ ಕದಂಬರಿಗೆ ಮಹತ್ವದ ಸ್ಥಾನವಿದೆ. ಕದಂಬರ ರಾಜಧಾನಿ ಬನವಾಸಿಯಲ್ಲಿಯೂ ಪುರಾತನ ಕೋಟೆಯ ಅವಶೇಷಗಳು ದೊರೆತಿವೆ. ವರದಾ ನದಿಯ ದಂಡೆಯ ಮೇಲೆ ನಿರ್ಮಿಸಿದ ಬನವಾಸಿ ಕೋಟೆಯನ್ನು ಇಟ್ಟಿಗೆ ಮತ್ತು ಜಂಬಿಟ್ಟಿಗೆಗಳಿಂದ ಕಟ್ಟಲಾಗಿದೆ.[೧೩೮]

ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ಸುಪ್ರಸಿದ್ಧ ಅತ್ಯಂತ ಪ್ರಾಚೀನ ಕೋಟೆಯೆಂದರೆ ಬಾದಾಮಿ ಕೋಟೆ.[೧೩೯] ಇದನ್ನು ಕ್ರಿಶ. ೫೪೩ರಲ್ಲಿ ಮೊದಲನೇ ಪುಲಿಕೇಶಿಯು ಕಟ್ಟಿಸಿದನೆಂದು ಹೇಳಲಾಗಿದೆ. ರಾಷ್ಟ್ರಕೂಟರು ರಾಜಧಾನಿ ಮಳಖೇಡದಲ್ಲಿ ಕಾಗಿಣಾ ನದಿಯ ದಂಡೆಯ ಮೇಲೆ ಕೋಟೆಯನ್ನು ನಿರ್ಮಿಸಲಾಗಿದ್ದು ಅದು ವರ್ತುಲಾಕಾರದಲ್ಲಿದೆ.[೧೪೦] ಗಂಗವಾಡಿನಾಡನ್ನು ಅನೇಕ ಶತಮಾನಗಳ ಕಾಲ ಆಳಿದ ತಲಕಾಡಿನ ಗಂಗರು ತಮ್ಮ ರಾಜ್ಯದ ರಕ್ಷಣೆಗಾಗಿ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ಬೇಗೂರಿನ ಗಂಗರ ಕಾಲದ ಕೋಟೆ ವರ್ತುಲಾಕಾರದಲ್ಲಿದೆ. ದ್ವಾರಸಮುದ್ರ ಅಥವಾ ಹಳೇಬೀಡು ಹೊಯ್ಸಳರ ರಾಜಧಾನಿಯಾಗಿದ್ದು ಅದರ ರಕ್ಷಣೆಗಾಗಿ ಭದ್ರವಾದ ಕೋಟೆಯನ್ನು ಸುತ್ತಲೂ ನಿರ್ಮಿಸಲಾಗಿತ್ತು. ಆದರೆ ಈಗ ಅದು ನಾಶವಾಗಿದೆ.[೧೪೧] ಕ್ರಿಶ.೧೩೩೬–೧೫೬೫ರ ಕಾಲಘಟ್ಟದಲ್ಲಿ ಆಳಿದ ವಿಜಯನಗರದ ರಾಜಧಾನಿ ಹಂಪಿಯು ಏಳುಸುತ್ತಿನ ಕೋಟೆಗಳಿಂದ ಸುತ್ತುವರೆಯಲ್ಪಟ್ಟಿದ್ದಿತು. ಹಂಪಿಯ ಕೋಟೆಯ ಕುರಿತು ವಿದೇಶಿ ಪ್ರವಾಸಿಗರು ಸಾಕಷ್ಟು ಮಾಹಿತಿ ನೀಡಿದ್ದಾರೆ. ಪರ್ಷಿಯಾದ ಪ್ರವಾಸಿ

ಅಬ್ದುಲ್ ರಜಾಕ್ ಕ್ರಿ.ಶ. ೧೪೪೨-೪೩ರಲ್ಲಿ ನಗರಕ್ಕೆ ಭೇಟಿ ನೀಡಿದ್ದನು. ಅವರು ನಗರವನ್ನು ಹೀಗೆ ವರ್ಣಿಸಿದ್ದಾನೆ. "ಬಿಜನಗರದ ಪಟ್ಟಣವು ಹೇಗಿದೆಯೆಂದರೆ, ಕಣ್ಣು ಅಂತದೊಂದು ನಗರವನ್ನು ಎಂದೂ ನೋಡಿಲ್ಲ, ಅದಕ್ಕೆ ಸಮನಾದ ಇನ್ನೊಂದು ನಗರವು ಇಡಿ ಜಗತ್ತಿನಲ್ಲೇ ಬೇರೊಂದಿದೆಯೆಂದು ಕಿವಿಗೂ ಬಿದ್ದಿಲ್ಲ. ಏಳುಕೋಟೆ ಗೋಡೆಗಳು ನಗರವನ್ನು ಸುತ್ತುಗಟ್ಟಿರುವಂತೆ ನಿರ್ಮಿಸಲಾಗಿದೆ. ಮೊದಲನೆಯ ಕೋಟೆಯ ಸುತ್ತಲೂ ಆಳೆತ್ತರದ ಬಂಡೆಗಲ್ಲುಗಳನ್ನು ಅರ್ಧದವರೆಗೆ ನೆಲದಲ್ಲಿ ಹೂಳಿ ನಿಲ್ಲಿಸಿದೆ. ಇವುಗಳನ್ನು ಒಂದರ ಪಕ್ಕದಲ್ಲೊಂದು ಹೀಗೆ ಜೋಡಿಸಿದೆಯೆಂದರೆ, ಯಾವುದೇ ಕುದುರೆಯಾಗಲಿ, ಯೋಧನಾಗಲಿ ಸುಲಭವಾಗಿ ಕೋಟೆಯ ಸಮೀಪಕ್ಕೆ ಬರುವ ಧೈರ್ಯ ಮಾಡಲಾರರು".[೧೭] ವಿಜಯನಗರ ಸಾಮ್ರಾಜ್ಯದ ಪತನದ ಬಳಿಕ ಕರ್ನಾಟಕದಲ್ಲಿ ಅನೇಕ ಪಾಳೆಯಗಾರರು ಹಾಗೂ ಇತರ ಅದೀನ ಅರಸು ಮನೆತನಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಅಬೇಧ್ಯ ಕೋಟೆಗಳನ್ನು ನಿರ್ಮಿಸಿ ಆಳಿ ಹೋದುದು ತಿಳಿದ ಸಂಗತಿ.

ಒಂದು ರಾಜ್ಯದ ಅಳಿವು ಉಳಿವಿಗೆ ರಾಜನ ಪಾತ್ರ ಎಷ್ಟು ಮುಖ್ಯವೋ ಕೋಟೆಗಳ ಪಾತ್ರವೂ ಅಷ್ಟೇ ಮುಖ್ಯವಾದುದು. ಕೋಟೆ ನೀರನ್ನು ಸಂಗ್ರಹಿಸುವ ಕೊಡ ಇದ್ದ ಹಾಗೆ ಕೊಡಕ್ಕೆ ತೂತುಬಿದ್ದರೆ ನೀರು ಉಳಿಯಲಾರದು. ಹಾಗೆಯೇ ಕೋಟೆಯು ಸಡಿಲವಾದರೆ ರಾಜ್ಯ ಉಳಿಯಲಾರದು. ಕೋಟೆಯನ್ನು ಗೆದ್ದುದಾದರೆ ಇಡೀ ರಾಜ್ಯವೇ ಸಿಕ್ಕಂತೆ ಎಂದು ಕೋಟೆಯನ್ನು ಕಟ್ಟಿಸುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿತ್ತು.[೧೮] ಆದುದರಿಂದ ಕೋಟೆ-ಕೊತ್ತಲಗಳು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದ್ದವು. ಪ್ರಾಚೀನ ಸಾಹಿತ್ಯ ಕೃತಿಗಳಾದ ಕೌಟಿಲ್ಯನ 'ಅರ್ಥಶಾಸ್ತ್ರ', ಕಾಮಾಂದಕನ 'ನೀತಿಸಾರ', ಶುಕ್ರನ 'ಶುಕ್ರನೀತಿ', ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ'ಗಳಲ್ಲಿ, ಮಧ್ಯಕಾಲೀನ ಸಾಹಿತ್ಯ ಕೃತಿಗಳಾದ ಜನ್ನನ 'ಅನಂತನಾಥ ಪುರಾಣ', ನಂಜುಂಡನ 'ಕುಮಾರರಾಮಚರಿತೆ', ಬಸವರಾಜನ 'ಶಿವತತ್ವ ರತ್ನಾಕರ', ಕನಕದಾಸರ 'ಮೋಹನ ತರಂಗಿಣಿ', ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ', ಚಂದ್ರವಿಜಯ 'ಪಂಪಾಕ್ಷೇತ್ರ ವರ್ಣನಂ', ಚಾಮರಸನ 'ಪ್ರಭುಲಿಂಗಲೀಲೆ', ಶೃತಕೀರ್ತಿಯ 'ವಿಜಯಾಂಬುದಿ ಚರಿತೆ', ಭೀಮಕವಿಯ 'ಬಸವಪುರಾಣ', ಬಾಹುಬಲಿ ಪಂಡಿತನ 'ಧರ್ಮನಾಥ ಪುರಾಣ', ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ', ಎರಡನೆ ಮಂಗರಸನ 'ಸಾಮ್ಯುಕ್ತ ಕೌಮುದಿ'ಗಳಲ್ಲಿ ಹಾಗೂ ಕರ್ನಾಟಕದ ಅನೇಕ ಶಾಸನಗಳಲ್ಲಿ ಕೋಟೆಗಳ ಮಹತ್ವವನ್ನು ಕುರಿತು ಪ್ರಸ್ತಾಪಿಸಲಾಗಿದೆ.[೧೯]

ಗತಕಾಲದಲ್ಲಿ ರಾಜಪ್ರಭುತ್ವದ ಸ್ಥಾಪನೆ ಹಾಗೂ ಅದರ ರಕ್ಷಣೆಗಾಗಿ ಅಂದಿನ ಚಕ್ರಾಧಿಪತ್ಯವು ಬೃಹತ್ ಪ್ರಮಾಣದ ಕೋಟೆಗಳನ್ನು ನಿರ್ಮಿಸುವುದು ಅನಿವಾರ್ಯವು ಹಾಗೂ ಅವಶ್ಯವು ಆಗಿದ್ದಿತು. ಶತ್ರುವಿನ ವಿರುದ್ಧ ಇದು ರಕ್ಷಣೆಯನ್ನು ನೀಡುತ್ತಿದ್ದರಿಂದ ಪ್ರತಿಯೊಂದು ರಾಜ್ಯದ ರಾಜಧಾನಿಯು ಕೋಟೆಯಿಂದ ಸುತ್ತುವರೆಯಲ್ಪಟ್ಟಿರುತ್ತಿದ್ದಿತು. ಕಾಡು ಮೃಗಗಳಿಂದ, ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ಪಡೆಯುವಾಗ ಕೋಟೆಗಳು ತುಂಬಾ ಮಹತ್ತರ ಪಾತ್ರವನ್ನು ವಹಿಸುತ್ತಿದ್ದವು. ರಾತ್ರಿ ವೇಳೆಯಲ್ಲಿ ಆಕ್ರಮಣ ಮಾಡಬಹುದಾದ ಹುಲಿ, ಆನೆ, ಕರಡಿ ಮುಂತಾದ ದುಷ್ಟಪ್ರಾಣಿಗಳಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ನಗರ ಹಾಗೂ ಗ್ರಾಮಗಳ ಸುತ್ತ ಎತ್ತರವಾದ ಕಂದಕಸಹಿತ

ಗೋಡೆಯನ್ನು ನಿರ್ಮಿಸುತ್ತಿದ್ದರು. ಹೀಗಾಗಿ ಸಾಮಾಜಿಕ ಬದುಕಿನಲ್ಲೂ ಸುರಕ್ಷತೆಯ ದೃಷ್ಟಿಯಿಂದ ಕೋಟೆಗಳು ಪ್ರಮುಖ ಸ್ಥಾನ ಪಡೆದಿವೆ.[೧೩]

ಶುಕ್ರನು ತನ್ನ 'ನೀತಿಸಾರ'ದಲ್ಲಿ 'ಪ್ರಜಾರಕ್ಷಣೆಗೆ ಏಳು ಅಂಗಗಳು, ಅವು ಪ್ರಜಾರಕ್ಷಣೆ ಎಂಬ ಶರೀರಕ್ಕೆ ರಾಜನು ತಲೆ, ಮಂತ್ರಿ ಮನಸ್ಸು ಅವರ ಸೇನೆ, ದುರ್ಗವು ಅವರ ಕೈಗಳು, ರಾಷ್ಟ್ರವು ಸಮಯ, ಹೀಗೆ ಸಪ್ತಾಂಗಗಳಿಂದ ಪೂರ್ಣ ರಾಜ್ಯವು ಏಳಿಗೆ ಹೊಂದುವುದು' ಎಂದು ಹೇಳಿದ್ದಾನೆ.[೧೪]

ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆ
ರ್ಗದ ವಜ್ರಲಾಳ ವಿಂಡಿಗೆಯ
ಅದಟಿನ ದ್ವರಾಷ್ಟ್ರಕವ ವರ್ಣಿಸುವೊಡೆ ಪದಕವಿ
ಗಳಿ ಗೋಚರವು

ಮದ್ದಾನೆಯ ಸೊಂಡೆಯ ಸಹಾಯದಿಂದ ನೂಕಿ ಬಂದಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲುವುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತ ಕವಿಗಳಿಗೂ ಅಸಾಧ್ಯವಾದುದು' ಎಂದು ಮೋಹನ ತರಂಗಿಣಿಯ ಗದ್ಯವನ್ನು ಎಸ್.ಎಸ್.ಕೋತಿನ ಅನುವಾದಿಸಿದ್ದಾರೆ.[೧೫]

ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ'ದಲ್ಲಿ ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು, ಕೋಟೆಯು ಕೋಶ ಮತ್ತು ಸೈನ್ಯಕ್ಕಿಂತಲೂ ಮಿಗಿಲಾದುದೆಂದು ಹೇಳುತ್ತಾನೆ.[೧೬] ಕೋಶ ಮತ್ತು ಸೈನ್ಯಕೋಟೆಯೊಳಗೆ ಇದ್ದರೆ ಮಾತ್ರ ಸುಕ್ಷಿತವಾಗಿರಬಲ್ಲವು.

ಈ ಮೇಲಿನ ಅಂಶಗಳಿಂದ ಕೋಟೆಗಳು ಅಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿ ತಮ್ಮದೇ ಆದ ಪಾತ್ರವನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಒಂದು ಕೋಟೆಯು ವಿವಿಧ ಅಂಗಗಳಿಂದ ಅಲಂಕೃತಗೊಂಡಿರುತ್ತದೆ. ಆದ್ದರಿಂದ ವಿವಿಧ ಅಂಗಗಳ ಪರಿಚಯ ಅಗತ್ಯವಾಗಿದೆ. ಶಿಲ್ಪಶಾಸ್ತ್ರಗಳಲ್ಲಿ ಪ್ರತಿಪಾದಿಸಿರುವಂತೆ ರಕ್ಷಣಾ ವಾಸ್ತುಶಿಲ್ಪವು ವಪ್ರ (ಮಣ್ಣಿನ ಇಳಿವೊರೆ), ಪರಿಕೆ (ಕಂದಕ ಅಥವಾ ಅಗಳು), ಕೋಟೆತೆನೆ, ಪ್ರಕಾರ (ಆಳ್ವೇರಿ) ಮುಗಿಲಟ್ಟಣೆ, ಕೊತ್ತಲ (ಬುರುಜು), ಕೋಟೆಯ ಬಾಗಿಲು, ಕೋಟೆಯ ಕದ, ಕೋಟೆಯ ಮೇಲಿನ ಉಪಕರಣಗಳು ಮುಂತಾದ ಅಂಗ ಭಾಗಗಳನ್ನು ಒಳಗೊಂಡಿರುವ ಸ್ಥಳವೇ ಕೋಟೆ.[೧೭]

ಕರ್ನಾಟಕದ ಕೋಟೆಗಳು ವಿವಿಧ ಬಗೆಯ ತಳವಿನ್ಯಾಸ ಹೊಂದಿವೆ. ಕೌಟಿಲ್ಯ ತನ್ನ 'ಅರ್ಥಶಾಸ್ತ್ರ'ದಲ್ಲಿ ಕೋಟೆಗಳ ತಲವಿನ್ಯಾಸಗಳನ್ನು ಮೂರು ರೀತಿಯಲ್ಲಿ ವಿಭಜಿಸಿದ್ದಾನೆ.[೧೮]

೧. ವೃತ್ತ : ವರ್ತುಲಾಕಾರ

೨. ದೀರ್ಘಚತುಸ್ರ : ಆಯತಾಕಾರ

೩. ಚತುರಸ್ರ : ಚೌಕಾಕಾರ

ಹೊಸದುರ್ಗ ತಾಲೂಕಿನ ಬೂದಿಹಾಳು ಕೋಟೆಯು ವೃತ್ತಾಕಾರದ ಕೋಟೆಗೆ ಉದಾಹರಣೆಯಾಗಿದೆ. ಉಳಿದಂತೆ ಬೆಟ್ಟಗುಡ್ಡಗಳನ್ನು ಬಳಸಿಕೊಂಡು ಅನಿಯಮಿತಾಕಾರದ ಕೋಟೆಗಳಾಗಿವೆ.[೧೧]

ಭಾರತದ ಬಹುತೇಕ ಕೋಟೆಗಳು ಅನೇಕ ಶಾಸ್ತ್ರಗ್ರಂಥಗಳ ಆಧಾರದ ಮೇಲೆ ರಚಿಸಲಾಗಿದೆ. ಭಾರತದ ಅನೇಕ ಪ್ರಾಚೀನ ಶಾಸ್ತ್ರಗ್ರಂಥಗಳು ಹಾಗೂ ವಾಸ್ತುಗ್ರಂಥಗಳು ಕೋಟೆಯ ರಚನಾಸ್ಥಳ, ಕೋಟೆಗಳನ್ನು ನಿರ್ಮಿಸುವ ವಿಧಾನ ಮತ್ತು ಕೋಟೆಗಳ ಪ್ರಕಾರ ಮೊದಲಾದ ವಿಷಯಗಳನ್ನು ಚರ್ಚಿಸಿವೆ.

ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ' ಗ್ರಂಥದಲ್ಲಿ ಕೋಟೆಗಳನ್ನು ನಾಲ್ಕು ಪ್ರಕಾರಗಳನ್ನಾಗಿ ವಿಂಗಡಿಸಿದ್ದಾನೆ.[೧೨]

೧. **ಔದಕ** : ನಡುಗಡ್ಡೆ ಅಥವಾ ಆಳವಾದ ಕಂದಕಗಳಂತೆ ಸುತ್ತಲೂ ಆಳವಾದ ನೀರಿನಿಂದ ಸುತ್ತುವರೆಯಲ್ಪಟ್ಟ ನೀರಿನ ಕೋಟೆ.

೨. **ಪಾರ್ವತ** : ಬೆಟ್ಟಗಳ ಮೇಲೆ ದೊಡ್ಡ ದೊಡ್ಡ ಕಲ್ಲು ಮತ್ತು ಬಂಡೆಗಳಿಂದ ಕಟ್ಟಿರುವುದು ಅಥವಾ ಭಯ ಹುಟ್ಟಿಸುವಂತೆ ಗುಹೆಯ ಮಾದರಿಯಲ್ಲಿರುವುದು.

೩. **ಧಾನ್ವನ** : ಮರಳುಭೂಮಿಯಲ್ಲಿ ನೀರಿಲ್ಲದೆ ಒಣಮರಳು ಮತ್ತು ಒಣ ಮಣ್ಣನ್ನು ತುಂಬಿ ಕಟ್ಟಿದ ಕೋಟೆಗಳು.

೪. **ವನ** : ಅನೇಕ ಚಿಕ್ಕ ಪುಟ್ಟ ಪಕ್ಷಿಗಳಿಂದ ನೀರಿನಿಂದ ಕೂಡಿ ದಟ್ಟವಾಗಿರುವ ಅರಣ್ಯ ಕೋಟೆಗಳು.

ಹನ್ನೆರಡನೇ ಶತಮಾನದ ಮೂರನೇ ಚಾಲುಕ್ಯ ಸೋಮೇಶ್ವರನ 'ಅಭಿಲಾಷಿತಾರ್ಥ ಚಿಂತಾಮಣಿ' ಮತ್ತು ಹದಿನೇಳನೇ ಶತಮಾನದ ಕೆಳದಿಯ ಬಸವರಾಜನ 'ಶಿವತತ್ವರತ್ನಾಕರ'ದಲ್ಲಿ ಒಂಬತ್ತು ಪ್ರಕಾರದಲ್ಲಿ ಕೋಟೆಗಳನ್ನು ನಮೂದಿಸಿದ್ದಾರೆ.[೧೩]

೧. **ಜಲದುರ್ಗ** : ಆಳವಾದ ನೀರಿನಿಂದ ಆವರಿಸಲ್ಪಟ್ಟಿರುವುದು.

೨. **ಗಿರಿದುರ್ಗ** : ದುರ್ಗಮವಾದ ಬೆಟ್ಟದ ಮೇಲೆ ಕಟ್ಟಿದ ಹಾಗೂ ಸುತ್ತಲೂ ನೀರಿನಿಂದ ಆವೃತವಾಗಿರುವುದು.

೩. **ಪಾಷಾಣದುರ್ಗ** : ಬಂಡೆಗಳಿಂದ ರಚಿಸಿರುವುದು.

೪. **ಇಷ್ಟಕದುರ್ಗ** : ಇಟ್ಟಿಗೆಗಳಿಂದ ಕಟ್ಟಿ ಸುಣ್ಣ ಬಣ್ಣ ಬಳಿದು ಅಗಲವಾದ ಮತ್ತು ಆಳವಾದ ಕಂದಕಗಳಿಂದ ಸುತ್ತುವರೆಯಲ್ಪಟ್ಟಿರುವುದು.

೫. **ಮೃತ್ತಿಕಾಮಯನ್** : ಮಣ್ಣಿನಿಂದ ಕಟ್ಟಿರುವುದು.

೬. **ವನದುರ್ಗ** : ದಟ್ಟವಾದ ಮುಳ್ಳು ಮರಗಳಿಂದ ಆವರಿಸಲ್ಪಟ್ಟಿರುವುದು.

೭. **ಮರದುರ್ಗ** : ಕೋಟೆಯೊಳಗೆ ಸಾಕಷ್ಟು ನೀರನ್ನು ಸಂಗ್ರಹಿಸಿ ಮರುಭೂಮಿಯಲ್ಲಿ ಕಟ್ಟಿರುವುದು.

೮. ದಾರುಣಮಯದುರ್ಗ : ಮರ ಮತ್ತು ಬಂಬುಗಳಿಂದ ತಯಾರಿಸುವುದು.

೯. ನರದುರ್ಗ : ಸುತ್ತಲೂ ಶಸ್ತ್ರಸಜ್ಜಿತವಾದ ಯೋಧರಿಂದ ರಕ್ಷಿತವಾಗಿರುವುದು.

ದುರ್ಗಸಿಂಹನು ನಾಲ್ಕು ದುರ್ಗಗಳ ಹೆಸರನ್ನು ಹೇಳುತ್ತಾನೆ. ಒಂದೊಂದು ದುರ್ಗವು ಮತ್ತೆ ಎರಡು ಪ್ರಕಾರವಾಗಿರುತ್ತದೆಯೆಂದು ಹೇಳಿ ಒಟ್ಟು ಎಂಟು ದುರ್ಗಗಳ ವಿವರಣೆಯನ್ನು ಕೊಡುತ್ತಾನೆ.[೨೫]

೧. ಎರಡು ನದಿಗಳ ಸಂಗಮದ ಮಧ್ಯದ ದುರ್ಗ	ಅಂತರ್ದ್ವೀಪ	ಜಲದುರ್ಗ
೨. ದೊಡ್ಡ ಕೆರೆಗಳಿಂದಲೂ ಒರಟು ಮುಳ್ಳಿಗಳಿಂದ ತುಂಬಿದ, ಸರೋವರಗಳಿಂದಲೂ ಸುತ್ತುವರೆಯಲ್ಪಟ್ಟಿರುವ ದುರ್ಗ	ಮಹಾಸ್ಥಳ	
೧. ಬಹು ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಿದ್ದು ಒಂದೇ ಬಾಗಿಲುಳ್ಳದ್ದು	ಗುಹ್ಯ	ಗಿರಿದುರ್ಗ
೨. ಎಲ್ಲಿಯೂ ಒಳ್ಳೆಯ ದಾರಿಯಿಲ್ಲದೆ ಬೆಟ್ಟಗಳ ನಡುವೆ ನೀರು ಬೀಳುವ ಸ್ಥಳದಲ್ಲಿ ಸಣ್ಣ ದಾರಿಯಿರುವುದು	ಪ್ರಸ್ತರ	
೧. ಹೊರಗಡೆ ನೀರು, ಗಿಡ, ಮರ, ಹುಲ್ಲು ಬಳ್ಳಿಗಳಿಲ್ಲದೆ, ಒಳಗೆ ಮಾತ್ರ ಹುಲ್ಲು ಕಡ್ಡಿ, ನೀರಿನಿಂದ ಸಮೃದ್ಧವಾಗಿರುವುದು	ಉದಕಸ್ತಂಭ	ಸ್ಥಲದುರ್ಗ
೨. ಹೊರಗೆ ಉಪ್ಪುನೀರು, ಕುಡಿಯಲು ಬಾರದ ನೀರು ಅಥವಾ ಸ್ವಲ್ಪವೇ ನೀರು ಇರುವುದು	ವೈರಿಣಿ	
೧. ಸುತ್ತನೀರು ತುಂಬಿದ ಜಲಾಶಯವಿದ್ದು, ಹೆದರಿಸುವಷ್ಟು(ದುರ್ಬರ) ಅತಿಶೀತಲ ಕೆಸರುಳ್ಳದು	ಕರ್ದಮೋದಕ	ವನದುರ್ಗ
೨. ಅನೇಕ ಮರಗಳಿಂದ ಪರಿವೃತ್ತವಾಗಿ, ಸುತ್ತಮುತ್ತ ಹುಲ್ಲು ಯಥೇಚ್ಛವಾಗಿ ಬೆಳದಿರುವುದು	ಸ್ತಂಭಗಹನ	

ಹೀಗೆ ಕೋಟೆಯ ಪ್ರಕಾರಗಳನ್ನು ಹಾಗೂ ಇನ್ನೂ ಹಲವು ವಿಚಾರಗಳನ್ನು ಕುರಿತು ಮೇಲಿನ ಸಾಹಿತ್ಯ ಗ್ರಂಥಗಳು ಹಾಗೂ ಶಾಸನ ಆಧಾರಗಳು ಮಾಹಿತಿಗಳನ್ನು ಕೊಡುತ್ತವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲದಿಂದಲೇ ಗುರುತಿಸ ಬಹುದು. ಈಗಾಗಲೇ ಮೇಲೆಯೆ ಹೇಳಿದಂತೆ ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಇಸಿಲ' ಎಂಬ ಪದವು ಕೋಟೆ, ಕೋಟೆಯೊಳಗಿನ ಊರು ಎಂಬ ಅರ್ಥವನ್ನು ಕೊಡುವುದರಿಂದ ಇಲ್ಲಿ ಮೌರ್ಯರ ಕಾಲಕ್ಕಾಗಲೇ ಕೋಟೆಗಳ ನಿರ್ಮಾಣವನ್ನು ಕಾಣಬಹುದು. ಶಾತವಾಹನರ ಕಾಲದ ಮತ್ತೊಂದು ಮುಖ್ಯ ಪಟ್ಟಣ ಚಂದ್ರವಳ್ಳಿಯಲ್ಲಿ ದೊರೆತ ಇಟ್ಟಿಗೆಯ ಗೋಡೆಗಳು ಇವರ ಕಾಲದ ಕೋಟೆಗಳಾಗಿದ್ದ ಸಾಧ್ಯತೆ ಇದೆ.[೨೬] ಕ್ರಿ.ಶ. ೧೦ನೇ ಶತಮಾನದ ಚಾಲುಕ್ಯ

ಸಾಮಂತನಾಗಿದ್ದುಕೊಂಡು ಆಳ್ವಿಕೆ ಮಾಡುತ್ತಿದ್ದ ಕದಂಬ ವಂಶದ ಅಜವರ್ಮ ಮತ್ತು ಬೆಂಚರಸದೇವರು ಮೊಳಕಾಲ್ಮೂರು ಬಳಿ ನುಂಕೆ ಮಲೆಯಿಂದ ಆಳುತ್ತಿದ್ದ ವಿಷಯವನ್ನು ಶಾಸನಗಳು ಹೇಳುತ್ತವೆ. ಈ ಕಾಲದಲ್ಲಿ ಇವರು ಲುಂಕೆಯ ಹೆಸರಿನ ಕೋಟೆಯನ್ನು ನಿರ್ಮಿಸಿದರು.[೯೬] ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೦೭೩ರ ಶಾಸನವು ಕ್ರಿ.ಶ.೧೧ನೇ ಶತಮಾನದಲ್ಲಿ ಚಿತ್ರದುರ್ಗದಲ್ಲಿ ಕೋಟೆಯಿದ್ದ ಬಗ್ಗೆ ಮಾಹಿತಿ ನೀಡುತ್ತದೆ.[೯೭] ಹೊಯ್ಸಳ ಮಹಾಪ್ರಧಾನಿ ಪೆರುಮಾಳೆ ದಂಡನಾಯಕನ ಹೆಸರಿನಲ್ಲಿ ಪೆರುಮಾಳೆಪುರವನ್ನು ನಿರ್ಮಿಸಿದ್ದು, 'ಪುರ' ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದುದನ್ನು ಗಮನಿಸಿದರೆ ಹೊಯ್ಸಳರು ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಿದ್ದರೆಂದು ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ಕೋಟೆಗಳು ವಿಜಯನಗರ ಮತ್ತು ಪಾಳೆಯಗಾರರ ಕಾಲದಲ್ಲಿ ವ್ಯಾಪಕವಾಗಿ ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲಾ ಪ್ರದೇಶವನ್ನು ತಮ್ಮ ಸಾಮ್ರಾಜ್ಯದ ಭಾಗವನ್ನಾಗಿಸಿ ಕೊಂಡು ಆಳಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಶಾಸನಗಳು ಕ್ರಿ.ಶ. ೧೩೫೭ ರಿಂದ ಎರಡನೇ ದೇವರಾಯನ ಕಾಲದವರೆಗೂ ನಂತರ ಕೃಷ್ಣದೇವರಾಯನ ಕಾಲದಿಂದ ಅಳಿಯರಾಮರಾಯನ ಕಾಲದವರೆಗೂ ದೊರೆಯುತ್ತವೆ.[೯೮] ಈ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯ ಮೇಲೆ ವಿಜಯನಗರದ ಅರಸರೂ ನೇರವಾಗಿಯೂ ಮತ್ತು ಪರೋಕ್ಷವಾಗಿಯೂ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು.[೯೯] ಚಿತ್ರದುರ್ಗ ಜಿಲ್ಲೆಯು ವಿಜಯನಗರದ ಆಸೆ–ಆಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯ ಘಟಕವಾಗಿತ್ತು. ಮಧ್ಯ ಕರ್ನಾಟಕ ದಲ್ಲಿರುವ ಈ ಭೂಪ್ರದೇಶವನ್ನು ಸಹಜವಾಗಿ ಸಮರ್ಥವಾಗಿ ಬಳಸಿಕೊಂಡರು. ಇವರ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಬಹುತೇಕ ಕೋಟೆಗಳು ನಿರ್ಮಾಣವಾಗಿರುವುದು ಸಾಹಿತ್ಯ, ಶಾಸನ ಹಾಗೂ ಪುರಾತತ್ವ ಆಧಾರಗಳಿಂದ ಮನಗಾಣಬಹುದು. ಇವರ ಕಾಲದಲ್ಲಿ ಜಿಲ್ಲೆಯ ಬಹುಭಾಗಗಳಲ್ಲಿ ಗ್ರಾಮಕೋಟೆಗಳನ್ನು ನಿರ್ಮಿಸಿದ್ದಾರೆ. ಇಂತಹ ಗ್ರಾಮಕೋಟೆಗಳ ಕಲ್ಪನೆ ಹೆಚ್ಚಾಗಿ ಬೆಳೆದದ್ದು ಇವರ ಅವಧಿಯಲ್ಲಿಯೇ.

ವಿಜಯನಗರ ಕಾಲದ ಬಳಿಕ ಜಿಲ್ಲೆಯಲ್ಲಿ ಹಲವು ಪಾಳೆಯಗಾರರ ಮನೆತನಗಳು ಸ್ವತಂತ್ರವಾಗಿ ಆಳಿದುದು ಈಗಾಗಲೇ ತಿಳಿದ ಸಂಗತಿ. ಜಿಲ್ಲೆಯಲ್ಲಿ ಭರಮಣ್ಣನಾಯಕನ ದುರ್ಗ, ಜಾನಕಲ್ಲು, ಹೊಸದುರ್ಗ, ಭರಮಗಿರಿ, ಮೊಳಕಾಲ್ಮೂರು, ಸಿದ್ಧಪ್ಪನದುರ್ಗ, ಸಿಂಗೇನಹಳ್ಳಿ, ಐಮಂಗಲ, ವೇಣುಕಲ್ಲುಗುಡ್ಡ, ಹರತಿಕೋಟೆ, ಹೊಸಗುಡ್ಡ, ಬೂದಿಹಾಳು, ಮತ್ತೋಡು, ರಾಮಗಿರಿ ಸೇರಿದಂತೆ ಹಲವು ಕೋಟೆಗಳು ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿರುವುದು ವೇದ್ಯವಾಗುತ್ತದೆ.[೧೦೦]

ಒಟ್ಟಾರೆ ಜಿಲ್ಲೆಯಲ್ಲಿ ಮೌರ್ಯರ ಕಾಲದಿಂದ ಪಾಳೆಯಗಾರರ ಕಾಲದವರೆಗೂ ಕೋಟೆಗಳ ನಿರ್ಮಾಣ, ದುರಸ್ತಿ, ನಿರ್ವಹಣೆ ಮುಂತಾದ ಹತ್ತು ಹಲವು ಕಾರ್ಯಗಳನ್ನು ಕುರಿತು ತಿಳಿಯಬಹುದಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೊಸದುರ್ಗ ತಾಲೂಕಿನ ಕೋಟೆಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ಪ್ರಾಕೃತಿಕವಾಗಿ ಹೆಚ್ಚು ಕಣಶಿಲೆಯ ಬೆಟ್ಟಗಳನ್ನು ಹೊಸದುರ್ಗ ತಾಲೂಕು ಹೊಂದಿದೆ. ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ

(೯೫೩ ಮೀ.) ಆರಂಭವಾಗಿ ದಾವಣಗೆರೆ ತಾಲೂಕಿನ ಮಾಯಕೊಂಡದ ಮುಖಾಂತರ ಅಣಾಜಿಯವರೆಗೂ ಹಬ್ಬಿದೆ. ಈ ತಾಲೂಕಿನಲ್ಲಿ ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲಗುಡ್ಡ, ದೇವರಗುಡ್ಡ, ಹಾಲುರಾಮೇಶ್ವರಗುಡ್ಡಗಳು ಕಂಡುಬರುತ್ತವೆ. ಪ್ರಾಕೃತಿಕ ಸಂಪತ್ತಿನಿಂದ ತುಂಬಿರುವ ಈ ಬೆಟ್ಟ-ಗುಡ್ಡಗಳಲ್ಲಿ ಹಾಗೂ ಅಂತಹ ಪರಿಸರಗಳಲ್ಲಿ ಆದಿ ಮಾನವನ ಕಾಲದಿಂದಲೂ ಮಾನವನ ವಸತಿ ನೆಲೆಗಳಿರುವುದು ಈಗಾಗಲೇ ತಿಳಿದಿದ್ದೇವೆ. ಇಂತಹ ಪ್ರದೇಶಗಳಲ್ಲಿ ವಿಜಯ ನಗರೋತ್ತರ/ಪಾಳೆಯಗಾರರ ಕಾಲದಲ್ಲಿ ಅನೇಕ ಕೋಟೆಗಳು ನಿರ್ಮಾಣಗೊಂಡಿವೆ. ಅಂತಹ ಪ್ರಮುಖವಾದ ಕೋಟೆಗಳಲ್ಲಿ ಹೊಸದುರ್ಗ, ಜಾನಕಲ್ಲು ಹಾಗೂ ಬೂದಿಹಾಳು ಕೋಟೆಗಳನ್ನು ಕಾಣಬಹುದು. ಇವುಗಳನ್ನು ಕುರಿತು ಈ ಮುಂದಿನಂತೆ ಚರ್ಚಿಸಲಾಗಿದೆ.

೫.೨.೧. ಹೊಸದುರ್ಗದ ಕೋಟೆ

ಹೊಸದುರ್ಗವು ಈ ತಾಲೂಕಿನ ಕೇಂದ್ರಸ್ಥಳ. ಇದು ಚಿತ್ರದುರ್ಗದಿಂದ ನೈರುತ್ಯಕ್ಕೆ ೬೪ ಕಿ.ಮೀ. ದೂರದಲ್ಲಿದೆ. ಹೊಸದುರ್ಗವು ಭೂನಕ್ಷೆಯಲ್ಲಿ ಅಕ್ಷಾಂಶ ೧೩.೪೮ ಉತ್ತರ ಮತ್ತು ೭೬.೧೭ ಪೂರ್ವ ರೇಖಾಂಶದಲ್ಲಿದ್ದು ಸಮುದ್ರಮಟ್ಟದಿಂದ ೨೯೪೮ ಅಡಿ ಎತ್ತರದಲ್ಲಿದೆ.[೧೫೧] ಪಶ್ಚಿಮ ಶ್ರೇಣಿಗೆ ಸೇರಿದ ಹೊಸದುರ್ಗದ ಗುಡ್ಡವು ಬಿಳಿಕಣಶಿಲೆಯಿಂದ ಕೂಡಿದೆ. ಇಂತಹ ಪ್ರದೇಶವನ್ನು ಸಮರ್ಥವಾಗಿ ಬಳಸಿಕೊಂಡವರು ಚಿತ್ರದುರ್ಗದ ನಾಯಕರು. ಚಿತ್ರದುರ್ಗದ ಅರಸನಾದ ಕಣಕುಪ್ಪೆಯ ಸರ್ಜೇರಾಯನ ಮಗ ಚಿಕ್ಕಣ್ಣನಾಯಕನು, ಶಿರಾ ಪ್ರಾಂತ್ಯದ ಮಹಮದೀಯರ ಅಧೀನದಲ್ಲಿದ್ದ ಬಾಗೂರು ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಹೋರಾಟ ನಡೆಸುವ ಸಲುವಾಗಿ ಹೊಸದುರ್ಗದ ಪೂರ್ವದಿಕ್ಕಿನ ಬೆಟ್ಟದ ಮೇಲೆ ಕ್ರಿ.ಶ. ೧೬೭೫ರಲ್ಲಿ ಕೋಟೆ ನಿರ್ಮಿಸಿಕೊಂಡು ಸೇನಾ ಸಮೇತವಾಗಿ ಅಲ್ಲಿ ತಂಗಿದ್ದನು. ಇದೇ ಸಂದರ್ಭದಲ್ಲಿ ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮ ಪುರೋಹಿತನು ಸದರಿ ಚಿಕ್ಕಣ್ಣನಾಯಕನ ಮೊರೆಹೊಕ್ಕನು. ಆಗ ಚಿಕ್ಕಣ್ಣನಾಯಕನು ಬೆಟ್ಟದ ಕೆಳಗೆ ಹೊರಪೇಟೆಯೊಂದನ್ನು ನಿರ್ಮಿಸಿಕೊಂಡಿರುವಂತೆ ಜಂಗಮನಿಗೆ ತಿಳಿಸಿದ್ದರಿಂದ ೧೬೬೮ರ ವೇಳೆಗೆ ಬೆಟ್ಟದ ತಪ್ಪಲಿನಲ್ಲಿ ಚಿಕ್ಕಪೇಟೆಯೊಂದು ರೂಪುಗೊಂಡಿತು. ಇದಕ್ಕೆ ಹೊಸದುರ್ಗ ಎಂದು ನಾಮಕರಣ ಮಾಡಿದನು. ಹೊಸದುರ್ಗಕ್ಕೆ ಆರಂಭದಲ್ಲಿ ನವದುರ್ಗ ಎಂಬ ಹೆಸರು ಇತ್ತೆಂದು ಹೇಳಲಾಗಿದೆ.[೧೫೨]

ಚಿಕ್ಕಣ್ಣನಾಯಕನು ಧಾರ್ಮಿಕ ಭಕ್ತಿಯುಳ್ಳವನಾಗಿದ್ದು ತನ್ನ ಮೂಲಗುರುಗಳಾದ ಶೃಂಗೇರಿ ಜಗದ್ಗುರು ಶಂಕರ ಭಾರತಿ ಸ್ವಾಮಿಗಳಿಗೆ ಬಾಗೂರು ಸೀಮೆಯೊಳಗಿನ ಮಾರಬಘಟ್ಟ ಗ್ರಾಮವನ್ನು ದತ್ತಿಯಾಗಿ ಬಿಟ್ಟ ವಿಷಯ ಶಾಸನದಿಂದ ತಿಳಿದುಬರುತ್ತದೆ. ಈ ಗುರುಭಕ್ತಿಯ ಫಲವಾಗಿಯೇ ಹೊಸದುರ್ಗ ನಿರ್ಮಾಣವಾಯಿತೆಂದೂ ಹೇಳಲಾಗಿದೆ. ಹೀಗೆ ಚಿತ್ರದುರ್ಗ ಪಾಳೆಯಗಾರರಿಗೆ ನೇರವಾಗಿ ಒಳಪಟ್ಟಿದ್ದ ಹೊಸದುರ್ಗ ಕೋಟೆಗೆ ಚಿತ್ರದುರ್ಗದ ರಕ್ತಸಂಬಂಧಿಗಳನ್ನು ದಳಪತಿಗಳನ್ನಾಗಿ ನೇಮಿಸುತ್ತಿದ್ದರು. ಚಿಕ್ಕಣ್ಣನಾಯಕನ ತರುವಾಯ ದೊಡ್ಡ ಮದಕರಿನಾಯಕ, ದಂಡಿನ ಜಂಪಣ್ಣನಾಯಕ, ಭರಮಣ್ಣನಾಯಕರನ್ನು ಹಿರೇಮದಕರಿನಾಯಕನನ್ನು ಹೊಸದುರ್ಗ ಕೋಟೆಗೆ ನೇಮಿಸಿರುವುದು ತಿಳಿದುಬರುತ್ತದೆ.[೧೫೩] ಐದನೇ ಮದಕರಿನಾಯಕನ ಅವಧಿಯಲ್ಲಿ ಹೈದರಾಲಿಯು ಹೊಸದುರ್ಗ ಪ್ರದೇಶವನ್ನು ವಶಪಡಿಸಿಕೊಂಡನು. ಹೊಸದುರ್ಗ ನಗರದ ದಕ್ಷಿಣ ದಿಕ್ಕಿಗೆ

ಹಬ್ಬಿರುವ ಭೈರವನ ಕೊಂಬೆ ಮತ್ತು ಹನುಮನಕೊಂಬೆ ಎಂಬ ಎರಡು ಬೆಟ್ಟಗಳಿವೆ. ಈ ಎರಡು ಬೆಟ್ಟಗಳಿಗೆ ದಕ್ಷಿಣ ಭಾಗದಲ್ಲಿ ಸೇತುವೆಯಂತೆ ಪೂರ್ವ ಪಶ್ಚಿಮವಾಗಿ ಬೆಸೆದುಕೊಂಡಿರುವ ಬೆಟ್ಟ ಪ್ರದೇಶವನ್ನು ಬಳಸಿಕೊಂಡು ಕೋಟೆಯನ್ನು ಕಟ್ಟಲಾಗಿದೆ.[೧೮೪] ಕಾಲಭೈರವನ ದೇವಾಲಯವಿರುವ ಬೆಟ್ಟದ ಪ್ರದೇಶವನ್ನು ಭೈರವನ ಕೊಂಬೆ ಎಂದೂ, ಹನುಮಂತನ ದೇವಾಲಯವಿರುವ ಬೆಟ್ಟದ ಪ್ರದೇಶವನ್ನು ಹನುಮನ ಕೊಂಬೆ ಎಂದು ಕರೆಯುತ್ತಾರೆ. ಭೈರವನಕೊಂಬೆಗೆ ಉತ್ತರದಲ್ಲಿ ಬೆಟ್ಟಗಳ ಮಧ್ಯೆ ಮೂರು ಸುತ್ತು ಹಾಗೂ ದಕ್ಷಿಣ ಭಾಗಕ್ಕೆ ೩ ಸುತ್ತಿನ ಕೋಟೆ ಇದೆ. ಪಶ್ಚಿಮಕ್ಕೆ ಅವಶ್ಯಕತೆಗನುಗುಣವಾಗಿ ಕೋಟೆ ಸಾಲು ಇದೆ.[೧೮೫] ಮುಂದೆ ಹನುಮನ ಕೊಂಬೆ ಪ್ರದೇಶಕ್ಕೆ ಈ ಬೆಟ್ಟದಿಂದ ಎರಡು ಸುತ್ತಿನ ಬೆಟ್ಟಗಳ ಮಧ್ಯೆ ಪೂರ್ವ ಪಶ್ಚಿಮವಾಗಿ ಎರಡು ಸುತ್ತು ಹಾಗೂ ಉತ್ತರ ದಕ್ಷಿಣವಾಗಿ ಐದು ದ್ವಾರಗಳನ್ನು ಒಳಗೊಂಡ ನಾಲ್ಕು ಸುತ್ತಿನ ಕೋಟೆ ಇದೆ. ಹನುಮನಕೊಂಬೆಯಲ್ಲಿ ಪಶ್ಚಿಮಕ್ಕೆ ಮೂರು, ಉತ್ತರಕ್ಕೆ ಐದು ಸುತ್ತು ಹಾಗೂ ಪೂರ್ವಕ್ಕೆ ಒಂದು ಸುತ್ತಿನ ಕೋಟೆಗೋಡೆಗಳಿವೆ. ಈ ಬೆಟ್ಟದ ಕೋಟೆ ಸಾಲುಗಳಲ್ಲಿ ಒಟ್ಟು ೮ ದ್ವಾರಬಾಗಿಲುಗಳಿವೆ.

ಭೈರವನಕೊಂಬೆಗೆ ನಗರದಿಂದ ಬಸವಣ್ಣನ ದೇವಾಲಯ ಮತ್ತು ಕೂಗುವ ಬಂಡೆಗಳನ್ನು ಬಳಸಿಕೊಂಡು ಬರುವ ದಾರಿ ಊರು ಬಾಗಿಲಿಗೆ ಪ್ರವೇಶ ಕಲ್ಪಿಸುತ್ತದೆ. ಬಾಗಿಲ ಮುಂದೆ ಉತ್ತರ ದಕ್ಷಿಣವಾಗಿ ೧೮ ಅಡಿ ಉದ್ದದ ಪಹರೆಗೃಹಗಳಿವೆ. ಎರಡು ಬೆಟ್ಟಗಳ ಮಧ್ಯೆ ಇಳಿಜಾರು ಪ್ರದೇಶಕ್ಕೆ ಅಡ್ಡಲಾಗಿ ಕಟ್ಟಿರುವ ಗೋಡೆಯು ೩ ಮೀ. ಅಗಲ ೪ ಮೀ. ಎತ್ತರವಿದೆ.[೧೮೬] ಇಲ್ಲಿನ ಭೈರವ ದೇವಾಲಯದ ಹಿಂಭಾಗದಲ್ಲಿರುವ ೪೪ ಕಂಬಗಳ ಮನೆಯನ್ನು ಮದ್ದಿನ ಮನೆಯೆಂದು ಕರೆಯುತ್ತಾರೆ. ಈ ಮನೆಯ ಪೂರ್ವ ಪಶ್ಚಿಮಕ್ಕೆ ಎರಡು ಚಿಕ್ಕ ದ್ವಾರಗಳಿವೆ. ಇದರ ಮೇಲ್ಭಾಗವನ್ನು ಗಾರೆಗಟ್ಟಿನಿಂದ ಮುಚ್ಚಲಾಗಿದೆ. ಭೈರವನ ದೇವಾಲಯದ ಮುಂದೆ ಎಮ್ಮೆಗೋಡೆ, ಅಕ್ಕ ತಂಗಿಯರ ಹೊಂಡಗಳಿವೆ. ದೊಣೆಗಳ ಮಧ್ಯಭಾಗದಲ್ಲಿ ೬೦ ಅಡಿ ವಿಸ್ತೀರ್ಣವುಳ್ಳ ಹಾಗೂ ೧೫ ಅಡಿ ಎತ್ತರವಿರುವ ಭೈರವನ ಬುರುಜಿದೆ.

ಭೈರವನ ಕೊಂಬೆ ಬೆಟ್ಟದ ಪಶ್ಚಿಮ ಭಾಗದಲ್ಲಿ ೩ ಅಡಿ ಅಗಲ ೧೦ ಅಡಿ ಎತ್ತರದ ಕೋಟೆಗೋಡೆ ಇದೆ. ಭೈರವನ ದೇವಾಲಯದ ಇಳಿಜಾರು ಪ್ರದೇಶದಿಂದ ಬಂದ ನೀರು ಗೋಡೆಯಿಂದ ಬಸಿದುಹೋಗುವಂತೆ ಗೋಡೆಯನ್ನು ರಚಿಸಲಾಗಿದೆ. ದಕ್ಷಿಣಕ್ಕೆ ಹಿಂದು, ಮುಂದಾಗಿ, ಮುಂದುವರೆದಿರುವ ಗೋಡೆಗೆ ದ್ವಾರಬಾಗಿಲು ಇದೆ. ಈ ಬಾಗಿಲು ನಾಗರಪಡೆಕೋಟೆ ಸಾಲಿಗೆ ಪ್ರವೇಶ ಕಲ್ಪಿಸುತ್ತದೆ. ಈ ಬಾಗಿಲು ತುಂಬಾ ಗತ್ತಿನಲ್ಲಿರುವುದರಿಂದ ತಗ್ಗಿನ ಬಾಗಿಲು ಎಂದೇ ಕರೆಯುತ್ತಾರೆ.[೧೮೭] ಬಾಗಿಲ ಹಿಂಭಾಗದಲ್ಲಿ ಎರಡು ಕಡೆ ಪಹರೆಗೃಹಗಳಿವೆ. ಇಲ್ಲಿಂದ ಮುಂದೆ ನಾಗರ ಪಡೆಯ ೩ ಕೋಟೆಸಾಲುಗಳು ಪೂರ್ವದಿಂದ ಮುಂದುವರಿದು ಪಶ್ಚಿಮದ ಹನುಮನಕೊಂಬೆ ಬೆಟ್ಟದ ಸಾಲುಗಳಿಗೆ ಸಂಪರ್ಕ ಕಲ್ಪಿಸಿವೆ. ಈ ಕೋಟೆ ಸಾಲುಗಳಲ್ಲಿ ಅಲ್ಲಲ್ಲಿ ಬೃಹದಾಕಾರದ ಬಂಡೆಗಳನ್ನು ಬಳಸಿ ಕೋಟೆಗೋಡೆಯನ್ನು ನಿರ್ಮಿಸಿ ಭದ್ರಗೊಳಿಸಿದ್ದಾರೆ. ಈ ಕೋಟೆ ಸಾಲುಗಳ ಮಧ್ಯೆ ಉತ್ತರ ದಕ್ಷಿಣವಾಗಿ ಮೂರು ಸುತ್ತಿನ ಕೋಟೆಯನ್ನು ಕಟ್ಟಲಾಗಿದೆ.

ನಾಗರಪಡೆಯ ಕೋಟೆ ಪ್ರದೇಶದಲ್ಲಿ ದಕ್ಷಿಣಕ್ಕೆ ಇರುವ ಬುರುಜು ೪೦ ಮೀಟರ್ ಸುತ್ತಳತೆಯನ್ನು ಹೊಂದಿದೆ. ಇಂತಹ ಬುರುಜುಗಳು ನಾಗರಪಡೆಯ ಎರಡು ಸಾಲುಗಳ ಉದ್ದಕ್ಕೂ ಕಂಡುಬರುತ್ತವೆ. ನಾಗರಪಡೆ ಪ್ರದೇಶದಿಂದ ಹನುಮನಕೊಂಬೆ ಪ್ರದೇಶಕ್ಕೆ ಪ್ರವೇಶ ಮಾಡಲು ಪೂರ್ವ ಮತ್ತು ಪಶ್ಚಿಮವಾಗಿ ಕೋಟೆಗೆ ದ್ವಾರ ಬಾಗಿಲನ್ನು ನಿರ್ಮಿಸಲಾಗಿದೆ. ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿರುವ ದ್ವಾರಬಾಗಿಲು ಇತರೆ ದ್ವಾರಗಳಿಗಿಂತ ಭಿನ್ನವಾಗಿದೆ. ಈ ದ್ವಾರವು ಅತಿ ಎತ್ತರದ ಪ್ರದೇಶವಾದ ಹನುಮನ ಕೊಂಬೆಗೆ ಪ್ರವೇಶ ಕಲ್ಪಿಸುತ್ತದೆ. ಈ ಪ್ರದೇಶದಲ್ಲಿ ಹನುಮಂತನ ದೇವಾಲಯವಿದೆ. ದೇವಾಲಯದ ಹಿಂಭಾಗದಲ್ಲಿ ಕಲ್ಲಿನ ಕಣಜವು ೫ ಅಡಿ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿವೆ. ಕಣಜದ ಮುಂದೆ ೧೫ ಅಡಿ ಎತ್ತರದ ಕಾವಲು ಬುರುಜಿದೆ. ಹನುಮನಕೊಂಬೆಯ ಪಶ್ಚಿಮಕ್ಕೆ ಬೆಟ್ಟದ ಕೆಳಭಾಗದಲ್ಲಿ ಎರಡು ಸುತ್ತಿನ ಕೋಟೆಯಿದೆ.[೧೮೮]

ಹನುಮನಕೊಂಬೆ ಪ್ರದೇಶದ ಉತ್ತರಕ್ಕೆ ಕೋಟೆಯು ಸುಮಾರು ೧ ಕಿ.ಮೀ. ವಿಸ್ತಾರಗೊಂಡಿದೆ. ಈ ಕೋಟೆಯ ದಕ್ಷಿಣದಿಂದ ಪ್ರಾರಂಭವಾಗಿರುವ ಎರಡು ಸುತ್ತುಗಳು ಉತ್ತರದಲ್ಲಿರುವ ದೊಡ್ಡ ಬಾಗಿಲಿಗೆ ಕೊನೆಗೊಳ್ಳುತ್ತವೆ. ಕೋಟೆಯ ಸಾಲುಗಳ ಮಧ್ಯೆ ಪೂರ್ವ ಪಶ್ಚಿಮವಾಗಿ ಎರಡು ದ್ವಾರಗಳಿರುವ ಕೋಟೆಯ ಸುತ್ತು ಇದೆ. ಉತ್ತರ ದಕ್ಷಿಣವಾಗಿ ದ್ವಾರಗಳನ್ನೊಳಗೊಂಡ ಮತ್ತೊಂದು ಕೋಟೆಯ ಸಾಲೂ ಸೇರಿದಂತೆ ಒಟ್ಟು ೬ ದ್ವಾರಬಾಗಿಲುಗಳು ಈ ಪ್ರದೇಶದಲ್ಲಿವೆ. ಈ ದ್ವಾರಗಳಿಂದ ಈ ಪ್ರದೇಶದಲ್ಲಿ ನಾಲ್ಕು ಅಂಕಣದ ಕೋಟೆ ನಿರ್ಮಾಣಗೊಂಡಿದೆ. ಈ ಎಲ್ಲಾ ದ್ವಾರಬಾಗಿಲುಗಳು ಪ್ರತೀ ಅಂಕಣಕ್ಕೆ ಸಂಪರ್ಕ ಕಲ್ಪಿಸುತ್ತವೆ. ಇಲ್ಲಿನ ಕೋಟೆ ಗೋಡೆಗಳು ೨೪ ಅಡಿ ಎತ್ತರವಾಗಿದ್ದು, ೧೦ ಅಡಿ ಅಗಲವಾಗಿವೆ. ಬಾಗಿಲ ಹೊರಭಾಗ ಮತ್ತು ಒಳಭಾಗದಲ್ಲಿ ಪಹರೆ ಗೃಹಗಳನ್ನು ರಚಿಸಿದ್ದಾರೆ. ದ್ವಾರಬಾಗಿಲು ೯ ಅಡಿ ಎತ್ತರ ೮ ಅಡಿ ಅಗಲ ೫.೬ ಅಡಿ ನಿರ್ಮಿಸಲಾಗಿದೆ. ಹೊಸದುರ್ಗ ಕೋಟೆಯು ಚಿತ್ರದುರ್ಗ ಪಾಳೆಯಗಾರರು ನಿರ್ಮಿಸಿದ ಕೋಟೆಗಳಲ್ಲಿ ಎರಡನೆಯ ಅತಿ ದೊಡ್ಡ ಕೋಟೆಯಾಗಿದೆ.[೧೮೯]

೫.೨.೨ ಜಾನಕಲ್ಲು ಕೋಟೆ

ಹೊಸದುರ್ಗ ತಾಲೂಕಿನ ಪ್ರಾಚೀನ ಎಡೆಗಳಲ್ಲಿ ಜಾನಕಲ್ಲು ಒಂದು. ಚಿತ್ರದುರ್ಗದಿಂದ ಹಾಲುರಾಮೇಶ್ವರದ ಮೂಲಕ ಹೊಸದುರ್ಗಕ್ಕೆ ಹೋಗುವ ಮಾರ್ಗದಲ್ಲಿದ್ದು ೪೦ ಕಿ.ಮೀ. ಅಂತರದಲ್ಲಿದೆ. ಜಾನಕಲ್ಲು ಸಮುದ್ರಮಟ್ಟದಿಂದ ೨೪೫೪ ಅಡಿ ಎತ್ತರವಿದ್ದು ಉತ್ತರ ಅಕ್ಷಾಂಶ ೧೩೦೫೪ ಮತ್ತು ೭೭೦೧೯ ಪೂರ್ವ ರೇಖಾಂಶದಲ್ಲಿದೆ.[೧೯೦] ಪ್ರಾಗೈತಿಹಾಸ ಕಾಲದಿಂದಲೂ ಆದಿ ಮಾನವನ ವಾಸಸ್ಥಾನವಾಗಿರುವ ಜಾನಕಲ್ಲು ಗ್ರಾಮವು ನೈಸರ್ಗಿಕವಾದ ಬೆಟ್ಟಗುಡ್ಡಗಳು, ಹಳ್ಳ-ಕೊಳ್ಳಗಳು, ಕೆರೆಕುಂಟೆಗಳಿಂದ ಕೂಡಿದೆ. ಜಾನಕಲ್ಲು ಗ್ರಾಮದಲ್ಲಿ ೧೯೫೭ರಲ್ಲಿ ಎಂ. ಶೇಷಾದ್ರಿ ಅವರು ಆದಿ ಹಳೇ ಶಿಲಾಯುಗದ ೩ ಆಯುಧಗಳನ್ನು ಪತ್ತೇಹಚ್ಚಿದರು.[೧೯೧] ಶಂಕರಲಿಂಗೇಶ್ವರ ದೇವಸ್ಥಾನದ ಹತ್ತಿರವಿರುವ ಎರಡು ವೀರಗಲ್ಲುಗಳಿಂದ ಈ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದಿತೆಂದು ತಿಳಿದುಬರುತ್ತದೆ. ಹೊಯ್ಸಳ ಸಾಮ್ರಾಟ ಮುಮ್ಮಡಿ ಬಲ್ಲಾಳನ ಕಾಲದಲ್ಲಿ

ಸೇವುಣ ದೊರೆ ಶಂಕರದೇವನ ಸೈನ್ಯವು ಹೊಯ್ಸಳ ನಾಡನ್ನು ಮುತ್ತಿತು. ಆಗ ಬೇತೂರಿನಲ್ಲಿ ಆಳುತ್ತಿದ್ದ ಬಲ್ಲಾಳ ಭಾವ ಸೋಮದಂಡನಾಯಕನು ಹೊಳಲ್ಕೆರೆಗೆ ನಡೆದುಬಂದು ಕಂಪಿಲನೊಂದಿಗೆ ಹೋರಾಡಿ ಮಡಿದನೆಂದು ಒಂದು ವೀರಗಲ್ಲು ತಿಳಿಸುತ್ತದೆ.[೧೩] ಮತ್ತೊಂದು ವೀರಗಲ್ಲು ನಾಗನಾಯಕನೆಂಬುವನು ದೊಡ್ಡಾಲಘಟ್ಟದ ಮಲ್ಲಯ್ಯನೊಂದಿಗೆ ಹೋರಾಡುತ್ತ ಮಡಿದನೆಂದು ವಿವರಿಸುತ್ತದೆ.[೧೪] ನಂತರ ಜಾನಕಲ್ಲು ಅತ್ಯಂತ ಪ್ರಸಿದ್ಧ ಪಡೆದಿದ್ದು ಚಿತ್ರದುರ್ಗದ ನಾಯಕರ ಕಾಲದಲ್ಲಿ ಚಿತ್ರದುರ್ಗದ ಪ್ರಸಿದ್ಧ ದೊರೆ ಕಡೆಮದಕರಿನಾಯಕನು ತನ್ನ ಬಾಲ್ಯಜೀವನವನ್ನು ಇಲ್ಲಿಂದಲೇ ಪ್ರಾರಂಭಿಸಿದನು. ಈತನು ಚಿತ್ರದುರ್ಗದ ದೊರೆಯಾದ ಮೇಲೆ ಇಲ್ಲಿನ ಬೆಟ್ಟದ ಮೇಲೆ ಒಂದು ಕೋಟೆಯನ್ನು ಹಾಗೂ ಒಂದು ಅರಮನೆಯನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಒಟ್ಟಾರೆ ಚಿತ್ರದುರ್ಗದವರಿಗೆ ಇದೊಂದು ಆಯಕಟ್ಟಿನ ಸ್ಥಳವಾಗಿದ್ದರಿಂದ ಚಿತ್ರದುರ್ಗ ನಾಯಕರು ಇದನ್ನು ಗಡಿದುರ್ಗವನ್ನಾಗಿ ಮಾಡಿಕೊಂಡಿದ್ದರು.

ಜಾನಕಲ್ಲು ಕೋಟೆಯು ಗಿರಿದುರ್ಗವಾಗಿದೆ. ಬೆಟ್ಟದ ಸುತ್ತಲೂ ಪೂರ್ವಕ್ಕೆ ಕಾಮನಕೆರೆ, ಪಶ್ಚಿಮಕ್ಕೆ ಹಿರೇಕೆರೆ, ಉತ್ತರದಲ್ಲಿ ಬರೆಗೆರೆ ಹಾಗೂ ದಕ್ಷಿಣದಲ್ಲಿ ದೇವಪುರದ ಕೆರೆಗಳು ಸುತ್ತುವರೆದಿರುವುದರಿಂದ ಒಂದು ರೀತಿಯಲ್ಲಿ ಜಲದುರ್ಗವೂ ಸಹ ಆಗಿದೆ.[೧೫] ಬೆಟ್ಟದ ಮೇಲಿರುವ ಕೋಟೆಯನ್ನು ಅನಿಮಿತಾಕಾರದಲ್ಲಿ ಕಟ್ಟಲಾಗಿದೆ. ಬೆಟ್ಟದ ಪಶ್ಚಿಮಕ್ಕೆ ಒಟ್ಟು ಮೂರು ಸುತ್ತಿನ ಕೋಟೆಗಳಿದ್ದು ನೆಲಮಟ್ಟದಲ್ಲಿ ಗ್ರಾಮರಕ್ಷಣೆಗಿದ್ದ ಕೋಟೆ ಗೋಡೆಯು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಬೆಟ್ಟದ ಮೇಲಿರುವ ಎರಡು ಸುತ್ತುಗಳು ಮಾತ್ರ ಈಗ ಉಳಿದಿವೆ. ಇದೇ ರೀತಿ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಸುತ್ತಿನ ಕೋಟೆಸಾಲುಗಳಿವೆ. ಕೋಟೆಯಲ್ಲಿ ೧೬ ವೃತ್ತಾಕಾರದ ಬುರುಜುಗಳು, ೮ ಚೌಕಾಕಾರದ ಬುರುಜುಗಳು ಸೇರಿದಂತೆ ೬ ದ್ವಾರಬಾಗಿಲುಗಳಿವೆ. ೩ ದ್ವಾರಬಾಗಿಲುಗಳು ಈಗಲೂ ಉಳಿದುಕೊಂಡುಬಂದಿವೆ. ಕೋಟೆಗೋಡೆಯ ಮೇಲ್ಭಾಗದಲ್ಲಿ ಹೆಚ್ಚಾಗಿ ಮಣ್ಣಿನ ಕೋಟೆಯಿರುವುದನ್ನು ಕಾಣಬಹುದು.[೧೬]

ಮೊದಲನೆ ಸುತ್ತಿನ ಕೋಟೆಗೋಡೆಯು ಬೆಟ್ಟಕ್ಕೆ ಪಶ್ಚಿಮದಲ್ಲಿ U ಆಕಾರದಲ್ಲಿದ್ದು ಬಹುತೇಕವಾಗಿ ಶಿಥಿಲಗೊಂಡಿದೆ. ಶಿಥಿಲಗೊಂಡ ಕೋಟೆಯನ್ನು ಪೂರ್ವಕ್ಕೆ ಬೆಟ್ಟದಲ್ಲಿರುವ ೩ನೆಯ ಸುತ್ತಿನ ಕೋಟೆಗೆ ಸಂಪರ್ಕಿಸಲಾಗಿದೆ. ಈ ಹೊರಸುತ್ತಿನ ಕೋಟೆಯ ದಕ್ಷಿಣಕ್ಕೆ ಊರುಬಾಗಿಲು ಎಂದು ಕರೆಯುವ ದ್ವಾರಬಾಗಿಲು ಇದೆ. ದ್ವಾರವನ್ನು L ಆಕಾರದಲ್ಲಿ ರಚಿಸಲಾಗಿದೆ.[೧೭] ಬಾಗಿಲಿನ ಎರಡೂ ಬದಿಯಲ್ಲಿ ಎತ್ತರವಾದ ತೆರೆದ ಕೈಪಿಡಿ ಗೋಡೆಗಳಿವೆ. ಈ ಎತ್ತರದ ಕಲ್ಲಿನ ಗೋಡೆಯ ಮೇಲೆ ೧೦ ಅಡಿ ಎತ್ತರದವರೆಗೆ ಗಚ್ಚು ಮಣ್ಣಿನಿಂದ ಕೂಡಿದ ಮಣ್ಣಿನ ಕೋಟೆಯನ್ನು ನಿರ್ಮಿಸಿದ್ದಾರೆ. ಈ ಮಣ್ಣಿನ ಕೋಟೆಯಲ್ಲಿ ಅಲ್ಲಲ್ಲಿ ಬಂದೂಕು ರಂಧ್ರಗಳನ್ನು ಬಿಟ್ಟಿದ್ದಾರೆ. ಈ ಗೋಡೆಯ ಹಿಂದೆ ಶತ್ರುಗಳ ಚಲನವಲನಗಳನ್ನು ವೀಕ್ಷಿಸಲು ಅಟ್ಟಾಲಕಗಳನ್ನು ರಚಿಸಿರುವರು. ಪಕ್ಕದಲ್ಲಿ ದಿಡ್ಡಿಬಾಗಿಲು ಇದೆ. ಚೌಕಟ್ಟಿನ ಬಾಗಿಲುವಾಡಗಳು ನಯವಾದ ಕೆತ್ತನೆಯಿಂದ ಕೂಡಿವೆ. ದ್ವಾರಬಾಗಿಲು ೨.೫೦ ಮೀಟರ್ ಎತ್ತರವಿದ್ದು, ೩ ಮೀಟರ್ ಅಗಲವಿದೆ. ಪಕ್ಕದ ದಿಡ್ಡಿಬಾಗಿಲು ೧.೫ ಮೀಟರ್ ಎತ್ತರವಿದ್ದು, ೩ ಮೀಟರ್ ಅಗಲವಿದೆ.[೧೮]

ಈ ದ್ವಾರದಿಂದ ಮುಂದುವರೆದರೆ ಚೌಕಾಕಾರದ ಕಾವಲುಗೋಪುರವಿದೆ. ಈ ಕಾವಲು ಗೋಪುರವನ್ನು ಸ್ಥಳೀಯರು ಚೌಡಿಕೊತ್ತಲು ಎಂದು ಕರೆಯುತ್ತಾರೆ. ಈ ಚೌಡಿಕೊತ್ತಲಿಗೆ ಕೋಟೆಗೋಡೆಯ ಬಲಭಾಗದಲ್ಲಿ ಹತ್ತಲು ಮೆಟ್ಟಿಲುಗಳಿವೆ. ಕಲ್ಲಿನ ಗೋಡೆ ಕೊನೆಗೊಂಡ ಮೇಲೆ ಮಣ್ಣಿನ ಗೋಡೆಯಿದೆ. ಈ ಗೋಡೆಯಲ್ಲಿ ಬಂದೂಕು ರಂಧ್ರ ಹಾಗೂ ವೀಕ್ಷಣಾ ತೂಬುಗಳನ್ನು ರಚಿಸಿದ್ದಾರೆ. ಹೊರಕೋಟೆಯ ಚೌಡಿ ಕೊತ್ತಲಿನಿಂದ ತೇರಿನ ಮನೆಯವರೆಗೆ ಮುಂದುವರೆದಿದೆ. ಆದರೆ ಈ ಭಾಗದಲ್ಲಿ ಕೋಟೆ ಗೋಡೆಯು ಈಗ ನಾಶವಾಗಿದೆ. ಬೆಟ್ಟದ ಉತ್ತರಕ್ಕೆ ಎರಡು ಸುತ್ತಿನ ಕೋಟೆಯಿದೆ. ಹೊರಸುತ್ತಿನ ಕೋಟೆಗೆ ನಾಲ್ಕು ವೃತ್ತಾಕಾರದ ಬುರುಜುಗಳಿದ್ದು ಮೂರು ಚೌಕಾಕಾರದ ಬುರುಜುಗಳಿವೆ. ವೃತ್ತಾಕಾರದ ಬುರುಜುಗಳನ್ನು ಚಿಕ್ಕ ಹಾಗೂ ದೊಡ್ಡ ಕಲ್ಲುಗಳಿಂದ ಕಟ್ಟಿದ್ದಾರೆ. ಈ ಭಾಗದಲ್ಲಿ ವ್ಯವಸ್ಥಿತವಾಗಿರುವ ೨ ಬುರುಜುಗಳನ್ನು ನಿರ್ಮಿಸಿದ್ದಾರೆ. ೨ನೇ ಸುತ್ತಿನ ಕೋಟೆಯನ್ನು ವ್ಯೂಹ ರೀತಿಯಲ್ಲಿ ರಚಿಸಿದ್ದಾರೆ. ನಯಗೊಳಿಸಿದ ಕಲ್ಲುಗಳಿಂದ ಕೋಟೆಗೋಡೆ ಹಾಗೂ ಬುರುಜುಗಳನ್ನು ನಿರ್ಮಿಸಿದ್ದಾರೆ.[೨೯೯]

ಎರಡನೇ ಸುತ್ತಿನ ಹಿಂಭಾಗದಲ್ಲಿ ಸೈನಿಕರ ವಸತಿಯ ಕುರುಹುಗಳು ಕಂಡುಬರುತ್ತವೆ. ಕೋಟೆಯ ಪಶ್ಚಿಮದ ಭಾಗದಲ್ಲಿ ಇರುವ ೨ನೇ ಸುತ್ತಿನ ಕೋಟೆಯನ್ನು ಬ್ರಹ್ಮದೇವರ ಸುತ್ತು ಎಂದು ಕರೆಯುತ್ತಾರೆ.[೩೦೦] ಈ ಸುತ್ತಿನ ಕೋಟೆಗೋಡೆಯು ಪಶ್ಚಿಮದಲ್ಲಿ ನೇರವಾಗಿ ಮುಂದುವರೆದು ದಕ್ಷಿಣ ದಿಕ್ಕಿನ ದ್ವಾರಬಾಗಿಲನ್ನು ಸೇರುತ್ತದೆ. ಗೋಡೆಯನ್ನು ೧೦ ಅಡಿ ಎತ್ತರದವರೆಗೆ ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿ ಗೋಡೆಯ ಮೇಲ್ಭಾಗದಲ್ಲಿ ೫ ಅಡಿ ಎತ್ತರದವರೆಗೆ ಮಣ್ಣಿನಿಂದ ಗೋಡೆಯನ್ನು ಕಟ್ಟಲಾಗಿದೆ. ಈ ಸಾಲಿನಲ್ಲಿ ಎರಡು ದಿಡ್ಡಿಬಾಗಿಲುಗಳಿದ್ದು ಒಂದು ಮುಖ್ಯದ್ವಾರ ಮೂರು ಚೌಕಾಕಾರದ ಬುರುಜುಗಳು ೩ ವೃತ್ತಕಾರದ ಬುರುಜುಗಳಿವೆ. ದ್ವಾರಬಾಗಿಲ ಪಕ್ಕದಲ್ಲಿರುವ ಚೌಕಾಕಾರದ ಬುರುಜು ಕೋಟೆಯ ಪಶ್ಚಿಮ ಭಾಗಕ್ಕೆ ಕಳಸಪ್ರಾಯವಾಗಿದೆ. ಈ ಬುರುಜಿನ ಸಮೀಪದಲ್ಲಿ ಮತ್ತೊಂದು ದ್ವಾರಬಾಗಿಲಿದೆ. ಪೂರ್ವಕ್ಕೆ ತಿರುಗಿ ದಕ್ಷಿಣದಿಂದ ಪ್ರವೇಶ ಕಲ್ಪಿಸುವ ಹಾಗೆ ದ್ವಾರ ಬಾಗಿಲನ್ನು ನಿರ್ಮಿಸಲಾಗಿದೆ. ದ್ವಾರಬಾಗಿಲಿಗೆ ನಾಲ್ಕು ಕಂಬಗಳಿರುವ ಚಾವಡಿಯನ್ನು ರಚಿಸಲಾಗಿದೆ. ಬಾಗಿಲು ತೆರೆಯುವ ಮತ್ತು ಮುಚ್ಚುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಬಾಗಿಲಿನಿಂದ ನೇರವಾಗಿ ಮೇಲುದುರ್ಗಕ್ಕೆ ಪ್ರವೇಶಮಾಡಲು ಸಾಧ್ಯವಾಗದಂತೆ ಒಳಸುತ್ತಿನ ಕೋಟೆಗೋಡೆಯನ್ನು ವಿಸ್ತರಿಸಿದ್ದಾರೆ. ಇಲ್ಲಿಂದ ಮತ್ತೆ ಪೂರ್ವಾಭಿಮುಖವಾಗಿ ನೇರವಾಗಿ ಮೇಲುದುರ್ಗಕ್ಕೆ ಹೋಗಲು ಸಂಪರ್ಕ ಕಲ್ಪಿಸಲಾಗಿದೆ.[೩೦೧]

ಮೇಲ್ಭಾಗದಲ್ಲಿ ವೃತ್ತಾಕಾರದ ಕಾವಲು ಗೋಪುರವಿದ್ದು, ಇದು ಬೆಟ್ಟದಲ್ಲಿಯೇ ಎತ್ತರ ಪ್ರದೇಶವಾಗಿದೆ. ಗೋಪುರದ ಸುತ್ತಲೂ ೬ ಅಡಿ ಕೋಟೆಯ ಗೋಡೆ ಇದ್ದು, ಉತ್ತರ ದಿಕ್ಕಿನಿಂದ ಪ್ರವೇಶ ಕಲ್ಪಿಸಲಾಗಿದೆ. ಮೂರನೇ ಸುತ್ತಿನ ಕೋಟೆ ಮತ್ತು ಎರಡನೇ ಸುತ್ತಿನ ಕೋಟೆಯ ಮಧ್ಯಭಾಗದಲ್ಲಿ ಅನೇಕ ಕಣಜಗಳಿವೆ. ವೃತ್ತಾಕಾರದ ಈ ಕಣಜಗಳು ನಾಶವಾಗಿವೆ. ಈ ಭಾಗದಲ್ಲಿದ್ದ ಅರಮನೆ, ಗರಡಿಮನೆಗಳು ಪೂರ್ಣವಾಗಿ ನಾಶವಾಗಿವೆ. ಜಾನಕಲ್ಲು ಕೋಟೆಯಲ್ಲಿ ಹೆಚ್ಚಾಗಿ ಕಲ್ಲಿನ ಗೋಡೆಯ ಮೇಲೆ ಮಣ್ಣಿನ ಕೋಟೆ ನಿರ್ಮಿಸಿರುವುದು ಕಂಡುಬರುತ್ತದೆ.[೩೦೨]

೫.೨.೩ ಬೂದಿಹಾಳು ಕೋಟೆ

ಹೊಸದುರ್ಗ ತಾಲೂಕಿನ ಬೂದಿಹಾಳು ಒಂದು ಹೋಬಳಿ ಕೇಂದ್ರವಾಗಿದೆ. ಹೊಸದುರ್ಗದಿಂದ ಹುಳಿಯಾರುವಿಗೆ ಹೋಗುವ ಮಾರ್ಗದಲ್ಲಿ ಆಗ್ನೇಯಕ್ಕೆ ೧೬ ಮೈಲಿಗಳ ದೂರದಲ್ಲಿದೆ. ಬೂದಿಹಾಳು ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿದೆ. ಇದಕ್ಕೆ ಭಸ್ಮಪುರ, ವಿಭೂತಿಪುರ, ಬೂದಿಹಾಲು, ಕಾಯಿಬೂದಿಹಾಳು, ಹರಪುರ, ಬೇದಂಡಕೋಟೆ, ಅವನಿಗಿರಿದುರ್ಗ, ಗಿರಿಜಾನಗರ, ಸಿರುಮನ ನಾಡು ಎಂದು ಮುಂತಾಗಿ ಶಾಸನ–ಸಾಹಿತ್ಯ–ಜಾನಪದ ಐತಿಹ್ಯಗಳಲ್ಲಿ ಕರೆಯಲಾಗಿದೆ.[೨೦೩] ಬೂದಿಹಾಳು ಪಾಳೆಯಪಟ್ಟನ್ನು ಆಳಿದ ಅರಸ ಸಿರುಮಣ ನಾಯಕನ ಹೆಸರಿನಿಂದಾಗಿ ಇದರ ಸ್ಥಳನಾಮ 'ಶ್ರೀರಾಂಪುರ' ಎಂದು ಬದಲಾವಣೆಗೊಂಡಿದೆ.[೨೦೪] ಬೂದಿಹಾಳು ಸ್ಥಳವು ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿದ್ದ ಪ್ರಸಿದ್ಧ ಊರಾಗಿದ್ದಿತೆಂದು ಇಲ್ಲಿಯ ಶಾಸನಗಳಿಂದ ತಿಳಿದು ಬರುತ್ತದೆ.

ಬೂದಿಹಾಳನ್ನು ಕೇಂದ್ರವಾಗಿ ಮಾಡಿಕೊಂಡು ಪಾಳೆಯಪಟ್ಟೊಂದನ್ನು ಸ್ಥಾಪಿಸಿಕೊಂಡು ಕ್ರಿ.ಶ. ೧೫ನೇ ಶತಮಾನದಲ್ಲಿ ಆಳಿದವರೇ 'ಬೂದಿಹಾಳು ಅರಸರು', ಇವರ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಯಿನಿಸಲು ಶಾನಗಳು ಲಭ್ಯವಿರದಿದ್ದರೂ ಸಾಹಿತ್ಯ ಕೃತಿಗಳು ಹೇರಳವಾಗಿವೆ. ಬೂದಿಹಾಳು ಅರಸ ಸಿರುಮನಾಯಕ ಹಾಗೂ ಮಹಾಮಂಡಳೇಶ್ವರ ಸಾಳುವ ಒಂದನೇ ನರಸಿಂಹರಾಯನ ಮಧ್ಯೆ ಜರುಗಿದ ಯುದ್ಧವನ್ನು ವಸ್ತುವನ್ನಾಗಿಸಿಕೊಂಡು ಸಾಂಗತ್ಯ ಪ್ರಕಾರದಲ್ಲಿ ಮೂರು ಕಾವ್ಯಗಳು ರಚನೆಯಾಗಿವೆ. ಸಿದ್ಧ ಕವಿಯ 'ಸಿರುಮಣನಾಯಕನ ಸಾಂಗತ್ಯ', ಮಲ್ಲಕವಿಯ ಗೊಲ್ಲ ಸಿರುಮನ ಚರಿತೆ', ರಾಮಕವಿಯ 'ಸಿರುಮನ ಚರಿತೆ' ಇವೆ ಆ ಮೂರು ಕಾವ್ಯಗಳು.[೨೦೫] ಸುಮಾರು ೧೫ನೇ ಶತಮಾನದ ಪೂರ್ವಭಾಗದಲ್ಲಿ ವಿಜಯನಗರದ ಅರಸರ ೩ನೇ ದೇವರಾಯನ ಬಳಿಯಿದ್ದ ದಕ್ಷನೂ ಶೂರನೂ ಆದ ಕಾಚನಾಯಕನೆಂಬುವನಿಗೆ ತನ್ನ ಸಾಮ್ರಾಜ್ಯಕ್ಕೆ ಸೇರಿದ ಸೂಜಿಗಲ್ಲು ಪ್ರದೇಶವನ್ನು ಬಳುವಳಿಯಾಗಿ ನೀಡಿದನು.[೨೦೬] ಬೂದಿಹಾಳು ಪಕ್ಕದಲ್ಲಿರುವ ಸೂಜಿಗಲ್ಲಿನಿಂದ ಆರಂಭವಾದ ಈತನ ಆಳ್ವಿಕೆಯು ಪ್ರಸಿದ್ಧಿಯಾಗಿದ್ದು ಆನಂತರ ಅಧಿಕಾರಕ್ಕೆ ಬಂದ ಸಿರುಮನಿಂದ. ಈತನು ರಾಜಧಾನಿಯನ್ನು ಸೂಜಿಗಲ್ಲಿನಿಂದ ಬೂದಿಹಾಳು ಪಟ್ಟಣಕ್ಕೆ ವರ್ಗಾಯಿಸಿ ಅಲ್ಲಿ ಕೋಟೆ–ಕೊತ್ತಲಗಳನ್ನು ನಿರ್ಮಿಸಿದನು. ಆದರೆ ಬೂದಿಹಾಳು ಗ್ರಾಮದಲ್ಲಿರುವ ಹಿರೇಕೆರೆ ಏರಿಯ ಶಾಸನವು ಬೂದಿಹಾಳು ಪಟ್ಟಣವು ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ಮಾಹಿತಿಯನ್ನು ನೀಡುತ್ತದೆ. ಈ ಶಾಸನದನ್ವಯ ಬೂದಿಹಾಳು ಸಿರುಮನಿಗಿಂತ ಪೂರ್ವದಲ್ಲಿಯೇ ಪ್ರಸಿದ್ಧ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಬಹುಶಃ ಆ ಕಾಲಕ್ಕಾಗಲೇ ಪ್ರಸಿದ್ಧಿಯಾಗಿದ್ದ ಈ ಪಟ್ಟಣಕ್ಕೆ ಸಿರುಮನು ಕೋಟೆ–ಕೊತ್ತಲಗಳನ್ನು ಕಟ್ಟಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಂತೆ ಕಾಣುತ್ತದೆ.[೨೦೭]

ಹೊಯ್ಸಳ ಮತ್ತು ವಿಜಯನಗರದ ಅರಸರ ಕಾಲದಲ್ಲಿ ಹುಳಿಯಾರು ಮತ್ತು ಚಿಕ್ಕನಾಯಕನ ಹಳ್ಳಿ ಸುತ್ತಲೂ ಇರುವ ಪ್ರದೇಶಕ್ಕೆ ಮಗರಮನ್ನೇಯರ ನಾಡು ಎಂದು ಕರೆಯಲಾಗುತ್ತಿತ್ತು.[೨೦೮] ಬೂದಿಹಾಳು ಈ ಮಗರಮನ್ನೇರ ನಾಡಿನಲ್ಲಿ ಒಂದು ಸೀಮೆಯಾಗಿದ್ದಿತು. ಈ ಸೀಮೆಯಲ್ಲಿ

ಕುಲವಟ, ನೇರಲಕೆರೆ, ಹೆಗ್ಗೆರೆ, ಬೆಲಗೂರು, ಬೂದಿಹಾಳು, ಭೈರದೇವರಗುಡ್ಡ, ಕಲ್ಲಕೆರೆ ಮುಂತಾದ ಗ್ರಾಮಗಳು ಅಂತರ್ಗತವಾದವೆಂದು ಶಾಸನಗಳಿಂದ ತಿಳಿದುಬರುತ್ತದೆ.[೨೯] ಸಿರುಮನ ಸಾವಿನೊಂದಿಗೆ ಬೂದಿಹಾಳು ಪಥನಗೊಂಡ ಮೇಲೆ ವಿಜಯನಗರದ ಅರಸರು ನೇಮಿಸಿದ ಅಮರನಾಯಕರು ಆಡಳಿತ ನಡೆಸಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ.[೩೦] ನಂತರದಲ್ಲಿ ಬೂದಿಹಾಳು ತರೀಕೆರೆ ನಾಯಕರ ವಶವಾಯಿತು. ಇವರ ನಂತರ ಬಿಜಾಪುರದ ಸುಲ್ತಾನ ಕರ್ನಾಟಕದ ದಕ್ಷಿಣ ಭಾಗವನ್ನು ವಶಪಡಿಸಿಕೊಂಡಾಗ 'ಬೂದಿಹಾಳು' ಸಿರಾದ ಏಳು ಪರಗಣಾಗಳಲ್ಲಿ ಸೇರಿಹೋಯಿತು. ತರುವಾಯ ಚಿತ್ರದುರ್ಗ ನಾಯಕರು, ಮೈಸೂರಿನ ಹೈದರಾಲಿ, ಟಿಪ್ಪು, ಮೈಸೂರು ಒಡೆಯರು ಹಾಗೂ ಬ್ರಿಟೀಷರು ತಮ್ಮ ಪ್ರಾಬಲ್ಯಕ್ಕೆ ತೆಗೆದುಕೊಂಡು ಆಳ್ವಿಕೆ ಮಾಡಿದರು.[೩೧]

ಮಲ್ಲಕವಿ 'ಗೊಲ್ಲಸಿರುಮನ ಚರಿತೆ' ಯಲ್ಲಿ ಬೂದಿಹಾಳು ಕೋಟೆ ಮತ್ತು ನಗರವನ್ನು ಈ ರೀತಿ ಹೇಳಿದ್ದಾನೆ. "ಹೊಯ್ಸಳ ದೇಶದಲ್ಲಿ ಬೂದಿಹಾಳು ಅತ್ಯಂತ ಖ್ಯಾತಿಗಳಿಸಿದ್ದಿತು. ಕಂಚಿನ ಕೋಟೆ, ಮಿಂಚಿನ ತೆನೆಗಳು, ಅಲ್ಲಲ್ಲಿ ಅಣಿಗೊಳಿಸಿದ್ದ ಡೆಂಕಣಿಗಳು ಕೋಟೆಯ ಸುತ್ತ ಇದ್ದ ಅಗಳು, ತುಂಬಿದ ಜಲ, ಅದರಲ್ಲಿ ಮೀನು, ಮೊಸಳೆಗಳು, ತೆನೆಗಳ ಮೇಲೆ ಪೇರಿಸಿಟ್ಟ ಕಲ್ಲುಗಳು, ಸಿದ್ಧವಾಗಿಟ್ಟಿರುವ ಕಾಸಿದ ಅಂಬಲಿ, ಹುರಿದ ಮರಳುರಾಶಿ, ಚೋರಗಂಡಿಗಳು, ಕೊತ್ತಲದಲ್ಲಿ ಪಾಳೆಯಗಾರರು ದಂಡೆತ್ತಿ ಬಂದಾಗ ಅವರನ್ನು ನುಂಗಲು ನಿಂತಿರುವಂತೆ ಕಾಣಿಸುವ ಶೂಲಗಳು, ರಾಮನಾಥ, ಭಯಂಕರ, ಮೀಸರಗಂಡ, ರಣಹೇಣ ಎಂಬ ಹೆಸರಿನ ಕೊತ್ತಲಗಳು ಆ ಕೋಟೆಯಲ್ಲಿ ಶೋಭಿಸುತ್ತಿರಲು, ಪಡುವಲ ಬಾಗಿಲಿನಲ್ಲಿ ಕಾವಲಾಗಿ ನಿಂತಿರುವ ಸತ್ಯ ಸ್ವರೂಪಿ ಏಕನಾಥೇಶ್ವರಿ ಮೂಡಣ ಬಾಗಿಲಿನಲ್ಲಿ ಕಪ್ಪರಿ ವೀರಣ್ಣ ದೇವರು ಕಾವಲಾಗಿರುವರು. ಈಶ್ವರ, ನಿರಾಶೆಮಠ, ಸೂರ್ಯ ಬೀದಿ, ಚಂದ್ರ ಬೀದಿಗಳಿಂದ ಬೂದಿಹಾಳು ನಗರ ಶೋಭಿಸುತ್ತದೆ." ಇದನ್ನು ಬಲಿದುರ್ಗವೆಂದು, ಕಂಚಿನ ಕೋಟೆಯೆಂದೂ ವರ್ಣಿಸಿದ್ದಾನೆ.[೩೨]

ರಾಕಮವಿಯು ಬೂದಿಹಾಳು ಕೋಟೆಯನ್ನು ಇದು ರಾವಣನಿಹ ಲಂಕೆಯು ಭಾವಿಸೆ ಇದು ರಾಮನಿಹ ಕಮ್ಮಟವೋ, ಇದು ವೈರಿ ನೃಪಕೆರೆಲ್ಲಣವೆಸುವುದಿಕೆ ಸಾಟಿಯೇ ಮಿಕ್ಕ ನಗರ ಎಂದು ಬೂದಿಹಾಳು ಕೋಟೆಯನ್ನು ಕುಮಾರ ರಾಮನು ಕುಮ್ಮಟದುರ್ಗಕ್ಕೆ ಹೋಲಿಸುತ್ತಾನೆ. ಮೇಲೆ ಹೇಳಿದ ಎಲ್ಲಾ ಅಂಶಗಳನ್ನೊಳಗೊಂಡಂತೆ ಉದ್ದು, ಕಡಲೆ, ಗೋಧಿ, ಹಣ್ಣು ಹಂಪಲುಗಳನ್ನು ಮಾರುವ ಅಂಗಡಿಗಳಿವೆ. ಸುಗಂಧ ವಸ್ತುಗಳು, ಹೂ ಮಾರುವ ಅಂಗಡಿಗಳು, ವಿವಿಧ ಚಿತ್ರ ಕೆಲಸಗಳಿಂದ ಬೂದಿಹಾಳು ಮೆರೆಯುತ್ತಿದೆ. ಬ್ರಾಹ್ಮಣರ ಕೇರಿಗಳಲ್ಲಿ ವಡೆ, ಸುಕ್ಕಿನುಂಡೆ, ಚಕ್ಕುಲಿ, ಕರ್ಜಿಕಾಯಿ, ಕಡಬು, ಎಣ್ಣೋರೆಗಳನ್ನು ಮಾಡುತ್ತಿರುವ ಸೊಡರು ತುಂಬಿದ ಪಗಡೆ, ಚದುರಂಗ, ಜೂಜನ್ನಾಡುವ ರಾಜಪರಿವಾರದವರು, ಕೋಳಿ, ಟಗರು ಪಂದ್ಯಗಳನ್ನು ನೋಡಿ ಆನಂದಿಸುವ ಜನಗಳು, ವಿಟರನ್ನು ಮರುಳುಗೊಳಿಸುವ ಸುಂದರ ವೇಶ್ಯೆಯರು ಇವೆಲ್ಲವುಗಳಿಂದ ಬೂದಿಹಾಳು ಪಟ್ಟಣಕ್ಕೆ ಹಂತಕನಂತೆ ಬೂವರಿಸಿದ್ದಾನೆ ಎಂದು ವರ್ಣಿಸಿದ್ದಾನೆ.[೩೩]

ಸಿದ್ಧ ಕವಿಯು ಪಟ್ಟಣವನ್ನು ಅತಿಶಯಗುರುಪೂಜೆ, ಜಂಗಮಾರ್ಚನೆಗಳಿಂದ ಬೂದಿಹಾಳು ಪ್ರಥಮ ಕಲ್ಯಾಣವೆನಿಸಿತ್ತು. ವ್ಯಾಸನತೋಡು ವೃಷಭಧ್ವಜಗಳಿಂದ ನಿರಾಸೆಯ ಮಟ್ಟವು ಶೋಭಿಸುತ್ತಿತ್ತು. ಈಶ್ವರ, ವೀರೇಶ್ವರ ಲಿಂಗ, ಬಸವನಗುಡಿ, ಕೆರೆ, ಬನ, ಹೂದೋಟ, ತೆಂಗು, ಕರ್ಜೂರ ಇತ್ಯಾದಿ ಮರಗಳಿಗೆ ಬರವಿಲ್ಲದ ದೇಶವೆಂದು, ಕೆತ್ತುಗಲ್ಲುಗಳ ಶೃಂಗಾರ, ಚಿತ್ರದ ತೆನೆಗಳು ಹತ್ತು ಮಾರಿಗೊಂದು ಕೊತ್ತಲ, ಹುಡೇವು, ಅಲ್ಲಲ್ಲಿ ಅಂಬುಗುಂಡಿಗಳು ಕೋಟೆಯ ಸುತ್ತಲೂ ಬಳಸಿದ ನೆಲಗಣ್ಣ, ಚೋರುಗುಂಡಿಗಳು ಸುತ್ತಲೂ ಇರುವ ಅಗಳ, ಹುಲಿಮುಖ, ವಂಕರಿಗಳು, ಮೈಲಾರನ ಬಾಗಿಲು, ಕಪ್ಪರಿ ವೀರನ ಬಾಗಿಲು, ಬಲಕ್ಕೆ ಕಣಕೊತ್ತಲಿ ಇವೆ. ಊರ ಮಧ್ಯದಲ್ಲಿ ರಾಜಮಾರ್ಗ, ಹಿರಿಯುಪ್ಪರಿಗೆಯ ಸಿರುಮನ ಅರಮನೆ ಮಂತ್ರಿಮನ್ನೆಯರು ಅಧಿಕಾರಿಗಳು ಇದ್ದರೆಂದು ವರ್ಣಿಸುತ್ತದೆ.[೨೧೪]

ಬೂದಿಹಾಳು ಕೋಟೆಯು ಸ್ಥಳದುರ್ಗವಾಗಿದ್ದು ವೃತ್ತಾಕಾರದ ಕೋಟೆಯಾಗಿದೆ. ಒಂದು ಕಾಲದಲ್ಲಿ ಕುಮಾರರಾಮನ ಕುಮ್ಮಟದುರ್ಗಕ್ಕೆ ಹೋಲಿಕೆಯಾಗಿದ್ದ ಬೂದಿಹಾಳಿನಲ್ಲಿ ಈಗ ಕೋಟೆಯ ಸುತ್ತ ಇರುವ ಭಾರೀ ಕಂದಕ, ದೇವಾಲಯಗಳು, ಕೋಟೆಯ ಪಶ್ಚಿಮ ಭಾಗದಲ್ಲಿ ಉಳಿದುಕೊಂಡಿರುವ ಏಕೈಕ ಬುರುಜು ಹಾಗೂ ಅಲ್ಲಲ್ಲಿ ಅವಶೇಷಗಳ ಕುರುಹಾಗಿರುವ ಎತ್ತರದ ಮಣ್ಣಿನ ಕೊತ್ತಲಗಳಿವೆ. ಕೋಟೆಯಲ್ಲಿ ೧೦ ದೊಡ್ಡಬುರುಜುಗಳು, ೮ ಚಿಕ್ಕ ಬುರುಜುಗಳಿದ್ದು ಸಿದ್ಧ ಕವಿ ಹೇಳುವಂತೆ ೧೦ ಮಾರಿಗೊಂದು ಬುರುಜುಗಳು ನಿರ್ಮಾಣಗೊಂಡಿವೆ. ಈಗ ಉಳಿದುಕೊಂಡಿರುವ ಪಶ್ಚಿಮದ ಕೊತ್ತಲವು ಕೋಟೆಯ ರಚನೆಯ ಬಗ್ಗೆ ಬರೆಯಲು ಇರುವ ಏಕೈಕ ಆಧಾರವಾಗಿದೆ. ಈ ಕೊತ್ತಲದ ಮೇಲೆ ಸುತ್ತಲೂ ತೆನೆಗಳು ಹಾಗೂ ಅಂಬುಗಂಡಿಗಳಿವೆ. ಕಂದಕಕ್ಕೆ ಹೊಂದಿಕೊಂಡಂತೆ ಇದನ್ನು ನಿರ್ಮಿಸಲಾಗಿದೆ. ನಯಗೊಳಿಸಿದ ಮಧ್ಯಮ ಗಾತ್ರದ ಬಿಳಿ ಗ್ರಾನೈಟ್ ಕಲ್ಲುಗಳನ್ನು ಬಳಸಿ ಸುತ್ತಲೂ ಗೋಡೆ ಕಟ್ಟಲಾಗಿದೆ. ಗಾರೆಯನ್ನು ಬಳಸಿ ಹೊರಭಾಗದ ಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಇಷ್ಟೊಂದು ಸುಂದರವಾದ ಈ ಕೊತ್ತಲವು ಮಲ್ಲಕವಿ ಹೇಳುವ ಹಾಗೆ ಭಯಂಕರ ಕೊತ್ತಲವಾಗಿದೆ. ಕೋಟೆಯಲ್ಲಿ ಅಳಿದುಳಿದಿರುವ ರಾಮನಾಥ ಮೀಸರಗಂಡ, ರಣಹೆಣ ಕೊತ್ತಲಗಳು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗದಿದ್ದರೂ ಅವಶೇಷಗಳು ಉಳಿದುಕೊಂಡಿವೆ.[೨೧೫]

ಸಿದ್ಧಕವಿ ತನ್ನ ಕಾವ್ಯದಲ್ಲಿ ಹೇಳಿರುವಂತೆ ಪೂರ್ವದಲ್ಲಿರುವ ಕಪ್ಪರಿವೀರನ ಬಾಗಿಲು ಇದರ ಪಕ್ಕದಲ್ಲಿ ಮಣ್ಣಿನ ಅವಶೇಷಗಳಿಂದ ಕೂಡಿರುವ ರಣಕೊತ್ತಲಗಳು ಶಿಥಿಲಾವಸ್ಥೆಯಲ್ಲಿವೆ. ಕೋಟೆಯ ಸುತ್ತ ಹೊರಭಾಗದಲ್ಲಿ ಇರುವ ಬಾರಿ ಕಂದಕವು ಕೆರೆಯಂತಿದ್ದು ಇಡೀ ಕೋಟೆಯನ್ನಾವರಿಸಿದ್ದು ಬೂದಿಹಾಳು ಕೋಟೆಯನ್ನು ಒಂದು ಜಲದುರ್ಗವನ್ನಾಗಿಸಿದೆ. ಇಂತಹ ಕಂದಕವನ್ನು ಕುಮಾರರಾಮನ ಲಾವಣಿಯೆಂದು ಈ ರೀತಿ ವರ್ಣಿಸುತ್ತದೆ.

ಕಾಳಕಟ್ಟಿಗೋಗುವಾಗ ಅವರ ತಾಯಿವ್ವೇನಂದಾಳ
ಜ್ವಾಕಿ ಕಂದಯ್ಯ ಜತನಾವೆ । ಬೂದಾಳ
ಅಗಳ ಏರಿಯ ಮುರಿದೋಳು[೨೧೬]

ಇಂತಹ ಅಗಳುವಿನ ಮಣ್ಣನ್ನು ಕೋಟೆಗೋಡೆಗೆ ಹಾಕಿ ವಪ್ರವನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಮಲ್ಲಕವಿಯು ವಿಶಾಲವಾದ ಕಂದಕದಲ್ಲಿ ತುಂಬಿದ ಜಲ, ಕಂದಕದಲ್ಲಿ ಮೀನು, ಮೊಸಳೆಗಳು ಇದ್ದವೆಂದು ಹೇಳುತ್ತಾನೆ.

ಆದಿ ಹಳೆಶಿಲಾಯುಗ ಕಾಲಘಟ್ಟದಿಂದಲೂ ಮಾನವನ ವಸತಿ ನೆಲೆಯಾಗಿರುವ ಹೊಸದುರ್ಗ ತಾಲೂಕನ್ನು ಇಲ್ಲಿನ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಬಳಸಿಕೊಂಡು ಬಂದಿರುವುದು ಅನೇಕ ಪುರಾತತ್ವ ಆಧಾರಗಳಿಂದ ದೃಢಪಡುತ್ತದೆ. ಅಂತಹ ಪುರಾತತ್ವ ಆಧಾರಗಳಲ್ಲಿ ಕೋಟೆಗಳನ್ನು ಸಹ ಕಾಣಬಹುದು. ಭೌಗೋಳಿಕವಾಗಿ ಹೆಚ್ಚು ಕಣಶಿಲೆಯ ಬೆಟ್ಟಗಳನ್ನು ಹೊಂದಿರುವ ಹೊಸದುರ್ಗ ತಾಲೂಕು ಪರಿಸರದಲ್ಲಿ ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲಗುಡ್ಡ, ದೇವರಗುಡ್ಡ ಹಾಗೂ ಹಾಲು ರಾಮೇಶ್ವರ ಗುಡ್ಡಗಳು ಕಂಡುಬರುತ್ತವೆ. ಇಂತಹ ಪ್ರದೇಶಗಳಲ್ಲಿ ವಿಜಯನಗರೋತ್ತರ ಪಾಳೆಯಗಾರರ ಕಾಲದಲ್ಲಿ ಅನೇಕ ಕೋಟೆಗಳು ನಿರ್ಮಾಣಗೊಂಡಿದ್ದು, ಅವುಗಳಲ್ಲಿ ಪ್ರಮುಖವಾಗಿ ಹೊಸದುರ್ಗ, ಜಾನಕಲ್ಲು ಹಾಗೂ ಬೂದಿಹಾಳು ಬಹುಮುಖ್ಯವಾಗಿದೆ. ವಿಜಯನಗರ ಕಾಲಘಟ್ಟದಲ್ಲಿ ಅನೇಕ ಪ್ರಾದೇಶಿಕ ಆಡಳಿತ ಘಟಕಗಳು ಕಾರ್ಯನಿರ್ವಹಿಸಿದ್ದರೂ ಅವರ ಕಾಲದ ಯಾವುದೇ ಕೋಟೆಗಳಾಗಲಿ ಅಥವಾ ರಕ್ಷಣಾ ಸಂಬಂಧಿ ಸ್ಮಾರಕ ಅವಶೇಷಗಳಾಗಲಿ ಉಳಿದು ಬಂದಿರುವುದಿಲ್ಲ. ಆದರೆ ವಿಜಯನಗರ ಕಾಲದ ಕೊನೆಯ ಘಟ್ಟದಲ್ಲಿ ಇಲ್ಲಿ ಪ್ರಾರಂಭವಾದ ಅನೇಕ ಸ್ಥಳೀಯ ಅರಸರು ರಾಜಕೀಯ ಮತ್ತು ಆಡಳಿತಾತ್ಮಕ ಕೇಂದ್ರಗಳನ್ನು ಪ್ರಾರಂಭಿಸಿ ಅಭೇದ್ಯ ಕೋಟೆಗಳ ನಿರ್ಮಾಣಕ್ಕೆ ಕಾರಣಕರ್ತರಾದರು. ಇಲ್ಲಿ ಹೊಸದುರ್ಗ ಹಾಗೂ ಜಾನಕಲ್ಲು ಕೋಟೆಗಳು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಗಿರಿದುರ್ಗಗಳಾಗಿವೆ. ಇವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಹಾಗೂ ಬಲಿಷ್ಠತೆಗಾಗಿ ಈ ಕೋಟೆಗಳನ್ನು ನಿರ್ಮಿಸಿ ಕೊಂಡಿದ್ದರು. ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದ ರಾಜಕೀಯ ಚರಿತ್ರೆಯ ನಿರ್ಮಾಣದಲ್ಲಿ ಇಲ್ಲಿನ ಕೋಟೆಗಳ ಪಾತ್ರ ಅಮೋಘವಾದುದು.

೫.೩. ಕೆರೆ–ಕಟ್ಟೆ

ಭೂಮಿಯ ಮೇಲಿನ ಜೀವಿಗಳಿಗೆ ಅತ್ಯಂತ ಅಮೂಲ್ಯವಾದ ವಸ್ತು ನೀರು. ಇದಿಲ್ಲದೆ ಪ್ರಪಂಚದ ಯಾವ ಜೀವ ಜಂತುಗಳು ಬದುಕುಳಿಯಲು ಸಾಧ್ಯವಿಲ್ಲ. ಆದುದರಿಂದ ನೀರು ಪಂಚಭೂತಗಳಲ್ಲಿ ಒಂದು. ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಅವನು ಹೆಚ್ಚಾಗಿ ನೀರಿನ ಆಸರೆಗಳಲ್ಲೇ ಬಾಳಿ ಬದುಕಿದ್ದಾನೆ. ಇದಕ್ಕೆ ಆ ಭಾಗದಲ್ಲಿ ದೊರೆತಿರುವ ಆದಿ ಮಾನವನ ನೆಲೆಯ ಕುರುಹುಗಳೇ ಸಾಕ್ಷಿಗಳಾಗಿವೆ. ನೂತನ ಶಿಲಾಯುಗದ ಮಾನವನು ಮಳೆಯ ನೀರಿನ ಉಪಯೋಗವನ್ನು ಮಾಡಲು ಮೊದಲಿಗೆ ಅರಿತನು.[೫೨] ಭೂಮಿಯ ಮೇಲೆ ಪ್ರಾಣಿಗಳ ತುಳಿತಕ್ಕೆ ಗುರಿಯಾದ ತಗ್ಗುಗಳಲ್ಲಿ ನೀರು ನಿಲ್ಲುವುದನ್ನು ಕಂಡ ಮಾನವನು ಮಳೆ ಇಲ್ಲದ ಸಮಯದಲ್ಲಿ ಆ ನೀರನ್ನು ಉಪಯೋಗಿಸತೊಡಗಿದ. ಮಾನವನ ನಾಗರೀಕತೆಯು ನೀರಿನಿಂದಲೇ ಆರಂಭಗೊಂಡಿತೆಂದರೆ ತಪ್ಪಾಗಲಾರದು. ಈ ವಿಧವಾಗಿ ನೂತನ ಶಿಲಾಯುಗದ ಮಾನವ ವ್ಯವಸಾಯಕ್ಕೆ ನೀರಾವರಿ ವಿಧಾನವನ್ನು ಅಳವಡಿಸಿಕೊಂಡದ್ದು ಒಂದು ಮಹಾ ಆವಿಷ್ಕಾರವೆಂದೇ ಭಾವಿಸಬಹುದು. ಹೀಗೆ ನೀರಿನ ಬಳಕೆಯ ತಂತ್ರವನ್ನು

ಅರಿತ ಇವನು ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದಲ್ಲಿ ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಬರುವ ಮಳೆಯ ನೀರಿಗೆ ಕೆಳಭಾಗದಲ್ಲಿ ಅಡ್ಡಕಟ್ಟೆ ಹಾಕಿ ನೀರನ್ನು ಸಂಗ್ರಹಿಸಿ ನಿತ್ಯ ಬಳಕೆಗೆ ಹಾಗೂ ವ್ಯವಸಾಯಕ್ಕೆ ಬಳಸಿರುವ ಹಲವಾರು ಉದಾಹರಣೆಗಳು ದಕ್ಷಿಣ ಭಾರತದಲ್ಲಿ ಉತ್ಖನನ ಗೊಂಡ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಪತ್ತೆಯಾಗಿವೆ. ಹೀಗೆ ನೀರನ್ನು ಸಂಗ್ರಹಿಸುವ ತಂತ್ರಗಾರಿಕೆ ಹಾಗೂ ಚಿಕ್ಕಪುಟ್ಟ ಕೆರೆ–ಕಟ್ಟೆ, ಜಲಾಶಯಗಳ ಇತಿಹಾಸವನ್ನು ಬೃಹತ್ ಶಿಲಾಯುಗಕ್ಕೆ ಪೂರ್ವದಿಂದಲೂ ಗುರುತಿಸಬಹುದು.

ಭಾರತದ ಪ್ರಾಚೀನ ನಾಗರೀಕತೆಯಾದ ಹರಪ್ಪ ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ನಡೆಸಿದ ಉತ್ಖನನದಿಂದ ಪ್ರಾಚೀನ ನೀರಾವರಿ ವ್ಯವಸ್ಥೆಯ ಪುರಾವೆಗಳು ದೊರೆತಿವೆ.[೩೦೮] ಮೌರ್ಯರ ಕಾಲದಲ್ಲಿ ನೀರಾವರಿ ಕುರುಹುಗಳನ್ನು ಅರಿಯಲು ಕ್ರಿ.ಶ. ೧೫೦ರ ರುದ್ರಧಾಮನನ ಶಾಸನವು ಸಹಕಾರಿಯಾಗಿದ್ದು ಇದು ಸೌರಾಷ್ಟ್ರದ ಜುನಾಗಡದ 'ಸುದರ್ಶನ ಸರೋವರ'ದ ಬಗ್ಗೆ ಮಾಹಿತಿ ನೀಡುತ್ತದೆ.[೩೦೯]

ಪ್ರಾಚೀನ ಗ್ರಂಥಗಳಾದ 'ಋಗ್ವೇದ', 'ಯಜುರ್ವೇದ' ಹಾಗೂ 'ಅಥರ್ವಣ ವೇದ'ಗಳಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಅವತ, ಕೂಪ, ಕುಲ್ಯ, ಖನಿತ್ರಿಮ, ಸಾಸಾಸಿ(ಅಣೆಕಟ್ಟು/ ಸರೋವರ), ಕೃತ್ರಿಮಾನದಿಯಾ ಮುಂತಾದ ಪದಗಳು ಕಾಣಸಿಗುತ್ತವೆ.[೩೧೦]

ನೀರಾವರಿಯು ಮುಖ್ಯವಾಗಿ ನದಿ, ಬಾವಿ, ಕೆರೆಗಳನ್ನು ಅವಲಂಬಿಸಿದ್ದಿತು. ಕೆರೆ, ಕಟ್ಟೆ ಕೊಳ, ಕುಂಟೆ, ಸಮುದ್ರ, ದೊಣೆ, ಹೊಕ್ಕರಣೆ (ಪುಷ್ಕರಣಿ) ಇತ್ಯಾದಿಯಾಗಿ ನೀರಾವರಿ ಆಶ್ರಯಗಳನ್ನು ಕುರಿತು ಕರ್ನಾಟಕದ ಶಾಸನಗಳು ಉಲ್ಲೇಖಿಸಿವೆ.[೩೧೧] ಅದರಲ್ಲೂ ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದವು. ಕನ್ನಡ ನಾಡಿನಲ್ಲಿ ಕೆರೆ ನಿರ್ಮಾಣದ ಇತಿಹಾಸ ಕದಂಬ ಪೂರ್ವದಲ್ಲೇ ಇತ್ತೆಂಬುದು ತಿಳಿದುಬರುವುದು. ಬನವಾಸಿ ನಗರದಲ್ಲಿ ಕ್ರಿ.ಶ. ಆರಂಭದ ಶತಮಾನದಲ್ಲೇ ಚುಟುನಾಗಶ್ರೀಯ ಕಾಲದಲ್ಲಿ ಅತೀ ಪ್ರಾಚೀನ ನೀರಾವರಿ ಯೋಜನೆ ಇದ್ದಿತ್ತೆಂದು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಅದರೊಂದಿಗೆ ಕರ್ನಾಟಕದ ಪ್ರಾಚೀನ ಕೆರೆಗಳಲ್ಲಿ ಬಹುಮುಖ್ಯವಾದ ಚಂದ್ರವಳ್ಳಿ ಕೆರೆಯನ್ನು ಮಯೂರವರ್ಮನು ಬಲಪಡಿಸಿದನೆಂದು ಆ ಕೆರೆಯ ಬಳಿಯ ಶಾಸನದಿಂದ ತಿಳಿದುಬರುವುದು.[೩೧೨] ಕರ್ನಾಟಕದ ಅರಸು ಮನೆತನಗಳಾದ ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಹಾಗೂ ವಿಜಯನಗರದ ಅರಸರು ಕರ್ನಾಟಕದಲ್ಲಿ ಅನೇಕ ಕೆರೆ–ಕಟ್ಟೆ, ಕಾಲುವೆ, ಅಣೆಕಟ್ಟುಗಳನ್ನು ನಿರ್ಮಿಸಿದ್ದಾರೆ. ಅದರಲ್ಲೂ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಅಸಂಖ್ಯಾತ ಕೆರೆಗಳು ನಿರ್ಮಾಣ ಗೊಂಡಿವೆ. ಇವರ ಕಾಲವನ್ನು 'ಕೆರೆಗಳ ಸುವರ್ಣಯುಗ' ವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[೩೧೩] ವಿಜಯನಗರ ಕಾಲದಲ್ಲಿ ತಮ್ಮ ಇಡೀ ಸಾಮ್ರಾಜ್ಯದಾದ್ಯಂತ ಕೆರೆ ಮತ್ತು ಅಣೆಕಟ್ಟುಗಳನ್ನು ಕಟ್ಟಿಸಿರುವರು. ವಿಜಯನಗರ ಕಾಲದ ಕ್ರಿ.ಶ. ೧೪೧೧ರ ಶಾಸನದಲ್ಲಿ[೩೧೪] ಕಂಡುಬರುವ ಒಂದು ವಿಶಿಷ್ಟವಾದ ಪದ್ಯ ಈ ರೀತಿ ಇದೆ;

ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ ।
ಜ್ಜೆಳಿಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ ।
ರ್ಗ್ಗೆಳೆವೆಟ್ಟಾಗಿರು ಶಿಷ್ಟರು ಪೊರೆಯೆನ್ನುತ್ತಿಯೆಂತೆಲ್ಲವಂ ಪಿಂದೆ ತಾ ।
ಯೆಳೆದಳ್ಪಾಲೆಳೆವಂದು ತೊಟ್ಟು ಕಿವಿಯೊಳ್ಂ ಲಕ್ಷ್ಮೀಧಾರಾಮಾತ್ಯನಾ ॥

ಈ ಪದ್ಯವನ್ನು ವಿಜಯನಗರದ ಅರಸು ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಈ ಶಾಸನದಿಂದ ತಿಳಿದುಬರುವುದು. ಇದರಿಂದ ವಿಜಯನಗರ ಕಾಲದಲ್ಲಿ ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತಿಮುಖ್ಯವಾದ ಕೆಲಸವಾಗಿತ್ತೆಂಬುದು, ಅಲ್ಲದೇ ಈ ಕೆಲಸವನ್ನು ಮಾಡುವುದು ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿತ್ತೆಂದೂ ತಿಳಿದುಬರುವುದು. ವಿಜಯನಗರೋತ್ತರದ ಕರ್ನಾಟಕದಲ್ಲಿ ಪಾಳೆಯಗಾರರು ಹಾಗೂ ಚಿಕ್ಕಪುಟ್ಟ ಅರಸು ಮನೆತನಗಳು ಹಳೆಯ ಕೆರೆಗಳನ್ನು ದುರಸ್ಥಿ ಮಾಡಿಸುವುದು ಹಾಗೂ ಹೊಸ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಸಂಗತಿಗಳು ಅನೇಕ ಸಾಹಿತ್ಯಕ ಹಾಗೂ ಪುರಾತತ್ವೀಯ ದಾಖಲೆಗಳಿಂದ ತಿಳಿದುಬರುವುದು.

ಹೊಸದುರ್ಗ ತಾಲೂಕಿನ ಪ್ರಾಚೀನ ಕೆರೆ ನೀರಾವರಿಯನ್ನು ಅಧ್ಯಯಿನಿಸಲು ಶಾಸನ, ಚಾರಿತ್ರಿಕ ದಾಖಲೆ, ಸಾಹಿತ್ಯ ಹಾಗೂ ಪುರಾತತ್ವೀಯ ಅಂಶಗಳನ್ನು ಆಶ್ರಯಿಸಬೇಕಾಗಿದೆ. ಹೊಸದುರ್ಗ ತಾಲೂಕಿನ ಕ್ಷೇತ್ರಕಾರ್ಯದಲ್ಲಿ ಅನೇಕ ಪ್ರಾಚೀನ ಕೆರೆ-ಕಟ್ಟೆಗಳು ಕಂಡುಬಂದಿದ್ದು ಅವುಗಳು ಬಹುತೇಕ ನಶಿಸಿವೆ. ಆದ್ದರಿಂದ ಲಭ್ಯ ಶಾಸನ, ಚಾರಿತ್ರಿಕ-ಸಾಹಿತ್ಯಕ ದಾಖಲೆ ಹಾಗೂ ಕೆಲವು ಆನುಷಂಗಿಕ ಆಕರಗಳ ಮೂಲಕ ಇಲ್ಲಿನ ಪ್ರಾಚೀನ ಕೆರೆ-ಕಟ್ಟೆಗಳ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಅದಕ್ಕೂ ಮೊದಲೂ ಈ ತಾಲೂಕಿನಲ್ಲಿ ಹರಿಯುವ ಜೀವನದಿ 'ವೇದಾವತಿ'ಯನ್ನು ಕುರಿತು ಈ ಮುಂದಿನಂತೆ ಸಂಕ್ಷಿಪ್ತವಾಗಿ ಅರಿಯಬಹುದಾಗಿದೆ.

ವೇದಾವತಿಯು ಹೊಸದುರ್ಗ ತಾಲೂಕಿನ ಒಂದು ಪ್ರಮುಖ ನದಿ ವೇದಾವತಿಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುತ್ತದೆ. ಈ ಜಿಲ್ಲೆಯ ಬಾಬಾಬುಡನ್‌ಗಿರಿಯ ಪೂರ್ವಭಾಗದಲ್ಲಿ ವೇದಾ ಮತ್ತು ಆವತಿ ಎಂಬ ಎರಡು ನದಿಗಳು ಸೇರಿ ವೇದಾವತಿ ನದಿಯಾಗಿದೆ.[೨೫] ವೇದಾ ಮುಳ್ಳಯ್ಯನಗಿರಿ ಸಮೀಪದ ಗೌರಿಹಳ್ಳದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಶಕುನಗಿರಿ ಹತ್ತಿರ ಅಯ್ಯನಕೆರೆ ಅಣಕಟ್ಟೆಯಲ್ಲಿ ಜಲಾವೃತಗೊಂಡು ನಂತರ ಮುಂದೆ ಕಡೂರು ಹತ್ತಿರ ಹರಿಯುತ್ತದೆ. ತಾಯಳ್ಳ ಎಂಬ ಹೊಳೆಯಿಂದ ಹರಿದು ಮದಗದ ಕೆರೆಯಲ್ಲಿ ಸೇರಿ ಆವತಿ ಎಂಬ ಹೆಸರಿನ ಮೂಲಕ ಕಡೂರಿನ ಹತ್ತಿರದ ತಂಗಲಿ, ಮಲ್ಲೇಶ್ವರದ ಹತ್ತಿರವಿರುವ ರಾಮೇಗೊಂದಿ ಹತ್ತಿರ ವೇದ ನದಿ ಸೇರಿ ವೇದಾವತಿ ಎಂಬ ಹೆಸರು ಪಡೆದು ಮುಂದೆ ಚಿತ್ರದುರ್ಗ, ಅನಂತಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಹರಿದು ತುಂಗಾಭದ್ರ ನದಿಯನ್ನು ಸೇರುತ್ತದೆ.[೨೬] ಚಿತ್ರದುರ್ಗ ಜಿಲ್ಲೆಯಲ್ಲಿ ೬೦ ರಿಂದ ೭೦ ಕಿ.ಮೀ. ಹರಿಯುವ ಈ ನದಿ ಚಳ್ಳಕೆರೆ ಭಾಗದ

ಜನರಿಗೆ ಆಶಕಿರಣವಾಗಿದೆ. ಕ್ರಿ.ಶ. ೧೮೦೦–೧೮೦೧ರ ಕಾಲಘಟ್ಟದಲ್ಲಿ ಹೊಸದುರ್ಗ ಪರಿಸರದಲ್ಲಿ ಸಂಚರಿಸಿದ ಬ್ರಿಟಷ್ ಸರ್ವೇಕ್ಷಣಾಧಿಕಾರಿ ಫ್ರಾನ್ಸಿಸ್ ಬುಕಾನನ್‌ನು ವೇದಾವತಿ ನದಿ ಕುರಿತು ಅನೇಕ ಮಾಹಿತಿಗಳನ್ನು ನೀಡಿದ್ದಾನೆ.[೨೬] ವೇದಾವತಿ ನದಿಯು ಅತ್ಯಂತ ಉಪಯುಕ್ತವಾಗಬೇಕಾದರೆ ಇದಕ್ಕೆ ಮಾರಿಕಣಿವೆ ಬಳಿ ಇರುವ ಎರಡು ಗುಡ್ಡಗಳ ಮಧ್ಯೆ ೫೦೦ ಯಾರ್ಡ್ ಅಂತರದಲ್ಲಿ ಅಣೆಕಟ್ಟು ನಿರ್ಮಾಣವಾಗಬೇಕು[೨೭] ಎಂದು ತನ್ನ ವರದಿಯಲ್ಲಿ ಬರೆದಿರುವುದು. 'ವೇದಾವತಿ' ನದಿಯ ಪ್ರಾಮುಖ್ಯತೆಯನ್ನು ಕುರಿತು ತಿಳಿಯಲು ಸಹಕಾರಿಯಾಗಿದೆ. ಇದಾದ ಬಳಿಕ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ತಾಯಿ ವಾಣಿವಿಲಾಸಮ್ಮಣ್ಣಿ ಅವರ ಹೆಸರಿನಲ್ಲಿ ಅಣೆಕಟ್ಟನ್ನು ನಿರ್ಮಿಸಿದರು. ಆಸ್ಥಾನದ ವಾಸ್ತುವಿದ್ಯಾವಿಶಾರದ ಶ್ರೀಚುನ್ನಿಲಾಲ್ ತಾರಚಂದ್ ದಲಾಲ್ ಅವರ ತಂತ್ರಜ್ಞಾನದ ನೇತೃತ್ವದಲ್ಲಿ ೧೮೯೮–೧೯೦೭ರಲ್ಲಿ ಈ ಅಣೆಕಟ್ಟೆಯನ್ನು ನಿರ್ಮಿಸಲಾಯಿತು.[೨೮] ಈ ಕುರಿತು ಅಣೆಕಟ್ಟೆಯ ಮಂಟಪದಲ್ಲಿರುವ ಕ್ರಿ.ಶ. ೧೯೦೭ರ ಶಾಸನ ಮಾಹಿತಿ ನೀಡುತ್ತದೆ. ಈ ಶಾಸನದಲ್ಲಿ ಜಲಾಶಯವನ್ನು 'ಕೃಷ್ಣರಾಜ ಸಮುದ್ರ' ಎಂದು ಕರೆಯಲಾಗಿದೆ.[೨೯] ಹೀಗೆ ಹೊಸದುರ್ಗ ತಾಲೂಕಿನಲ್ಲಿ ಮೈದುಂಬಿ ಹರಿಯುವ ವೇದಾವತಿ ನದಿಗೆ ಮಾರಿಕಣಿವೆ ಬಳಿ ಅಣೆಕಟ್ಟೆಯನ್ನು ನಿರ್ಮಿಸಲಾಗಿದ್ದು ಇದು ಮುಂದೆ ಹಿರಿಯೂರು, ಚಳ್ಳಕೆರೆ ತಾಲೂಕಿನ ಜನರಿಗೆ ಆಶಾಕಿರಣವಾಗಿದೆ.

ಹೊಸದುರ್ಗ ತಾಲೂಕಿನ ಶೆಟ್ಟಿಹಳ್ಳಿ, ವೀರಾಪುರ, ಆಲದಹಳ್ಳಿ ಗ್ರಾಮಗಳ ನೀರು ನೀರಗುಂದ, ಶ್ರೀರಂಗಾಪುರ, ಬಾಗೂರು, ಕೋಡಿಹಳ್ಳಿ ಇನ್ನಿತರ ಹಳ್ಳಿಗಳಿಂದ ಬಂದ ಹಳ್ಳ ಹೊನ್ನೆಕೆರೆ, ಬೋಕೀಕೆರೆ ಕಡೆಯಿಂದ ಬಂದ ಹಳ್ಳಗಳು ಸೇರಿ ಕಂಗುವಳ್ಳಿ ಹತ್ತಿರ ಕೂಡಿಕೊಂಡು ಬಲ್ಲಾಳ್ ಸಮುದ್ರ ಕಾವಲ್ ಇತರ ಹಳ್ಳಿಗಳ ಮುಖಾಂತರ ಮುತ್ತಗೊಂದಿ ಹತ್ತಿರ ವಾಣಿವಿಲಾಸ ಸಾಗರದ ಹಿನ್ನಿರಿಗೆ ಸೇರುತ್ತದೆ.[೩೦] ಬೂದಿಹಾಳಿನ ವಾಯುವ್ಯದ ಕಡೆಗೆ ಹರಿಯುವ ಒಂದು ತೊರೆಯು ಹೆಗ್ಗೆರೆ, ಶ್ರೀರಾಮಪುರ, ಕೈನಡು, ಬುಕ್ಕಸಾಗರ, ದೊಡ್ಡ ತೇಕಲವಟ್ಟಿ, ಗಂಜಿಗೆರೆ ಕಡೆಯಿಂದ ಹರಿದು ನಿರುವುಗಲ್ ಹತ್ತಿರ ವೇದಾವತಿ ನದಿಯನ್ನು ಸೇರುತ್ತದೆ. ಹೊಳಲ್ಕೆರೆ ತಾಲೂಕಿನ ತಾಳ್ಯ, ನೇರ್ಲೆಕಟ್ಟೆ, ಬರಗೇನಹಳ್ಳಿ, ಹುಲಿಕೆರೆ ಇನ್ನಿತರ ಹಳ್ಳಿಗಳಿಂದ ಬರುವ ಹಳ್ಳ ಹೊಳಲ್ಕೆರೆ ಗಡಿಬಿಟ್ಟು ಹೊಸದುರ್ಗ ತಾಲೂಕಿನ ಜಾನಕಲ್ಲು, ಕೊಡಿಹಳ್ಳಿ, ದಾಸರಹಳ್ಳಿ, ಹೊನ್ನೇನಹಳ್ಳಿ ಹತ್ತಿರ ಹರಿದು ಜಮ್ಮಾಪುರದ ಹತ್ತಿರ ವಾಣಿವಿಲಾಸ ಸಾಗರದ ಹಿನ್ನಿರಿಗೆ ಸೇರುತ್ತದೆ.[೩೧]

ವೇದಾವತಿ ನದಿಯನ್ನು ತುಮಕೂರು ಜಿಲ್ಲೆಯಲ್ಲಿ ಹರಿಯುವಾಗ ವಿಶೇಷವಾಗಿ 'ಹಗರಿ' ಎಂದು ಕರೆಯಲಾಗುತ್ತದೆ. ಈ ಹಗರಿ ನದಿಯೇ ಪ್ರಹಾರ ನದಿ ಆಗಿರಬಹುದೆಂದು ಅದಕ್ಕೆ ಪ್ರಹಾರ>ಪ್ರಹರೆ>ಪಹರೆ>ಹಗರೆ>ಹಗರಿ ಆಗಿದೆ ಎಂದು ಬಿ. ರಾಜಶೇಖರಪ್ಪ ಅವರು ಅಭಿಪ್ರಾಯ ಪಟ್ಟಿದ್ದಾರೆ.[೩೨] ವೇದಾವತಿಯನ್ನೇ 'ಹಗರಿ' ಎಂದೂ ಬಿ.ಎಲ್. ರೈಸ್ ಹಾಗೂ ಜೆ.ಎಫ್. ಫ್ಲೀಟ್ ಅವರುಗಳು ಬರೆದಿದ್ದಾರೆ.[೩೩] ಇನ್ನು ವೇದಾವತಿ ನದಿ ಹರಿಯುವ ಸುತ್ತಮುತ್ತಲ ಪರಿಸರಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಐತಿಹ್ಯಗಳು ಹೇರಳವಾಗಿ ಲಭ್ಯವಿವೆ.[೩೪] ಒಟ್ಟಾರೆ

ವೇದಾವತಿ ನದಿಯು ಹೊಸದುರ್ಗ ತಾಲೂಕು ಪರಿಸರದಲ್ಲಿ ಬಹುಮುಖ್ಯವಾದ ಪ್ರಾಕೃತಿಕವಾದ ಸಂಪತ್ತಾಗಿದ್ದು ಸಾಂಸ್ಕೃತಿಕವಾಗಿ ಪೂಜ್ಯನೀಯವಾಗಿದೆ.

ಹೊಸದುರ್ಗ ತಾಲೂಕಿನಲ್ಲಿ ವೇದಾವತಿ ನದಿಯನ್ನು ಹೊರತುಪಡಿಸಿದರೆ ಕೆರೆ-ಕಟ್ಟೆಗಳು ಅಪಾರ ಸಂಖ್ಯೆಯಲ್ಲಿ ಕಂಡುಬಂದರು ಪ್ರಾಚೀನವಾದವುಗಳು ಅತ್ಯಲ್ಪ. ಮಳೆಯಾಧಾರಿತ ಭೂಮಿ ಹೆಚ್ಚು ಇದ್ದು, ಕೆಲವೊಂದು ಕೆರೆ-ಕಟ್ಟೆಗಳ ನಿರ್ಮಾಣಕ್ಕೆ ಯೋಗ್ಯವಾದ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಇಲ್ಲಿನ ಪ್ರಾಕೃತಿಕವಾದ ಬೆಟ್ಟ-ಗುಡ್ಡಗಳಲ್ಲಿ ಬಿದ್ದು ಹರಿದುಬರುವ ಮಳೆಯ ನೀರು ಹಳ್ಳಕೊಳ್ಳಗಳು ಉಂಟಾಗಿದ್ದು ಅವುಗಳಿಗೆ ಅಡ್ಡಲಾಗಿ ಅನೇಕ ಕೆರೆ-ಕಟ್ಟೆಗಳನ್ನು ನಿರ್ಮಿಸಲಾಗಿದೆ. ಸುಮಾರು ೫೦ ಕೆರೆಗಳು ಈ ತಾಲೂಕಿನಲ್ಲಿವೆ. ಅವುಗಳಲ್ಲಿ ೧೫ ದೊಡ್ಡ ಕೆರೆಗಳು ೩೫ ಸಣ್ಣ ಕೆರೆಗಳು, ಗುಡ್ಡದ ನೇರಲಕೆರೆ, ಬಾಗೂರು ಮೂಡಲ ಮುತ್ತಿನಕೆರೆ, ದೇವಪುರ ಕೆರೆ, ಹೆಗ್ಗೆರೆಯ ಗೌಡನಕೆರೆ, ಸೂಜಿಕಲ್ ಅಮಾನಿಕೆರೆ, ಕಗ್ಗಲಕಟ್ಟೆ ಹೊಸಕೆರೆ, ಬೆಲಗೂರು ಕೆರೆ, ಗಂಜಿಕೆರೆ ಸೇರಿದಂತೆ ಕೆಲವು ಪ್ರಮುಖ ಕೆರೆಗಳು ಕಂಡುಬರುತ್ತವೆ.[೨೩೫] ಇವುಗಳು ಈ ಪರಿಸರದ ಬಹುಮುಖ್ಯ ನೀರಾವರಿ ಮೂಲಗಳಾಗಿವೆ.

ಶಾಸನಗಳು ಹಾಗೂ ಚಾರಿತ್ರಿಕ ದಾಖಲೆಗಳು ಇಲ್ಲಿನ ಕೆಲವು ಕೆರೆಗಳನ್ನು ಕುರಿತು ಉಲ್ಲೇಖಿಸಿರುವುದು ಗಮನಾರ್ಹ. ಅವುಗಳಲ್ಲಿ ಸೆಟ್ಟಿಯ ಕೆರೆ,[೨೩೬] ದೇವರಕೆರೆ,[೨೩೮] ಬಾವನಕೆರೆ,[೨೩೯] ಜಯಗೆರೆ,[೨೪೦] ಕೆಳ್ಳಮಗೆರೆ,[೨೪೧] ಮಾರನಗೌಡನಕಟ್ಟೆ,[೨೪೨] ಕಲ್ಲಗೌವುಡನಕೆರೆ,[೨೪೩] ಬೇವಿನಹಳ್ಳಿ ಹಿರಿಯಕೆರೆ,[೨೪೪] ಕಲ್ಲಕೆರೆ,[೨೪೫] ಬಲ್ಲಾಳಸಮುದ್ರ,[೨೪೬] ಹಾದರಿಕಟ್ಟೆ,[೨೪೭] ಹೆಗ್ಗೆರೆ,[೨೪೮] ಕಂದಿಕೆರೆ,[೨೪೯] ಕಡ್ಲೆಕಂಬ ಸಾಗರ,[೨೫೦] ಕೃಷ್ಣರಾಜಸಮುದ್ರ[೨೫೧] ಮುಂತಾದವುಗಳು ಶಾಸನೋಕ್ತವಾಗಿವೆ. ಇನ್ನು ಈ ತಾಲೂಕಿನ ಜಲವಾಚಿ ಹಾಗೂ ನಿರ್ಮಾಣವಾಚಿ ಸ್ಥಳನಾಮಗಳಿಂದಲೂ ಕೆರೆ-ಕಟ್ಟೆಗಳ ಅಸ್ತಿತ್ವವನ್ನು ಗುರುತಿಸಬಹುದು. ಅಂತಹುಗಳೆಂದರೆ:- ಕಡದಿನಕೆರೆ, ಕಪ್ಪಗೆರೆ, ಕಬ್ಬಿನಕೆರೆ, ಕ್ಯಾದಿಗೆರೆ, ಕೊರಟಗೆರೆ, ಗಂಜಿಗೆರೆ, ಗುಡ್ಡದನೇರಲಕೆರೆ, ಚಿಕ್ಕಬ್ಯಾಲದಕೆರೆ, ತಾರೀಕೆರೆ, ತುಂಬಿನಕೆರೆ, ದೇವಿಗೆರೆ, ದೊಡ್ಡಬ್ಯಾಲದಕೆರೆ, ನಗರಗೆರೆ, ನಾಕೀಕೆರೆ, ನಾಯಿಗೆರೆ, ನೇರಲಕೆರೆ, ಬೋಕಿಕೆರೆ, ಹಂದನಕೆರೆ, ಹಾಗಲಕೆರೆ, ಬುಕ್ಕಸಾಗರ, ಚಿನ್ನಸಮುದ್ರ, ಮಾದಸಮುದ್ರ, ಮೆಂಗಸಂದ್ರ, ಸೋಮಸಂದ್ರ, ಆದ್ರಿಕಟ್ಟೆ, ಕಡಿವಾಣಕಟ್ಟೆ, ಗುತ್ತೀಕಟ್ಟೆ, ಚಿಕ್ಕಕರ್ಪೂರದಕಟ್ಟೆ, ದೊಡ್ಡಕರ್ಪೂರದಕಟ್ಟೆ, ದಳವಾಯಿಕಟ್ಟೆ, ನಾಗನಾಯ್ಕನಕಟ್ಟೆ, ನಾಗರಕಟ್ಟೆ, ಬುರುಡೆಕಟ್ಟೆ, ಮಾವಿನಕಟ್ಟೆ, ಶಿವನೆಕಟ್ಟೆ, ಸೀರನಕಟ್ಟೆ, ಹುಣಸೇಕಟ್ಟೆ, ಕುಂಬಾರಕಟ್ಟೆ, ಹುಲುಕಟ್ಟೆ, ಹೊಸಕಡಮಣಕಟ್ಟೆ ಇತ್ಯಾದಿಗಳ ಅಧ್ಯಯನದಿಂದ ಕೆರೆ-ಕಟ್ಟೆಗಳ ಅಸ್ತಿತ್ವವನ್ನು ಗುರುತಿಸಬಹುದು. ಹೀಗೆ ಶಾಸನಗಳು, ಚಾರಿತ್ರಿಕ ದಾಖಲೆಗಳು ಹಾಗೂ ಸ್ಥಳನಾಮಗಳ ಹಿನ್ನೆಲೆಯಲ್ಲಿ ಇಲ್ಲಿನ ಪ್ರಾಚೀನ ಕೆರೆಗಳ ಬಗ್ಗೆ ಅರಿಯಬಹುದು.

✓ ಹೊಸದುರ್ಗ ತಾಲೂಕಿನ ಪ್ರಾಚೀನವಾದ ಕೆರೆ ದಾಖಲೆಯಾಗಿರುವುದು ನೀರಗುಂದದ 'ದೊಡ್ಡಕೆರೆ'[೨೫೨]. ನೀರಗುಂದದ ಸಿದ್ಧೇಶ್ವರ ದೇವಾಲಯದ ಬಳಿಯಿರುವ ಹೊಯ್ಸಳ ಚಕ್ರವರ್ತಿ ಸೋಮೇಶ್ವರ (ಕ್ರಿ.ಶ. ೧೨೩೩-೬೭)ನ ಕಾಲದ ಶಾಸನದಲ್ಲಿ 'ದೊಡ್ಡಕೆರೆ'ಯು ಉಲ್ಲೇಖವಾಗಿದೆ.[೨೫೩]

ಈ ಶಾಸನೋಕ್ತ ಸಂಗತಿಯಂತೆ 'ನೀರಗುಂದ ಪರಿಸರದ ಯಾವುದೇ ಕೆರೆ ಒಡೆದು ಹೋಗಿದ್ದರೆ, ಎಷ್ಟೋ ವರ್ಷಕಾಲ ಏನೂ ದುರಸ್ತಿ ಕಾಣದೆ ಇದ್ದುದಾದರೆ ನೀರಗುಂದದ ನೆಲ್ಲೆಸೆಟ್ಟಿಯು ಅಂಥವನ್ನು ಜೀರ್ಣೋದ್ಧಾರ ಮಾಡಿಸುತ್ತಿದ್ದನಂತೆ. ಆದ್ದರಿಂದ ಅವನು 'ಒಡಗೆರೆಮಲ್ಲ' ಎಂಬ ಪ್ರಶಸ್ತಿಗೆ ಪಾತ್ರನಾಗಿದ್ದನು. ಈ ವಿಚಾರದಿಂದ ಕೆರೆಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಹಿಂದಿನ ಪ್ರಭುಗಳೂ ಪ್ರಾಂತಪಾಲಕರೂ ಅಲ್ಲದೆ ಪ್ರಜಾಪ್ರಮುಖರೂ ಪ್ರಜೆಗಳೂ ಸಹ ಹೇಗೆ ಆಸಕ್ತಿ ವಹಿಸುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ನೀರಗುಂದ ಗ್ರಾಮದ ಕ್ರಿ.ಶ.೧೧೪೨ರ ಹೊಯ್ಸಳ ಚಕ್ರವರ್ತಿ ೧ನೆಯ ನರಸಿಂಹನ ಕಾಲದ ಶಾಸನ ಈ ಪರಿಸರದ ಕೆರೆನೀರಾವರಿ ವ್ಯವಸ್ಥೆಗೆ ಸಂಬಂಧಿಸಿದಂತೆ ಅನೇಕ ಅಮೂಲ್ಯ ಸಂಗತಿಗಳನ್ನು ನೀಡುತ್ತದೆ.[೨೩೪] 'ಉದ್ಭವ ನರಸಿಂಹಪುರ' ಹೆಸರಿನ ಅಗ್ರಹಾರವಾಗಿದ್ದ ನೀರಗುಂದ ಮಹಾಜನಗಳು ಸಭೆ ಸೇರಿ ರೂಪಿಸಿದ ಒಂದು 'ಸಮಯಪತ್ರ'ದ ಶಾಸನವಾಗಿದೆ. ಅಗ್ರಹಾರದ ಬ್ರಾಹ್ಮಣರಿಗೆ ಬೇರೆ ಬೇರೆಡೆ ಇದ್ದ ಭೂಮಿಗಳನ್ನು ಅವುಗಳ ಆದಾಯವನ್ನು ಅನುಸರಿಸಿ ಸಮಾನ ಆದಾಯವಿರುವಂತೆ ಮಾಡಿದ ನಾಲ್ಕು ತತ್ತು(ಭಾಗ)ಗಳ ವಿಂಗಡಣೆ, ಅವುಗಳಿಗೆ ಸಲ್ಲಿಸಬೇಕಾದ ತೆರಿಗೆ ಪ್ರಮಾಣ, ಇತ್ಯಾದಿಗಳ ಬಗ್ಗೆ ವಿಶೇಷ ಅಂಶಗಳು ಮೊತ್ತ ಮೊದಲ ಬಾರಿಗೆ ಇದರಲ್ಲಿ ಕಾಣಸಿಗುತ್ತವೆ. ನೀರಾವರಿಗೆ ಸಂಬಂಧಿಸಿದ ಅಂಶಗಳನ್ನು ಇಲ್ಲಿ ಗಮನಿಸಬಹುದು; ನೀರಾವರಿ ಇಲ್ಲದ ತತ್ತಿನವರು ನೀರಾವರಿ ಇರುವ ತತ್ತಿನಿಂದ ನೀರಿನ ಅನುಕೂಲ ಪಡೆಯಬಹುದಿತ್ತು. ಅದಕ್ಕೆ ಯಾರೂ ಅಡ್ಡಿಪಡಿಸು ವಂತಿರಲಿಲ್ಲ. ನೀರಾವರಿಗಾಗಿ ಕಾಲುವೆ ತೆರೆಸಲು ಯಾರೂ ಅಡ್ಡಿ ಮಾಡದೆ ಸಹಕರಿಸಿ ಆ ಕಾಲುವೆ ತೆರೆಯುವುದರಿಂದ ನಷ್ಟವಾಗುವ ಭೂಮಿಗೆ ಪ್ರತಿಯಾಗಿ ಕಾಲುವೆ ತೆಗೆದವರಿಂದ ಸೂಕ್ತ ಪರಿಹಾರ ಪಡೆಯಬಹುದಿತ್ತು. ಇದಲ್ಲದೆ ಎಲ್ಲಿಯಾದರೂ ಕೆರೆಯನ್ನು ನಿರ್ಮಾಣ ಮಾಡುವುದಾದರೆ ಮೊದಲು ಅದರ ನೀರಿನ ನ್ಯಾಯಯುತ ಸಂಚಿಕೆಯ ಒಡಂಬಡಿಕೆಯಾಗ ಬೇಕಾಗಿತ್ತು. ಹಾಗಿಲ್ಲದೆ ಹೋದರೆ, ಕೆರೆಯ ನಿರ್ಮಾಣಕ್ಕೆ ಅನುಮತಿ ದೊರೆಯುವಂತಿರಲಿಲ್ಲ. ಇದರಿಂದ ಅಗ್ರಹಾರದ ಭೂಮಿ ಸಾಗುವಳಿಯಾಗಿ ಕೆರೆಯ ನೀರಾವರಿ ವ್ಯವಸ್ಥೆಯನ್ನೂ ಮಾಡಿಕೊಳ್ಳಲು ಆಗಿನ ಅಗ್ರಹಾರಗಳ ಸ್ವಯಂ ಆಡಳಿತ ಕೂಡಾ ಹೇಗೆ ಪ್ರೋತ್ಸಾಹಕರ ನೀತಿಯನ್ನು ಇರಿಸಿಕೊಂಡಿತ್ತು ಎಂದು ವ್ಯಕ್ತವಾಗುತ್ತದೆ. ಕೃಷಿಯ ಉತ್ಪನ್ನವನ್ನು ಪೂರ್ಣ ಪ್ರಮಾಣದಲ್ಲಿ ಪಡೆಯಲು ನೀರಾವರಿ ವ್ಯವಸ್ಥೆ ಹೇಗೆ ಅತ್ಯಗತ್ಯವೆನಿಸಿತ್ತು ಮತ್ತು ಅದಕ್ಕೆ ಹೇಗೆ ಒತ್ತು ಕೊಡಲಾಗಿತ್ತು ಎಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೨೩೫] ಹೊಸದುರ್ಗ ತಾಲೂಕು ಪರಿಸರದಲ್ಲಿ ಹೊಯ್ಸಳ ರಾಜವಂಶವು ಕೆರೆಗಳ ಅಭಿವೃದ್ಧಿ ಹಾಗೂ ನೀರಾವರಿಗೆ ನೀಡಿದ್ದ ಪ್ರಾಧಾನ್ಯತೆಯನ್ನು ಈ ಮೇಲಿನ ಶಾಸನಗಳು ಸಾದರಪಡಿಸುತ್ತವೆ. ನಂತರದಲ್ಲಿ ವಿಜಯನಗರ ಕಾಲದ ಯಾವ ಕುರುಹುಗಳು ಗೋಚರಿಸುವುದಿಲ್ಲ.

ಮತ್ತೋಡನ್ನು ಕೇಂದ್ರವಾಗಿಸಿಕೊಂಡು ಕ್ರಿ.ಶ. ೧೭ನೇ ಶತಮಾನದ ಆರಂಭದಿಂದ ೧೮ನೇ ಶತಮಾನದ ಉತ್ತರಾರ್ಧದವರೆಗೆ ಆಳಿದ ಮತ್ತೋಡು ನಾಯಕ ಅರಸರು ಈ ಪರಿಸರದ ಕೆರೆ

ನೀರಾವರಿಗೆ ನೀಡಿದ್ದ ಪ್ರೋತ್ಸಾಹವನ್ನು ಕೆಲವು ದಾಖಲೆಗಳು ಸಮರ್ಥಿಸುತ್ತವೆ. ಇವರು ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಕೃಷಿಗಾಗಿ ಕೆರೆ ಕಾಲುವೆಗಳನ್ನು ಕಟ್ಟಿಸಿದ್ದಲ್ಲದೆ, ಹಳೆಯದಾದ ಮತ್ತು ಹೂಳು ತುಂಬಿದ ಅನೇಕ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರು. ಮತ್ತೋಡಿನಲ್ಲಿ ಇವರ ಕಾಲದಲ್ಲಿ ಮುಖ್ಯವಾದ ಎರಡು ಕೆರೆಗಳಿದ್ದು ಅದರಲ್ಲಿ ಹಳೆಕೆರೆ ಬಹುದೊಡ್ಡದಾಗಿದೆ.[೨೫೬] ಕೆರೆಯ ನೀರನ್ನು ಕೃಷಿಗೆ ಬಳಕೆ ಮಾಡಿಕೊಳ್ಳುವುದು ಸಾಧಾರಣ ಸಂಗತಿಯಾದರೂ, ಮತ್ತೋಡಿನಲ್ಲಿ ಕೋಟೆಯನ್ನು ಸುತ್ತುವರೆದಿದ್ದ ಕಂದಕಗಳನ್ನು ತುಂಬಲೂ ಬಳಕೆಯಾಗುತ್ತಿತ್ತೆಂದೂ ಹೇಳಲಾಗಿರುವುದು ಒಂದು ವಿಶೇಷ ಸಂಗತಿ ಎನ್ನಬಹುದು. ಕೆರೆಯ ತೂಬನ್ನು ಎತ್ತಿದರೆ ಕಂದಕ ನೀರಿನಿಂದ ಭರ್ತಿಯಾಗುವಂತೆ ತಾಂತ್ರಿಕ ಕೌಶಲದಿಂದ ನಿರ್ಮಿಸ ಲಾಗಿತ್ತು. ವಿಸ್ತಾರವಾದ ಈ ಕೆರೆ ೧೨ ವರ್ಷಕ್ಕೊಮ್ಮೆ ತುಂಬುವುದಾಗಿ ಹೇಳುತ್ತಾರೆ.[೨೫೭] ಮತ್ತೋಡಿನ ಕೆರೆಯ ಬಗ್ಗೆ ಈಗ್ಗೆ ಎರಡು ಶತಮಾನಗಳಷ್ಟು ಹಿಂದೆ ಬ್ರಿಟೀಷ್ ಸರ್ವೇಕ್ಷಣಾಧಿಕಾರಿ ಫ್ರಾನ್ಸೀಸ್ ಬುಕಾನನ್ ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯವೆನಿಸುತ್ತದೆ. "ಮತ್ತೋಡು ಕಣಿವೆಯಲ್ಲಿ ನೆಲೆಸಿದೆ, ಅದರ ನೆಲೆಯಲ್ಲೇ ಅಲ್ಪ ಖರ್ಚಿನಲ್ಲೇ ಚನ್ನಾಗಿ ಅಭಿವೃದ್ಧಿಪಡಿಸಬಹುದಾದ ಒಂದು ಒಳ್ಳೆಯ ಜಲಾಶಯವಿದೆ. ಮಳೆಯಗಾಲ ಬೇಗನೇ ಪ್ರಾರಂಭವಾದರೆ ಈ ಕೆರೆ ವರ್ಷದಲ್ಲಿ ಎರಡು ಬೆಳೆಗಳಿಗೆ ನೀರುಣಿಸಬಲ್ಲದು; ಒಂದು ಬೆಳೆಗಂತೂ ಎಂದಿಗೂ ಮೋಸವಿಲ್ಲ. ಅವಗಡಗಳಿಂದ ತಾವು ಸುರಕ್ಷಿತವಾಗಿರಬೇಕೆಂದು ರೈತರು ಕೆರೆ ಭರ್ತಿಯಾಗುವವರೆಗೂ ವ್ಯವಸಾಯವನ್ನು ಪ್ರಾರಂಭಿಸುವುದಿಲ್ಲ".[೨೫೮]

ಕ್ರಿ.ಶ. ೧೫ನೇ ಶತಮಾನದಲ್ಲಿ ಹೊಸದುರ್ಗ ತಾಲೂಕು ಪರಿಸರದಲ್ಲಿ ಆಳಿದ ಕೆಲವು ಪ್ರಮುಖ ಪಾಳೆಯಪಟ್ಟುಗಳಲ್ಲಿ 'ಬೂದಿಹಾಳು ಪಾಳೆಯಪಟ್ಟು' ಒಂದು. ಇದರ ಪ್ರಸಿದ್ಧ ದೊರೆ ಸಿರುಮನಾಯಕ. ಚಿಕ್ಕ ಪಾಳೆಯ ಪಟ್ಟಾಗಿದ್ದರೂ ಬೂದಿಹಾಳು ಸಂಮೃದ್ಧ ಕೃಷಿಯ ರಾಜ್ಯವಾಗಿತ್ತು. ಈ ರಾಜ್ಯ ತೆಂಗು, ಅಡಿಕೆ, ಬಾಳೆ, ಕಿತ್ತಳೆ, ಹಲಸು ಮುಂತಾದ ತೋಟಗಳಿಂದ ತುಂಬಿ ಸಮೃದ್ಧವಾಗಿತ್ತೆಂದು ಕವಿಗಳು ಹೇಳಿದ್ದಾರೆ. ಸಮೃದ್ಧ ಕೃಷಿಯಿಂದ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಕರದ ಆದಾಯವೂ ಇದ್ದಿರಬೇಕು. ಚಿಕ್ಕಂಗಳ, ಹಿರಿಯಂಗಳ ಎಂಬುವುಗಳಿಂದ ಲಕ್ಷ ತೆರಿಗೆ ಸಲ್ಲುತ್ತಿತ್ತೆಂದು ಹೇಳಲಾಗಿದೆ. ಆ ಗ್ರಾಮಗಳ ಅಂಥ ಬೃಹತ್ ಮೊತ್ತದ ಆದಾಯವನ್ನು ನೀಡು ವಂತಾಗಿದ್ದುದಕ್ಕೆ ಅದರ ಕೃಷಿ ಉತ್ಪನ್ನದ ಪ್ರಮಾಣವೇ ಕಾರಣ ಎಂದೂ, ಅಂಥ ದೊಡ್ಡ ಪ್ರಮಾಣದ ಉತ್ಪನ್ನಕ್ಕೆ ಪ್ರಾಯಶಃ ಅವುಗಳ ನೆರೆಯ ಕೆರೆಗಳೇ ಕಾರಣವೆಂದೂ ಭಾವಿಸಿದಲ್ಲಿ ತಪ್ಪಾಗಲಾರದು. ಹೊಸದುರ್ಗ ಪ್ರಾಂತ್ಯದಲ್ಲಿ ಅನೇಕ ಉತ್ತಮ ಕೆರೆಗಳಿವೆ. ಅವುಗಳಲ್ಲಿ ಬಹುತೇಕ ಕೆರೆಗಳು ಸಿರುಮಯ್ಯನ ವಂಶದ ಆಳ್ವಿಕೆಯ ಕಾಲದಲ್ಲಿ ರಚನೆಗೊಂಡವು ಎಂದು ಫ್ರಾನ್ಸಿಸ್ ಬುಕನನ್ ಹೇಳಿದ್ದಾನೆ.[೨೫೯]

ಈ ಮೇಲೆ ಸಾದರಪಡಿಸಿದ ಅನೇಕ ಅಂಶಗಳು ಹೊಸದುರ್ಗ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಇದ್ದ ಕೆರೆ-ಕಟ್ಟೆಗಳ ನೀರಾವರಿ ವ್ಯವಸ್ಥೆಯ ಸಮಗ್ರ ನೋಟವನ್ನು ನೀಡುತ್ತವೆ. ಕೇವಲ ಸಾಹಿತ್ಯ, ಶಾಸನ ಹಾಗೂ ಅನುಷಂಗಿಕ ಆಕರಗಳನ್ನಷ್ಟೇ ಈ ಅಧ್ಯಯನಕ್ಕೆ

ಬಳಸಿಕೊಳ್ಳಲಾಗಿದೆ. ಕಾರಣ ಈ ತಾಲೂಕಿನ ಕ್ಷೇತ್ರಕಾರ್ಯದಲ್ಲಿ ಕೆರೆಗಳ ಪ್ರಾಚೀನ ರೂಪಗಳು/ಅವಶೇಷಗಳು ಉಳಿದುಬಂದಿಲ್ಲ; ಬಹುತೇಕ ಎಲ್ಲಾ ಕೆರೆಗಳನ್ನು ಹೊಸದಾಗಿ ಜೀರ್ಣೋದ್ಧಾರ ಮಾಡಿದ್ದಾರೆ. ಒಟ್ಟಾರೆ ಇಲ್ಲಿನ ಪ್ರಾಚೀನ ಕೆರೆ ನೀರಾವರಿಯಲ್ಲಿ ಹೊಯ್ಸಳರು ಹಾಗೂ ವಿಜಯನಗರೋತ್ತರ ಮತ್ತೋಡು, ಬೂದಿಹಾಳು ನಾಯಕ ಅರಸರ ಪಾತ್ರ ಅದ್ವಿತೀಯವಾದುದು.

೫.೪. ಮೂರ್ತಿಶಿಲ್ಪ

ಭಾರತೀಯ ಶಿಲ್ಪಕಲೆಯು ಜಗತ್ತಿನ ಶಿಲ್ಪಕಲೆಯ ಇತಿಹಾಸದಲ್ಲಿ ಉನ್ನತವಾದ ಸ್ಥಾನಮಾನವನ್ನು ಪಡೆದುಕೊಂಡಿದೆ. ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ಅರತ್ತನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೩೦] 'ಮೂರ್ತಿ' ಎಂಬುದಕ್ಕೆ ಪರ್ಯಾಯವಾಗಿ ಬಳಸಿರುವ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಎಂಬ ಪದಗಳು 'ಅದೊಂದು ಭೌತಿಕವಸ್ತು' ಎಂಬಂತೆ ಅರ್ಥ ಕೊಡುತ್ತವೆ.[೩೧] ಜಗತ್ ಸೃಷ್ಟಿಯು ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಪ್ರಾರಂಭವಾಗಿದೆಯೆಂದು ವೇದವು ಹೇಳಿದೆ. ಜಗತ್ ಸೃಷ್ಟಿಯನ್ನು ಜಗತ್ ಶಿಲ್ಪ ಎಂದು, ಈ ಜಗತ್ತಿನ ಸೃಷ್ಟಿಕರ್ತನನ್ನು ಜಗತ್ ಶಿಲ್ಪಿ ಎಂದು ವರ್ಣಿಸಿರುವುದುಂಟು.[೩೨]

ಶಿಲ್ಪ ಶಬ್ದವು 'ಶೀಲ ಸಮಾಧೌ' ಎಂಬ ಧಾತುವಿನಿಂದ ಉತ್ಪತ್ತಿಯಾಗಿದ್ದು, ಸಮಾಧಿ ಎಂಬ ಅರ್ಥವನ್ನು ಕೊಡುವ ಈ ಧಾತುವು ತಪಸ್ಸನ್ನು ಸೂಚಿಸುತ್ತದೆ.[೩೩]

ಶಿಲ್ಪವು ಬಹು ವ್ಯಾಪಕವಾದದ್ದು ಇದನ್ನು 'ದೇವಶಿಲ್ಪ' ಮತ್ತು 'ಮಾನವ ಶಿಲ್ಪ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.[೩೪] ದೇವ ಶಿಲ್ಪಗಳು ಎಂದರೆ ದೇವ ಸಂಬಂಧ ಇರಿಸಿಕೊಂಡಿರುವ ಶಿಲ್ಪಗಳು-ಯಜ್ಞವೇದಿ, ಯಜ್ಞಕುಂಡ, ಯಜ್ಞಪಾತ್ರೆ, ಯಜ್ಞಶಾಲೆ, ದೇವಾಲಯ, ದೇವಮೂರ್ತಿ, ದೇವೋಪಕರಣ, ಪೂಜಾಪಾತ್ರೆ, ಸುವರ್ಣಾಲಂಕಾರ, ರಥ, ಆಯುಧಗಳು, ಯಜ್ಞ ಮತ್ತು ಸುವರ್ಣ, ತಾಮ್ರ, ಕಬ್ಬಿಣ, ಮರ, ಕಲ್ಲು ಎಂಬ ಪಂಚವಿಧ ವಸ್ತುಗಳಲ್ಲಿ ದೇವಾಲಯಕ್ಕೆ ಯಜ್ಞ ಮತ್ತು ಪೂಜೆಗೆ ಸಂಬಂಧಿಸಿದಂತೆ ನಿರ್ಮಿಸುವ ಶಿಲ್ಪಗಳು 'ದೇವಶಿಲ್ಪ' ಗಳೆಂದು ಪರಿಗಣಿಸಲ್ಪಡುತ್ತವೆ.[೩೫] ಪ್ರಪಂಚದಲ್ಲಿ ಮಾನವನ ಉಪಯೋಗಾರ್ಥವಾಗಿ ಅವನ ಬದುಕನ್ನು ಸುಖಗೊಳಿಸಲು ಮತ್ತು ಅವನ ಆತ್ಮದ ಸಂಸ್ಕರಣೆಗೆ ಅವಶ್ಯಕವಾಗಿ ಪಂಚವಿಧ ಶಿಲ್ಪಗಳನ್ನು ನಡೆಸಲಾಗುತ್ತದೆ. ಇವು ಇಹದಲ್ಲಿ ಮನುಷ್ಯನ ಜೀವನವು ಸುಖಮಯವಾಗುವಂತೆ ನೆರವಾಗುತ್ತವೆ. ಇಂತಹ ಮನುಷ್ಯೋಪಯೋಗಿ ವಸ್ತು ನಿರ್ಮಾಣವು 'ಮಾನವಶಿಲ್ಪ' ಎಂದು ಕರೆಯಲ್ಪಡುತ್ತದೆ.[೩೬] ಹೀಗೆ ದೇವ-ಮಾನವ ಶಿಲ್ಪಗಳು ಮನುಷ್ಯನ ಇಹ-ಪರ ಬದುಕನ್ನು ಸುಖಮಯಗೊಳಿಸುತ್ತವೆ. ಶಿಲ್ಪವು ಮಾನವನ ಬಹಿರಂಗ-ಅಂತರಂಗಗಳನ್ನು ಸಂಸ್ಕರಿಸುವ ಪ್ರಬಲಶಕ್ತಿಯಾಗಿದೆ.

ಭಾರತೀಯ ವಾಸ್ತು, ಮೂರ್ತಿ, ಚಿತ್ರಕಲೆಗಳಿಗೆ ಸಂಬಂಧಿಸಿದ ಅಧ್ಯಯನವನ್ನು 'ಶಿಲ್ಪಶಾಸ್ತ್ರ'ವೆಂದು ಗುರುತಿಸಲಾಗುತ್ತದೆ. ಮೂರ್ತಿಶಿಲ್ಪವನ್ನು ಕುರಿತು ಶಾಸ್ತ್ರೀಯ ಅಧ್ಯಯನ

ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದು ಕರೆಯಲಾಗುತ್ತದೆ. ಮೂರ್ತಿಶಿಲ್ಪ ವನ್ನುದ್ದೇಶಿಸಿ ಶಾಸ್ತ್ರೀಯವಾಗಿ ಹೇಳುವ ಶಿಲ್ಪಶಾಸ್ತ್ರ ಗ್ರಂಥಗಳನ್ನು ಕಾಣಬಹುದು. ಇದುವರೆಗೂ ಸುಮಾರು ನಾಲ್ಕುನೂರು ಶಿಲ್ಪಶಾಸ್ತ್ರಗಳ ಹೆಸರುಗಳೂ ಲಭಿಸಿದರೂ ಸಂಸ್ಕೃತ, ಹಿಂದಿ, ತಮಿಳು, ತೆಲುಗು, ಇಂಗ್ಲೀಷ್ ಮುಂತಾದ ಎಲ್ಲಾ ಭಾಷೆಗಳಲ್ಲೂ ಸೇರಿ ಸುಮಾರು ೨೫ ಕೃತಿಗಳು ಪ್ರಕಟಗೊಂಡಿವೆ.[೨೭] ಕೆಲವು ಶಿಲ್ಪಶಾಸ್ತ್ರ ಕೃತಿಗಳನ್ನು ಹೀಗೆ ಉಲ್ಲೇಖಿಸಬಹುದು–ಮಾನಸಾರ ಋಷಿಯ 'ಮಾನಸಾರ ಶಿಲ್ಪಶಾಸ್ತ್ರ', ಭುವನ ದೇವಾಚಾರ್ಯನ 'ಅಪರಾಜಿತ ಪೃಚ್ಛ', ಅತ್ರಿಯ 'ಆತ್ರೇಯ ತಿಲಕ', ಕಶ್ಯಪ ಮಹರ್ಷಿಯ 'ಕಾಶ್ಯಪ ಶಿಲ್ಪಶಾಸ್ತ್ರ', ಅಗಸ್ತ್ಯರ 'ಸಕಲಾಧಿಕಾರ' ಮತ್ತು 'ಚಿತ್ರಾಗಸ್ತ್ಯ', ಮಯಮಹರ್ಷಿಯ 'ಮಯಮತ', 'ಮಯವಾಸ್ತು', 'ಮಯಶಿಲ್ಪ', ಮತ್ತು 'ವಿಶ್ವಕರ್ಮ ಪ್ರಕಾಶ', ಸಾರಸ್ವತೀಯ 'ಚಿತ್ರಕರ್ಮಶಾಸ್ತ್ರ', 'ಐದ್ರಂ', ಮಂಡನ ಶಾಸ್ತ್ರಗಳೆಂದು ಹೆಸರಾಗಿರುವ ಮಂಡನ ಸೂತ್ರಧಾರನ 'ದೇವತಾಮೂರ್ತಿ ಪ್ರಕರಣಂ', 'ರೂಪಮಂಡನ', 'ಪ್ರಾಸಾದಮಂಡನ', ಇತ್ಯಾದಿ ಶಿಲ್ಪಶಾಸ್ತ್ರ ಕೃತಿಗಳು ಕಂಡುಬರುತ್ತವೆ.[೨೮]

ಪ್ರಾಚೀನ ಈಜಿಪ್ಟ್, ಚೈನಾ, ಅಸ್ಸೀರಿಯಾ, ಬ್ಯಾಬಿಲೋನಿಯಾ ಮತ್ತು ಗ್ರೀಕ್ ದೇಶದವರು ಶಿಲ್ಪಕಲೆಯಲ್ಲಿ ನಿಷ್ಣಾತರಾಗಿದ್ದರು. ಈಜಿಪ್ಟ್ ದೇಶದವರು 'ರ' ಎಂಬ ಸೂರ್ಯ ದೇವತೆಯ ಪ್ರತಿಮೆ ಮಾಡಿ ಪೂಜಿಸುತ್ತಿದ್ದರೆಂದು ತಿಳಿದುಬಂದಿದೆ.[೨೯] ಕ್ರಿಪೂ. ೧೨೦೦ ರಷ್ಟು ಹಿಂದೆಯೇ ಚೀಣಾದೇಶದಲ್ಲಿ ಮೂರ್ತಿಶಿಲ್ಪವು ಜನ್ಮವೆತ್ತಿದ್ದಿತು. ಏಗಿಯನ್ ಸಂಸ್ಕೃತಿಗೆ ಸಂಬಂಧಪಟ್ಟ ಮೈಸೀನೀಯವರು ವಿಗ್ರಹರಾಧಕರಾಗಿದುದರಿಂದ ಮೂರ್ತಿ ಸೃಷ್ಟಿಯನ್ನು ಗ್ರೀಸಿನಲ್ಲಿ ಪ್ರಾರಂಭಿಸಿದ್ದರು. ಇವರು 'ರೀ' ಎಂಬ ದೇವತೆಯನ್ನೂ 'ಜ್ಯೂಸ್' ದೇವತೆಯ ಪುತ್ರನನ್ನೂ ಆರಾಧಿಸುತ್ತಿದ್ದರೆಂದು ತಿಳಿದುಬಂದಿದೆ. ಅಂತೂ ಕ್ರಿಪೂ. ೬ನೆಯ ಶತಮಾನದ ಹೊತ್ತಿಗೆ ಗ್ರೀಕ್ ದೇಶದಲ್ಲಿ ಮೂರ್ತಿಶಿಲ್ಪವು ತನ್ನ ಶಿಖರವನ್ನೇರಿತ್ತು.[೩೦]

ಭಾರತದ ಇತಿಹಾಸದಲ್ಲಿ ಶಿಲ್ಪಗಳ ಪ್ರಾಚೀನ ಸಿಂಧೂಕೊಳ್ಳದ ನಾಗರೀಕತೆ (ಕ್ರಿಪೂ. ೨೫೦೦–೧೨೦೦)ಯಷ್ಟು ಹಿಂದೆ ಹೋಗುತ್ತದೆ. ಈ ನಾಗರೀಕತೆಗೆ ಸಂಬಂಧಿಸಿದ ನೆಲೆಗಳಲ್ಲಿ ನಡೆಸಿದ ಉತ್ಖನನದಲ್ಲಿ ಸುಮಾರು ೪೦೦೦ದಷ್ಟು ಮುದ್ರಿಕೆಗಳು ದೊರೆತಿವೆ.[೩೧] ಮೊಹೆಂಜೋ ದಾರೋದಲ್ಲಿ ಜಾನ್ ಮಾರ್ಷಲ್‌ರಿಂದ ಬೆಳಕಿಗೆ ಬಂದ ಇತ್ತೀಚೆಗೆ 'ಶಿವ'ನೆಂದು ಗುರುತಿಸಲ್ಪಟ್ಟ ಮುದ್ರಿಕೆಗಳ ಮೇಲಿನ ಮಹಾಯೋಗಿ ಮನುಷ್ಯರ ಮತ್ತು ಪ್ರಾಣಿಗಳ ರೂಪಗಳು ಗಮನಾರ್ಹ ವಾದವುಗಳು. ಇದೇ ಪ್ರದೇಶದಲ್ಲಿ ಸುಣ್ಣದ ಕಲ್ಲುಗಳಿಂದ ಮತ್ತು ಸುಡಾವೆ ಮಣ್ಣಿನ ಪ್ರತಿಮೆಗಳು ದೊರೆತಿವೆ.

ವೇದಗಳ ಕಾಲದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯತೆ ಇರಲಿಲ್ಲವೆಂದೂ ಪ್ರಕೃತಿ ಶಕ್ತಿಗಳನ್ನೇ ಉಪಾಸಿಸಲಾಗುತ್ತಿತ್ತೆಂದೂ ಹೇಳಲಾಗುತ್ತದೆ. ಇದರಲ್ಲಿ ನಿಜಾಂಶವಿದ್ದರೂ ಮೂರ್ತಿಶಿಲ್ಪ/ವಿಗ್ರಹಗಳಿಗೆ ಸ್ಥಾನವಿದ್ದಂತೆ ತೋರುತ್ತದೆ. ಅದಕ್ಕೆ ವೈದಿಕ ಸಾಹಿತ್ಯದಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ.

ಆಯು ರ್ವೇದಶ್ಚಿಕಿತ್ಸಾಶಾಸ್ತ್ರಂ ಋಗ್ವೇದಸ್ಯೋಪವೇದಃ ।
ಧನುರ್ವೇದೋ ಯುದ್ಧಶಾಸ್ತ್ರಂ ಯಜುರ್ವೇದಸ್ಯೋಪ ವೇದಃ ॥

ಗಾಂಧರ್ವವೇದಸ್ಸಂಗೀತಶಾಸ್ತ್ರಂ ಸಾಮವೇದಸ್ಯೂಪವೇದಃ ।
ಸ್ಥಾಪತ್ಯವೇದೋ ವಿಶ್ವಕರ್ಮಾದಿ ಶಿಲ್ಪಶಾಸ್ತ್ರಂ
– ಅಥರ್ವವೇದಸ್ಯೋಪವೇದಃ[೨೨]

ಅಥರ್ವಣವೇದದ ಉಪವೇದವು ಸ್ಥಾಪತ್ಯವೇದಾಗಿದ್ದು ಇದು ವಿಶ್ವಕರ್ಮಾದಿಗಳಿಂದ ರಚಿತವಾಗಿರುವ ಶಿಲ್ಪಶಾಸ್ತ್ರವೆಂದೇ ಪ್ರಖ್ಯಾತವಾಗಿದ್ದು ಇದರಲ್ಲಿ ದೇವಾಲಯ, ಕೋಟೆ–ಕೊತ್ತಲಗಳ ನಿರ್ಮಾಣ, ಆಯುಧ ತಂತ್ರಜ್ಞಾನ ಇತ್ಯಾದಿ ಅನೇಕ ವಿಷಯಗಳನ್ನು ವಿವರಿಸಲಾಗಿದೆ.[೨೩]

ಭಾರತೀಯ ಮೂರ್ತಿಶಿಲ್ಪವು ಮೌರ್ಯರ ಕಾಲದಲ್ಲಿ (ಕ್ರಿ.ಪೂ. ೩೨೪–೧೮೮) ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ಮೌರ್ಯರ ಕಾಲದ ಬಹುಮುಖ್ಯವಾದ ಶಿಲ್ಪಗಳೆಂದರೆ ಅಶೋಕ ಸ್ತಂಭಗಳ ಮೇಲಿನ ಪ್ರಾಣಿಯ ವಿಗ್ರಹಗಳು. ಶುಂಗರ ಕಾಲದಲ್ಲಿ (ಕ್ರಿ.ಪೂ. ೧೮೮–೭೩) ಶಿಲ್ಪ ರಚನೆಯು ಪ್ರಾಚೀನತೆಯನ್ನು ಕಳೆದುಕೊಂಡು ಹೊಸ ರೂಪವನ್ನು ಪಡೆಯಿತೆನ್ನಬಹುದು. ಈ ಕಾಲದ ಗಮನಾರ್ಹ ಶಿಲ್ಪಾವಶೇಷಗಳೆಂದರೆ ಕಲ್ಕತ್ತಾದ ವಸ್ತು ಸಂಗ್ರಹಾಲಯದಲ್ಲಿ ಇಡಲಾದ ಕಮಲದ ಸಾಲುಗಳಿಂದ ಅಲಂಕೃತಗೊಂಡ ಬಾರ್‌ಹುತ್‌ದ ಶಿಲಾವೇದಿಕೆ, ಕಮಲಪದಕದಲ್ಲಿ ಮಾನವ ಮುಖ ಮತ್ತು ಜಾತಕ ಶಿಲ್ಪಗಳನ್ನು ಉದಾಹರಿಸಬಹುದು.[೨೪] ಕುಶಾನರ ಕಾಲದ (ಕ್ರಿ.ಪೂ. ೨೮ ರಿಂದ ಕ್ರಿ.ಶ. ೨೦೦) ಶಿಲ್ಪರಚನೆಯಲ್ಲಿ ಬೌದ್ಧಧರ್ಮವು ಹೀನಯಾನದಿಂದ ಮಹಾಯಾನಕ್ಕೆ ಬದಲಾದಾಗ ಬುದ್ಧನ ಮೂರ್ತಿಶಿಲ್ಪವು 'ಗಾಂಧಾರ' ಮತ್ತು 'ಮಥುರಾ' ಶಿಲ್ಪಶೈಲಿಗಳಲ್ಲಿ ಕಾಣಿಸಿಕೊಂಡಿತು.[೨೫]

ಗುಪ್ತರ ಕಾಲದಲ್ಲಿ ವಿಷ್ಣು, ಶಿವ ಮತ್ತು ಇತರ ಹಿಂದೂ ದೇವತೆಗಳ ವಿಗ್ರಹಗಳು ಕಂಡುಬರುತ್ತವೆ. ದೇವಗಢದ ದಶಾವತಾರ ಗುಹಾಲಯ, ಅಜಂತಾ, ಉದಯಗಿರಿಯ ಬಳಿ ಇರುವ ಕಾರ್ಲೆಗಳಲ್ಲಿಯ ಯಕ್ಷ ಶಿಲ್ಪಗಳು ಗುಪ್ತಕಾಲದ ಬಹುಮುಖ್ಯ ಉದಾಹರಣೆಗಳು.[೨೬]

ಕರ್ನಾಟಕದಲ್ಲಿ ಶಾತವಾಹನರ ಶಿಲ್ಪಗಳು ಕೆಲವು ನೆಲೆಗಳಲ್ಲಿ ಕಂಡುಬಂದಿವೆ. ಸನ್ನತಿಯ ಉತ್ಖನನದಲ್ಲಿ ಬೌದ್ಧ ಶಿಲ್ಪಾವಶೇಷಗಳು ಲಭ್ಯವಾಗಿವೆ.[೨೭] ವಡಗಾಂವ್ ಮಾಧವಪುರ ಉತ್ಖನನದಲ್ಲಿ ಬುದ್ಧನು ಉಪದೇಶ ಕೊಡುತ್ತಿರುವ ಐದು ಚಿತ್ರಫಲಕಗಳನ್ನು ಇಲ್ಲಿ ಉದಾಹರಿಸಬಹುದು.[೨೮] ಆದಿಕದಂಬರ ಶಿಲ್ಪಗಳಾದ ಗೋಕರ್ಣ ಮತ್ತು ಇಡುಗುಂಜಿಯಲ್ಲಿಯ ದ್ವಿಭುಜ ಗಣಪತಿ, ಹಲಸಿ, ಕುಬಟೂರುಗಳಲ್ಲಿಯ ನರಸಿಂಹ ಶಿಲ್ಪಗಳು, ಶಿರಹಟ್ಟಿ ತಾಲೂಕಿನ ದೇವಿನಹಾಳ ಮಹಿಷಮರ್ಧಿನಿ ಶಿಲ್ಪಗಳನ್ನು ಗಮನಿಸಬಹುದು.[೨೯] ಗಂಗರ ಶಿಲ್ಪ ಕೊಡುಗೆಯಲ್ಲಿ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಮಹತ್ವದ್ದಾಗಿದೆ. ಬಾದಾಮಿ ಚಾಲುಕ್ಯರ ಆಶ್ರಯದಲ್ಲಿ ಮೂರ್ತಿಶಿಲ್ಪಗಳಲ್ಲಿ ಅಸಾಧಾರಣ ಬೆಳವಣಿಗೆಯಾದುದನ್ನು ಗಮನಿಸುತ್ತೇವೆ. ಬಾದಾಮಿ, ಮಹಾಕೂಟ, ಐಹೊಳೆ, ಆಲಂಪುರ ಮತ್ತು ಮಹಾನಂದಿಗಳಲ್ಲಿ ಇವರ ಮೂರ್ತಿಶಿಲ್ಪಗಳನ್ನು ಮಹಾರಾಷ್ಟ್ರದ ಎಲಿಫೆಂಟಾ, ಎಲ್ಲೋರಾ, ಕರ್ನಾಟಕದ ಗದಗ, ರೋಣ, ನಿಡಗುಂದಿ ಮುಂತಾದ ಕಡೆಗಳಲ್ಲಿ ಕಾಣಬಹುದು.[೩೦] ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಶಿಲ್ಪಗಳು ಸೂಕ್ಷ್ಮ ಕೆತ್ತನೆಯಿಂದಲೂ ಹೆಚ್ಚು ಅಲಂಕರಣೆಗಳಿಂದಲೂ ನಯನ ಮನೋಹರವಾಗಿವೆ. ಇವರ ಕಾಲದ ಶಿಲ್ಪಗಳು ಬಳಸಿದ ಮೆದು ಬಳಪದ ಕಲ್ಲು ಅವರ ಸೂಕ್ಷ್ಮ ಕೆತ್ತನೆಗೆ ಅನುಕೂಲವಾಯಿತು. ಹೊಯ್ಸಳ ಕಾಲದ

ಪ್ರಮುಖ ಶಿಲ್ಪಗಳೆಂದರೆ ಕೊಂಡಜ್ಜಿಯ ಅಲ್ಲಾಳನಾಥ, ಬೇಲೂರಿನ ಚನ್ನಕೇಶವ ದೇವಾಲಯದ ಚನ್ನಕೇಶವ ಶಿಲ್ಪ, ಕೈದಾಳದ ಕೇಶವನ ಶಿಲ್ಪ, ಸೋಮನಾಥಪುರದ ಕೇಶವದೇವಾಲಯದ ವೇಣುಗೋಪಾಲ ಶಿಲ್ಪ ಮುಂತಾದವುಗಳು ಗಮನಾರ್ಹ.[೫೧] ನಂತರದಲ್ಲಿ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯವು 'ಶಿಲ್ಪಕಲೆ'ಗೆ ತನ್ನದೇ ಆದ ಪ್ರಾಮುಖ್ಯತೆ ನೀಡಿದ್ದರು. ವಿಜಯನಗರೋತ್ತರ ಕಾಲದಲ್ಲಿ ಮೂರ್ತಿಶಿಲ್ಪವು ಸಾಂಸ್ಕೃತಿಕ ಹಾಗೂ ಆರ್ಥಿಕ ದೃಷ್ಟಿಕೋನದಿಂದ ಕ್ಷೀಣತೆಯನ್ನು ಕಂಡಿತು.

ಪ್ರಸ್ತುತ ಅಧ್ಯಾಯದಲ್ಲಿ ಹೊಸದುರ್ಗ ತಾಲೂಕು ಪರಿಸರದ ಪ್ರಾಚೀನ ದೇವಾಲಯಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿಸಲಾದ ಮೂರ್ತಿಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಈಗಾಗಲೇ ಚರ್ಚಿಸಿದಂತೆ ಹೊಸದುರ್ಗ ತಾಲೂಕು ಪರಿಸರದಲ್ಲಿ ಬಹುಮುಖ್ಯವಾಗಿ ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ವಿಪುಲ ಪ್ರಮಾಣದಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ. ಆಯಾ ರಾಜವಂಶಗಳ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶೈಲಿಯ ದೇವಾಲಯಗಳಲ್ಲಿ ಅವರದೇ ಆದ ಮೂರ್ತಿಶಿಲ್ಪಗಳು ಬೆಳೆದುಬಂದಿವೆ. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿಯ ಶಿಲ್ಪಗಳನ್ನು ಈ ಕೆಳಗಿನಂತೆ ವಿಭಾಗಿಸಿ ಅಭ್ಯಾಸಿಸಲಾಗಿದೆ.

೫.೪.೧. ಶೈವ ಶಿಲ್ಪಗಳು

ಪ್ರಾಚೀನ ಭಾರತದಲ್ಲಿ ಶೈವಧರ್ಮದ ಅಸ್ತಿತ್ವವನ್ನು ಈಗಾಗಲೇ ನಾವು ಚರ್ಚಿಸಿದಂತೆ ಹರಪ್ಪ ಸಂಸ್ಕೃತಿಯ ಕಾಲದಿಂದಲೇ ಗುರುತಿಸಬಹುದು. ಇಲ್ಲಿನ ನೆಲೆಗಳ ಉತ್ಖನನದಲ್ಲಿ ದೊರೆತ ಕೆಲವು ಪ್ರಾಚ್ಯಾವಶೇಷಗಳು ಶೈವಧರ್ಮದ ಪ್ರಾಚೀನತೆಯನ್ನು ಕುರಿತು ಹೇಳುತ್ತವೆ. ಅಂತಹ ಪ್ರಾಚ್ಯಾವಶೇಷಗಳಲ್ಲಿ 'ಶಿವಲಿಂಗಗಳು', 'ಕಲ್ಲುಬಳೆಗಳು' (Ring Stones) ಮತ್ತು 'ಮುದ್ರಿಕೆಗಳು' (Steatite Seals) ಪ್ರಮುಖವಾಗಿವೆ.[೫೨] ಇವುಗಳಲ್ಲಿ ಕೆಲವು ಸ್ಥಾವರ ಲಿಂಗಗಳು ಗಾತ್ರದಲ್ಲಿ ದೊಡ್ಡದಾಗಿರುವ ಲಿಂಗಗಳನ್ನು ಒಂದು ಪಂಗಡದ ಜನರ ಸಲುವಾಗಿ ಉಪಯೋಗಿಸಿರ ಬೇಕು ಎಂದು ಈ ಲಿಂಗಗಳ ಬಗ್ಗೆ ಜಾನ್ ಮಾರ್ಷಲ್ ಅವರು ಅಭಿಪ್ರಾಯ ಪಡುತ್ತಾರೆ. ಕಲ್ಲು ಬಳೆಗಳು ಲಿಂಗ ಪೀಠಗಳೆಂದು ಗುರುತಿಸಲಾಗಿದೆ. ಮುದ್ರಿಕೆಗಳ ಮೇಲಿನ ಯೋಗಿಯನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನ ಅಭಿಪ್ರಾಯಗಳಿವೆ. ಮಾರ್ಷಲ್ ಅವರು ಅದನ್ನು ಪಶುಪತಿ ಎಂದು ಗುರುತಿಸಿದರೆ, ಅ. ಸುಂದರ ಅವರು ಯೋಗಿಯ ಸುತ್ತಲೂ ಇರುವ ಪ್ರಾಣಿ ಮತ್ತು ಮನುಷ್ಯ ಆಕೃತಿಗಳನ್ನು ಗಮನದಲ್ಲಿಟ್ಟುಕೊಂಡು ಪುರಾಣಗಳಲ್ಲಿ ಕಥೆಯ ರೂಪದಲ್ಲಿ ಬರುವ ಗಜಾಸುರ ಸಂಹಾರ, ಕಲಾರಿಶಿವ, ಭಿಕ್ಷಾಟನಾಶಿವ, ಮಾರ್ಕಾಂಡೇಯನ ಸನ್ನಿವೇಶಗಳನ್ನು ಪ್ರಾಚೀನ ಮುದ್ರೆಗಳೊಂದಿಗೆ ಹೋಲಿಸಿನೋಡಿ ಮೂರು ಮುಖದ ಕೊಂಬುಗಳುಳ್ಳ ಯೋಗಿಯು ಶಿವನೆಂದು ಅಭಿಪ್ರಾಯಪಟ್ಟಿದ್ದಾರೆ.[೫೩] ಹೀಗೆ ಶೈವಧರ್ಮವು ಕ್ರಿ.ಪೂ.೩೦೦೦ದಷ್ಟು ಹಿಂದೆ ಹೋಗಬಹುದಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಶೈವ ಶಿಲ್ಪಗಳಲ್ಲಿ ಬಹುಮುಖ್ಯವಾಗಿ ಲಿಂಗ, ನಂದಿ, ಗಣೇಶ, ವೀರಭದ್ರ ಹಾಗೂ ಭೈರವ ಶಿಲ್ಪಗಳನ್ನು ಕಾಣಬಹುದು.

ಶಿವಲಿಂಗಗಳು : ಲಿಂಗವು ಶೈವಧರ್ಮದ ಪ್ರತೀಕ. ಶಿವನನ್ನು ಲಿಂಗರೂಪದಲ್ಲಿ ಸಾಮಾನ್ಯವಾಗಿ ಪೂಜಿಸುತ್ತಿದ್ದರು. 'ಲಿಂಗಾತ್ ಸರ್ವಂ ಸಮುತ್ಪನ್ನಂ ಲಯಂ ತಸ್ಮಿನ್ ಪ್ರಕೀರ್ತಿತಮ್', ಲಿಂಗದಿಂದಲೇ ಸಕಲ ಜಗತ್ತು ಹುಟ್ಟುತ್ತದೆ ಮತ್ತು ಅಲ್ಲಿಯೇ ಲಯವಾಗುತ್ತದೆ. ಸುಪ್ರಭೇದಾಗಮದ ಪ್ರಕಾರ ಗರ್ಭಗೃಹದಲ್ಲಿ ಸ್ಥಾಪಿತಗೊಂಡ ಅಚಲ ಲಿಂಗಗಳಲ್ಲಿ ಒಂಬತ್ತು ವಿಧಗಳಿವೆ. ಅವು ಸ್ವಯಂ ಭೂ, ಪುರವ, ದೈವತ್ವ, ಗಾಣಪತ್ಯ, ಅಸುರ, ಸುರ, ರಾಕ್ಷಸ, ಮಾನುಷ ಬಾಣಲಿಂಗ ಗಳಾಗಿವೆ. ಮನುಷ್ಯಕೃತ ಲಿಂಗಗಳು ಬಹುವಾಗಿ ಕಂಡುಬರುತ್ತವೆ. ಇದು ಬ್ರಹ್ಮಭಾಗ, ವಿಷ್ಣುಭಾಗ ಮತ್ತು ರುದ್ರಭಾಗಗಳಿಂದ ಕೂಡಿರುತ್ತದೆ. ಚತುರ್ಭುಜ ಭಾಗವು ಬ್ರಹ್ಮಭಾಗ, ಅಷ್ಟಭುಜ ಭಾಗವು ವಿಷ್ಣುಭಾಗ, ವೃತ್ತಾಕಾರದ ಪೂಜಾಭಾಗವು ರುದ್ರಭಾಗ, ರುದ್ರಭಾಗದಲ್ಲಿ ಬ್ರಹ್ಮಸೂತ್ರವಿರುತ್ತದೆ ಮತ್ತು ಭಿನ್ನ ಭಿನ್ನ ಶಿರೋವರ್ತನಗಳಿರುತ್ತವೆ. ಆದುದರಿಂದ ಪ್ರತಿಯೊಂದು ದೇವಾಲಯದಲ್ಲಿ ಇರುವ ಮಾನುಷ್ಯಕೃತ ಲಿಂಗಗಳು ತ್ರಿಮೂರ್ತಿಗಳ ಸಂಕೇತವಾಗಿವೆ. ಲಿಂಗ ಮತ್ತು ಯೋನಿ(ಪೀಠ)ಗಳು ಶಿವ ಮತ್ತು ಶಕ್ತಿಯರ ಸಂಕೇತವಾಗಿದೆ.

ರಾಷ್ಟ್ರಕೂಟರ ಕಾಲದಿಂದ ಪಾಳೆಯಗಾರರ ಕಾಲದವರೆಗೆ ನಿರ್ಮಾಣಗೊಂಡಿರುವ ಇಲ್ಲಿನ ಪ್ರಾಚೀನ ದೇವಾಲಯಗಳಲ್ಲಿ ಅನೇಕ ಪ್ರಕಾರದ ಶಿವಲಿಂಗಗಳು ಕಂಡುಬರುತ್ತವೆ. ಶಿವಲಿಂಗಗಳಲ್ಲಿ ೨ ರಿಂದ ೫ ಅಡಿಗಳ ಎತ್ತರದ ಶಿವಲಿಂಗಗಳಿವೆ. ಅವುಗಳು ಕಪ್ಪುಶಿಲೆ ಹಾಗೂ ಹಸಿರು ಮಿಶ್ರಿತ ಬಳಪದ ಶಿಲೆಗಳಲ್ಲಿ ಕಂಡರಿಸಲಾಗಿದೆ. ಚಿಕ್ಕಯ್ಯಗಟ್ಟಿ ಈಶ್ವರ ದೇವಾಲಯದ ಶಿವಲಿಂಗವು ಶಾಸನೋಕ್ತವಾಗಿದ್ದು ಕ್ರಿ.ಶ. ೧೧೯೪ರ ಹೊಯ್ಸಳ ಶಾಸನದಲ್ಲಿ 'ಧರ್ಮೇಶ್ವರ' ಎಂಬುದಾಗಿ ಕರೆಯಲ್ಪಟ್ಟಿದೆ. ಸುಮಾರು ೩ ಅಡಿ ಎತ್ತರದ ಪಾಣಿವಟ್ಟದ ಮೇಲೆ ಸುಮಾರು ೧ ಅಡಿ ಶಿವಲಿಂಗವಿದೆ. ಇದರ ಪಾಣಿವಟ್ಟವು ತ್ರಿಕೋನಾಕೃತಿಯ ಮೂಲೆಗಳಿಂದ ಕೂಡಿದ್ದು ಸುಂಧರವಾಗಿದ್ದು ಬ್ರಹ್ಮಭಾಗದಲ್ಲಿ ಪದ್ಮದ ಅಲಂಕಾರವಿದೆ. ನೀರಗುಂದ ಗ್ರಾಮದ ಶಿವಲಿಂಗವೂ ಶಾಸನೋಕ್ತವಾಗಿದ್ದು ಹೊಯ್ಸಳರ ಕಾಲದ ಕ್ರಿ.ಶ. ೧೦೬೫ರ ಶಾಸನದಲ್ಲಿ 'ಸಿದ್ಧೇಶ್ವರ' ಎಂಬುದಾಗಿ ಕರೆಯಲ್ಪಟ್ಟಿದೆ. ಇದು ಸುಮಾರು ೨ ಅಡಿ ಪಾಣಿವಟ್ಟದ ಮೇಲೆ ೧ ಅಡಿ ಶಿವಲಿಂಗವಿದೆ. ಇದರ ಪಾಣಿವಟ್ಟದ ಪೀಠವು ಪದ್ಮದ ಅಲಂಕರಣ, ಚತುರ್ ಕೋನ ಮೂಲೆಗಳನ್ನು ಹೊಂದಿದೆ. ಹಾಗೂ ಇದರ ವಿಷ್ಣುಭಾಗವು ವೃತ್ತಾಕಾರವಾಗಿದೆ. ಆನಿವಾಳದ ಈಶ್ವರ ದೇವಾಲಯದ ಶಿವಲಿಂಗವು ಅತ್ಯಂತ ಎತ್ತರವುಳ್ಳದ್ದಾಗಿದೆ. ಇದನ್ನು ಕಪ್ಪುಶಿಲೆಯಲ್ಲಿ ಕಡೆಯಲಾಗಿದ್ದು ಸುಮಾರು ೫ ಅಡಿ ಎತ್ತರವಿದೆ. ಇದರ ಬ್ರಹ್ಮಭಾಗ ಚಚ್ಚೌಕವಾಗಿದ್ದು ವಿಷ್ಣುಭಾಗವು ಮೂರು ತ್ರಿಕೋನಾಕೃತಿಯ ಮೂಲೆಗಳ ರಚನೆಯನ್ನು ಹೊಂದಿದೆ. ರುದ್ರಭಾಗವು ವೃತ್ತಾಕಾರವಾಗಿದೆ.

ಹೆಗ್ಗೆರೆಯ ಕಲ್ಲೇಶ್ವರ ಹಾಗೂ ಗಲಗೇಶ್ವರ ದೇವಾಲಯಗಳು ಶಾಸನೋಕ್ತವಾಗಿವೆ. ಈ ಎರಡೂ ದೇವಾಲಯಗಳು ಕ್ರಿ.ಶ. ೧೨೩೭ರ ಶಾಸನದಲ್ಲಿ ಉಲ್ಲೇಖಗೊಂಡಿದ್ದು ಹೊಯ್ಸಳ ದೊರೆ ಎರಡನೇ ನರಸಿಂಹನ ಕಾಲದಲ್ಲಿ ನಿರ್ಮಾಣಗೊಂಡಿವೆ. ಇಲ್ಲಿನ ಗರ್ಭಗೃಹಗಳಲ್ಲಿರುವ ಶಿವಲಿಂಗಗಳು ಕ್ರಮವಾಗಿ ಗಲಗೇಶ್ವರ ಹಾಗೂ ಕಲ್ಲೇಶ್ವರ ಎಂದು ಕರೆಯಲ್ಪಟ್ಟಿದ್ದು ಅವುಗಳ ರಚನೆ ಅತ್ಯಂತ ಮನೋಜ್ಞತೆಯಿಂದ ಕೂಡಿವೆ. ಇವುಗಳು ಸ್ವಯಂಭೂ ಲಿಂಗಗಳಾಗಿವೆ. ಗಲಗೇಶ್ವರ ಶಿವಲಿಂಗವು ಚೌಕಾಕಾರದ ಬ್ರಹ್ಮಭಾಗದ ಪೀಠಕ್ಕೆ ಹೊಂದಿಕೊಂಡಂತೆ ವೃತ್ತಾಕಾರದ

ವಿಷ್ಣು ಭಾಗವಿದ್ದು ರುದ್ರಭಾಗವು ಅತ್ಯಂತ ಎತ್ತರ ಅಂದರೆ ಸುಮಾರು ೩ ಅಡಿ ಇದೆ. ಇದರ ಜಲಹರಿಯು ಲಿಂಗದ ಎಡಭಾಗಕ್ಕೆ ಇದೆ. ಅದೇ ರೀತಿ ಕಲ್ಲೇಶ್ವರ ಶಿವಲಿಂಗವು ತ್ರಿಕೋನಾಕೃತಿಯ ಮೂಲೆಗಳ ರಚನೆಯ ಬ್ರಹ್ಮಭಾಗದ ಮೇಲೆ ವೃತ್ತಾಕಾರದ ವಿಷ್ಣುಭಾಗವಿದೆ. ಇದರ ಮೇಲೆ ೧೧/೨ ಅಡಿ ಎತ್ತರದ ರುದ್ರಭಾಗವಿದೆ. ಇವುಗಳನ್ನು ಹಸಿರು ಮಿಶ್ರಿತ ಕಪ್ಪು ಶಿಲೆಯಿಂದ ರಚಿಸಲಾಗಿದೆ. ಈ ಶಿವಲಿಂಗಗಳೆಲ್ಲಾ ಅತ್ಯಂತ ಪ್ರಾಚೀನವಾದವುಗಳು. ಕೈನಡು, ಮೆಣಸಿನಡು, ಬೂದಿಹಾಳು, ಹೆಗ್ಗೆರೆ, ಮಳಲಿ ಸೇರಿದಂತೆ ಮುಂತಾದೆಡೆಗಳಲ್ಲಿನ ಶಿವಲಿಂಗಗಳು ಪ್ರಾಚೀನ ವಾದವುಗಳಾಗಿವೆ.

ನಂದಿಶಿಲ್ಪಗಳು : ಶಿವನ ಗಣ ದೇವತೆಗಳಲ್ಲಿ ಕಂಡುಬರುವ ನಂದಿ, ನಂದೀಶ ಅಥವಾ ನಂದೀಶ್ವರನನ್ನು ಮಾನವ ರೂಪದಲ್ಲಿ ಮೂರು ಕಣ್ಣುಗಳನ್ನು, ನಾಲ್ಕು ಕೈಗಳನ್ನು ಹೊಂದಿದ್ದು, ಹುಲಿಚರ್ಮವನ್ನು ಧರಿಸಿರುವನೆಂದು ಹೇಳಲಾಗಿದೆ.[೫೦] ಇವನನ್ನು ವೃಷಭದ ರೂಪದಲ್ಲಿಯೂ ಗುರುತಿಸಲಾಗುತ್ತದೆ. ಪ್ರತಿ ಶಿವಾಲಯದಲ್ಲೂ ಶಿವನ ಎದುರಿಗೆ ವೃಷಭ ರೂಪದ ನಂದಿ ಶಿಲ್ಪವನ್ನು ಕಾಣುತ್ತೇವೆ. ನಂದಿಯು ಶಿವನ ವಾಹನ ಎಂದು ಪುರಾಣಗಳಲ್ಲಿ ಹೇಳಿದೆ. ಶಿವನನ್ನು 'ವೃಷಧ್ವಜ', 'ವೃಷಕೇತನ' ಎಂದು ಕರೆಯಲಾಗಿದೆ.[೫೧] ಸಿಂಧೂ ಸಂಸ್ಕೃತಿಯಲ್ಲಿಯೂ ವೃಷಭಕ್ಕೆ ಪ್ರಾಮುಖ್ಯತೆ ಇದ್ದುದನ್ನು ಕಾಣುತ್ತೇವೆ. ಒಟ್ಟಾರೆ ನಂದಿಯು ಶೈವ ದೇವಾಲಯಗಳಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ಶಿಲ್ಪವೆಂದು ತಿಳಿದುಬರುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಬಹುತೇಕ ಶೈವದೇವಾಲಯಗಳಲ್ಲಿ ನಂದಿ ಶಿಲ್ಪಗಳು ಚಾಲುಕ್ಯ ಹಾಗೂ ಹೊಯ್ಸಳ ಶೈಲಿಯಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಅತ್ಯಂತ ಎತ್ತರದ ನಂದಿ ಶಿಲ್ಪವೆಂದರೆ ಅದು ಆನಿವಾಳದ ಈಶ್ವರ ದೇವಾಲಯದಲ್ಲಿದೆ. ಹೊಯ್ಸಳ ಶೈಲಿಯ ಇದು ಸುಮಾರು ೫ ಅಡಿ ಎತ್ತರವಿದೆ. ಕಪ್ಪು ಶಿಲೆಯ ಈ ನಂದಿ ಗಂಟೆಹಾರ, ಹಣೆಪಟ್ಟಿ, ಕೊರಳಪಟ್ಟಿ, ಹಗ್ಗ, ಗಂಟೆ, ಡುಬ್ಬ ಬಳಸಿದ ಪದಕಹಾರ, ಗೆಜ್ಜೆ ಮುಂತಾದ ಅಲಂಕಾರಗಳನ್ನು ಹೊಂದಿದೆ.

ಜಾನಕಲ್ಲಿನ ಶಂಕರ ಲಿಂಗೇಶ್ವರ, ಮೆಣಸಿನೋಡುವಿನ ಈಶ್ವರ, ಕೈನಡುವಿನ ಮಲ್ಲೇಶ್ವರ, ನೀರಗುಂದದ ಸಿದ್ದೇಶ್ವರ, ಹೆಗ್ಗೆರೆಯ ಗಲಗೇಶ್ವರ ದೇವಾಲಯಗಳಲ್ಲಿನ ನಂದಿಶಿಲ್ಪಗಳು ಹೊಯ್ಸಳ ಶೈಲಿಯ ರಚನೆಗಳಾಗಿವೆ.

ಗಣಪತಿ ಶಿಲ್ಪಗಳು : ಗಣಪತಿಯು ಭಾರತೀಯರ ಜಯ, ಶುಭ ಹಾಗೂ ವೈಭವದ ಸಂಕೇತ. ಶಿವ, ಬ್ರಹ್ಮಾಂಡ, ಗಣೇಶ, ವರಾಹ, ಸ್ಕಂದ, ಬ್ರಹ್ಮ-ದೈವರ್ತ, ಮತ್ಸ್ಯ, ವಾಮನ, ಪದ್ಮ ಮೊದಲಾದ ಪುರಾಣಗಳು ಹಾಗೂ ರೂಪಮಂಡನ, ಕಾಮಿಕಾಮಗಳು ಗಣಪತಿಯನ್ನು ಉಲ್ಲೇಖಿಸಿವೆ.[೫೨] ಶಿವಪುರಾಣವು ಗಣಪತಿಯ ಹುಟ್ಟಿನ ಬಗ್ಗೆ ತಿಳಿಸುತ್ತದೆ. ಗಣಪತಿಯು ನಾಲ್ಕು, ಆರು, ಹತ್ತು ಹದಿನಾರು ಕೈಗಳನ್ನು ಹೊಂದಿರುವನು. ನಾಲ್ಕು ಕೈಗಳಿರುವ ಗಣಪತಿ ಸಾಮಾನ್ಯವಾಗಿ ಕಂಡುಬರುತ್ತಾನೆ. ಗಣಪತಿಯು ನಾನಾ ರೂಪಗಳಾದ ಬಾಲಗಣಪ, ತರುಣಗಣಪತಿ, ಭಕ್ತಿ ವಿಘ್ನೇಶ್ವರ, ವೀರವಿಘ್ನೇಶ, ಶಕ್ತಿಗಣೇಶ, ಉಚ್ಚಿಷ್ಟ ಗಣಪತಿ, ಮಹಾಗಣಪತಿ, ಊರ್ದ್ವ ಗಣಪತಿ, ಪಿಂಗಲ ಗಣಪತಿ, ಹೇರಂಭಾ, ಪ್ರಸನ್ನ ಗಣಪತಿ, ಧ್ವಜ ಗಣಪತಿ, ಉನ್ಮತ್ತ

ಗಣಪತಿ, ವಿಘ್ನರಾಜ ಗಣಪತಿ, ಭುವನೇಶ ಗಣಪತಿ, ನೃತ್ಯ ಗಣಪತಿ, ಹರಿದ್ರಾಗಣಪತಿ, ಬಾಲಚಂದ್ರ, ಸುರಪಕರಣ ಹಾಗೂ ಏಕದಂತ.[೩೬] ಶಿಲ್ಪಗಳಲ್ಲಿ ಗಣಪತಿಯನ್ನು ಸುಖಾಸೀನದಲ್ಲಿ ಕುಳಿತಂತೆ, ನಿಂತಂತೆ ಮತ್ತು ನೃತ್ಯ ಭಂಗಿಯಲ್ಲಿಯೂ ಕಂಡರಿಸಲಾಗಿದೆ. ಸಾಮಾನ್ಯವಾಗಿ ಗಣಪತಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿದ್ದು ಆನೆಮುಖ, ಸುತ್ತಿದ ಸೊಂಡಿಲು, ದೊಡ್ಡಹೊಟ್ಟೆ, ನಾಲ್ಕು ಕೈಗಳಿಂದ ಕೂಡಿದವನಾಗಿ ಪಾಶ, ಅಂಕುಶ, ಅಭಯ, ಮೋದಕಧಾರಿಯಾಗಿ ಕಂಡುಬರುತ್ತಾನೆ. ಹೊಸದುರ್ಗ ತಾಲೂಕು ಪರಿಸರದಲ್ಲಿನ ದೇವಾಲಯಗಳಲ್ಲಿ ಕಂಡುಬರುವ ಗಣಪತಿ ಶಿಲ್ಪಗಳು ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲಘಟ್ಟದವುಗಳಾಗಿವೆ. ಅವುಗಳಲ್ಲಿ ಬಹುಮುಖ್ಯವಾಗಿ ನೀರಗುಂದದ ಸಿದ್ದೇಶ್ವರ, ಚಿಕ್ಕಯಗಟಿಯ ಈಶ್ವರ, ಹೆಗ್ಗೆರೆಯ ಗಲಗೇಶ್ವರ, ಮೂಷಿಕನ ಬಿಂಬವಿರುವ ಪೀಠದಲ್ಲಿ ಲಲಿತಾಸನದಲ್ಲಿ ಕುಳಿತಿರುವ ಗಣಪನು ತನ್ನ ಕೈಗಳಲ್ಲಿ ಪರಶು, ಅಂಕುಶ, ದಂತ, ಲಡ್ಡು ಪಾತ್ರೆಯನ್ನು ಹೊಂದಿದ್ದಾನೆ. ತಲೆಗೆ ಕಿರೀಟ, ಭುಜದಲ್ಲಿ ಸ್ಕಂದಮಾಲೆ, ಕೈಗಳಲ್ಲಿ ಕಡಗ, ಬಳೆ, ಕಾಲುಗಳಲ್ಲಿ ಕಾಲ್ಕಡಗ, ದೇಹದಲ್ಲಿ ಇತರೆ ಆಭರಣಗಳನ್ನು ಧರಿಸಿದ್ದಾನೆ. ಇಂತಹ ಹಲವು ಅಂಶಗಳನ್ನು ಈ ಪರಿಸರದ ಗಣಪತಿ ಮೂರ್ತಿಶಿಲ್ಪಗಳಲ್ಲಿ ಕಾಣಬಹುದು.

ಭೈರವ ಶಿಲ್ಪಗಳು : 'ಭೈರವ' ಶಬ್ದಕ್ಕೆ ಭಯಂಕರ ಎಂಬರ್ಥವಿದೆ.[೩೭] ಭೈರವನ ಹುಟ್ಟಿಗೆ ಹೇಳಲಾಗುವ ಪೌರಾಣಿಕ ಕತೆಯಲ್ಲೂ ಕೋಪದ ಪ್ರಸಂಗವಿದೆ. ಲೋಕಸೃಷ್ಟಿ ಮಾಡಿದ ಬ್ರಹ್ಮನಲ್ಲಿ ಬಹಳ ಅಹಂಕಾರ ತುಂಬಿತ್ತು. ಅವನು ಒಮ್ಮೆ ತಾನೇ ಹೆಚ್ಚೆಂದು ತಿಳಿದು ಶಿವನಿಗೆ ಹೀನಾಯವಾಗಿ ಮಾತಾಡಲು, ಕನಲಿದ ಶಿವ ಭೈರವನ ರೂಪತಾಳಿ ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಜಿಗುಟಿಹಾಕಿದ. ಇದರಿಂದ ಕೈಯಲ್ಲಿ ರಕ್ತಸಿಕ್ತ ಬ್ರಹ್ಮಕಪಾಲ ಬಂದಿತು.[೩೮] ಈ ಪಾಪವನ್ನು ಕಳೆದುಕೊಳ್ಳಲು ಶಿವನು ಹನ್ನೆರಡು ವರ್ಷ ಭಿಕ್ಷುಕನಾಗಿ ಅಲೆದಾಡಿದನು. ವಾರಣಾಸಿಯ 'ಕಪಾಲಮೋಚನ ತೀರ್ಥ'ದಲ್ಲಿ ಸ್ನಾನ ಮಾಡಿದ ಮೇಲೆ ಅವನ ಪಾಪವು ತೊಳೆಯಿತು ಎಂದು ವರಾಹ ಪುರಾಣ ಮತ್ತು ಕೂರ್ಮ ಪುರಾಣಗಳು ಹೇಳುತ್ತವೆ.[೩೯] ಭೂತಪ್ರೇತ ಪಿಶಾಚಗಳ ಉಚ್ಚಾಟನೆಗೆಂದು ಭೈರವನ ಪೂಜೆ ಪ್ರಸಿದ್ಧವಾಗಿದೆ. ಭೈರವ ಮೂರ್ತಿಯ ಪ್ರಭೇದಗಳು ಹೀಗಿವೆ, ತ್ರಿಪುರಾಂತ ಭೈರವ, ಉಗ್ರಭೈರವ, ಬಾಡವಾನಲ ಭೈರವ, ಅಗ್ನಿಭೈರವ, ಅಗ್ನಿಜಿಹ್ವ ಭೈರವ, ಕಾಲಭೈರವ, ಕರಾಳ ಭೈರವ, ಭೀಮರೂಪ ಭೈರವ, ವೇತಾಲ ಭೈರವ, ಹಾಟಕೇಶ್ವರ ಭೈರವ.[೪೦] ಶಿಲ್ಪಾರತ್ನದ ಪ್ರಕಾರ ಭಯಂಕರ ಮುಖ ಉಳ್ಳವನಾದ ಇವನು ನಾಲ್ಕು ಕೈಗಳನ್ನು ಹೊಂದಿದ್ದು ಖಡ್ಗ, ತ್ರಿಶೂಲ, ಢಮರು ಮತ್ತು ರುಂಡವನ್ನು ಹಿಡಿದಿರುತ್ತಾನೆ. ಕೋರೆ ಹಲ್ಲುಗಳನ್ನು ಹೊಂದಿದವನಾಗಿ ತಲೆಕೂದಲು ನೆಟ್ಟಗೆ ನಿಂತಿರುತ್ತವೆ. ಕೊರಳಲ್ಲಿ ರುಂಡಮಾಲೆಯನ್ನು ಧರಿಸಿದವನು ಹಾವುಗಳಿಂದ ಅಲಂಕರಿಸಿಕೊಂಡಿರುವನು ಮತ್ತು ನಾಯಿಯೊಂದಿಗೆ ಇವನನ್ನು ಗುರುತಿಸಲಾಗುತ್ತದೆ. ಆದುದರಿಂದ ಭೈರವನನ್ನು ಕ್ಷೇತ್ರಪಾಲನೆಂದು ಹೇಳಲಾಗುತ್ತದೆ.[೪೧]

ಹೊಸದುರ್ಗ ತಾಲೂಕು ಪರಿಸರದಲ್ಲಿ 'ಭೈರವಾರಾಧನೆ'ಯ ಕುರುಹುಗಳನ್ನು ಇಲ್ಲಿನ ಭೈರವ ಶಿಲ್ಪಗಳು, ನರಬಲಿ ಶಿಲ್ಪಗಳು, ಭೈರವ ಪಾದಶಿಲ್ಪಗಳು ಹಾಗೂ ಭೈರವ ದೇವಾಲಯಗಳನ್ನು

ಕುರಿತು ಅಧ್ಯಯನ ಮಾಡುವುದರ ಮೂಲಕ ಗುರುತಿಸಬಹುದಾಗಿದೆ. ಈ ತಾಲೂಕು ಪರಿಸರದಲ್ಲಿ ಕ್ರಿ.ಶ. ಸುಮಾರು ೧೧ನೇ ಶತಮಾನದಿಂದಲೇ ಭೈರವ ಶಿಲ್ಪಗಳು ಕಂಡುಬರುತ್ತವೆ. ಅಂದರೆ ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟದ ಭೈರವ ಶಿಲ್ಪಗಳಾಗಿವೆ. ನೀರಗುಂದದ ಸಿದ್ದೇಶ್ವರ ದೇವಾಲಯದ ಹೊರಭಾಗದಲ್ಲಿರುವ ಭೈರವ ಹಾಗೂ ಚಿಕ್ಕಯ್ಯಗಟ್ಟಿಯ ಈಶ್ವರ ದೇವಾಲಯದ ಹಿಂಬದಿಯ ಮಂಟಪದಲ್ಲಿರುವ ಭೈರವ ಮೂರ್ತಿಶಿಲ್ಪಗಳನ್ನು ಹಸಿರು ಮೆದುಗಲ್ಲಿನಲ್ಲಿ ಕಂಡರಿಸಲಾಗಿದೆ. ರಚನೆಯಲ್ಲಿ ವೃಚ್ಚಿಕ ಬಿಂಬದ ಪೀಠದ ಮೇಲೆ ನಿಂತಿರುವ ಭೈರವನು ನಗ್ನನಾಗಿದ್ದು ತನ್ನ ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರು ಹಾಗೂ ರಕ್ತ ಒಸರುತ್ತಿರುವ ರುಂಡವನ್ನು ಹೊಂದಿದ್ದು ಒಸರುತ್ತಿರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದೆ. ಅದರ ಪಕ್ಕದಲ್ಲಿ ಇತರ ಶಿಲ್ಪಗಳು ಇದ್ದು, ಈ ಮೂರ್ತಿಗಳಿಗೆ ಲತಾಸುರುಳಿಯ ಸೂಕ್ಷ್ಮ ಕೆತ್ತನೆಯ ಪ್ರಭಾವಳಿಯಿದೆ. ಮೇಲೆ ವ್ಯಾಳದ ಬಿಂಬವಿದೆ.

ಹೆಗ್ಗೆರೆಯಲ್ಲಿ ಭೈರವನಿಗಾಗಿಯೆ ಪ್ರತ್ಯೇಕವಾದ ದೇವಾಲಯವಿದ್ದು ಗರ್ಭಗೃಹದ ಭೈರವ ಮೂರ್ತಿಶಿಲ್ಪವು ಹೊಯ್ಸಳ ಶೈಲಿಯಲ್ಲಿದೆ. ನಗ್ನನಾಗಿರುವ ಭೈರವನು ಚರ್ತುಭುಜಗಳನ್ನು ಹೊಂದಿದ್ದು, ತ್ರಿಶೂಲ, ಢಮರು, ಖಡ್ಗ ಮತ್ತು ಒಂದೇ ಕೈಯಲ್ಲಿ ಕಪಾಲ ಹಾಗೂ ರುಂಡವನ್ನು ಹೊಂದಿದ್ದಾನೆ. ಜಟಾಮುಕುಟವನ್ನು ಹೊಂದಿರುವ ಇವನ ಕೊರಳಲ್ಲಿ ಹಾರಗಳು, ಸೊಂಟಪಟ್ಟಿ, ತೊಡೆಭಾಗದಲ್ಲಿ ನಾಗಬಂಧ, ಮೊಣಕಾಲಿನ ಕೆಳಭಾಗದವರೆಗೂ ನೇತಾಡುವ ರುಂಡಮಾಲೆ, ಪಾದರಕ್ಷೆ ಹೊಂದಿದ್ದಾನೆ. ಕೆಳಭಾಗ ಹಾಗೂ ಅಕ್ಕ ಪಕ್ಕಗಳಲ್ಲಿ ಪಿಶಾಚಿಗಳು ಇವೆ. ಈ ರೀತಿಯ ಅನೇಕ ಲಕ್ಷಣಗಳನ್ನು ಹೊಂದಿದೆ. ಅಲ್ಲದೆ ದೇವಾಲಯದ ಹೊರಭಾಗದಲ್ಲಿ ೨ ಭೈರವ ಪಾದಶಿಲ್ಪಗಳಿವೆ. ಹೊಸದುರ್ಗದ ಸಿದ್ಧಪ್ಪನ ಬೆಟ್ಟದ ಸಿದ್ಧೇಶ್ವರ ದೇವಾಲಯದ ಭೈರವ ಮೂರ್ತಿಶಿಲ್ಪ, ಭೈರವನ ಕೊಂಬೆಯ ಭೈರವ ದೇವಾಲಯದ ಮೂರ್ತಿಶಿಲ್ಪ, ಮೈಲಾರಪುರದ ಮೈಲಾರ ಲಿಂಗೇಶ್ವರ ದೇವಾಲಯದ ಭೈರವ ಮೂರ್ತಿಶಿಲ್ಪ, ಕೈನಡು ಗ್ರಾಮದ ಮಲ್ಲೇಶ್ವರ ದೇವಾಲಯದ ಭೈರವ ಮೂರ್ತಿಶಿಲ್ಪ, ಮೇಣಸಿನೋಡುವಿನ ಮಲ್ಲಿಕಾರ್ಜುನ ದೇವಾಲಯದ ಭೈರವ ಮೂರ್ತಿಶಿಲ್ಪ ಸೇರಿದಂತೆ ಹಲವು ಮೂರ್ತಿಶಿಲ್ಪಗಳನ್ನು ಕಾಣಬಹುದು.

ಭೈರವಶಿಲ್ಪಗಳಿಗೆ ಸಂಬಂಧಿಸಿದಂತೆ 'ಬಲಿ ಶಿಲ್ಪದ ಫಲಕ'ಗಳು ಕಂಡುಬರುತ್ತವೆ. ಅವುಗಳಲ್ಲಿ 'ಪ್ರಾಣಿಬಲಿ', 'ನರಬಲಿ' ಹಾಗೂ 'ಪ್ರಾಣಿ ಮತ್ತು ನರಬಲಿ' ಶಿಲ್ಪ ಫಲಕಗಳಿವೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಭೈರವ ಮೂರ್ತಿಶಿಲ್ಪಗಳು, ಶಿಲ್ಪಗಳು ಹಾಗೂ ದೇವಾಲಯಗಳು ಇರುವ ಕೆಲವೆಡೆಗಳಲ್ಲಿ ಈ ಬಲಿಶಿಲ್ಪದ ಫಲಕಗಳು ಕಾಣಬರುತ್ತವೆ. ಬೂದಿಹಾಳು (ಶ್ರೀರಾಂಪುರ)ವಿನ ಬನಶಂಕರಿ ದೇವಾಲಯದ ಗರ್ಭಗೃಹದ ಹಿಂಬದಿಯಲ್ಲಿರುವ ಒಂದು ಬಲಿ ಶಿಲ್ಪದ ಫಲಕದಲ್ಲಿ ಭೈರವನ ಪಾದದ ಸುತ್ತಲೂ ಒಂದು ಹಾವು ಸುತ್ತಿಕೊಂಡಿದ್ದು ಅದರ ತಲೆಯನ್ನು ಕತ್ತರಿಸಿರುವುದು, ಟಗರುವಿನ ತಲೆ ಕತ್ತರಿಸಿರುವುದು, ಇಬ್ಬರು ಮನುಷ್ಯರ ರುಂಡ ಮುಂಡಗಳನ್ನು ಬೇರೆ ಬೇರೆಯಾಗಿಸಿರುವುದು ಇಂತಹ 'ಪ್ರಾಣಿ ಮತ್ತು ನರಬಲಿ'ಯ ಶಿಲ್ಪದ ಫಲಕ ವಿಶಿಷ್ಟವಾಗಿದೆ. ಹಸಿರು ಮೆದುಗಲ್ಲಿನ ಈ ಶಿಲ್ಪ ಹೊಯ್ಸಳ ಕಾಲದ್ದಾಗಿದೆ.

ನಿರುವುಗಲ್ಲು ಬೇಚರಾಕ್ ಗ್ರಾಮದ ಹರಿಹರೇಶ್ವರ ದೇವಾಲಯದ ಮುಂದಿನ 'ಪ್ರಾಣಿ ಮತ್ತು ನರಬಲಿ' ಶಿಲ್ಪ ಫಲಕವೊಂದಿದೆ. ಹಸಿರು ಮೆದುಗಲ್ಲಿನಲ್ಲಿ ರಚಿಸಿರುವ ಈ ಶಿಲ್ಪ ಫಲಕವು ಬಹುಶಃ ಹೊಯ್ಸಳ ಕಾಲದ್ದಾಗಿದೆ. ಶಿಲ್ಪದ ಫಲಕದಲ್ಲಿ ಭೈರವ ಪಾದಗಳು, ಬದಿಗಳಲ್ಲಿ ಇಬ್ಬರು ಮಾನವರು ತ್ರಿಶೂಲದಿಂದ ತಮ್ಮ ತಲೆಗಳನ್ನು ತಾವೇ ಕತ್ತರಿಸಿಕೊಂಡಿರುವುದು, ರುಂಡ ಮುಂಡಗಳು ಬೇರೆ ಬೇರೆಯಾಗಿರುವುದು, ಅವರು ಕೈಯಲ್ಲಿ ತ್ರಿಶೂಲ ಹಿಡಿದಿರುವುದು, ಅಲ್ಲದೆ ಕೆಳಭಾಗದಲ್ಲಿ ಟಗರುಗಳನ್ನು ಬಲಿನೀಡಿ ರುಂಡಮುಂಡಗಳನ್ನು ಬೇರ್ಪಡಿಸಿರುವುದು ಈ ತೆರನಾದ ರಚನೆಯನ್ನು ಕಾಣಬಹುದು. ಇಂತಹದೆ ಲಕ್ಷಣವಿರುವ ಬಲಿಶಿಲ್ಪದ ಫಲಕವನ್ನು ದೊಡ್ಡತೇಕಲವಟ್ಟಿಯ ಕಲ್ಲೇಶ್ವರ ದೇವಾಲಯದ ಮುಂದಿನ ದೀಪಸ್ಥಂಬದ ಬಳಿ ಇದ್ದು ಬಹುಶಃ ಚಾಲುಕ್ಯರ ಕಾಲಘಟ್ಟದಾಗಿದೆ. ಈ ಬಲಿಶಿಲ್ಪ ಫಲಕಗಳಿರುವ ಎಡೆಗಳಲ್ಲಿ ಭೈರವನಿಗೆ ಪ್ರಾಚೀನ ಕಾಲದಲ್ಲಿ ಬಲಿ ನೀಡುವ ಪದ್ಧತಿ ಇದ್ದಿತೆಂದು ತಿಳಿದುಬರುವುದು. ಭೈರವಾರಾಧನೆ, ಭೈರವ ಮೂರ್ತಿಶಿಲ್ಪಗಳು, ಭೈರವ ದೇವಾಲಯಗಳು ಹಾಗೂ ಬಲಿಶಿಲ್ಪದ ಫಲಕಗಳು ಮುಂತಾದವುಗಳಿಂದ ಈ ಪರಿಸರದಲ್ಲಿ ಇದ್ದಿರಬಹುದಾದ ಕಾಪಾಲಿಕ ಅಥವಾ ನಾಥಪಂಥದ ಅಸ್ಥಿತ್ವವನ್ನು ಕುರಿತು ತಿಳಿಯಬಹುದು.

ವೀರಭದ್ರ ಶಿಲ್ಪಗಳು : ರುದ್ರನ ಉಗ್ರರೂಪಗಳ ಗುಂಪಿಗೆ ಸೇರಿದ ಇನ್ನೊಂದು ಪ್ರಚಲಿತ ಮೂರ್ತಿಯೆಂದರೆ ವೀರಭದ್ರನದು. ದಕ್ಷಪ್ರಜಾಪತಿಯ ಮಗಳು ದ್ರಾಕ್ಷಾಯಿಣಿ ಶಿವನ ಹೆಂಡತಿಯಾದ ಮೇಲೆ ಒಮ್ಮೆ ದಕ್ಷನು ಯಜ್ಞ ಮಾಡಲು ಹವಣಿಸಿ ಶಿವ-ದ್ರಾಕ್ಷಾಯಿಣಿಯನ್ನು ಕರೆಯದೆ ಉಳಿದ ಎಲ್ಲರನ್ನೂ ಕರೆದ. ಹಾಗಾದರೂ ದ್ರಾಕ್ಷಾಯಿಣಿಯು ತಾನು ಯಜ್ಞ ಮಂಟಪಕ್ಕೆ ಹೋಗಿ ಅಲ್ಲಿ ತನ್ನ ತಂದೆ ತನ್ನನ್ನು ಅವಮಾನಗೊಳಿಸಲು ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಟೆಯನ್ನು ನೆಲಕ್ಕೆ ಅಪ್ಪಳಿಸಲು ವೀರಭದ್ರನು ಹುಟ್ಟಿಕೊಂಡು ದಕ್ಷನ ತಲೆಯನ್ನು ಕಡಿದು ಅವನ ಯಾಗವನ್ನು ಧ್ವಂಸಪಡಿಸಿದನೆಂದು ಪುರಾಣದಲ್ಲಿ ಹೇಳಿದೆ.[೯೯] ವೀರಭದ್ರನನ್ನು ರುದ್ರಗಣದಲ್ಲಿ ಸೇರಿಸಿದವನೆಂದೂ ವ್ಯವಹರಿಸುವುದಿದ್ದರೂ ಶಿವನ ಲೀಲಾವತಾರ ಗಳಲ್ಲಿ ಒಂದು ಎಂದೇ ಎಣಿಕೆ. ಅವನ ಮೂರ್ತಿಲಕ್ಷಣದಲ್ಲಿ ಉಗ್ರ, ಅತಿಕ್ರೂರ, ಸರ್ವದುಷ್ಟ ನಿಬರ್ಹಣ, ಕರಾಳಾಟ್ಟಹಾಸ, ಗದಾಮುಷ್ಟಿಹಸ್ತ, ಭುಜಂಗಗಣ ಭೂಷಿತ, ಭಯದ, ಪಾಲನೇತ್ರಾನನ, ದಿಗಂಬರ ಮೊದಲಾದ ವಿವರಗಳಿವೆ. ದಕ್ಷಿಣ ದೇಶದಲ್ಲಿ ಅದರಲ್ಲೂ ಕನ್ನಡನಾಡಿನಲ್ಲಿ ವೀರಭದ್ರನ ಮೂರ್ತಿಗಳು ಹೆಚ್ಚಾಗಿ ಕಂಡುಬರುತ್ತವೆ.[೧೦೦] ವೀರಭದ್ರನನ್ನು ವೀರಯೋಧ ದೇವತೆಯೆಂತಲೂ ವೀರಪರಂಪರೆಯ ಪ್ರತೀಕವಾದ ದೇವತೆಯೆಂತಲೂ ಕರೆಯಲಾಗಿದೆ. ಶೈವಾಗಮಗಳಲ್ಲಿ ವೀರಭದ್ರನಿಗೆ ಒಂದು ಸ್ಥಾನವಿರುವುದು ಹಾಗೂ ವೀರಭದ್ರಾಗಮವೂ ಇರುವುದು ಗಮನಾರ್ಹ. ತಮಿಳುನಾಡಿನಲ್ಲಿ ಮುರುಗ (ಸ್ಕಂದ ಅಥವಾ ಸುಬ್ರಹ್ಮಣ್ಯ), ಕೇರಳದಲ್ಲಿ ಹರಿಹರಪುತ್ರನಾದ ಶಾಸ್ತ(ಅಯ್ಯಪ್ಪ), ಮಹಾರಾಷ್ಟ್ರದಲ್ಲಿ ಖಂಡೋಬರು ಹೆಚ್ಚು ಜನಪ್ರಿಯ ಶೈವದೇವತೆಗಳಾಗಿರುವಂತೆಯೇ ಕರ್ನಾಟಕದಲ್ಲಿ ಕಳೆದ ಕೆಲವು ಶತಮಾನಗಳಿಂದ ವೀರಯೋಧ ದೇವತೆ (Warrior God)ಯೆಂದರೆ ವೀರಭದ್ರ ಅಥವಾ ವೀರೇಶ.[೧೦೧] ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ವೀರಭದ್ರನ ಆರಾಧನೆಯು ಹೆಚ್ಚು ರೂಢಿಗೆ ಬಂದಿತು. ಪಂಚರಾತ್ರಾಗಮವು ವೀರಭದ್ರನನ್ನು ಕುರಿತು ಹೀಗೆ

ವಿವರಣೆ ಕೊಡುತ್ತದೆ. 'ವೀರಭದ್ರನು ಕಪ್ಪು ಮೈಬಣ್ಣದವನು, ಮೂರು ಕಣ್ಣುಳ್ಳವನು, ನಾಲ್ಕು ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣ, ಗುರಾಣಿಗಳನ್ನು ಹಿಡಿದಿರುವನು, ರುಂಡಮಾಲೆಯನ್ನು, ಪಾದರಕ್ಷೆಯನ್ನು ಧರಿಸಿರುವನು. ಅವನ ಸೊಂಟಪಟ್ಟಿಯಲ್ಲಿ ವಸ್ತ್ರವನ್ನು ಧರಿಸಿರುವನು.[೧೦೨]

ಈ ತಾಲೂಕು ಪರಿಸರದಲ್ಲಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ವೀರಭದ್ರ ಮೂರ್ತಿಶಿಲ್ಪಗಳಿವೆ. ಇವುಗಳು ಹಸಿರು ಮೆದುಗಲ್ಲು, ನೀಲಿಛಾಯೆಯ ಕಪ್ಪುಶಿಲೆ ಹಾಗೂ ಗ್ರಾನೈಟ್ ಶಿಲೆಯಿಂದ ರಚನೆಗೊಂಡಿವೆ. ಇವು ಸುಮಾರು ೩ ರಿಂದ ೫ ಅಡಿ ಎತ್ತರದವರೆಗೂ ಕಂಡುಬರುತ್ತವೆ. ಬಹುತೇಕ ಶೈವ ದೇವಾಲಯಗಳಲ್ಲಿ ವೀರಭದ್ರ ಮೂರ್ತಿಶಿಲ್ಪಗಳಿವೆ. ನೀರಗುಂದದ ಸಿದ್ಧೇಶ್ವರ, ಕಲ್ಲೇದೇವರ ಕಟ್ಟೆಯ ಕಲ್ಲೇಶ್ವರ, ಹೊಸದುರ್ಗದ ವೀರಭದ್ರ, ಆನಿವಾಳದ ಈಶ್ವರ, ಎಸ್. ನೇರಲಕೆರೆಯ ಈಶ್ವರ, ಶ್ರೀರಾಂಪುರ(ಬೂದಿಹಾಳು)ದ ವೀರಭದ್ರ, ಶೆಟ್ಟಿಹಳ್ಳಿಯ ವೀರಭದ್ರ, ಸೇರಿದಂತೆ ಅನೇಕ ದೇವಾಲಯಗಳಲ್ಲಿ ನೂರಾರು ವೀರಭದ್ರ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ವೀರಭದ್ರ ಮೂರ್ತಿಶಿಲ್ಪಗಳ ಲಕ್ಷಣಗಳಲ್ಲಿ ನಂದಿಯ ಬಿಂಬವಿರುವ ಪೀಠದ ಮೇಲೆ ನಿಂತಿರುವ ವೀರಭದ್ರನು ಕಪಾಲ ಭೂಷಿತ ಕಿರೀಟ, ಸರ್ಪಕುಂಡಲ, ರುಂಡಗಳ ಮಾಲೆ, ಕಾಲುಗಗ್ಗರ, ಕೈಕಂಕಣ, ಯಜ್ಞೋಪವೀತ ಸಾಧನಗಳಿಂದ ಅಲಂಕೃತನಾಗಿದ್ದು ಕೈಗಳಲ್ಲಿ ಖಡ್ಗ, ಶೂಲ, ಬಿಲ್ಲು, ಟಂಕ ಇವುಗಳನ್ನು ಹೊಂದಿದ್ದಾನೆ. ವೀರಭದ್ರನ ಬಲಭಾಗದ ಬದಿಯಲ್ಲಿ ಆಡಿನ ತಲೆಯ ದಕ್ಷಬ್ರಹ್ಮನ ಶಿಲ್ಪವಿದೆ. ವೀರಭದ್ರ ಮೂರ್ತಿಯ ಹಿಂಭಾಗದಲ್ಲಿ ಲತಾಸುರುಳಿಯ ಪ್ರಭಾವಳಿಯಿದ್ದು ಅದರ ಮಧ್ಯೆ ವ್ಯಾಳದ ಶಿಲ್ಪವಿದೆ.

ಸ್ಕಂದ ಶಿಲ್ಪಗಳು : ಶಿವನ ಪರಿವಾರದಲ್ಲಿ ಅವನ ಮಗನೆಂದು ಹೆಸರಾದ ಸುಬ್ರಹ್ಮಣ್ಯನಿಗೆ ವಿಶೇಷವಾದ ಸ್ಥಾನವಿದೆ. ದಕ್ಷಿಣ ದೇಶದಲ್ಲಿ ಅದರಲ್ಲೂ ತಮಿಳುನಾಡಿನಲ್ಲಿ ಅವನ ಪ್ರಭಾವ ಹೆಚ್ಚು.[೧೦೩] ಶೇಯೋನ್, ಮುರುಗ, ಆರುಮುಖ (ಷಣ್ಮುಖ), ಮಹಾಸೇನ, ಕುಮಾರ, ಸುಬ್ರಹ್ಮಣ್ಯ, ಸ್ಕಂದ, ಬಾಲಸ್ವಾಮಿ, ವೇಲನ್, ದಂಡಪಾಣಿ, ಮಲ್ಲೀನಾಯಕ, ದೇವಸೇನಾಪತಿ, ಸೇನಾನಿ, ಗುಹ, ಗುಹಗುಹ, ಶಿವಗುರು, ದೇಶಿಕ ಮೊದಲಾದ ಹೆಸರುಗಳಿಂದ ಈ ದೇವತೆ ಪ್ರಸಿದ್ಧನಾಗಿದ್ದಾನೆ. ತಮಿಳುನಾಡಿನಲ್ಲಿಯೇ ಈ ದೇವತೆ ಮೈಯದೆಳೆದದ್ದು ಎಂದು ಹೇಳಲಾಗಿದೆ.[೧೦೪] ದಕ್ಷಿಣ ಭಾರತದಲ್ಲಿ ಸ್ಕಂದನನ್ನು ಸುಬ್ರಹ್ಮಣ್ಯನೆಂದು ಪೂಜಿಸುವರು. ಉತ್ತರ ಭಾರತಕ್ಕಿಂತ ದಕ್ಷಿಣದಲ್ಲಿ ಸುಬ್ರಹ್ಮಣ್ಯ ದೇವಾಲಯಗಳು ಹೆಚ್ಚಾಗಿ ಕಂಡುಬರುತ್ತವೆ.[೧೦೫] ಸ್ಕಂದನು ಶಿವ ಪಾರ್ವತಿಯರ ಮಗನು ಎಂದು ಹೇಳಲಾಗಿದೆ. ಕಾಶ್ಯಪಶಿಲ್ಪವು ಸ್ಕಂದ ಶಿಲ್ಪದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಶಿಲ್ಪವು ಎರಡು, ನಾಲ್ಕು, ಆರು, ಹನ್ನೆರಡು ಕೈಗಳಿಂದಲೂ ಮತ್ತು ಒಂದು ಮುಖದಿಂದ ಅಥವಾ ಆರು ಮುಖಗಳಿಂದಲೂ ಕೂಡಿರಬಹುದು. ಇವನು ಶಿಖಿವಾಹನ (ನವಿಲು) ಮತ್ತು ಕುಕ್ಕಟ ಧ್ವಜವನ್ನು ಹೊಂದಿರುವನು.[೧೦೬] ಪ್ರಸ್ತುತ ಅಧ್ಯಯನ ಕ್ಷೇತ್ರದ ಹಾಲುರಾಮೇಶ್ವರ, ಚಿಕ್ಕಯಗಟಿಯ ಈಶ್ವರ ದೇವಾಲಯಗಳಲ್ಲಿ ಸ್ಕಂದ ಶಿಲ್ಪಗಳಿದ್ದು ಅವುಗಳು ಕ್ರಿ.ಶ. ೧೨–೧೪ನೇ ಶತಮಾನದ ಕಾಲಘಟ್ಟದವುಗಳು ಹಾಗೂ ಮೇಲೆ ವಿವರಿಸಿದ ಶಿಲ್ಪಾದಿ ಲಕ್ಷಣಗಳನ್ನು ಹೊಂದಿವೆ.

೫.೪.೨. ವೈಷ್ಣವ ಶಿಲ್ಪಗಳು

ವೈಷ್ಣವ ಶಿಲ್ಪಗಳಲ್ಲಿ ವಿಷ್ಣುಶಿಲ್ಪವನ್ನು ಮುಖ್ಯವಾಗಿ ಕಾಣುತ್ತೇವೆ. ನಾಲ್ಕು ವೇದಗಳಲ್ಲಿಯೂ ವಿಷ್ಣುವಿನ ಉಲ್ಲೇಖವಿದೆ. ವಿಷ್ಣುವಿಗೊಂದು ಸೂಕ್ತವೇ ಋಗ್ವೇದದಲ್ಲಿದೆ.[೩೭] ಸವಿತೃ, ಪೂಷ್ಯನ್, ಸೂರ್ಯ, ವಿಷ್ಣು, ಭಗ, ಅರ್ಯಮನ್ ಎಂಬ ಸೂರ್ಯನ ಅಂಶಗಳಲ್ಲಿ ವಿಷ್ಣುವು ಒಬ್ಬನು. ಇವನು ಮೂರು ಹೆಜ್ಜೆಗಳಲ್ಲಿ ಪೃಥ್ವಿ, ಅಂತರೀಕ್ಷ, ಆಕಾಶಗಳನ್ನು ಕ್ರಮಿಸುವನು. ಇವನಿಗೆ 'ಉರುಗಾಯ', 'ಉರುಕ್ರಮ' ಎಂಬ ಹೆಸರುಗಳು ಇವೆ.[೩೮] ವೈಷ್ಣವ ಧರ್ಮದಲ್ಲಿ ವಿಷ್ಣುವೇ ಪ್ರಧಾನ ದೇವತೆ. ವಿಷ್ಣುವನ್ನು ಚತುರ್ವಿಂಶತಿ ಮೂರ್ತಿಗಳಿಂದಲೂ ಹಾಗೂ ಹತ್ತು ಅವತಾರಗಳಿಂದಲೂ ಪೂಜಿಸಲಾಗುತ್ತದೆ. ಪುರಾಣಗಳ ಪ್ರಕಾರ ವಿಷ್ಣುವಿನ ನಾಲ್ಕು ಮೂರ್ತಿಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಇವುಗಳಲ್ಲಿ ವಾಸುದೇವ ಮೂರ್ತಿಯೇ ಪ್ರಮುಖವಾಗಿದ್ದು ಉಳಿದ ಮೂವರಲ್ಲಿ ಸಂಕರ್ಷಣನು ವಾಸುದೇವನ ಅಣ್ಣನಾಗಿ, ಪ್ರದ್ಯುಮ್ನನು ಮಗನಾಗಿ ಮತ್ತು ಅನಿರುದ್ಧನು ಮೊಮ್ಮಗನಾಗಿ ಕಂಡುಬರುತ್ತಾನೆ. ಈ ನಾಲ್ಕು ಮೂರ್ತಿಗಳ ಹೆಸರಿನಲ್ಲಿ ವ್ಯೂಹ ರಚನೆ ರೂಪಗೊಂಡಿದೆ. ಒಂದೊಂದು ವ್ಯೂಹದಲ್ಲಿಯೂ ಮೂರು ಮೂರು ಮೂರ್ತಿಗಳನ್ನು ಕಾಣುತ್ತೇವೆ. ವಾಸುದೇವ ವ್ಯೂಹದಲ್ಲಿ ಮಾತ್ರ ಆರು ಗುಣಗಳಿರುವವು. ಸಂಕರ್ಷಣ ವ್ಯೂಹದಲ್ಲಿ ಜ್ಞಾನ ಪ್ರಧಾನ; ಪ್ರದ್ಯುಮ್ನ ವ್ಯೂಹದಲ್ಲಿ ಶಕ್ತಿ ಪ್ರಧಾನ; ಅನಿರುದ್ಧನಲ್ಲಿ ಐಶ್ವರ್ಯ ಪ್ರಧಾನ ಹೀಗೆ ವ್ಯೂಹ ರಚನೆಗಳಿಂದ ಒಟ್ಟು ೨೪ ವಿಷ್ಣುಮೂರ್ತಿಗಳನ್ನು ಪೂಜಿಸುವ ಪದ್ಧತಿ ಬಂದಿದೆ.[೩೯] ಚತುರ್ವಿಂಸತಿ ಮೂರ್ತಿಗಳು ಕ್ರಮವಾಗಿ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋಧರ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ಧನ, ಉಪೇಂದ್ರ, ಹರಿ ಮತ್ತು ಕೃಷ್ಣ.[೪೦]

ವಿಷ್ಣುವು ಲೋಕಕಂಟಕರನ್ನು ನಿಗ್ರಹಿಸಲು, ಧರ್ಮವನ್ನು ರಕ್ಷಿಸಲು ಹತ್ತು ಅವತಾರಗಳನ್ನು ಎತ್ತಿರುವನೆಂದು ಪುರಾಣಗಳು ಉಲ್ಲೇಖಿಸುತ್ತವೆ. ಅವು ಕ್ರಮವಾಗಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರುಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ.[೪೧] ಮಾನಸಾರವು ವಿಷ್ಣುವಿನ ಸಾಮಾನ್ಯ ವಿವರಣೆಯನ್ನು ಕೊಡುತ್ತದೆ. ನಾಲ್ಕು ಕೈಗಳಿಂದ ಎರಡು ಕಣ್ಣುಗಳಿಂದ ಕೂಡಿದವನಾಗಿದ್ದು ವಿಜೃಂಭಿಸುವ ಕಿರೀಟವನ್ನು ಹಳದಿ ಬಣ್ಣದ ವಸ್ತ್ರವನ್ನು ಧರಿಸಿರುವನು. ಅವನ ಎದೆಯ ಮೇಲೆ ಶುಭಕಾರಕವಾದ ಶ್ರೀವತ್ಸಮುದ್ರೆಯು ಇರುವುದು. ನಾಲ್ಕು ಕೈಗಳಲ್ಲಿ ಶಂಕ, ಚಕ್ರ, ಗಧಾ, ಪದ್ಮಗಳನ್ನು ಹಿಡಿದಿರುವನು. ಮೊಣಕಾಲಿನವರೆಗೂ ವನಮಾಲೆಯನ್ನು ಧರಿಸಿರುವನು. ಸಾಮಾನ್ಯವಾಗಿ ವಿಷ್ಣುವಿನ ಎಡಬಲದಲ್ಲಿ ಲಕ್ಷ್ಮೀ ಮತ್ತು ಭೂದೇವಿ ಇರುವರು.[೪೨] ವಿಷ್ಣು ಶಿಲ್ಪದಲ್ಲಿ ಸ್ಥಾನಿಕ, ಆಸೀನ ಮತ್ತು ಶಯನ ಎಂಬ ಮೂರು ವಿಧಗಳಿವೆ.

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ವೈಷ್ಣವ ಮೂರ್ತಿಶಿಲ್ಪಗಳಲ್ಲಿ ಚನ್ನಕೇಶವ, ಕೋದಂಡರಾಮ, ರಂಗನಾಥ, ಗೋಪಾಲಕೃಷ್ಣ, ಆಳ್ವಾರರು, ಹನುಮ, ಗರುಡ ಮುಂತಾದವುಗಳು ಕಂಡುಬರುತ್ತವೆ.

ಈ ಪರಿಸರದಲ್ಲಿ ಚನ್ನಕೇಶವ ಮೂರ್ತಿಶಿಲ್ಪಗಳು ಅಪಾರ ಸಂಖ್ಯೆಯಲ್ಲಿವೆ. ಇಲ್ಲಿನ ಬಹುತೇಕ ಚನ್ನಕೇಶವ ಮೂರ್ತಿಶಿಲ್ಪಗಳು ಹೊಯ್ಸಳ ಕಾಲಘಟ್ಟಕ್ಕೆ ಸೇರಿದವುಗಳು. ನೀರಗುಂದ,

ಚಿಕ್ಕಯಗಟಿ, ಮೆಣಸಿನಡು ಹಾಗೂ ಹುಣವಿನಡು ಗ್ರಾಮಗಳಲ್ಲಿ ಚನ್ನಕೇಶವ ಮೂರ್ತಿಶಿಲ್ಪಗಳಿದ್ದು ಇವು ಹೊಯ್ಸಳ ಶೈಲಿಯಲ್ಲಿವೆ. ಹಸಿರು ಮೆದುಗಲ್ಲಿನಲ್ಲಿರುವ ಇವು ಸೂಕ್ಷ್ಮ ಕೆತ್ತನೆಯಲ್ಲಿ ಸುಂಧರವಾಗಿವೆ. ಅಲ್ಲದೆ ಈ ಶಿಲ್ಪಗಳಿರುವ ದೇವಾಲಯಗಳು ಶಾಸನೋಕ್ತವಾಗಿವೆ.[೫೩] ಬಾಗೂರಿನ ಚನ್ನಕೇಶವ ದೇವಾಲಯವು ಈ ಪರಿಸರದ ಅತ್ಯಂತ ಪ್ರಸಿದ್ಧ ವೈಷ್ಣವ ದೇವಾಲಯವಾಗಿದ್ದು, ಶಾಸನೋಕ್ತವಾಗಿದೆ.[೫೪] ಕ್ರಿ.ಶ. ೧೫೭೧ರ ಶಾಸನದಲ್ಲಿ 'ಶ್ರೀಮದ್ಭಾಗ್ಯಪುರಾಧೀಕೇಶವೇಶವಸ್ಯ' ಎಂದು ಬಾಗೂರಿನ ಚನ್ನಕೇಶವನನ್ನು ಸಂಭೋದಿಸಲಾಗಿದೆ.[೫೫] ಅದೇ ರೀತಿ ಕ್ರಿ.ಶ.೧೫೫೫ರ ಮತ್ತೊಂದು ಶಾಸನದಲ್ಲಿ 'ಭಾಗ್ಯಪುರದ ಚೆನ್ನಿಗರಾಯ' ಎಂದು ಕರೆಯಲಾಗಿದೆ.[೫೬] ಈ ಚನ್ನಕೇಶವ ಮೂರ್ತಿಶಿಲ್ಪವು ಹೊಯ್ಸಳ ಕಾಲದ ರಚನೆಯಾಗಿದೆ. ಇಲ್ಲಿನ ಚನ್ನಕೇಶವ ಮೂರ್ತಿಶಿಲ್ಪಗಳು ಸ್ಥಾನಕ ಭಂಗಿಯಲ್ಲಿವೆ. ಕೇಶವನು ತನ್ನ ಕೈಯಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹೊಂದಿದ್ದು ಕಿರೀಟ, ಕೇಯೂರ, ಕಂಠೀಹಾರ, ಭುಜಬಂಧ, ಸ್ಕಂದಮಾಲೆ, ಉದರಬಂಧ, ಯಜ್ಞೋಪವಿತ, ವೈಜಯಂತಿ, ಕೈಬಳೆ, ಕಾಲ್ಗಡಗ ಮುಂತಾದವುಗಳನ್ನು ಧರಿಸಿದ್ದಾನೆ. ಸೊಂಟದ ಬಿಗಿತ ಪಾದದವರೆಗೂ ಇದೆ. ಬದಿಯಲ್ಲಿ ಶ್ರೀದೇವಿ ಮತ್ತು ಭೂದೇವಿಯರು ತ್ರಿಂಭಂಗಿಯಲ್ಲಿ ನಿಂತಿರುವರು. ಮೂರ್ತಿಶಿಲ್ಪದ ಪ್ರಭಾವಳಿಯಲ್ಲಿ ಲತಾಸುರುಳಿ ಹಾಗೂ ಮಧ್ಯದಲ್ಲಿ ವ್ಯಾಳವಿದೆ. ಈ ತರನಾದ ಲಕ್ಷಣಗಳನ್ನು ಚನ್ನಕೇಶವನ ಮೂರ್ತಿಶಿಲ್ಪದಲ್ಲಿ ಕಾಣಬಹುದು.

ಬಾಗೂರಿನ ಚನ್ನಕೇಶವ ದೇವಾಲಯದ ಕೋದಂಡರಾಮನ ಕಂಚಿನ ಶಿಲ್ಪವು ಸುಮಾರು ೬೨ ಸೆಂ.ಮೀ. ಎತ್ತರವಿದ್ದು ೧೩.೬ ಸೆಂ.ಮೀ. ಎತ್ತರದ ಪದ್ಮಪೀಠದ ಮೇಲೆ ತ್ರಿಭಂಗಿ ಸ್ಥಾನದಲ್ಲಿ ನಿಂತುಕೊಂಡಿದೆ. ಮೇಲಕ್ಕೆತ್ತಿದ ಎಡಗೈ ಬಿಲ್ಲು ಹಿಡಿದುಕೊಳ್ಳುವ ಮುದ್ರೆಯಲ್ಲಿದ್ದರೆ, ಬಲಗೈ ಕಟಕಾ ಮುದ್ರೆಯನ್ನು ಸೂಚಿಸುತ್ತದೆ. ರಾಮನು ಕಿರೀಟ ಮುಕುಟ ಧರಿಸಿದ್ದಾನೆ. ಇದೊಂದು ಅಂಡೆಯಾಕಾರದ ಕಿರೀಟವಾಗಿದ್ದು ಇದರ ಅಗ್ರಭಾಗ ಶಂಕುವಿನಾಕೃತಿಯಲ್ಲಿದೆ. ವಿಗ್ರಹದ ತಲೆಯ ಹಿಂದೆ ಶಿರಶ್ಚಕ್ರವಿದೆ. ಇದು ಎಂಟು ದಳದ ಪದ್ಮವಿನ್ಯಾಸವನ್ನೊಳಗೊಂಡಿರುವುದು ಚಕ್ರದ ಕೇಂದ್ರ ಭಾಗದಿಂದ ಪುಟ್ಟ ಕುಚ್ಚು ತುಗಾಡುತ್ತಿರುತ್ತದೆ. ಯಜ್ಞೋಪವೀತ ಧರಿಸಿದ್ದು ಇದು ಉದರ ಬಂದಕ್ಕೆ ತಾಗುತ್ತಿದೆ. ಉದರಬಂಧ ಸರಳವಾದ ಅಲಂಕರಣೆಯನ್ನೊಳಗೊಂಡ ಪಟ್ಟಿಯಾಗಿದ್ದು ಎದೆಯ ಕೆಳಭಾಗದಲ್ಲಿ ಸ್ಕಂದಮಾಲೆ ಎಂಬ ಆಭರಣವಿದೆ. ಸರಳವಾದ ಎಳೆಗಳಿಂದ ಕೂಡಿದ ಕಂಠೀಹಾರವಿದೆ. ಇವನ ಕಟೀಸೂತ್ರವು ಅನೇಕ ಪಟ್ಟಿಕೆಗಳಿಂದ ಕೂಡಿದೆ. ಈ ಎಲ್ಲಾ ಆಭರಣಗಳನ್ನು ಧರಿಸಿದ ಕೋದಂಡರಾಮನ ಹಿತಮಿತವಾದ ಅಂಗಾಂಗ ಸೌಷ್ಟವ, ಧೃಡಕಾಯ, ತುಂಬುಗಲ್ಲದ ದುಂಡುಮುಖ, ಕಿರುನಗೆ ತುಂಬಿದ ಪುಟ್ಟ ತುಟಿ, ಚೂಪಾದ ಮೂಗು, ಕೋನಾಕೃತಿಯ ಮೃದುಗಲ್ಲ ನಿಜಕ್ಕೂ ಮನಮೋಹಕವಾಗಿದೆ. ಹಿತಮಿತವಾದರೂ ಸಾಕಷ್ಟು ವಿವರಪೂರ್ಣವಾದ ಅಲಂಕರಣೆಗಳೆಲ್ಲ ಆಕರ್ಷಕವಾಗಿವೆ. ಕಂಚುಶಿಲ್ಪದ ಶೈಲಿಯನ್ನಾಧರಿಸಿ ಎಚ್.ಆರ್. ರಘುನಾಥಭಟ್ ಅವರು ಕೋದಂಡರಾಮನ ಶಿಲ್ಪವು ಚೋಳರ ಕಾಲದ್ದು (೧೧-೧೨ನೇ ಶತಮಾನ) ಎಂದು ಹೇಳಿದ್ದಾರೆ.[೫೭]

ಬಾಗೂರು ಚನ್ನಕೇಶವ ದೇವಾಲಯದ ಪ್ರಾಂಗಣದಲ್ಲಿ ಬರುವ ವೈಕುಂಠನಾರಾಯಣನ ಪುಟ್ಟಗುಡಿ ಇದೆ. ಇಲ್ಲಿನ ವೈಕುಂಠನಾರಾಯಣನ ಮೂತಿಶಿಲ್ಪವು ವೈಷ್ಣವ ಸಂಪ್ರದಾಯದಲ್ಲಿ

ಬಹುಮುಖ್ಯವಾದುದಾಗಿದೆ. ಪೀಠದ ಮೇಲೆ ಇರುವ ಗರುಡನು ತನ್ನ ಭುಜದ ಮೇಲೆ ನಾರಾಯಣನನ್ನು ಹೊತ್ತಿದ್ದಾನೆ. ನಾರಾಯಣನ ಎಡತೊಡೆಯ ಮೇಲೆ ಲಕ್ಷ್ಮೀ ಕುಳಿತಿರುವಳು. ಚತುರ್ಭುಜಧಾರಿಯಾದ ನಾರಾಯಣನ ಕೈಗಳಲ್ಲಿ ಪದ್ಮ, ಚಕ್ರ, ಮೂರನೇ ಕೈಯನ್ನು ಲಕ್ಷ್ಮೀಯ ಮೇಲೆ ನಾಲ್ಕನೇಯ ಕೈಯಲ್ಲಿ ಗಧಾ ಹಿಡಿದಿರುವನು. ನಾರಾಯಣನ ಹಿಂದಿನ ಪ್ರಭಾವಳಿಯು ಹಲವು ಅಲಂಕಾರಗಳಿಂದ ಕೂಡಿದ್ದು ಮಧ್ಯದಲ್ಲಿ ಏಳು ಹೆಡೆಯ ಸರ್ಪವಿದೆ. ಹಾರುವ ಭಂಗಿಯಲ್ಲಿರುವ ಗರುಡನು ತನ್ನ ಎರಡು ಕೈಗಳಲ್ಲಿ ನಾರಾಯಣನ ಕಾಲುಗಳನ್ನು ಹಿಡಿದಿರುವನು. ಈ ರೀತಿಯ ಶಿಲ್ಪಾದಿ ಲಕ್ಷಣಗಳನ್ನು ವೈಕುಂಠನಾರಾಯಣ ಮೂರ್ತಿಶಿಲ್ಪವು ಹೊಂದಿದೆ.

ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಶಿಲಾವಿಗ್ರಹಗಳನ್ನು ಪ್ರತಿಷ್ಠಾಪಿಸುವುದು ನಿಯಮ ಬದ್ಧವಾಗಿದ್ದು ಈ ಪರಿಸರದ ಕೆಲವು ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಶಿಲಾಮೂರ್ತಿಗಳಿವೆ. ಆಳ್ವಾರರು ಎಂದರೆ ಭಕ್ತಿಯಲ್ಲಿ ಅದ್ದವರು, ಮುಳುಗಿರುವವರು, ಭಗವಂತನ ಭಕ್ತಿ ಸಾಮ್ರಾಜ್ಯವನ್ನು ಆಳುವವರು ಎಂದೆಲ್ಲ ಅರ್ಥಗಳಿವೆ.[೬೯] ಬಾಗೂರಿನ ಚನ್ನಕೇಶವ ದೇವಾಲಯದ ವೈಕುಂಠ ನಾರಾಯಣನ ಪುಟ್ಟಗುಡಿಯಲ್ಲಿ ವೈಕುಂಠ ನಾರಾಯಣನ ಎರಡು ಬದಿಗಳಲ್ಲಿ ಸುಮಾರು ೧೨ ಆಳ್ವಾರರ ಶಿಲಾಮೂರ್ತಿಗಳಿವೆ. ಆ ಆಳ್ವಾರರುಗಳೆಂದರೆ ಪೆರಿಯಾಳ್ವಾರ್, ನಮ್ಮಾಳ್ವಾರ್, ಬೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಂಗೈ ಆಳ್ವಾರ್, ತೊಂಡರಪ್ಪೋಡಿ ಆಳ್ವಾರ್, ಕುಲಶೇಖರ್ ಆಳ್ವಾರ್, ತಿರುಮಳೈಶೈಯಾಳ್ವಾರ್ ಮತ್ತು ಅಂಡಾಳ್ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅದೇ ರೀತಿ ಎಸ್. ನೆರಲಕೆರೆಯ ರಂಗನಾಥ ದೇವಾಲಯದಲ್ಲಿಯೂ ಆಳ್ವಾರರ ಮೂರ್ತಿಶಿಲ್ಪಗಳು ಕಂಡುಬರುತ್ತವೆ.

ಹೊಸದುರ್ಗ ಪರಿಸರದಲ್ಲಿ ರಂಗನಾಥ ದೇವಾಲಯಗಳು ಅಪಾರ ಸಂಖ್ಯೆಯಲ್ಲಿವೆ. ಆದರೆ ಇಲ್ಲಿನ ರಂಗನಾಥ ಮೂರ್ತಿಗಳು ಯಾವುದೇ ಶಾಸ್ತ್ರೀಯವಾದ ಪ್ರತಿಮಾ ಲಕ್ಷಣವನ್ನು ಹೊಂದಿರದೇ ಉದ್ಭವ ಮೂರ್ತಿಗಳು ಎಂದು ಕರೆಸಿಕೊಂಡು ಪೂಜೆಗೊಳುತ್ತಿವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮತ್ತೋಡಿನ ಬಾಣದ ರಂಗನಾಥ ದೇವಾಲಯದ 'ಬಾಣದ ರಂಗನಾಥ' ಎಂದು ಕರೆಯಲ್ಪಡುವ ವೈಷ್ಣವ ಮೂರ್ತಿಶಿಲ್ಪವು ಅತ್ಯಂತ ವೈಶಿಷ್ಟ್ಯತೆಯಿಂದ ಕೂಡಿದೆ. ಸ್ಥಾನಕ ಭಂಗಿಯಲ್ಲಿರುವ ರಂಗನಾಥನು ಮುಂದಿನ ಕೈಗಳಲ್ಲಿ ಬಿಲ್ಲು-ಬಾಣ, ಹಿಂದಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿರುವನು. ಈತನ ಬದಿಯಲ್ಲಿ ಶ್ರೀದೇವಿ ಮತ್ತು ಭೂದೇವಿಯನ್ನು ಕಾಣಬಹುದು. ಕರ್ನಾಟಕದಲ್ಲಿ ಬೆಟ್ಟ-ಗುಡ್ಡಗಳಲ್ಲಿ ಕಂಡುಬರುವ ರಂಗನಾಥ ದೇವರು ಮೂಲತಃ ಗುಡ್ಡಗಾಡಿನ ದೇವತೆಯಾಗಿದ್ದು ಇವು ಕ್ರಿ.ಶ. ೧೬-೧೭ನೇ ಶತಮಾನಗಳಲ್ಲಿ ಕಾಣಸಿಗುತ್ತವೆ.[೭೦] ವಿಜಯನಗರ ಕಾಲದ ನಾಯಕ ವ್ಯವಸ್ಥೆಯ ಗುಡ್ಡಗಾಡು ಪ್ರದೇಶಗಳಲ್ಲಿ ಈ ದೇವತೆಯು ಒಂದು ಅಭೂತಪೂರ್ವ ಆಶ್ರಯವನ್ನು ಆಳುವ ವರ್ಗದಿಂದ ಪಡೆಯಿತಲ್ಲದೆ ಇದೊಂದು ಬೇಟೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದೇವತೆಯಾಗಿದೆ.[೭೧] ಹೊಸದುರ್ಗ ಪರಿಸರದ ವಿಜಯನಗರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ 'ಮತ್ತೋಡು ಪಾಳೆಯಗಾರರು' ನಾಯಕ ಜನಾಂಗಕ್ಕೆ ಸೇರಿದವರಾಗಿದ್ದು ಇವರ ಕಾಲದಲ್ಲೇ ಬಾಣದ ರಂಗನಾಥ ದೇವಾಲಯ ನಿರ್ಮಾಣಗೊಂಡಂತೆ ತೋರುತ್ತದೆ.

ಒಟ್ಟಾರೆ ಪ್ರಾದೇಶಿಕವಾಗಿ ಈ ಪರಿಸರದಲ್ಲಿ ಬಾಣದ ರಂಗನಾಥ ಒಂದು ವಿಶಿಷ್ಟವಾದ ವೈಷ್ಣವ ಮೂರ್ತಿಶಿಲ್ಪವಾಗಿದೆ.

ಇನ್ನೂ ಈ ಪರಿಸರದಲ್ಲಿ ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ವೇಣುಗೋಪಾಲ ಮೂರ್ತಿಶಿಲ್ಪಗಳು ಸಹ ಕಂಡುಬರುತ್ತವೆ. ನೀರಗುಂದ, ಮಳಲಿ, ಸೂಜಿಗಲ್ಲು ಮತ್ತು ಬೂದಿಹಾಳು ಪರಿಸರದ ದೇವಾಲಯಗಳಲ್ಲಿ ವೇಣುಗೋಪಾಲ ಮೂರ್ತಿಶಿಲ್ಪಗಳಿವೆ. ಇವುಗಳು ಹೊಯ್ಸಳ ಮತ್ತು ವಿಜಯನಗರ ಶೈಲಿಯಲ್ಲಿವೆ. ಇವುಗಳಲ್ಲಿ ನೀರಗುಂದದ ಸಿದ್ಧೇಶ್ವರ ದೇವಾಲಯದ ಎಡಭಾಗದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಶಿಲ್ಪ ಹಾಗೂ ಮಳಲಿಯ ಗೋಪಾಲಕೃಷ್ಣ ದೇವಾಲಯದ ವೇಣುಗೋಪಾಲ ಮೂರ್ತಿಶಿಲ್ಪಗಳು ಹೊಯ್ಸಳ ಶೈಲಿಯಲ್ಲಿದ್ದು ಅತ್ಯಂತ ಮನೋಜ್ಞವಾಗಿವೆ. ಈ ಶಿಲ್ಪಗಳ ರಚನೆಯಲ್ಲಿ ಪ್ರಭಾವಳಿಯ ಮಧ್ಯದಲ್ಲಿರುವ ಸಿಂಹಲಲಾಟದ ಕೆಳಗೆ ವೇಣುಗೋಪಾಲನು ಬಲಗಾಲನ್ನು ಕರ್ತರಿ ಕಾಲಾಗಿಸಿ ತ್ರಿಭಂಗಿಯಲ್ಲಿ ನಿಂತು ವೇಣುವನ್ನು ನುಡಿಸುತ್ತಿರುವಂತೆ ಇದೆ. ಆದರೆ ಮೂರ್ತಿ ಭಗ್ನಗೊಂಡಿದೆ. ಗೋಪಾಲನ ಕೊರಳಲ್ಲಿ ಸುಂದರವಾದ ಪದಕದ ಹಾರವಿದೆ. ಕೈ ತೋಳಿನಲ್ಲಿ ಭುಜಕೀರ್ತಿ ತೋಳ್ಬಂದಿಯೂ, ಕೈಗಳಲ್ಲಿ ದಪ್ಪವಾದ ಪಟ್ಟಿಯಂತಹ ಕಡಗವಿದೆ. ಸಣ್ಣದಾದ ಕಟಿಯುಳ್ಳ ಗೋಪಾಲನ ಕಟಿಯಲ್ಲಿ ಸುಂಧರವಾದ ಮಣಿಮಾಲೆಯಿಂದ ಕೂಡಿದ ಕಟೀಬಂಧವಿದ್ದು ಅದರ ಮುತ್ತಿನ ಮಾಲೆಗಳು ತೊಡೆಯನ್ನಾವರಿಸಿದೆ.

ಇನ್ನು ಇಲ್ಲಿನ ಪಾಳೆಯಗಾರರ ಕಾಲದ ಅನೇಕ ದೇವಾಲಯಗಳು ಹನುಮಂತನ ಮೂರ್ತಿಶಿಲ್ಪಗಳನ್ನು ಹೊಂದಿವೆ. ಅವುಗಳು ಗ್ರಾನೈಟ್ ಶಿಲೆಯಲ್ಲಿ ೩ ರಿಂದ ೧೦ ಅಡಿ ಎತ್ತರವಿರುವ ಹನುಮಂತನ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ಕೆಲ್ಲೋಡು ಗ್ರಾಮದ ಹನುಮಂತ ಮೂರ್ತಿಶಿಲ್ಪವು ಶಾಸನೋಕ್ತವಾಗಿದೆ.[೨೧]

೫.೪.೩. ಶಾಕ್ತ ಶಿಲ್ಪಗಳು

ಮಾತೃ ದೇವತೆಯ ರೂಪದಲ್ಲಿರುವ ಶಕ್ತಿದೇವತೆಯನ್ನು ಆರಾಧಿಸುವ ಪಂಥವನ್ನು ಶಾಕ್ತ ಪಂಥವೆಂದು ಕರೆಯುತ್ತೇವೆ. ಯಾವ ಒಂದು ಅಸಾಧಾರಣ ಶಕ್ತಿ ಅಥವಾ ಸದ್ಗುಣ ಇಲ್ಲದಿದ್ದರೆ ದೇವರು ಕೂಡ ಈ ಜಗತ್ತಿನಲ್ಲಿ ನಿಷ್ಕ್ರಿಯನಾಗುತ್ತಾನೋ ಆ ಶಕ್ತಿಯನ್ನು ತಮ್ಮ ಮೂಲಾಧಾರವೆಂದು ಶಾಕ್ತ ಸಂಪ್ರದಾಯದವರು ಭಾವಿಸುತ್ತಾರೆ.[೨೨] ಭಾರತದಲ್ಲಿ ಶಾಕ್ತ ಪಂಥದ ಚರಿತ್ರೆಯನ್ನು ಸಿಂಧೂ ಸಂಸ್ಕೃತಿಯಿಂದಲೇ ಗುರುತಿಸುತ್ತೇವೆ. ಅಲ್ಲಿ ದೊರೆತ ಸ್ತ್ರೀ ವಿಗ್ರಹಗಳನ್ನು ಮಾತೃದೇವತೆಯ ವಿಗ್ರಹಗಳೆಂದು ಹೇಳಲಾಗುತ್ತದೆ. ವೈದಿಕ ಕಾಲದಲ್ಲಿ ಇಂದ್ರ, ಅಗ್ನಿ, ವರುಣ, ಸೂರ್ಯ, ವಿಷ್ಣು, ರುದ್ರ ಮುಂತಾದ ಪ್ರಧಾನ ದೇವತೆಗಳಾಗಿದ್ದು ಪುರುಷ ಪ್ರಧಾನ ಎನಿಸಿಕೊಂಡರೂ ಋಗ್ವೇದ 'ಅಂಬ್ರಿನಿಸೂಕ್ತ' ಮತ್ತು 'ರಾತ್ರಿಸೂಕ್ತ'ಗಳು ಮಾತೃದೇವತೆಯ ಆರಾಧನೆಯ ಮೂಲಗಳು ಎನಿಸಿವೆ. ದೇವತೆಗಳ ತಾಯಿ 'ಅದಿತಿ'ಯನ್ನು ಅಲಂಕಾರಿಕವಾಗಿ ಸೃಷ್ಟಿಗೆ ಹೋಲಿಸಲಾಗಿದೆ.[೨೩] ಪುರಾಣಗಳ ಕಾಲದಲ್ಲಿ ಹೆಚ್ಚು ಮಾನ್ಯತೆಯನ್ನು ಪಡೆದ ತ್ರಿಮೂರ್ತಿಗಳನ್ನು ಅವರವರ ಪತ್ನಿಯರ ರೂಪದಲ್ಲಿ 'ಶಕ್ತಿ'ಯನ್ನು ಗುರುತಿಸಿರುವುದು ಕಂಡುಬರುತ್ತದೆ. ಶಿಲ್ಪಗಳಲ್ಲಿ 'ಶಕ್ತಿ'ಯನ್ನು ಶಾಂತ ಮತ್ತು ಘೋರ ರೂಪಗಳಲ್ಲಿ ಕಾಣುತ್ತೇವೆ. ಪತಿಯ ಜೊತೆಯಲ್ಲಿ ಗುರುತಿಸುವಾಗ ಶಾಂತ ರೂಪದಲ್ಲಿ

ಮತ್ತು ಎರಡು ಕೈಗಳನ್ನು ಹೊಂದಿರುವಂತೆ ಒಂದು ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿರುವಂತೆ ತೋರಿಸಲಾಗುತ್ತದೆ. ಘೋರ ರೂಪದಲ್ಲಿ ಶಿವನ ಶಕ್ತಿಯಾದ ಕಾಳಿಯನ್ನು ಹೆಚ್ಚಾಗಿ ಕಾಣುತ್ತೇವೆ. ಈ ಸಂದರ್ಭಗಳಲ್ಲಿ ಅವಳೊಬ್ಬಳನ್ನೇ ನಾಲ್ಕು, ಆರು, ಎಂಟು ಕೈಗಳಿಂದಲೂ ವಿವಿಧ ಆಯುಧಗಳಿಂದಲೂ ಘೋರ ರೂಪದಲ್ಲಿ ತೋರಿಸಲಾಗಿದೆ.

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿರುವ ಲಕ್ಷ್ಮಿ, ಮಹಿಷಮರ್ಧಿನಿ ಶಿಲ್ಪಗಳ ಜೊತೆಗೆ ಸಪ್ತ ಮಾತೃಕೆಯರ ಶಿಲ್ಪಫಲಕಗಳನ್ನು ಕುರಿತು ವಿವೇಚಿಸಲಾಗಿದೆ.

ಲಕ್ಷ್ಮಿ ಶಿಲ್ಪಗಳು : ತ್ರಿಮೂರ್ತಿಗಳಲ್ಲಿ ಪಾಲನ ಕರ್ತನಾದ ವಿಷ್ಣುವಿನ ಪತ್ನಿಯಾಗಿ ಕಂಡುಬರುವ ಲಕ್ಷ್ಮಿ ಅಥವಾ ಶ್ರೀಯು ವೈಭವ, ಸಂಮೃದ್ಧಿ ಮತ್ತು ಸೌಂಧರ್ಯದ ಸಂಕೇತ; ಜೊತೆಗೆ ವೈವಿಧ್ಯಮಯ ಶಕ್ತಿ ಉಳ್ಳವಳು.[೨೪] ಶಿಲ್ಪಗಳಲ್ಲಿ ಇವಳನ್ನು ಕಮಲದ ಮೇಲೆ ಪರ್ಯಾಂಕಾಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತಂತೆ ದ್ವಿಬುಜೆ ಅಥವಾ ಚತುರ್ಭುಜೆ ಉಳ್ಳವಳನ್ನಾಗಿ ತೋರಿಸಲಾಗಿದೆ. ಕಮಲ, ಶ್ರೀಫಲ, ಶಂಖ, ಅಮೃತಘಟ, ಮಾತುಲಿಂಗ, ಖೇಟಕ, ಗದಾ ಮುಂತಾದ ವಿಶಿಷ್ಟವಾದ ಆಯುಧಗಳನ್ನು ಹೊಂದಿರುತ್ತಾಳೆ. ಲಕ್ಷ್ಮಿಯನ್ನು ಎಂಟು ರೂಪದಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಮಹಾಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ವೀರಲಕ್ಷ್ಮಿ, ವಿದ್ಯಾಲಕ್ಷ್ಮಿ, ಸಂತಾನಲಕ್ಷ್ಮಿ ಮತ್ತು ಭಾಗ್ಯಲಕ್ಷ್ಮಿ ಇವರೇ ಅಷ್ಟ ಲಕ್ಷ್ಮಿಯರು.[೨೫] ಹೊಸದುರ್ಗ ತಾಲೂಕಿನ ಬಾಗೂರಿನ ಚನ್ನಕೇಶವ ದೇವಾಲಯದ ಪ್ರಾಂಗಣದಲ್ಲಿ ಆಗ್ನೇಯ ಭಾಗದಲ್ಲಿ ಲಕ್ಷ್ಮಿ ದೇವಿಯ ದೇವಾಲಯವಿದ್ದು ಅದರ ಗರ್ಭಗೃಹದಲ್ಲಿ ಲಕ್ಷ್ಮಿದೇವಿ ಮೂರ್ತಿಶಿಲ್ಪವಿದೆ. ಲಕ್ಷ್ಮೀ ಗುಡಿಯ ನವರಂಗದ ನೆಲದ ಹಾಸುವಿನ ಮೇಲಿರುವ ಕ್ರಿ.ಶ. ೧೫೭೧ರ ಕಾಲದ ಶಾಸನವು ಸಂತೇಬೆನ್ನೂರು ಹನುಮನಾಯಕರ ಮಗ ರಾಜಪ್ಪನಾಯಕನಿಗೆ ಸಂಬಂಧಿಸಿದ್ದು ಈತನು ತಮ್ಮ ತಂದೆ ತಾಯಿಯರಿಗೆ ಪುಣ್ಯವಾಗಬೇಕೆಂದು 'ಲಕ್ಷ್ಮಿದೇವಿ' ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿ ಬಾಗೂರು ಪರಿಸರದ ಕೆಲವು ಗದ್ದೆ ಭೂಮಿಯನ್ನು ದಾನವಾಗಿ ನೀಡಿರುವುದು ತಿಳಿದುಬರುವುದು.[೨೬] ಪದ್ಮಾಸನದಲ್ಲಿ ಕುಳಿತ ಲಕ್ಷ್ಮೀಯು ತನ್ನ ಹಿಂದಿನ ಕೈಗಳಲ್ಲಿ ಕಮಲ ಹಾಗೂ ಅಮೃತಘಟವನ್ನು ಮುಂದಿನ ಎರಡು ಕೈಗಳು ಅಭಯ ಹಾಗೂ ವರದಗಳಾಗಿಯೂ ಕಂಡುಬರುತ್ತದೆ. ಅದೇ ರೀತಿ ಹಾಲುರಾಮೇಶ್ವರ ದೇವಾಲಯದ ನವರಂಗದಲ್ಲಿಯೂ ಒಂದು ಲಕ್ಷ್ಮೀ ಶಿಲ್ಪವು ಇದ್ದು, ಪ್ರತಿಮಾ ಲಕ್ಷಣವಿರುವುದು ಕಂಡುಬರುತ್ತದೆ.

ಮಹಿಷಮರ್ಧಿನಿ ಶಿಲ್ಪಗಳು : ಶಿವನ ಶಕ್ತಿಯಾದ ಪಾರ್ವತಿಯ ಅನೇಕ ರೂಪಗಳಲ್ಲಿ ಮಹಿಷ ಮರ್ಧಿನಿಯೂ ಒಂದು. ಇದು ಪಾರ್ವತಿಯ ಉಗ್ರರೂಪ. ಶಾಸ್ತ್ರಗ್ರಂಥಗಳಲ್ಲಿ ಉಗ್ರರೂಪದ ಯುವತಿಯಂತೆ ರೂಪುಗೊಂಡಿರುವಳು. ಮಹಿಷಮರ್ಧಿನಿಯು ಮಹಿಷಾಸುರನ ಮರ್ಧನಕ್ಕಾಗಿ ಶಿವ, ವಿಷ್ಣು, ಯಮ, ಚಂದ್ರ, ಇಂದ್ರ ಹೀಗೆ ಬೇರೆ ಬೇರೆ ದೇವತೆಗಳ ಒಂದೊಂದು ಶಕ್ತಿಯನ್ನು ಪಡೆದುಕೊಂಡು ಅವತಾರ ಎತ್ತಿರುವಳು.[೨೭] ಶಿಲ್ಪಗಳಲ್ಲಿ ಅವಳ ಪಾದದ ಕೆಳಗೆ ಮಹಿಷನು ಬಿದ್ದಿರುವನು. ಕೋಣದ ತಲೆಯು ನೆಲದ ಮೇಲೆ ಬಿದ್ದಿರುತ್ತದೆ. ಅವರ ಕತ್ತಿನ ಭಾಗದಿಂದ ಮನುಷ್ಯ ಮುಖವು ಹೊರ ಬಂದಿರುತ್ತದೆ. ದೇವಿಯು ಶೂಲದಿಂದ ಅವನನ್ನು

ಸಂಹರಿಸುವಂತೆ ಚಿತ್ರಿಸಲಾಗಿರುತ್ತದೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಚಿಕ್ಕಯಗಟಿಯ ಈಶ್ವರ ದೇವಾಲಯ, ಮೆಣಸಿನಡುವಿನ ಮಲ್ಲಿಕಾರ್ಜುನ ಸೂಜಿಗಲ್ಲಿನ ಸೋಮೇಶ್ವರ ಸೇರಿದಂತೆ ಕೆಲವು ದೇವಾಲಯಗಳಲ್ಲಿ ಮಹಿಷಮರ್ದಿನಿ ಮೂರ್ತಿಶಿಲ್ಪಗಳು ಇದ್ದು ಇವು ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟಕ್ಕೆ ಸೇರಿದವುಗಳು.

ಸಪ್ತ ಮಾತೃಕೆಯರು : ಪಾರ್ವತಿಯ ವಿವಿಧ ರೂಪಗಳು ಎನಿಸಿಕೊಂಡ ಸಪ್ತ ಮಾತೃಕೆಯರು ಸರ್ವಜನರಿಂದ ಪೂಜೆಗೊಂಡವರು. 'ದುರ್ಗಾಸಪ್ತಶತಿ'ಯಲ್ಲಿ ಹೇಳುವಂತೆ ಕೌಶಿಕ ದುರ್ಗೆಯು ರಕ್ತ ಬೀಜಾಸುರನೊಂದಿಗೆ ಯುದ್ಧಕ್ಕೆ ನಿಂತಾಗ ಅವನನ್ನು ಸಂಹರಿಸಲು ಅವಳಿಂದಲೇ ಏಳು ರೂಪಗಳು ಹೊರಹೊಮ್ಮಿದವು ಈ ಏಳು ರೂಪಗಳನ್ನು ಸಪ್ತ ಮಾತೃಕೆಯರು ಎಂದು ಕರೆಯಲಾಗಿದೆ.[೨೮] ಮಾರ್ಕಂಡೇಯ ಪುರಾಣದ ಪ್ರಕಾರ ದೇವಿಯು ಶೂಂಬ ನಿಶೂಂಭರನ್ನು ಕೊಲ್ಲಲು ಹೊರಟಾಗ ಬ್ರಹ್ಮ, ಕಾರ್ತಿಕೇಯ, ವಿಷ್ಣು ಮತ್ತು ಇಂದ್ರ ಇವರುಗಳಿಂದ ಶಕ್ತಿಯರು ಸೃಷ್ಟಿಯಾದರು. ಈ ಪುರಾಣವು ಎಂಟು ಜನ ಶಕ್ತಿಯರನ್ನು ಹೆಸರಿಸುತ್ತದೆ.[೨೯] ಈ ಮಾತೃಕೆಯರ ಮೂರ್ತಿ ಲಕ್ಷಣಗಳನ್ನು ಅಗ್ನಿಪುರಾಣ, ಮತ್ಸ್ಯಪುರಾಣ, ರೂಪಮಂಡನ, ಶ್ರೀತತ್ವನಿಧಿ ಗ್ರಂಥಗಳು ವಿವರಿಸಿವೆ. ಈ ಏಳು ಮಾತೃಕೆಯರು ಕ್ರಮವಾಗಿ ಬ್ರಾಹ್ಮಿ, ವೈಷ್ಣವಿ, ಮಾಹೇಶ್ವರಿ, ಕೌಮಾರಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಿ ಇವರೆಲ್ಲ ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂಧ, ವರಾಹಿ, ಇಂದ್ರನ ಶಕ್ತಿಯ ರೂಪಗಳು. ಸಪ್ತಮಾತೃಕೆಯರ ಗೋಪ್ಯವಾದ ಅರ್ಥವಿವರಣೆಯನ್ನು ತಂತ್ರಶಾಸ್ತ್ರದಲ್ಲಿ ಮಾಡಲಾಗಿದೆ. ಇವರಿಗೆ ಸಂಬಂಧಿಸಿದ ಆಯುಧಗಳು, ವಾಹನಗಳು ಶಕ್ತಿಯ ವಿವರಣೆ ಈ ಕೆಳಗಿನಂತಿದೆ.[೩೦]

ಬ್ರಾಹ್ಮೀ : ಹಂಸವಾಹನರೂಢಳಾಗಿ, ಚರ್ತುರ್ಭುಜೆಯಾಗಿದ್ದು ಕ್ರಮವಾಗಿ ಪುಸ್ತಕ, ಅಕ್ಷಮಾಲೆ, ಅಂಕುಶ, ಕಮಂಡಲಗಳನ್ನು ಧರಿಸಿರುವಳು. ಇವಳು ಸೃಷ್ಟಿಮೂಲದ ನಾದದೇವತೆ ಇವಳಿಂದಲೇ ಸೃಷ್ಟಿಯು ಆವಿಷ್ಕರಣಗೊಂಡಿತು.

ವೈಷ್ಣವಿ : ಇವಳು ಉಲ್ಲೂಕ(ಗರುಡ) ವಾಹನದ ಮೇಲೆ ಆಸೀನಳಾಗಿರುವಳು. ಚರ್ತುರ್ಭುಜೆಯಾಗಿದ್ದು ಚಕ್ರ, ಶಂಖ, ಗಧೆ, ಅಭಯಹಸ್ತಗಳನ್ನು ಹೊಂದಿರುವಳು. ಇವಳು ಬ್ರಾಹ್ಮಿಯಿಂದ ಸೃಷ್ಟಿಗೊಂಡು ಜಗತ್ತಿಗೆ ಕ್ರಮಬದ್ಧ ರೂಪವನ್ನು ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವಳು.

ಮಾಹೇಶ್ವರಿ : ಇವಳು ವೃಷಭರೂಢಳಾಗಿ ಚರ್ತುರ್ಭುಜೆಯಾಗಿರುವಳು. ತ್ರಿಶೂಲ, ಡಮರು, ಅಭಯ ಮತ್ತು ಕಪಾಲ ಹಸ್ತಗಳನ್ನು ಹೊಂದಿರುವಳು. ಮೂರು ಕಣ್ಣುಗಳನ್ನು ಉಳ್ಳವಳಾಗಿರುವಳು. ಇವಳು ತನ್ನ ಶಕ್ತಿಯಿಂದ ಸೃಷ್ಟಿಗೊಂಡ ಪ್ರತಿ ಜೀವಿಯಲ್ಲೂ ವ್ಯಕ್ತಿತ್ವವನ್ನು ರೂಪಿಸುವಳು.

ಕೌಮಾರಿ : ಇವಳು ನವಿಲುವಾಹನಾರೂಢಳು. ಚತುರ್ಭುಜೆಯಾಗಿದ್ದು ವಜ್ರ, ತ್ರಿಶೂಲ, ಈಟಿ, ಅಭಯಹಸ್ತಗಳನ್ನು ಹೊಂದಿರುವಳು. ಇವಳು ಯವ್ವನ ಸೂಚಿಸುವ ದೇವತೆ, ಬಯಕೆಗಳನ್ನು ಕ್ರಮಕ್ರಮವಾಗಿ ವಿಕಸಿಸುವವಳು.

ವರಾಹಿ : ಇವಳು ವರಾಹ ಮುಖದವಳಾಗಿದ್ದು, ಗಂಟೆ, ಚಾಮರ, ಚಕ್ರ, ದಂಡಹಸ್ತೆಯಾಗಿರುವಳು. ಇವಳು ಪ್ರತಿ ಜೀವಿಗೂ ತಿನ್ನುವ ಶಕ್ತಿಯನ್ನು ಪಚನಶಕ್ತಿಯನ್ನು ದಯಪಾಲಿಸುವವಳು. ಇವಳ ದಯೆಯಿಂದ ಎಲ್ಲ ಜೀವಿಗಳು ತಮ್ಮ ಆಹಾರವನ್ನು ಪಡೆಯುವರು. ಭೌತಿಕ ಆನಂದವನ್ನು ಹೊಂದುವರು.

ಇಂದ್ರಾಣಿ : ಇವಳು ಗಜಾರೂಢ, ಚತುರ್ಭುಜೆ, ಪಾಶ, ಅಂಕುಶ, ಅಭಯ, ವರದ ಹಸ್ತೆಯಾಗಿರುವಳು. ಇವಳು ತನ್ನ ಶಕ್ತಿಯಿಂದ ವಿಶ್ವದ ನಿಯಮವನ್ನು ಪಾಲಿಸುವವಳು.

ಚಾಮುಂಡಾ : ಇವಳು ಚತುರ್ಭುಜೆಯಾಗಿದ್ದು ಕಪಾಲ, ಕಮಲ, ವರದ, ಅಭಯ ಹಸ್ತಳಾಗಿರುವಳು. ಇವಳು ತನ್ನ ಶಕ್ತಿಯಿಂದ ಜೀವಿಯ ತಿಳುವಳಿಕೆಯನ್ನು ಹೆಚ್ಚಿಸಿ ಅಪಕ್ವವಾದ ಮನಸ್ಸು, ಬುದ್ಧಿ ಅಂತಃಕರಣಗಳನ್ನು ಪಕ್ವತೆಯತ್ತ ಒಯ್ಯುವಳು.

ಸಪ್ತಮಾತೃಕೆಯರ ಪಟ್ಟಿಯಲ್ಲಿ ಎಡಬಲದಲ್ಲಿ ವೀರಭದ್ರನನ್ನು ಗಣಪತಿಯನ್ನು ಇರಿಸಬೇಕೆಂದು ಹೇಳಲಾಗುತ್ತದೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಮೆಣಸಿನಡು ಗ್ರಾಮದ ಮಲ್ಲಿಕಾರ್ಜುನ ದೇವಾಲಯ ಹಾಗೂ ಬೆಲಗೂರು ಗ್ರಾಮ ಪರಿಸರದ ಈಶ್ವರ ದೇವಾಲಯದಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬಂದಿವೆ.

೫.೪.೪. ಜೈನ ಶಿಲ್ಪಗಳು

ಜೈನಮೂರ್ತಿಶಿಲ್ಪವು ವೈದಿಕ ಪರಂಪರೆಯ ಮೂರ್ತಿಶಿಲ್ಪಕ್ಕಿಂತ ಬಹುಮಟ್ಟಿಗೆ ಭಿನ್ನವಾಗಿದ್ದು ತನ್ನದೇ ಆದ ಮೂರ್ತಿ ಲಕ್ಷಣಗಳನ್ನು ಹೊಂದಿದೆ. ಜೈನಧರ್ಮದ ಶಿಲ್ಪಶಾಸ್ತ್ರಗ್ರಂಥಗಳು ಜಿನಬಿಂಬದ ಲಕ್ಷಣಗಳ ಬಗ್ಗೆ ತಿಳಿಸುತ್ತವೆ. 'ಬೃಹತ್ಸಂಹಿತೆ'ಯಲ್ಲಿ 'ಜಿನನ ಬಿಂಬವು ಅಜಾನುಬಾಹುವಾಗಿ, ದಿಗಂಬರನಾಗಿ, ಶ್ರೀವತ್ಸಾಂಕವುಳ್ಳ ಪ್ರಶಾಂತ ಮೂರ್ತಿಯಂತಿರಬೇಕು. ತರಣನು, ಸುಂಧರನು ಆದ ಜಿನನು ಕಾರುಣ್ಯಮೂರ್ತಿ' ಎಂದು ತಿಳಿಸುತ್ತದೆ.[೫೧] ತೀರ್ಥಂಕರರ ಶಿಲ್ಪರಚನೆಯು ತೀರ ಸರಳವಾಗಿದ್ದು ಇದರಲ್ಲಿ ಧ್ಯಾನಾಸಕ್ತನಾಗಿರುವ ತೀರ್ಥಂಕರನ ಎರಡು ಭಂಗಿಗಳು ಜನಪ್ರಿಯವಾಗಿವೆ. ಮೊದಲನೆಯದ್ದು ಕಾಯೋತ್ಸರ್ಗ ಭಂಗಿ, ಎರಡನೆಯದು ಪದ್ಮಾಸನ ಭಂಗಿ. ಇದಕ್ಕೆ ಕಾರಣ ಜೈನ ಪರಂಪರೆಯಲ್ಲಿ ವರ್ತಮಾನ ಕಾಲದ ೨೪ ತೀರ್ಥಂಕರರಲ್ಲಿ ೨೧ ಜನರು ಕಾಯೋತ್ಸರ್ಗ ಭಂಗಿಯಲ್ಲಿ ನಿಂತು ನಿರ್ವಾಣ ಹೊಂದಿರುವರು. ಉಳಿದ ಮೂವರು ತೀರ್ಥಂಕರರಾದ ಆದಿನಾಥ, ನೇಮಿನಾಥ ಮತ್ತು ಮಹಾವೀರರು ಪದ್ಮಾಸನ ಭಂಗಿಯಲ್ಲಿ ಕುಳಿತು ನಿರ್ವಾಣ ಹೊಂದಿದ್ದಾರೆ.[೫೨] ಬೃಹತ್ ಸಂಹಿತೆಯಲ್ಲಿ ಜೈನಮೂರ್ತಿಶಿಲ್ಪದ ಲಕ್ಷಣವನ್ನು ವರ್ಣಿಸಲಾಗಿದೆ. ಜಿನಪ್ರತಿಮೆಗಳು ಶಾಂತವು ಪ್ರಸನ್ನವೂ ಮಧ್ಯಸ್ಥವೂ ನಾಸಾಗ್ರಸ್ಥಿತವೂ ಇದ್ದು ಶುಭಲಕ್ಷಣಗಳಿಂದ ಕೂಡಿರಬೇಕು. ಅಷ್ಟಪ್ರತಿಹಾರ್ಯಗಳಾದ ಅಶೋಕವೃಕ್ಷ, ಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಸಿಂಹಾಸನ, ಪ್ರಭಾಮಂಡಲ, ದುಂದುಭಿ ಮೂರು ಛತ್ರಿಗಳು ಹಾಗೂ ಯಕ್ಷ ಯಕ್ಷಿಯರ ಸಹಿತವಾಗಿರಬೇಕೆಂದು ಹೇಳಲಾಗಿದೆ.[೫೩] ವೈದಿಕೇತರ ಧರ್ಮವಾದ ಜೈನ ಧರ್ಮದಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರನ್ನು ಹೆಸರಿಸಲಾಗಿದೆ. ಈ ಶಿಲ್ಪಗಳನ್ನು ಪೀಠದ ಬಳಿಯ ಲಾಂಛನಗಳಿಂದ ಇಲ್ಲವೆ ಶಾಸನಾದಿ ದೇವತೆಯಿಂದ ಗುರುತಿಸಬಹುದು.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಜಿನಶಿಲ್ಪಗಳು ಅತ್ಯಲ್ಪವಾಗಿವೆ. ಹೊಸದುರ್ಗ ತಾಲೂಕು ಪರಿಸರದ 'ಹೆಗ್ಗೆರೆ' ಮತ್ತು 'ಜಾನಕಲ್ಲು' ಪ್ರಮುಖ ಜೈನಕೇಂದ್ರಗಳಾಗಿವೆ. ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿಯು ಹೊಯ್ಸಳರ ಕಾಲದ್ದಾಗಿದ್ದು ಇಲ್ಲಿನ ಮೂಲ ಮೂರ್ತಿಯನ್ನು ಶಾಸನಗಳಲ್ಲಿ 'ಚನ್ನಪಾರ್ಶ್ವ ದೇವರು' ಎಂದು ಕರೆಯಲಾಗಿದೆ.[೩೪] ಆದರೆ ಯಾವುದೋ ಒಂದು ಕಾಲಘಟ್ಟದಲ್ಲಿ ಈ ಮೂರ್ತಿ ಇಲ್ಲವಾಗಿ ನಂತರದಲ್ಲಿ ಅದೇ ಸ್ಥಳದಲ್ಲಿ ಏಳನೆಯ ತೀರ್ಥಂಕರನಾದ ಸುಪಾರ್ಶ್ವನಾಥ ಸ್ವಾಮಿಯ ಹೊಸದಾದ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪವು ಕಾಯೋತ್ಸರ್ಗ ಭಂಗಿಯಲ್ಲಿದ್ದು ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಮೂಲದ 'ಪಾರ್ಶ್ವನಾಥ' ಮೂರ್ತಿಶಿಲ್ಪದ ಅವಶೇಷಗಳು ಬಸದಿಯ ಹೊರಗಿನ ಕಟ್ಟೆಯ ಮೇಲೆ ಇದೆ. ಇನ್ನು ಗರ್ಭಗೃಹದಲ್ಲಿ ಪದ್ಮಾವತಿ ಯಕ್ಷಿಯ ಹೊಯ್ಸಳ ಶೈಲಿಯ ಮೂರ್ತಿಶಿಲ್ಪವಿದೆ. ಅದರೊಂದಿಗೆ 'ಬ್ರಹ್ಮಯಕ್ಷ'ನ ಲೋಹದ ಮೂರ್ತಿಶಿಲ್ಪವಿದೆ. ಜಾನಕಲ್ಲು ಗ್ರಾಮದ 'ನೇಮಿನಾಥ' ಬಸದಿಯು ಹೊಯ್ಸಳ ಕಾಲದ್ದಾಗಿದೆ. ಬಸದಿಯ ಗರ್ಭಗೃಹದಲ್ಲಿರುವ ೨೨ನೇ ತೀರ್ಥಂಕರನಾದ ನೇಮಿನಾಥ ಮೂರ್ತಿಶಿಲ್ಪವು ಕಪ್ಪು ಶಿಲೆಯಲ್ಲಿ ರಚಿಸಲ್ಪಟ್ಟಿದೆ. ಅಂತರಾಳದಲ್ಲಿ ಪದ್ಮಾವತಿ ಯಕ್ಷಿಯ ಶಿಲ್ಪವಿದೆ.

ಹೀಗೆ ಹೊಸದುರ್ಗ ತಾಲೂಕು ಪರಿಸರದ ದೇವಾಲಯಗಳ ಮೂರ್ತಿಶಿಲ್ಪಗಳು ಅತ್ಯಂತ ವೈವಿಧ್ಯ ಹಾಗೂ ವೈಶಿಷ್ಟ್ಯತೆಯಿಂದ ಕೂಡಿವೆ. ಇಲ್ಲಿನ ಮೂರ್ತಿಶಿಲ್ಪಗಳು ಶೈವ, ವೈಷ್ಣವ, ಶಾಕ್ತ, ಮತ್ತು ಜೈನ ಪಂಥಕ್ಕೆ ಸೇರಿವೆ. ಇನ್ನು ಈ ಶಿಲ್ಪಗಳು ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟಕ್ಕೆ ಸೇರಿದವುಗಳು ಹಾಗೂ ಅಂದಿನ ಶೈಲಿಯನ್ನು ಹೊಂದಿವೆ. ಇಲ್ಲಿನ ಶಿಲ್ಪಗಳ ರಚನೆಗೆ ಕಪ್ಪು, ಹಸಿರು ನಾರುಗಲ್ಲು, ಕೆಂಪು ಮತ್ತು ಬಿಳಿ ಕಣಶಿಲೆಗಳನ್ನು ಬಳಸಲಾಗಿದೆ. ಶೈಲಿ ಹಾಗೂ ಕಾಲಘಟ್ಟದ ಹಿನ್ನೆಲೆಯಲ್ಲಿ ಹೊಯ್ಸಳ ಮೂರ್ತಿಶಿಲ್ಪಗಳು ಅಧಿಕ ರಚನೆಗೊಂಡಿರುವುದು ಗಮನಾರ್ಹ. ಈ ಶಿಲ್ಪಗಳ ರಚನೆಯಲ್ಲಿ ಸೂಕ್ಷ್ಮ ಕೆತ್ತನೆ, ಸೌಂದರ್ಯ ನಿರೂಪಣೆ ಬಹುವಾಗಿ ಕಾಣಬಹುದು. ದೇಹದ ಪ್ರಮಾಣ, ವಸ್ತ್ರವಿನ್ಯಾಸ, ಕೇಶರಾಶಿ, ಆಭರಣಗಳು, ಆಯುಧಗಳು, ವಾಹನ, ಪೀಠಗಳು ಪ್ರಭಾವಳಿ ಅಪ್ಸರೆಯರು ಮುಂತಾದವುಗಳನ್ನು ಅತ್ಯಂತ ಶೃಂಗಾರಪೂರ್ಣವಾಗಿ ಕೆತ್ತಿದ್ದಾರೆ. ಒಟ್ಟಾರೆ ಹೊಯ್ಸಳ ಮೂರ್ತಿಶಿಲ್ಪಗಳು ಅತ್ಯಂತ ಸುಂದರವಾಗಿವೆ. ವಿಜಯನಗರ ಕಾಲದ ಮೂರ್ತಿಶಿಲ್ಪಗಳ ರಚನೆಗೆ ಕಪ್ಪು ಹಾಗೂ ಬಿಳಿಕಣಶಿಲೆಯನ್ನು ಹೆಚ್ಚು ಬಳಸಿದ್ದಾರೆ. ಇವುಗಳ ರಚನೆಯಲ್ಲಿ ತುಂಬಾ ಎತ್ತರ, ದಪ್ಪದಾಗಿರುವ ಶಿಲ್ಪಗಳನ್ನು ಕಾಣಬಹುದಾಗಿದ್ದು ಇವುಗಳನ್ನು ಸುಂದರವಾಗಿ ರೂಪಿಸಿಲ್ಲ, ಸೂಕ್ಷ್ಮ ಕೆತ್ತನೆಗಳು ಕಂಡುಬರುವುದಿಲ್ಲ. ಧಾರ್ಮಿಕ ಪಂಥಗಳ ನೆಲೆಯಲ್ಲಿ ನೋಡಿದಾಗ ಶೈವ ಹಾಘೂ ವೈಷ್ಣವ ಶಿಲ್ಪಗಳೇ ಅಪಾರವಾಗಿವೆ. ಶೈವ ಶಿಲ್ಪಗಳಲ್ಲಿ ಚಾಲುಕ್ಯ, ಹೊಯ್ಸಳ ಕಾಲದ ಶಿವಲಿಂಗ, ನಂದಿ, ಭೈರವ ಹಾಗೂ ವೀರಭದ್ರ ಶಿಲ್ಪಗಳು ಹೆಚ್ಚಾಗಿ ಕಾಣಬರುತ್ತವೆ. ವೈಷ್ಣವ ಶಿಲ್ಪಗಳಲ್ಲಿ ಹೊಯ್ಸಳ ಕಾಲದ ಚನ್ನಕೇಶವ, ವೇಣುಗೋಪಾಲ ಶಿಲ್ಪಗಳು ದೊರೆತಿವೆ. ಒಟ್ಟಾರೆ ಈ ಪರಿಸರದ ಮೂರ್ತಿಶಿಲ್ಪಗಳು ಅತ್ಯಂತ ಮನೋಜ್ಞತೆಯಿಂದ ಕೂಡಿವೆ.

೫.೫ ಸ್ಮಾರಕ ಶಿಲ್ಪಗಳು

೫.೫.೧. ವೀರಗಲ್ಲುಗಳು

'ವೀರ' ಎಂಬ ಪದವು ಮೂಲತಃ ಸಂಸ್ಕೃತ ಭಾಷೆಯಿಂದ ವ್ಯುತ್ಪತ್ತಿಯಾಗಿದ್ದು, ಈ ಭಾಷೆಯಿಂದ ನೇರವಾಗಿ ಕನ್ನಡ ಮತ್ತು ಇತರ ಭಾಷೆಗಳಲ್ಲಿಯೂ ಈ ಪದವು ತನ್ನ ಮೂಲಾರ್ಥವನ್ನು ಉಳಿಸಿಕೊಂಡು ಬಂದಿದೆ. ಹಾಗೆಯೇ ಈ ಪದವು ಇಂಡೋ-ಆರ್ಯನ್ ಭಾಷೆಗಳಲ್ಲಿ ಬಳಕೆಯಾಗಿದೆ.[೫೫] ವೀರ ಎಂಬ ಪದದ ತದ್ಭವ ರೂಪ ಬೀರ.[೫೬] ವೀರನೊಬ್ಬನು ರಣರಂಗದಲ್ಲಿ ಹೋರಾಡಿ ವೀರ ಮರಣ ಹೊಂದಿದ್ದರೆ ಅವನ ಶಾಶ್ವತ ನೆನಪಿಗಾಗಿ ಪ್ರತಿಷ್ಠಾಪಿಸುವ ಶಿಲೆಗಳನ್ನು ವೀರಗಲ್ಲುಗಳೆಂದು ಕರೆಯುವರು.[೫೭] ಕರ್ನಾಟಕವು ಪೂರ್ವಕಾಲದಿಂದಲೂ ವೀರತ್ವ, ತ್ಯಾಗ ಮತ್ತು ಧರ್ಮಗಳಿಗೆ ಹೆಸರಾದ ನೆಲವಾಗಿದೆ. ಇಲ್ಲಿನ ಜನರು ಶಾಂತಿಪ್ರಿಯರಾಗಿದ್ದಲ್ಲದೆ ವೀರರೂ ಆಗಿದ್ದರೆಂದು ಶಿಷ್ಟ ಸಾಹಿತ್ಯ, ಜನಪದಸಾಹಿತ್ಯ ಮತ್ತು ಇತರೆ ದಾಖಲೆಗಳಿಂದ ತಿಳಿದುಬರುತ್ತದೆ. ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಯುದ್ಧವೆಂಬುದು ಅನಿವಾರ್ಯದ ಘಟನೆಯಾಗಿತ್ತು. ಈ ಯುದ್ಧದಲ್ಲಿ ಹೋರಾಡುವವರನ್ನು ವೀರರೆಂದೂ, ಹೋರಾಟದಲ್ಲಿ ಸತ್ತವರನ್ನು ಸ್ವರ್ಗಕ್ಕೆ ಸಂದವರೆಂದೂ ಸಮಾಜ ನಂಬಿತ್ತು.[೫೮] ಒಡೆಯನ, ಅನ್ನದಾತನ ಅಥವಾ ಆಶ್ರಯದಾತನ ಋಣವನ್ನು ತೀರಿಸುವ ಸಲುವಾಗಿ ಆದರ್ಶದ ಬೆನ್ನುಹತ್ತಿ ಹೋರಾಡಿ ಮರಣಿಸುತ್ತಿದ್ದರು. ಒಡೆಯನಿಗಾಗಿ ಪ್ರಾಣ ಕೊಡುವುದೇ ತಮ್ಮ ಪರಮ ಕರ್ತವ್ಯವೆಂದು ನಂಬಿದ್ದ ಜೋಳವಾಳಿ, ವೇಳೆವಾಳಿ, ಲೆಂಕರು, ಗರುಡರು ಎಂಬ ವ್ರತಧಾರಿಗಳು ಅಧಿಕಾರಿಗಳ ಬಳಿ ಗುಂಪುಗುಂಪಾಗಿರುತ್ತಿದ್ದರು. ಇವರು ಸ್ವಾಮಿ ಪ್ರೀತಿಯ, ಸೇವೆಯ, ನಂಬಿಕೆಯ ಪ್ರತೀಕವೆಂದು ಕಂಡುಬರುತ್ತಿದ್ದರು.

ಪಂಪನು ತನ್ನ 'ವಿಕ್ರಮಾರ್ಜುನ ವಿಜಯಂ' ಕಾವ್ಯದಲ್ಲಿ ಹೀಗೆ ಹೇಳಿದ್ದಾನೆ.

"ಸುರಲೋಕಂ ದೊರೆಕೊಳ್ಳುದೊಂದು ಪರಮ ಶ್ರೀಲಕ್ಷ್ಮಿಯು ಬರ್ಪುದಾದರದಿಂ ದೇವ ನಿಕಾಯದೊಳ್ ನೆರೆವುದೊಂದುತ್ಸಾಹಮಂ ತನ್ನಯಯ್ಸಿರಿ ಭಾಗ್ಯಂ ನೆರೆಮಪ್ಪುದೊಂದೆ ರಣದೊಳ್ ಗಲ್ಡಾಜಿಯಂ ತಳ್ತು ಸಂಗರದೊಳ್ ಜೋಳದ ಪಾರೆಯಂ ನೆರಪಿದಂ ಗಡಂ ಪೆರಂ ಗಂಡನೆ."

- ಎಂದು ರಣರಂಗದಲ್ಲಿ ಹೋರಾಡಿ ಜೋಳದ ಋಣವನ್ನು ತೀರಿಸುವವನೇ ನಿಜವಾದ ಗಂಡಸು. ಹಾಗೆ ಹೋರಾಡದವರು ಗಂಡಸರಲ್ಲ ಎಂದು ಹೇಳುತ್ತಾನೆ. ಈ ಮಾತು ನಮ್ಮ ಪ್ರಾಚೀನ ಕರ್ನಾಟಕದ ವೀರಪರಂಪರೆಯ ಆದರ್ಶಮಯ ಮನೋಭಾವವನ್ನು ಪ್ರತಿಫಲಿಸುತ್ತದೆ.[೫೯]

ಅಂದಿನ ಸಮಾಜದಲ್ಲಿ ಯುದ್ಧೋತ್ಸಾಹ ಹಾಗೂ ವೀರ ಪರಂಪರೆಗೆ ಆ ಕುರಿತು ಅವರಲ್ಲಿದ್ದ ಕೆಲವು ಬಲವಾದ ನಂಬಿಕೆಗಳೇ ಕಾರಣ. ದೇಹವೆನ್ನುವುದು ಅಶಾಶ್ವತವಾದುದು, ಕೀರ್ತಿಯು ಚಿರಸ್ಥಾಯಿಯಾದುದು. ಅಶಾಶ್ವತವಾದ ದೇಹವು ಹೋದರೂ ಹೋಗಲಿ, ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕೆಂಬುದು ಜನರ ಬಯಕೆಯಾಗಿತ್ತು.[೬೦] ಆ ಕಾಲದಲ್ಲಿ ಒಬ್ಬ ದೊಡ್ಡ ವಿದ್ವಾಂಸನ ಹೆಸರೂ ಅಥವಾ ಒಬ್ಬ ಮಹಾದಾನಿಯ ಹೆಸರೂ ನಾಡಿನಲ್ಲಿ ಬಹುವಾಗಿ ಪ್ರಸಾರವಾಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಯುದ್ಧದಲ್ಲಿ ಪ್ರಾಣತ್ಯಾಗವನ್ನು ಮಾಡಿದ ವೀರನ ಹೆಸರು ಈ ಲೋಕದಲ್ಲಿ ಮಾತ್ರವಲ್ಲ, ಪರ ಲೋಕದಲ್ಲಿಯೂ 'ಪಡೆಮಾತಾ'ಗುತ್ತಿತ್ತು.

ಅವನು ಮಾಡಿದ ತ್ಯಾಗಗಳು ಇಪ್ಪತ್ತು ತಲೆಗಳವರೆಗೆ ಇರುತ್ತವೆ ಎಂದು ಶಾಸನವೊಂದು ಹೇಳುತ್ತದೆ.[೩೪೧] ಸತ್ತಮೇಲೆ ಮಾತ್ರವಲ್ಲ ಬದುಕಿರುವಾಗಲೇ ಅನೇಕ ಶೂರರ ಹೆಸರುಗಳು ಜನರ ನಾಲಗೆಯ ಮೇಲೆ ನಲಿಯುತ್ತಿದ್ದುವು.

ಜನರಲ್ಲಿ ಯುದ್ಧೋತ್ಸಾಹವನ್ನು ತುಂಬಲು ಹಲವು ಪ್ರಚೋದನೆಗಳು ಇರುತ್ತಿದ್ದವು. ಯುದ್ಧದಲ್ಲಿ ಗೆದ್ದರೆ ಇಹಲೋಕದಲ್ಲಿ ಸತ್ತರೆ ಪರಲೋಕದಲ್ಲಿ ಸುಖಿಸಬಹುದು ಎಂದು ಜನರು ನಂಬಿದ್ದರು. ಆ ಪ್ರಕಾರ ರಣರಂಗದಲ್ಲಿ ಸತ್ತ ವೀರನಿಗಾಗಿ ದೇವಲೋಕದ ಕನ್ನೆಯರು ಕಾದುಕೊಂಡಿರುತ್ತಿದ್ದರಷ್ಟೇ ಅಲ್ಲ, ಅವನನ್ನು ಪಡೆಯಲು ಅವರಲ್ಲಿ ಪೈಪೋಟಿಯು ನಡೆಯುತ್ತಿತ್ತು. ಅವನನ್ನು ದೇವಾಂಗನೆಯರು ಸ್ವರ್ಗಕ್ಕೋ ಶಿವನೋಲಗಕ್ಕೋ ಕೊಂಡೊಯ್ಯುತ್ತಾರೆ ಎಂದು ಜನರು ನಂಬಿದ್ದರು. ಈ ವಿಷಯವನ್ನು ಹೇಳುವ ಸಂಸ್ಕೃತ ಶ್ಲೋಕವೊಂದು ಅನೇಕ ವೀರಶಾಸನಗಳ ಅಂತ್ಯದಲ್ಲಿ ಕಾಣಿಸಿಕೊಳ್ಳುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ ಕ್ಷಣ ವಿಧ್ವಂಸಿನಿ ಕಾಯೆ ಕಾ ಚಿಂತಾ ಮರಣೇ ರಣೇ॥[೩೪೨] ದುರ್ಗಸಿಂಹನ ಪಂಚತಂತ್ರದಲ್ಲಿ ಈ ಶ್ಲೋಕ ಕಾಣಿಸಿಕೊಂಡಿದ್ದು, ಅಂದು ಇದು ಬಹು ಪ್ರಸಿದ್ಧವಾದ ಶ್ಲೋಕವಾಗಿದ್ದಿತು.

ಬಾದಾಮಿ ಕಪ್ಪೆ ಅರಭಟ್ಟನ ಶಾಸನದ ಸಂಸ್ಕೃತ ಶ್ಲೋಕವು 'ತೇಜಸ್ವಿಗಳಿಗೆ ಶ್ರೇಷ್ಠವಾದುದು ಮೃತ್ಯುವೇ ಹೊರತು ಮಾನಭಂಗವಲ್ಲ' ಎಂದು ಹೇಳಿದೆ.[೩೪೩] ಆದಿಕವಿ ಪಂಪನು 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಯುದ್ಧಕ್ಕೆ ಹೊರಟುನಿಂತ ಸೈನಿಕನ ಮತ್ತು ಅವನನ್ನು ಬೀಳ್ಕೊಡುವ ಪತ್ನಿಯ ಹೃದಯಂಗಮ ಸಂಭಾಷಣೆಯನ್ನು ಈ ರೀತಿ ಚಿತ್ರಿಸಿದ್ದಾನೆ.

'ಓರ್ವಂ ತನ್ನ ನಲ್ಲಳೊಳಿಂತೆಂದನೀ ಪೊರ್ತೆ ಪೊರ್ತು ನಾಳೆ ದೇವಲೋಕದ ಕನ್ಯಕೆಯ ರೋಲಗದೊಳಿರ್ಪೆನೆಂದು ನುಡಿಯೆ ನೀನೆಂದಂತು ಪೋಗಲ್ ತೀರದು ನಾಳೆ ಮಗುರ್ದು ಬಂದೆನ್ನೊಳ್ ನೆರೆವೆಯೆಂದು ಪೆರೆ ನಿನಗರಿವುಂಟೆ ಎಂದು ಕೇಳಿ ಎನ್ನೋಲೆಯ ಭಾಗ್ಯ ಮುಂಟು'.[೩೪೪]

ವೀರಮರಣ ವೀರನಿಗೆ ಮಾತ್ರವಲ್ಲ ಅವನ ತಾಯಿಗೂ ಹೆಮ್ಮೆಯ ಸಂಗತಿಯಾಗಿತ್ತೆಂದು ತಮಿಳು ಸಂಗಮ್ ಸಾಹಿತ್ಯವು ಪರಿಚಯಿಸುತ್ತದೆ. ವೀರನು ರಣರಂಗದಿಂದ ಓಡಿ ಹೋದರೆ ಅವನಿಗೆ ಹಾಲುಣಿಸಿದ ತಾಯಿಯು ತನ್ನ ಮೊಲೆಗಳನ್ನು ಕತ್ತರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡುತ್ತಿದ್ದಳು. ರಣರಂಗದಲ್ಲಿ ತನ್ನ ಮಗನ ಶವವನ್ನು ಹುಡುಕುತ್ತ ಹೋಗಿ ಪತ್ತೆಹಚ್ಚಿದರೆ ಆಕೆ ಅವನನ್ನು ಹೆತ್ತಾಗ ಪಟ್ಟ ಸಂತೋಷಕ್ಕಿಂತ ಮಿಗಿಲಾದ ಸಂತೋಷ ಪಡುತ್ತಿದ್ದಳೆಂದು ಹೇಳಲಾಗಿದೆ.[೩೪೫] ಹೀಗೆ ತಾಯಿಯು ವೀರಮಾತೆ, ಹೆಂಡತಿಯು ವೀರಪತ್ನಿಯೆನಿಸಿಕೊಳ್ಳಲು ತವಕಿಸುತ್ತಿದ್ದರು. ಹೀಗೆ ಉದಾತ್ತವಾದ ಉದ್ದೇಶದಿಂದ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳೇ ವೀರಗಲ್ಲುಗಳು. ಪ್ರಾಚೀನ ಕನ್ನಡ ಶಾಸನಗಳಲ್ಲಿ ದಾನಶಾಸನಗಳನ್ನು ಬಿಟ್ಟರೆ ವೀರ ಶಾಸನಗಳ ಸಂಖ್ಯೆಯೇ ಹೆಚ್ಚು.[೩೪೬] ಶಿಕಾರಿಪುರ ತಾಲೂಕಿನ ತಾಳಗುಂದ ಶಾಸನದ ಸಂಸ್ಕೃತ ಶ್ಲೋಕವು 'ಅನೇಕ ವರ್ಷಗಳ ತಪಸ್ಸನ್ನು ನಡೆಸುವ ಯೋಗಿ

ಮತ್ತು ರಣರಂಗದಲ್ಲಿ ಮುಂಚೂಣಿಯಾಗಿ ನಿಂತು ಹೋರಾಡಿ ಹತನಾಗುವ ವೀರರು ಈ ಲೋಕದಲ್ಲಿ ಸೂರ್ಯಮಂಡಲವನ್ನು ಭೇದಿಸಬಲ್ಲರು' ಎಂದು ಹೇಳಿದೆ.[೩೪೬] ಕನ್ನಡದ ಪ್ರಥಮ ಶಾಸನವೆನಿಸಿದ ಹಲ್ಮಿಡಿ ಶಾಸನವು ವಿಜ ಅರಸರು ಕದಂಬರ ಪರವಾಗಿ ಕೇಕೆಯ ಪಲ್ಲವರ ಜೊತೆ ಹೋರಾಡಿ 'ಬಾಳ್ಗಳ್ಚು' ಎಂಬ ದಾನವನ್ನು ಪಡೆದು ಎರಡು ಗ್ರಾಮಗಳನ್ನು ದತ್ತಿಯಾಗಿ ಸ್ವೀಕರಿಸಿದನೆಂದು ವಿವರಿಸುತ್ತದೆ.[೩೪೭] ಆದುದರಿಂದ ವೀರಗಲ್ಲುಗಳು ರಣರಂಗದಲ್ಲಿ ಮಡಿದವರ ಹಾಗೂ ಜಯಶಾಲಿಯಾದವರ ವಿಷಯಗಳನ್ನು ತಿಳಿಸುತ್ತವೆ.

ವೀರಗಲ್ಲುಗಳು ಪಟ್ಟಿಕೆ ಅಥವಾ ಹಂತಗಳಲ್ಲಿರುತ್ತವೆ. ಕೆಲವು ವೀರಗಲ್ಲುಗಳು ಒಂದು, ಎರಡು ಹಾಗೂ ಮೂರು ಹಂತಗಳಲ್ಲಿದ್ದರೆ ಇನ್ನು ಕೆಲವು ವೀರಗಲ್ಲುಗಳು ನಾಲ್ಕು, ಐದು ಇಲ್ಲವೇ ಆರು ಹಂತಗಳಲ್ಲಿರುತ್ತವೆ. ಬಹುತೇಕ ಪ್ರದೇಶಗಳಲ್ಲಿ ಮೂರು ಹಂತಗಳ ವೀರಗಲ್ಲುಗಳೇ ಅಧಿಕವಾಗಿ ಕಂಡುಬರುತ್ತವೆ. ಮೊದಲನೇ ಹಂತದಲ್ಲಿ ವೀರನು ಶತ್ರುಗಳೊಂದಿಗೆ ಹೋರಾಟ ಮಾಡಿ ಮರಣಿಸಿರುವ ದೃಶ್ಯ, ಎರಡನೆ ಹಂತದಲ್ಲಿ ಅಪ್ಸರೆಯರೊಂದಿಗೆ ಸ್ವರ್ಗ ಪ್ರಯಾಣ, ಮೂರನೆ ಹಂತದಲ್ಲಿ ವೀರನು ದೇವರ ಸಾನಿಧ್ಯದಲ್ಲಿ ಇರುವಂತಹ ಹಾಗೂ ಮೇಲಿನ ತುದಿಯಲ್ಲಿ ಸೂರ್ಯ-ಚಂದ್ರರ ಕೆತ್ತನೆಗಳಿರುತ್ತವೆ. ಇವುಗಳು ವೀರಮರಣ ಹೊಂದಿದವನ ಕೀರ್ತಿ ಈ ಭೂಮಂಡಲದಲ್ಲಿ ಅಜರಾಮರವಾಗಿರಲೆಂದು ಸೂಚಿಸುತ್ತವೆ. ಕೆಲವು ವೀರಗಲ್ಲುಗಳಲ್ಲಿ ಶಿಲ್ಪಗಳ ಕೆತ್ತನೆಯ ಜೊತೆಗೆ ಶಾಸನ ಪಾಠವು ಸಹ ಇರುತ್ತದೆ. ಈ ಶಾಸನ ಪಾಠದಿಂದ ವೀರಮರಣ ಹೊಂದಿದವನ ಹೆಸರು, ಯಾವ ರಾಜರ ಪರ, ಯಾವ ರಾಜರ ವಿರೋಧವಾಗಿ ಯಾವ ಉದ್ದೇಶಕ್ಕಾಗಿ ಯಾವ ಕಾಲದಲ್ಲಿ ಈ ಘಟನೆ ನಡೆದಿತ್ತೆಂದು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಕರ್ನಾಟಕದಲ್ಲಿ ಕಂಡುಬರುವ ವೀರಗಲ್ಲುಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ತುರುಗೋಳ್

೨. ಪೆಣ್ಬುಯಲ್

೩. ರಾಜರ ಪರವಾಗಿ ಹೋರಾಡಿ ಮಡಿದವರ ವೀರಗಲ್ಲುಗಳು

೪. ಕಳ್ಳರೊಡನೆ ಹೋರಾಡಿ ಮಡಿದವರ ವೀರಗಲ್ಲುಗಳು

೫. ವ್ಯಕ್ತಿ-ಪ್ರಾಣಿಗಳ ನಡುವಿನ ಹೋರಾಟದ ವೀರಗಲ್ಲುಗಳು.

೬. ಪ್ರಾಣಿ-ಪ್ರಾಣಿಗಳ ನಡುವಿನ ಹೋರಾಟದ ವೀರಗಲ್ಲುಗಳು.

ಹೊಸದುರ್ಗ ತಾಲೂಕಿನಲ್ಲಿ ದೊರೆತಿರುವ ವೀರಗಲ್ಲುಗಳನ್ನು ಈ ಕೆಳಗಿನಂತೆ ನಿರೂಪಿಸಲಾಗಿದೆ.

೧. ತುರುಗೋಳ್

ಪ್ರಾಚೀನ ಕರ್ನಾಟಕದ ಯುದ್ಧಗಳಲ್ಲಿ ತುರುಗೋಳ್ ಬಹಳ ಪ್ರಸಿದ್ಧವಾದ ಯುದ್ಧವಾಗಿತ್ತು. ಪ್ರತಿ ವೀರರು, ಕಳ್ಳರು ಒಂದು ಗ್ರಾಮದ ಅಥವಾ ಒಬ್ಬ ವ್ಯಕ್ತಿಯ ದನಗಳನ್ನು ಅಪಹರಿಸುವ

ಘಟನೆಗೆ ತುರುಗೊಳ್, ತುರುಗೋಳ್ ಎಂದು ಕರೆಯಲಾಗಿದೆ.[೧೪೯] ಘಟನೆಯನ್ನಷ್ಟೆ ಅಲ್ಲದೆ ಈ ಕಾರಣಕ್ಕೆ ನಡೆಯುವ ಯುದ್ಧವನ್ನು ಅಥವಾ ಸಂಘರ್ಷವನ್ನೂ ತುರುಗೋಳ್ ಎಂದು ಕರೆಯಲಾಗಿದೆ. ತುರು ಕೋಳ್ ಅಂದರೆ ದನಗಳನ್ನು ತೆಗೆದುಕೊ, ಹಿಡಿದುಕೊ ಎಂದು ಅರ್ಥ.[೧೫೦] ಕನ್ನಡದ ಕವಿ ರನ್ನನು ತನ್ನ ಗದಾಯುದ್ಧ ಕಾವ್ಯದಲ್ಲಿ.

ತುರುಗೋಳೊಳ್ ಪೆಣ್ಬುಯ್ಯಲೊ
ಳೆರೆವೆಸದೊಳ್ ನಂಟನೆಡರೊಳೂರ ರೆವಿನೊಳಂ ॥
ತರೆಸಂದು ಗಂಡುತನಮನೆ
ನೆರೆಪದವಂ ಗಂಡನಲ್ಲವೆಂತುಂ ಷಂಡಂ ॥[೧೫೧]

– ಎಂದು ಹೇಳಿರುವನು. ಅಂದರೆ ತುರುಗಳನ್ನು ರಕ್ಷಿಸುವುದು ಸ್ತ್ರೀಯರ ಮಾನ ಕಾಪಾಡುವುದು, ಊರುಗಳನ್ನು ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ಇದರಿಂದ ತಿಳಿದುಬರುತ್ತದೆ.

ಗೋವುಗಳಿಗೆ ನಮ್ಮ ಧರ್ಮ ಮತ್ತು ಸಂಸ್ಕೃತಿಯಲ್ಲಿ ಪವಿತ್ರವಾದ ಸ್ಥಾನವನ್ನು ನೀಡಲಾಗಿದೆ. ಇಂದಿಗೂ ಆಕಳನ್ನು ಗೋಮಾತೆ ಎಂದು ಪೂಜಿಸುತ್ತಾರೆ. ವೇದ, ಪುರಾಣ, ಧರ್ಮಗ್ರಂಥ ಮತ್ತು ಅನೇಕ ಸಾಹಿತ್ಯ ಕೃತಿಗಳು ಗೋವಿನ ಮಹಿಮೆಯನ್ನು ಸಾರಿ ಸಾರಿ ಹೇಳುತ್ತವೆ. ಗೋವುಗಳಿಲ್ಲದ ಗ್ರಾಮೀಣರ ಬದುಕನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅವರ ಆರ್ಥಿಕ ಮೂಲಗಳು ಗೋವುಗಳೇ ಆಗಿದ್ದವು. ಪ್ರಾಚೀನ ಕಾಲದಲ್ಲಿ ಇವುಗಳನ್ನು ಸಂಪತ್ತೆಂದು ಪರಿಗಣಿಸಲಾಗಿತ್ತು. ಈ ಕಾರಣವಾಗಿ ಅವನ್ನು ಕದಿಯುವ, ಅಪಹರಿಸುವ ಪ್ರವೃತ್ತಿ ಹೆಚ್ಚಾಗತೊಡಗಿತು. ಕಳ್ಳರು ಬಂದು ಗೋವುಗಳನ್ನು ಕದ್ದಾಗ ಗೋವುಗಳನ್ನು ಕಾಯುತ್ತಿದ್ದ ಗೋವಳರು ಮತ್ತು ಇತರರು ಹುಯ್ಯಲನ್ನೆಬ್ಬಿಸುತ್ತಿದ್ದರು. ಊರಿನ ಜನರು ಅವುಗಳನ್ನು ರಕ್ಷಿಸಲು ಮುಂದಾಗುತ್ತಿದ್ದರು. ಈ ಸಮಯದಲ್ಲಿ ಹೋರಾಡಿ ಸತ್ತವರ ಸ್ಮಾರಕಗಳು ನೂರಾರು ದೊರಕುತ್ತವೆ. ಎರಡು ಕಾರಣಗಳಿಂದ ತುರುಗಾಳಗವು ಮಹತ್ವ ಪಡೆದುಕೊಂಡಿದೆಂದು ವಿದ್ವಾಂಸರು ನಿಶ್ಚಯಿಸಿರುವರು. ಮೊದಲನೆಯದಾಗಿ ಗೋವು ಪೂಜ್ಯನೀಯುವಾದುದು, ಎರಡನೆಯದಾಗಿ ಅದು ಕಳೆದುಕೊಳ್ಳುವುದರಲ್ಲಿ ಊರಿನ ವ್ಯಕ್ತಿಯ ಮಾನವಮಾನದ ಪ್ರಶ್ನೆಯೂ ಇದೆ.

ತುರುಗೋಳ್ ವೀರಗಲ್ಲುಗಳು ಅಗಲ ಜಾಸ್ತಿ, ಎತ್ತರ ಕಡಿಮೆ. ಇವು ಸುಮಾರು ಏಳು ರಿಂದ ಹತ್ತು ಅಡಿ ಅಗಲದವರೆಗೂ ಇದ್ದು, ನಾಲ್ಕು ರಿಂದ ಆರು ಅಡಿಯವರೆಗೂ ಎತ್ತರವಾಗಿರುತ್ತವೆ. ಕೆಳಗಿನ ಎರಡು ಅಥವಾ ಮೂರು ಹಂತಗಳಲ್ಲಿ ವೀರನ ಮೆರವಣಿಗೆ, ಯುದ್ಧಕ್ಕೆ ಹೊರಟ ಚಿತ್ರಣ, ನಂತರದ ಹಂತಗಳಲ್ಲಿ ಶತ್ರುಗಳೊಂದಿಗೆ ಹೋರಾಟದ ಚಿತ್ರಣವೂ ಇರುತ್ತದೆ. ಈ ಹೋರಾಟದ ಹಂತದಲ್ಲಿ ಕುದುರೆಗಳನ್ನು, ತುರುಗಳನ್ನು ಮತ್ತು ಕಾಲಾಳುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಚಿತ್ರಿಸಿರುತ್ತಾರೆ. ಹಲವಾರು ಬಗೆಯ ಆಯುಧಗಳು ಈ ಭಾಗದಲ್ಲಿ ಕಂಡುಬರುತ್ತವೆ. ಮೇಲಿನ ಎರಡು ಹಂತಗಳಲ್ಲಿ ಮಂಟಪಗಳ ನಡುವೆ ಹೋರಾಟದಲ್ಲಿ ಮಡಿದ ವೀರರನ್ನು, ಜೊತೆಯಲ್ಲಿ ಅವರ ಪತ್ನಿಯರನ್ನು ಚಿತ್ರಿಸಿರುತ್ತಾರೆ. ಕೆಲವು ವೀರಗಲ್ಲುಗಳಲ್ಲಿ

ಮೂರರಿಂದ ಆರು ಜನ ವೀರರ ಚಿತ್ರಣವಿರುತ್ತದೆ. ಸ್ವರ್ಗಾರೋಹಣ ಹಂತದಲ್ಲಿ ಒಬ್ಬೊಬ್ಬರಿಗೂ ಒಂದೊಂದು ವಿಮಾನವನ್ನು ಕೆತ್ತಿರುವರು. ನಂತರದಲ್ಲಿ ವೀರರು ದೇವರ ಸನ್ನಿದಿಯಲ್ಲಿರುವಂತೆ ತೋರಿಸಲಾಗುತ್ತದೆ.[೨೭೨]

ವೇದಾವತಿ ನದಿ ಪರಿಸರದಲ್ಲಿ ಪಶುಪಾಲನ ಸಮುದಾಯಗಳು ಹೆಚ್ಚಾಗಿ ಕಂಡುಬರುತ್ತವೆ. ಈ ಪರಿಸರವು ಭೌಗೋಳಿಕವಾಗಿ ಅತ್ಯಂತ ದೊಡ್ಡ ಪ್ರಮಾಣದ ಬೆಟ್ಟ-ಗುಡ್ಡಗಳಿಂದ, ನದಿ ಹಳ್ಳ-ಕೊಳ್ಳಗಳಿಂದಲೂ, ಕೃಷಿಗೆ ಯೋಗ್ಯವಾದ ಫಲವತ್ತಾದ ಸಮತಟ್ಟಾದ ಭೂಮಿಯಿಂದಲೂ. ಅಲ್ಲದೆ ಕೆಲವೆಡೆ ಅರಣ್ಯಗಳಿಂದಲೂ ಕೂಡಿದೆ. ಭೌಗೋಳಿಕವಾಗಿ ವಿಶಿಷ್ಟವಾಗಿರುವ ಪರಿಸರದಲ್ಲಿ ಮಾನವನ ಚರಿತ್ರೆ ಮತ್ತು ಸಂಸ್ಕೃತಿಯು ವಿಭಿನ್ನವಾಗಿಯೆ ಬೆಳೆದುಬಂದಿದೆ. ಇಲ್ಲಿನ ಪಶುಪಾಲನ ಸಮುದಾಯಗಳಲ್ಲಿ ಗೊಲ್ಲ, ಕುರುಬ ಹಾಗೂ ನಾಯಕ ಪ್ರಮುಖವಾಗಿದ್ದು, ಪಶುಪಾಲನೆ ಅಧಿಕವಾಗಿದ್ದಿತು. ಈ ತಾಲೂಕಿನಲ್ಲಿ ತುರುಗೊಳ್ ಸ್ಮಾರಕ ಶಿಲ್ಪಗಳು ಬಹುವಾಗಿ ಕಂಡುಬಂದಿವೆ. ಇಲ್ಲಿನ ತುರುಗೋಳ್ ಸ್ಮಾರಕ ಶಿಲ್ಪಗಳು ರಾಷ್ಟ್ರಕೂಟ, ಚಾಲುಕ್ಯ ಹಾಗೂ ಹೊಯ್ಸಳ ಕಾಲಘಟ್ಟದವುಗಳಾಗಿವೆ. ಇವುಗಳಲ್ಲಿ ಕೆಲವು ಶಾಸನೋಕ್ತವಾಗಿದ್ದು ಪ್ರಕಟಗೊಂಡಿವೆ. ಇನ್ನುಳಿದಂತೆ ಹಲವು ಸ್ಮಾರಕ ಶಿಲ್ಪಗಳಲ್ಲಿ ಶಾಸನ ಕಂಡುಬರುವುದಿಲ್ಲ. ಕ್ಷೇತ್ರಕಾರ್ಯದಲ್ಲಿ ನೂರಾರು ತುರುಗೋಳ್ ಸ್ಮಾರಕ ಶಿಲ್ಪಗಳು ಕಂಡುಬಂದಿದ್ದು, ಅವುಗಳನ್ನು ಈ ಕೆಳಗಿನಂತೆ ನೋಡಲಾಗಿದೆ.

ಹೆಬ್ಬಳ್ಳಿಯ ಕಲ್ಲೇಶ್ವರ ದೇವಾಲಯದ ಬಳಿ ನಾಲ್ಕು ಶಾಸನೋಕ್ತ ತುರುಗೋಳ್ ಸ್ಮಾರಕ ಶಿಲ್ಪಗಳಿವೆ. ಕ್ರಿ.ಶ. ೯೭೭ರ ತುರುಗೋಳ್ ಸ್ಮಾರಕ ಶಿಲ್ಪದಲ್ಲಿ 'ಪಿಲ್ದುವಯ್ಯ ಎಂಬುವವನು ಪೆರ್ವಳ್ಳಿಯ ತುರುಗೋಳ್‌ನಲ್ಲಿ ಸ್ವರ್ಗಸ್ಥನಾದನೆಂದು ಹೇಳಲಾಗಿದೆ.[೨೭೩] ಹಸಿರು ಶಿಲೆಯ ಈ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು ಮೊದಲನೆ ಹಂತದಲ್ಲಿ ಒಬ್ಬ ವೀರನು ಬಿಲ್ಲು ಹಾಗೂ ಕತ್ತಿಯ ಮೂಲಕ ಶತ್ರುಗಳೊಂದಿಗೆ ಹೋರಾಡುತ್ತಿರುವುದು ಅವನ ಹಿಂದೆ ಪಶುಗಳ ಚಿತ್ರಗಳಿವೆ. ಮಧ್ಯದ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು ಮೂರನೆ ಹಂತ ಭಗ್ನಗೊಂಡಿವೆ. ಅದೇ ರೀತಿ ಕ್ರಿ.ಶ. ೯೭೮ರ ಮತ್ತೊಂದು ತುರುಗೋಳ್ ಸ್ಮಾರಕ ಶಿಲ್ಪದಲ್ಲಿ 'ಬಾಕಯ್ಯನು ತುರುಗೊಳ್‌ನಲ್ಲಿ ಸ್ವರ್ಗಸ್ಥನಾದ' ಎಂದಿದೆ.[೨೭೪] ಇದರಲ್ಲಿ ಮೂರು ಹಂತಗಳಿವೆ. ಮೊದಲ ಹಂತದಲ್ಲಿ ಗ್ರಾಮದ ವೀರನು ಕುದುರೆಯನ್ನೇರಿ ಕತ್ತಿಹಿಡಿದು ಎದುರಿಗಿರುವ ಶತ್ರುಗಳೊಂದಿಗೆ ಹೋರಾಡುತ್ತಿದ್ದಾನೆ. ಶತ್ರುಗಳು ಈಟಿ, ಕತ್ತಿಹಿಡಿದು ಈ ಗ್ರಾಮದ ವೀರನೊಂದಿಗೆ ಯುದ್ಧವಾಡುತ್ತಿದ್ದು ದನಗಳು ವೀರನ ಹಿಂಬದಿಯಲ್ಲಿ ನಿಂತಿರುವಂತೆ ಚಿತ್ರಿಸಲಾಗಿದೆ. ಎರಡನೆ ಹಂತದಲ್ಲಿ ನಾಲ್ಕು ಜನ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ, ಮೂರನೆ ಹಂತದಲ್ಲಿ ಒಂದು ಪೀಠದ ಮೇಲೆ ವೀರನು ಕುಳಿತಿದ್ದು, ಅಪ್ಸರೆಯರು ಅವನಿಗೆ ಚಾಮರ ಬೀಸುತ್ತಿರುವಂತೆ ಅದರ ಮೆಲಿನ ಭಾಗದಲ್ಲಿ ಅಲಂಕಾರವಿಲ್ಲದ ಸಾಧಾರಣವಾದ ಶಿವಲಿಂಗದ ಶಿಲ್ಪವಿದೆ.

ಇದೇ ಸ್ಥಳದಲ್ಲಿರುವ ಮತ್ತೊಂದು ತುರುಗೋಳ್ ಸ್ಮಾರಕ ಶಿಲ್ಪದಲ್ಲಿ 'ಕನ್ನೇರ ದೇವನು ಸಾಮ್ರಾಜ್ಯವನ್ನು ಆಳುವಾಗ ಮಾರಸಿಂಗ ಪೆರ್ಮಾಡಿ ಎಂಬುವವನು ಗಂಗವಾಡಿ ೯೬,೦೦೦

ಆಳುತ್ತಿರಲು, ಪೆರ್ಬಳ್ಳಿಯನ್ನು ಗಂಗಗಾವುಣ್ಡನು ಆಳುತ್ತಿರಲು ಹಲವರು ತುರುಗೋಳ್‌ನಲ್ಲಿ ಮುಕ್ತಿ ಪಡೆದರು ಎಂದಿದೆ.[೨೫೫] ಇವು ಈ ತಾಲೂಕಿನ ಪ್ರಾಚೀನ ತುರುಗೋಳ್ ಸ್ಮಾರಕ ಶಿಲ್ಪಗಳಾಗಿವೆ.

ಮಳಲಿಯ ಕಲ್ಲೇಶ್ವರ ದೇವಾಲಯದ ಮುಂದಿನ ಕ್ರಿ.ಶ. ೧೨೩೮ರ ತುರುಗೋಳ್ ಸ್ಮಾರಕ ಶಿಲ್ಪದಲ್ಲಿ "ಹೊಯ್ಸಳ ಸೋಮೇಶ್ವರನು ಆಡಳಿತ ನಡೆಸುತ್ತಿರುವಾಗ ಮಾವಿನಹಳ್ಳಿಯ ಕೆಲವರು ಹಸುಗಳನ್ನು ಕದ್ದು ಒಯ್ಯುವಾಗ ಚಿಕ್ಕಬೊಯನೆಂಬುವವನು ಅವರೊಡನೆ ಕಾದಾಡಿ ವೀರಸ್ವರ್ಗ ಪಡೆದ ಸಂದರ್ಭದಲ್ಲಿ ಅವನ ಹೆಸರಿನಲ್ಲಿ ಮೊರಬೋವ ಎಂಬುವವನು ವೀರಗಲ್ಲು ನಿಲ್ಲಿಸಿದನು ಎಂದಿದೆ.[೨೫೬] ಹೊಯ್ಸಳ ಕಾಲದ ಈ ತುರುಗೋಳ್ ಸ್ಮಾರಕ ಶಿಲ್ಪವು ಶಿಲ್ಪಶೈಲಿಯ ದೃಷ್ಟಿಯಿಂದ ಅತ್ಯಂತ ವಿಶಿಷ್ಟವಾಗಿದೆ. ಮೊದಲ ಹಂತದಲ್ಲಿ ವೀರನು ಬಿಲ್ಲು ಬಾಣವನ್ನಿಡಿದು ಎದುರಾಳಿಗಳೊಂದಿಗೆ ವೀರಾವೇಶದಿಂದ ಹೋರಾಡುತ್ತಿರುವುದು ವೀರನ ಹಿಂಬದಿಯಲ್ಲಿ ಹಸುಗಳು ನಿಂತಿರುವುದು, ಎರಡನೇ ಹಂತದಲ್ಲಿ ಅಪ್ಸರೆಯರು ವಿಮಾನದಲ್ಲಿ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು, ಮೂರನೆ ಹಂತದಲ್ಲಿ ಶಿವಲಿಂಗ ಹಾಗು ವೀರನ ಚಿತ್ರವಿದೆ.

ಮತ್ತೋಡು, ಕಂಚೀಪುರ, ಗುಡ್ಡದನೇರಲಕೆರೆ ದೊಡ್ಡತೇಕಲವಟ್ಟಿಯ ಕಡ್ಲೇಕಂಸಾಗರ, ಇಟ್ಟಿಗೆಹಳ್ಳಿ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಹೊಯ್ಸಳ ಕಾಲದ ತುರುಗೋಳ್ ಸ್ಮಾರಕ ಶಿಲ್ಪಗಳು ಕಾಣಸಿಗುತ್ತವೆ.

೨. ರಾಜರ ಪರವಾಗಿ ಹೋರಾಡಿ ಮಡಿದವರ ವೀರಗಲ್ಲುಗಳು

ಪ್ರತಿಯೊಬ್ಬ ರಾಜನು ಯುದ್ಧದಿಂದಲೇ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ಆ ಮೂಲಕ 'ರಾಜಾಧಿರಾಜ'ನಾಗಿ ಆಳ್ವಿಕೆ ಮಾಡಬಹುದೆಂದು ನಂಬಿದ್ದರು. ಏಕೆಂದರೆ ಅವರು ನಡೆಸಿದ ಹೋರಾಟ ಮತ್ತು ಹೊಂದಿದ ಬಿರುದು ಪ್ರಶಸ್ತಿಗಳಿಂದ ಈ ವಿಚಾರವು ತಿಳಿದುಬರುತ್ತದೆ. ರಾಜ್ಯಗಳ ಗಡಿಗಳಿಗೆ ಸಂಬಂಧಿಸಿದಂತೆ ಯುದ್ಧಗಳು ನಡೆಯುತ್ತಿರುವಾಗ ತನ್ನ ರಾಜನ ಪರವಾಗಿ ಹೋರಾಡಿ ರಾಜ್ಯವನ್ನು ರಕ್ಷಿಸುವುದು ಶಕ್ತರಾದ ಎಲ್ಲಾ ಪ್ರಜೆಗಳ ಕರ್ತವ್ಯವಾಗಿದ್ದಿತು. ಅದೇ ರೀತಿ ಆಗಿನ ಕಾಲದಲ್ಲಿ ಒಂದೊಂದು ಗ್ರಾಮವೂ ಆಡಳಿತ ದೃಷ್ಟಿಯಿಂದ ಸ್ವತಂತ್ರ ಘಟಕವಾಗಿದ್ದಿತು. ಊರಿನ ಗಡಿಗಳಿಗೆ ಸಂಬಂಧಿಸಿದಂತೆ ಜನರ ನಡುವೆ ಜಗಳ ಹೊಡೆದಾಟಗಳಾಗುತ್ತಿದ್ದುದು ಸಹಜ. ಇಂತಹ ಹೊಡೆದಾಟಗಳಲ್ಲಿ ಧೈರ್ಯವಂತರು ಮುಂದೆ ನುಗ್ಗಿ ತನ್ನ ಶತ್ರುಗಳೊಂದಿಗೆ ಕಾದಾಡಿ ಮಡಿಯುತ್ತಿದ್ದರು. ರಾಜರು ಇಲ್ಲವೇ ಊರಿನ ಮುಖಂಡರು ಮಡಿದ ವೀರನ ಶಾಶ್ವತ ನೆನಪಿಗಾಗಿ ವೀರಗಲ್ಲುಗಳನ್ನು ನೆಡುತ್ತಿದ್ದರು. ಕರ್ನಾಟಕದಲ್ಲಿ ಇತರ ವೀರಗಲ್ಲುಗಳಿಗಿಂತ ಇವುಗಳು ಹೆಚ್ಚಾಗಿ ದೊರೆಯುತ್ತವೆ. ಅಧ್ಯಯನ ಕ್ಷೇತ್ರದಲ್ಲಿ ಇಂತಹ ವೀರಗಲ್ಲುಗಳು ಹೆಚ್ಚಾಗಿ ಕಂಡುಬಂದಿವೆ.

ಜಾನಕಲ್ಲು ಗ್ರಾಮದ ಶಂಕರಲಿಂಗೇಶ್ವರ ದೇವಾಲಯದ ಬಳಿ ಇರುವ ಕ್ರಿ.ಶ. ೧೩೦೨ರ ಹೊಯ್ಸಳ ಕಾಲದ ಒಂದು ವೀರಗಲ್ಲು ಹೇಳುವಂತೆ ಮುಮ್ಮಡಿ ಬಲ್ಲಾಳನು ಆಳುತ್ತಿರುವಾಗ ಸೇವುಣರಾಜ ಶಂಕರದೇವನ ಸೇನೆಯು ಹೊಯ್ಸಳನಾಡನ್ನು ಮುತ್ತಿಗೆ ಹಾಕಿತು. ಬೆಮ್ಮತ್ತೂರಿನಲ್ಲಿ

ಆಳುತ್ತಿದ್ದ ಬಲ್ಲಾಳನ ಭಾವ ಸೋಮದಂಡನಾಯಕ ಸೇವುಣ ದಂಡನಾಯಕ ಕಂಪಿಲನೊಂದಿಗೆ ಹೋರಾಡುತ್ತಾ ವೀರಸ್ವರ್ಗವನ್ನು ಹೊಂದಿದನು. ಈ ಸಂದರ್ಭದಲ್ಲಿ ಹೊಳಲ್ಕೆರೆ ವೃತ್ತಿಯ ಮಹಾಮಂಡಳೇಶ್ವರ ಮಾಚೀದೇವನ ಪಾದಪದ್ಮಾರಾಧಕರ ಕೆಂದಾರಿ ದೇವರಸನ ಮೈದುನ ಬಸಪ್ಪನು ಹೋರಾಟದಲ್ಲಿ ಪಾಲ್ಗೊಂಡು ವೀರಸ್ವರ್ಗದಲ್ಲಿ ಪಾಲ್ಗೊಂಡನೆಂದು ಹೇಳುತ್ತದೆ.[೨೭] ಈ ವೀರಗಲ್ಲು ಐದು ಹಂತಗಳನ್ನು ಒಳಗೊಂಡಿದೆ. ಮೂರು ಹಂತಗಳಲ್ಲೂ ಯುದ್ಧದ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಇದೊಂದು ಕುದುರೆ ಕಾಳಗವಾಗಿದ್ದು ಕುದುರೆಗಳಿಗೆ ಅಳವಡಿಸಿರುವ ರಕ್ಷಣಾ ಕವಚಗಳು ಅತ್ಯಂತ ವಿಶಿಷ್ಟವಾಗಿವೆ. ಯುದ್ಧದಲ್ಲಿ ವೀರನು ಮರಣ ಹೊಂದಲಾಗಿ ಅವನನ್ನು ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಕೊಂಡೊಯ್ಯುತ್ತಿರುವುದು, ಐದನೇ ಹಂತದಲ್ಲಿ ವೀರ ಹಾಗೂ ಶಿವಲಿಂಗದ ಶಿಲ್ಪವಿದೆ. ಈ ವೀರಗಲ್ಲು ಶಿಲ್ಪವು ಅತ್ಯಂತ ವಿಶಿಷ್ಟವಾದುದು, ಕಾರಣ ಹೊಯ್ಸಳರ ಪ್ರದೇಶದ ಮೇಲೆ ಸೇವುಣ ಸೈನ್ಯ ದಾಳಿ ಮಾಡಿದುದು ಅದನ್ನು ತಡೆಯುವ ಯುದ್ಧದಲ್ಲಿ ಈ ಪ್ರದೇಶದ ಬಸವಪ್ಪನು ಹೋರಾಡಿ ಮರಣ ಹೊಂದಿದ್ದು ಅತ್ಯಂತ ಪ್ರಮುಖವಾಗಿವೆ.

ನಿಲುವುಗಲ್ಲು ಗ್ರಾಮದ ಹರಿಹರೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಹೊಯ್ಸಳರ ಕಾಲದ ಒಂದು ವೀರಗಲ್ಲು ಶಾಸನದಲ್ಲಿ 'ನಿರುವುಗಲ್ಲು ಸ್ಥಾನಿಕರ ಕಲಿಗುರುಗಳ ಮಗ ಮಾಯೆಂಣನು ಕಂದಿಕೆರೆಯ ನಾಗೆಯನಾಯಕನೊಂದಿಗೆ ನಡೆದ ಕಾಳಗದಲ್ಲಿ ಮಾಯಣ್ಣನು ಕಾದಿಸತ್ತನು' ಎಂದಿದೆ.[೨೮]

ಮಳಲಿಯ ಕಲ್ಲೇಶ್ವರ ದೇವಾಲಯದ ಮುಂದಿನ ಹೊಯ್ಸಳರ ಕ್ರಿ.ಶ.೧೨೬೮ರ ಕಾಲದ ವೀರಗಲ್ಲು ಶಾಸನದಲ್ಲಿ "ಹೊಯಿಸಳ ವೀರ ನಾರಸಿಂಹದೇವನು ಗಂಗವಾಡಿ-೯೬೦೦೦ ಮತ್ತು ನೊಳಂಬವಾಡಿ-೩೨೦೦೦ ನಾಡುಗಳನ್ನು ಆಳುವಾಗ 'ಶ್ರೀಕೇಶವಪುರ'ವಾದ ಮಣಲಿಯ ಚಿಕ್ಕಗವುಡನ ಮಗ ಮಾಚಗವುಡ ಮಾಚಗವುಡನ ಮಗ ಮಾದಿಗವುಡ ಹೋರಾಟದಲ್ಲಿ ಮರಣ ಹೊಂದಲು ಮಣಲಿಯ ಗೌಡರು ಅವನ ಹೆಸರಿನಲ್ಲಿ ಭೂದತ್ತಿ ಬಿಟ್ಟುಕೊಟ್ಟರು" ಎಂದು ಹೇಳಲಾಗಿದೆ.[೨೯]

ಅತ್ತಿಮೊಗೆ ಗ್ರಾಮದ ಮಲ್ಲೇದೇವರಗುಡಿಯ ಬಳಿ ಇರುವ ಎರಡು ವೀರಗಲ್ಲುಗಳು ಇಲ್ಲಿನ ಸ್ಥಳೀಯ ಹೋರಾಟವನ್ನು ಕುರಿತು ಪ್ರಮಾಣೀಕರಿಸುತ್ತವೆ. ಒಂದು ವೀರಗಲ್ಲು ಶಾಸನದಲ್ಲಿ "ಅತ್ತಿಮೊಘೆಯ ಬಲ್ಲಗವುಡನ ಮಗ ಚಿಕ್ಕಗವುಡನ ಮಗ ಬಯಿಚಣ ಗೌಡನು ಕಾಳಗದಲ್ಲಿ ಮಡಿದು ಸ್ವರ್ಗಸ್ಥನಾದನು" ಎಂದಿದೆ.[೩೦] ಮತ್ತೊಂದು ವೀರಗಲ್ಲು ಶಾಸನದಲ್ಲಿ "ಅತ್ತಿಮೊಘೆಯ ಬಲ್ಲಗವುಡನ ಮಗ ಮುದ್ದಗವುಡನು ಕಾಳಗದಲ್ಲಿ ಮಡಿದು ಸ್ವರ್ಗಸ್ಥನಾದನು" ಎಂದು ದಾಖಲಿಸಿದೆ.[೩೧]

ತುಂಬಿನಕೆರೆಯ ಹೊಯ್ಸಳ ಶೈಲಿಯ ವೀರಗಲ್ಲು ಕೋಟೆಗಾಳಗದ ಸ್ಮಾರಕಶಿಲ್ಪವಾಗಿದೆ. ಮೂರು ಹಂತಗಳಲ್ಲಿರುವ ಈ ಶಿಲ್ಪದ ಮೊದಲ ಹಂತದಲ್ಲಿ ಕೋಟೆಯ ಒಳಗೆ ಶತ್ರುಗಳು ನುಸುಳಿರುವುದು ಅವರ ವಿರುದ್ಧ ಇಬ್ಬರು ವೀರರು ಬಿಲ್ಲು, ಕತ್ತಿಗಳೊಂದಿಗೆ ಹೋರಾಡುತ್ತಿರುವುದು,

ಎರಡನೇ ಹಂತದಲ್ಲಿ ಮಡಿದ ವೀರರನ್ನು ದೇವಕನ್ನಿಕೆಯರು ಪುಷ್ಪಕ ವಿಮಾನದಲ್ಲಿ ಕೊಂಡೊಯ್ಯುತ್ತಿರುವುದು, ಮೂರನೆ ಹಂತದಲ್ಲಿ ಶಿವಲಿಂಗ ನಂದಿ ಯತಿ ಹಾಗೂ ಕೈಮುಗಿದು ಕುಳಿತ ವೀರರ ಶಿಲ್ಪಗಳನ್ನು ಕಂಡರಿಸಲಾಗಿದ್ದು ಶಿಲ್ಪ ಶೈಲಿಯ ದೃಷ್ಟಿಯಿಂದ ಇದು ಕ್ರಿ.ಶ.೧೧-೧೨ನೇ ಶತಮಾನದ ವೀರಗಲ್ಲಾಗಿದೆ.

೩. ವ್ಯಕ್ತಿ-ಪ್ರಾಣಿಗಳ ನಡುವಿನ ಹೋರಾಟದ ವೀರಗಲ್ಲುಗಳು

ಮಾನವನು ಪ್ರಾಣಿಗಳನ್ನು ಬೇಟೆಯಾಡುವುದು ಬಹಳ ಪ್ರಾಚೀನ ಕಾಲದಿಂದಲೂ ಬಂದ ಪದ್ಧತಿಯಾಗಿದೆ. ಪ್ರಾಣಿಗಳ ಮಾಂಸಕ್ಕಾಗಿ ಕೆಲವರು ಬೇಟೆಯಾಡಿದರೆ, ಮತ್ತೆ ಕೆಲವರು ಮೋಜಿಗಾಗಿ, ಕಾಲಯಾಪನೆಗಾಗಿ ಅಥವಾ ತಮ್ಮ ಶೌರ್ಯ ಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಹಲವಾರು ಕನ್ನಡ ಕಾವ್ಯಗಳಲ್ಲಿ ರಾಜ-ಮಹಾರಾಜರು ಮತ್ತು ಇತರರು ಬೇಟೆಯಾಡುತ್ತಿದ್ದ ವಿಧಾನಗಳು ಅವರ ವೈಭೋಗಗಳ ವರ್ಣನೆಯಿದೆ.[೬೨] ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪನು ರಚಿಸಿದ 'ವಿಕ್ರಮಾರ್ಜುನ ವಿಜಯ'ದಲ್ಲಿ ಬೇಟೆಯ ಬಗ್ಗೆ ಪ್ರಸ್ತಾಪಿಸಿದ್ದಾನೆ.[೬೩] ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿದ 'ಸೌಗಂಧಿಕಾ ಪರಿಣಯ' ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿದ್ದ ಬೇಟೆಯ ವಿಧಾನವನ್ನು ಸ್ಪಷ್ಟಪಡಿಸುತ್ತದೆ.[೬೪] ಒಟ್ಟಿನಲ್ಲಿ ಅರಸರ ಬೇಟೆಯ ಬಗೆಗೆ ಕಾವ್ಯಗಳು ಹುಟ್ಟಿಕೊಂಡರೆ ಜನಸಾಮಾನ್ಯರ ಬೇಟೆಯ ಬಗೆಗೆ ವೀರಗಲ್ಲುಗಳು ನಿರ್ಮಾಣಗೊಂಡವು.[೬೫] ಆಗಿನ ಕಾಲದಲ್ಲಿ ಜನರು ಹಂದಿ, ಪುಲ್ಲೆ, ಮರಿಸಾರಂಗಗಳನ್ನು ಮಿಗವೇಂಟೆಯೆಂದು, ಗವುಜ, ಗೀಜಗ, ಗೊರವ, ಪಾರಿವಾಳ, ಗುಬ್ಬಿ, ಕಬ್ಬಕ್ಕಿ, ಬೆಳ್ಳಕ್ಕಿ ಮೊದಲಾದವುಗಳನ್ನು ಹಕ್ಕಿವೇಂಟೆಯೆಂದು, ಮೀನು, ಏಡಿ ಇತ್ಯಾದಿ ಜಲಚರ ಪ್ರಾಣಿಗಳನ್ನು ನೀವೆಂಟೆಯೆಂದು, ಇಲಿ, ಬೆಳ್ವಿಲಿ ಮೊದಲಾದ ಬಿಲಚರ ಪ್ರಾಣಿಗಳನ್ನು ಕಿರುವೇಂಟೆ ಎಂದು ಕರೆಯುತ್ತಿದ್ದರು.[೬೬]

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಹುಲಿಗಳ ಬೇಟೆಯು ಪ್ರಚಲಿತದಲ್ಲಿತ್ತು. ಗುಪ್ತರ ಕಾಲದಲ್ಲಿ ಹುಲಿಯ ಬೇಟೆಯು ಪ್ರಚಲಿತ್ತೆನ್ನುವುದಕ್ಕೆ ಅವರ ಕಾಲದ ಹಲವು ನಾಣ್ಯಗಳ ಮೇಲೆ ಹುಲಿಯೊಡನೆ ಹೋರಾಡುತ್ತಿರುವ ವ್ಯಕ್ತಿಯ ಚಿತ್ರಗಳಿವೆ.[೬೭] ಭಾರತಕ್ಕೆ ಬಂದಿದ್ದ 'ಫ್ರಾನ್ಸ್ ವಾಪಿರಾರ್ಡ್ ದೆಲವರ್' ಎಂಬ ಪ್ರವಾಸಿ ಕೇರಳದ ಬಗ್ಗೆ ಹೇಳುತ್ತಾ "ಈ ದೇಶದಲ್ಲಿ ಹುಲಿಗಳು ಹೆಚ್ಚು, ನಾಯರ್‌ಗಳು ಯಾವುದೇ ಆಯುಧಗಳಿಲ್ಲದೆ ಹುಲಿಗಳ ಮೇಲೆ ಬಿದ್ದು ಅವುಗಳನ್ನು ಕೊಂದಿದ್ದನ್ನು ನಾನು ನೋಡಿದ್ದೇನೆ. ಕೆಲವರು ತಮ್ಮ ಮೈಯನ್ನು ಪರಚಿಕೊಂಡು ರಕ್ತ ಸುರಿಸಿಕೊಳ್ಳುತ್ತಾ ಕೊಂದ ಹುಲಿಯನ್ನು ರಾಜನ ಮುಂದೆ ಎಳೆದುಕೊಂಡು ಬಂದಿದ್ದನ್ನು ನೋಡಿದ್ದೇನೆ" ಎಂದು ಹೇಳಿದ್ದಾನೆ.[೬೮]

ಕರ್ನಾಟಕದಲ್ಲಿ ಹುಲಿ ಬೇಟೆಯ ವೀರಗಲ್ಲುಗಳು ಅಪಾರ ಸಂಖ್ಯೆಯಲ್ಲಿ ಕಂಡುಬರುತ್ತವೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಅನೇಕ 'ಹುಲಿಬೇಟೆ' ವೀರಗಲ್ಲುಗಳು ಕಂಡುಬರುತ್ತವೆ. ಆನಿವಾಳ ಗ್ರಾಮದ ಕಲ್ಲೇಶ್ವರ ದೇವಾಲಯದ ಹೊರಭಿತ್ತಿಗೆ ಸುಮಾರು ೬ ವೀರಗಲ್ಲುಗಳನ್ನು ಹೊರಗಿಸಿಡಲಾಗಿದೆ. ಇವುಗಳಲ್ಲಿ ಒಂದು 'ಹುಲಿಬೇಟೆ' ವೀರಗಲ್ಲಾಗಿದೆ. ಸುಮಾರು ೩ ಅಡಿ ಇರುವ ಈ ವೀರಗಲ್ಲು ೩ ಹಂತಗಳನ್ನು ಹೊಂದಿದೆ. ಕೆಳಗಿನ ಮೊದಲನೆ ಹಂತದಲ್ಲಿ ವೀರನು ಅತ್ಯಂತ

ವೀರಾವೇಶದಿಂದ ಹೋರಾಡುತ್ತಿರುವುದು, ಹುಲಿಯು ಆಕ್ರೋಶದಿಂದ ಅವನ ಮೇಲೆ ಎರಗಿರುವುದು, ವೀರನು ಕಠಾರಿಯನ್ನು ಹುಲಿಯ ಬಾಯಿಗೆ ಹಾಕಿ ಅದನ್ನು ಕೊಲ್ಲುತ್ತಿರುವುದನ್ನು ಚಿತ್ರಿಸಲಾಗಿದೆ. ಎರಡನೆಯ ಹಂತದಲ್ಲಿ ಹುಲಿ ಬೇಟೆ ಕಾಳಗದಲ್ಲಿ ಮರಣ ಹೊಂದಿರುವ ವೀರನನ್ನು ಪುಷ್ಪಕ ವಿಮಾನದಲ್ಲಿ ಅಪ್ಸರೆಯರು ಹೊತ್ತೊಯ್ಯುತ್ತಿರುವುದು ಕಂಡುಬರುತ್ತದೆ. ಮೂರನೆ ಹಂತದಲ್ಲಿ ಕೈಮುಗಿದು ಕುಳಿತಿರುವ ವೀರ, ಶಿವಲಿಂಗ, ಯತಿಗಳು, ಸೂರ್ಯ-ಚಂದ್ರ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ವೀರಗಲ್ಲನ್ನು ಹಸಿರು ಬಳಪದ ಕಲ್ಲಿನಲ್ಲಿ ರಚಿಸಲಾಗಿದ್ದು, ಹೊಯ್ಸಳ ಶೈಲಿಯಲ್ಲಿರುವ ಇದು ಕ್ರಿ.ಶ. ಸುಮಾರು ೧೨ನೇ ಶತಮಾನದ್ದಾಗಿದೆ.

ಕೈನಡು ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ಒಂದು 'ಹುಲಿಬೇಟೆ' ವೀರಗಲ್ಲಿದೆ. ಇದು ಕೇವಲ ಎರಡು ಹಂತದಲ್ಲಿದೆ. ಮೊದಲನೇ ಹಂತದಲ್ಲಿ ವೀರನು ನಿರಾಯುಧನಾಗಿ ಹುಲಿಯೊಂದಿಗೆ ಹೋರಾಡುತ್ತಿರುವುದು, ಎರಡನೆಯ ಹಂತದಲ್ಲಿ ಕೇವಲ ಸೂರ್ಯ-ಚಂದ್ರ ಶಿಲ್ಪಗಳಿದ್ದು ಉಳಿದ ಅಂಶಗಳು ನಶಿಸಿಹೋಗಿವೆ. ಹೊಯ್ಸಳ ಶೈಲಿಯ ಈ ವೀರಗಲ್ಲು ಕ್ರಿ.ಶ.ಸುಮಾರು ೧೩ನೇ ಶತಮಾನದ್ದಾಗಿದೆ.

ಸಣ್ಣಕಿಟ್ಟದಹಳ್ಳಿಯ ಹೊಲವೊಂದರಲ್ಲಿ ಅಪರೂಪದ 'ಸಿಂಹ ಬೇಟೆ'ಯ ವೀರಗಲ್ಲು ದೊರೆತಿದೆ. ನೀಲಿ ಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿರುವ ಈ ಶಿಲ್ಪ ಒಂದು ಹಂತದಲ್ಲಿದೆ. ವೀರನು ಎಡಗೈಯಲ್ಲಿ ಸಿಂಹವನ್ನು ಹಿಡಿದಿರುವಂತೆ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಸಿಂಹಕ್ಕೆ ಚುಚ್ಚುತ್ತಿರುವಂತೆ ತೋರಿಸಲಾಗಿದೆ. ವೀರನು ಎತ್ತರವಾದ ಹಾಗೂ ಆಭರಣಗಳನ್ನು ಧರಿಸಿದ್ದಾನೆ. ಇದು ಸಹ ಕ್ರಿ.ಶ. ಸುಮಾರು ೧೨ನೇ ಶತಮಾನದ್ದಾಗಿದೆ.

ಬನಸೀಹಳ್ಳಿಯಲ್ಲಿ 'ಆನೆಬೇಟೆ' ವೀರಗಲ್ಲು ಕಂಡುಬರುತ್ತದೆ. ಬಿಳಿಕಣಶಿಲೆಯ ಈ ವೀರಗಲ್ಲಿನಲ್ಲಿ ಆನೆಯು ಆಕ್ರೋಶ ಭರಿತವಾಗಿ ತನ್ನ ಸೊಂಡಿಲನ್ನು ಮೇಲಕ್ಕೆತ್ತಿರುವಂತೆ ಅದರ ಕೆಳಗೆ ಒಬ್ಬ ವೀರನು ಈಟಿಯಿಂದ ಅದನ್ನು ಕೊಲ್ಲಲು ನಿಂತಿರುವಂತೆ ಚಿತ್ರಿಸಲಾಗಿದೆ. ಇದನ್ನು ಸ್ಥಳೀಯರು 'ಆನೆತಿಮ್ಮಪ್ಪ' ಎಂದು ಕರೆಯುವರು. ಇದು ಕ್ರಿ.ಶ.ಸುಮಾರು ೧೬ನೇ ಶತಮಾನದ ವೀರಗಲ್ಲಾಗಿದೆ.

೫.೫.೨. ಮಾಸ್ತಿಗಲ್ಲುಗಳು

ಸತಿ ಪದದ ವಿಶಾಲಾರ್ಥ ಸ್ತ್ರೀ ಎಂದು ಮಿತವಾದ ಅರ್ಥದಲ್ಲಿ ಗಂಡನ ಮರಣದ ತರುವಾಯ ಸ್ವ ಇಚ್ಛೆಯಿಂದ ನಿಧನ ಹೊಂದುವ ಪತ್ನಿ ಎಂದಾಗುತ್ತದೆ.[೫೯] ಹೀಗೆ ವೀರಮರಣ ಹೊಂದಿದ ಸ್ತ್ರೀಯರನ್ನು 'ಸತಿ ಹೋದಳು' ಅಥವಾ ಗೌರವ ಪೂರ್ವಕವಾಗಿ 'ಮಹಾಸತಿಯಾದಳು' ಎಂದು ಕರೆಯಲಾಗುತ್ತದೆ.[೬೦] ಮಹಾಸತಿ ಎಂಬ ಪದದ ತದ್ಭವ ರೂಪವೇ ಮಾಸ್ತಿ.[೬೧] ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು. ಈ ರೀತಿ ಅವಳ ಶಾಶ್ವತ ಸ್ಮರಣೆಗಾಗಿ ನಿರ್ಮಿಸಿದ ಶಿಲೆಗಳನ್ನು ಮಾಸ್ತಿಕಲ್ಲುಗಳೆಂದು ಕರೆಯಲಾಗುತ್ತದೆ.[೬೨] ಶಿವನ ಪತ್ನಿ ದಾಕ್ಷಾಯಿಣಿ ಅಥವಾ ಸತಿದೇವಿಯು ದಕ್ಷಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಈ ಸತಿಪದ್ಧತಿಗೆ ಮೂಲವಾಗಿರಬೇಕೆಂದು ತೋರುತ್ತದೆ.[೬೩]

ಪ್ರಾಚೀನ ಜನಾಂಗಗಳು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ಬಹು ಧೃಢವಾಗಿ ನಂಬಿದ್ದವು. ವ್ಯಕ್ತಿ ಮಡಿದಾಗ ಅವನು ಆ ಪರಲೋಕಕ್ಕೆ ಹೋಗುವನೆಂದೂ ಅಲ್ಲಿಯ ಅವನ ಭೋಗಕ್ಕೆ ಇಲ್ಲಿಂದ ಅವನಿಗಿಷ್ಟವಾದ ವಸ್ತುಗಳನ್ನು ಕಳುಹಿಸಬೇಕೆಂದು ಭಾವಿಸಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದು. ಅಥವಾ ತಾನು ಸತ್ತಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬನ ವಶಳಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೂ ಕಾರಣವಿರಬಹುದು.[೩೪] ಪತಿಯ ಜೊತೆಯಲ್ಲಿ ಅವನ ವಿಧವೆಯನ್ನೂ ಸುಡುವ ಪದ್ಧತಿಯ ಪ್ರಾಚೀನ ಭಾರತದಲ್ಲಿ ಮಾತ್ರವಲ್ಲ ಪ್ರಾಚೀನ ಗ್ರೀಕ್, ಜರ್ಮನ್ ಮುಂತಾದ ಯೂರೋಪ್ ಮತ್ತು ಪಶ್ಚಿಮ ಏಷ್ಯಾ ಜನಾಂಗಗಳಲ್ಲಿಯೂ ಇದ್ದಿತು. ವಿ.ಎ. ಸ್ಮಿತ್ ಅವರು ಸಿಥಿಯೆನ್ ರಾಜರು ಕ್ರಿಸ್ತಶಕದ ಆರಂಭದಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿದ್ದರು ಎಂದು ಹೇಳಿದ್ದಾರೆ.[೩೫]

ಎಡ್ವರ್ಡ್ ಥಾಮ್ಸನ್‌ರವರು ಈ ಪದ್ಧತಿ ಪ್ರಾಚೀನ ಭಾರತದ ಬುಡಕಟ್ಟು ಜನಾಂಗಗಳಿಂದ ಹುಟ್ಟಿ ಅದು ಹಿಂದೂ ಧರ್ಮದಲ್ಲಿ ಲೀನವಾಗಿ ವಿಕಾಸ ಹೊಂದಿದೆಯೆಂದು ಅಭಿಪ್ರಾಯಿಸುತ್ತಾರೆ.[೩೬] ಸಹಗಮನದ ಮೊದಲನೆಯ ಐತಿಹಾಸಿಕ ನಿದರ್ಶನವೆಂದರೆ ಕ್ರಿ.ಪೂ.೩೧೬ರಲ್ಲಿ ಗ್ರೀಕರೊಡನೆ ಹೋರಾಡಿ ಮಡಿದ ಕೆತ್ಯೋಸನ ಕಿರಿಯ ಹೆಂಡತಿಯ ಸಹಗಮನ.[೩೭] ಬಳಿಕ ಕ್ರಿ.ಶ.ನಾಲ್ಕನೇ ಶತಮಾನದಿಂದ ಸಹಗಮನ ಪದ್ಧತಿ ಹೆಚ್ಚು ಪ್ರಚಾರಕ್ಕೆ ಬಂದಿತು. ಕಾಳಿದಾಸನು ಸಹಗಮನವು ಸ್ತ್ರೀಗೆ ಸಹಜವಾದದು ಎಂದು ಹೇಳಿದ್ದಾನೆ.[೩೮] ಉತ್ತರ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕಾಶ್ಮೀರದಲ್ಲಿ ಸಹಗಮನ ಪದ್ಧತಿಯು ಅತ್ಯಂತ ಪ್ರಬಲವಾಗಿತ್ತೆಂದು ಕಲ್ಹಣನು ತನ್ನ 'ರಾಜತರಂಗಿಣಿ'ಯಲ್ಲಿ ಹೇಳಿದ್ದಾನೆ.[೩೯]

ಕರ್ನಾಟಕದಲ್ಲಿ ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ. ೬ನೇ ಶತಮಾನದ ರವಿವರ್ಮನ ಶಾಸನವಾಗಿದೆ.[೪೦] ಮುಂದೆ ಮೂರು, ನಾಲ್ಕು ಶತಮಾನದಲ್ಲಿ ಎಲ್ಲಿಯೂ ಸಹಗಮನದ ವಿಷಯ ಬರುವುದಿಲ್ಲ. ಪುನಹ ಸಹಗಮನದ ಸ್ಪಷ್ಟ ಐತಿಹಾಸಿಕ ನಿದರ್ಶನವು ಕ್ರಿ.ಶ. ೯೭ರ ಶಾಸನವೊಂದರಲ್ಲಿ ದೊರಕುತ್ತದೆ. ಇದರಲ್ಲಿ ಬಿದಿಯಣ್ಣ ಎನ್ನುವವನು ಮಡಿದಾಗ ಅವನ ಹೆಂಡತಿಯಾಗಿದ್ದ ಜಕ್ಕಜ್ಜಿಯೂ ಪ್ರಾಣವನ್ನು ತ್ಯಜಿಸಿದಾಗ ಅವಳ ತಂಗಿ ಜಾಜಿಯ ಕಲ್ಲನ್ನು ನಿಲ್ಲಿಸುತ್ತಾಳೆ.[೪೧] ಕರ್ನಾಟಕದಲ್ಲಿ ವೀರಯುಗದೊಡನೆ (೯-೧೦ನೇ ಶತಮಾನ) ಪ್ರಬಲಗೊಂಡ ಸಹಗಮನ ಪದ್ಧತಿಯು ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ತುತ್ತತುದಿಯನ್ನು ಮುಟ್ಟಿತು.[೪೨] ಪಾಳೆಯಗಾರರ ಕಾಲದಲ್ಲಿ ಈ ಪದ್ಧತಿ ಇನ್ನೂ ಹೆಚ್ಚಾಯಿತು.[೪೩]

ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಸರಿಸಮಾನವಾದ ಸ್ಮಾರಕಗಳು. ವೀರನು ತನ್ನ ನೆಚ್ಚಿನ ಒಡೆಯನಿಗೆ ಸ್ವಾಮಿನಿಷ್ಠೆ ತೋರಿಸಲು ಯುದ್ಧ ಭೂಮಿಯಲ್ಲಿ ಹೋರಾಡಿ ಮಡಿದರೆ ಅವನ ಪತ್ನಿಯು ತನ್ನ ಪತಿಭಕ್ತಿಗಾಗಿ ಸಮಾಜದಲ್ಲಿ ಎಲ್ಲರ ಸಮ್ಮುಖದಲ್ಲಿ ತನ್ನನ್ನು ತಾನೇ ಕೊಂದುಕೊಳ್ಳುತ್ತಾಳೆ. ಎಂ. ಚಿದಾನಂದಮೂರ್ತಿಯವರು ಈ ಸಂದರ್ಭದಲ್ಲಿ ದಾನ ಶಾಸನಗಳಿಗಿಂತ

ವೀರಗಲ್ಲುಗಳು ಮುಖ್ಯವಾದರೆ ವೀರಗಲ್ಲುಗಳಿಗಿಂತ ಮಾಸ್ತಿಗಲ್ಲುಗಳು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡು ನಮ್ಮ ಮನಸ್ಸನ್ನು ಕಲಕುತ್ತವೆ ಎಂದು ಹೇಳಿದ್ದಾನೆ.[೩೮೪] ಸತಿಪದ್ಧತಿಯು ಅಂದಿನ ಸಮಾಜದಲ್ಲಿ ಆಳವಾಗಿ ಬೇರೂರಲು ಅನೇಕ ಕಾರಣಗಳಿದ್ದವು. ಅವುಗಳೆಂದರೆ ಪತಿಭಕ್ತಿ, ಮನೆತನ ಹಾಗೂ ಸಮಾಜದ ಪ್ರತಿಷ್ಠೆ, ಸ್ತ್ರೀ ತನ್ನ ಪಾವಿತ್ರತೆಯನ್ನು ಕಾಪಾಡಿಕೊಳ್ಳಲು, ಪುರೋಹಿತ ಮತ್ತು ಪ್ರಭುವರ್ಗವು ಆಸ್ತಿಯ ಆಸೆಗಾಗಿ ಸೃಷ್ಟಿಸಿಕೊಂಡ ವ್ಯವಸ್ಥೆ ಹೀಗೆ ಇನ್ನೂ ಹಲವು ಕಾರಣಗಳು ಕಂಡುಬರುತ್ತವೆ. ಮಾಸ್ತಿಗಲ್ಲುಗಳನ್ನು ಎರಡು ವಿಧದಲ್ಲಿ ನೆಡುತ್ತಿದ್ದರು. ೧. ಪತಿಯು ಮಡಿದಾಗ ಅವನ ಶವದ ಜೊತೆಯಲ್ಲಿಯೇ ಚಿತೆಗೆ ಬಿದ್ದು ಅಥವಾ ಸಮಾಧಿಯಲ್ಲಿ ಹುಗಿಸಿಕೊಂಡು ಪ್ರಾಣ ಬಿಡುತ್ತಿದ್ದ ಪದ್ಧತಿಯ ಮೂಲಕ ಮಾಸ್ತಿಗಲ್ಲುಗಳನ್ನು ನಿರ್ಮಿಸುವುದು, ಅಂತಹ ಮಾಸ್ತಿಗಲ್ಲಿನಲ್ಲಿ ಪತಿ ಪತ್ನಿಯನ್ನು ಒಂದೇ ಶಿಲೆಯಲ್ಲಿ ಕೆತ್ತಲಾಗಿರುತ್ತದೆ. ಈ ಪ್ರಕಾರದ ಮಾಸ್ತಿಕಲ್ಲುಗಳು ದೊರೆಯುವುದು ಅತ್ಯಂತ ವಿರಳ.[೩೮೫] ೨. ದೂರದಲ್ಲೆಲ್ಲೋ ತನ್ನ ಪತಿ ಮಡಿದ ವಾರ್ತೆಯನ್ನು ಕೇಳಿದ ನಂತರ ಸತಿಯು ಮಹಾಸತಿಯಾಗುವುದಕ್ಕೆ 'ಅನುಗಮನ'ವೆಂದು ಕರೆಯಲಾಗಿದೆ.[೩೮೬] ವೀರನು ದೂರದ ರಣಭೂಮಿಯಲ್ಲಿ ಮಡಿದ ವಿಷಯವನ್ನು ತಿಳಿದ ಅವನ ಪತ್ನಿಯು ತನ್ನ ಸ್ವಗ್ರಾಮದಲ್ಲಿ ಚಿತೆಯೇರುತ್ತಿದ್ದಳು. ಇಲ್ಲಿ ವೀರ ಮತ್ತು ಅವನ ಪತ್ನಿ ಇಬ್ಬರನ್ನು ಬೇರೆ ಬೇರೆ ಸ್ಥಳಗಳಲ್ಲಿ ಸಂಸ್ಕಾರ ಮಾಡುತ್ತಿದ್ದ ಸಾಧ್ಯತೆಗಳು ಹೆಚ್ಚಾಗಿವೆ. 'ಅನುಗಮನ' ಮಾಸ್ತಿಗಲ್ಲುಗಳನ್ನು ಪೂರ್ಣಸತಿ ಶಿಲ್ಪ, ಪೂರ್ಣಸತಿಶಿಲ್ಪ ಮತ್ತು ಇತರರ ಶಿಲ್ಪ, ಇಬ್ಬರು ಸತಿಯರ ಪೂರ್ಣಶಿಲ್ಪ ಮತ್ತು ಇತರರ ಶಿಲ್ಪ, ವೀರಮಾಸ್ತಿಗಲ್ಲು, ಹಂತಗಳಿರುವ ವೀರಮಾಸ್ತಿಶಿಲ್ಪ, ಒಕ್ಕೈಮಾಸ್ತಿಶಿಲ್ಪ, ಇಕ್ಕೈ ಮಾಸ್ತಿಶಿಲ್ಪ, ಬಹುಕ್ಕೈ ಮಾಸ್ತಿಶಿಲ್ಪ ಎಂದು ಹಲವು ರೀತಿಯಲ್ಲಿ ವಿಭಾಗಿಸಬಹುದು.[೩೮೭]

ಪೂರ್ಣಸತಿಶಿಲ್ಪ : ಪೂರ್ಣಸತಿಶಿಲ್ಪವೆಂದರೆ ಶಾಸನ ಫಲಕದಲ್ಲಿ ಕೇವಲ ಮಹಿಳೆಯೊಬ್ಬಳ ಚಿತ್ರ ಮಾತ್ರ ಇರುತ್ತದೆ. ಇಲ್ಲಿ ಬೇರೆ ಇನ್ಯಾರ ಶಿಲ್ಪವೂ ಇರುವುದಿಲ್ಲ. ಹೀಗಾಗಿ ಇದು ನೋಡಲು ದೇವತೆಯ ಮೂರ್ತಿಯಂತೆ ಕಾಣುತ್ತದೆ. ಆದರೆ ಎಡಗೈಯಲ್ಲಿ ಕಮಂಡಲ ಹಿಡಿದು ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿರುವ ಭಂಗಿಯಲ್ಲಿರುತ್ತದೆ.[೩೮೮]

ಬಾಗೂರಿನ ಮೂಡಲ ಮುತ್ತಿನ ಕೆರೆಯ ಏರಿಯ ಬದಿಯಲ್ಲಿ ಈ ಪ್ರಕಾರದ ಒಂದು ಮಾಸ್ತಿಕಲ್ಲು ಇದೆ. ಕ್ರಿ.ಶ. ಸುಮಾರು ೧೬-೧೭ನೇ ಶತಮಾನಕ್ಕೆ ಸೇರಬಹುದಾದ ಈ ಶಿಲ್ಪವು ಬಾಗೂರಿನ ಮಾಸ್ತಿಕಲ್ಲುಗಳಲ್ಲೇ ವಿಶಿಷ್ಟವಾದುದು. ಸುಮಾರು ೫ ಅಡಿ ಎತ್ತರವಿರುವ ಈ ಶಿಲ್ಪವನ್ನು ಕಪ್ಪುಶಿಲೆಯಲ್ಲಿ ಕಂಡರಿಸಲಾಗಿದೆ. ನೆಟ್ಟಗೆ ನಿಂತಿರುವ ಮಹಾಸತಿಯು ಎಡಗೈಯನ್ನು ಇಳಿಬಿಟ್ಟಿದ್ದು ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿದ್ದಾಳೆ. ಬಲಗೈಯ ಹೆಬ್ಬೆರಳು ನಡುವೆ ಒಂದು ನಿಂಬೆಹಣ್ಣನ್ನು ಹಿಡಿದಿರುವಳು. ಈಕೆಯು ಬಹಳ ಸಣ್ಣದಾದ ನಡುವನ್ನು ಹೊಂದಿದ್ದು, ಎದೆ ಕೊರಳತುಂಬ ಆಭರಣಗಳನ್ನು ಧರಿಸಿ ಕೇದಗೆ ಗರಿಗಳಿಂದ ಅಲಂಕರಿಸಿದ ಕೇಶದಂಟನ್ನು ಹಾಕಿಕೊಂಡಿದ್ದಾಳೆ. ಸೀರೆಯ ನೆರಿಗೆ ಪಾದದವರೆಗೂ ತೆರೆತೆರೆಯಾಗಿ ಹರಡಿದೆ. ಈ ಮಹಾಸತಿ ಕುರಿತು ಶಾಸನ ಅಥವಾ ಚಾರಿತ್ರಿಕ ದಾಖಲೆಯಾಗಲಿ ಲಭ್ಯವಿಲ್ಲ. ಆದರೆ ಈ ಕುರಿತು

ಮೌಖಿಕವಾದ ಕಥೆಯೊಂದಿದೆ. ಅದೆಂದರೆ ಬಾಗೂರಿನ ಗೌಡನ ಅಧಿಕಾರವನ್ನು ಸಹಿಸದ ಒಂದು ವರ್ಗದ ಜನರು ಒಂದು ದಿನ ರಾತ್ರಿ ಗೌಡನು ಹೊರಗೆ ಮಲಗಿರುವಾಗ ಅವನ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಸಾಯಿಸಿ ಮೂಡಲ ಮುತ್ತಿನ ಕೆರೆಯ ಪಕ್ಕದಲ್ಲಿ ಹೂತರು. ಈ ವಿಷಯ ತಿಳಿದ ಗೌಡನ ಹೆಂಡತಿಯು ಅದೇ ಸ್ಥಳದಲ್ಲಿ ಪ್ರಾಣಾರ್ಪಣೆ ಮಾಡಿಕೊಂಡಳು. ಅದೇ ಸ್ಥಳದಲ್ಲಿ ಗೌಡನ ವಂಶಸ್ಥರು 'ಮಹಾಸತಿ'ಯನ್ನ ನಿಲ್ಲಿಸಿದರು. ಅದೇ ವಂಶದವರು ಇಂದಿಗೂ ಮಾಸ್ತಮ್ಮ ಎಂದು ಇದನ್ನು ಪೂಜಿಸುವುದು ಆರಾಧಿಸುವುದನ್ನು ಕಾಣಬಹುದು.[೬೯]

ಬಲ್ಲಾಳಸಮುದ್ರದಲ್ಲೂ ಕ್ರಿ.ಶ. ಸುಮಾರು ೧೧-೧೨ನೇ ಶತಮಾನದ 'ಮಹಾಸತಿ' ಶಿಲ್ಪವಿದೆ. ಸುಮಾರು ೪ ಅಡಿ ಎತ್ತರದ ಈ ಇದನ್ನು ಕಪ್ಪುಶಿಲೆಯಲ್ಲಿ ಕಂಡರಿಸಲಾಗಿದೆ. ನೇರವಾಗಿ ನಿಂತಿರುವ ಈ ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹರಸುತ್ತಿರುವುದು ಅದರ ಹೆಬ್ಬೆರಳಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ, ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದಾಳೆ. ಈಕೆಯ ತಲೆಯ ಹಿಂದೆ ಅಗಲವಾದ ತುರುಬು ಅದಕ್ಕೆ ಕೇದಗೆಯನ್ನು ಮುಡಿದಿರುವುದು ಕಂಡುಬರುವುದು. ಎದೆಯ ಮೇಲೆ ಕೆಲವು ಆಭರಣ, ಕೈಯಲ್ಲಿ ಬಳೆ ತೋಳುಗಳಲ್ಲಿ ತೋಳುಬಂದಿ, ಕಿವಿಯಲ್ಲಿ ದೊಡ್ಡದಾದ ಕುಂಡಲಗಳು ಇವೆ. ಸುಂದರವಾದ ಸೀರೆ ಅದಕ್ಕೆ ನೆರಿಗೆಗಳು ಕಂಡುಬರುತ್ತವೆ.

ಚಿಕ್ಕ ಬ್ಯಾಲದಕೆರೆಯ ಪ್ರೌಢಶಾಲೆಯ ಬಳಿ ಬಿದ್ದಿರುವ ಸುಮಾರು ೨ ಅಡಿ ಎತ್ತರವಿರುವ ಹಸಿರು ಬಣ್ಣದ ಹೊಯ್ಸಳ ಶೈಲಿಯ 'ಮಹಾಸತಿ' ಶಿಲ್ಪವು ವಿಶಿಷ್ಟವಾಗಿದೆ. ತ್ರಿಭಂಗಿಯಲ್ಲಿ ನಿಂತಿರುವ ಈಕೆಯು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿದ್ದಾಳೆ. ಬಲಗೈಯಲ್ಲಿ ನಿಂಬೆಹಣ್ಣು, ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಈಕೆಯ ಬಲಭಾಗದಲ್ಲಿ ಕೆಳಗೆ ಕಮಂಡಲವಿದೆ.

ಪೂರ್ಣಸತಿಶಿಲ್ಪ, ಮತ್ತು ಇತರರ ಶಿಲ್ಪ : ಕೆಲವು ಮಾಸ್ತಿಕಲ್ಲುಗಳು ತಮ್ಮ ಅಕ್ಕ-ಪಕ್ಕದಲ್ಲಿ ಅಥವಾ ಒಂದು ಮೂಲೆಯಲ್ಲಿ ವೀರನ ಚಿತ್ರವನ್ನೂ ಒಳಗೊಂಡಿರುತ್ತದೆ. ಈ ವೀರನು ಹೋರಾಡುತ್ತಿರುವ ಅಥವಾ ಮಹಾಸತಿಯೊಂದಿಗೆ ಕುಳಿತಿರುವ ಭಂಗಿಯಲ್ಲಿ ಚಿತ್ರಿತನಾಗಿರುತ್ತಾನೆ.[೭೦]

ನಾಗೇನಹಳ್ಳಿಯಲ್ಲಿ ಒಂದು ಮಾಸ್ತಮ್ಮನ ಗುಡಿಯಿದೆ. ಇಲ್ಲಿನ ಮಹಾಸತಿಕಲ್ಲು ಸುಮಾರು ೫ ಅಡಿ ಎತ್ತರವಿದ್ದು ಇದನ್ನು ಕಪ್ಪುಶಿಲೆಯಲ್ಲಿ ರಚಿಸಲಾಗಿದೆ. ಇದರ ಕಾಲಮಾನ ಕ್ರಿ.ಶ. ಸುಮಾರು ೧೧-೧೨ನೇ ಶತಮಾನ. ತನ್ನ ಬಲಗೈಯಲ್ಲಿ ಹಣ್ಣು ಇರುವ ಗಿಡವನ್ನು ಹಿಡಿದು ಮೇಲಕ್ಕೆತ್ತಿದ್ದಾಳೆ. ಎಡಗೈಯನ್ನು ಕೆಳಗೆ ಇಳಿಬಿಟ್ಟಿರುವುದರೊಂದಿಗೆ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಈಕೆಯ ಬದಿಯಲ್ಲಿ ಚಿಕ್ಕದಾಗಿ ವೀರನ ಚಿತ್ರವಿದೆ. ಪೀಠದ ಮೇಲೆ ಗಾಂಭೀರ್ಯವಾಗಿ ಕುಳಿತಿರುವ ವೀರನ ಬಲಗೈಯನ್ನು ಸೊಂಟದಲ್ಲಿ ಸಿಕ್ಕಿಸಿರುವ ಕತ್ತಿಯ ಮೇಲಿಟ್ಟಿದ್ದಾನೆ. ಎಡಗೈಯಲ್ಲೂ ಒಂದು ಚಿಕ್ಕ ಆಯುಧವಿದೆ. ತಲೆಯಲ್ಲಿ ವೀರಮುಡಿ ಇದೆ. ವಿವಿಧ ಆಭರಣ ಸುಂಧರ ವಸ್ತ್ರಧರಿಸಿರುವ ಈತನ ಲಕ್ಷಣ ಗಮನಿಸಿದರೆ ಬಹುಶಃ ಈ ಪರಿಸರದ ಸ್ಥಳಿಯ ಅಧಿಕಾರಿಯಾಗಿದ್ದಂತೆ ತೋರುತ್ತದೆ. ಮಹಾಸತಿಯ ಕೆಳಗೆ ಎರಡು ಕಡೆ ಕಮಂಡಲಗಳಿವೆ.

ಬನಸಿಹಳ್ಳಿಯ ಆಲದಮರದ ಕೆಳಗೆ ಮಹಾಸತಿಶಿಲ್ಪವಿದ್ದು ಸುಮಾರು ೩ ಅಡಿ ಎತ್ತರವಿದೆ. ಹಸಿರು ಬಳಪದ ಕಲ್ಲಿನಿಂದ ರಚಿಸಿರುವ ಇದು ಹೊಯ್ಸಳ ಕಾಲದ್ದು. ಈ ಶಿಲ್ಪದಲ್ಲಿ

ಮಹಾಸತಿಯು ತನ್ನ ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಮೇಲಕ್ಕೆತ್ತಿ ಹರಸುತ್ತಿದ್ದಾಳೆ. ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಈಕೆಯ ಬಲಗಡೆ ಚಿಕ್ಕದಾಗಿ ವೀರನ ಚಿತ್ರವಿದೆ. ವೀರನು ವೀರಾವೇಷದಿಂದ ಬಿಲ್ಲು-ಬಾಣ ಹಿಡಿದು ಹೋರಾಡುವಂತೆ ಚಿತ್ರಿಸಲಾಗಿದೆ. ಅಂದರೆ ಇವನು ಯುದ್ಧದಲ್ಲಿ ಹೋರಾಡಿ ಮಡಿದಾಗ ಆತನ ಮಡದಿಯು 'ಸತಿ'ಯಾಗಿದ್ದಾಳೆ.

ಇಬ್ಬರು ಸತಿಯರ ಪೂರ್ಣಶಿಲ್ಪ ಮತ್ತು ಇತರರ ಶಿಲ್ಪ : ಹೋರಾಟದಲ್ಲಿ ಮಡಿದ ವೀರನಿಗೆ ಇಬ್ಬರು ಸತಿಯರಿದ್ದರೆ ಅವರಿಬ್ಬರೂ ಪ್ರಾಣತ್ಯಾಗ ಮಾಡುತ್ತಿದ್ದರು. ಇಂತಹವರಿಗೆ ನಿಲ್ಲಿಸಿದ ಮಹಾಸತಿ ಕಲ್ಲುಗಳಲ್ಲಿ ವೀರನ ಜೊತೆ ಅವನ ಇಬ್ಬರು ಸತಿಯರನ್ನೂ ಚಿತ್ರಿಸಿರುತ್ತಾರೆ.[೫೧]

ಚಿಕ್ಕ ಬ್ಯಾಲದಕೆರೆಯ ಪ್ರೌಢಶಾಲೆಯ ಮುಂದೆ ಬಿದ್ದಿರುವ ಈ ಪ್ರಕಾರದ ಒಂದು ಮಹಾಸತಿಗಲ್ಲು ಹೊಯ್ಸಳ ಕಾಲದ್ದು. ಹಸಿರು ಬಳಪದ ಶಿಲೆಯಲ್ಲಿ ರಚಿಸಲ್ಪಟ್ಟಿರುವ ಈ ಮಹಾಸತಿ ಶಿಲ್ಪದಲ್ಲಿ ಇಬ್ಬರು ಸತಿಯರು ಮಹಾಸತಿಯರಾಗಿದ್ದಾರೆ. ವೇಷಭೂಷಣಗಳಿಂದ ಅಲಂಕೃತಗೊಂಡಿರುವ ಮಹಾಸತಿಯರು ತಮ್ಮ ಬಲಗೈಗಳಲ್ಲಿ ನಿಂಬೆಹಣ್ಣುಗಳನ್ನು ಹಿಡಿದು ಮೇಲಕ್ಕೆತ್ತಿ ಹರಸುತ್ತಿರುವುದು, ತಮ್ಮ ಎಡಗೈಗಳಲ್ಲಿ ಕನ್ನಡಿಗಳನ್ನು ಹಿಡಿದು ಕೆಳಗೆ ಇಳಿಬಿಟ್ಟಿರುವುದು, ಇವರ ಎಡಭಾಗದಲ್ಲಿ ಕೆಳಗೆ ಕಮಂಡಲಗಳಿವೆ. ಮಹಾಸತಿಯರ ಬಲಬದಿಯಲ್ಲಿ ವೀರನು ಕುದುರೆಯ ಮೇಲೆ ಕುಳಿತು ಈಟಿಯನ್ನು ಹಿಡಿದಿದ್ದಾನೆ. ಅವನ ಹಿಂದೆ ಸೇವಕನು ಛತ್ರಿಯನ್ನು ಹಿಡಿದಿದ್ದಾನೆ. ಈ ವೀರನು ಯುದ್ಧ/ಹೋರಾಟದಲ್ಲಿ ಮಡಿದಾಗ ಆತನ ಇಬ್ಬರು ಹೆಂಡತಿಯರು 'ಮಹಾಸತಿ'ಯರಾಗಿದ್ದಾರೆ. ಇಂತಹ ಶಿಲ್ಪಗಳು ಈ ಪರಿಸರದಲ್ಲಿ ಸಾಧಾರಣವಾಗಿ ಕಂಡುಬರುತ್ತವೆ.

ವೀರಮಾಸ್ತಿಶಿಲ್ಪ : ಕೆಲವು ಮಹಾಸತಿಶಿಲ್ಪಗಳಲ್ಲಿ ವೀರನಿಗೆ ಹೆಚ್ಚು ಪ್ರಾಧಾನ್ಯವಿದ್ದು, ಮಹಾಸತಿ ಶಿಲ್ಪಕ್ಕೆ ಕಡಿಮೆ ಪ್ರಾಧಾನ್ಯತೆಯಿರುತ್ತದೆ. ಅಥವಾ ಇಬ್ಬರನ್ನೂ ಸರಿಸಮಾನವಾಗಿ ಚಿತ್ರಿಸಲಾಗಿರುತ್ತದೆ. ಈ ರೀತಿಯ ಮಹಾಸತಿಶಿಲ್ಪಗಳು ಬಹುತೇಕವಾಗಿ ಎಲ್ಲಾ ಕಡೆಯೂ ದೊರೆಯುತ್ತವೆ. ಅಲ್ಲದೆ ಈ ಮಹಾಸತಿ ಶಿಲ್ಪಗಳಲ್ಲಿ ಬರಹಗಳೂ ಇರುವುದಿಲ್ಲ. ಶಿಲ್ಪದ ಶೈಲಿಯೂ ಒರಟಾಗಿರುವುದು. ಆದರೂ ಇಂತಹ ಹಲವಾರು ಶಿಲ್ಪಗಳು ಶೈಲಿಯ ದೃಷ್ಟಿಯಿಂದ ನೋಡಲು ಆಕರ್ಷಕವಾಗಿವೆ.[೫೨]

ಲಕ್ಕಿಹಳ್ಳಿಯ ವಿಜಯನಗರೋತ್ತರ ಕಾಲದ ಎರಡು ವೀರಮಾಸ್ತಿಶಿಲ್ಪಗಳು ಶಿಲ್ಪಶೈಲಿಯ ದೃಷ್ಟಿಯಿಂದ ಅತ್ಯಂತ ವಿಶಿಷ್ಟವಾಗಿವೆ. ಮೊದಲನೇ ಶಿಲ್ಪದಲ್ಲಿ ವೀರನು ಬಿಲ್ಲು ಹಾಗೂ ಕತ್ತಿಯನ್ನು ಹಿಡಿದು ವೀರತನದಿಂದ ನಿಂತಿರುವುದು ಅವನ ಬಲಗಡೆ ಕುದುರೆ ಹಾಗೂ ಛತ್ರಿ ಹಿಡಿದಿರುವ ಸೇವಕನಿರುವನು. ಇನ್ನು ವೀರನ ಎಡಭಾಗದಲ್ಲಿ ಅವನ ಸತಿಯು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿದ್ದು ಎಡಗೈಯಲ್ಲಿ ಕನ್ನಡಿ ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರುವಳು.

ಅದೇ ರೀತಿ ಮತ್ತೊಂದು ವೀರ ಮಾಸ್ತಿಶಿಲ್ಪದಲ್ಲಿ ರಾಜಪೋಷಾಕನ್ನು ಧರಿಸಿರುವ ವೀರನು ತನ್ನ ಎಡಗೈಯಲ್ಲಿ ಕತ್ತಿಯನ್ನು ಇಳಿಬಿಟ್ಟುಕೊಂಡಿದ್ದಾನೆ. ಬಲಗೈಯಲ್ಲಿ ಯಾವುದೋ ಒಂದು ಪ್ರಾಣಿಯನ್ನು ಹಿಡಿದಿದ್ದಾನೆ. ದೇಹದಲ್ಲಿ ವಿವಿಧ ಆಭರಣ ಧರಿಸಿದ್ದು ತಲೆಯಲ್ಲಿ ರಾಯಮುಡಿ ಇದೆ. ಈತನ ಸತಿಯು ತನ್ನ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದು ಮೇಲಕ್ಕೆತ್ತಿದ್ದಾಳೆ. ಬಲಗೈಯಲ್ಲಿ ಯಾವುದೋ ಒಂದು ವಸ್ತುವನ್ನು ಹಿಡಿದು ಮೇಲಕ್ಕೆತ್ತಿದ್ದಾಳೆ. ಈಕೆಯು ಧರಿಸಿರುವ

ವಸ್ತ್ರ ಹಾಗೂ ಆಭರಣ ಅತ್ಯಂತ ವೈಭವಯುತವಾಗಿದೆ. ತಲೆಯಲ್ಲಿ ಸುಂದರವಾದ ಕೇಶಾಲಂಕಾರ ತುರುಬು ಜಡೆ ಇದ್ದು ಅದಕ್ಕೆ ಕೇದಿಗೆ ಮುಡಿಯಲಾಗಿದೆ.

ಮತ್ತೋಡು ಗ್ರಾಮದ ಬನಶಂಕರಿ ದೇವಾಲಯದ ಪ್ರಾಕಾರದ ಒಳಗೆ ವಿಜಯನಗರೋತ್ತರ ಕಾಲದ ಕ್ರಿ.ಶ. ಸುಮಾರು ೧೭ನೇ ಶತಮಾನದ 'ವೀರಮಾಸ್ತಿಶಿಲ್ಪ' ವಿದೆ. ಇದರಲ್ಲಿ ವೀರನು ಕುದುರೆಯ ಮೇಲೆ ಕುಳಿತು ಎಡಗೈಯಲ್ಲಿ ಕುದುರೆಯ ಲಗಾಮು ಬಲಗೈಯಲ್ಲಿ ಈಟಿಯನ್ನು ಹಿಡಿದು ಮೇಲಕ್ಕೆತ್ತಿದ್ದಾನೆ. ಬದಿಯಲ್ಲಿ ಅವನ ಮಡದಿ ಸತಿಯಾಗಿರುವುದು, ಈಕೆಯು ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದು ಮೇಲಕ್ಕೆತ್ತಿ ಹರಸುತ್ತಿರುವುದು, ಎಡಗೈಯಲ್ಲಿ ಕನ್ನಡಿ ಹಿಡಿದು ಕೆಳಗೆ ಇಳಿಬಿಟ್ಟಿರುವುದು ಕಂಡುಬರುತ್ತದೆ. ಬಹುಶಃ ಇದು ಮತ್ತೋಡು ಪಾಳೆಯಗಾರರ ಮನೆತನದವರ ವೀರಮಾಸ್ತಿಶಿಲ್ಪವಿರಬೇಕು.

ಒಕ್ಕೈಮಾಸ್ತಿಶಿಲ್ಪ : ಕೆಲವು ಸ್ಮಾರಕಶಿಲ್ಪಗಳಲ್ಲಿ ಮಹಾಸತಿಯ ಘಟನೆಯನ್ನು ತಿಳಿಸಲು ಸಾಂಕೇತಿಕವಾಗಿ ಕಂಬದಿಂದ ಹೊರಟ ಕೈಯನ್ನು ಚಿತ್ರಿಸಿರುತ್ತಾರೆ. ಇದನ್ನು ತೋಳುಗೈ, ವ್ಯಾಸನ ತೋಳು, ಒಕ್ಕೈಮಾಸ್ತಿ ಮುಂತಾಗಿ ಕರೆಯುತ್ತಾರೆ.[೨೫] ಮಹಾಸತಿಯು ಬೆಂಕಿಯ ಕೊಂಡಕ್ಕೆ ಬೀಳುವಾಗ ಎಲ್ಲರಿಗೂ ತನ್ನ ಬಲಗೈಯನ್ನು ಎತ್ತಿ ಹರಸುತ್ತಿದ್ದಳು. ಅವಳ ಸಾವಿನ ನಂತರ ಅವಳು ಹರಿಸಿದ ಕೈಯ ರೂಪವನ್ನು ಶಿಲೆಗಳ ಮೇಲೆ ಕೆತ್ತಿ ಅವಳ ಸ್ಮಾರಕವಾಗಿ ನಿಲ್ಲಿಸುತ್ತಿದ್ದರು. ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಅದಕ್ಕೆ ಸೇರಿದಂತೆ ತೋಳನ್ನು ಶಿಲ್ಪಿಗಳು ಕೊರೆಯುತ್ತಿದ್ದರು.

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ವಿಜಯನಗರೋತ್ತರ ಕಾಲಘಟ್ಟದ ವೀರಭದ್ರ ದೇವಾಲಯದ ಪ್ರಾಕಾರದಲ್ಲಿ ಎರಡು 'ಒಕ್ಕೈಮಾಸ್ತಿಶಿಲ್ಪ'ಗಳಿವೆ. ಅದರಲ್ಲಿ ಮೊದಲನೇ ಒಕ್ಕೈ ಮಾಸ್ತಿಶಿಲ್ಪದ ರಚನೆಯಲ್ಲಿ ಕಂಬದಿಂದ ಕೈ ಹೊರಟ ಚಿತ್ರವಿದೆ. ಅದರ ತಳಭಾಗದಲ್ಲಿ ವೀರನು ಕತ್ತಿ ಗುರಾಣಿ ಹಿಡಿದು ಹೋರಾಡುತ್ತಿರುವಂತೆ ಬದಿಯಲ್ಲಿ ಸತಿಯು ಕೈಮುಗಿದು ಕುಳಿತಿರುವಂತೆ, ತುದಿಯಲ್ಲಿ ಶಿವಲಿಂಗ ಹಾಗೂ ಯತಿಯ ಶಿಲ್ಪವನ್ನು ರಚಿಸಲಾಗಿದೆ. ಮತ್ತೊಂದು ಒಕ್ಕೈಮಾಸ್ತಿ ಶಿಲ್ಪದ ರಚನೆಯಲ್ಲಿ ಕಂಬದಿಂದ ಕೈ ಹೊರಟ ಚಿತ್ರವಿದ್ದು ಅದರ ತಳಭಾಗದಲ್ಲಿ ಮೂರು ಜನ ವೀರರು ಎರಡು ಹಂತದಲ್ಲಿ ಕೈಮುಗಿದು ಕುಳಿತಿರುವಂತೆ ರಚಿಸಲಾಗಿದೆ. ಒಟ್ಟಾರೆ ಈ ಒಕ್ಕೈ ಮಾಸ್ತಿಶಿಲ್ಪಗಳು ಕ್ರಿ.ಶ. ಸುಮಾರು ೧೭ನೇ ಶತಮಾನದವುಗಳಾಗಿವೆ.

ಮಾಸ್ತಿಕಲ್ಲುಗಳೂ ಐತಿಹಾಸಿಕ ದೃಷ್ಟಿಯಿಂದ ಮಹತ್ವವಾದವು. ಇವುಗಳಿಂದ ಅಂದಿನ ಕಾಲದ ಜನರ ಇತಿಹಾಸವನ್ನು ನಿರೂಪಿಸಲು ಸಾಧ್ಯ. ಅದರಲ್ಲಿಯೂ ಅಂದಿನ ಸ್ತ್ರೀಯರ ಸ್ಥಿತಿ-ಗತಿಗಳನ್ನು ಅಲ್ಲದೆ ಅವರ ಜೀವನದಲ್ಲಿ ಗಂಡನ ಪಾತ್ರ ಎಷ್ಟು ಮಹತ್ವವೆಂಬುದನ್ನು ತಿಳಿಸುತ್ತವೆ. ಮಹಿಳೆಯರ ಮೇಲಾಗುವ ದೌರ್ಜನ್ಯ-ಶೋಷಣೆಗಳ ಬಗೆಗೆ ಒಂದು ಕಡೆ ಮಾಹಿತಿ ನೀಡಿದರೆ ಇನ್ನೊಂದು ಕಡೆ ಅವರ ತ್ಯಾಗ ಮನೋಭಾವನೆಯನ್ನು ತಿಳಿಸಿಕೊಡುತ್ತವೆ. ಈ ಶಿಲೆಗಳು ಮುಂದಿನ ಪೀಳಿಗೆಯವರಿಗೆ ಆದರ್ಶ ಗುಣ ಮತ್ತು ಉತ್ತಮ ಮೌಲ್ಯಗಳನ್ನು ಬೋಧಿಸುತ್ತವೆ. ಮಾಸ್ತಿಕಲ್ಲುಗಳಲ್ಲಿ ಚಿತ್ರಿಸಿದ ಮಹಾಸತಿಯರು ಧರಿಸಿಕೊಂಡ ವಸ್ತ್ರ ಮತ್ತು

ಆಭರಣಗಳಿಂದ ಅಂದಿನ ಸಮಾಜದಲ್ಲಿದ್ದ ವಿವಿಧ ಆಭರಣ ಹಾಗೂ ವಸ್ತ್ರಗಳ ಬಗ್ಗೆ ಮಾಹಿತಿಯನ್ನು ಪಡೆಯಬಹುದು. ಹೀಗೆ ಪತಿಯ ಮರಣದ ನಂತರ ಚಿತೆಯೇರಿ ಪ್ರಾಣತ್ಯಾಗ ಮಾಡಿದ ಮಹಾಸತಿಯರನ್ನು ಮುಂದಿನ ಪೀಳಿಗೆಯವರು ಶಾಶ್ವತವಾಗಿ ನೆನೆದು ಅವಳ ತತ್ವಗಳನ್ನು ಪಾಲಿಸಲು ರಾಜರು, ಗ್ರಾಮದ ಮುಖಂಡರು, ಮಹಾಸತಿಯ ಸಂಬಂಧಿಕರು ಈ ಶಿಲೆಗಳನ್ನು ಪ್ರತಿಷ್ಠಾಪಿಸುತ್ತಿದ್ದರು. ಹೀಗೆ ಪ್ರತಿಷ್ಠಾಪಿಸಿದ ಮಾಸ್ತಿಗಲ್ಲುಗಳನ್ನು ಇಂದಿಗೂ ಜನರು ಭಯ-ಭಕ್ತಿಗಳಿಂದ 'ಮಾಸ್ತ್ಯಮ್ಮ' ಎಂದು ಆರಾಧಿಸಿಕೊಂಡು ಬರುತ್ತಿದ್ದಾರೆ.

೫.೫.೩. ನಿಷಧಿಗಲ್ಲುಗಳು

ಪಂಪನ ಭರತ ಚಕ್ರವರ್ತಿ ಪ್ರಥಮ ತೀರ್ಥಂಕರನನ್ನು ಪ್ರಾರ್ಥಿಸಿಕೊಳ್ಳುತ್ತ ತನಗೆ ಕ್ಷಣಿಕಗಳಾದ ಅಮರೇಂದ್ರೋನ್ನತಿ, ಖೇಚರೇಂದ್ರ ವಿಭವಗಳು ಬೇಕಿಲ್ಲವೆಂದೂ, ಸಮಧಿ ಮರಣ, ಕರ್ಮಕ್ಷಯಗಳು ಲಭಿಸಲೆಂದೂ ಹಾರೈಸಿಕೊಂಡಿದ್ದಾನೆ.[೫೪] ಪ್ರಾಚೀನ ಕರ್ನಾಟಕದಲ್ಲಿ ಈ ಸಮಾಧಿ ಮರಣವು ಬಹುಜನ ಜೈನರು ಹಾರೈಸುತ್ತಿದ್ದ ಆದರ್ಶ ಮರಣವಾಗಿತ್ತು. ಕ್ಷಾಮಕಾಲದಲ್ಲಿ, ಮುಪ್ಪಿನಲ್ಲಿ ವಾಸಿಯಾಗದ ರೋಗ ಬಂದಾಗ-ಅವುಗಳಿಗೆ ಇನ್ನು ಪರಿಹಾರವಿಲ್ಲವೆಂದು ಖಚಿತವಾದರೆ, ಧಾರ್ಮಿಕ ವಿಧಿಗಳಿಗನುಗುಣವಾಗಿ ಸಾಯುವುದಕ್ಕೆ 'ಸಲ್ಲೇಖನ' ಅಥವಾ 'ಸಮಾಧಿ ಮರಣ' ವೆನ್ನುತ್ತಾರೆ.[೫೫] ಜಿನಧ್ಯಾನದಲ್ಲಿ ನಿರತನಾಗಿ ಪ್ರಾಣ ಬಿಡಲು ಅನುಕೂಲವಾಗುವಂತೆ ಸಲ್ಲೇಖನ ವ್ರತವನ್ನು ಶ್ರಾವಕರು ಮತ್ತು ಮುನಿಗಳು ಇಬ್ಬರಿಗೂ ಕಡ್ಡಾಯವಾಗಿಸಿದೆ. ಸತ್+ಲಿಖ್ ಧಾತುವಿನಿಂದ ರೂಪುಗೊಂಡಿರುವ ಸಲ್ಲೇಖನ ಪದಕ್ಕೆ 'ದೇಹವನ್ನು ಕೃಶವಾಗಿಸುವಿಕೆ' ಎಂದು ಅರ್ಥವಾಗುತ್ತದೆ.[೫೬] ಸಲ್ಲೇಖನ ವ್ರತವನ್ನು ಅಂಗೀಕರಿಸಿದವನು ಅನ್ನಪಾನಾದಿಗಳನ್ನು ತ್ಯಜಿಸಿ, ಎಲ್ಲಾ ರೀತಿಯ ಸ್ನೇಹ, ವೈರ, ಸಂಗಗಳನ್ನು ತ್ಯಜಿಸಿ, ತನ್ನ ಕರ್ಮಗಳನ್ನು ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತಾ ಪಂಚಪರಮೇಷ್ಠಿಗಳನ್ನು ಧ್ಯಾನಿಸುತ್ತಾ ತನಗೆ ಉತ್ತಮಗತಿ ದೊರೆಯಲೆಂದು ಹಾರೈಸುತ್ತಾ ಪ್ರಾಣತ್ಯಾಗ ಮಾಡಬೇಕು.[೫೭] ನಿರ್ಮಲ ಮನಸ್ಸಿನಿಂದ ಜಿನಧ್ಯಾನದ ಮೂಲಕ ಆತನನ್ನು ಕರ್ಮಬಂಧನದಿಂದ ಮುಕ್ತಿಗೊಳಿಸುವುದೇ ಮೋಕ್ಷವಾಗಿದ್ದು, ಇದೇ ಸಲ್ಲೇಖನದ ಮುಖ್ಯ ಉದ್ದೇಶವಾಗಿದೆ.

ಸಲ್ಲೇಖನ ವ್ರತವನ್ನು ಆಚರಿಸಿ ಸಾವನ್ನಪ್ಪಿದವರಿಗೆ ನಿರ್ಮಿಸಿದ ಸ್ಮಾರಕಗಳನ್ನು ನಿಷಧಿಗಲ್ಲುಗಳು ಎನ್ನುತ್ತಿದ್ದರು. ನಿಷದಿಗಲ್ಲುಗಳನ್ನು ಶಾಸನಗಳಲ್ಲಿ ನಿಶೀದಿಕಾ, ನಿಶಿದಿ, ನಿಶಿಧಿ, ನಿಶಿದಿಗೆ, ನಿಸೇಧಿಗೆ, ನಿಷದ್ಯಿಕಾ, ನಿಷದಿ, ನಿಷಧಿ, ನಿಶಿದ್ಯಾಲಯ, ನಿಷಿದ್ಧಿ, ನಿಷಿಧಿಗೆ, ನಿಷದ್ಯಾಲ, ನಿಶಿದಿ, ನಿಸ್ತಿಗೆ ಎಂಬ ಪದಗಳಿಂದ ಉಲ್ಲೇಖಿಸಲಾಗಿದೆ.[೫೮] 'ಸದ್' ಎಂಬ ಧಾತುವಿನಿಂದ ಉತ್ಪನ್ನವಾಗುವ ನಿಷ್ಪತ್ತಿ, ನಿಷಾದಿನ್ ಎಂಬ ಪದಗಳಿಗೆ ಕುಳಿತುಕೊಳ್ಳುವಿಕೆ ವಿಶ್ರಮಿಸುವಿಕೆ ಎಂಬ ಅರ್ಥಗಳಿವೆ. ಇದರಿಂದ ಹೊರಡುವ 'ನಿಷೇಧಿಕಾ' ಎಂಬ ಪದವೇ ಇದರ ಸರಿಯಾದ ರೂಪವಾಗಿದ್ದು, ವ್ರತಧಾರಿಯು ಕುಳಿತ ಸ್ಥಳದಲ್ಲಿ ಮಾಡಿದ ಗುರುತು ಎಂಬುದು ಇದರ ಅರ್ಥವೆಂದು ತಜ್ಞರ ಅಭಿಪ್ರಾಯವಾಗಿದೆ. ನಿಷಿದಿಯಂ ಸಂಳಿಸಿ, ನಿಶೀಧಿಯಂ ಮಾಡಿಸಿ ಎಂಬುದಕ್ಕೆ ದಹನ ಮಾಡಿದ ಸ್ಥಳದಲ್ಲಿ ರಚಿಸಿದ ಸ್ಮಾರಕವೆಂದು ಕೆಲವರ ಅಭಿಪ್ರಾಯವಾಗಿದೆ.[೫೯]

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಹೆಗ್ಗೆರೆಯ ಸುಪಾರ್ಶ್ವನಾಥ ಬಸದಿಯ ಹೊರಗೆ ಎರಡು ನಿಷಧಿ ಸ್ಮಾರಕಗಳು ಕಂಡುಬರುತ್ತವೆ. ಮೊದಲನೆ ನಿಷಧಿ ಸ್ಮಾರಕದಲ್ಲಿ 'ಕ್ರಿ.ಶ. ೧೧೨೩ರಲ್ಲಿ ಶ್ರೀಮೂಲ ಸಂಘದ ದೇಶಿಯಗಣದ ಪುಸ್ತಕ ಗಚ್ಚದ ಕೊಣ್ಣ ಕುನ್ದಾದನ್ವಯದ ಶ್ರೀಮಾಣಿಕ್ಯನನ್ದಿ ಸಿದ್ಧಾತ್ತದೇವರ ಶಿಷ್ಯ ಮೇಘಚಂದ್ರ ಭಟ್ಟಾರಕಾ ದೇವರು ಸನ್ಯಸನಯಿಂದ ಸಮಾಧಿ ಹೊಂದಿ ಸ್ವರ್ಗಸ್ತರಾದರು ಎಂದು ಹೇಳಿದೆ.[೪೦೦] ಇದರಲ್ಲಿ ಒಂದು ಪೀಠದ ಮೇಲೆ ಜಿನನು ಕುಳಿತಿರುವುದು ಬಲಬದಿಯಲ್ಲಿ ಶೃತಪೀಠದ ಮೆಲೆ ಪುಸ್ತಕಗಳಿವೆ. ಅದೇ ರೀತಿ ಮತ್ತೊಂದು ನಿಷಧಿ ಸ್ಮಾರಕದಲ್ಲಿ 'ಕ್ರಿ.ಶ. ೧೨೯೮ರಲ್ಲಿ ಚಂದ್ರಕೀರ್ತಿ ಎಂಬುವನು ಸ್ವರ್ಗಸ್ತನಾದಾಗ ಹೆಗ್ಗೆರೆಯ ಹಲವು ಮಂದಿ ನಿಷಧಿಯನ್ನು ನಿಲ್ಲಿಸಿದರು' ಎಂದು ಹೇಳಲಾಗಿದೆ.[೪೦೧] ಕ್ರಿ.ಶ. ೧೨ ಮತ್ತು ೧೩ನೇ ಶತಮಾನದ ಈ ನಿಷಧಿ ಸ್ಮಾರಕಗಳು ಈ ಪರಿಸರದ ಸಲ್ಲೇಖವ್ರತ ಪರಂಪರೆಯನ್ನು ಕುರಿತು ಹೇಳುತ್ತವೆ.

ಸ್ಮಾರಕ ಶಿಲ್ಪಗಳು ಗತಮಾನವನ ವಿಭಿನ್ನ ಸಾಂಸ್ಕೃತಿಕ ಜೀವನ ವಿಧಾನವನ್ನು ತೋರ್ಪಡಿಸುತ್ತವೆ. ಇವು ಆಯಾ ಪರಿಸರದ ರಾಜಕೀಯ ಇತಿಹಾಸ, ಯುದ್ಧ ಮತ್ತು ಸೈನ್ಯವ್ಯವಸ್ಥೆ, ವೀರತ್ವ, ಹೋರಾಟ, ದೇಶಭಕ್ತಿ, ಜನಾಂಗೀಯ ಸಮುದಾಯಗಳ ಚರಿತ್ರೆ, ಪಶುಪಾಲನೆ, ಗ್ರಾಮ ಸಂಸ್ಕೃತಿ, ಸ್ತ್ರೀಯರ ಪಾವಿತ್ರ್ಯದ ಮುಂತಾಗಿ ಗತದ ಕುರಿತ ಭಿನ್ನ ಸಾಂಸ್ಕೃತಿಕ ಆಯಾಮಗಳ ವಸ್ತುನಿಷ್ಠ ವಿಶ್ಲೇಷಣೆ ಸಾಧ್ಯವಾಗುವುದು. ಈ ಹಿನ್ನೆಲೆಯೊಂದಿಗೆ ಹೊಸದುರ್ಗ ತಾಲೂಕು ಪರಿಸರದ ಸ್ಮಾರಕ ಶಿಲ್ಪಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಇಲ್ಲಿನ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲು, ಮಾಸ್ತಿಗಲ್ಲು ಹಾಗೂ ನಿಷದಿಗಲ್ಲುಗಳನ್ನು ಕಾಣಬಹುದಾಗಿದೆ. ವೀರಗಲ್ಲುಗಳಲ್ಲಿ ತುರುಗೋಳ್ ಸ್ಮಾರಕ ಶಿಲ್ಪಗಳು ಅಧಿಕವಾಗಿದ್ದು ಅವು ಹೊಯ್ಸಳ ಕಾಲದಲ್ಲಿ ಬಹುವಾಗಿ ಕಾಣಬರುತ್ತವೆ. ವಿಶೇಷವಾಗಿ ಮಳಲಿ, ಗುಡ್ಡದ ನೇರಲಕೆರೆ, ಕಡ್ಲೇಕಂಸಾಗರ, ಇಟ್ಟಿಗೆಹಳ್ಳಿ ಈ ಭಾಗದಲ್ಲಿ ಹೆಚ್ಚು ತುರುಗೋಳ್ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಹೊಯ್ಸಳ ಕಾಲದ ಈ ತುರುಗೋಳ್ ಸ್ಮಾರಕ ಶಿಲ್ಪಗಳು ದೊರೆತಿರುವ ಗ್ರಾಮಗಳಲ್ಲಿ ಪಶುಸಂಪತ್ತು ಅಧಿಕವಾಗಿತ್ತು ಎಂದು ಭಾವಿಸಬಹುದು. ಬೆಟ್ಟ-ಗುಡ್ಡ, ಕಣಿವೆ ಪರಿಸರದಲ್ಲಿರುವ ಈ ಭಾಗದಲ್ಲಿ ಜನಾಂಗೀಯವಾಗಿ ಗೊಲ್ಲ, ಕುರುಬ ಹಾಗೂ ನಾಯಕ ಜನಾಂಗಗಳ ಸಮುದಾಯಗಳು ಈಗಲೂ ಅಧಿಕವಾಗಿ ರುವುದನ್ನು ಗಮನಿಸಿದರೆ ಪ್ರಾಚೀನ ಕಾಲದಿಂದಲೂ ಪಶುಪಾಲನೆ ಸಮುದಾಯಗಳ ಗ್ರಾಮ ಸಂಸ್ಕೃತಿಯಲ್ಲಿನ ವೀರತನ ಹಾಗೂ ಅದಕ್ಕೆ ಅಲ್ಲಿ ಸ್ಥಳೀಯ ಅಧಿಕಾರಿಯಿಂದ ಹಿಡಿದು ರಾಜನವರೆಗೂ ನೀಡಿದ್ದ ಪ್ರೋತ್ಸಾಹ ಮನದಟ್ಟಾಗುವುದು. ಅದೇ ರೀತಿ ಕ್ರಿ.ಶ. ೧೩೦೨ರಲ್ಲಿ ಹೊಯ್ಸಳ ದೊರೆಯು ಆಳುವ ಸಂದರ್ಭದಲ್ಲಿ ಸೇವುಣರಾಜ ಶಂಕರ ದೇವನ ಸೇನೆ ಹೊಯ್ಸಳನಾಡನ್ನು ಮುತ್ತಿದಾಗ ಈ ಪರಿಸರದ ಬಸಪ್ಪ ಎಂಬುವನು ಯುದ್ಧದಲ್ಲಿ ಹೋರಾಡಿ ಮರಣ ಹೊಂದಿದ ಒಂದು ಅಪರೂಪದ ಸ್ಮಾರಕ ಶಿಲ್ಪ ಜಾನಕಲ್ಲು ಗ್ರಾಮದ ಶಂಕರ ಲಿಂಗೇಶ್ವರ ದೇವಾಲಯದ ಬಳಿ ಇದೆ. ಇದರಲ್ಲಿ ಕುದುರೆ ಕಾಳಗ, ಯುದ್ಧದಲ್ಲಿ ಬಳಸಿದ ಬಿಲ್ಲು, ಬಾಣ, ಕತ್ತಿ, ಈಟಿ, ಕುದುರೆಯ ರಕ್ಷಾಕವಚ ಇವುಗಳು ಸೈನ್ಯ ವ್ಯವಸ್ಥೆ ಬಲಿಷ್ಠ ತಮ್ಮನ್ನು ಕುರಿತು ಹೇಳುತ್ತವೆ. ಅದರಂತೆ ಕಲ್ಕರೆಯ ಸ್ಮಾರಕ ಶಿಲ್ಪ ಕೋಟೆ ಕಾಳಗದ ಕುರಿತು

ಅನೇಕ ಅಂಶಗಳನ್ನು ಅರಹುತ್ತದೆ. ಒಟ್ಟಾರೆ ಚಾಲುಕ್ಯ ಹಾಗೂ ಹೊಯ್ಸಳ ಕಾಲದಲ್ಲಿ ಇಲ್ಲಿ ನಡೆದ ಯುದ್ಧಗಳು, ಸೈನ್ಯದ ವ್ಯವಸ್ಥೆಯ ಪರಿಣಾಮಕಾರಿ ಬಳಕೆ ತಿಳಿಯುತ್ತದೆ.

ಆನಿವಾಳ, ಕೈನಡು, ಸಣ್ಣಕಿಟ್ಟದಹಳ್ಳಿ ಹಾಗೂ ಬನಸೀಹಳ್ಳಿ ಗ್ರಾಮಗಳಲ್ಲಿ ವ್ಯಕ್ತಿ ಹಾಗೂ ಪ್ರಾಣಿಗಳ ನಡುವಿನ ಹೋರಾಟದ ವೀರಗಲ್ಲುಗಳು ದೊರೆತಿವೆ. ಆನಿವಾಳದ ಹುಲಿಕುಂಟೆ, ಸಣ್ಣ ಕಿಟ್ಟದಹಳ್ಳಿ ಸಿಂಹ ಬೇಟೆ ವೀರಗಲ್ಲು ಬಹು ಅಪರೂಪದ ಸ್ಮಾರಕ ಶಿಲ್ಪಗಳು, ಅರೆಮಲೆನಾಡು ಪರಿಸರವಾದ್ದರಿಂದ ಪ್ರಾಣಿಗಳ ರಕ್ಷಣೆ, ಶೌರ್ಯ ಪ್ರದರ್ಶನಕ್ಕಾಗಿ ಪ್ರಾಣಿಗಳೊಡನೆ ಹೋರಾಟ ನಡೆದಿದೆ.

ಮಾಸ್ತಿಗಲ್ಲುಗಳು ಪತಿಯ ಮರಣದ ತರುವಾಯ ಸ್ವ ಇಚ್ಛೆಯಿಂದ ನಿಧನ ಹೊಂದುವ ಪತ್ನಿಯ ಸ್ಮರಣಾರ್ಥ ಸ್ಥಾಪಿಸಿದ ಸ್ಮಾರಕಗಳಿವೆ. ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಮಾಸ್ತಿ ಶಿಲ್ಪಗಳೇ ಅಧಿಕ. ಇದು ಈ ಪರಿಸರದ ಮಧ್ಯಕಾಲಿನ ಸಾಮಾಜಿಕ ವ್ಯವಸ್ಥೆಯ ಸ್ತ್ರೀಯರ ಸ್ಥಾನಮಾನದ ಬಗ್ಗೆ ತಿಳಿಸಿಕೊಡುತ್ತದೆ. ಕ್ರಿ.ಶ. ೧೨ ರಿಂದ ೧೭ನೇ ಶತಮಾನದವರೆಗೂ ಸ್ತ್ರೀಯರು ಸತಿಯಾಗಿರುವುದು ಗಮನಾರ್ಹ. ವಿಜಯನಗರ ಕಾಲದ ಆಡಳಿತ ವರ್ಗದ ಅಧಿಕಾರಿಗಳು, ವಿಜಯನಗರೋತ್ತರ ಕಾಲದ ಪಾಳೆಯಗಾರರ ನಾಗತಿಯರು ಹೆಚ್ಚು ಸತಿಯರ ಉದಾಹರಣೆಗಳು ಶಿಲ್ಪಗಳ ರಚನೆ. ದೊರೆತ ಸ್ಥಳ, ಅವುಗಳಲ್ಲಿ ಸ್ತ್ರೀಯ ವೇಶ ಭೂಷಣದಿಂದ ಗುರುತಿಸಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮಾಸ್ತಿ ಶಿಲ್ಪಗಳು ಇಲ್ಲಿನ ಗತ ಸ್ತ್ರೀಯರ ಪತಿಭಕ್ತಿ, ಪಾವಿತ್ರ್ಯತೆಯ ಸಂಕೇತ ಹಾಗೂ ಸೂಚಕಗಳಾಗಿ ಉಳಿದುಬಂದಿವೆ.

ಜೈನರು ಆದರ್ಶವಾಗಿ ಧಾರ್ಮಿಕ ವಿಧಿ ವಿಧಾನಗಳಿಗನುಗುಣವಾಗಿ ಕೈಗೊಂಡ ಸಲ್ಲೇಖನ ವ್ರತದಿಂದ ಸಮಾಧಿ ಮರಣ ಹೊಂದಿದವರ ಸ್ಮರಣಾರ್ಥ ನಿರ್ಮಿಸಿದ ಸ್ಮಾರಕಗಳೇ ನಿಷದಿಗಲ್ಲುಗಳು. ಈ ಪರಿಸರದಲ್ಲಿ ಹೊಯ್ಸಳ ಕಾಲದ ಎರಡು ಜಿನ ಕೇಂದ್ರಗಳೆಂದರೆ ಜಾನಕಲ್ಲು ಹಾಗೂ ಹೆಗ್ಗೆರೆ. ಇಲ್ಲಿ ಕೈಗೊಂಡ ಸಲ್ಲೇಖನ ವಿಧಿಯಿಂದ ಸಮಾಧಿ ಮರಣ ಹೊಂದಿದವರ ಸ್ಮರಣಾರ್ಥ ನಿಷದಿಗಲ್ಲುಗಳನ್ನು ಸ್ಥಾಪಿಸಿದ್ದಾರೆ. ಅವುಗಳು ಹೆಗ್ಗೆರೆಯಲ್ಲಿ ಮಾತ್ರ ಉಳಿದು ಬಂದಿದ್ದು ೧೨-೧೩ನೇ ಶತಮಾನದ ಸಲ್ಲೇಖನ ವ್ರತ ಪರಂಪರೆಯನ್ನು ಸಾರುತ್ತವೆ. ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದ ಸ್ಮಾರಕ ಶಿಲ್ಪಗಳು ಗತಮಾನವನ ವಿಭಿನ್ನ ಸಾಂಸ್ಕೃತಿಕ ಆಯಾಮಗಳನ್ನು ಕುರಿತು ಸಮಗ್ರ ಚಿತ್ರಣವನ್ನು ನೀಡುತ್ತವೆ.

ಟಿಪ್ಪಣಿಗಳು

೧. **ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ**, ೨೦೦೯, ಪು. ೯೪೧.

೨. ಗೋಪಾಲ್ ಬಾ.ರಾ., ೨೦೦೩, **ಕರ್ನಾಟಕದ ಕಲೆಗಳು**, ವಾಸ್ತು, ಸಂಪುಟ-೪, ಪು. ೧.

೩. **ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ**, ಪೂರ್ವೋಕ್ತ, ಪು. ೯೪೧.

೪. ಅದೇ.

೫. ಅರ್ಪಣ.ಕೂ.ಸ., ೧೯೯೯, **ದೇವಾಲಯ ವಸ್ತುಶಿಲ್ಪ ಪರಿಚಯ**, ಪು. ೧.

೬. ಗೋಪಾಲ್ ಬಾ.ರಾ., ೨೦೦೩, **ಪೂರ್ವೋಕ್ತ**, ಪು. ೧-೨.

೭. ಪ್ರಭಾಕರ್ ಎಂ.ಎನ್., ೨೦೦೦, **ದೇವಾಲಯ ವಾಸ್ತುಚಂದ್ರಿಕೆ**, ಪು. ೧-೨.

೮. ಅದೇ, ಪು. ೨.

೯. ದತ್ತಾತ್ರೇಯ ಜಿ. ಕುಲಕರ್ಣಿ., ೨೦೦೬, **ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು** (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಪು. ೬೫.

೧೦. ಅದೇ, ಪು. ೬೫-೬೬

೧೧. ಸುರೇಶ ಕೆ.ಎಂ. ಮತ್ತು ಇತರರು., ೨೦೦೧, **ಕರ್ನಾಟಕ ದೇವಾಲಯ ಕೋಶ: ಕೊಪ್ಪಳ ಜಿಲ್ಲೆ**, ಪು. XIII.

೧೨. ಅದೇ, ಪು. XIV-XV.

೧೩. ಜ್ಞಾನಾನಂದ.ಜಿ., ೨೦೦೨, **ಶಿಲ್ಪಾದರ್ಶ**, ಸಂಪುಟ-೨, ಪು. ೭.

೧೪. ಸುರೇಶ ಕೆ.ಎಂ. ಮತ್ತು ಇತರರು., ೨೦೦೧, **ಪೂರ್ವೋಕ್ತ**, ಪು. XV.

೧೫. ಜ್ಞಾನಾನಂದ ಜಿ., ೨೦೦೨, **ಪೂರ್ವೋಕ್ತ**, ಪು. ೧೬.

೧೬. ಜ್ಞಾನಾನಂದ ಜಿ., ೨೦೦೨, **ಪೂರ್ವೋಕ್ತ**, ಪು. ೨೦-೨೧.

೧೭. ಅದೇ, ಪು. ೨೩.

೧೮. ಅದೇ, ಪು. ೩೯.

೧೯. ಅದೇ, ಪು. ೮೯.

೨೦. ಅದೇ, ಪು. ೮೮-೮೯.

೨೧. ಸುರೇಶ ಕೆ.ಎಂ ಮತ್ತು ಇತರರು, ೨೦೦೧, **ಪೂರ್ವೋಕ್ತ**, ಪು. XV-XVI.

೨೨. ಜ್ಞಾನಾನಂದ ಜಿ., ೨೦೦೨, **ಪೂರ್ವೋಕ್ತ**, ಪು. ೯೮.

೨೩. ಸುರೇಶ ಕೆ.ಎಂ. ಮತ್ತು ಇತರರು, ೨೦೦೧, **ಪೂರ್ವೋಕ್ತ**, ಪು. XV..

೨೪. ರಾಜಶೇಖರ್ ಎಸ್., ೧೯೮೮, **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ಪು.೮

೨೫. ಅದೇ, ಪು. ೧೫-೧೭.

೨೬. ತಿಪ್ಪೇರುದ್ರಸ್ವಾಮಿ ಎಚ್., ೨೦೦೭, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು. ೫೩೫.

೨೭. ರಾಜಶೇಖರ್ ಎಸ್., ೧೯೮೮, **ಪೂರ್ವೋಕ್ತ**, ಪು. ೧೨-೧೩.

೨೮. ಸುರೇಶ್ ಕೆ.ಎಂ ಮತ್ತು ಇತರರು, ೨೦೦೧, **ಪೂರ್ವೋಕ್ತ**, ಪು. ೧೭.

೨೯. ಶಿಲಾಕಾಂತ ಪತ್ತಾರ., ೨೦೦೬, **ಬಾದಾಮಿ**, ಪು. ೨೭

೩೦. ಅದೇ, ಪು. IV.

೩೧. ರಾಜಶೇಖರ್ ಎಸ್., ೧೯೮೮, **ಪೂರ್ವೋಕ್ತ**, ಪು. ೯೩.

೩೨. ರಾಜಶೇಖರ್ ಎಸ್., ೧೯೮೮, **ಪೂರ್ವೋಕ್ತ**, ಪು. ೧೨೫-೧೨೯.

೩೩. ರಾಜಶೇಖರ್ ಎಸ್., ೧೯೮೮, **ಪೂರ್ವೋಕ್ತ**, ಪು. ೧೩೨.

೩೪. ಅದೇ, ಪು. ೧೩೩.

೩೫. ಅದೇ, ಪು. ೧೩೪.

೩೬. ರಾಜಶೇಖರ್ ಎಸ್., ೧೯೮೮, **ಪೂರ್ವೋಕ್ತ,** ಪು. ೧೯೭.

೩೭. ಅದೇ, ಪು. ೧೭೪.

೩೮. ಜ್ಞಾನಾನಂದ ಜಿ., ೨೦೦೨, **ಪೂರ್ವೋಕ್ತ,** ಪು. ೧೯೮.

೩೯. ವಸಂತಲಕ್ಷ್ಮಿ ಕೆ., ೨೦೦೫, **ಚಿತ್ರದುರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ದೇವಾಲಯಗಳು,** ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್ (ಸಂ), ಪು. ೧೮೩.

೪೦. ದಯಾನಂದ ಪಾಟೀಲ್ ವಿ., ೨೦೦೫, **ಚಿತ್ರದುರ್ಗ ಜಿಲ್ಲೆಯ ಹೊಯ್ಸಳ ವಾಸ್ತುಶಿಲ್ಪ,** ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್ (ಸಂ), ಪು. ೧೯೨.

೪೧. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಹೊಸದುರ್ಗದ ಸುತ್ತ,** ಪು. ೪೨.

೪೨. ಹಿರೇಮಠ ಆರ್.ಸಿ., ೧೯೯೭, **ಮಹಾಯಾತ್ರೆ,** ಪು. ೨೩.

೪೩. ಅದೇ, ಪು. ೨೩-೨೪.

೪೪. ಕೃಷ್ಣರಾವ್ ಎಂ.ವಿ, ಕೇಶವ ಭಟ್ಟ ಎಂ., ೧೯೭೦, **ಕರ್ನಾಟಕದ ಇತಿಹಾಸ ದರ್ಶನ,** ಪು. ೭೩೦.

೪೫. **ಎಪಿಗ್ರಾಫಿಯಾ ಕರ್ನಾಟಕ.,** ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೨೧.

೪೬. ಬಾಗೂರು ಆರ್. ನಾಗರಾಜಪ್ಪ., ೧೯೮೪, **ಪೂರ್ವೋಕ್ತ,** ಪು. ೩೨.

೪೭. ವಸಂತಲಕ್ಷ್ಮಿ ಕೆ., ೨೦೦೫, **ಪೂರ್ವೋಕ್ತ,** ಪು. ೧೮೮.

೪೮. **ಎಪಿಗ್ರಾಫಿಯಾ ಕರ್ನಾಟಕ.,** ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೨೧.

೪೯. ಅದೇ, **ಹೊಳಲ್ಕೆರೆ,** ಸಂಖ್ಯೆ-೧೩೬.

೫೦. Sheshadri M., 1947-1956, **Annual Reports of the Mysore Acehaeological Department,** P.34.

ಹೊನ್ನೇನಹಳ್ಳಿ ಜನ ಪ್ರತಿವರ್ಷ ಕಾರ್ತಿಕದ ಕಡೇ ಶನಿವಾರದಂದು ಎಲ್ಲಾ ಮನೆಯವರೂ ಸಮೀಪದ ಗುಡ್ಡಕ್ಕೆ ಹೋಗಿ ಅಲ್ಲಿನ ರಂಗನಾಥ ದೇವರಿಗೆ ಪೂಜೆ ಮಾಡಿ 'ದ್ಯಾರಮಂಡಿ ಪರೇವು' ಆಚರಣೆ ಮಾಡುತ್ತಾರೆ. ಊರಿಗೆ ಒಳ್ಳೆಯದಾಗಲೆಂದು ಸುತ್ತಲೂ ಸುಭಿಕ್ಷವಾದ ಮಳೆ ಸುರಿದು ಒಳ್ಳೇ ಬೆಳೆ ಆಗಲೆಂದು ಈ ಆಚರಣೆಯನ್ನು ಹಿಂದಿನ ಕಾಲದಿಂದಲೂ ನಡೆಸುತ್ತಾ ಬಂದಿದ್ದಾರೆ. ಇದನ್ನೇ 'ದ್ಯಾರಮಂಡಿ ಪರೇವು' ಎನ್ನಲಾಗುತ್ತದೆ. ದ್ಯಾರಮಂಡಿ ಎಂದರೆ ದೇವರಮರಡಿ ಎಂದು ಅರ್ಥ. ದೇವರ ಬಂಡೆ ಅಥವಾ ಬಂಡೆಯಲ್ಲಿರುವ ದೇವರ ಆರಾಧನೆಯು ಪರಂಪರೆಯಾಗಿ ಉಳಿದುಬಂದಿದೆ.

ಕಂಚೀಪುರದ ವರದರಾಜ ದೇವರ ಅಂಬಿನೋತ್ಸವವು ವಿಜಯದಶಮಿಯ ಮುನ್ನ ನಡೆಯುತ್ತದೆ. ಅದರ ಹಿಂದಿನ ರಾತ್ರಿ ಹದಿನಾರು ಸೇರು ಅಕ್ಕಿಯ 'ಬುತ್ತಿಬಾನ' ವನ್ನು ತಯಾರಿಸಿ ಸಿದ್ಧರ ಬೆಟ್ಟದ ಲಿಂಗಗಳಿಗೆ ಎಡೆ ಹಿಡಿಯುವ ಆಚರಣೆ ಇದೆ. ವರದರಾಜ ಸ್ವಾಮಿಯು ಕಂಚೀಬೆಟ್ಟಕ್ಕೆ ಬಂದು ನೆಲೆಸುವ ಮುನ್ನ ಉತ್ತರೆ ಬೆಟ್ಟ/ಸಿದ್ಧರ ಬೆಟ್ಟದ ಸ್ಥಳೀಯ ದೈವವಾದ ಸಿದ್ದಪ್ಪನಿಗೆ 'ನನಗೆ ನೆಲೆಸಲು ಜಾಗ ಕೊಟ್ಟರೆ ನಾನು ನಿಮಗೆ ಹದಿನಾರು ಸೇರು ಬುತ್ತಿಬಾನ ಮಾಡಿಸುವೆ' ಎಂದು ಮಾತುಕೊಟ್ಟಿದ್ದಿತು. ಅದನ್ನು ಹೀಡೇರಿಸುವುದಕ್ಕಾಗಿಯೇ ಕಂಚೀವರದನು ತನ್ನ ಅಂಬಿನ ದಿನ ಹದಿನಾರು ಸೇರು ಅಕ್ಕಿಯ ಬುತ್ತಿಬಾನವನ್ನು ಸಿದ್ಧಪ್ಪ ದೇವರಿಗೆ ಎಡೆ ಹಿಡಿಯುವನು ಎಂಬ ನಂಬಿಕೆ ಇದೆ. ಈ ಬುತ್ತಿಬಾನದ ಎಡೆಯನ್ನು ಅತ್ಯಂತ ಶ್ರದ್ಧಾ, ಭಕ್ತಿ ಮತ್ತು ಮಡಿಯಿಂದ ತಯಾರಿಸುವರು. ಅಕ್ಕಿ, ಹೆಸರು, ಬೇಳೆ, ಮೊಸರು, ಹಾಲು, ತುಪ್ಪ, ಈರುಳ್ಳಿ, ಬೆಳ್ಳುಳ್ಳಿ ಮುಂತಾದ ಪದಾರ್ಥಗಳನ್ನು ಹರಕೆ ಹೊತ್ತ ಭಕ್ತರು ಬುತ್ತಿಬಾನ ಮಾಡುವುದಕ್ಕಾಗಿ ತಂದು ಒಪ್ಪಿಸುತ್ತಾರೆ. ಈ ಬುತ್ತಿಯನ್ನು ನಿರುವುಗಲ್ಲು, ಓಟೀಕೆರೆ, ಹುಳಿಯೂರು ಹಾಗೂ ಕೆಂಕೆರೆ ಗ್ರಾಮಸ್ಥರು ತಯಾರಿಸಿ ಬಿದಿರಿನ ಬುಟ್ಟಿಯಲ್ಲಿ ತುಂಬಿ ಉತ್ತರೇಗುಡ್ಡಕ್ಕೆ ಭಕ್ತಿಯಿಂದ ಹೊತ್ತುತಂದು ಸಿದ್ಧರ ಲಿಂಗಗಳಿಗೆ ಮೂರು ಮಿದಿಕೆ ಎಡೆ ನೈವೇದ್ಯ ಮಾಡಿ ಅಂಬು ನಡೆದ ಮೇಲೆ ಬುತ್ತಿಬಾನದ ಎಡೆಯನ್ನು ಸುತ್ತಲೂ ಮೂವತ್ತೂರು ಹಳ್ಳಿಗಳ ಭಕ್ತರಿಗೂ ಹಂಚುತ್ತಾರೆ.

ವರದರಾಜ ದೇವರು ಹಿಂದಿನ ಕಾಲದಲ್ಲಿ ಕಂಚಿ ಕಾಳಹಸ್ತಿ ಕಡೆಯಿಂದ ಈ ನಾಡಿಗೆ ಬರುವಾಗ ನಾನಾ ಗುಡ್ಡಗಾಡಿನ ಸ್ಥಳಗಳಲ್ಲಿ ನೆಲೆಸಲೆತ್ನಿಸಿ ಅಲೆದಾಡಿ ಸುಸ್ತಾಗಿ ಸೊರಗಿ, ಅರಳಿಹಾಳಿನ ಗುಡ್ಡದ ಹತ್ತಿರ ಏರಿಯ ಮೇಲೆ ನಿತ್ರಾಣಾವಸ್ಥೆಯಲ್ಲಿ ಬಿದ್ದಿತೆಂದೂ ಇದನ್ನು ಕಂಡವರು ತಕ್ಷಣದಲ್ಲಿ ರಾಗಿಯಂಬಲಿ ಮಾಡಿ ತಂದು ಕುಡಿಸಿದರೆಂದೂ ಜಾನಪದ ಕತೆ ತಿಳಿಸುತ್ತದೆ. ಮೇಲ್ಕಂಡ ಘಟನೆಯ ನಿಮಿತ್ತ ಇಂದಿಗೂ ದೇವರ ತೇರಿನ ಮುನ್ನಾದಿನ ಈ 'ಸೊರಗಂಬಲಿ ಸೇವೆ'ಯ ಆಚರಣೆ ಮಾಡುವರು. ಕಿಟ್ಟದಾಳು ಗ್ರಾಮದ ಹಳ್ಳೀಕಾರ್ ಒಕ್ಕಲಿಗ ಭಕ್ತರು ತಮ್ಮ ಮನೆಯಲ್ಲಿ ಮಡಿಯಿಂದ ರಾಗಿಹಿಟ್ಟು ಮಜ್ಜಿಗೆ ಸೇರಿಸಿ ತಯಾರಿಸಿದ ಅಂಬಲಿಯನ್ನು ಶುಭ್ರವಾದ ಮೂರುಗಡಿಗೆಗಳಲ್ಲಿ ತುಂಬಿ ಅಡ್ಡೆಯಲ್ಲಿ ಹೊತ್ತು ತರುತ್ತಾರೆ. ಕೆರೆ ಏರಿಯ ಮೇಲಿರುವ ಮೂರು ಗಾಡಿಗುಂಡಿಗಳಲ್ಲಿ ತುಂಬಿಸಿ ದೇವರಿಗೆ ಪೂಜೆ ಮಾಡಿ ನೈವೇದ್ಯ ಮಾಡುವರು. ಅಂದು ನಾಯಕರು, ಬೆಸ್ತರು ಸರ್ಪಒಕ್ಕಲಿಗರು ಮತ್ತು ಹಳ್ಳಿಕಾರ್ ಜನಾಂಗದವರು ತಮ್ಮ ಮನೆಗಳಲ್ಲಿ ಅಂಬಲಿ, ರಾಗಿಮುದ್ದೆ ಹುಳಿಸೊಪ್ಪುಸಾರು ಮಾಡಿರುತ್ತಾರೆ. ದೇವರೇ ಅಂಬಲಿ ಕುಡಿಯುವಾಗ ಭಕ್ತರು ಹೋಳಿಗೆ ಉಣ್ಣಲು ಸಾಧ್ಯವೇ? ಈ ರೀತಿಯ ನಂಬಿಕೆ–ಆಚರಣೆ ಇಲ್ಲಿನ ಜನರಲ್ಲಿದೆ.

ಕಂಚೀವರದರಾಜಸ್ವಾಮಿಯ ರಥೋತ್ಸವ ಹಾಗೂ ಅಂಬಿನೋತ್ಸವದಂದು ನಡೆಯುವ ಬಹುಮುಖ್ಯ ಆಚರಣೆಗಳಲ್ಲಿ 'ಹೊನ್ನಸೂರ' ಆಚರಣೆಯು ಒಂದು. ಕಂಚೀ ದೇವರು ತನಗೆ ಭಕ್ತರು ನೀಡುವ ಕಾಣಿಕೆಯ ಅಪಾರ ಹಣವನ್ನು ಭಕ್ತರಿಗೆ 'ಸೂರೆ' ಬಿಡುವ ಸಂಗತಿ ಅಪರೂಪ ಮತ್ತು ಆಶ್ಚರ್ಯ ತರುವಂತಹದ್ದು. ಈ ದೇವರು ಭಕ್ತರಿಂದ ಹಣ ಮತ್ತು ಒಡವೆಗಳ ಕಾಣಿಕೆಯನ್ನು ಸ್ವೀಕರಿಸುವುದಿಲ್ಲ. ಹರಕೆಹೊತ್ತ ಭಕ್ತರು ಸಹಸ್ರಾರು ರೂಪಾಯಿಗಳ ಚಿಲ್ಲರೆ ಹಣವನ್ನು ದೇವರ ಉತ್ಸವಮೂರ್ತಿಯ ಮೇಲೆ ಭಕ್ತಿಪೂರ್ವಕವಾಗಿ ಎರಚುವರು. ಭಕ್ತರ ಮನೆಗೆ, ಊರಿನ ಕಾರ್ಯಕ್ಕೆ, ಉತ್ಸವಕ್ಕೆ, ತೇರಿಗೆ, ಅಂಬಿನೋತ್ಸವ ಭಕ್ತರು ಈ ರೀತಿ ಹಣವನ್ನು ದೇವರ ಮೇಲಕ್ಕೆ ಸುರಿಸುವರು. ಹೀಗೆ ಎರಚಲ್ಪಟ್ಟ ಹಣವು ನೆಲದ ಮೇಲೆ ಸೂರೆಯಾಗುತ್ತಿದ್ದಂತೆಯೆ ಬಡಬಗ್ಗರು ಮಕ್ಕಳು ಮುಂತಾದವರು ಆ ಹಣವನ್ನು ಪ್ರಸಾದವೆಂಬಂತೆ ಆರಿಸಿಕೊಂಡು ಧನ್ಯರಾಗುತ್ತಾರೆ. ಈ ಸಂದರ್ಭದಲ್ಲಿ ೫೦,೦೦೦ಕ್ಕೂ ಹೆಚ್ಚು ಹಣ ಸೂರೆಯಾಗುತ್ತದೆಂಬ ಅಂದಾಜಿದೆ. ಈ ತೆರನಾದ ಆಚರಣೆ ನಿಜಕ್ಕೂ ವಿಶಿಷ್ಟವಾದುದು.

ಹೊಸದುರ್ಗ ತಾಲೂಕಿನ ಹಲವೆಡೆ ಸಿಡಿ ಆಚರಣೆ ವಿಶೇಷವಾದ ಪರಂಪರೆಯಂತೆ ಕಂಡುಬರುತ್ತದೆ. ಸಿಡಿಯು ಕರ್ನಾಟಕದಾದ್ಯಂತ ಕಂಡುಬರುವ ಭಯಾನಕ ಆಚರಣೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ನಿರ್ದಿಷ್ಟ ದೈವಕ್ಕೆ ಹೊತ್ತ ಹರಕೆ ಸಲ್ಲಿಕೆಯ ಜನಪದ ಉಗ್ರ ಆಚರಣೆಗಳಲ್ಲಿ ಒಂದು.[೨೧] ಈ ಆಚರಣೆ ಶಾಕ್ತ ಪಂಥದ ಪ್ರಭಾವದಿಂದ ರೂಢಿಗೆ ಬಂದಂತೆ ತೋರುತ್ತದೆ. ಸಿಡಿ ಆಡುವುದು ನಿರ್ದಿಷ್ಟ ದೇವತೆಯ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ. ಈ ಸಂಪ್ರದಾಯವಿರುವ ಎಲ್ಲಾ ದೇವತೆಗಳೂ ಮಾರಿ, ದುರ್ಗಿ, ಊರಮ್ಮಗಳೇ ಆಗಿರುವುದು ಕುತೂಹಲದ ಸಂಗತಿ. ಸಿಡಿಯಲ್ಲಿ ಬೆನ್ನು ಸಿಡಿ, ಬಟ್ಟೆಸಿಡಿ ಎಂಬ ಎರಡು ವಿಧಗಳಿವೆ.[೨೨] ಸಿಡಿಯಾಡುವುದರ ಜೊತೆಗೆ ಹಿಂದೆ ಸಿಡಿದೆಲೆ ಕೂಡುವ ಸಂಪ್ರದಾಯವೂ

ಕರ್ನಾಟಕದಲ್ಲಿ ರೂಡಿಯಲ್ಲಿದ್ದುದಕ್ಕೆ ಶಾಸನಾಧಾರವಿದೆ. ಸಿಡಿದೆಲೆಯಾಗುವ ಹರಕೆ ಹೊತ್ತ ಜನ ಸಿಡಿಕಂಬಕ್ಕೆ ಕಟ್ಟಿರುತ್ತಿದ್ದ ಹಸಿಬಿದಿರಿನ ತುದಿಯನ್ನು ಒಗ್ಗಿಸಿ ತಮ್ಮ ತಲೆಯನ್ನು ಅದಕ್ಕೆ ಕಟ್ಟಿಸಿಕೊಂಡು ಕತ್ತನ್ನು ಕತ್ತರಿಸುವಂತೆ ಮಾಡಿ ತಮ್ಮ ವೀರಭಕ್ತಿ, ಸ್ವಾಮಿನಿಷ್ಠೆಯನ್ನು ಮೆರೆಯುತ್ತಿದ್ದರು.[೨೩] ಅಂಥವರನ್ನು ಕುರಿತು ಶಾಸನಗಳು ಪ್ರಶಂಸೆ ಮಾಡಿವೆ. ಸಿಡಿ ಆಚರಣೆಯ ಪ್ರಮುಖ ಸ್ಥಳ ಬಂಗಾಳದಿಂದ ಕರ್ನಾಟಕಕ್ಕೆ ವಿಸ್ತಾರಗೊಂಡಿದೆ. ಈ ಆಚರಣೆಯು ಜಗತ್ತಿನ ಹಲವಾರು ಬುಡಕಟ್ಟುಗಳಲ್ಲಿ ವಿವಿಧ ರೀತಿಯಲ್ಲಿ ಆಚರಿಸಲಾಗುತ್ತಿದೆ. ಸಿಡಿ ಆಚರಣೆಯ ಮೂಲ ಉದ್ದೇಶ ಫಲವತ್ತತೆಯ ಸಂಕೇತ. ಮಗು ಜನಿಸಿದಾಗ ಭೂಮಿಗೆ ರಕ್ತ ಬೀಳುವುದು ಅದನ್ನು ಸಿಡಿಯಲ್ಲಿ ಸಂಕೇತಿಕವಾಗಿ ತೋರಿಸಲು ಮನುಷ್ಯನ ಬೆನ್ನಿಗೆ ಕೊಂಡಿ ಚುಚ್ಚಿ ಕಂಬ ತಿರುಗಿಸಿದಾಗ ಭೂಮಿಯ ಮೇಲೆ ರಕ್ತ ವೃತ್ತಾಕಾರವಾಗಿ ಚೆಲ್ಲುವುದು.[೨೪] ಹೀಗೆ ಸಿಡಿ ಆಚರಣೆ ಶಕ್ತಿ ಪರಂಪರೆಯ ಪ್ರತಿಬಿಂಬವಾಗಿ ಬೆಳೆದುಬಂದಿತು. ಹೊಸದುರ್ಗ ತಾಲೂಕಿನಲ್ಲಿ ಕೊಂಡಿಸಿಡಿ, ತಿರುಗಣೆಸಿಡಿ ಹಾಗೂ ಬಂಡಿಸಿಡಿ ಈ ಮೂರು ರೀತಿಯ ಸಿಡಿ ಸೇವೆಗಳು ಜರುಗುತ್ತವೆ. ಚಿಕ್ಕಬ್ಯಾಲದಕೆರೆ ಕರಿಯಮ್ಮ ದೇವಿಯ ಜಾತ್ರೆಯಲ್ಲಿ, ಕಬ್ಬಳದ ಕತ್ತಿಕಲ್ಲಮ್ಮ ಜಾತ್ರೆಯಲ್ಲಿ ಸಿಡಿ ಆಚರಣೆಯು 'ಕೊಂಡಿಸಿಡಿ' ಆಗಿದೆ. ಹೊಸದುರ್ಗದ ದುರ್ಗಮ್ಮ ದೇವಿಗೆ 'ತಿರುಗಣೆಸಿಡಿ', ಹೆಗ್ಗೆರೆ ಕೆಂಪಮ್ಮಗೆ 'ಬಂಡಿಸಿಡಿ' ಆಗುತ್ತದೆ. ಅದೇ ರೀತಿ ಬನಸೀಹಳ್ಳಿ, ಬೀಸನಹಳ್ಳಿ, ದೇವಿಗೆರೆ, ಬೇವಿನಹಳ್ಳಿ ಹಾಗೂ ಅರಳಿಹಳ್ಳಿಗಳಲ್ಲಿ ಸಿಡಿ ಆಚರಣೆ ನಡೆಯುವುದಿದೆ.

ಬನಸೀಹಳ್ಳಿಯ ಏಕನಾಥೇಶ್ವರಿ ದೇವಿಯ ಸಿಡಿ ಆಚರಣೆಯು ಈ ಭಾಗದ ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಒಂದು. ಈ ದೇವತೆಯನ್ನು ಬನಸೀಹಳ್ಳೆಮ್ಮ ಎಂದು ಕರೆಯುವರು. ಪ್ರತಿ ವರ್ಷ ಜನವರಿ ತಿಂಗಳಲ್ಲಿ ಹತ್ತೊಂಬತ್ತು ದಿನಗಳು ಬನಸೀಹಳಮ್ಮ ಜಾತ್ರೆ ನಡೆಯುತ್ತದೆ. ಜಾತ್ರೆಯಾದ ನಂತರ ಶನಿವಾರ ಸಂಜೆ ಅತ್ಯಾಕರ್ಷಕವಾದ ಸಿಡಿ ಆಚರಣೆ ನಡೆಯುತ್ತದೆ. ಈ ದೇವಿಗೆ ಹರಕೆ ಹೊತ್ತ ಭಕ್ತರು 'ಸಿಡಿಸೇವೆ' ಸಲ್ಲಿಸುತ್ತಾರೆ. ವ್ಯಕ್ತಿಯನ್ನು ಸಿಡಿಕಂಬಕ್ಕೆ ಸೇರಿಸಿ ಹಗ್ಗದಿಂದ ಕಟ್ಟಿ ತಿರುಗಣೆಯ ಮೇಲೆ ಐದು ಸುತ್ತು ತಿರುಗಿಸುತ್ತಾರೆ. ಸಿಡಿ ಆಡುವ ವ್ಯಕ್ತಿಗೆ 'ಬಾಯಿಬೀಗ' ಹಾಕಿರುತ್ತಾರೆ. ಈ ಆಚರಣೆ ವೀಕ್ಷಿಸಲು ಸಾವಿರಾರು ಮಂದಿ ಸೇರಿರುತ್ತಾರೆ.

ಹೊಸದುರ್ಗದ ದೇವತೆ ದುರ್ಗಮ್ಮ ಅಥವಾ ದುರ್ಗಾಂಬಿಕೆಯ ಸಿಡಿ ಆಚರಣೆ ಈ ಭಾಗದಲ್ಲಿ ವಿಶಿಷ್ಟವಾಗಿ ಕಂಡುಬರುತ್ತದೆ. ಪ್ರತಿವರ್ಷ ಚೈತ್ರಮಾನ ಬಹುಳದಲ್ಲಿ ಒಟ್ಟು ಹನ್ನೆರಡು ದಿನಗಳ ಕಾಲ ಜಾತ್ರೋತ್ಸವ ನಡೆಯುತ್ತದೆ. ಜಾತ್ರೆ ಮುಗಿದ ಮರುದಿನ ಬುಧವಾರದಂದು ದುರ್ಗಮ್ಮ ದೇವಿಯ ಸಿಡಿ ಆಚರಣೆಯು ಲಕ್ಷಾಂತರ ಜನಸ್ತೋಮದ ಮಧ್ಯೆ ನಡೆಯುತ್ತದೆ. ಹಿಂದಿನ ಕಾಲದಲ್ಲಿ ಭಕ್ತರು 'ಸಿಡಿಸೇವೆ' ಸಲ್ಲಿಸುತ್ತಿದ್ದುದು ಸಿಡಿ ಬಯಲಿನಲ್ಲಿ. ೬೦ ಅಡಿಗಳಷ್ಟು ಉದ್ದವಿರುವ ಸಿಡಿಕಂಬದ ಒಂದು ತುದಿಗೆ ಹರಕೆಹೊತ್ತ ಮಣೇಗಾರ ಜಾತಿಯ ವ್ಯಕ್ತಿಯನ್ನು ಕಟ್ಟುತ್ತಿದ್ದು ಮೂರು, ಐದು ಅಥವಾ ಒಂಬತ್ತು ಸುತ್ತುಗಳವರೆಗೆ ಸಿಡಿಮರವನ್ನು ತಿರುಗಿಸುತ್ತಿದ್ದರು. ಈ ಆಚರಣೆ ಸುಮಾರು ಐವತ್ತು ವರ್ಷಗಳಷ್ಟು ಹಿಂದೆ ನಡೆಯುತ್ತಿತ್ತು. ಆದರೆ ಒಮ್ಮೆ ಸಿಡಿ ಸಂದರ್ಭದಲ್ಲಿ ಸಿಡಿಕಂಬಕ್ಕೆ ಕಟ್ಟಲ್ಪಟ್ಟ ಮನುಷ್ಯನು ಸಿಡಿಯಾಡಿಸುವಾಗ ಭಯಗೊಂಡು ಮೂತ್ರ

ಮಾಡಿಕೊಂಡು ಮೈಲಿಗೆ ಮಾಡಿದ್ದರಿಂದ ಅಂದಿನಿಂದ ಮನುಷ್ಯರು ಸಿಡಿಯಾಡುವ ಪದ್ಧತಿ ನಿಂತುಹೋಗಿ ದೇವಿಯ ಒಪ್ಪಿಗೆಯ ಮೇರೆಗೆ ಶ್ರೀದುರ್ಗಮ್ಮ ದೇವಿ ಹಾಗೂ ಶ್ರೀಬಂಡೆಮ್ಮ ದೇವಿಯ ಉತ್ಸವಮೂರ್ತಿಗಳನ್ನು ಒಂದರ ನಂತರ ಒಂದನ್ನು ಸಿಡಿಯಾಡಿಸುವ ಪದ್ಧತಿ ಆಚರಣೆಗೆ ಬಂದಿತು. ಸಿಡಿಮರವನ್ನು ಸರಿಹೊಂದಿಸುವ ಸಂದರ್ಭದಲ್ಲಿ ತಮಟೆ, ಉರುಮೆ ವಾದ್ಯಗಳೊಂದಿಗೆ ಹಟ್ಟಿ ಗೌಡನು ಮೆರವಣಿಗೆಯಲ್ಲಿ ತಂದ 'ಮೊಸರು ಬಾನ'ದ ನೈವೇದ್ಯ ಮಾಡಿದ ನಂತರ ಮರಿಬಲಿ ಕೊಡಲಾಗುತ್ತದೆ. ನಂತರ ಸಿಡಿಬಯಲಿಗೆ ಶ್ರೀದುರ್ಗಮ್ಮ ದೇವಿಯ ಪರಿವಾರ ದೇವತೆಗಳಾದ ಸಣ್ಣಮ್ಮ, ದೊಡ್ಡಮ್ಮ, ಮಾತಂಗಮ್ಮ ಮತ್ತು ಭೂತಪ್ಪ ಬರುತ್ತವೆ. ಬಳಿಕ ದುರ್ಗಮ್ಮ ದೇವಿಯ ಉತ್ಸವಮೂರ್ತಿಯನ್ನು ಸಿಡಿಕಂಬದ ತುದಿಗೆ ಜೋಕಾಲಿಯೊಪಾದಿಯಲ್ಲಿ ಕಟ್ಟಲ್ಪಟ್ಟು ಸುಮಾರು ಹನ್ನೊಂದು ಸುತ್ತುಗಳವರೆಗೆ ಸಿಡಿಯಾಡಲಾಗುತ್ತದೆ. ಇಂತಹ ಅಪರೂಪದ ದೃಶ್ಯವನ್ನು ಕಂಡ ಜನರು ಧನ್ಯರಾಗುತ್ತಾರೆ. ಹೀಗೆ ಈ ಪರಿಸರದಲ್ಲಿ ನಡೆಯುವ ಸಿಡಿ ಆಚರಣೆಯು ವಿಶಿಷ್ಟ ಪರಂಪರೆಯಾಗಿ ಬೆಳೆದುಬಂದಿದೆ.

ಬನಸೀಹಳ್ಳಿಯ ಏಕನಾಥೇಶ್ವರಿ ಜಾತ್ರೆಯ ಸಂದರ್ಭದಲ್ಲಿ 'ಗಾವು ಸಿಗಿಯುವ' ಆಚರಣೆ ನಡೆಯುತ್ತದೆ. ಕರ್ನಾಟಕದ ಎಲ್ಲಾ ಕಡೆ ಗ್ರಾಮದೈವಗಳ ಹಬ್ಬದಲ್ಲಿ ಬಲಿ ಪದ್ಧತಿ ಕಂಡುಬರುತ್ತದೆ. 'ಗಾವು ಸಿಗಿಯುವುದು' ಒಂದು ಭಯಾನಕವಾದ ಆಚರಣೆ. ಕಪ್ಪು ಬಣ್ಣದ ಕುರಿಯನ್ನು ಮಡಿವಾಳ ಅಥವಾ ನಾಯಕರ ಪೋತರಾಜ ಹಲ್ಲುಗಳಿಂದ ಕಚ್ಚಿ ಸಿಗಿದು, ಅದರ ರಕ್ತ ಮಾಂಸಗಳನ್ನು ತಿನ್ನುವುದು ವಿಚಿತ್ರ ಆಚರಣೆಯ ಪದ್ಧತಿ, ಗಾವು ಸಿಗಿಯುವುದನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಬರುವ ಮನೆಯವರು ದೇವತೆಯ ಹಬ್ಬದಂದು ದೇವರು ಮೈತುಂಬಿದಾಗ ಗಾವು ಸಿಗಿಯುತ್ತಾರೆ. ಗಾವು ಎಂದರೆ ದೇವರ ಆಹಾರ ಎಂದು ಅರ್ಥವಿದೆ. ಗಾವು ಸಿಗಿಯಲು ಕುರಿಯ ಜೊತೆಗೆ ಕೋಳಿ, ಅಲ್ಲದೆ ಬಾಳೆಹಣ್ಣುಗಳನ್ನು ತೆಗೆದುಕೊಳ್ಳುತ್ತಾರೆ.[೨೫]

'ಗಾವುಗು' ಎಂದರೆ ಗಾವು ಕಟ್ಟಲು ಮೀಸಲಾಗಿರುವ 'ಕುರಿ' ಎಂಬ ಅರ್ಥವಿದೆ.[೨೬] ಗಾವು ಸಿಗಿಯುವಾತ ಮೂರು ದಿನಗಳ ಹಿಂದಿನಿಂದ ಉಪವಾಸವಿರಬೇಕೆಂಬುದು ನಿಯಮ. ದಿನವೊಂದಕ್ಕೆ ಮೂರು ಏಲಕ್ಕಿಯನ್ನು ತಿನ್ನಬೇಕು, ಅಲ್ಲದೆ ಮಡಿಯಿಂದ ಇದ್ದು, ಮಡದಿಯಿಂದ ದೂರವಿರಬೇಕು. ಆ ದಿನಗಳಲ್ಲಿ ದೈವಕ್ಕೆ ನಿಷ್ಠನಾಗಿದ್ದು, ಭಕ್ತಿಯಿಂದ ಪೂಜಿಸುತ್ತಿರಬೇಕು. ಹೀಗೆ ಇರುವುದರಿಂದ ಗಾವು ಸಿಗಿಯಲು ಶಕ್ತಿ ಬರುತ್ತದೆಂದು ನಂಬಿಕೆ ಇದೆ. ಗಾವು ಸಿಗಿಯುವವನನ್ನು ಪೋತರಾಜನೆಂದು ಅವನು ಗ್ರಾಮದೇವತೆಯ ಸೇವಕ, ಸಹೋದರ, ಗಂಡನೆಂದೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಭಾವಿಸಲಾಗುತ್ತದೆ.[೨೭] ಗಾವು ಸಿಗಿಯುವ ದಿನ ಪೋತರಾಜನು ಸ್ನಾನ ಮಾಡಿ, ಜೇಡಿಮಣ್ಣಿನಿಂದ ಏಳುಸುತ್ತಿನ ಕೋಟೆಯನ್ನು ಕಟ್ಟುತ್ತಾನೆ. ಅಲ್ಲಿ ಭಕ್ತರು ಪೋತರಾಜನನ್ನು ಪೂಜಿಸಿ, ಮೇಳದೊಂದಿಗೆ ದೇವಾಲಯಕ್ಕೆ ಕರೆ ತರುತ್ತಾರೆ. ಪೋತರಾಜನ ಮುಖಕ್ಕೆ ಬಣ್ಣಬಳಿದು ಬಿಳಿಯ ಬಣ್ಣದ ಚುಕ್ಕೆ ಇಟ್ಟು ಅರಿಶಿಣದ ಬಟ್ಟೆಯನ್ನು ಹೊದಿಸಿ ಮೇಳದೊಂದಿಗೆ ಗಾವು ಸಿಗಿಯಲು ಕರೆತರುತ್ತಾರೆ. ಗಾವು ಸಿಗಿದ ಪೋತರಾಜ ಅದರ ರಕ್ತವನ್ನು ಅನ್ನಕ್ಕೆ ಮಿಶ್ರ ಮಾಡುತ್ತಾನೆ. ಹೀಗೆ ಗಾವು ಸಿಗಿಯುವ ಎಲ್ಲಾ ಪೋತರಾಜರು ರಕ್ತಕ್ಕೆ ಅನ್ನವನ್ನು ಮಿಶ್ರಮಾಡಿದ

ನಂತರ ನೆರೆದ ಭಕ್ತರು ಅನ್ನವನ್ನು ಸ್ವೀಕರಿಸಿ ತಮ್ಮ ಮನೆಯ ಸೂರಿಗೆ ಮಕ್ಕಳ ಕೊರಳಿನ ತಾಯತಕ್ಕೆ ಭಕ್ತಿಯಿಂದ ಕಟ್ಟುತ್ತಾರೆ.[೫೫]

ಬನಸೀಹಳ್ಳಿಯ ಏಕನಾಥೇಶ್ವರಿ ಜಾತ್ರೆಯಾದ ನಂತರ ಮಂಗಳವಾರ ಸಂಜೆ ಗಾವು ಸಿಗಿಯುವ ಆಚರಣೆ ನಡೆಯುವುದು. ಇದು ಮೂಲ ದೇವಾಲಯದ ಹೊರ ಆವರಣದಲ್ಲಿ ನಡೆಯುವುದು. ಈ ಸಂದರ್ಭದಲ್ಲಿ ಏಕನಾಥಿಯ ಗರ್ಭಗುಡಿಗೆ ಮಡಿ ವಸ್ತ್ರವನ್ನು ಪರದೆಯಂತೆ ಅಡ್ಡಲಾಗಿ ಹಿಡಿಯಲಾಗುತ್ತದೆ. ಗುಡಿಯ ಪ್ರದೇಶದಲ್ಲಿ ಒಂದೆಡೆ ಬಚ್ಚಿಡಲಾಗಿದ್ದ ಸಾಧಾರಣ ಹೋತದ ಮರಿಯನ್ನು ಮುದ್ರೆ ಆಗಿರುವ ಚಾಟಿಪೋತನು ಹುಡುಕಿ ಅದನ್ನು ಚಾಟಿ ಹೊಡೆತದಿಂದ ಮೆತ್ತಗೆ ಮಾಡಿ ಗುಡಿಮುಂದೆ ಸೋಮನೆದುರು ಹಲ್ಲಿನಿಂದ ಸಿಗಿದು ರುಂಡವನ್ನು ತುಂಡಾಗಿಸುವನು. ಹೋತದ ತಲೆಯನ್ನು ಗುಡಿ ಮುಂದಿನ 'ಗಾವಿನಗುಂಡಿ'ಯಲ್ಲಿ ಹಾಕಿ ಮುಚ್ಚುವರು. ಅದರ ಮುಂಡದ ಭಾಗವನ್ನು ವಾದ್ಯದವರು ಅಡುಗೆ ಮಾಡಿ ಉಣ್ಣುವರು.

ಹೊಸದುರ್ಗ ತಾಲೂಕು ಪರಿಸರದಲ್ಲಿ ಕಂಡುಬರುವ ಈ ಮೇಲೆ ವಿವರಿಸಿರುವ ನಂಬಿಕೆ ಮತ್ತು ಆಚರಣೆಗಳು ವಿಶೇಷವಾಗಿ ಈ ಪರಿಸರದಲ್ಲಿನ ವೈಷ್ಣವ ಶ್ರೀವೈಷ್ಣವ ಮತ್ತು ಶಾಕ್ತ ಧಾರ್ಮಿಕ ಪಂಥಗಳ ಹಿನ್ನೆಲೆಯಲ್ಲಿ ಪರಂಪರೆಯೋಪಾದಿಯಲ್ಲಿ ಬಂದವುಗಳಾಗಿವೆ.

೬.೩. ಜಾತ್ರೆ-ಉತ್ಸವಗಳು

ಜಾತ್ರೆ-ಉತ್ಸವಗಳು ಮಾನವ ಸಂಸ್ಕೃತಿಯ ಪ್ರತಿಬಿಂಬ. ಅದರಲ್ಲೂ ಕರ್ನಾಟಕದಲ್ಲಿ ಜಾತ್ರೆ ಸಂಸ್ಕೃತಿ ಎಂದರೆ ಸ್ಥಳೀಯ ಸಂಸ್ಕೃತಿಯ ಪ್ರತೀಕವೆಂದೇ ಹೇಳಬಹುದು. ಜಾತ್ರೆ ಎಂಬ ಪದವು ಯಾತ್ರೆ ಎಂಬ ಸಂಸ್ಕೃತ ಪದದ ತದ್ಭವ ರೂಪ. ಜಾತ್ರೆ, ಪರಿಷೆ, ಪರ್ಷೆ ಈ ಪದಗಳು ಸಹ ಕನ್ನಡಕ್ಕೆ ಬಂದಿರುವ ಸಂಸ್ಕೃತ ಪದಗಳಾಗಿವೆ. ಸಂಸ್ಕೃತದ ಪರಿಷತ್ ಪದ ಪರಿಷೆ, ಪರ್ಷೆಯಾಗಿ ಕನ್ನಡದಲ್ಲಿ ಬಳಕೆಯಾಗುತ್ತಿದೆ. 'ಜಾತ್ರೆ'ಪದಕ್ಕೆ ಮೆರವಣಿಗೆ, ರಥೋತ್ಸವ, ತೀರ್ಥಪುರವಾಸ ಇತ್ಯಾದಿ ಅರ್ಥಗಳಿವೆ. ಇವೆಲ್ಲವೂ ಜಾತ್ರೆಯ ಸ್ವರೂಪವನ್ನು ಒಳಗೊಂಡಿವೆ. ಜಾತ್ರೆಯು ಆಧ್ಯಾತ್ಮದ ಜೊತೆ ವ್ಯವಹಾರಿಕೆಯನ್ನು ಒಳಗೊಂಡಿದೆ. ಜಾತ್ರೆಯಲ್ಲಿ ದೈವ, ಧರ್ಮದ ಆಚರಣೆ ಮುಖ್ಯ. ಅಲ್ಲಿ ದೈವ ಸಂಬಂಧಿಯಾದ ಆಚರಣೆಗಳು ಧಾರ್ಮಿಕವಾಗಿ ಅನುಷ್ಠಾನಗೊಳ್ಳಬೇಕು. ಈ ದೈವಾರಾಧನೆಯ ನೆಪದಲ್ಲಿ ಕಲೆತ ಜನರು, ಅದರೊಂದಿಗೆ ಇತರ ವ್ಯವಹಾರಗಳನ್ನು ನಡೆಸಲಾಗುತ್ತದೆ. ಒಟ್ಟಾರೆ ಧಾರ್ಮಿಕ ವಾತಾವರಣವೇ ಇಲ್ಲಿ ಪ್ರಧಾನ.

ನಾಡಿನಾದ್ಯಂತ ಜಾತ್ರೆಗಳು ಜರುಗುತ್ತಿರುತ್ತವೆ. ಜಾತ್ರೆಗಳನ್ನು ಗಮನಿಸಿದಾಗ ಅಲ್ಲಿ ಮೂಲಭೂತವಾಗಿ ನಿರ್ದಿಷ್ಟ ದೇವರಿರಬೇಕು, ಅದಕ್ಕೆ ದೇವಸ್ಥಾನವಿರಬೇಕು, ಇವು ಜನತೆಯ ಹಿತವನ್ನು ಕಾಪಾಡುವಂತೆ ಇರಬೇಕೆಂಬುದು ಜನತೆಯ ನಂಬಿಕೆ. ದೇವರನ್ನು ಕುರಿತಂತೆ ಅನೇಕ ಆಚರಣೆ ಸಂಪ್ರದಾಯಗಳನ್ನು ನಡೆಸಿಕೊಂಡು ಬಂದರು. ಇದನ್ನು ಜಾತ್ರೆ ಎಂದು ಪರಿಭಾವಿಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಅನೇಕ ದೃಷ್ಟಿಕೋನಗಳಿಂದ ಮಾನವನು ಪಾತ್ರವಹಿಸುತ್ತಿದ್ದಾನೆ. 'ಜನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ವೈಯಕ್ತಿಕ ಭಾವನೆಗಳನ್ನು ಹಂಚಿಕೊಳ್ಳಲು ಜಾತ್ರೆಯು ವಿಶೇಷ ವೇದಿಕೆಯಾಗಿ ನಿರ್ಮಾಣಗೊಂಡಿದೆ. ಜಾತ್ರೆಗಳನ್ನು

ನಡೆಸಿಕೊಂಡು ಬರುತ್ತಿರುವುದರಿಂದ ಜನರಿಗೆ ಅನೇಕ ಪ್ರಯೋಜನಗಳು ಆಗುತ್ತಿವೆ. ಜಾತ್ರೆಯು ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಉಲ್ಲಾಸ, ಸಂತೋಷವನ್ನು ಮೂಡಿಸುತ್ತದೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಬಡವ ಬಲ್ಲಿದ, ಸಣ್ಣವರು ದೊಡ್ಡವರು, ಸ್ತ್ರೀ-ಪುರುಷರೆನ್ನದೆ ಹರ್ಷದಿಂದ ಕಾಲಕಳೆಯುವುದಕ್ಕೆ ಮಾನವನ ಮನಸ್ಸು ಬಯಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಜಾತ್ರೆಗಳು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಜಾತ್ರೆ ದೇವರ ಹೆಸರಿನಲ್ಲಿ ನಡೆದರೂ ಸಂತೋಷದ ಜೊತೆಗೆ ಭಕ್ತಿಯನ್ನು ಮೂಡಿಸುತ್ತದೆ. ಪ್ರತಿಯೊಬ್ಬರಿಗೂ ಆಚರಣೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಒಟ್ಟಾರೆ ಜಾತ್ರೆಗಳು ನಾಗರೀಕ ಮಾನವನ ಸಾಂಸ್ಕೃತಿಕ ಪ್ರತಿಬಿಂಬವಾಗಿ ಉಳಿದು ಬೆಳೆದುಬಂದಿವೆ.

ಹೊಸದುರ್ಗ ತಾಲೂಕು ಪರಿಸರದಲ್ಲಿ ನಡೆಯುವ ಜಾತ್ರೆ-ಉತ್ಸವಗಳು ಬಹು ವಿಶಿಷ್ಟವಾಗಿವೆ. ಈ ತಾಲೂಕಿನಲ್ಲಿ ಮಲೆನಾಡು ಹಾಗೂ ಬಯಲು ಸೀಮೆಗಳ ಸಾಂಸ್ಕೃತಿಕ ಅನುಸಂಧಾನದ ಜಾತ್ರೆ-ಉತ್ಸವಗಳು ಕಂಡುಬರುತ್ತವೆ. ಎಲ್ಲೆಡೆಗಳಂತೆ ಇಲ್ಲಿಯೂ ಜಾತ್ರೆ, ತೇರು, ಉತ್ಸವಗಳು ರೈತರ ಕೃಷಿ ಕೆಲಸಗಳು-ಸುಗ್ಗಿ ಮುಗಿದ ನಂತರದ ಬೇಸಿಗೆಯ ಬಿಡುವಿನ ದಿನಗಳಲ್ಲಿ (ಡಿಸೆಂಬರ್‌ನಿಂದ ಫೆಬ್ರವರಿವರೆಗೆ) ನಡೆಯುತ್ತವೆ. ಈ ತಾಲೂಕಿನಲ್ಲಿ ನಡೆಯುವ ಜಾತ್ರೆ-ಉತ್ಸವಗಳಲ್ಲಿ ಕೆಲವನ್ನು ಕುರಿತು ಈ ಮುಂದಿನಂತೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ.

ಹೊಸದುರ್ಗ ತಾಲೂಕಿನಲ್ಲಿ ಸ್ತ್ರೀ ದೇವತೆಗಳಿಗೆ ಸಂಬಂಧಿಸಿದಂತೆ ಜಾತ್ರೆ-ಉತ್ಸವಗಳು ಹಾಗೂ ಅನೇಕ ಆಚರಣೆಗಳು ಅಧಿಕವಾಗಿ ನಡೆಯುವುದು ಸಾಮಾನ್ಯ. ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಸ್ತ್ರೀ ದೇವತೆಯ ಆರಾಧನೆಯು ಶಕ್ತಿಯ ಒಂದು ರೂಪ. ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಪ್ರಚಲಿತದಲ್ಲಿದ್ದರೂ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷವಾಗಿ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಇದನ್ನು ಗಮನಿಸಿ ಶಕ್ತಿದೇವತೆಗಳನ್ನು ಶಿಷ್ಟ ಹಾಗೂ ಜಾನಪದ ದೇವತೆಗಳೆಂದು ವಿಭಾಗಿಸಿ ಆಚರಣೆಗಳನ್ನು ನಡೆಸಲಾಗುತ್ತಿದೆ. ಶಕ್ತಿದೇವತೆ ಹುಟ್ಟಿಬಂದಿರುವುದು ಅಂದಿನ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಇದು ಪ್ರತಿನಿಧಿಸುತ್ತದೆ. ನಾಡಿನಲ್ಲಿ ಇಂದಿಗೂ ಶಕ್ತಿದೇವತೆಗಳೇ ಪ್ರಧಾನವಾಗಿರುವುದನ್ನು ಆರ್ಯ ಪೂರ್ವ ಜನಾಂಗದ ಸಂಸ್ಕೃತಿಯ ಗಾಢವಾದ ಹಿನ್ನೆಲೆ ಇರುವುದನ್ನು ತಿಳಿಸುತ್ತದೆ. ರೋಗ-ರುಜಿನ, ಮಳೆ-ಬೆಳೆ, ಬದುಕಿನ ಎಲ್ಲಾ ಬೇಕು ಬೇಡಗಳನ್ನು ಪರಿಹರಿಸಿಕೊಳ್ಳಲು ಶಕ್ತಿದೇವತೆಯನ್ನು ಜನಪದರು ರೂಪಿಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ಹೊಸದುರ್ಗ ತಾಲೂಕಿನ ಜಾತ್ರೆ-ಉತ್ಸವಗಳನ್ನು ಗಮನಿಸಿದಾಗ ಅವುಗಳಲ್ಲಿ ಶಕ್ತಿದೇವತೆಗಳ ಜಾತ್ರೋತ್ಸವಗಳು ಅಧಿಕವಾಗಿ ಹಾಗೂ ವಿಶಿಷ್ಟವಾಗಿ ನಡೆದುಕೊಂಡು ಬರುತ್ತಿವೆ.

ಈ ತಾಲೂಕಿನ ದೇವತೆಗಳಲ್ಲಿ ಹೊಸದುರ್ಗದ 'ದುರ್ಗಮ್ಮ'ದೇವಿಯು ಪ್ರಮುಖವಾದವಳು. ಈಕೆಯನ್ನು ದುಗ್ಗಮ್ಮ ಹಾಗೂ ದುರ್ಗಾಂಬಿಕೆ ಎಂದು ಕರೆಯುವುದು ವಾಡಿಕೆ. ಈ ದೇವಿ ಕುರಿತು ಒಂದು ದಂತಕಥೆ ಪ್ರಚಲಿತದಲ್ಲಿದೆ. ಬಹು ಹಿಂದೆ ಹೊಸದುರ್ಗದ ಬಣಜಿಗ ಮನೆತನದವರು ಮಲೆನಾಡಿಗೆ ವ್ಯಾಪಾರಕ್ಕಾಗಿ ಹೋಗಿ ಬರುತ್ತಿದ್ದರು. ಇವರ ಪೈಕಿ ರಾಗಿ ಮನೆತನದವರು ಒಮ್ಮೆ ಮಲೆನಾಡಿಗೆ ಹೋಗಿ ಹಿಂತಿರುಗುವಾಗ ಅವರಿಗೆ ಗೊತ್ತಾಗದಂತೆ

ಅವರೊಂದಿಗೆ ದುರ್ಗಮ್ಮ ಬಂದು ಅವರ ಮನೆಯ ಒರಳುಕಲ್ಲಿನಲ್ಲಿ ನೆಲೆಸಿತು. ದಿನದಿನಕ್ಕೂ ಅದು ಒರಳುಕಲ್ಲಿನಲ್ಲಿ ಬೆಳೆಯತೊಡಗಿದಳು; ಆ ಮನೆಯವರಿಗೆ ಅದು ತಿಳಿಯಲಿಲ್ಲ. ಅಲ್ಲದೆ ಪ್ರತಿದಿನ ಒರಳುಕಲ್ಲಿನಲ್ಲಿ ಏನನ್ನಾದರೂ ಕುಟ್ಟುವಾಗ ಅಡಚಣೆಯಾಗುತ್ತಿತ್ತು, ಅದರೊಂದಿಗೆ 'ನನ್ನ ತಲೆ ನನ್ನ ತಲೆ' ಎಂದು ಹೇಳಿದಂತೆ ಬಾಸವಾಗುತ್ತಿತ್ತಂತೆ. ಹೀಗಿರುವಾಗ ಒಂದು ದಿನ ಆ ಮನೆಯಲ್ಲಿರುವ ಒಂದು ಹೆಣ್ಣು ಮಗುವಿನ ಮೈಮೇಲೆ ಬಂದು 'ನಾನು ದುರ್ಗಮ್ಮ ಮಲೆಸೀಮೆಯಿಂದ ಬಂದು ನಿಮ್ಮ ಮನೇಲಿ ಒರಳುಕಲ್ಲಿನಲ್ಲಿ ನೆಲೆಸಿದ್ದೀನಿ.... ಈ ಮಾಳಿಗೆ ಮನೇನ ನನಗೆ ಬಿಟ್ಟು ಕೊಡ್ರಿ' ಎಂದು ದೇವಿ ಹೇಳಿತು. ಆಗ ಆ ಮನೆಯವರು ಕೆಲವೇ ದಿನಗಳಲ್ಲಿ ಆ ಮಾಳಿಗೆ ಮನೆಯನ್ನು ದುರ್ಗಮ್ಮನಿಗಾಗಿ ಬಿಟ್ಟುಕೊಟ್ಟು ತಾವು ಬೇರೆ ಮನೆಯಲ್ಲಿ ವಾಸಿಸತೊಡಗಿದರು. ಈಗಲೂ ಈ ದೇವಾಲಯದ ಗರ್ಭಗುಡಿಯಲ್ಲಿ ಒರಳು ಕಲ್ಲನ್ನೇ ದುರ್ಗಮ್ಮ ಎಂದು ಪೂಜಿಸಲಾಗುತ್ತಿದೆ. ಈ ದೇವಿಯ ಪೂಜಾರರು ನಾಯಕ ಜನಾಂಗದವರು. ದುರ್ಗಮ್ಮ ದೇವಿಯೊಂದಿಗೆ ಕಾಳಮ್ಮ ಮತ್ತು ಬಂಡೆಮ್ಮ ದೇವರುಗಳು ಇದ್ದು ಈ ಮೂವರನ್ನು ಅಕ್ಕತಂಗಿಯರೆಂದೂ ಜನರು ಭಾವಿಸಿದ್ದಾರೆ. ಈ ಮೂರು ದೇವರುಗಳಿಗೆ 'ಬೇವಿನಸೊಪ್ಪು' ಪ್ರಿಯವಾದುದು. ಈ ದೇವತೆಗೆ ರಥೋತ್ಸವ ಸಿಡಿ ಉತ್ಸವಗಳು ಜರುಗುತ್ತವೆ. ಪ್ರತಿವರ್ಷ ಚೈತ್ರಮಾಸದ ಬಹುಳದಲ್ಲಿ ಒಟ್ಟು ಹನ್ನೆರಡು ದಿನಗಳ ಕಾಲ ಶ್ರೀದುರ್ಗಾಂಬಿಕೆಯ ರಥೋತ್ಸವ (ಜಾತ್ರೆ) ಜರುಗುತ್ತದೆ. ದುರ್ಗಾಂಬಿಕೆಯ ರಥೋತ್ಸವ ಕಾರ್ಯಕ್ರಮದಲ್ಲಿ ಅನುಕ್ರಮವಾಗಿ ೧. ಧ್ವಜಾರೋಹಣ ಗಂಗಾಪೂಜೆ ಮದುವಣಿಗ ಶಾಸ್ತ್ರ, ೨. ಮಹಿಷಾಸುರ ಮರ್ಧಿನಿ ಉತ್ಸವ, ೩. ಶಿವನೆಕಟ್ಟೆ ಕಾಳಮ್ಮನ ಗುಡಿಗೆ ಹಾಗೂ ಯಾಲಕ್ಕಪ್ಪನ ಹಟ್ಟಿಗೆ ಹೋಗಿ ಬರುವುದು, ಸೇವೆ ಸ್ವೀಕಾರ, ೪. ಹೊಸಹಳ್ಳಿಗೆ ಹೋಗಿಬರುವುದು, ೫. ಬಜ್ಜಪ್ಪನ ಹಟ್ಟಿಗೆ ಹೋಗಿ ಬರುವುದು, ೬. ಹೊಸದುರ್ಗ ಪಟ್ಟಣದಲ್ಲಿ ಉತ್ಸವ, ೭. ಗೊರವಿನಕಲ್ಲು ಗ್ರಾಮದಲ್ಲಿ ಅಡ್ಡ ಪಲ್ಲಕ್ಕಿ ಉತ್ಸವ, ೮. ರಥೋತ್ಸವ, ೯. ಸಿಡಿಯುತ್ಸವ, ೧೦. ಹಗಲು ಪಲ್ಲಕ್ಕಿ ಉತ್ಸವ, ೧೧. ಬೆಲ್ಲದರಾಶಿ, ರಾಶಿ ಬುತ್ತಿಎಡೆ ಸೇವೆಗಳು ಹಾಗೂ ೧೨. ಕಂಕಣ ವಿಸರ್ಜನೆ, ಮಹಾ ಮಂಗಳಾರತಿ ಕಾರ್ಯಕ್ರಮಗಳು ನಡೆಯುತ್ತವೆ. ಈ ಜಾತ್ರೆಯ ಸಂದರ್ಭದಲ್ಲಿ ದುರ್ಗಾಂಬಿಕೆ ದೇವಾಲಯದಲ್ಲಿರುವ ದುರ್ಗಮ್ಮ, ಬಂಡೆಮ್ಮ, ಕಾಳಮ್ಮ, ಕುಕ್ಕಡದಮ್ಮ, ಶನಿದೇವರು, ಭೂತಪ್ಪ, ಕೆಮ್ಮಲಮ್ಮ, ಗುಳ್ಳೆಮ್ಮ, ಪ್ಲೇಗಮ್ಮ ಮತ್ತು ಸೋಮನ ಬಂಕಗಳಿಗೂ ಪೂಜೆಗಳು ವಿಶೇಷವಾಗಿ ಸಲ್ಲುತ್ತವೆ.

ದುಗ್ಗಮ್ಮನ ವಾರ ಮಂಗಳವಾರದಂದು ರಥೋತ್ಸವ ನಡೆಯುತ್ತದೆ. ಅದರ ಹಿಂದಿನ ದಿನ ದೇವಿಯು ಗೊರವಿನಕಲ್ಲು ಗ್ರಾಮದಲ್ಲಿ ಮದುವಣಗಿತ್ತಿಯಾಗಿ ತಾಳಿಕಟ್ಟಿಸಿಕೊಂಡು ಬರುವಳು. ಗೊರವಿನಕಲ್ಲು ಗ್ರಾಮ ಶ್ರೀದುರ್ಗಮ್ಮದೇವಿಯ ತೌರು ಎಂದೂ ಅಲ್ಲಿನ ಶ್ರೀ ಕಂಬದ ನರಸಿಂಹಸ್ವಾಮಿ ದೇವರು ದುರ್ಗಮ್ಮನ ಅಣ್ಣನೆಂದು ನಂಬಲಾಗಿದೆ. ದೇವಿಯ ತೇರಿನ ಬಳಿಕ ಹರಕೆ ಹೊತ್ತಿದ್ದವರು ಬೇವಿನಸೀರೆ ಸೇವೆ ಸಲ್ಲಿಸುತ್ತಾರೆ. ಬೇವಿನುಡಿಗೆಯಲ್ಲಿ ವಾದ್ಯ ಸಮೇತ ದುರ್ಗಮ್ಮ ಗುಡಿಗೆ ಮೆರವಣಿಗೆಯಲ್ಲಿ ಬಂದು ದೇವಸ್ಥಾನ ಪ್ರದಕ್ಷಿಣೆ ಮಾಡಿ ದೇವರ ನೀರು ಹಾಕಿಸಿಕೊಂಡು ಬೇವಿನುಡಿಗೆ ತೆಗೆದು ಬಟ್ಟೆ ಧರಿಸುತ್ತಾರೆ. ಅಲ್ಲದೆ ಹರಕೆ ಹೊತ್ತ ಭಕ್ತರು ತೇರು ಹರಿದ ಬಳಿಕ ತೊಳೆದ ಎತ್ತಿನ ಬಂಡಿಯಲ್ಲಿ ಮಡಿ ನೀರಿನಲ್ಲಿ ಮಾಡಿದ ಬೆಲ್ಲದ

ಪಾನಕವನ್ನು ತುಂಬಿಸಿದ ಹಂಡೆ ಅಥವಾ ಕೊಳಗವನ್ನು ಹೇರಿಕೊಂಡು ಬೇವಿನಸೊಪ್ಪು ಅಲಂಕರಿಸಿ ದೇವಸ್ಥಾನದ ಬಳಿಗೆ ಬಂದು ದೇವರನ್ನು ಪೂಜಿಸಿ ದೇವರಿಗೆ 'ಪಾನಕದ ಎಡೆ' ಹಿಡಿದು ತೇರಿನ ಬೀದಿಯಲ್ಲಿ ಭಕ್ತಾದಿಗಳಿಗೆ ಪಾನಕವನ್ನು ಹಂಚುವರು.

ಹೊಸದುರ್ಗ ತಾಲೂಕಿನ ಸಾಂಸ್ಕೃತಿಕ ವೈಶಿಷ್ಟ್ಯತೆಯ ಉತ್ಸವಗಳಲ್ಲಿ 'ಕೇರಳಮ್ಮನ ಆರತಿ ಬಾನೋತ್ಸವ'ವು ಒಂದು. ಮೂಲತಃ ಹೊನ್ನೇನಹಳ್ಳಿ ಗ್ರಾಮದಲ್ಲಿ ನೆಲೆಸಿದ್ದ ಈ ದೇವಿಯು ದೇವಪುರದ ಕೆರೆಯ ಅಂಗಳದಲ್ಲಿನ ಕೇದಗೆಯ ಸಂಪತ್ತು ಮತ್ತು ಅದರ ಸುವಾಸನೆಗೆ ಮಾರುಹೋಗಿ ಅಲ್ಲಿಗೆ ಬಂದು ನೆಲೆಸಿದಳು. ಕೆರೆಯಂಗಳದಲ್ಲಿ ನೆಲೆಸಿದ ಈ ದೇವತೆ ಕೆರೆಯಂಗಳದಮ್ಮ, ಕೆರೆಯಾಗಳದಮ್ಮ ಎಂದೂ, ತದನಂತರ ಕೆರೆಯಳಮ್ಮ, ಕೆರಳಮ್ಮ ಎಂದು ಕರೆಸಿಕೊಂಡಿತು. ಹೀಗೆ ಹೊನ್ನೇನಹಳ್ಳಿಯಿಂದ ದೇವಪುರಕ್ಕೆ ಹೋಗಿ ನೆಲೆಸಿತೆಂಬುದು ಪ್ರತೀತಿ ಇಲ್ಲಿ ವರ್ಷಕ್ಕೊಮ್ಮೆ ಪುಷ್ಯಶುದ್ಧ ಚೌತಿಯಲ್ಲಿ ಜರುಗುವ ಕೆರಳಮ್ಮನ ಆರತಿ ಬಾನೋತ್ಸವಕ್ಕೆ ಇಡೀ ಜಿಲ್ಲೆಯಲ್ಲಿಯೇ ಜಾನಪದ ಸಂಪ್ರದಾಯದ ದೃಷ್ಟಿಯಿಂದ ಮಹತ್ವದ ಸ್ಥಾನವಿದೆ. ಕೆರಳಮ್ಮ ವರ್ಷದಲ್ಲಿ ಒಂದು ಬಾರಿ ಆರತಿಬಾನ ಸ್ವೀಕರಿಸಲು ಹೊನ್ನೇನಹಳ್ಳಿಗೆ ಹೊರಡುತ್ತದೆ. ರಾತ್ರಿಯಿಡೀ ವಿಜೃಂಭಿಸುವ ಕೆರಳಮ್ಮ ದೇವರ ಆರತಿಬಾನ ಬೆಳಗಿನ ಎಂಟರ ಹೊತ್ತಿಗೆ ಮುಗಿಯುತ್ತದೆ. ಆರತಿಬಾನದಲ್ಲಿ ಸೋಮನ ಕುಣಿತ ವಿಶೇಷ ಮೆರಗನ್ನು ಪಡೆದು ರಂಜನೀಯವಾಗಿರುತ್ತದೆ. ಆರತಿಬಾನದ ಹರಕೆ ಹೊತ್ತವರು ನವಣಕ್ಕಿಯ ಮೇಲೆ ಹಣತೆಯನ್ನು ಬೆಳಗಿಸಿ ತಲೆಯ ಮೇಲೆ ಹೊತ್ತು ಮೆರವಣಿಗೆ ಹೊರಡುತ್ತಾರೆ. ಒಡವೆ ವಸ್ತ್ರಗಳಿಂದ ಅಲಂಕೃತಗೊಂಡ ಸಹಸ್ರಾರು ಮಹಿಳೆಯರು ಮುಡಿ, ನಕ್ಷತ್ರದಂತೆ ಮಿನುಗುತ್ತದೆ. ಅಂದು ಹಣತೆಗಳ ಮಾಯಲೋಕ ಸೃಷ್ಟಿಯಾಗುತ್ತದೆ.

ದೇವರ ಆರತಿಬಾನ ನಡೆದು ಸರಿಯಾಗಿ ಹದಿನೈದು ದಿನಗಳಿಗೆ ಕೆರಳಮ್ಮನ ರಥೋತ್ಸವ ನಡೆಯುತ್ತದೆ. ಅದು ಶುಕ್ರವಾರವೇ ಆಗಿರುತ್ತದೆ. ಆರತಿಬಾನದ ಉತ್ಸವಕ್ಕೆ ಸೇರಿದಂತೆ ಹತ್ತುಸಾವಿರಕ್ಕೂ ಹೆಚ್ಚು ಭಕ್ತರು ರಥೋತ್ಸವಕ್ಕೂ ಸೇರಿರುತ್ತಾರೆ. ಹತ್ತು ದಿನಗಳ ಕಾಲ ನಡೆಯುವ ರಥೋತ್ಸವದಲ್ಲಿ ಮದುವಣಿಗೆ ಶಾಸ್ತ್ರ, ಬಾನೋತ್ಸವ, ಕೇಲು ಬಾನೋತ್ಸವ, ಹೂವಿನ ಪಲ್ಲಕ್ಕಿ ಉತ್ಸವ, ಹಗಲು ಪಲ್ಲಕ್ಕಿ, ಬೆಲ್ಲದರಾಶಿ ಇತ್ಯಾದಿ ಸೇವೆಗಳು ನಡೆಯುತ್ತವೆ. ಕೊನೆಯ ದಿನ ದೇವರನ್ನು ಗುಡಿ ತುಂಬಿಸಿ 'ಗುಡಿಬಾಗಿಲು ಹಾಕುವ ಕಾರ್ಯ' ನಡೆಯುತ್ತದೆ. ಆರತಿಬಾನ ನಡೆದ ಒಂದು ತಿಂಗಳಿಗೆ ಗುಡಿ ಬಾಗಿಲು ತೆರೆಯುತ್ತಾರೆ. ಇದನ್ನು 'ತಿಂಗಳು ಪೂಜೆ' ಎಂದು ಕರೆಯುತ್ತಾರೆ. ಹಿಂದೆ ಸಿಡಿ ಆಚರಣೆಯೂ ಇಲ್ಲಿ ನಡೆಯುತ್ತಿತ್ತು ಎನ್ನುವುದಕ್ಕೆ ಉಯ್ಯಾಲೆ ಕಂಬಗಳು ಸಾಕ್ಷಿ ನೀಡುತ್ತವೆ. ಗೌಡರು ಹಾಗೂ ಉಪ್ಪಾರ ಜನಾಂಗದವರು ಪೂಜಾರಿಗಳಾಗಿದ್ದು ಸೋಮನ ಬಂಟ ಹಾಗೂ ಚಾಕಮೋತರು, ನಾಯಕರು, ಛಲವಾದಿಗಳು, ಉರುಮೆ ಮತ್ತು ವಾಲಗ-ವಾದ್ಯದವರಾಗಿರುತ್ತಾರೆ. ಅಸಾದಿಗಳು, ಕೈಪಂಜಿನವರು, ಮಡಿವಾಳರು, ಜೋಗಪ್ಪ-ದಾಸಯ್ಯಗಳು, ಕುರುಬರಾಗಿರುತ್ತಾರೆ. ಉತ್ಸವ-ಜಾತ್ರೆ ಇತ್ಯಾದಿಗಳಲ್ಲಿ ಮೇಲಿನ ಕೈವಾಡದವರು ಕೆಲವು ನಡೆ ಮಡಿಗಳನ್ನು ಶ್ರದ್ಧಾಭಕ್ತಿಗಳಿಂದ ಪಾಲಿಸುತ್ತಾರೆ.

ದೇವಪುರದ ವಿಶೇಷವೆಂದರೆ ಅಲ್ಲಿ ಕೆರಳಮ್ಮ ದೇವತೆಯಲ್ಲದೆ ಗಣೇಶ, ಆಂಜನೇಯ, ಬನಶಂಕರಿ, ಜಂಬಗಲ್ಲಮ್ಮ, ಮಾರಮ್ಮ, ವೀರಭದ್ರ, ರಾಮದೇವರು, ಭೈರೆದೇವರು, ಚೌಡಮ್ಮ, ಬ್ಯಾಟೇ ಲಕ್ಷ್ಮಿನಾರಾಯಣ ಮುಂತಾದ ದೇವರ ಗುಡಿಗಳಲ್ಲದೆ, ಊರ ಹೊರಗೆ ದೊಡ್ಡಮ್ಮ ಮಾಗಂತಿ ಮರುಳಮ್ಮ, ಬೀರದೇವರ ಗುಡಿಗಳಿವೆ. ಈ ಎಲ್ಲಾ ದೇವರುಗಳಿಂದಲೇ ಊರಿಗೆ ದೇವಪುರ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ.

ಹೊಸದುರ್ಗ ಸೀಮೆಯ ಸಾಂಸ್ಕೃತಿಕ ವೈಶಿಷ್ಟ್ಯತೆಯ ಸ್ತ್ರೀದೇವತೆಗಳ ಜಾತ್ರೋತ್ಸವಗಳಲ್ಲಿ ಬನಸೀಹಳ್ಳಿಯ ಏಕನಾಥೇಶ್ವರಿ ದೇವಿಯ ಜಾತ್ರೋತ್ಸವವು ಒಂದು. ಬನಸೀಹಳ್ಳಿಯಲ್ಲಿ ಜರುಗುವ ಜಾತ್ರೆ, ತೇರು, ಸಿಡಿ, ಬಾನೋತ್ಸವ ಮತ್ತಿತರ ಆಚರಣೆಗಳು ಸುತ್ತೆಲ್ಲ ಸೀಮೆಗೆ ಹೆಸರುವಾಸಿ. ಈ ಗ್ರಾಮದೇವತೆಯನ್ನು 'ಮೂವತ್ತೂರುಳ್ಳಿ'ದೇವರು ಎಂದು ಕರೆಯುವರು. ಬನಸೀಹಳ್ಳಿಯ ಏಕನಾಥೇಶ್ವರಿ ಜಾತ್ರೆಯು ಪ್ರತಿವರ್ಷ ಮಾಘ ಬಹುಳ ಅವಧಿಯಲ್ಲಿ ಪ್ರಾರಂಭವಾಗಿ ಒಟ್ಟು ಹತ್ತೊಂಬತ್ತು ದಿನಗಳಷ್ಟು ದೀರ್ಘಕಾಲ ನಡೆಯುತ್ತದೆ. ದೇವಪುರದ ಕೆರಳಮ್ಮ ದೇವರ ಹತ್ತೊಂಬತ್ತು ದಿನಗಳ ಜಾತ್ರೆಯು ಗುಡಿ ಬಾಗಿಲು ಹಾಕಿದ ಒಂದು ವಾರಕ್ಕೆ ಇತ್ತ ಬನಸೀಹಳ್ಳೆಮ್ಮ ಜಾತ್ರೆ ಶುರುವಾಗುತ್ತದೆ. ಮೊದಲನೆ ದಿನ ದೇವಿಯು 'ಹೊರಡುವ ದಿನ'. ನಂತರದ ಕೆಲವು ದಿನಗಳಲ್ಲಿ ಸುತ್ತಲ ಹಳ್ಳಿಗಳಾದ ತಣಿಗೇಕಲ್ಲು, ದೊಡ್ಡಘಟ್ಟ, ನರಸೀಪುರ, ದೇವಪುರ, ಹುಲ್ಲುಕಟ್ಟೆ, ದೇವರಹಟ್ಟಿ, ಜಾನಕಲ್ಲು ಹಾಗೂ ಕಂಠಾಪುರ ಗ್ರಾಮಗಳಲ್ಲಿ ಒಂದೊಂದು ದಿನ-ರಾತ್ರಿ ತಂಗಿದ್ದು ಉತ್ಸವಾದಿ ಸೇವೆಗಳನ್ನು ಸ್ವೀಕರಿಸುವಳು. ಹತ್ತು ದಿನಗಳ ಕಾಲ ಹೀಗೆ ಹಳ್ಳಿಗಳ ಮೇಲೆ ಹೋಗುವ ಬನಸಿಹಳ್ಳೆಮ್ಮ ಹನ್ನೊಂದನೆಯ ದಿನಕ್ಕೆ ಬನಸೀಹಳ್ಳಿಗೆ ಹಿಂತಿರುಗಿ 'ಮದುವಣಗಿತ್ತಿ' ಆಗುತ್ತಾಳೆ. ನಂತರದ ದಿನ 'ಧೂಳುಬಾನೋತ್ಸವ' ನಡೆಯುವುದು. ನಂತರ ಮತ್ತೊಂದು ದಿನ 'ಕೇಲುಬಾನೋತ್ಸವ' ಬಳಿಕ ಇನ್ನೊಂದು ದಿನ 'ಊರುಚ್ಚಯ' (ಹೂವಿನ ಪಲ್ಲಕ್ಕಿ ಉತ್ಸವ) ಮಗದೊಂದು ದಿನದ ಕಾರ್ಯಕ್ರಮವೇ 'ಬನಸೀಹಳ್ಳೆಮ್ಮನ ತೇರು'. ಇದು ಶುಕ್ರವಾರದ ರಾತ್ರಿ ಜರಗುತ್ತದೆ. ಈ ದೇವಿಯ ರಥೋತ್ಸವದ ದಿನ ಪ್ರಾಣಿಬಲಿ ನಡೆಯುವುದಿಲ್ಲ. ಆದುದರಿಂದ ಈಕೆಯನ್ನು 'ಶೀಲವಂತೆದೇವಿ' ಎಂದು ಕರೆಯಲಾಗುತ್ತದೆ. ದೇವಿಯ ತೇರಿನ ಬಳಿಕ ಶನಿವಾರ ಸಂಜೆ ಮೂಲ ದೇವಾಲಯದ ಎದುರಿಗಿರುವ ಸಿಡಿಮರದ ಗುಂಡ್ಲು ಜಾಗದಲ್ಲಿ ಅತ್ಯಾಕರ್ಷಕವಾದ ಸಿಡಿ ಕಾರ್ಯಕ್ರಮ ನಡೆಯುತ್ತದೆ. ಭಾನುವಾರ ದೇವಿಯ ಪೂಜೆ ಅದೇ ದಿನ ಸಂಜೆ ಗಾವುಮರಿ ಸೇವೆ ಇರುವುದು. ಬನಸೀಹಳ್ಳಮ್ಮ ಜಾತ್ರೆಯ ಬಹುಮುಖ್ಯವಾದ ಅತ್ಯಾಕರ್ಷಕ (ಕರಿಸೋಮ) ಅದ್ದೂರಿಯಾದ ಕುಣಿತ, ಅಸಾದಿಗಳ ಹಲಗೆಯ ಲಯಬದ್ಧವಾದ ಬಡಿತಕ್ಕೆ ಉರುಮೆಯ ತಾರಕಕ್ಕೇರುವ ವಾದನಕ್ಕೆ ಸ್ವಾನಾಯದ ಮತ್ತೇರಿಸುವ ನಿನಾದಕ್ಕೆ ಮದವೇರಿ ಕುಣಿಯುವ ಸೋಮ, ಎಲ್ಲರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಒಟ್ಟಾರೆ ಹೊಸದುರ್ಗ ಸೀಮೆಯ ಜಾತ್ರೋತ್ಸವಗಳಲ್ಲಿ ಬನಸೀಹಳ್ಳಿಯ ಏಕನಾಥೇಶ್ವರಿ ಜಾತ್ರೋತ್ಸವ ಗಮನಾರ್ಹವಾದುದು.

ಈ ಪರಿಸರದ ಪ್ರಸಿದ್ಧ ಗ್ರಾಮದೇವತೆಗಳಲ್ಲಿ ಅರಳೀಹಳ್ಳಿಯ ಶ್ರೀಮಲಿಯಮ್ಮದೇವಿಯು ಒಂದು. ಅರಳಿಹಳ್ಳಿಯು ನೀರಗುಂದ ಹಾಗೂ ಬಾಗೂರು ಗ್ರಾಮಗಳ ಹತ್ತಿರವಿದೆ. ಮಲಿಯಮ್ಮ ದೇವಿಯನ್ನು 'ಅಳ್ಳೀಹಳ್ಳೆಮ್ಮ' ಹಾಗೂ 'ತೊಂಭತ್ತೊಂಭತ್ತು ಹಳ್ಳಿಗಳ ಅಧಿದೇವತೆ' ಎಂದೆಲ್ಲಾ

ಕರೆಯಲಾಗುತ್ತದೆ. ಶಕ್ತಿದೇವತೆಗಳಿಗೆ ವಾರದಲ್ಲಿ ಮಂಗಳವಾರ ಹಾಗೂ ಶುಕ್ರವಾರ ವಾರದ ವಿಶೇಷ ಪೂಜೆ ನಡೆದರೆ ಮಲ್ಲಿಯಮ್ಮದೇವಿಗೆ ವಾರದಲ್ಲಿ ಗುರುವಾರ ವಿಶೇಷ ಪೂಜೆ ನಡೆಯುವುದು ಇನ್ನೂ ವಿಶೇಷ. ಅಲ್ಲದೆ ಎಲ್ಲಾ ದೇವತೆಗಳಿಗೆ ಒಂದೇ ರುಂಡವಿದ್ದರೆ ಮಲಿಯಮ್ಮ ದೇವಿಗೆ ಎರಡು ರುಂಡಗಳಿವೆ. ಈ ದೇವರಿಗೆ ಹರಿಜನ ಆಗುವುದಿಲ್ಲ, ಆದುದರಿಂದಾಗಿಯೇ ಈ ಗ್ರಾಮದಲ್ಲಿ ಹರಿಜನರೇ ಕಂಡುಬರುವುದಿಲ್ಲ. ದೇವಿಗೆ ಅಂಬಿನೋತ್ಸವ ಜರುಗುವುದಿಲ್ಲ, ಎಲ್ಲಾ ದೇವರುಗಳಿಗೆ ವರ್ಷದಿಂದ ಹನ್ನೆರಡು ವರ್ಷಗಳಿಗೊಮ್ಮೆ ಜಾತ್ರೆ ನಡೆದರೆ ಮಲಿಯಮ್ಮ ದೇವಿಗೆ ಐವತ್ತು ವರ್ಷಗಳಿಗೊಮ್ಮೆ ಜಾತ್ರೆ ನಡೆಯುತ್ತದೆ.

ಮಲಿಯಮ್ಮ ದೇವಿಯು ಹುತ್ತದಲ್ಲಿ ನೆಲೆಸಿರುವಳೆಂದು ಆಕೆಯು ಇಲ್ಲಿ ನೆಲೆಗೊಳ್ಳಲು ಪ್ರಚಲಿತದಲ್ಲಿರುವ ಕೆಲವು ಕಥೆಗಳು ಈ ಪರಿಸರದಲ್ಲಿ ಕಂಡುಬರುತ್ತವೆ. 'ನೀಲಾವತಿ ಪಟ್ಟಣದ ಜನ ಹಿಂದಿನ ಕಾಲದಲ್ಲಿ ಮಲೆನಾಡಿಗೆ ಹೋಗಿ ಎತ್ತಿನಬಂಡಿಗಳಲ್ಲಿ ಬಿದಿರುಬೊಂಬುಗಳನ್ನು ತುಂಬಿಕೊಂಡು ಬರುವಾಗ ಅದರೊಟ್ಟಿಗೆ ಮಲೆನಾಡಿನಿಂದ ಚೌಡಿಯು ಬಂದು ಸೇರಿದಳು. ಊರಿನ ಬಳಿಬರುವ ವೇಳೆಯಲ್ಲಿ ಬಂಡಿಗಳನ್ನು ಎಳೆಯುತ್ತಿದ್ದ ಎತ್ತುಗಳ ಕಾಲುಗಳು ಸೋತಂತಾಗಿ ನಿಂತುಬಿಟ್ಟವು. ಆಗ ಜೋತಿಷ್ಯವನ್ನು ಕೇಳಲಾಗಿ ಬಂಡಿಗಳ ಜೊತೆಯಲ್ಲಿ ಮಲೆನಾಡಿನಿಂದ ಚೌಡಿಯೊಂದು ಬಂದಿದೆ ಎಂದು ತಿಳಿಯಲಾಯಿತು. ಆಗ ಬಂಡಿಗಳಿಗೆ ಶಾಂತಿ ಮಾಡಿದ ಬಳಿಕ ಎತ್ತುಗಳು ಮುಂದೆ ಸಾಗಿದವು. ಸ್ವಲ್ಪದೂರ ಸಾಗಿದ ನಂತರ 'ಅರಳೀತೋಪು' ತಲುಪಿದಾಗ, ಮಲೆನಾಡಿನಿಂದ ಒಂದು ಬಿದಿರಿನ ಬಂಡಿಗಳಲ್ಲಿ ಅಡಗಿಕೊಂಡಿದ್ದ ಚೌಡಿಯು ಅಲ್ಲೆ ಇದ್ದ ತಂಕಟೆಗಿಡಕ್ಕೆ ಹೋಗಿ ಅಡಗಿಕೊಂಡಿತು. ಇದಾದ ಬಳಿಕ ಒಂದು ದಿನ ಹತ್ತಿರದ ಹಳ್ಳಿಯ ಹರಿಜನ ವ್ಯಕ್ತಿಯೊಬ್ಬ ಸೌದೆಗಾಗಿ ಕೊಡಲಿಯೊಂದಿಗೆ ಅರಳಿತೋಪಿಗೆ ಬಂದವನು ತಂಕಟೆಗಿಡವನ್ನು ಕಂಡು ಸಾಕಷ್ಟು ಸೌದೆ ಆಗುತ್ತೆ ಎಂದು ಖುಷಿಪಡುತ್ತಾ ಗಿಡದ ಬಳಿಗೆ ಬಂದು ಕಡಿಯಲೆಂದು ಕೊಡಲು ಎತ್ತಿದನು. ಗಿಡದಲ್ಲಿದ್ದ ಚೌಡಿಯು ಕೂಡಲೆ ಆ ವ್ಯಕ್ತಿಯನ್ನು ಉದ್ದೇಶಿಸಿ, 'ಗಿಡದಲ್ಲಿ ನಾನಿದ್ದೀನಿ ಮಗನೇ... ನಾನು ಮಲೆನಾಡಿನಿಂದ ಬಂದಿರುವ ಚೌಡಿ... ಕೊಡಲಿಯಿಂದ ಕಡಿಯಬೇಡ... ನೀನು ಕೇಳಿದ ಅನುಕೂಲ, ಸುಖಸಂಪತ್ತನ್ನು ನಿನಗೆ ಕೊಡುತ್ತೇನೆ ಎಂದು ಹೇಳಿತು. ಆದರೆ ಆ ಮನುಷ್ಯನು ಇದು ಭ್ರಮೆ ಇದ್ದಿರಬೇಕೆಂದು ತಿಳಿದು ಶಕ್ತಿಯನ್ನು ಉಪಯೋಗಿಸಿ ಕೊಡಲಿಯಿಂದ ಗಿಡಕ್ಕೆ ಒಂದು ಸರಿಯಾದ ಏಟು ಹಾಕಿದನು. ಇದರಿಂದ ಚೌಡಿಯ ತಲೆ ಎರಡು ಹೋಳಾಯಿತು. ಕೂಡಲೇ ಆ ವ್ಯಕ್ತಿಯು ರಕ್ತವನ್ನು ಕಾರಿ ಅಲ್ಲಿಯೇ ಬಿದ್ದು ಪ್ರಾಣಬಿಟ್ಟನು. ಇದರೊಂದಿಗೆ ಸುತ್ತ ಮುತ್ತಲ ಅನೇಕ ಹಳ್ಳಿಯ ಜನ ತಂಡೋಪ ತಂಡವಾಗಿ ಬಂದು ಗಿಡದಲ್ಲಿದ್ದ ಚೌಡಿಗೆ ಪೂಜೆ ಸಲ್ಲಿಸಲು ಪ್ರಾರಂಭಿಸಿದರು. ಅಲ್ಲದೆ ಅಲ್ಲಿನ ಹರಿಜನ ಊರುಬಿಟ್ಟು ಹೋದರೆಂಬ ನಂಬಿಕೆಯಿದೆ.

ಹೊಸದುರ್ಗ ತಾಲೂಕಿನ ಸ್ತ್ರೀದೇವತೆಗಳಿಗೆ ಸಂಬಂಧಿಸಿದ ಜಾತ್ರೋತ್ಸವಗಳು ಹೆಚ್ಚು ಮಲೆನಾಡಿನ ಸಾಂಸ್ಕೃತಿಕ ಚಹರೆಗಳನ್ನು ಒಳಗೊಂಡಿವೆ. ಸ್ತ್ರೀ ದೇವತೆಗಳು ಶಕ್ತಿ ಸ್ವರೂಪಿಣಿಯಾಗಿದ್ದು, ಇವರಿಗೆ ಸಂಬಂಧಿಸಿದ ಆಚರಣೆಗಳು ಹಾಗೂ ಜಾತ್ರೆ-ಉತ್ಸವಗಳು ಸ್ವಲ್ಪ ಪ್ರಮಾಣದಲ್ಲಾದರು ಹಿಂಸಾ ಸ್ವರೂಪವನ್ನು ಹೊಂದಿರುತ್ತವೆ. ಆದರೆ ಈ ಪರಿಸರದಲ್ಲಿ ಬಹುತೇಕ ಅಂತಹ

ಲಕ್ಷಣಗಳು ಕಂಡುಬರುವುದಿಲ್ಲ. ಇಲ್ಲಿನ ಬಹುತೇಕ ಸ್ತ್ರೀ ದೇವತೆಗಳು ಮಲೆನಾಡಿನಿಂದ ಈ ತಾಲೂಕಿನಲ್ಲಿ ಬಂದು ನೆಲೆಸಿದವೆಂಬುದು ಪ್ರತೀತಿ. ಜಾತ್ರೋತ್ಸವಗಳಲ್ಲಿನ ಸೇವೆಗಳು ಹಾಗೂ ಆಚರಣೆಗಳು ಕೃಷಿ ಸಂಬಂಧಿ ಆಚರಣೆಗಳಾಗಿವೆ.

ಹೊಸದುರ್ಗ ತಾಲೂಕು ಪರಿಸರದಲ್ಲಿ ಸ್ತ್ರೀ ದೈವಗಳಂತೆ ಪುರುಷ ದೈವಗಳ ಸಂಖ್ಯೆಗೇನೂ ಕಡಿಮೆ ಇಲ್ಲ. ಇಲ್ಲಿನ ಪುರುಷದೈವಗಳಲ್ಲಿ ವಿಶೇಷವಾಗಿ 'ಗವಿರಂಗನಾಥ', 'ಕಂಚಿವರದರಾಜಸ್ವಾಮಿ', 'ದಶರಥರಾಮೇಶ್ವರ', 'ಮೈಲಾರಲಿಂಗೇಶ್ವರ', 'ಹಾರನಕಣಿವೆ ರಂಗನಾಥ' ಹಾಗೂ 'ಬಾಗೂರು ಚನ್ನಕೇಶವ' ಕಂಡುಬರುತ್ತವೆ. ಈ ದೈವಗಳಿಗೆ ಸಂಬಂಧಿಸಿದ ಜಾತ್ರೋತ್ಸವಗಳು ಈ ಪರಿಸರದ ಸಾಂಸ್ಕೃತಿಕ ಪರಂಪರೆಗೆ ಹಿಡಿದ ಕನ್ನಡಿಯಾಗಿವೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಐತಿಹ್ಯವನ್ನು ಹೊಂದಿರುವ ಕಂಚೀಪುರವು ಇಲ್ಲಿನ ವರದರಾಜಸ್ವಾಮಿಯ ಸುಗ್ರೀವನ ಅವತಾರವೆಂದೂ ಹೇಳಲಾಗುತ್ತದೆ. ಈ ದೈವದ ಅಂಬಿನೋತ್ಸವವು ರಾಜ್ಯದಲ್ಲೇ ಮೊದಲೇ ನಡೆಯುತ್ತದೆ. ಈ ದೈವದಿಂದ ವರ್ಷಕ್ಕೆ ಒಂದು ಬಾರಿ ವಿಜಯದಶಮಿಗೆ ಮೊದಲು ಉತ್ತರೆಮಳೆ ಅವಧಿಯಲ್ಲಿ ವಿವಿಧ ಸ್ಥಳಗಳಲ್ಲಿ ಅಂಬು ಹೊಡೆಯುವ ಆಚರಣೆ ನಡೆಯುತ್ತದೆ. ಈ ಉತ್ಸವಕ್ಕೆ ವಿವಿಧ ಜಿಲ್ಲೆಗಳಿಂದ ಭಕ್ತಾದಿಗಳು ಬರುತ್ತಾರೆ. ಭಕ್ತರು ದೇವರಿಗೆ ಅರ್ಪಿಸಿದ ಸಹಸ್ರಾರು ಹಣವನ್ನು ಭಕ್ತರಿಗೆ 'ಸೂರೆ' ಬಿಡುವ ವಿಶಿಷ್ಟ ಬಗೆಯ ಪದ್ಧತಿ ಇದೆ. ಜೊತೆಗೆ 'ಪಾಷಾಣದೆಡೆ'ಯನ್ನು ಕೇಳುವ ಹಾಗೂ 'ಸೂರಗಂಬಲಿ ಸೇವೆ' ಸ್ವೀಕರಿಸುವ ಪದ್ಧತಿಯು ನಡೆಯುತ್ತದೆ. ಹರಕೆ ಹೊತ್ತ ಭಕ್ತರು ಹಣವನ್ನು ದೇವರ ಮೇಲಕ್ಕೆ ಸುರಿಸುತ್ತಾರೆ. ಹೀಗೆ ಎರಚಲ್ಪಟ್ಟ ಹಣವು ನೆಲದ ಮೇಲೆ ಬೀಳುತ್ತಿದ್ದಂತೆಯೆ ಬಡಬಗ್ಗರು, ಮಕ್ಕಳು ಮುಂತಾದವರು ಆ ಹಣವನ್ನು ಪ್ರಸಾದವೆಂಬಂತೆ ಆರಿಸಿಕೊಂಡು ಧನ್ಯರಾಗುತ್ತಾರೆ. ಭಕ್ತರು ದೇವರ ಮುಡುಪಿನ ದುಡ್ಡನ್ನು ಹೀಗೆ ತೂರಿ ಧನ್ಯರಾಗುತ್ತಾರೆ. ರಥೋತ್ಸವ ಹಾಗೂ ಅಂಬಿನೋತ್ಸವದ ಸಂದರ್ಭದಲ್ಲಿ ಈ ಬಗೆಯ ಹರಕೆಗಳನ್ನು ಕಾಣಬಹುದು. ಹಣಕ್ಕೆ ಆಸೆ ಪಡುವ ತಿಮ್ಮಪ್ಪ ದೇವರು ದುಡ್ಡು ಆಯುವುದಕ್ಕೆ ಕಂಚೀಬೆಟ್ಟಕ್ಕೆ ಬಂದಿದ್ದನೆಂಬುದು ದಂತಕತೆ. ಇದಕ್ಕೆ ಸಾಕ್ಷಿಯೆಂಬಂತೆ ಆ ಬೆಟ್ಟದಲ್ಲಿ ತಿಮ್ಮಪ್ಪನ ವಿಗ್ರಹವೂ ಇದೆ.

ಉತ್ತರೆ ಮಳೆಯಲ್ಲಿ ಕೆಲವು ಕಾಲ ಪಟ್ಟಕ್ಕೆ ಕೂರುವ ಕಂಚೀಪುರದ ಉತ್ತರೆ ಮಳೆ ಮುಗಿಯುವಷ್ಟರಲ್ಲಿ ಉತ್ತರೇಗುಡ್ಡ, ಕಂಚೀಪುರ, ದೊಡ್ಡವಜ್ರ, ಕಾನುಬೇನಹಳ್ಳಿ ದಾಸಣ್ಣನ ಕಾವಲು, ಧೂಪದಕಣ, ಕಣಿವೆ ರಂಗಸ್ವಾಮಿ ವಜ್ರ, ಕಗ್ಗಲಕಟ್ಟೆ, ಗೊಲ್ಲರಹಳ್ಳಿ ಇತ್ಯಾದಿ ಕೆರೆಗಳಲ್ಲಿ ಅಂಬು ಹೊಡೆಯುತ್ತಾರೆ. ಹಿಂದಿನ ರಾತ್ರಿ ಮಡಿಯಿಂದ ತಯಾರಿಸಿದ ಅಕ್ಕಿಯ ಬಾನವನ್ನು ತಯಾರಿಸುತ್ತಾರೆ. ಅಕ್ಕಿ ಹೆಸರು, ಬೇಳೆ, ಹಾಲು, ತುಪ್ಪ, ಮೊಸರು, ಈರುಳ್ಳಿ, ಬೆಳ್ಳುಳ್ಳಿ ಮುಂತಾದ ಪದಾರ್ಥಗಳನ್ನು ಹರಕೆ ಹೊತ್ತ ಭಕ್ತರು ಬುತ್ತಿಬಾನ ಮಾಡುವುದಕ್ಕಾಗಿ ತಂದು ಒಪ್ಪಿಸುತ್ತಾರೆ. ಈ ಎಡೆಯನ್ನು ನಿರವುಗಲ್ಲು, ಓಟಿಕೆರೆ, ಹುಳಿಯೂರು ಹಾಗೂ ಕೆಂಕೆರೆ ಗ್ರಾಮಗಳ ಭಕ್ತರು ತಯಾರಿಸುತ್ತಾರೆ. ಎಡೆಯನ್ನು ದೊಡ್ಡ ಬುಟ್ಟಿಗಳಲ್ಲಿ ತುಂಬಿಸಿಡುತ್ತಾರೆ. ಹರಕೆ ಸಲ್ಲಿಸುವ ಭಕ್ತರು ಬುಟ್ಟಿಗಳನ್ನು ಹೊತ್ತು ಹರಕೆ ಸಲ್ಲಿಸುತ್ತಾರೆ. ನಂತರ ಅಲ್ಲಿ ನೆರೆದ ಭಕ್ತರಿಗೆ ಹಂಚುತ್ತಾರೆ. ಇದೇ ಸಂದರ್ಭದಲ್ಲಿ ತೋಪಿನ ಭೂತಪ್ಪನಿಗೆ 'ಮರಿಸೇವೆ' ಮಾಡುತ್ತಾರೆ.

ಕಾರ್ತಿಕ ಹೋಮದ ನಂತರ ಬೆಳಗಿನ ಜಾವದಲ್ಲಿ ಕಂಚೀದೇವರ ಪರವಾಗಿ ದೊಡ್ಡದೇವರು ಎಂಬ ಜೋಡಿ ಅಲಗುಗಳ ದೇವರನ್ನು ಹೊತ್ತು ಬುತ್ತಿ ಬಾನದ ಗೋಡೆಯನ್ನು ತಲೆಯ ಮೇಲೆ ಹೊತ್ತು ಉತ್ತರಗುಡ್ಡವನ್ನು ಏರುತ್ತಾರೆ. ಸಿದ್ಧರ ಲಿಂಗಗಳಿಗೆ ಪೂಜಿಸಿ, ಬುತ್ತಿಬಾನ ಸಡಿಲಿಸಿ, ಮೂರು ಮಡಿಕೆ ಎಡೆ ಹಿಡಿದು, ಹಳೆಯ ಬಿಲ್ಲು, ಬಾಣಗಳಿಂದ ಅಂಬು ಹೊಡೆಯಲಾಗುತ್ತದೆ. ಬಾಣಬಿಟ್ಟ ಸ್ಥಳಕ್ಕೆ ಕೂಡಲೇ ತೆಂಗಿನಕಾಯಿ ಒಡೆದು ಅದರ ಸ್ಥಳಕ್ಕೆ ಕೂಡಲೇ ತೆಂಗಿನಕಾಯಿ ಒಡೆದು ಅದರ ತೀರ್ಥಬಿಡುತ್ತಾರೆ. ಹೀಗೆ ಉತ್ತರೆ ಮಳೆಯಲ್ಲಿ ಮೊದಲು ಅಂಬು ನಡೆಯುವುದರಿಂದಾಗಿ ಬೆಟ್ಟಕ್ಕೆ 'ಉತ್ತರ ಬೆಟ್ಟ' ಎಂದು ಹೆಸರು. ಇದೇ ಸಂದರ್ಭದಲ್ಲಿ ಕಂಚೀವರದ ದೇವರು ದೊಡ್ಡ ವಜ್ರ ಕ್ಷೇತ್ರದಲ್ಲಿ ಗಂಗಾಸ್ನಾನ ಮಾಡಿ, ಅಭಿಷೇಕ ಹೊಂದಿ, ಪವಿತ್ರಗೊಂಡು ತನ್ನ ಪ್ರಿಯ ಅಲಂಕಾರ ಸಂಕೇತವಾದ ನಾಮವನ್ನು ಹಚ್ಚಿಸಿಕೊಳ್ಳುತ್ತದೆ. ಇದು ಆ ವರ್ಷದಲ್ಲಿ ದೇವರು ಹಚ್ಚಿಸಿಕೊಳ್ಳುವ ತಿಲಕವಾಗಿರುತ್ತದೆ. ಅದಕ್ಕಾಗಿ ಅಂದು ಅನ್ನಸಂತರ್ಪಣೆ ಹಾಗೂ ಧೂಪದ ಸೇವೆ ನಡೆಯುತ್ತವೆ.

ಕಂಚಿಪುರದ ಉತ್ಸವದಲ್ಲಿ ಮೂರು ಭೂತಪ್ಪಗಳು, ಸೋಮ, ದೊಡ್ಡ ಬಾಣಗಳು ಇರುತ್ತವೆ. ಯಜಮಾನ ದೇವರಿಲ್ಲದೆ ಕಂಚೀವರದ ಹೊರಡುವುದಿಲ್ಲ. ಯಜಮಾನ ದೇವರನ್ನು ಗೊಲ್ಲರ ಚಿತ್ರಪ್ಪದೈವವೆಂದು ನಂಬಲಾಗಿದೆ. ಎರಡು ಉದ್ದವಾದ ಎರಡು ಬಾಣಗಳನ್ನು ಜೋಡಿಸಿ ಹೊಸ ರೇಷ್ಮೆ ವಸ್ತ್ರದಿಂದ ಸುತ್ತಿ ಕಟ್ಟಿರುವರು. ಇದಕ್ಕೆ ಮೇಲುಭಾಗದಲ್ಲಿ ಬೆಳ್ಳಿಯ ಮುಖಪದ್ಮ ಹಾಕಲಾಗಿರುತ್ತದೆ. ಮಡಿಯಿಂದ ಇರುವವರು ಈ ಅಸ್ತ್ರ ದೇವರನ್ನು ಭುಜದ ಮೇಲೆ ಹೊತ್ತು ದೇವರಿಗಿಂತ ಮುಂದೆ ನಡೆಯುತ್ತಾರೆ. ಕಂಚೀದೇವರ ಸಕಲ ಕಾರ್ಯಭಾರವನ್ನು ನಿಭಾಯಿಸುವ ರಾಯಭಾರಿ ಈ ಬಾಣದೇವರು ಆಗಿರುತ್ತಾನೆ. ಕಂಚೀ ಬೆಟ್ಟದಲ್ಲಿ ಹರವಿಬಾನ ಹಾಗೂ ಪಾಷಾಣದೆಡೆ ಸೇವೆಗಳು ನಡೆಯುತ್ತವೆ. ಕುಂಚಿಟಿಗ ಜನಾಂಗದ ಭಕ್ತರು ಮಣ್ಣಿನ ಮಡಿಕೆಯಲ್ಲಿ ಮಡಿಯಿಂದ ಅನ್ನ ಮಾಡಿ, ಮಡಕೆಯಲ್ಲಿಯೆ ದೇವರಿಗೆ ನೈವೇದ್ಯ ಹಿಡಿಯುವ ಸೇವೆಗೆ 'ಹರವಿಬಾನಸೇವೆ' ಎಂದು ಕರೆಯುತ್ತಾರೆ. ಹಿಂದೆ ದೇವರನ್ನು ಪರೀಕ್ಷಿಸಲು ಎಡೆಗೆ ವಿಷ ಹಾಕಿ ನೈವೇದ್ಯ ಮಾಡಿದರಂತೆ. ಕಂಚೀದೇವರು ಆ ಕಿಡಿಗೇಡಿಗಳನ್ನು ಹಿಡಿದು ಆ ವಿಷದ ನೈವೇದ್ಯವನ್ನು ಅವರಿಗೆ ತಿನ್ನುವಂತೆ ಮಾಡಿದರಂತೆ. ಅದರ ಪ್ರಾಯಶ್ಚಿತವಾಗಿ ಇಂದಿಗೂ ಗೊಲ್ಲರು, ಬೆಸ್ತ ನಾಯಕರು ದೇವರಿಗೆ ರಥೋತ್ಸವದ ನಾಲ್ಕುದಿನ ಮೊದಲು ಪಾಷಾಣದೆಡೆಯನ್ನು ಮಡಿಯಿಂದ ತಯಾರಿಸಿ ಅರ್ಪಿಸುತ್ತಾರೆ. ಕೆಲವು ನಿರ್ದಿಷ್ಟ ಭಕ್ತರು ಈ ವಿಷದ ಎಡೆಯನ್ನು ಕೈಯಲ್ಲಿ ಮುಟ್ಟದೇ ಪ್ರಾಣಿಗಳಂತೆ ನೇರವಾಗಿ ಎಡೆಗೆ ಬಾಯಿ ಹಾಕಿ ತಿನ್ನುತ್ತಾರೆ. ವಿಷದೆಡೆಯಿಂದ ತೊಂದರೆಯಾಗದಿರಲೆಂದು ದೇವರ ತೀರ್ಥ ಹಾಕುತ್ತಿರುತ್ತಾರೆ. ವಿಷದೆಡೆಯನ್ನು ಯಾವ ಪದಾರ್ಥಗಳಿಂದ ತಯಾರಿಸುತ್ತಾರೆ ಎಂಬುದನ್ನು ಹೇಳುವುದಿಲ್ಲ. ಆದರೆ ಪ್ರಸಾದದಂತೆ ಸೇವಿಸಿದ ಭಕ್ತರಿಗೆ ಯಾವ ತೊಂದರೆಯೂ ಆಗುವುದಿಲ್ಲ.

ಹಳ್ಳಿಕಾರ್ ಒಕ್ಕಲಿಗ ಭಕ್ತರು ರಾಗಿಹಿಟ್ಟು ಮತ್ತು ಮಜ್ಜಿಗೆ ಸೇರಿಸಿ ತಯಾರಿಸಿದ ಅಂಬಲಿಯನ್ನು ರಥೋತ್ಸವದ ಹಿಂದಿನ ದಿನ ದೇವರಿಗೆ ಅರ್ಪಿಸುತ್ತಾರೆ. ಇದನ್ನು 'ಸೂರಗಂಬಲಿ ಸೇವೆ' ಎಂದೂ ಕರೆಯುತ್ತಾರೆ. ಇದಕ್ಕೊಂದು ಕಥೆ ಇದೆ. ಹಿಂದೆ ದೇವರು ನೆಲೆಯಾಗಲು ಸ್ಥಳ

ಅರಸುತ್ತಿರುವ ಸಂದರ್ಭದಲ್ಲಿ ಈಗಿನ ಕಂಚೀಪುರದಲ್ಲಿ ನಿತ್ರಾಣನಾಗಿ ಬಿದ್ದನಂತೆ. ಆಗ ರಾಗಿ ಅಂಬಲಿ ಕೊಡಿಸಿ ಸಂತೃಸಿದರಂತೆ. ಅಂದಿನಿಂದ ರಾಗಿ ಅಂಬಲಿ ಸೇವೆ ನಡೆಯುತ್ತಾ ಬಂದಿದೆ ಎಂದು ಹೇಳುತ್ತಾರೆ. ಅಂದಿನ ಹಬ್ಬದಡುಗೆಯೂ ರಾಗಿ ಅಂಬಲಿಯೇ ಆಗಿರುತ್ತದೆ. ಒಡೆಮಾವು ಮುಡಿದು ಸುಗಂಧಭರಿತನಾದ ಕಂಚೀವರದನು ಮದಾಲ್ಸಿಯಲ್ಲಿ ತನ್ನ ಮನದನ್ನೆಯ ಸನಿಹಕ್ಕೆ ಹೀಗೆ ಸಾಗುವ ಮಾರ್ಗದಲ್ಲಿ ಭಕ್ತರು ಹಿಂಡುರುಳು ಸೇವೆ ಸಲ್ಲಿಸುತ್ತಾನೆ. ಮಧ್ಯರಾತ್ರಿಯಲ್ಲಿ ಯಾವುದೇ ವಾದ್ಯದ ಸದ್ದಿಲ್ಲದೆ ಸೂಳೆ ಮಂಟಪ ಸೇರುತ್ತಾರೆ. ಅಲ್ಲಿ ಭಕ್ತರು ಕಂಚೀವರದನಿಗಾಗಿ ವೀಳ್ಯದೆಲೆ ಮತ್ತು ಅಡಿಕೆಯನ್ನು ತಟ್ಟೆಯಲ್ಲಿಟ್ಟಿರುತ್ತಾರೆ. ಬೆಳಗ್ಗೆ ಮಂಟಪದ ಸುತ್ತ ದೇವರು ಅಗಿದುಗಿದ ತಾಂಬೂಲವಿರುತ್ತದೆಂದು ಹೇಳುತ್ತಾರೆ. ಒಟ್ಟಾರೆ ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕವಾದ ಜಾತ್ರೋತ್ಸವಗಳಲ್ಲಿ 'ಕಂಚೀಪುರದ ಅಂಬಿನೋತ್ಸವ'ವು ಬಹು ಮುಖ್ಯವಾದುದು.

ಹೊಸದುರ್ಗ ಪರಿಸರದ ನಿಸರ್ಗ ರಮಣೀಯವಾದ ಹಾರಿಕಣಿವೆಯ ರಂಗನಾಥ ಸ್ವಾಮಿಯ ಜಾತ್ರೆ ಹಾಗೂ ಅಂಬಿನೋತ್ಸವವು ತನ್ನದೇ ಆದ ಸಾಂಸ್ಕೃತಿಕ ಪರಂಪರೆಯಿಂದ ಕೂಡಿದೆ. ಹೊಸದುರ್ಗ-ಹಿರಿಯೂರು ತಾಲೂಕುಗಳ ಗಡಿ ಪ್ರದೇಶದಲ್ಲಿರುವ ಕಣಿವೆಯಲ್ಲಿ ರಂಗನಾಥ ದೇವರು ನೆಲೆಸಿರುವುದರಿಂದ ಇದನ್ನು ರಂಗಯ್ಯನ ಕಣಿವೆ ಎಂದು ಕರೆಯುವರು. ಹಾರಿಕಣಿವೆ ಬಳಿ ಇರುವ ಅಂಚಿಬಾರಿಹಟ್ಟಿಯಲ್ಲಿ ಈಗ ಇರುವ ಜನರು ಮೊದಲು ಹಾರನಕಣಿವೆಯಲ್ಲಿ ನೆಲೆಸಿದ್ದರೆಂದು 'ವೇದಾವತಿ' ನದಿಗೆ ಅಣೆಕಟ್ಟೆಯನ್ನು ಕಟ್ಟಿದಾಗ ಇಲ್ಲಿದ್ದ ಜನರು ಹಟ್ಟಿಗೆ ಹೋಗಿ ನೆಲೆಸಿದರೆಂದು ಸ್ಥಳೀಯರು ಹೇಳುತ್ತಾರೆ. ರಂಗನಾಥ ಸ್ವಾಮಿಯ ಉತ್ಸವಮೂರ್ತಿಯು ಅಂಚಿಬಾರಿಹಟ್ಟಿಯಲ್ಲಿದ್ದು, ಇಲ್ಲಿ ವಿಶೇಷವಾಗಿ ಗೊಲ್ಲ ಜನಾಂಗವಿದೆ. ಸುಮಾರು ೮೦ ಮನೆಗಳಿದ್ದು, ರಂಗನಾಥಸ್ವಾಮಿಯ ಪೂಜಾರರು ಇವರೇ ಆಗಿದ್ದಾರೆ. ರಂಗನಾಥಸ್ವಾಮಿಯ ಜಾತ್ರೋತ್ಸವಕ್ಕೆ ಚಿತ್ರದುರ್ಗ ಜಿಲ್ಲೆಯಷ್ಟೇ ಅಲ್ಲದೇ ಹಾಸನ, ಶಿವಮೊಗ್ಗ, ತುಮಕೂರು ಜಿಲ್ಲೆಗಳ ಜೊತೆಗೆ ನೆರೆಯ ರಾಜ್ಯ ಆಂಧ್ರಪ್ರದೇಶದಿಂದಲೂ ಸಾವಿರಾರು ಜನರು ಆಗಮಿಸುತ್ತಾರೆ. ಹೊಸದುರ್ಗ ತಾಲೂಕಿನ ಕೆಲವೇ ದೊಡ್ಡ ಜಾತ್ರೆಗಳಲ್ಲಿ 'ಹಾರನಕಣಿವೆ ರಂಗನಾಥ ಜಾತ್ರೆ' ಸಹ ಒಂದು. ಜಾತ್ರೆಯ ಹಿಂದಿನ ರಾತ್ರಿ ಅಂಚಿಬಾರೀ ಹಟ್ಟಿಯಿಂದ ರಂಗನಾಥ ದೇವರು ಹಾಗೂ ಚಿತ್ರಲಿಂಗ ದೇವರು ಹತ್ತಿರದ ಕಣಿವೆಗೆ ಹೋಗಿ ಹೊಳೆಪೂಜೆಗೆ ಹೋಗಿ ಬರುತ್ತವೆ. ವಿಜಯದಶಮಿಯ ಮರುದಿನ ಇಲ್ಲಿ ತುಂಬಾ ವಿಜೃಂಭಣೆಯಿಂದ ಅಂಬಿನೋತ್ಸವ ಜರುಗುತ್ತದೆ. ಅಂದು ಅಂಚಿಬಾರಿ ಹಟ್ಟಿಯಿಂದ ಬೆಳಗ್ಗೆ ಹತ್ತು ಗಂಟೆಗೆ ಹೊರಡುವ ರಂಗನಾಥಸ್ವಾಮಿ ಹಾಗೂ ಚಿತ್ರಲಿಂಗದೇವರುಗಳ ಉತ್ಸವವು ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ಜಾತ್ರೆಯ ಬಯಲಿಗೆ ಸಕಲ ವಾದ್ಯಗಳೊಂದಿಗೆ ಬರುತ್ತದೆ. ಜಾತ್ರೆಯ ಎಲ್ಲಾ ಕಾರ್ಯಕ್ರಮಗಳು ಚಿತ್ರಲಿಂಗೇಶ್ವರ ದೇವರ ಮಾರ್ಗದರ್ಶನದಲ್ಲಿ ನೆರವೇರುತ್ತವೆ. ಕಣಿವೆ ರಂಗನಾಥಸ್ವಾಮಿ ದೇವರ ಉತ್ಸವಮೂರ್ತಿಯ ಮೆರವಣಿಗೆ ನೋಡಲು ತುಂಬಾ ಆಕರ್ಷಕವಾಗಿರುತ್ತದೆ. ಉತ್ಸವದೊಂದಿಗೆ ಬಯಲಿಗೆ ಬರುವ ಈ ದೇವರು ಬನ್ನಿವೃಕ್ಷದ ಬಳಿಗೆ ಹೋಗಿ ವೃಕ್ಷವನ್ನು ಮೂರುಸುತ್ತು ಪ್ರದಕ್ಷಿಣೆ ಹಾಕುತ್ತದೆ. ಬನ್ನೀ ವೃಕ್ಷಕ್ಕೆ ಹಾಗೂ ದೇವರುಗಳಿಗೆ ಪೂಜೆ ನಡೆದಾಗ ಬಳಿಕ 'ಅಂಬು' ಹೊಡೆಯುವ ಕಾರ್ಯಕ್ರಮ ಜರುಗುತ್ತದೆ. ವೃಕ್ಷದ ಬಳಿ ನೆಟ್ಟ ಬಾಳೆಯಕಂದನ್ನು ಖಡ್ಗದಿಂದ ತುಂಡರಿಸುತ್ತಾರೆ. ನಂತರ ಭಕ್ತಾದಿಗಳಿಗೆ

ಬನ್ನಿ ಹಂಚುತ್ತಾರೆ. ಅಂಬು ಹೊಡೆದ ನಂತರ ಉತ್ಸವ ಮೂರ್ತಿಯು ಕಣಿವೆಯಲ್ಲಿನ ಮೂಲ ವಿಗ್ರಹವಿರುವ ಗುಡಿಯ ಬಳಿಗೆ ಸಾಗುವುದು. ಇತರ ದೇವರುಗಳು ಅದರೊಟ್ಟಿಗೆ ಬರುತ್ತವೆ.

ಹೊಸದುರ್ಗ ತಾಲೂಕಿನ ಪ್ರಮುಖ ಹಾಗೂ ಪ್ರಸಿದ್ಧ ಶೈವ ಧಾರ್ಮಿಕ ಕ್ಷೇತ್ರವಾದ 'ಮೈಲಾರಪುರ'ವು ಮಧ್ಯಕಾಲದಲ್ಲಿ ಹೆಚ್ಚು ಪಾರಂಪರಿಕವಾಗಿ ಬೆಳೆದುಬಂದಿದೆ. ಇದನ್ನು 'ಸೂಚಕಲ್ಲು ಮೈಲಾರ' ಎಂದು ಕರೆಯಲಾಗುತ್ತದೆ. ಮೈಲಾರ ಬೆಟ್ಟದ ಮಧ್ಯದಲ್ಲಿರುವ ಗುಹಾಂತರ ದೇವಾಲಯದಲ್ಲಿ ಕಾಲಭೈರವನ ರೂಪದ ಮೈಲಾರಲಿಂಗೇಶ್ವರ, ಭೈರವಿ ರೂಪದಲ್ಲಿರುವ ಗಂಗಮಾಳಮ್ಮ ಹಾಗೂ ಮೈಲಾರದೇವರ 'ಸ್ವಯಂಭುಲಿಂಗು' ಉತ್ಸವಮೂರ್ತಿಗಳು ಇವೆ. ಗಂಗ ಮಾಳಮ್ಮ ಹಾಗೂ ಹೆಗ್ಗಪ್ಪನ ದೇವಾಲಯ, ಗಣೇಶನ ದೇವಾಲಯ, ಜುಂಜಪ್ಪ, ನೀಲಕಂಠೇಶ್ವರ ದೇವಾಲಯಗಳಿವೆ. ಒಟ್ಟಾರೆ ಇಲ್ಲಿನ ಎಲ್ಲಾ ದೇವಾಲಯಗಳನ್ನು 'ಮೈಲಾರ ಲಿಂಗೇಶ್ವರ' ದೇವಾಲಯ ಎಂದು ಕರೆಯಲಾಗುತ್ತದೆ. ದೇವಾಲಯಕ್ಕೆ ಸಂಬಂಧಿಸಿದ ಈ ಎಲ್ಲಾ ಸ್ಮಾರಕಗಳು ವಿಜಯನಗರ ಕಾಲದವು. ಈ ತಾಲೂಕಿನ ಕೆಲವೇ ಕೆಲವು ದೊಡ್ಡ ಜಾತ್ರೆಗಳಲ್ಲಿ 'ಸೂಚಕಲ್ಲು ಮೈಲಾರಪುರದ ಮೈಲಾರ ಲಿಂಗೇಶ್ವರ ಸ್ವಾಮಿ'ಯ ಜಾತ್ರೆಯು ಒಂದು. ವರ್ಷಕ್ಕೊಮ್ಮೆ ನಡೆಯುವ ಅಂಬಿನೋತ್ಸವ, ಸರಪಳಿ ಪವಾಡ, ಶಸ್ತ್ರಪವಾಡ, ಬಗನೀಗೂಟ ಆಚರಣೆಗಳು ಗಮನಾರ್ಹವಾಗಿವೆ.

ಪ್ರತಿವರ್ಷ ವಿಜಯದಶಮಿಯ ಮಾರನೆಯ ದಿನದಂದು ಮೈಲಾರ ಬೆಟ್ಟದಲ್ಲಿ ನಡೆಯುವ ಮೈಲಾರದೇವರ ಅಂಬು, ಸರಪಳಿ–ಶಸ್ತ್ರಪವಾಡಗಳು ಜರಗುವ ಸಂದರ್ಭವೇ ಈ ಜಾತ್ರೆಯ ಕೇಂದ್ರಬಿಂದು. ಅಂದು ಬೆಳಿಗ್ಗೆ ಕ್ಷೇತ್ರದ ಚೌಡಮ್ಮ, ವೀರಭದ್ರ, ಚಿಕ್ಕಣ ದೇವರುಗಳು ಕಾಂಚೀ ವೀರರೊಂದಿಗೆ ಬನ್ನೀಮಂಟಪಕ್ಕೆ ಜಂಬೂಸವಾರಿಯಲ್ಲಿ ದಯಮಾಡಿಸುವಾಗ ಸೂಜಿಗಲ್ಲಿನ ದೊಡ್ಡಮ್ಮ, ಕುರುಬರಹಳ್ಳಿ ಕರಿಯಮ್ಮ ದೇವರುಗಳು ಎದುರುಗೊಂಡು ಸ್ವಾಗತಿಸುತ್ತವೆ. ಆ ನಂತರ ಅಂಬಿನೋತ್ಸವ ನಡೆಯುತ್ತದೆ. ಇದೇ ದಿನ ಬೆಳಗ್ಗೆ ಹನ್ನೊಂದರಿಂದ ಹನ್ನೆರಡು ಗಂಟೆಯಲ್ಲಿ ಶಸ್ತ್ರಪವಾಡ ಜರುಗುತ್ತದೆ. ತರುವಾಯ 'ಸರಪಳಿ ಪವಾಡ' ನಡೆಯುತ್ತದೆ. ಹುಳಿಯಾರು, ಮಲ್ಲಿಹಳ್ಳಿ ಹಾಗೂ ಗರುವಿನಬಿಳು ಗ್ರಾಮಗಳ ಭಕ್ತರು ಕಬ್ಬಿಣದ ಸರಪಳಿಗಳನ್ನು ತಂದು ಮೈಲಾರದೇವರು ಹಾಗೂ ಅಮ್ಮನವರ ಮುಂದೆ ಅವುಗಳನ್ನು ಜಗ್ಗಿ ತುಂಡರಿಸುವರು. ಇದಾದ ಬಳಿಕ ಮೈಲಾರ ಮತ್ತು ಇತರೆ ಎಲ್ಲಾ ದೇವರುಗಳು ತೇರುಮಂಟಪದ ಹತ್ತಿರ ಬಂದ ಮೇಲೆ ಮೈಲಾರಪುರದ ಕಾಂಚೀವೀರರಿಂದ ಬಗಣೀಗೂಟ ಪವಾಡಗಳು ನಡೆಯುತ್ತವೆ. ಕಾಂಚೀ ವೀರರು ವ್ರತದಿಂದ ಇದ್ದು ಕಬ್ಬಿಣದ ಸಲಾಕೆಯಂತೆ ಇರುವ ಶಸ್ತ್ರವನ್ನು ಎರಡೂ ಕಾಲುಗಳ ಮೀನುಖಂಡಗಳಿಗೆ ಗೇಣುದ್ದದ 'ಬಗನೀ ಮರದ' (ಬೆಣೆ) ಗೂಟವನ್ನು ಬಡಿಸಿ ಕೊಳ್ಳುವುದಕ್ಕೆ ಬಗಿನೀಗೂಟ ಪವಾಡ ಎಂದು ಹೇಳುವರು. ಇಲ್ಲಿ ನಡೆಯುವ ಶಸ್ತ್ರಪವಾಡದ ಜಾಗಕ್ಕೆ 'ದ್ರಾಕ್ಷೀಕಲ್ಲು' ಎನ್ನುತ್ತಾರೆ. ಇನ್ನೂ ಈ ದೇವರಿಗೆ ಸಂಬಂಧಿಸಿದಂತೆ 'ರಥೋತ್ಸವ'ವು ಎರಡು ಅಥವಾ ಮೂರು ವರ್ಷಗಳಿಗೊಮ್ಮೆ (ದೇವನ ಅಪ್ಪಣೆ ಮೇರೆಗೆ) ಫಾಲ್ಗುಣ ಮಾಸದಲ್ಲಿ ಜರುಗುತ್ತದೆ. ಶ್ರೀ ಮೈಲಾರ–ಗಂಗಮಾಳಮ್ಮ ಮತ್ತು ಚಿಕ್ಕಣ್ಣ ದೇವರುಗಳನ್ನು ಹೊತ್ತ ರಥವು ಮಂಗಳವಾದ್ಯಗಳೊಂದಿಗೆ ಅಸಂಖ್ಯಾತ ಭಕ್ತರ 'ಏಳುಕೋಟ್ ಏಳುಕೋಟಿ' ಜಯಕಾರ

ದನಿಯೊಂದಿಗೆ ಭಕ್ತರಿಂದ ಎಳೆಯಲ್ಪಡುವ ರಥದ ದೃಶ್ಯ ಅತ್ಯಂತ ಹೃದಯಸ್ಪರ್ಶಿ ದೃಶ್ಯವಾಗಿರುತ್ತದೆ. ಈ ಕ್ಷೇತ್ರಕ್ಕೆ ಬೆಂಗಳೂರು, ಹಾಸನ, ಚಿಕ್ಕಮಗಳೂರು, ಹಾವೇರಿ, ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಸೇರಿದಂತೆ ಅನೇಕ ಜಿಲ್ಲೆಗಳಿಂದ ಜನರು ತಂಡೋಪ ತಂಡವಾಗಿ ಬರುತ್ತಾರೆ.

ಹೀಗೆ ಹೊಸದುರ್ಗ ತಾಲೂಕಿನ ನಂಬಿಕೆ ಮತ್ತು ಆಚರಣೆಗಳು ಹಾಗೂ ಜಾತ್ರೆ-ಉತ್ಸವಗಳು ಜಿಲ್ಲೆಯಲ್ಲಿ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೋಪಾದಿಯಲ್ಲಿ ಉಳಿದುಬಂದಿವೆ. ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು ಹಾಗೂ ಇತರೆ ಸ್ಮಾರಕಗಳು ಗತ ಮಾನವನ ಪ್ರಭುತ್ವ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರೆ ನಂಬಿಕೆ ಮತ್ತು ಆಚರಣೆಗಳು, ಜಾತ್ರೆ-ಉತ್ಸವಗಳು ಜನಪರ ಅಥವಾ ಜನಸಾಮಾನ್ಯರ ಸಂಸ್ಕೃತಿಯಾಗಿ ಪ್ರತಿಬಿಂಬಿತವಾಗಿದೆ.

ಟಿಪ್ಪಣಿಗಳು

೧. ವಸು., ೨೦೦೪, **ಮೌಖಿಕ ಇತಿಹಾಸ**, ಪು. ೯.

೨. ಅದೇ.

೩. ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೩, **ಸ್ಥಳೀಯ ಚರಿತ್ರೆ : ಆಕರಗಳ ಸ್ವರೂಪ ಮತ್ತು ಅಧ್ಯಯನ ವಿಧಾನ**, ಸ್ಥಳೀಯ ಚರಿತ್ರೆ: ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಲಕ್ಷ್ಮಣ್ ತೆಲಗಾವಿ(ಸಂ), ಪು. ೨೫-೨೬

೪. ಪುರುಷೋತ್ತಮ ಬಿಳಿಮಲೆ., ೨೦೦೬, **ಐತಿಹ್ಯಗಳು**, ಸುವರ್ಣ ಜಾನಪದ ಲೇಖನಗಳು, ವೀರಣ್ಣದಂಡೆ, ಶ್ರೀಪಾದ ಶೆಟ್ಟಿ(ಸಂ), ಪು. ೪೩

೫. ಅದೇ.

೬. ಅದೇ, ಪು. ೪೪.

೭. ಅದೇ.

೮. ಸಂಧ್ಯಾರೆಡ್ಡಿ .ಕೆ.ಆರ್., ೧೯೮೭, **ಐತಿಹ್ಯಗಳ ಐತಿಹಾಸಿಕ ವಿಶ್ಲೇಷಣೆ**, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು. ೭೯೯.

೯. ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೩, **ಪೂರ್ವೋಕ್ತ**, ಪು. ೨೭

೧೦. ಪುರುಷೋತ್ತಮ ಬಿಳಿಮಲೆ., ೨೦೦೬, **ಐತಿಹ್ಯಗಳು**, **ಪೂರ್ವೋಕ್ತ**, ಪು. ೪೬

೧೧. **ಸಂಕ್ಷಿಪ್ತ ಕನ್ನಡ ನಿಘಂಟು**., ೨೦೦೧, ಪು. ೧೦೮೩.

೧೨. **ಕಂಚೀಪುರದ ಸ್ಥಳೀಯರು ನೀಡಿದ ಮಾಹಿತಿ.**

೧೩. **ಡಿ. ಮಲ್ಲಾಪುರದ ಸ್ಥಳೀಯರು ನೀಡಿದ ಮಾಹಿತಿ.**

೧೪. **ಹಾಲುರಾಮೇಶ್ವರದ ಸ್ಥಳೀಯರು ನೀಡಿದ ಮಾಹಿತಿ.**

೧೫. ಪುರುಷತ್ತಮ ಬಿಳಿಮಲೆ, ೨೦೦೬, **ಐತಿಹ್ಯಗಳು**, ಪೂರ್ವೋಕ್ತ, ಪು. ೫೫.

೧೬. ಜಾಜಿದೇವೇಂದ್ರಪ್ಪ., ೨೦೧೦, **ಬೂದಿಸಂಬಂಧಿತ ಎಡೆಗಳು**, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೩, ಬ್ರಹ್ಮಗಿರಿ, ಸೋಮಶೇಖರ್ ಎಸ್.ವೈ(ಸಂ), ಪು. ೧೧.

೧೭. ಷೇಕ್‌ಅಲಿ.ಬಿ(ಪ್ರಸಂ)., ೧೯೯೭, **ಕರ್ನಾಟಕ ಚರಿತ್ರೆ**, ಸಂಪುಟ–೧, ಪು. ೧೭೦.

೧೮. ಜಯಲಕ್ಷ್ಮಿ ಸೀತಾಪುರ., ೨೦೦೯, **ನಂಬಿಕೆ ಮತ್ತು ಆಚರಣೆ**, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೩, ತೊಣ್ಣೂರು, ಮಹದೇವ ಸಿ.(ಸಂ), ಪು. ೧೮೬.

೧೯. ಅದೇ.

೨೦. ಲಕ್ಷ್ಮಣ್ ತೆಲಗಾವಿ., ೨೦೦೯, **ವಿಜಯನಗರ ಕಾಲದ ರಾಮಾನುಜ ಕೂಟಗಳು**, ಪು. ೨೮.

೨೧. ರಮೇಶ್ ಸ.ಚಿ., ೨೦೧೦, **ಕರ್ನಾಟಕದ ಜನಪದ ಆಚರಣೆಗಳು**, ಪು. ೧೯೯.

೨೨. ಅದೇ.

೨೩. ಅದೇ.

೨೪. ಶಿವಶಕ್ತಿ ಪ್ರಸನ್ನಕುಮಾರ್., ೩೧.೦೩.೨೦೦೭, **ಒಡಿ ಉತ್ಸವ : ಶಕ್ತಿ ಪರಂಪರೆಯ ಪ್ರತೀಕ**, ಜಾಹಿರಾತು ಪುರಾವಣಿ, ಪ್ರಜಾವಾಣಿ, ಪು. ೪.

೨೫. ರಮೇಶ್ ಸ.ಚಿ., ೨೦೧೦, **ಪೂರ್ವೋಕ್ತ**, ಪು. ೭೨.

೨೬. ಅದೇ, ಪು. ೭೩.

೨೭. ಅದೇ.

೨೮. ಅದೇ.

□□□

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಅಲೆಮಾರಿಯಾಗಿದ್ದ ಮಾನವ ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಗೆ ಹಾಗೂ ಅಲೆಮಾರಿ ಸಂಸ್ಕೃತಿಯಿಂದ ಗ್ರಾಮಸಂಸ್ಕೃತಿಗೆ ಬದಲಾದ ಹಂತವನ್ನು ಮಾನವಶಾಸ್ತ್ರಜ್ಞರು ಹಾಗೂ ಪುರಾತತ್ವಜ್ಞರು ಅನೇಕ ಆಧಾರಗಳ ಮೂಲಕ ಗುರುತಿಸಿದ್ದಾರೆ. ಸಂಸ್ಕೃತಿ ಮತ್ತು ನಾಗರೀಕತೆ ಬೇರೆ ಬೇರೆಯಲ್ಲ, ಇವು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಸಂಸ್ಕೃತಿಯು ಗತಮಾನವನ ಜೀವನ ವಿಧಾನ, ಧರ್ಮ, ಮೌಲ್ಯ, ಕಲೆ, ಸಾಹಿತ್ಯ, ರಾಜಕೀಯ, ಉಡುಗೆ-ತೊಡುಗೆ, ಆಹಾರ ಪದ್ಧತಿ, ಉದ್ಯೋಗ, ಆರ್ಥಿಕ ಸ್ಥಿತಿ, ಆಚಾರ-ವಿಚಾರ, ನಂಬಿಕೆ-ಸಂಪ್ರದಾಯ ಮೊದಲಾಗಿ ಮಾನವನ ಸಮಗ್ರ ಜೀವನ ವಿಧಾನವನ್ನು ಒಳಗೊಂಡಿದೆಯೆನ್ನಬಹುದು. ಹಾಗೆಯೇ ಇಂದು ಸಾಮ್ರಾಜ್ಯ ಚರಿತ್ರೆ ಅಧ್ಯಯನಗಳಿಗಿಂತ ಪ್ರಾದೇಶಿಕ/ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಇದಕ್ಕೆ ಕಾರಣ ಆಯಾ ಪ್ರದೇಶ/ಸ್ಥಳದ ಚರಿತ್ರೆಯ ಭಿನ್ನತೆ, ವೈವಿಧ್ಯತೆ ಹಾಗೂ ಸಂಸ್ಕೃತಿಯ ಮೂಲಗಳನ್ನು ತಿಳಿಯಲು ಸಾಧ್ಯವೆಂಬುದು. ಇತ್ತೀಚೆಗೆ ಈ ಬಗೆಯ ಅಧ್ಯಯಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದು ಗಮನಾರ್ಹ.

ಒಂದು ಪ್ರದೇಶದ ಸಂಸ್ಕೃತಿಯ ವಿವೇಚನೆ ಸೂಕ್ಷ್ಮ ಹಾಗೂ ಸಮಗ್ರವಾಗಿರಬೇಕು. ಗ್ರಾಮ, ಹೋಬಳಿ, ತಾಲೂಕು ಹಾಗೂ ಜಿಲ್ಲೆಗಳ ಮಟ್ಟದಲ್ಲಿ ನಡೆಯುತ್ತಿರುವ ಸ್ಥಳೀಯ ಸಂಶೋಧನೆಗಳು ಚರಿತ್ರೆ ಅಧ್ಯಯನದಲ್ಲಿ ಮಹತ್ವಪೂರ್ಣ ಹೆಜ್ಜೆ ಗುರುತುಗಳು. ಸ್ಥಳೀಯ ಅಧ್ಯಯನವು ರಾಜಕೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳ ದಾಖಲೆ ಹಾಗೂ ಅವುಗಳ ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಅಧ್ಯಯನ.

'ಹೊಸದುರ್ಗ ತಾಲೂಕು ಪರಿಸರ : ಸಾಂಸ್ಕೃತಿಕ ಅಧ್ಯಯನ' ಶೀರ್ಷಿಕೆಯ ಪ್ರಸ್ತುತ ಮಹಾ ಪ್ರಬಂಧದಲ್ಲಿ ಹೊಸದುರ್ಗ ತಾಲೂಕಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಸಮಗ್ರವಾಗಿ ದಾಖಲಿಸಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಚಿತ್ರದುರ್ಗ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಜಿಲ್ಲೆ. ಜಿಲ್ಲೆಯ ಹೊಸದುರ್ಗ ತಾಲೂಕು ಇತರೆ ತಾಲೂಕುಗಳಿಗಿಂತ ಭೌಗೋಳಿಕ ಮತ್ತು ಪ್ರಾಕೃತಿಕವಾಗಿ ವಿಭಿನ್ನವಾದದ್ದು. ಇಲ್ಲಿನ ಬೆಟ್ಟಗುಡ್ಡ, ಕಲ್ಲು-ಮಣ್ಣು, ನದಿ-ಕಣಿವೆ, ಮರಗಿಡ ಇತರೆಡೆಗಿಂತ ವೈವಿಧ್ಯಮಯವಾಗಿವೆ.

ಈ ತಾಲೂಕು ಇತ್ತ ಮಲೆನಾಡು ಅಲ್ಲದೆ, ಬಯಲುಸೀಮೆಯೂ ಅಲ್ಲದ ವಿಶಿಷ್ಟ ಪರಿಸರವುಳ್ಳ ಅರೆಮಲೆನಾಡು ಸೀಮೆ.

ಅರೆಮಲೆನಾಡು ಪರಿಸರವಾಗಿದ್ದರೂ ಇಲ್ಲಿ ಪ್ರಾಗೈತಿಹಾಸಿಕ ಮಾನವ ಸಂಸ್ಕೃತಿ ವಿಶೇಷವಾಗಿ ಬೆಳೆಯಲು ಕಾರಣ ಭೌಗೋಳಿಕ ಸಂಪತ್ತು, ಪ್ರಾಕೃತಿಕವಾಗಿ ದೊರೆಯುವ ಕಲ್ಲು, ಮಣ್ಣು, ಖನಿಜ, ಜಲ, ಪ್ರಾಣಿ ಮತ್ತು ಅರಣ್ಯ ಸಂಪತ್ತು. ಇವುಗಳನ್ನು ಅತ್ಯಂತ ವ್ಯವಸ್ಥಿತವಾಗಿ ಬಳಸಿಕೊಂಡು ತನ್ನ ಜೀವನ ನಿರ್ವಹಣೆ ಮಾಡಿರುವ ಸಂಗತಿ ಇಲ್ಲಿ ಬೆಳಕಿಗೆ ಬಂದ ಅನೇಕ ನೆಲೆಗಳಿಂದ ದೃಢವಾಗುವುದು.

ಮಾನವನ ಬದುಕಿಗೆ ಅತ್ಯಂತ ಯೋಗ್ಯವಾದ ಪರಿಸರವಿರುವ ಹಿನ್ನೆಲೆಯಲ್ಲಿಯೇ ಇದು ಆದಿಮ ಸಂಸ್ಕೃತಿ ನೆಲೆವೀಡು. ಇಲ್ಲಿ ಪ್ರಾಗಿತಿಹಾಸ ಕಾಲದಿಂದ ಹಿಡಿದು ಆಧುನಿಕ ಕಾಲಘಟ್ಟದವರೆಗೂ ನಿರಂತರವಾಗಿ ಮಾನವನ ಸಾಂಸ್ಕೃತಿಕ ಪರಂಪರೆ ಕೊಂಡಿಯೋಪಾದಿಯಲ್ಲಿ ಸಾಗಿ ಬಂದಿರುವುದು ಗಮನಾರ್ಹ. ಶಿಲಾಯುಗ ಕಾಲದ ಮಾನವ ಇಲ್ಲಿನ ನೈಸರ್ಗಿಕ ಸಂಪತ್ತನ್ನು ವ್ಯವಸ್ಥಿತವಾಗಿ ಬಳಸಿ ಜೀವನ ಸಾಗಿಸಿದ ಕುರುಹಾಗಿ ವಿಭಿನ್ನ ಸಾಂಸ್ಕೃತಿಕ ನೆಲೆ ಮತ್ತು ಅವಶೇಷಗಳು ದೊರೆತಿವೆ.

೧೮೬೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಹಾಗೂ ೧೯೫೬ರಲ್ಲಿ ಎಂ. ಶೇಷಾದ್ರಿ ಅವರ ಜಾನಕಲ್ಲು ಪರಿಸರದ ಆದಿ ಹಳೇಶಿಲಾಯುಗ ಸಂಸ್ಕೃತಿಯ ಅನ್ವೇಷಣೆ ಹಾಗೂ ವಿಶ್ಲೇಷಣೆಯು ಹೊಸದುರ್ಗ ತಾಲೂಕು ಮಾತ್ರವಲ್ಲ, ಇಡೀ ಜಿಲ್ಲೆಯ ಮಹತ್ವಪೂರ್ಣ ಸಂಶೋಧನಾ ದಾಖಲೆಗಳು. ಇದರಿಂದ ಜಿಲ್ಲೆಯ ಪ್ರಾಗಿತಿಹಾಸ ಮಾನವನ ತಾಣಗಳ ಇರುವಿಕೆ ಮೊಟ್ಟಮೊದಲು ಬೆಳಕಿಗೆ ಬಂದಿತು.

ಇದುವರೆಗೆ ದೊರೆತ ಆಕರಗಳ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸರವು ಹಳೇಶಿಲಾಯುಗ ಕಾಲದಿಂದ ಇಂದಿನವರೆಗೂ ಮಾನವನ ಜೀವನದ ಅವಿಭಾಜ್ಯ ಅಂಗವಾಗಿರುವುದು ವೇದ್ಯವಾಗುತ್ತದೆ. ಹೊಸದುರ್ಗ ತಾಲೂಕಿನಲ್ಲಿ ರಾಬರ್ಟ್ ಬ್ರೂಸ್‌ಫೂಟರ ಶೋಧನೆಯಾದ ಜಾನಕಲ್ಲು ನೆಲೆಯ ಮೂಲಕವೇ ಇದುವರೆಗೆ ಅಲ್ಲಿನ ಪ್ರಾಚೀನತೆಯನ್ನು ಗುರುತಿಸಲಾಗಿತ್ತು. ಆದರೆ ಪ್ರಸ್ತುತ ಅಧ್ಯಯನದಲ್ಲಿ ಹಳೇ ಶಿಲಾಯುಗ(ಆದಿ ಮತ್ತು ಮಧ್ಯ), ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ಒಟ್ಟು ೩೬ ನೆಲೆಗಳನ್ನು ಹೊಸದಾಗಿ ಕ್ಷೇತ್ರಕಾರ್ಯದ ಮೂಲಕ ಬೆಳಕಿಗೆ ಬಂದಿರುವುದು ಗಮನೀಯ ಸಂಗತಿ. ಇವು ಪ್ರಾಗೈತಿಹಾಸಿಕ ಸಂಸ್ಕೃತಿಯ ಅಗಾಧತೆಗೆ ಸಾಕ್ಷ್ಯಗಳಾಗಿವೆ. ಈ ಎಲ್ಲ ನೆಲೆಗಳು ವೇದಾವತಿ ನದಿತೀರದ ಗವಿ-ಕಲ್ಲಾಸರೆ ಹಾಗೂ ಬೆಟ್ಟ-ಗುಡ್ಡಗಳಲ್ಲಿ ಕಂಡುಬಂದಿವೆ. ಪ್ರಾಗೈತಿಹಾಸಿಕ ಮಾನವನ ಹುಟ್ಟು ಮತ್ತು ಬೆಳವಣಿಗೆಗೆ ಇಲ್ಲಿನ ಭೌಗೋಳಿಕ ಪರಿಸರದ ಪಾತ್ರ ಎಷ್ಟೆಂಬುದು ಇದರಿಂದ ದೃಢವಾಗುವುದು.

ಪ್ರಸ್ತುತ ದೊರೆತಿರುವ ಆದಿ ಹಳೇಶಿಲಾಯುಗದ ನೆಲೆ ಗರಗ ಗ್ರಾಮ ಪರಿಸರವಾಗಿದ್ದು, ಇದು ತಾಲೂಕಿನ ಮತ್ತೊಂದು ಪ್ರಾಚೀನ ಎಡೆ. ಹಾಗೆಯೇ ಲಂಬಾಣಿಹಟ್ಟಿಯಲ್ಲಿ ಮಧ್ಯ

ಹಳೇಶಿಲಾಯುಗದ ಫ್ಲೂಟೆಡ್ ಕೋರ್‌ನಿಂದ ತಯಾರಿಸಿದ ಮಧ್ಯ ಹಳೇಶಿಲಾಯುಗದ ಆಯುಧ ಜಾನಕಲ್ಲು ಪರಿಸರದ ಆದಿ ಹಳೇಶಿಲಾಯುಗ ಸಂಸ್ಕೃತಿಯ ಮುಂದುವರೆದ ಪರಂಪರೆಯಾಗಿ ಹೊಸ ಬೆಳಕನ್ನು ಚೆಲ್ಲುತ್ತದೆ. ಇವು ಪ್ರಸ್ತುತ ಸಂಶೋಧನೆಯ ಮಹತ್ವಪೂರ್ಣ ಸಂಗತಿಗಳು.

ಶಿಲಾಯುಗ ಸಂಸ್ಕೃತಿಯ ಮುಂದುವರೆದ ಭಾಗವಾಗಿ ಸೂಕ್ಷ್ಮ ಶಿಲಾಯುಗ ಮಾನವನ ಅನೇಕ ನೆಲೆಗಳು ಹೊಸದಾಗಿ ದೊರೆತಿರುವುದು ಗಮನಾರ್ಹ. ಜಾನಕಲ್ಲು ಮತ್ತು ಲಂಬಾಣಿಹಟ್ಟಿ ಪರಿಸರಗಳಲ್ಲಿ ಚರ್ಟ್, ಅಗೇಟ್, ಜಾಸ್ಪರ್, ಕೋರ್ ಶಿಲೆಗಳಲ್ಲಿ ರೂಪಿಸಿರುವ ಸ್ಕ್ರೇಪರ್, ಬ್ಲೇಡ್ ಮತ್ತು ಫ್ಲೇಕ್ ಆಯುಧಗಳು ದೊರೆತಿದ್ದು, ಇಲ್ಲಿನ ಮಾನವ ಸಂಸ್ಕೃತಿಯ ವಿಕಾಸದ ಹಂತವನ್ನು ತೋರ್ಪಡಿಸುತ್ತವೆ. ಈ ಆಯುಧಗಳನ್ನು ಬೇಟೆಗಾರಿಕೆ, ಮೀನುಗಾರಿಕೆ ಮುಂತಾದ ಆಹಾರ ಸಂಗ್ರಹಣೆಗೆ ಬಳಸಿಕೊಂಡಿರುವ ಸಾಧ್ಯತೆ ಇದ್ದು, ಅವುಗಳನ್ನು ಸ್ಥಳೀಯವಾಗಿ ದೊರೆಯುವ ಶಿಲಾ ಮಾದರಿಗಳಿಂದ ತಯಾರಿಸಿದುದು ಅಲ್ಲಿನ ಭೌಗೋಳಿಕ ಸಂಪತ್ತಿನ ಬಳಕೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಪ್ರಾಗೈತಿಹಾಸಿಕ ಸಂಸ್ಕೃತಿಯ ಮತ್ತೊಂದು ಮಹತ್ವಪೂರ್ಣ ಘಟ್ಟ ನೂತನ ಶಿಲಾಯುಗದ ಸಂಸ್ಕೃತಿ. ತಾಲೂಕಿನ ದುಗ್ಗಾವರ, ತಣಿಗೆಕಲ್ಲು, ಕಿಟ್ಟದಾಳು, ಹಿಂಡೆದೇವರಹಟ್ಟಿ ಹಾಗೂ ಗರಗ ಮಹತ್ವದ ನೂತನ ಶಿಲಾಯುಗ ಸಂಸ್ಕೃತಿಯ ಪ್ರಮುಖ ನೆಲೆಗಳು. ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗಿಂತ ಅಧಿಕವಾಗಿದ್ದು, ತಾಲೂಕಿನ ಪೂರ್ವಭಾಗದಲ್ಲಿ ಈ ಜನರು ತಮ್ಮ ವಸತಿ ನೆಲೆಗಳನ್ನು ಮಾಡಿಕೊಂಡಿದ್ದುದು ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ.

ಹೊಸದುರ್ಗ ತಾಲೂಕು ಪರಿಸರವು ಬೃಹತ್ ಶಿಲಾಯುಗ ಸಂಸ್ಕೃತಿಯ ಆಗರ. ಇದುವರೆಗೆ ಬೃಹತ್ ಶಿಲಾಯುಗದ ನೆಲೆಗಳು ಬೆಳಕಿಗೆ ಬಂದಿರಲಿಲ್ಲ. ಪ್ರಸ್ತುತ ಅಧ್ಯಯನದ ಮೂಲಕ ಈ ಪರಿಸರದಲ್ಲಿ ಸುಮಾರು ೩೩ ನೆಲೆಗಳನ್ನು ಪತ್ತೆಹಚ್ಚಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಬೃಹತ್ ಶಿಲಾಸಮಾಧಿಗಳು ದೊರೆತಿರುವುದು ಇದೇ ಮೊದಲು. ಸಮಾಧಿ ನೆಲೆಗಳಲ್ಲಿ ಶಿಲಾವೃತ್ತ ಹಾಗೂ ನಿಲುಸುಗಲ್ಲು ಮಾದರಿಯ ಸಮಾಧಿಗಳು ಹೆಚ್ಚಾಗಿವೆ. ಸಮಾಧಿ ನೆಲೆಗಳಲ್ಲದೆ ದೊಡ್ಡಘಟ್ಟ, ದೊಡ್ಡಕಿಟ್ಟದಹಳ್ಳಿ, ಸಣ್ಣ ಕಿಟ್ಟದಹಳ್ಳಿ, ಮಲ್ಲಾಪುರ, ಸಿರಾಪ್ಪನಹಳ್ಳಿ ಮತ್ತು ಹುಲಿಕೆರೆಗಳಲ್ಲಿ ಈ ಕಾಲದ ವಾಸ್ತವ್ಯದ ನೆಲೆಗಳು ಕಂಡುಬಂದಿರುವುದು ವಿಶೇಷ. ಹಾಗೆಯೇ ಅಸಂಖ್ಯಾತ ಶಿಲಾಸಮಾಧಿಗಳ ನಿರ್ಮಾಣ, ಕಬ್ಬಿಣ ತಯಾರಿಕೆ ಮತ್ತು ವಾಸಕ್ಕೆ ಯೋಗ್ಯವಾದ ಪರಿಸರವನ್ನು ವ್ಯವಸ್ಥಿತವಾಗಿ ಬಳಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

ಬೃಹತ್ ಶಿಲಾಸಂಸ್ಕೃತಿಯ ಅಧ್ಯಯನದಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಕಬ್ಬಿಣ ತಯಾರಿಕೆಯ ಕುರುಹನ್ನು. ನಿಸರ್ಗದತ್ತ ಖನಿಜ ಸಂಪತ್ತು ಅಧಿಕವಿರುವ ಈ ಪರಿಸರದಲ್ಲಿ ಬೃಹತ್ ಶಿಲಾಸಮಾಧಿ ಹಾಗೂ ಕಬ್ಬಿಣ ತಯಾರಿಕೆಯ ಅವಶೇಷಗಳು ಯಥೇಚ್ಚವಾಗಿರುವುದು ಗಮನಾರ್ಹ.

ಪ್ರಾಕ್ಚಾರಿತ್ರಿಕ ಚಿತ್ರಕಲೆಯಿಂದ ಆದಿಮಾನವನ ವಿಕಾಸ ಸಂಸ್ಕೃತಿಯನ್ನು ತಿಳಿಯಲು ಸಾಧ್ಯ. ಬೆಟ್ಟ ಗುಡ್ಡ, ಗುಹೆ-ಗಹ್ವರಗಳಲ್ಲಿ ವಾಸಿಸುತ್ತಿದ್ದ ಇವನು ತನ್ನ ಬದುಕಿನ ಅನುಭವ, ಭಾವನೆಗಳನ್ನು ಚಿತ್ರಗಳ ರೂಪದಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ. ತಾತ್ಕಾಲಿಕ ಇಲ್ಲವೆ ಖಾಯಂ ವಾಸಸ್ಥಾನಗಳಲ್ಲಿ ಬಂಡೆಗಳ ಮೇಲೆ, ಗುಹೆಯ ಗೋಡೆಗಳ ಒಳಭಾಗ, ಛಾವಣಿಗಳ ಮೇಲ್ಭಾಗಗಳಲ್ಲಿ ಬಣ್ಣದಿಂದ ಮೂಡಿಸಿದ ವರ್ಣಚಿತ್ರಗಳು ಗರಗ ಹಾಗೂ ಗೂಳಿಹಳ್ಳಿ ಬೆಟ್ಟ, ಕಲ್ಲಾಸರೆಗಳಲ್ಲಿ ದೊರೆತಿವೆ. ಗರಗದ ಕಲ್ಲಾಸರೆಯ ಕೆಂಪುವರ್ಣದ ಗೂಳಿ ಚಿತ್ರಗಳು ನೂತನ ಶಿಲಾಯುಗ ಸಂಸ್ಕೃತಿಯನ್ನು, ಗೂಳಿಹಟ್ಟಿ ಕಲ್ಲಾಸರೆಯಲ್ಲಿ ಕುಟ್ಟಿ ಮೂಡಿಸಿರುವ ಗೂಳಿಚಿತ್ರಗಳು ಬೃಹತ್ ಶಿಲಾಯುಗ ಸಂಸ್ಕೃತಿಯನ್ನು ಪ್ರತಿನಿಧಿಸಿವೆ.

ಚಾರಿತ್ರಿಕವಾಗಿ ಅನೇಕ ಪ್ರಾಚೀನ ಕುರುಹುಗಳನ್ನು ಹೊಂದಿರುವ ಹೊಸದುರ್ಗ ತಾಲೂಕು ಅನೇಕ ರಾಜ ಮನೆತನಗಳ ಆಳ್ವಿಕೆಯ ಕಾರ್ಯಕ್ಷೇತ್ರವಾಗಿತ್ತು. ಈ ಪರಿಸರದಲ್ಲಿ ವಿವಿಧ ಚಾರಿತ್ರಿಕ ಕಾಲಗಟ್ಟಗಳಾದ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಉಚ್ಚಂಗಿ ಪಾಂಡ್ಯ, ಹೊಯ್ಸಳ, ವಿಜಯನಗರ ಅರಸು ಮನೆತನಗಳು; ಬೂದಿಹಾಳು, ಮತ್ತೋಡು, ಚಿತ್ರದುರ್ಗ, ಸಂತೇಬೆನ್ನೂರು, ಬೇಲೂರು ನಾಯಕ ಅರಸರು; ಶ್ರೀರಂಗಪಟ್ಟಣದ ನವಾಬರು, ಮೈಸೂರು ಒಡೆಯರು, ಬ್ರಿಟೀಷರು ಸೇರಿದಂತೆ ಮುಂತಾದವರ ಆಳ್ವಿಕೆಗೆ ಒಳಪಟ್ಟಿರುವುದು ದಾಖಲಾರ್ಹ. ಅದರಲ್ಲೂ ವಿಜಯನಗರೋತ್ತರ ಕಾಲದ ನಾಯಕ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯ ಪ್ರಭಾವ ಈ ಪರಿಸರದಲ್ಲಿ ಹೆಚ್ಚಾಗಿರುವುದು ಗಮನೀಯ ಅಂಶ. ಅವರಲ್ಲಿ ಮತ್ತೋಡು, ಬೂದಿಹಾಳು ಮತ್ತು ಚಿತ್ರದುರ್ಗ ನಾಯಕ ಅರಸರ ಆಳ್ವಿಕೆ ಪ್ರಮುಖವಾದುದು. ಗ್ರಂಥಸ್ಥ ಸಾಹಿತ್ಯದಲ್ಲಿ ಉಳಿದು ಬಂದಿರುವ ಬೂದಿಹಾಳು ಸಿರುಮನಾಯಕನ ಸಾಂಸ್ಕೃತಿಕ ಘಟನಾವಳಿಗಳು ಮೌಖಿಕ ಪರಂಪರೆಯಲ್ಲಿ ಅಚ್ಚೊತ್ತಿರುವುದು ವಿಶೇಷ. ಕ್ರಿ.ಶ. ೧೮ನೇ ಶತಮಾನದ ಹೊತ್ತಿಗೆ ನಾಯಕ ಅರಸು ಮನೆತನಗಳು ಪತನಗೊಂಡು ತಮ್ಮ ಸಾಂಸ್ಕೃತಿಕ ಚರಿತ್ರೆಗೆ ವಿದಾಯ ಹೇಳಿದ್ದುದನ್ನು ಚರಿತ್ರೆ ಹೇಳುತ್ತದೆ.

ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಸ್ಥಳನಾಮ ವಿವೇಚನೆ ಅತ್ಯಂತ ಗುರುತರದ್ದು. ಸ್ಥಳನಾಮಗಳು ಇತಿಹಾಸ, ಪುರಾಣ, ಧರ್ಮ, ಸಂಸ್ಕೃತಿ, ಜನರ ಆಚಾರ-ವಿಚಾರ, ಭಾಷೆಯ ಪ್ರಭಾವ, ಭೂಸ್ಥಿತಿ ಮೊದಲಾದ ವಿಚಾರಗಳನ್ನು ತಿಳಿಸುತ್ತವೆ. ಪ್ರಾಚೀನ ಸಂಸ್ಕೃತಿಯನ್ನು ಪುನರ್‌ರಚಿಸುವಲ್ಲಿ ಶಾಸನ, ಕಾವ್ಯ, ಪುರಾತತ್ವ ಆಕರಗಳಂತೆ ಸ್ಥಳನಾಮಗಳು ಸಹಾಯಕ ಸಾಮಗ್ರಿಗಳಾಗಿವೆ. ಪ್ರಾಚೀನ ಜನಾಂಗದ ಭಾಷಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಜೀವನ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಶೈಕ್ಷಣಿಕ ಶಿಸ್ತಾಗಿಯೇ ಬೆಳೆಯುತ್ತಲಿದೆ. ಸ್ಥಳನಾಮಗಳಿಗೆ ಸಾವಿರ ವರ್ಷಗಳ ಇತಿಹಾಸವಿದೆ. ಭೌಗೋಳಿಕವಾಗಿ ಇದು ಅರೆಮಲೆನಾಡು ಪರಿಸರವಾಗಿರುವುದರಿಂದ ನೈಸರ್ಗಿಕ ಹಾಗೂ ಪ್ರಾಕ್ಚಾರಿತ್ರಿಕ ಕುರುಹುಗಳನ್ನು ಸೂಚಿಸುವ ಸ್ಥಳನಾಮಗಳೇ ಇಲ್ಲಿ ಅತ್ಯಧಿಕ. ಇಲ್ಲಿನ ಸ್ಥಳನಾಮಗಳು ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಷ್ಪನ್ನಗೊಂಡಿವೆ. ಹಾಗೆಯೇ ಇಲ್ಲಿ ಪೌರಾಣಿಕ ಸ್ಥಳನಾಮಗಳು

ಅಸಂಖ್ಯವಾಗಿವೆ. ಬೂದಿಹಾಳು, ಸೂಜಿಗಲ್ಲು, ಗೂಳಿಹಟ್ಟಿ, ನಿರುವುಗಲ್ಲು ಸ್ಥಳನಾಮಗಳು ಪ್ರಾಗಿತಿಹಾಸ ದೃಷ್ಟಿಯಿಂದ ಅತ್ಯಂತ ಮಹತ್ವದ ಕುರುಹುಗಳೆನ್ನಬಹುದು.

ಸ್ಮಾರಕಗಳು ಗತಮಾನವನ ಸಾಂಸ್ಕೃತಿಕ ಚರಿತ್ರೆಯ ಪುನರ್ ನಿರ್ಮಾಣದ ಬಹುಮುಖ್ಯ ಆಕರಗಳು. ಅವುಗಳಲ್ಲಿ ದೇವಾಲಯ, ಕೋಟೆ, ಕೆರೆ-ಕಟ್ಟೆ, ಮೂರ್ತಿಶಿಲ್ಪ, ಸ್ಮಾರಕಶಿಲ್ಪ ಕಂಡುಬರುತ್ತವೆ. ಮಾನವನ ಧಾರ್ಮಿಕ ಪೂಜಾಕೇಂದ್ರಗಳಾಗಿ ಬೆಳೆದು ಬಂದಿರುವ ದೇವಾಲಯ ಗಳು ಸಾಂಸ್ಕೃತಿಕ ಜೀವನದಲ್ಲಿ ವಹಿಸಿರುವ ಪಾತ್ರ ಅದ್ವಿತೀಯ. ಹೊಸದುರ್ಗ ತಾಲೂಕಿನ ದೇವಾಲಯಗಳು ಕ್ರಿ.ಶ. ೯ನೇ ಶತಮಾನದ ರಾಷ್ಟ್ರಕೂಟರ ಕಾಲದಿಂದ ಕ್ರಿ.ಶ. ೧೮ನೇ ಶತಮಾನದ ವಿಜಯನಗರೋತ್ತರ ಕಾಲಘಟ್ಟದವರೆಗೂ ನಿರ್ಮಾಣವಾಗಿರುವುದು ಇಲ್ಲಿನ ವಾಸ್ತುಶೈಲಿಯ ಅಧ್ಯಯನದ ಮೂಲಕ ಕಂಡುಬರುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಶಿಲೆಗಳನ್ನು ಬಳಸಿ ಪ್ರಭುತ್ವವರ್ಗ, ದೇವಾಲಯಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಇವುಗಳ ಹಿಂದಿನ ಆಶಯ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ವಿಶೇಷವಾಗಿ ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿದ್ದಿತು. ಆ ದೃಷ್ಟಿಕೋನದಿಂದ ಗಮನಿಸಿದಾಗ ಹೊಯ್ಸಳ ಕಾಲದಲ್ಲಿ ಯಥೇಚ್ಚವಾಗಿ ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಪಾಲನೆ-ಪೋಷಣೆ ನಡೆದಿದೆ. ಇವರ ಕಾಲದಲ್ಲಿ ಶೈವ, ವೈಷ್ಣವ ಹಾಗೂ ಜೈನ ದೇವಾಲಯಗಳ ಅಭಿವೃದ್ಧಿಗೆ ಆಶ್ರಯ ನೀಡಿರುವುದು ಶಾಸನೋಕ್ತ ಸಂಗತಿ. ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟದಲ್ಲಿ ಶ್ರೀವೈಷ್ಣವ ಪಂಥಕ್ಕೆ ವಿಶೇಷ ಆದ್ಯತೆ ನೀಡಿರುವುದು ಅಲ್ಲಿನ ಅಪಾರ ಸಂಖ್ಯೆಯ ರಂಗನಾಥ, ತಿಮ್ಮಪ್ಪ, ಚನ್ನಕೇಶವ ದೇವಾಲಯಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರೋತ್ತರ ಕಾಲದ ನಾಯಕ ಅರಸರು ಈ ದೈವಗಳಿಗೆ ಹೆಚ್ಚಿನ ಮನ್ನಣೆ ನೀಡಿರುವುದು ವಿಜಯನಗರ ದೊರೆಗಳ ನಿಷ್ಠಾವಂತ ಭಕ್ತಿಯನ್ನು ಸೂಚಿಸುವಂತಿದೆ.

ರಾಜಕೀಯ ಚರಿತ್ರೆಯ ನಿರ್ಮಾಣದಲ್ಲಿ ಕೋಟೆಗಳ ಪಾತ್ರ ಅಮೋಘವಾದುದು. ಈ ಪರಿಸರದ ಕೋಟೆ-ಕೊತ್ತಲಗಳು ಹೆಚ್ಚಾಗಿ ವಿಜಯನಗರೋತ್ತರ ಅವಧಿಯ ನಿರ್ಮಿತಿಗಳಾಗಿವೆ. ಹೊಸದುರ್ಗ ತಾಲೂಕು ಪರಿಸರದಲ್ಲಿ ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲಗುಡ್ಡ, ದೇವರಗುಡ್ಡ ಹಾಗೂ ಹಾಲುರಾಮೇಶ್ವರ ಗುಡ್ಡ ಪರಿಸರಗಳಲ್ಲಿ ವಿಜಯನಗರೋತ್ತರ ಕಾಲದ ನಾಯಕ ಅರಸರು ತಮ್ಮ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿಗೆ ತಕ್ಕಂತೆ ಕೋಟೆ-ಕೊತ್ತಲ ಗಳನ್ನು ನಿರ್ಮಿಸಿದ್ದಾರೆ. ಚಿತ್ರದುರ್ಗ, ಮತ್ತೋಡು ಮತ್ತು ಬೂದಿಹಾಳು ಪಾಳೆಯಗಾರರ ಕಾಲದ ಕೋಟೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಹೊಸದುರ್ಗ ಜಾನಕಲ್ಲು ಕೋಟೆಗಳು ಗಡಿಕೋಟೆಗಳಾಗಿ ಕಾರ್ಯನಿರ್ವಹಿಸಿರುವುದು ಗಮನೀಯ.

ಮಾನವ ಸಂಸ್ಕೃತಿಯ ವಿಕಾಸದಲ್ಲಿ ನೀರಿನ ಪಾತ್ರ ಬಹುಪ್ರಧಾನ. ಪ್ರಾಗೈತಿಹಾಸಿಕ ಕಾಲದ ಅನೇಕ ನೆಲೆಗಳು ದೊರೆತಿರುವ ಈ ಪರಿಸರದ ಹಳ್ಳಕೊಳ್ಳಗಳ ದಂಡೆಗಳ ಮೇಲೆಯೇ. ಆದರೆ ಕೆರೆ-ಕಟ್ಟೆಗಳ ಪ್ರಾಚೀನತೆ ದೊರೆಯುವುದು ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲಘಟ್ಟದಲ್ಲಿ. ಅರಸರು, ಮಾಂಡಲೀಕರು, ಸ್ಥಳೀಯ ಅಧಿಕಾರಿಗಳು, ವ್ಯಾಪಾರಿಗಳು

ಮುಂತಾದವರು ಕೆರೆ ನೀರಾವರಿ ಹಾಗೂ ಅವುಗಳ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದುದು ಶಾಸನಾರ್ಹ ಸಂಗತಿ.

ಪ್ರಾಚೀನ ದೇವಾಲಯಗಳಲ್ಲಿನ ಮೂರ್ತಿಶಿಲ್ಪಗಳ ಅಧ್ಯಯನ ಅಗತ್ಯವಾದುದು. ಹೊಸದುರ್ಗ ತಾಲೂಕು ಪರಿಸರದ ದೇವಾಲಯ, ಮೂರ್ತಿಶಿಲ್ಪಗಳು ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟದವು. ಇವುಗಳಲ್ಲಿ ಕ್ರಿ.ಶ. ೯–೧೨ನೇ ಶತಮಾನದವರೆಗೆ ಶೈವ ಶಿಲ್ಪಗಳು, ೧೩–೧೪ನೇ ಶತಮಾನದವರೆಗೆ ವೈಷ್ಣವ ಶಿಲ್ಪಗಳು ಹೆಚ್ಚಾಗಿ ಕಂಡುಬುರುವುದು ವಿಶೇಷ.

ಸ್ಮಾರಕ ಶಿಲ್ಪಗಳು ಗತಮಾನವನ ರಾಜಕೀಯ, ಇತಿಹಾಸ, ಯುದ್ಧ ಮತ್ತು ಸೈನ್ಯ ವ್ಯವಸ್ಥೆ, ವೀರತ್ವ, ಹೋರಾಟ, ದೇಶಭಕ್ತಿ, ಸಮುದಾಯಗಳ ಚರಿತ್ರೆ, ಗ್ರಾಮಸಂಸ್ಕೃತಿ, ಪಶುಪಾಲನೆ, ಸ್ತ್ರೀಯರ ಪಾವಿತ್ರ್ಯತೆ ಮುಂತಾದ ಅನೇಕ ಅಂಶಗಳನ್ನು ತಿಳಿಸಿಕೊಡುತ್ತವೆ.[1] ಇಲ್ಲಿನ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲು, ಮಾಸ್ತಿಗಲ್ಲು ಹಾಗೂ ನಿಷದಿಗಲ್ಲುಗಳನ್ನು ಗಮನಿಸಲಾಗಿದೆ. ವೀರಗಲ್ಲುಗಳಲ್ಲಿ ತುರುಗೋಳ್ ಸ್ಮಾರಕಗಳು ಈ ಪ್ರದೇಶದಲ್ಲಿ ಅತ್ಯಧಿಕವಾಗಿ ಕಂಡುಬರುತ್ತವೆ. ಇವು ಹೊಯ್ಸಳ ಕಾಲದವಾಗಿದ್ದು, ಪಶುಪಾಲನೆಯ ಮಹತ್ವ, ಹಸುವಿಗೆ ಅಂದು ನೀಡಿದ್ದ ಪ್ರಾಧಾನ್ಯತೆ ಮತ್ತು ಮೌಲ್ಯಗಳು ಅಭಿವ್ಯಕ್ತಿಗಳಾಗಿವೆ. ಅಲ್ಲದೆ ಗ್ರಾಮ ಸಂಸ್ಕೃತಿಯ ವೀರ ಪರಂಪರೆ ಹಾಗೂ ಅದಕ್ಕೆ ಸಾಮಾಜಿಕವಾಗಿ ದೊರೆತ ಗೌರವ, ಪ್ರೋತ್ಸಾಹಗಳು ಗಮನೀಯವಾದವು. ರಾಜನ ಪರವಾಗಿ ಹೋರಾಡಿದ ವೀರಗಲ್ಲುಗಳಲ್ಲಿ ಯುದ್ಧ ಸಂಸ್ಕೃತಿಯನ್ನು ಕಾಣುತ್ತೇವೆ. ೧೩೦೭ರ ಜಾನಕಲ್ಲಿನ ವೀರಗಲ್ಲು ದೇವಗಿರಿಯ ಸೇವುಣರ ಸೈನ್ಯ ಹೊಯ್ಸಳ ಸಾಮ್ರಾಜ್ಯವನ್ನ ಮುತ್ತಿಗೆ ಹಾಕಿದಾಗ ಹೊಸದುರ್ಗ ತಾಲೂಕು ಪರಿಸರದ ಬಸವಪ್ಪ ಹೋರಾಟದಲ್ಲಿ ಮಡಿದನು ಎಂಬುದು ಗಮನಾರ್ಹ. ಅದೇ ರೀತಿ ಪ್ರಾಣಿಗಳ ವಿರುದ್ಧ ಬೇಟೆಯಾಡಿದ ವೀರಗಲ್ಲುಗಳು ಅಪಾರವಾಗಿವೆ. ಅರಣ್ಯದಿಂದ ಕೂಡಿದ್ದ ಈ ಪರಿಸರದಲ್ಲಿ ಪ್ರಾಣಿಗಳ ಹಾವಳಿ ಸಾಮಾನ್ಯವಾಗಿದ್ದಿತೆನ್ನುವುದಕ್ಕೆ ಆನಿವಾಳ, ಕೈನಡು, ಸಣ್ಣಕಿಟ್ಟದಹಳ್ಳಿ ಹಾಗೂ ಬನಸೀಹಳ್ಳಿಗಳಲ್ಲಿ ಪ್ರಾಣಿ ಬೇಟೆಯ ವೀರಗಲ್ಲುಗಳು ಸಾಕ್ಷ್ಯಗಳಾಗಿವೆ.

ಮಾಸ್ತಿಶಿಲ್ಪಗಳು ಪ್ರಾಚೀನ ಸ್ತ್ರೀಯರ ತ್ಯಾಗ, ಬಲಿದಾನದ ಪ್ರತೀಕವಾಗಿವೆ. ಕ್ರಿ.ಶ. ೧೨ ರಿಂದ ೧೭ನೇ ಶತಮಾನದವರೆಗಿನ ಮಾಸ್ತಿಶಿಲ್ಪಗಳು ಹೊಯ್ಸಳ, ವಿಜಯನಗರ, ವಿಜಯನಗರೋತ್ತರ ಕಾಲಘಟ್ಟದ ಸ್ತ್ರೀಯರ ಸಹಗಮನವನ್ನು ಅರಿಯಲು ಸಾಧ್ಯವಾಗಿದೆ. ಜೈನರ ಆದರ್ಶ, ಧಾರ್ಮಿಕ ಮರಣ ಸಲ್ಲೇಖನ ವ್ರತ ಪರಂಪರೆಯನ್ನು ಕುರಿತು ಹೇಳುವ ನಿಷದಿ ಸ್ಮಾರಕಗಳು ಹೆಗ್ಗೆರೆ ಮತ್ತು ಜಾನಕಲ್ಲು ಗ್ರಾಮಗಳಲ್ಲಿ ದೊರೆತಿದ್ದು, ಇವು ಹೊಯ್ಸಳ ಕಾಲದವುಗಳಾಗಿವೆ. ಹೊಸದುರ್ಗ ತಾಲೂಕಿನ ವಾಸ್ತು ಮತ್ತು ಶಿಲ್ಪ ಕುರುಹುಗಳು ಗತಕಾಲದ ಮಾನವನ ಸಾಂಸ್ಕೃತಿಕ ಬದುಕಿನ ವಿಭಿನ್ನ ಆಯಾಮಗಳ ಕೈಗನ್ನಡಿಗಳೆನ್ನಬಹುದು.

ಶಾಸನ, ಸಾಹಿತ್ಯ, ಸ್ಮಾರಕ, ಶಿಲ್ಪಗಳಿಂದ ಚರಿತ್ರೆಗೆ ಪರಿಪೂರ್ಣತೆ ದೊರೆಯುವುದಿಲ್ಲ. ಇದಕ್ಕೆ ಪೂರಕವಾಗಿ ಮೌಖಿಕ ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳು ಇಂದಿಗೂ

